Social structure of the veerashaiva saints ಎಂಬುದು ಮಂಜಪ್ಪನವರು ಸಂಪಾದಿಸಿದ "ವಚನಕಾರರ ಸಮಾಜ ರಚನೆ" ಕೃತಿಯ ಇಂಗ್ಲೀಷ ಅನುವಾದ ರೂಪವಾಗಿದೆ. ಈ ಕೃತಿಯ ಅನುವಾದದ ಕುರಿತು ಮಂಜಪ್ಪನವರು Acknowledgement ದಲ್ಲಿ ಹೀಗೆ ಹೇಳುತ್ತಾರೆ. I gladly take this opportunity to impress my heart felt gratitude to my friend. S B B Who has at my request translated the book. Vachanakaras Social System. edited by me- in Kannada and to Dharmavir Annarao Bhopatkar. M.A. LLB (Pona) Vice President of all India Hindu Mahasabha for being kind enough to write a foreword to this book' '

ಕನ್ನಡೇತರರಿಗೂ ಬಸವಾದಿ ಶರಣರ ತತ್ವ-ಸಿದ್ಧಾಂತಗಳು ಪರಿಚಯವಾಗಬೇಕೆಂಬ ಹಂಬಲ ಈ ಕೃತಿಯ ಅನುವಾದ ಹಾಗೂ ಪ್ರಕಟಣೆಯ ಹಿಂದಿರುವದನ್ನು ಕಾಣುತ್ತೇವೆ.

ಮೇಲೆ ವಿವರಿಸಿದ ಸಂಪಾದನ ಕೃತಿಗಳನ್ನಲ್ಲದೆ ಅನುಬಂಧ-೧ ರಲ್ಲಿ ಒಳಗೊಂಡಿರುವ ವಾರ್ಷಿಕ ವಿಶೇಷ ಸಂಚಿಕೆಗಳನ್ನು ಮಂಜಪ್ಪನವರು ಸಂಪಾದಿಸಿದ್ದಾರೆ. ಅವುಗಳೆಂದರೆ- ಆರ್ಯತೇಜ, ಶಿಕ್ಷಣ ಹಾಗೂ ವ್ಯಾಪಾರ ಶಿಕ್ಷಕ, ಇವು ಕೂಡಾ ಕೃತಿ ಸ್ವರೂಪವನ್ನೇ ಹೊಂದಿವೆ.

ಆಲಮಟ್ಟಿಯಲ್ಲಿ ಹರ್ಡೇಕರ ಮಂಜಪ್ಪನವರು ವೀರಶೈವ ವಿದ್ಯಾಲಯ ಸ್ಥಾಪಿಸುವ ಮೂಲಕ ನಾಡಿನ ಗಮನ ಸೆಳೆದರು. ವಿದ್ಯಾಲಯ ಸ್ಥಾಪನೆಯಾಗಿ ನಾಲ್ಕು ತಿಂಗಳು ಕಳೆದ ಮೇಲೆ ವಿದ್ಯಾಲಯದ ಕುರಿತು ಸರಿಯಾದ ತಿಳುವಳಿಕೆಯನ್ನು ಜನರ ಸಮ್ಮುಖಕ್ಕೆ ತರುವ ಉದ್ದೇಶದಿಂದ **ಆರ್ಯತೇಜ** ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಗೊಳಿಸಿದ್ದಾರೆ. ಕೃತಿಯ ಆರಂಭದಲ್ಲಿ ವಿದ್ಯಾಲಯದಲ್ಲಿ ಶಿಕ್ಷಕರಾಗಿ ಕಾರ್ಯಮಾಡುತ್ತಿರುವ ಶ್ರೀ ಕಲ್ಯಾಣಪ್ಪ ಬ್ಯಾಳಿ ಅವರು ರಚಿಸಿದ 'ಶ್ರೀ ಬಸವಸ್ತವನ' ಎಂಬ ಗೀತೆ ಇದೆ. ಇದು ಇಪ್ಪತ್ತೊಂದು ಕಂದ ಪದ್ಯಗಳನ್ನು ಒಳಗೊಂಡಿದೆ. ಆರ್ಯತೇಜ ಎಂಬ ಮಂಜಪ್ಪನವರ ಲೇಖನ ಉಲ್ಲೇಖನೀಯವಾಗಿದೆ. ಮುಂದೆ ಕಲ್ಯಾಣಪ್ಪ ಬ್ಯಾಳಿ ಅವರ ವೇದಗಳ ಸಂದೇಶ, ಹರ್ಡೇಕರ ಮಂಜಪ್ಪನವರ ಮಹತ್ವದ ಎರಡು ಸಂಸ್ಥೆಗಳು (ಶ್ರೀ ರಾಮಕೃಷ್ಣ ಮಿಶನ್, ಗುರುಕುಲ ವಿದ್ಯಾಲಯ) ಶ್ರೀ ಕರಿಬಸವಯ್ಯನವರು ಪುರಾಣಿಕರು ಬರೆದ ಪ್ರಾಮಾಣಿಕತನದಿಂದಾಗುವ ಲಾಭಗಳು, ಜಾಗ್ರತೆ ಮಲಗುವುದು ಮತ್ತು ಜಾಗ್ರತೆ ಏಳುವುದು, ಹರ್ಡೇಕರ ಮಂಜಪ್ಪನವರು ರಚಿಸಿದ ವೀರಶೈವ ವಿದ್ಯಾಲಯದ ಗುರುತು, ಶಿವಶರಣರ ಸಂವಾದ, ವೀರಶೈವ ವಿದ್ಯಾಲಯ ಆಲಮಟ್ಟಿ ಉದ್ದೇಶ, ನಿಯಮ, ಅಧಿಕಾರ ಮಂಡಲ, ಶಿಕ್ಷಣದ ಸಾಮಾನ್ಯ ಸ್ವರೂಪ ಮುಂತಾದ ವಿಷಯಗಳ ಲೇಖನಗಳು ಇಲ್ಲಿವೆ. ಈ ಕೃತಿ ಸಂಪಾದನೆ ಹಾಗೂ ಪ್ರಕಟಣೆಯ ಮುಖ್ಯ ಉದ್ದೇಶ ಆಗಲೇ ತಿಳಿಸಿರುವಂತೆ ವೀರಶೈವ ವಿದ್ಯಾಲಯ ಕುರಿತು ಸರಿಯಾದ ತಿಳುವಳಿಕೆಯನ್ನು ಜನರ ಸಮ್ಮುಖಕ್ಕೆ ತರುವುದಾಗಿದೆ.

ಶಿಕ್ಷಣ ಎಂಬ ವಿಶೇಷ ಸಂಚಿಕೆ ಕೃತಿಯು ವೀರಶೈವ ವಿದ್ಯಾಲಯದ ಪ್ರಥಮ ವಾರ್ಷಿಕ ವರದಿಯನ್ನು ಒಳಗೊಂಡಿದೆ. ಜೊತೆಗೆ ಕಲ್ಯಾಣಪ್ಪ ಬ್ಯಾಳಿ ಅವರ ಜ್ಞಾನಮಾತೆ ಎಂಬ ಪದ್ಯ ಶ್ರೀ ಟಿ. ಎಲ್. ವಾಸ್ವಾನಿಯವರ ಭಾಷಣ ಆಧಾರದ ಬ್ಯಾಳಿ ಕಲ್ಯಾಣಪ್ಪನವರು ಅನುವಾದ ಮಾಡಿದ ಗುರುಕುಲದ ಪ್ರಾಮುಖ್ಯತೆ ಲೇಖನ, ಗೃಹ ಶಿಕ್ಷಣವೆಂಬ ಮಂಜಪ್ಪನವರ ಮಹತ್ವದ ಬರಹ, ಶ್ರೀ ಕಾಪಸೆ ರೇವಪ್ಪನವರು ರಚಿಸಿದ ಶಿಲ್ಪಕಲೆ ಲೇಖನ, ಗುಣಕಿ ಶಿವಲಿಂಗಪ್ಪನವರು ಬರೆದ ಶ್ರಮವೇ ಕೈಲಾಸವೆಂಬ ಲೇಖನಗಳು ಇಲ್ಲಿವೆ. ಅಲ್ಲದೇ ವೀರಶೈವ ವಿದ್ಯಾಲಯದ ವಾರ್ಷಿಕ ವರದಿಯು, ಶಿಕ್ಷಣ ಪದ್ಧತಿ, ಧಾರ್ಮಿಕ ಮತ್ತು ನೈತಿಕ ಶಿಕ್ಷಣ, ಪ್ರವಾಸದ ಬಗ್ಗೆ, ವ್ಯಾಖ್ಯಾನಗಳು, ಪರೀಕ್ಷೆಗಳು, ಹಬ್ಬಗಳು, ಡೈರಿ ಪದ್ಧತಿ, ದೇಹಾರೋಗ್ಯ, ಮಹತ್ವದ ಸೂಚಿಗಳು, ಇಬ್ಬರು ಶಿಕ್ಷಕರು, ಕಲ್ಯಾಣದ ಪ್ರವಾಸ, ಧರ್ಮೋಪದೇಶ, ವಾರ್ಷಿಕ ಪರೀಕ್ಷೆ, ವಾರ್ಷಿಕೋತ್ಸವ, ವೀರಶೈವ ವಿದ್ಯಾಲಯದಲ್ಲಿ ಅಧ್ಯಯನ ಮಾಡತಕ್ಕ ವಿದ್ಯಾರ್ಥಿಗಳ ವಿವರ, ಶಿವಾನುಭವ ಕಲಿಯುವ ವಿದ್ಯಾರ್ಥಿಗಳು, ಹೊಸದಾಗಿ ಹೆಸರು ಹಚ್ಚಿಕೊಂಡ ವಿದ್ಯಾರ್ಥಿಗಳು, ವೀರಶೈವ ವಿದ್ಯಾಲಯದಲ್ಲಿ ಶಿವದೀಕ್ಷೆ ಹೊಂದಿದವರ

ಹೆಸರುಗಳು, ವೀರಶೈವ ವಿದ್ಯಾಲಯಕ್ಕೆ ಧನಸಹಾಯ ಮಾಡಿದ ಮಹಾಶಯರು, ಕಟ್ಟಡಗಳನ್ನು ಕಟ್ಟಿಸಲು ಸಹಾಯಧನ ಮಾಡಿದ ಮಹಾಶಯರು, ಬೇರೆ ಸಾಮಾನುಗಳನ್ನು ಕೊಟ್ಟ ಮಹಾಶಯರು, ವೀರಶೈವ ವಿದ್ಯಾಲಯದ ಪ್ರಥಮ ವರ್ಷದ ಜಮಾ-ಖರ್ಚು ವೆಚ್ಚದ ವಿವರಗಳನ್ನು ಈ ಕೃತಿ ಹೊಂದಿದೆ.

ಈ ಕೃತಿಯ ಸ್ವರೂಪ-ವಿವರಣೆಗಳು ಮಂಜಪ್ಪನವರು ಶಿಕ್ಷಣ ಕುರಿತಾಗಿ ಹೊಂದಿದ ಕಳಕಳಿ, ಶಿಸ್ತುಬದ್ಧ ಜೀವನಕ್ಕೆ ಕೈಗನ್ನಡಿಯಾಗಿ ನಿಲ್ಲುತ್ತವೆ. ಇಲ್ಲಿರುವ ಲೇಖನಗಳು ಶೈಕ್ಷಣಿಕ ಚಿಂತನೆ ಬೆಳೆಸುವದರೊಂದಿಗೆ ಜ್ಞಾನ ಶಿಸ್ತು ಹೆಚ್ಚಿಸುತ್ತವೆ.

'ಶರಣ ಸಂದೇಶ' ಪತ್ರಿಕೆಯ ವಾಣಿಜ್ಯ ಸಂಚಿಕೆಯಾಗಿ ಪ್ರಕಟಗೊಂಡ **"ವ್ಯಾಪರ ಶಿಕ್ಷಕ"** ಎಂಬುದು ಅಪರೂಪದ ಕೃತಿ ಸ್ವರೂಪ ಹೊಂದಿದೆ. ಇದೊಂದು ವಾಣಿಜ್ಯ ಕೈಪಿಡಿ. ಭಾರತದ ವ್ಯಾಪಾರ ವಹಿವಾಟುಗಳನ್ನು ಪರಿಚಯಿಸುವ ಈ ಕೃತಿ ಬೇರೆ ಬೇರೆ ಸ್ಥಳಗಳಲ್ಲಿ ಸಿಗುವ ವಸ್ತುಗಳನ್ನು ಅಲ್ಲಿರುವ ದಲ್ಲಾಳಿಗಳನ್ನು ತಿಳಿಸಿಕೊಡುತ್ತದೆ. ಇದರೊಂದಿಗೆ ಕನ್ನಡ ನಾಡಿನ ವಾಣಿಜ್ಯ ವ್ಯವಹಾರದ ಸ್ಥಿತಿಗತಿಗಳನ್ನು ತಿಳಿಸಲಾಗಿದೆ. ವ್ಯಾಪಾರ ಅನುಭವಗಳ ವಿಚಾರಗಳನ್ನು ತಿಳಿಸುವ ಈ ಕೃತಿ ವ್ಯಾಪಾರಿಯೊಬ್ಬನು ಸ್ವಂತ ಗಿರಾಕಿಯಾಗಿ, ತಾಳ್ಮೆಯಿಂದ, ಮೈತ್ರಿತನದಿಂದ, ವಿಶ್ವಾಸಪೂರ್ವಕವಾಗಿ, ಬೆಲೆ ನೀತಿ ಕಾಪಾಡಿಕೊಂಡು ವ್ಯಾಪಾರ ಮಾಡಲು ಸೂಚಿಸುತ್ತದೆ. ಸಾಧ್ಯವಾದಷ್ಟು ಉದ್ರಿ ಕೊಡದೇ ಇರುವುದು ಒಳ್ಳೆಯದು. ಗಿರಾಕಿಗಳನ್ನು ಮೋಸಗೊಳಿಸದೇ ಒಳ್ಳೆಯ ವಸ್ತುಗಳನ್ನು ವ್ಯಾಪಾರ ಮಾಡಬೇಕು. ಆಕಸ್ಮಿಕ ವ್ಯಾಪಾರದಲ್ಲಿ ಹಾನಿಯಾದರೂ ವಿಶ್ವಾಸ ಕಳೆದುಕೊಳ್ಳದೇ ವ್ಯಾಪಾರ ಮಾಡಬೇಕು. ವ್ಯಾಪಾರಿ ಸಂಬಂಧಿ ಲೆಕ್ಕ ಪತ್ರಗಳನ್ನು ಸುವ್ಯವಸ್ಥಿತವಾಗಿ ಇಡುವುದು ಒಳ್ಳೆಯದು.

ವ್ಯಾಪಾರಿಯೊಬ್ಬನು ತನ್ನಲ್ಲಿ ಕೆಲಸ ಮಾಡುವ ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಪದೇ ಪದೇ ನೌಕರರನ್ನು ಬದಲಾವಣೆ ಮಾಡಬಾರದು. ಅವನಲ್ಲಿ ಆಪ್ತ ಗುಣದೊಂದಿಗೆ ಇದ್ದರೆ ಒಳ್ಳೆಯದು. ನೌಕರದಾರನಿಗೆ ಸಂಬಳವನ್ನು ನಿಯಮಿತವಾಗಿ ನೀಡಬೇಕು. ವ್ಯಾಪಾರದ ಕೆಲಸವೆಲ್ಲ ನೌಕರದಾರನಿಗೆ ಒಪ್ಪಿಸಿ ತಾನು ನಿಶ್ಚಿಂತವಾಗಿ ತಿರುಗಾಡುವುದನ್ನು ಮಾಡಬಾರದು. ಹೀಗೆ ವ್ಯಾಪಾರಿ ಸಂಬಂಧಿ ಮಹತ್ವದ ಸಂಗತಿಗಳನ್ನು ಈ ಕೃತಿ ತಿಳಿಸಿಕೊಡುತ್ತದೆ. ಅಲ್ಲದೇ ಭಾರತದ ೬೭ ಪ್ರಸಿದ್ಧ ವ್ಯಾಪಾರ ಪಟ್ಟಣಗಳ ಕುರಿತು ಪರಿಚಯಿಸುತ್ತಾ ಅಲ್ಲಿಯ ರೇಲ್ವೆ ಮಾರ್ಕ, ಬೆಳೆ ಮತ್ತು ತೂಕ, ದಲಾಲರು ಕುರಿತು ಹೇಳಲಾಗಿದೆ. ಅಹಮದಾಬಾದ, ಅನಂತಪುರ, ಕಲ್ಕತ್ತಾ, ಆಗ್ರಾ, ಅಹಮದ್ ನಗರ, ಕೊಲ್ಲಾಪೂರ, ಜಲಗಾಂ, ದೆಹಲಿ, ಮದ್ರಾಸ್, ಮುಂಬೈ ಮುಂತಾದ ಪಟ್ಟಣಗಳ ಮಾಹಿತಿ ತಿಳಿಸಲಾಗಿದೆ. ಇದರಂತೆ ಕರ್ನಾಟಕದ ೨೮ ವ್ಯಾಪಾರಿ ಪಟ್ಟಣಗಳ ಪರಿಚಯ ಇಲ್ಲಿದ್ದು, ಅಲ್ಲಿರುವ ಬೆಳೆಗಳು, ರೇಲ್ವೆ ಮಾರ್ಕ, ದಲಾಲಿ ಕುರಿತು ಮಾಹಿತಿ ಇದೆ. ಧಾರವಾಡ-ಹುಬ್ಬಳ್ಳಿ, ವಿಜಯಪುರ, ಗದಗ, ಇಳಕಲ್, ತಾಳಿಕೋಟೆ, ಅಥಣಿ, ಕಲಬುರ್ಗಿ, ಬಳ್ಳಾರಿ, ಬೆಂಗಳೂರು, ದಾವಣಗೆರೆ ಮುಂತಾದವುಗಳನ್ನು ಪ್ರಮುಖ ವ್ಯಾಪಾರಿ ಕೇಂದ್ರಗಳೆಂದು ಹೆಸರಿಸಲಾಗಿದೆ. ಒಟ್ಟಾರೆಯಾಗಿ ಇದೊಂದು ವ್ಯಾಪಾರದ ಕೈಪಿಡಿಯಾಗಿರುವ ಕೃತಿಯಾಗಿದೆ. ವ್ಯಾಪಾರಿಗಳು ಓದಲೇಬೇಕಾದ ಸಹೃದಯರು ತಿಳಿದುಕೊಳ್ಳಬೇಕಾದ ಸಂಗ್ರಹಯೋಗ್ಯವಾದ ಪುಸ್ತಕವಾಗಿದೆ.

ಅನುಬಂಧ –೨ ರಲ್ಲಿ ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳನ್ನು, ಮಂಜಪ್ಪನವರು ರಚಿಸಿದ ಒಟ್ಟು ಕೃತಿಗಳ ಪಟ್ಟಿಯನ್ನು ಹಾಗೂ ಹರ್ಡೇಕರ ಮಂಜಪ್ಪನವರ ಕುರಿತಾಗಿ ಈವರೆಗೆ ಪ್ರಕಟಗೊಂಡ ಪ್ರಮುಖ ಕೃತಿಗಳ ಪಟ್ಟಿಯನ್ನು ಕೊಡಲಾಗಿದೆ.

ಅನುಬಂಧ–೩ ರಲ್ಲಿ ಮಂಜಪ್ಪನವರ ಸ್ಮಾರಕಕ್ಕೆ ಸಂಬಂಧಿಸಿದ, ಅವರು ಹುಟ್ಟಿದ ಬನವಾಸಿ ಮನೆಯ ಪ್ರಮುಖ ಛಾಯಾ ಚಿತ್ರಗಳನ್ನು ಕೊಡಲಾಗಿದೆ. ಓದುಗರಿಗೆ ಮಂಜಪ್ಪನವರ ಕುರಿತು ಹೆಚ್ಚು ತಿಳಿಯಲು ಇವು ಅನುಕೂಲವಾಗುತ್ತವೆ.

ಪೂಜ್ಯರು, ವಿದ್ಯಾಗುರುಗಳು ಆಗಿರುವ ಡಾ. ಎಂ. ಎಂ. ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆ ಯೋಜನೆಯಲ್ಲಿ ತೊಡಗಿಸಿಕೊಂಡು ಕಾರ್ಯ ಮಾಡಲು ಅವಕಾಶ ಮಾಡಿಕೊಟ್ಟ ಪ್ರಧಾನ ಸಂಪಾದಕರು, ವಿದ್ಯಾಗುರುಗಳೂ ಆದ ಡಾ. ವೀರಣ್ಣ ರಾಜೂರ ಅವರಿಗೆ, ಹಿರಿಯರಾದ ಡಾ. ಎಂ. ಎಸ್. ಮದಭಾವಿ ಅವರಿಗೆ, ಹಾಗೂ ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರಿಗೆ ಅನಂತ ಕೃತಜ್ಞತೆಗಳು.

❖❖

ಲಿಂಗಾಯತ ನೂತನ ಸಾಹಿತ್ಯರತ್ನ ಮಾಲೆ : ೩೧

ರಾಷ್ಟ್ರಧರ್ಮದ್ರಷ್ಟಾರ : ಹರ್ಡೇಕರ ಮಂಜಪ್ಪ

ಸಂಪುಟ : ೨

(ಹರ್ಡೇಕರ ಮಂಜಪ್ಪನವರ ಸಮಗ್ರಕೃತಿಗಳ ಸಂಗ್ರಹ, ವರ್ಗೀಕರಣ
ಮತ್ತು ವಿಮರ್ಶಾತ್ಮಕ ಟಿಪ್ಪಣಿ)

ಸಂಪಾದಕರು
ಎಂ. ಎಂ. ಕಲಬುರ್ಗಿ
ಮಲ್ಲಿಕಾರ್ಜುನ ಮೇತ್ರಿ

ಪ್ರಕಾಶಕರು
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ಎಡಯೂರು ತೋಂಟದಾರ್ಯ ಸಂಸ್ಥಾನಮಠ, ಗದಗ
೨೦೦೬

*

ಅನಿಕೇತನ

ಎಂ. ಎಂ. ಕಲಬುರ್ಗಿ
ಮಲ್ಲಿಕಾರ್ಜುನ ಮೇತ್ರಿ

ಹಣೆಯ ಮೇಲೆ ಬಸವಪ್ರಜ್ಞೆ–ಮೈಮೇಲೆ ಗಾಂಧಿಪ್ರಜ್ಞೆಗಳನ್ನು ಸಂಕೇತಿಸುವಂತೆ ವಿಭೂತಿ –ಖಾದಿ ವಿಭೂಷಿತರಾಗಿದ್ದ ಶ್ರೀ ಹರ್ಡೇಕರ ಮಂಜಪ್ಪನವರ ಸಮಗ್ರಸಾಹಿತ್ಯದ ದ್ವಿತೀಯ ಸಂಪುಟವಿದು. ಇಂದಿಗೆ ಸರಿಯಾಗಿ ನಾಲ್ಕು ದಶಕಗಳ ಹಿಂದೆ ೧೯೬೬ರಲ್ಲಿ ಡಾ. ಗ. ಸ. ಹಾಲಪ್ಪನವರು "ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ" ಹೆಸರಿನ ಬೃಹತ್ ಸಂಪುಟ ಪ್ರಕಟಿಸಿದರು. ಅದರ ಮುಂದುವರಿಕೆಯಾಗಿ ಈ ಸಂಪುಟ ಪ್ರಕಟವಾಗುತ್ತಲಿದ್ದು, ಅದನ್ನು **ಪ್ರಥಮ ಸಂಪುಟ**ವೆಂದು ಪರಿಗಣಿಸಿ, ಇದನ್ನು **"ದ್ವಿತೀಯ ಸಂಪುಟ"**ವೆಂದು ನಾವು ಕರೆದಿದ್ದೇವೆ. ಮಂಜಪ್ಪನವರ ಉಳಿದ ಪುಸ್ತಕಗಳನ್ನು ಶೋಧಿಸಿ, ಭವಿಷತ್ತಿನಲ್ಲಿ **"ತೃತೀಯ ಸಂಪುಟ"**ವನ್ನು ಹೊರತರುವುದು ಕನ್ನಡಿಗರ ಕರ್ತವ್ಯವಾಗಿದೆ.

ಮಂಜಪ್ಪನವರು ಲಿಂಗೈಕ್ಯರಾದುದು ೧೯೪೭ರಲ್ಲಿ. ಆ ಬಳಿಕ ಅವರನ್ನು, ಅವರ ಸಾಹಿತ್ಯವನ್ನು ಕುರಿತು ಸಣ್ಣ–ದೊಡ್ಡ ಅಧ್ಯಯನ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿದೆ. ಡಾ. ಶಿ. ಚೆ. ನಂದಿಮಠ, ಕುವೆಂಪು ಮೊದಲಾದ ಹಿರಿಯ ತಲೆಮಾರಿನವರು ಮಂಜಪ್ಪನವರನ್ನು ಕುರಿತು "ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪಣ್ಣನವರ ಸ್ಮಾರಕಗ್ರಂಥ" ಕೃತಿಯನ್ನು ೧೯೫೧ರಲ್ಲಿ ಬೆಳಕಿಗೆ ತಂದರು. ಎರಡನೆಯ ತಲೆಮಾರಿನಲ್ಲಿ ಡಾ. ಗ. ಸ. ಹಾಲಪ್ಪನವರು "ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ" ಹೆಸರಿನ ಬೃಹತ್ ಗ್ರಂಥ ಪ್ರಕಟಿಸಿದರು. ಶಿವಾನಂದ ಗುಬ್ಬಣ್ಣನವರ "ರಾಷ್ಟ್ರಧರ್ಮನಿಷ್ಠ ಹರ್ಡೇಕರ ಮಂಜಪ್ಪ" ಒಂದರ್ಥದಲ್ಲಿ ಈ ಪರಿಸರದ ಗ್ರಂಥವೇ ಆಗಿದೆ. ೧೯೮೯, ಹರ್ಡೇಕರ ಅವರ ಜನ್ಮಶತಮಾನೋತ್ಸವ ವರ್ಷ. ಕರ್ನಾಟಕ ಸರಕಾರ ಈ ಆಚರಣೆಯ ಅಂಗವಾಗಿ ಗೌರವಗ್ರಂಥ ಸಿದ್ಧಪಡಿಸುವ ಹೊಣೆಯನ್ನು ಡಾ. ಎಂ. ಎಂ. ಕಲಬುರ್ಗಿ ಅವರಿಗೆ ವಹಿಸಿಕೊಟ್ಟಿತು. ಮೂರನೆಯ ತಲೆಮಾರಿನ ಅಭ್ಯಾಸಿಯಾಗಿ ಅವರು ೪೫೦ ಪುಟಗಳ "ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ" ಗ್ರಂಥವನ್ನು ಸಂಪಾದಿಸಿಕೊಡುವ ಮೂಲಕ ಮಂಜಪ್ಪನವರ ಮಹತ್ವವನ್ನು ಕಿರಿಯ ತಲೆಮಾರಿನವರಲ್ಲಿ ಜೀವಂತವಾಗಿಟ್ಟರು. ಅದರ ಫಲವೆನ್ನುವಂತೆ ಡಾ. ಮಲ್ಲಿಕಾರ್ಜುನ ಮೇತ್ರಿಯವರು "ಕರ್ನಾಟಕ ಗಾಂಧಿ' ಹೆಸರಿನ ಪಿಎಚ್.ಡಿ. ಪ್ರಬಂಧವನ್ನು ರಚಿಸಿದರು.

"ಕರ್ನಾಟಕ ಗಾಂಧೀ ಹರ್ಡೇಕರ ಮಂಜಪ್ಪ" ಗೌರವಗ್ರಂಥ ಸಿದ್ಧಪಡಿಸುವ ಸಂದರ್ಭದಲ್ಲಿ, ಈ ಎರಡನೆಯ ಸಂಪುಟವನ್ನು ರೂಪಿಸುವ ಅಭೀಪ್ಸೆ ಡಾ. ಕಲಬುರ್ಗಿಯವರಲ್ಲಿ ಮೂಡಿತು. ಆಗ ಅವರಿಗೆ ಕಾಡಿದ ಮೊದಲ ಪ್ರಶ್ನೆ, ಹರ್ಡೇಕರ ಅವರ ಕೃತಿಸಂಖ್ಯಾನಿರ್ಣಯ ಮತ್ತು ಅವುಗಳ ಶೋಧ. ಮಂಜಪ್ಪನವರೇ ಕೃತಿನಾಮವನ್ನು ಕೆಲವೊಮ್ಮೆ ಆವೃತ್ತಿಯಿಂದ ಆವೃತ್ತಿಗೆ ಸ್ವಲ್ಪ ವ್ಯತ್ಯಾಸಗೊಳಿಸಿದ್ದಾರೆ. ಸಾಲದುದಕ್ಕೆ ಮುಂದಿನ ಅಭ್ಯಾಸಿಗಳು ಬೇರೊಬ್ಬರ ಕೃತಿಗಳನ್ನು ಅವರ ತಲೆಗೆ ಕಟ್ಟಿದ್ದಾರೆ. ಹೀಗಾಗಿ ಅವರ ಕೃತಿಸಂಖ್ಯಾನಿರ್ಣಯ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಪರಿಹಾರಕ್ಕೆ ಪ್ರಯತ್ನಿಸಿ ಡಾ.ಕಲಬುರ್ಗಿಯವರು "ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ –ಸಂಪುಟದಲ್ಲಿ ೪೦ ಗ್ರಂಥಗಳನ್ನು ಅಳವಡಿಸಲಾಗಿದೆ. ಅಲ್ಲಿಯೇ ಮಂಜಪ್ಪನವರ ಕೃತಿ ಸಂಖ್ಯೆ ೫೦ ಎಂಬ ಸೂಚನೆ ಇದೆ. ಮಂಜಪ್ಪನವರನ್ನು ಕುರಿತು ಪಿಎಚ್. ಡಿ. ಅಧ್ಯಯನ ಮಾಡಿರುವ ಶ್ರೀ ಶಿವಾನಂದ ಗುಬ್ಬಣ್ಣನವರ ಪ್ರಕಾರ ಅವರ ಕೃತಿ ಸಂಖ್ಯೆ ೫೫. ಆದರೆ ನನ್ನ ಶೋಧದ ಪ್ರಕಾರ ಅವರು ಬರೆದ ಕೃತಿಗಳು ೮೦" ಎಂದು ಒಂದು ಕರಪತ್ರದಲ್ಲಿ ಸ್ಪಷ್ಟಪಡಿಸಿದುದಲ್ಲದೆ, "ಮಂಜಪ್ಪನವರ ಸಾಹಿತ್ಯ : ಸ್ವರೂಪ–ಸಂಖ್ಯೆ" ಲೇಖನ ಬರೆದು, ತಾವು ಸಂಪಾದಿಸಿದ ಗೌರವಗ್ರಂಥದಲ್ಲಿ ಪ್ರಕಟಿಸಿದರು. ಅದರಲ್ಲಿ ಡಾ. ಹಾಲಪ್ಪನವರ ಸಂಪುಟದಲ್ಲಿ ಸೇರ್ಪಡೆಯಾದ ಗ್ರಂಥ, ಸೇರ್ಪಡೆಯಾಗದ ಗ್ರಂಥ ಎಂಬ ಎರಡು ಪಟ್ಟಿಗಳನ್ನೇ ಸಿದ್ಧಪಡಿಸಿ, ಸೇರ್ಪಡೆಯಾಗದ ಗ್ರಂಥಗಳ ಶೋಧ ನಡೆಸಿದರು. ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ಹರಿಹರ, ದಾವಣಗೇರಿ, ಆಲಮಟ್ಟಿ, ಬಾಗಲಕೋಟ, ಸಿಂದಗಿ, ಹುನಗುಂದ, ಬಂಥನಾಳಗಳಲ್ಲಿ ಪ್ರಯತ್ನಿಸಿದ ಫಲವಾಗಿ ಕೆಲವು ಗ್ರಂಥಗಳು ಲಭ್ಯವಾದವು. ಬಳಿಕ ಪಿಎಚ್. ಡಿ. ಅಧ್ಯಯನ ಕೈಕೊಂಡ ಡಾ. ಮಲ್ಲಿಕಾರ್ಜುನ ಮೇತ್ರಿಯವರು ಕೆಲವು ಗ್ರಂಥಗಳನ್ನು ಹುಡುಕಿದರು. ಹೆಚ್ಚಿನದಾಗಿ ಒಂದಿಷ್ಟು ಪತ್ರಿಕೆ, ವರದಿಗಳೂ ಲಭಿಸಿದವು. ಇವೆಲ್ಲವನ್ನು ಸಂಯೋಜಿಸಿ, ವರ್ಗೀಕರಿಸಿ, ಪ್ರಕಟಿಸುತ್ತಿರುವುದರ ಫಲ, ಈ ಸಂಪುಟ. ಪುನರುಕ್ತವಾದರೂ ಓದುಗರಿಗೆ ಅಗತ್ಯವೆಂಬ ದೃಷ್ಟಿಯಿಂದ "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಹೆಸರಿನ ಅವರ ಆತ್ಮಚರಿತ್ರೆಯೂ ಇಲ್ಲಿ ಒಳಗೊಂಡಿದೆ. ಒಟ್ಟಾರೆ ಈ ಸಂಪುಟದಲ್ಲಿ ಸೇರ್ಪಡೆಯಾದ ಗ್ರಂಥ, ಪತ್ರಿಕೆ, ವರದಿಗಳು ಹೀಗಿವೆ:

ಭಾಗ ೧ : ಆತ್ಮಚರಿತ್ರೆ

೧. ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ (ಕ್ರೌನ್ V – ೧೬೦)
(ಆತ್ಮಚರಿತ್ರೆಯ ಮುಂದುವರಿದ ಭಾಗ ಸಹಿತ)

ಭಾಗ ೨ : ರಾಷ್ಟ್ರೀಯ ಸಾಹಿತ್ಯ

೨. ಖಾದಿಶಾಸ್ತ್ರ (ಕ್ರೌನ್ VI – ೧೧೦)

ಭಾಗ ೩ : ಸಾಮಾಜಿಕ ಸಾಹಿತ್ಯ

೩. ಪತಿತೋದ್ಧಾರ* (ಕಿಸೆ ಆವೃತ್ತಿ VI – ೪೧)
೪. ಅಹಿಂಸೆ (ಕ್ರೌನ್ ೨೨)
೫. ಆಧುನಿಕ ಜರ್ಮನಿ (ಕ್ರೌನ್ II – ೪೨)
೬. ವೀರಶೈವ ಮತತತ್ವ (ಕ್ರೌನ್ VI – ೯೬)

---

* ಈ ಪುಸ್ತಕದ ಮುಖಪುಟ ಒಳಪುಟಗಳ ಮೇಲೆ ವೆಂಕಟೇಶ ಸಿರಶೀಕರ ಎಂದು ಲೇಖಕರ ಹೆಸರು ಮುದ್ರಣಗೊಂಡಿದೆ.(ಕರ್ನಾಟಕ ಗಾಂಧಿ–ಮಲ್ಲಿಕಾರ್ಜುನ ಮೇತ್ರಿ, ಪುಟ. ೨೦ ಅ.ಟಿ. ನೋಡಿ)

೭. ವೀರಶೈವ ಸಮಾಜ ಸುಧಾರಣೆ (ಕ್ರೌನ್ VI – ೭೭)
೮. ವೀರಶೈವ ಏಕೀಕರಣ (ಕಿಸೆ ಆವೃತ್ತಿ – ೨೯)

ಭಾಗ ೪ : ಮಕ್ಕಳ ಸಾಹಿತ್ಯ

೯. ಅರವತ್ಮೂರು ಪುರಾತನರ ಚರಿತ್ರೆ (ಕಿಸೆ ಆವೃತ್ತಿ IV – ೬೩)
೧೦. ತ್ಯಾಗವೀರ ಲಿಂಗರಾಜರ ಚರಿತ್ರೆ (ಕ್ರೌನ್ IV – ೯೨)
೧೧. ಭಗವಾನ ಬುದ್ಧ ಚರಿತ್ರೆ (ಕ್ರೌನ್ VI – ೭೪+೮)
೧೨. ವೀರಶೈವ ಮತಬೋಧೆ (ಡೆಮ್ಮಿ IV +೩೪+೨)
೧೩. ಅಣ್ಣನ ಅರ್ಪಣಯೋಗ (ಕಿಸೆ ಆವೃತ್ತಿ II – ೩೨)
೧೪. ಮಡಿವಾಳ ಮಾಚಿದೇವನ ಉಪದೇಶ (ಕಿಸೆ ಆವೃತ್ತಿ II – ೧೨)

ಭಾಗ ೫ : ಸೃಜನ – ಸಂಪಾದನ ಸಾಹಿತ್ಯ

೧೫. ಜನಸೇವಕನ ವಚನಗಳು (ಕಿಸೆ ಆವೃತ್ತಿ – ೧೦)
೧೬. ಪ್ರಮಥಾಚಾರ ದೀಪಿಕೆ (ಕ್ರೌನ್ IX – ೪೯)
೧೭. ವಚನಕಾರರ ಸಮಾಜರಚನೆ (ಡೆಮ್ಮಿ XII – ೪೬)
೧೮. ಬಸವ ಸಂದೇಶ (ಕಿಸೆ ಆವೃತ್ತಿ –೨೨)
೧೯. ಭಕ್ತಿಯ ಬೆಳಕು (ಕಿಸೆ ಆವೃತ್ತಿ – ೩೨)
೨೦. ಮಹಾನುಭಾವರಾದ ಬಸವಣ್ಣನವರ ಉಪಮೆಗಳು (ಕ್ರೌನ್ IV – ೨೪)
೨೧. ಸುಬೋಧಸಾರ (ಕ್ರೌನ್ – ೧೩೬)
೨೨. Social structure of the Veerashaiva saints* ಕ್ರೌನ್ XII – ೭೨)

---

* ಇದು ಮಂಜಪ್ಪನವರು ಸಂಪಾದಿಸಿದ್ದ "ವಚನಕಾರರ ಸಮಾಜ ರಚನೆ" ಪುಸ್ತಕದ ಇಂಗ್ಲಿಷ್ ಅನುವಾದ. ಅನುವಾದಕರು ಶ್ರೀ ಸ್ವಾಮಿರಾವ್ ಬೋಂದಾಡೆ. ಇದಲ್ಲದೆ ಮಂಜಪ್ಪನವರ ವೀರಶೈವ ಮತಬೋಧೆ(ಮರಾಠಿ, ತೆಲಗು), ಬುದ್ಧಿಯ ಮಾತು(ಮರಾಠಿ), ಸ್ತ್ರೀನೀತಿ ಸಂಗ್ರಹ(ಮರಾಠಿ), ಬಸವ ಬೋಧಾಮೃತ(ಮರಾಠಿ, ಲೋಹಾರ ರಂಗನಾಥ ಅವರು ಮರಾಠಿಗೆ ಅನುವಾದಿಸಿರುವ "ಸಟೀಕ ವ ಸಾರ್ಥ ಬಸವಬೋಧೆ" ಇವರಿಂದ ಭಿನ್ನವೇ?), ಬಸವ ಚರಿತ್ರೆ("Basava TheDimention of Universal man")ಅಹಿಂಸೆ(ಉರ್ದು, ಮಂಜಪ್ಪನವರು ರಾಯಚೂರಿನಲ್ಲಿ ಮಾಡಿದ ಭಾಷಣವನ್ನು ಶ್ರೀ ಕಿಶನ್‌ರಾವ್ ವಕೀಲರು ಉರ್ದು ಭಾಷೆಯಲ್ಲಿ ಬರೆದುಕೊಂಡಿದ್ದರು. ಅಪ್ರಕಟಿತ)ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ ಪುಸ್ತಕದ ೯೩ನೆಯ ಪುಟದಲ್ಲಿ "ಕೆಲವು ಚಿಕ್ಕ ಪುಸ್ತಕಗಳು ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಅನುವಾದಿಸಲ್ಪಟ್ಟವು" ಎಂದು ಹೇಳಲಾಗಿದೆ.

ಮಂಜಪ್ಪನವರು ಅನ್ಯರಿಂದ ಬರೆಯಿಸಿ ಪ್ರಕಟಿಸಿದ ಗ್ರಂಥಗಳು ಹೀಗಿವೆ: ೧. ಸತ್ಯಾಗ್ರಹಿ ಬಸವೇಶ್ವರ(ಹಿಂದಿ, ಮರಾಠಿ–ಈ ಎರಡೂ ಭಾಷೆಗಳಲ್ಲಿ ಬರೆದವರು ಶ್ರೀ ಲಕ್ಷ್ಮಣ ಭೀಡೆ. ಇವುಗಳಲ್ಲಿ ಹಿಂದಿ ಕೃತಿಯನ್ನು ೧೯೨೪ರಲ್ಲಿ ಗಾಂಧೀಜಿ, ಸರೋಜಿನಿ ನಾಯ್ಡು ಅವರಿಗೆ ಬೆಳಗಾವಿ ಅಧಿವೇಶನದಲ್ಲಿ ಕೊಡಲಾಯಿತು. ಇದೇ ಭೀಡೆಯವರು ಮಂಜಪ್ಪನವರ "ಶ್ರೀ ಬಸವೇಶ್ವರನ ಚರಿತ್ರೆಯು" ಪುಸ್ತಕವನ್ನಾಧರಿಸಿ "ವೀರಶೈವ ಮತೋದ್ಧಾರಕ ಶ್ರೀ ಬಸವೇಶ್ವರ" ಹೆಸರಿನ ಲೇಖನವನ್ನು "ಚಿತ್ರಮಯ ಜಗತ್" ಮಾಸಿಕ ೧೯೨೫ ಜುಲೈದಲ್ಲಿ ಪ್ರಕಟಿಸಿದ್ದರು. ಇದನ್ನು ಚನ್ನಪ್ಪ ಫಕೀರಪ್ಪ ಪಾಟೀಲ, ಅ. ಮಾಸ್ತರ ಚಚಡಿ ಅವರು ಕನ್ನಡಕ್ಕೆ ಅನುವಾದಿಸಿ ೧೯೨೬ರಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ೨. ಬಾರಾಹವೇ ಶತಾಬ್ದಿಕಾ ಕರ್ನಾಟಕಕಾ ಸತ್ಯಾಗ್ರಹಿ(ಹಿಂದಿ), ೩. ವಿವೇಕಾನಂದ(ಸಿಂದಗಿ ಸಿದ್ದಣ್ಣ), ೪. ಪುಲಿಕೇಶಿ(ಕಲ್ಯಾಣಪ್ಪ ಬ್ಯಾಳಿ), ೫. ರಾಷ್ಟ್ರಗೀತೆ(ಕಲ್ಯಾಣಪ್ಪ ಬ್ಯಾಳಿ).

ಅನುಬಂಧ : ೧

೧. ಆರ್ಯತೇಜ (ಕ್ರೌನ್ II – ೬೨)

೨. ಶಿಕ್ಷಣ (ಡೆಮ್ಮಿ – ೬೨)

೩. ವ್ಯಾಪಾರ ಶಿಕ್ಷಕ (ಕ್ರೌನ್ – VII-IV +೫೨)

ಅನುಬಂಧ : ೨

ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು

ಹರ್ಡೇಕರ ಮಂಜಪ್ಪನವರ ಕೃತಿಗಳು

ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಇದು ಈ ಸಂಪುಟದ ವಿನ್ಯಾಸ ಇಲ್ಲಿ ಪ್ರತಿಯೊಂದು ವಿಭಾಗದ ಆರಂಭದಲ್ಲಿ ನಮ್ಮ ಟಿಪ್ಪಣಿ ಸೇರಿಸಿದ್ದು, ಇದು ಓದುಗರಿಗೆ ಪ್ರವೇಶದಂತೆ ನೆರವಾಗುವುದೆಂದು ಬೇರೆ ಹೇಳಬೇಕಿಲ್ಲ.

ಈ ೨ನೆಯ ಸಂಪುಟದಲ್ಲಿ ಸೇರದ ಅಂದರೆ ನಮಗೆ ಲಭ್ಯವಾಗದ ಹರ್ಡೇಕರ ಅವರ ಪುಸ್ತಕಗಳು ಹೀಗಿವೆ :

೧. ಅಪ್ಪಾಸಾಹೇಬ ವಾರದ (೧೯೦೯)
೨. ಏಕಲವ್ಯ
೩. ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ
೪. ಕೈ. ಅಪ್ಪಾಸಾಹೇಬ ವಾರದ (ವಿಸ್ತೃತ ಆವೃತ್ತಿ ೧೯೧೭)
೫. ಖಾದಿ
೬. ಚೆನ್ನಬಸವಣ್ಣನವರ ಉಪದೇಶ
೭ ದೀನಬಂಧು ಆಂಡ್ರೂಸ್
೮. ದೇವಯಾನಿ (ಇದು ಮತ್ತು 'ಕಚದೇವನ ಕಥೆ' ಒಂದೇ ಇರಬಹುದೆ?)
೯. ಬಸವೇಶ್ವರನ ನೈತಿಕ ವಚನಗಳು
೧೦. ಬ್ರಹ್ಮಚರ್ಯ
೧೧. ಮಹಾದೇವಿಯಕ್ಕನ ಚರಿತ್ರೆ (ಇದು "ಅಕ್ಕನ ಉಪದೇಶ" ಒಂದೇ ಇರಬಹುದೇ)
೧೨. ಮಹಾತ್ಮಾಗಾಂಧಿ ಪ್ರಣೀತ ಸತ್ಯಾಗ್ರಹಧರ್ಮ
೧೩. ಲಿಂಗವಂತರ ಪ್ರಾಚೀನತ್ವ (ಇದು ಮತ್ತು 'ಲಿಂಗಪೂಜೆಯ ಐತಿಹಾಸಿಕ ವಿವೇಚನೆ' ಒಂದೇ ಇರಬಹುದೇ?)
೧೪. ವಿದ್ಯಾಲಯ ಭಜನಾವಳಿ
೧೫. ಸತ್ಯಾಗ್ರಹಧರ್ಮ(ಇದು ಮತ್ತು 'ಮಹಾತ್ಮಾಗಾಂಧಿ ಪ್ರಣೀತ ಸತ್ಯಾಗ್ರಹಧರ್ಮ' ಒಂದೇ ಇರಬಹುದೇ?)

೧೬. ಸತ್ಯಾಗ್ರಹ ಪದ್ಯಾವಳಿ

೧೭. ಸಿದ್ಧರಾಮ ಶಿವಯೋಗಿಗಳ ಉಪದೇಶ

೧೮. ಸುಕಲಾದೇವಿ

೧೯. ಋಗ್ವೇದ ಸಾರ (ಇದು ಅಲಭ್ಯ ಹಸ್ತಪ್ರತಿ)*

೨೦. ಹಳ್ಳಿಯ ಸಂಚಾರ (ಇದು ಅಲಭ್ಯ ಹಸ್ತಪ್ರತಿ)

೨೧. ಸತ್ಯಾಗ್ರಹ ಪ್ರಕಾಶಿಕೆ (ಇದು ಅಲಭ್ಯ ಹಸ್ತಪ್ರತಿ)

ಇವುಗಳೊಂದಿಗೆ ದಾವಣಗೇರಿಯಲ್ಲಿ ಮುದ್ರಿಸಿ ಹಂಚಿದ ಕರಪತ್ರ ಸ್ವರೂಪದ ಕಿರುಕೃತಿಗಳಾಗಿರಬಹುದಾದ ೨೨. ನಿಜಗುಣಾರ್ಯ, ಸರ್ಪಭೂಷಣ ಶಿವಯೋಗಿಗಳ ಪದ್ಯ ೨೩. ಬಸವೇಶ್ವರರ ನಾಲ್ಕಾರು ನೈತಿಕ ವಚನ–ಇವುಗಳನ್ನೂ ಪರಿಗಣಿಸಬಹುದಾಗಿದೆ. ಮಂಜಪ್ಪನವರ ವಾಸಸ್ಥಳಗಳಲ್ಲಿ, ಸಂಚರಿಸಿದ ಪ್ರದೇಶಗಳಲ್ಲಿ ಹುಡುಕಿದರೂ ಇವು ಲಭ್ಯವಾಗಲಿಲ್ಲ. ಮುಂದಿನ ತಲೆಮಾರಿನ ವಿದ್ವಾಂಸರು ಇವುಗಳನ್ನೂ, ಇರಬಹುದಾದ ಬೇರೆ ಕೃತಿಗಳನ್ನೂ ಶೋಧಿಸಿ ೩ನೆಯ ಸಂಪುಟವನ್ನು ರೂಪಿಸಿದರೆ ಮಾತ್ರ ಮಂಜಪ್ಪನವರ ಸಮಗ್ರಸಾಹಿತ್ಯ ಪ್ರಕಟನೆಗೆ ಪೂರ್ಣವಿರಾಮ ಪ್ರಾಪ್ತವಾಗುತ್ತದೆ.

ಮಂಜಪ್ಪನವರು ಪುಸ್ತಕ ರಚನೆಯಲ್ಲದೆ ಆರು ಪತ್ರಿಕೆಗಳ ಸಂಪಾದಕರಾಗಿಯೂ ಗಣ್ಯ ಕೆಲಸ ಮಾಡಿದ್ದಾರೆ.

೧. ಧನುರ್ಧಾರಿ (ವಾರಪತ್ರಿಕೆ ೧೯೦೬ ರಿಂದ ೧೯೧೪)

೨. ಖಾದಿ ವಿಜಯ (ಮಾಸಪತ್ರಿಕೆ ೧೩ ಅಗಷ್ಟ ೧೯೨೮ ರಿಂದ ೧೯೨೯)

೩. ಉದ್ಯೋಗ (ಮಾಸಪತ್ರಿಕೆ ೧೩ ಫೆಬ್ರುವರಿ ೧೯೩೦ ರಿಂದ ೧೯೩೨)

೪. ಶರಣಸಂದೇಶ (ವಾರಪತ್ರಿಕೆ ೧೭ ಅಗಷ್ಟ ೧೯೩೧ ರಿಂದ ೧೯೪೬)

೫. ವಿದ್ಯಾಲಯ ಪತ್ರಿಕೆ (ಖಾಸಗಿ ಪತ್ರಿಕೆ)

೬. ಬಾಲಸಂಗಯ್ಯ (ಖಾಸಗಿ ಪತ್ರಿಕೆ)

ಮಂಜಪ್ಪನವರ ಗ್ರಂಥಸಾಹಿತ್ಯದ ಬಗ್ಗೆ ಒಂದಿಷ್ಟು ಅಭ್ಯಾಸಮಾಡಿರುವ ವಿದ್ವಾಂಸರು, ಅವರ ಪತ್ರಿಕಾಸಾಹಿತ್ಯವನ್ನು ಉಪೇಕ್ಷಿಸಿದ್ದಾರೆ. ಸಾಮಾನ್ಯೀಕರಣ ಧೋರಣೆಯ ಸಾಹಿತ್ಯಕ್ಕಿಂತ ನಿರ್ದಿಷ್ಟೀಕರಣ ಧೋರಣೆಯ ಪತ್ರಿಕಾಸಾಹಿತ್ಯವು ಸಮಾಜದ ಶುದ್ಧೀಕರಣ, ನವೀಕರಣಗಳಿಗೆ ಸಂಬಂಧಿಸಿದಂತೆ ಮುಖ್ಯಪಾತ್ರವಹಿಸುತ್ತದೆ. ಚಿಂತಕರಾಗಿರುವ ಮಂಜಪ್ಪನವರ ಕಾಣಿಕೆ ಈ ಕ್ಷೇತ್ರಕ್ಕೆ ತುಂಬ ಬೆಲೆಯುಳ್ಳದಾಗಿರುವುದರಿಂದ, ಇವುಗಳ ಎಲ್ಲ ಸಂಚಿಕೆಗಳ ಶೋಧ–ಅಧ್ಯಯನ ಭವಿಷತ್ತಿನಲ್ಲಿ ಜರುಗುವುದು ಅವಶ್ಯವಿದೆ.

* * *

---

* ೪೦೦ ಪು ವ್ಯಾಪ್ತಿಯ ಈ ಹಸ್ತಪ್ರತಿ ಇಂದು ಕಳೆದು ಹೋಗಿದ್ದರೂ, ಇದರ ಒಂದು ಭಾಗ "ವಿಶ್ವೋತ್ಪತ್ತಿಯ ವಿವೇಚನೆ" ಎಂಬುದು "ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ"ದಲ್ಲಿ ಪ್ರಕಟವಾಗಿದೆ.

ಮಂಜಪ್ಪನವರದು ಸರ್ವಜ್ಞನಂತೆ ಅನಿಕೇತನ ಪ್ರಜ್ಞೆ, ಪರಿವ್ರಾಜಕ ಪ್ರವೃತ್ತಿ. ಹುಟ್ಟಿದ್ದು ಬನವಾಸಿಯಲ್ಲಿ (೧೮೮೬) ಅದನ್ನು ಬಿಟ್ಟು, ಪ್ರಾಥಮಿಕ ಶಿಕ್ಷಕನಾದದ್ದು ಶಿರಸಿಯಲ್ಲಿ. ಅದನ್ನು ಬಿಟ್ಟು, ಪತ್ರಿಕೆ ಆರಂಭಿಸಿದ್ದು ದಾವಣಗೆರೆಯಲ್ಲಿ. ಅದನ್ನು ಬಿಟ್ಟು 'ಸತ್ಯಾಗ್ರಹ ಆಶ್ರಮ' ಸ್ಥಾಪಿಸಿ ಕೆಲವು ದಿನ ವಾಸವಾದದ್ದು ಹರಿಹರದಲ್ಲಿ. ಅದನ್ನೂ ಬಿಟ್ಟು, 'ವೀರಶೈವ ವಿದ್ಯಾಲಯ' ಆರಂಭಿಸಿದ್ದು-ಲಿಂಗೈಕ್ಯರಾದದ್ದು ಆಲಮಟ್ಟಿಯಲ್ಲಿ. ನಿಧನರಾದ ಬಳಿಕವೂ ಈ ಸ್ಥಳಾಂತರ ಪ್ರಕ್ರಿಯೆ ಅವರ ಬೆನ್ನು ಬಿಡಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಲಿದ್ದ ಕಾರಣ, ಅಸ್ಥಿಸಹಿತ ಅವರ ಸಮಾಧಿಯನ್ನು ಅಲ್ಲಿಯೇ ಮತ್ತೊಂದು ಜಾಗಕ್ಕೆ ಸ್ಥಳಾಂತರಿಸಲಾಯಿತು. ಹೀಗೆ ವಿಧಿ, ಅವರನ್ನು ಬದುಕಿರುವಾಗಲೂ ಸತ್ತ ಮೇಲೆಯೂ ಒಂದು ಕಡೆ ನಿಲ್ಲಗೊಡಲಿಲ್ಲ.

ಕರ್ನಾಟಕದ ಒಳ ಹೊರಗೆ ಅವರಷ್ಟು ಸಂಚರಿಸಿದವರು ಮತ್ತೊಬ್ಬರಿಲ್ಲ. ಪುಣೆಯಲ್ಲಿ ಲೋಕಮಾನ್ಯ ಟಿಳಕ(೧೯೨೪)ವಿಜಾಪುರದಲ್ಲಿ ರಾಜಗೋಪಾಲಾಚಾರ್ಯ(೧೯೨೩), ಸಾಬರಮತಿಯಲ್ಲಿ ಮಹಾತ್ಮಾಗಾಂಧಿ(೧೯೨೪)ಯವರನ್ನು ಕಂಡರು. ೧೯೨೪ರಂದು ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ, ೧೯೩೪ರಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗಾಂಧಿಜೀಯವರ ಜೊತೆ ದಿನಗಳೆದರು. ಟಿಳಕರಿಂದ ಪ್ರಭಾವಿತರಾಗಿ, ಗಾಂಧೀಜಿಯವರನ್ನು ಆದರ್ಶವಾಗಿಟ್ಟುಕೊಂಡು, ಬಸವಣ್ಣನವರ ಬೆಳಕಿನಲ್ಲಿ ಮುನ್ನಡೆದ ಮಂಜಪ್ಪನವರು ತಮ್ಮ ಬದುಕನ್ನು ಒಂದು ವ್ರತವೆಂದೇ ಪರಿಭಾವಿಸಿದ್ದರು. ಇಂಥ ಬದುಕಿನ ರೀತಿ-ನೀತಿಗಳನ್ನು ವಿವರಿಸುವ ಅವರ "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಹೆಸರಿನ ಆತ್ಮಚರಿತ್ರೆಯು ಗಾಂಧೀಜಿಯವರ ಆತ್ಮಚರಿತ್ರೆ ಓದಿದ ಅನುಭವ ನೀಡುತ್ತದೆ. ಪ್ರಾಮಾಣಿಕತೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ಕೃತಿ ವ್ಯಕ್ತಿಚರಿತ್ರೆಯಾಗಿ ಉಳಿಯದೆ, ಪರಿಸರದ ಚರಿತ್ರೆಯಾಗಿ ಬೆಳೆದಿದೆ. ಇಂದಿಗೂ ತನ್ನ ಮೌಲ್ಯ-ಆಕರ್ಷಣೆ ಉಳಿಸಿಕೊಂಡಿದೆ.

೨೦ನೆಯ ಶತಮಾನ, ಭಾರತವು ಧರ್ಮದ ನೆಲೆಯಿಂದ ರಾಷ್ಟ್ರಧರ್ಮದ ನೆಲೆಗೆ ಸರಿಯುತ್ತಲಿದ್ದ ಸಂದರ್ಭ. ಲಿಂಗಾಯತರಲ್ಲಿ ಸಮಾಜಪ್ರಜ್ಞೆ ಎಚ್ಚರಗೊಂಡಿದ್ದ ಆ ಕಾಲದಲ್ಲಿ ಸಹಜವಾಗಿಯೇ ಸಮಾಜಮುಖಿಯಾಗಿದ್ದ ಮಂಜಪ್ಪನವರು ರಾಷ್ಟ್ರಪ್ರಜ್ಞೆಗೂ ವಿಸ್ತರಿಸಿಕೊಂಡುದು ಅವರ ಮುಕ್ತದೃಷ್ಟಿಯನ್ನು ದ್ಯೋತಿಸುತ್ತದೆ. ಗಾಂಧೀಜಿಯವರ ಬದುಕಿನಿಂದ, ಸಮಕಾಲೀನ ಕನ್ನಡ, ಮರಾಠಿ, ಹಿಂದಿ ಬರವಣಿಗೆಗಳಿಂದ ಈ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದರೂ, ಅದರ ಬಗ್ಗೆ ತಮ್ಮದೇ ಆದ ದೃಷ್ಟಿಕೋನ ಹೊಂದಿದ್ದರು. "ಭಾರತೀಯರ ದೇಶಭಕ್ತಿ" ಮೊದಲಾದ ಗ್ರಂಥಗಳು ಈ ಮಾತಿಗೆ ನಿದರ್ಶನವೆನಿಸಿವೆ. ಪ್ರಸ್ತುತ 'ಖಾದಿಶಾಸ್ತ್ರ' ಸ್ವದೇಶೀ ಪ್ರಜ್ಞೆಯ ಒಂದು ಭಾಗವಾಗಿದ್ದು, ಖಾದಿಯ ಮಹತ್ವವನ್ನು ಭೌತಿಕ, ಅಭೌತಿಕ ನೆಲೆಗಳಲ್ಲಿ ಪ್ರತಿಪಾದಿಸುತ್ತದೆ. ಖಾದಿಯ ಮಹತ್ವವನ್ನು ದಾರ್ಶನಿಕ ನೆಲೆಯಲ್ಲಿ ಅರ್ಥಮಾಡಿಕೊಂಡವರೆಂಬ ಕಾರಣದಿಂದಾಗಿ ಆಲೂರ ವೆಂಕಟರಾಯರು ಈ ಗ್ರಂಥವನ್ನು ಮಂಜಪ್ಪನವರಿಂದ ಬರೆಯಿಸಿ, ತಮ್ಮ 'ನವಜೀವನಗ್ರಂಥಮಾಲೆ'ಯಲ್ಲಿ ಪ್ರಕಟಿಸಿದರು.

ಮಂಜಪ್ಪನವರು ಬರೆದ ಸಾಮಾಜಿಕ ಸಾಹಿತ್ಯವು ಕರ್ನಾಟಕದಲ್ಲಿ ಹುಟ್ಟಿದ ಈ ಬಗೆಯ ಸಾಹಿತ್ಯದ ಬೆಲೆಯುಳ್ಳ ಭಾಗವಾಗಿದೆ. ಇಲ್ಲಿ ಮಾನವಿಕ ನೆಲೆಯ 'ಅಹಿಂಸೆ' ಕೃತಿಯನ್ನು ಬಿಟ್ಟರೆ, 'ಪತಿತೋದ್ಧಾರ' ನೇರವಾಗಿ ಸಾಮಾಜಿಕ ನೆಲೆಯ, ವೀರಶೈವ ಮತತತ್ವ, ವೀರಶೈವ ಸಮಾಜಸುಧಾರಣೆ,

ವೀರಶೈವ ಏಕೀಕರಣ ಕೃತಿಗಳು ವೀರಶೈವ ಸಾಮಾಜಿಕ ನೆಲೆಯ ರಚನೆಗಳಾಗಿವೆ. 'ಆಧುನಿಕ ಜರ್ಮನಿ'ಯು ವಿದೇಶೀ ಸಾಮಾಜಿಕ ಜೀವನ ಪದ್ಧತಿ, ಅಲ್ಲಿಯ ಪುನರುಜ್ಜೀವನ ತಿಳಿಸುತ್ತದೆ. ಅಹಿಂಸೆಯನ್ನು, ಪತಿತರನ್ನು, ವೀರಶೈವರನ್ನು, ವಿದೇಶಿಯರನ್ನು ಕುರಿತು ನಡೆಸಿದ ಇಲ್ಲಿಯ ಚಿಂತನೆಯಲ್ಲಿ ಸಾಮಾಜಿಕತೆಯ ಒಂದು ಏಕಸೂತ್ರತೆ ಕಂಡುಬರುತ್ತದೆ. ಮಾನವೀಯತೆಯಿಂದ ಸಾವಾಜಿಕತೆಯುನ್ನು ಬಿಡಿಸಿ ನೋಡಿದ ವೈಜ್ಞಾನಿಕತೆ, ಸುಧಾರಣೆಗಾಗಿ ಸೂಚಿಸಿದ ಮಾರ್ಗೋಪಾಯಗಳು ಇಂದಿಗೂ ತಮ್ಮ ಬೆಲೆ ಉಳಿಸಿಕೊಂಡಿವೆ.

ರಾಷ್ಟ್ರೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯ ಚಿಂತಕರಾದ ಮಂಜಪ್ಪನವರಿಗೆ ಮಕ್ಕಳನ್ನು ಈ ದಿಸೆಯಲ್ಲಿ ಬೆಳೆಸಬೇಕೆಂಬ ಅದಮ್ಯ ಆಸೆಯಿದ್ದಿತು. ಅದಕ್ಕಾಗಿ ಆಲಮಟ್ಟಿಯಲ್ಲಿ ಒಂದು ವಿದ್ಯಾಲಯವನ್ನೇ ತೆರೆದರು. ಇದಕ್ಕೆ ಸಂಬಂಧಪಟ್ಟ ಪಠ್ಯಕ್ರಮವನ್ನು ರೂಪಿಸಿದರು. ಹಲವು ಕೃತಿಗಳನ್ನು ರಚಿಸಿದರು. ಅವರಿಗೆ ಈ ದಿಸೆಯಲ್ಲಿ ಬೌದ್ಧ ಮತ್ತು ವೀರಶೈವ ಜೀವನ ಮಾದರಿಗಳು ಮುಖ್ಯವೆನಿಸಿದ್ದ ಕಾರಣ, ಮಕ್ಕಳಿಗಾಗಿ ಭಗವಾನ ಬುದ್ಧ ಚರಿತ್ರೆ, ಅಣ್ಣನವರ ಅರ್ಪಣಯೋಗ, ಮಡಿವಾಳ ಮಾಚಿದೇವನ ಉಪದೇಶ, ತ್ಯಾಗವೀರ ಲಿಂಗರಾಜರ ಚರಿತ್ರೆ ಮೊದಲಾದವುಗಳನ್ನು ಬರೆದರು. ಸರಳಭಾಷೆಯಲ್ಲಿ ಜೀವನಮೌಲ್ಯವನ್ನು ತಿಳಿಸಿಕೊಡುವ ಈ ಕೃತಿಗಳಿಂದಾಗಿ, ಮಂಜಪ್ಪನವರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಮೊದಲಿಗರೆನಿಸಿದರು.

ಮಂಜಪ್ಪನವರದು ಸೃಜನಶೀಲ ಮನಸ್ಸು, ಹೊಸದನ್ನು ಚಿಂತಿಸುವುದು, ಹೊಸದನ್ನು ಕಾಣುವುದು, ಹೊಸದನ್ನು ಬರೆಯುವುದು ಅವರ ವ್ಯಕ್ತಿತ್ವದ ಭಾಗವೇ ಆಗಿದ್ದಿತು. ಈ ದಿಕ್ಕಿನಲ್ಲಿ ನಡೆಸಿದ ಪ್ರಯೋಗಗಳಿಂದಾಗಿ ಜನಸೇವಕನ ವಚನಗಳು, ವಚನಕಾರರ ಸಮಾಜರಚನೆ ಇತ್ಯಾದಿ ಕೃತಿಗಳು ಇವರಿಂದ ಮೂಡಿಬಂದವು. ಜಂಗಮನಾಗದವ ವಚನ, ನಿಜವಾದ ವಚನ ಬರೆಯಲಾರ. ಹೀಗಾಗಿ ಜಂಗಮಪ್ರಜ್ಞೆ ಕಾಣಿಸಿಕೊಂಡ ಯಾವುದೇ ಕಾಲಸಂದರ್ಭದಲ್ಲಿ ವಚನಸಾಹಿತ್ಯ ಹುಟ್ಟುತ್ತ ಬಂದಿದೆ. ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಗಾಂಧೀಜಿ ಮೊದಲಾದವರಿಂದ ಜಂಗಮಪ್ರಜ್ಞೆ ಭಾರತದಲ್ಲಿ ಜಾಗೃತವಾಗಿದ್ದಿತು. ಈ ಆಂದೋಲನದ ಭಾಗವೇ ಆಗಿದ್ದ ಕನ್ನಡಿಗ ಮಂಜಪ್ಪನವರ ಮೂಲಕ ವಚನಸೃಷ್ಟಿಕ್ರಿಯೆ ಜರುಗಿತು. ಆಧುನಿಕ ಕಾಲದಲ್ಲಿ ಇದು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದಿದ್ದು, ಈ ಪ್ರಯೋಗದ ಮೊದಲಿಗರು ಮಂಜಪ್ಪನವರೆಂಬುದನ್ನು ಇಲ್ಲಿ ಅವಶ್ಯ ನೆನೆಯಬೇಕು. ಇಂಥ ನೇರ ಸೃಜನಕೃತಿಯನ್ನು ಬಿಟ್ಟರೂ ಭಕ್ತಿಯ ಬೆಳಕು, ಬಸವ ಸಂದೇಶ, ಮಹಾನುಭಾವರಾದ ಬಸವಣ್ಣನವರ ಉಪಮೆಗಳು–ಈ ಸ್ವತಂತ್ರ ಕೃತಿಗಳಲ್ಲಿಯೂ ಮಂಜಪ್ಪನವರ ಸೃಜನಶೀಲತೆಯನ್ನು ಕಾಣಬಹುದಾಗಿದೆ. "ವಚನಕಾರರ ಸಮಾಜ ರಚನೆ" ವಿದ್ವಾಂಸರ ಅಭಿಪ್ರಾಯಗಳ ಸಂಕಲನವಾಗಿದ್ದು, ಇದರ ಅನುವಾದವಾಗಿದೆ "Social Structure of the Veerashaiva Saints" ಕೃತಿ. ಈ ಸಂಕಲನ, ಶ್ರೀ ಬೋಂದಾಡೆಯವರ ಮೂಲಕ ಮಾಡಿಸಿದ ಈ ಅನುವಾದಗಳು ವಚನಕಾರರನ್ನು ಆಧುನಿಕ ದೃಷ್ಟಿಯಿಂದ ನೋಡಬೇಕೆಂಬ, ಅವರ ವಿಚಾರಗಳನ್ನು ಲೋಕ ವಿಸ್ತಾರಗೊಳಿಸಬೇಕೆಂಬ ಧೋರಣೆಯ ಕೃತಿಯಾಗಿವೆ. "ಸುಬೋಧಸಾರ" ಮುಪ್ಪಿನ ಷಡಕ್ಷರಿಗಳ ಮೌಲಿಕ ಕೃತಿ. ಆಧ್ಯಾತ್ಮಿಕ ಭಾವಗೀತೆಯಾಗಿರುವ ಇದನ್ನು ಹರ್ಡೇಕರ ಅವರು ಸಂಪಾದಿಸಿ ಪ್ರಕಟಿಸಿದುದು, ಅವರ ಬಹುಮುಖಿ ಆಸಕ್ತಿಗಳಿಗೆ ನಿದರ್ಶನವೆನಿಸಿದೆ. "ಪ್ರಮಥಾಚಾರದೀಪಿಕೆ" ವಚನಗಳ ಬೆಳಕಿನಲ್ಲಿ ಬರೆದ ಅಥಣಿ ಶಿವಯೋಗಿಗಳ ಜೀವನ ಚರಿತ್ರೆಯಾಗಿದ್ದು, ಒಂದು ವಿಶಿಷ್ಟ ಪ್ರಯೋಗವಾಗಿದೆ.

ಮಂಜಪ್ಪನವರದು ಸಮಗ್ರದೃಷ್ಟಿ. ಕೇವಲ ಧಾರ್ಮಿಕ, ನೈತಿಕ, ರಾಷ್ಟ್ರೀಯ, ಸಾಮಾಜಿಕ ಆಯಾಮಗಳಲ್ಲದೆ ಶೈಕ್ಷಣಿಕ, ವಾಣಿಜ್ಯ ಆಯಾಮಗಳಲ್ಲಿಯೂ ಬದುಕು ಬಂಧುರವಾಗಬೇಕೆಂಬುದು ಅವರ ಅಭಿಪ್ರಾಯವಾಗಿದ್ದಿತು. ಈ ಉದ್ದೇಶದಿಂದ ಆರಂಭಿಸಿದ್ದ ಆಲಮಟ್ಟಿಯ ವೀರಶೈವ ವಿದ್ಯಾಲಯದ ವರದಿ ಮತ್ತು ಮಕ್ಕಳಿಗಾಗಿ ಬರೆದ ಮಾದರಿ ಪಾಠಗಳನ್ನೊಳಗೊಂಡಿದೆ "ಆರ್ಯತೇಜ". "ಶಿಕ್ಷಣ"ವೆನ್ನುವುದು ವಾರ್ಷಿಕ ಸಂಚಿಕೆ ಸ್ವರೂಪದ ಕೃತಿಯಾಗಿವೆ. "ವ್ಯಾಪಾರ ಶಿಕ್ಷಕ"ವೆಂಬುದು ಮಂಜಪ್ಪನವರ 'ಶರಣಸಂದೇಶ' ಪತ್ರಿಕೆಯ ವಾಣಿಜ್ಯ ವಿಶೇಷಾಂಕ. ಕನ್ನಡಿಗರ ವ್ಯಾಪಾರ ಕ್ಷೇತ್ರದ ಹಿನ್ನೆಡೆ ಮುನ್ನಡೆಗಳ ಮೇಲೆ ಬೆಳಕು ಬೀರುವ ಇದು ಸಮಕಾಲೀನ ವಾಣಿಜ್ಯ ಕ್ಷೇತ್ರದ ಒಂದು ಚಿತ್ರವನ್ನು ಕಟ್ಟಿಕೊಡುತ್ತದೆ.

ಹೀಗೆ ವೈವಿಧ್ಯಪೂರ್ಣ ಬರವಣಿಗೆಯಲ್ಲಿ ವಿಸ್ತರಿಸಿಕೊಂಡಿದ್ದ ಮಂಜಪ್ಪನವರದು ಭಾವಪ್ರಧಾನ ಸೃಜನಸಾಹಿತ್ಯವಲ್ಲ, ವಿಚಾರ ಪ್ರಧಾನ ಸೃಜನಸಾಹಿತ್ಯ. ಸಮಾಜದ ಕಣ್ಣು ತೆರೆಯಿಸುವಲ್ಲಿ ಭಾವಪ್ರಧಾನ ಸಾಹಿತ್ಯದ್ದು ಪರ್ಯಾಯದಾರಿ, ವಿಚಾರ ಪ್ರಧಾನ ಸಾಹಿತ್ಯದ್ದು ನೇರದಾರಿ. ಅದು ಮಂತ್ರವೈದ್ಯ, ಇದು ಶಸ್ತ್ರವೈದ್ಯ. ಹೀಗಾಗಿ ಸಮಾಜವನ್ನು ಎಚ್ಚರಿಸುವಲ್ಲಿ, ಮೌಲ್ಯ ಸ್ಥಾಪಿಸುವಲ್ಲಿ ಇದರ ಪಾತ್ರ ದೊಡ್ಡದು.

ಮಂಜಪ್ಪನವರ ಮುಖ್ಯ ಉದ್ದೇಶ ಸಾಹಿತ್ಯ ಬರೆಯುವುದಲ್ಲ, ಸಮಾಜವನ್ನು ಸರಿಪಡಿಸುವುದು. ಹಾಗೆ ಸರಿಪಡಿಸುವುದಕ್ಕಾಗಿ ಅವರು ಮಾಧ್ಯಮವಾಗಿ ಬಳಸಿದ ಬರವಣಿಗೆ ಸಾಹಿತ್ಯವಾಯಿತು. ರಾಷ್ಟ್ರಜೀವನ ಗ್ರಂಥಮಾಲೆ, ಸತ್ಯಾಗ್ರಹ ಗ್ರಂಥಾವಳಿ, ಜ್ಞಾನೋದಯ ಗ್ರಂಥಮಾಲೆ, ಜನಜಾಗೃತಿ ಗ್ರಂಥಮಾಲೆ, ಮಕ್ಕಳ ಸಾಹಿತ್ಯಮಾಲೆ, ಪ್ರಗತಿ ಗ್ರಂಥಮಾಲೆ, ವೀರಶೈವ ವಿದ್ಯಾಲಯ ಗ್ರಂಥಮಾಲೆ ಈ ಹೆಸರುಗಳೇ ಅವರ ಧೋರಣೆಯನ್ನು ಬಿಂಬಿಸುತ್ತವೆ. ಈ ಧ್ಯೇಯ – ಧೋರಣೆಗಳನ್ನು ಬಾಳಿದ, ಬರೆದ ಮಂಜಪ್ಪನವರು ವೀರಶೈವ ಸಮಾಜವು ತನ್ಮೂಲಕ ಕರ್ನಾಟಕ ರಾಜ್ಯವು ಭಾರತಕ್ಕೆ ನೀಡಿದ ವಿಶಿಷ್ಟ ಕೊಡುಗೆಯಾಗಿದ್ದಾರೆ. "ಅಖಿಲ ಭಾರತ ಮಹಾಪುರುಷರಾಗುವುದಕ್ಕೆ ಯೋಗ್ಯರಾದ ಇವರ ಲಾಭವನ್ನು ನಮ್ಮ ಸಮಾಜ ಸರಿಯಾಗಿ ಮಾಡಿಕೊಳ್ಳದೇ ಇದ್ದುದು ಅದರ ದುರ್ದೈವ" ಎಂಬ ಶಂಬಾ ಜೋಶಿಯವರೊಂದಿಗೆ ದನಿಗೂಡಿಸಿ, ಮುಗಿಯಲಾರದ ಈ ಮಾತುಗಳನ್ನು ಮುಗಿಸುತ್ತೇವೆ.

* * *

ಈ ಸಂಪುಟದ ಸಂಪಾದನೆ ನಮ್ಮ ಜೀವಮಾನದ ಒಂದು ಸಾರ್ಥಕ ಸಂದರ್ಭವೆಂದು ಭಾವಿಸುತ್ತೇವೆ. ಡಾ. ಹಾಲಪ್ಪ ಅವರ ಕಾರ್ಯದ ಮುಂದುವರಿಕೆಯಾಗಿದ್ದರೂ, ಅಲ್ಲಿ ಕೈಬಿಟ್ಟಿರುವ ಪ್ರತಿಯೊಂದು ಪುಸ್ತಕದ ಮುಖಪುಟ, ಪ್ರಸ್ತಾವನೆ, ಅಪೂರ್ವ ಭಾವಚಿತ್ರ, ಬೆನ್ನುಪುಟದ ಬರವಣಿಗೆ ಇತ್ಯಾದಿಗಳನ್ನು ಉಳಿಸಿಕೊಳ್ಳುವ ಮೂಲಕ ನಾವು ಮಂಜಪ್ಪನವರ ಕೃತಿಗಳನ್ನು ಮೂಲರೂಪದಲ್ಲಿ ಸಹೃದಯರ ಕೈಗಿಡುತ್ತಲಿದ್ದೇವೆ.

ನಾವು ಕಷ್ಟಪಟ್ಟು ಸಂಗ್ರಹಿಸಿದ ಪುಸ್ತಕಗಳು ಸಂಪುಟ ರೂಪದಲ್ಲಿ ಪ್ರಕಟವಾಗುತ್ತಲಿರುವುದು ನಮಗೆ ವಿಶೇಷ ಸಂತೋಷವನ್ನುಂಟುಮಾಡಿದೆ. ಪ್ರಕಟಿಸುವ ಮೂಲಕ ಈ ಸಂತೋಷವನ್ನು

ನಮ್ಮದನ್ನಾಗಿಸಿದ ಗದುಗಿನ ಶ್ರೀ ಎಡೆಯೂರು ತೋಂಟದಾರ್ಯ ಸಂಸ್ಥಾನ ಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಯ ಅಧ್ಯಕ್ಷರಾದ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗಸ್ವಾಮೀಜಿ ಅವರಿಗೆ ನಮ್ಮ ಭಕ್ತಿಪೂರ್ವಕ ಪ್ರಣಾಮಗಳು. ಈ ಅಪರೂಪದ ಪುಸ್ತಕಗಳನ್ನು ನೀಡಿದ ಬೇರೆ ಬೇರೆ ಸ್ಥಳದ ಅವುಗಳ ಒಡೆಯರಿಗೆ, ಅಚ್ಚಿನ ಕಾರ್ಯದಲ್ಲಿ ನೆರವಾದ ಪ್ರೊ. ಸದಾನಂದ ಕನವಳ್ಳಿ, ಡಾ. ಎಚ್. ಎಸ್. ಮೇಲಿನಮನಿ ಅವರಿಗೆ, ಶ್ರೀ ಮಂಜಪ್ಪನವರ ಪ್ರಮುಖ ಸ್ಮಾರಕಗಳ ಹಾಗೂ ಸಮಾಧಿ ಸ್ಥಳಾಂತರದ ಫೋಟೋಗಳನ್ನು ಪೂರೈಸಿದ ಶ್ರೀ ಹೆಚ್. ಚಂದ್ರಶೇಖರ ಅವರಿಗೆ, ಶ್ರಮವಹಿಸಿ ಪ್ರೀತಿಯಿಂದ ಮುದ್ರಿಸಿಕೊಟ್ಟ ಬೆಂಗಳೂರಿನ ಪ್ರಿಂಟ್‌ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ. ಬಿ. ಪಾಟೀಲ, ಪುಸ್ತಕ ವಿನ್ಯಾಸದಲ್ಲಿ ಶ್ರಮವಹಿಸಿದ ಪ್ರೀತಿಯ ಬಸೂ ಅವರಿಗೆ ಧನ್ಯವಾದಗಳು.

–ಎಂ. ಎಂ. ಕಲಬುರ್ಗಿ

–ಮಲ್ಲಿಕಾರ್ಜುನ ಮೇತ್ರಿ


*

ಅನುಕ್ರಮಣಿಕೆ

ಭಾಗ : ೫

ಸೃಜನ–ಸಂಪಾದನ ಸಾಹಿತ್ಯ

* ಟಿಪ್ಪಣಿ
- ❖ ಜನಸೇವಕನ ವಚನಗಳು
- ❖ ಪ್ರಮಥಾಚಾರ ದೀಪಿಕೆ
- ❖ ವಚನಕಾರರ ಸಮಾಜ ರಚನೆ
- ❖ ಬಸವ ಸಂದೇಶ
- ❖ ಭಕ್ತಿಯ ಬೆಳಕು
- ❖ ಮಹಾನುಭಾವರಾದ ಬಸವಣ್ಣನವರ ಉಪಮೆಗಳು
- ❖ ಸುಬೋಧಸಾರ
- ❖ Social structure of the Veerashaiva saints



ಹಾಳು ಬಿದ್ದಿರುವ ಮಂಜಪ್ಪನವರ ಸಮಾಧಿ, ಆಲಮಟ್ಟಿ(೧೯೮೯)

*

ಟಿಪ್ಪಣಿ

ಸೃಜನಕ್ರಿಯೆ ಒಂದು ಶಕ್ತಿ. ಈ ಶಕ್ತಿಯ ಮೂಲಕ ವ್ಯಕ್ತಿ ಕಲಾಜಗತ್ತನ್ನು ಅಂದರೆ ಅದರ ವೈವಿಧ್ಯಮಯ ಕ್ಷೇತ್ರಗಳಾದ ಸಾಹಿತ್ಯ, ಸಂಗೀತ, ನಾಟ್ಯ, ಶಿಲ್ಪ ಮುಂತಾದವುಗಳನ್ನು ಪ್ರವೇಶಿಸುತ್ತಾನೆ. ಇವುಗಳಿಗಿಂತ ಭಿನ್ನವೆನಿಸುವ ವಿಚಾರಶಕ್ತಿಯನ್ನೇ ಬೆನ್ನೆಲುಬಾಗಿಸಿಕೊಂಡಿರುವ ಇನ್ನೊಂದು ಬಗೆಯ ಸೃಜನಸಾಹಿತ್ಯದಲ್ಲಿ ಸಂಶೋಧನೆ, ವಿಮರ್ಶೆ, ಚರಿತ್ರೆ, ವೈಜ್ಞಾನಿಕತೆ, ರಾಷ್ಟ್ರೀಯತೆ, ಸಾಮಾಜಿಕ ಚಿಂತನೆ ಮುಂತಾದವು ಒಳಗೊಳ್ಳುತ್ತವೆ.

ಹರ್ಡೇಕರ ಮಂಜಪ್ಪನವರ ಒಟ್ಟು ಸಾಹಿತ್ಯ ಕೃತಿಗಳ ಅವಲೋಕನದ ಸಂದರ್ಭದಲ್ಲಿ, ಅವರು ಮೇಲೆ ಹೇಳಿದ ಎರಡನೆಯ ಬಗೆಯ ಸಾಹಿತಿಯೆಂದು ಹೇಳಬಹುದು. ಮಂಜಪ್ಪನವರಿಗೆ ಕಥೆ, ಕಾದಂಬರಿ ಮತ್ತು ಕವನಗಳಿಗಿಂತಲೂ ಧರ್ಮಶಾಸ್ತ್ರ ಮತ್ತು ಸಾಮಾಜಿಕ ಶಾಸ್ತ್ರಗಳಲ್ಲಿ ಹೆಚ್ಚು ಆಸಕ್ತಿ ಇದ್ದಿತು. ಕೊನೆ ಕೊನೆಗೆ ಸಮಾಜಶಾಸ್ತ್ರದೊಡನೆ ವಿಜ್ಞಾನದ ಕಡೆಗೂ ಅವರು ಆಸಕ್ತಿಯುಳ್ಳವರಾಗಿದ್ದರು. ಅವರು ಕೈಕೊಂಡ ಪ್ರಗತಿ ಗ್ರಂಥಮಾಲೆಯೇ ಇದಕ್ಕೆ ಸಾಕ್ಷಿ, ಕನ್ನಡದಲ್ಲಿ ವಿಚಾರಪೂರಿತ ಗ್ರಂಥಗಳು ಹೆಚ್ಚುಹೆಚ್ಚಾಗಿ ಪ್ರಕಟವಾಗಬೇಕೆಂಬುದು ಅವರ ಬಯಕೆಯಾಗಿದ್ದಿತು. ಅವರು ಭಾರತೀಯರ ದೇಶಭಕ್ತಿ ಮುಂತಾದ ಶಾಸ್ತ್ರೀಯ ಗ್ರಂಥಗಳನ್ನು ಬರೆಯಲು ಇಂತಹ ಪ್ರಗತಿಶೀಲ ದೃಷ್ಟಿಯೇ ಕಾರಣವಾಯಿತು. ಡಾರ್ವಿನ್ ಮತ್ತು ಹರ್ಬರ್ಟ ಸ್ಪೆನ್ಸರ್ ಮೊದಲಾದ ಪಾಶ್ಚಾತ್ಯ ಲೇಖಕರ ಗ್ರಂಥಗಳು ಇವರ ವಿಚಾರ ಸರಣಿಯನ್ನು ರೂಪಿಸಿದವು. "ತನಗಾಗಿ ಕಾರ್ಯಗಳಿವೆಯೇ ವಿನಾ ಕಾರ್ಯಗಳಿಗಾಗಿ ತಾನಿಲ್ಲ" ಎಂಬ ಹರ್ಬರ್ಟ ಸ್ಪೆನ್ಸರರ ಮಾತು ಇವರಿಗೆ ಬಹು ಪ್ರಿಯವಾಗಿತ್ತು. ಸಮಾಜವನ್ನು ಅಭ್ಯಾಸಮಾಡುವ ಸಮಸ್ಯೆಗಳನ್ನು ತುಲನಾತ್ಮಕವಾಗಿ ವಿಮರ್ಶಿಸಿ ನೋಡುವ ಕಲೆ ಮಂಜಪ್ಪನವರಿಗೆ ಕರಗತವಾಗಿದ್ದಿತು. ಇವರು ಕನ್ನಡದ ಹರ್ಬರ್ಟ ಸ್ಪೆನ್ಸರ ಎನ್ನಲು ಅಡ್ಡಿಯಿಲ್ಲ. ಈ ಮಾತುಗಳು ಮಂಜಪ್ಪನವರ ಒಟ್ಟು ಸಾಹಿತ್ಯಕೃತಿಗಳ ಚಿತ್ರವನ್ನೇ ನಮ್ಮ ಮುಂದೆ ಇಡುತ್ತವೆ. ತಮ್ಮ ಸಮಕಾಲೀನ ಸಮಾಜದ ಅಭಿವೃದ್ಧಿಗೆ ರಾಷ್ಟ್ರಪ್ರೇಮದ ಬೆಳವಣಿಗೆಗೆ

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ–ಗ. ಸ. ಹಾಲಪ್ಪ, ಪು, ೧೩೩

ನೈತಿಕತೆಯ ಪ್ರಸಾರಕ್ಕೆ ತೀರ ಅವಶ್ಯವಾದ ಕೃತಿಗಳನ್ನು ರಚಿಸಿದ ಕೀರ್ತಿ ಅವರದು. ಈ ಕಾರಣ ಅವರದು ಸಮಾಜ ಹಾಗೂ ರಾಷ್ಟ್ರದ ಪುನರುತ್ಥಾನಕ್ಕೆ ಮಿಡಿವ ಸಾಹಿತ್ಯವೆಂಬ ಖ್ಯಾತಿ ಪಡೆದಿದೆ.

ಮಂಜಪ್ಪನವರಿಂದ ಹೆಚ್ಚು ಸೃಜನಸಾಹಿತ್ಯ ಸೃಷ್ಟಿಯಾಗದಿದ್ದರೂ ಅವರ ಎಲ್ಲ ಸಾಹಿತ್ಯದಲ್ಲಿ ಅದರ ಛಾಯೆ ಕಾಣುತ್ತೇವೆ. ಜನಸೇಕನ ವಚನಗಳು, ಸಂಗನಬಸವ ಸ್ತುತಿ ಹಾಗೂ ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ ಎಂಬ ಮೂರು ಕೃತಿಗಳು ಅವರ ಸೃಜನಶೀಲತೆಗೆ ಮಾದರಿಯಾಗಿವೆ. ಇವು ವೈವಿಧ್ಯಮಯವಾದ ಕೃತಿಗಳು ಜನಸೇವಕನ ವಚನಗಳು ಆಧುನಿಕ ವಚನಗಳ ಸಂಕಲನ ಸಂಗನಬಸವ ಸ್ತುತಿ ಬಸವಣ್ಣನವರ ಕುರಿತಾದ ಪದ್ಯರೂಪದ ಚಿಕ್ಕ ಕೃತಿ. ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ ಆತ್ಮಕಥೆಯಾಗಿದೆ.

ಕನ್ನಡ ಸಾಹಿತ್ಯದ ಮಹತ್ವದ ಭಾಗ ವಚನಸಾಹಿತ್ಯ, ಚಳುವಳಿಯ ನಿರಂತರತೆಯಲ್ಲಿ ಒಡಮೂಡಿ ಜನಸಾಮಾನ್ಯರ ಧ್ವನಿಯಾಗಿ ಪ್ರಕಟಗೊಂಡಿರುವಂಥದ್ದು. ಸಮಾನತೆ ಸರ್ವ ರೀತಿಯಲ್ಲಿ ಬರಬೇಕೆಂಬುದು ಈ ಸಾಹಿತ್ಯದ ಮುಖ್ಯಧೋರಣೆ. ಈ ಕಾರಣ ಅದರ ಪ್ರಭಾವ ಇಂದಿಗೂ ವಿಶೇಷವಾಗಿರುವುದನ್ನು, ಆಧುನಿಕ ಸಂದರ್ಭದಲ್ಲಿ ವಚನ ರಚನಾಕ್ರಿಯೆ ವಿಪುಲವಾಗಿ ನಡೆಯುತ್ತಿರುವದನ್ನು ಕಾಣುತ್ತೇವೆ. ಒಂದು ಲೆಕ್ಕಾಚಾರದ ಪ್ರಕಾರ ನೂರಕ್ಕಿಂತ ಹೆಚ್ಚು ಆಧುನಿಕ ವಚನಕಾರರು ವಚನರಚನೆ ಮಾಡಿದ್ದಾರೆ. ಮಾಡುತ್ತಿದ್ದಾರೆ. ಇವರಲ್ಲಿ ಪ್ರಮುಖರಾದವರು ಹರ್ಡೇಕರ ಮಂಜಪ್ಪ, ಎಸ್. ವ್ಹಿ. ರಂಗಣ್ಣ, ಡಾ. ಜ. ಚ. ನಿ. ಡಾ. ಎಸ್. ವ್ಹಿ. ಪರಮೇಶ್ವರಭಟ್ಟ, ಡಾ. ಸಿದ್ದಯ್ಯ ಪುರಾಣಿಕ, ಮಹಾದೇವ ಬಣಕಾರ, ಬೆಟಗೇರಿ ಕೃಷ್ಣಶರ್ಮ, ಸಂಗಮೇಶ ಹೊಸಮನಿ ಮುಂತಾದವರು.

ಪ್ರಾಚೀನ ವಚನಸಾಹಿತ್ಯಕ್ಕೆ ಜೇಡರ ದಾಸಿಮಯ್ಯ ಆದ್ಯನಾದಂತೆ ಆಧುನಿಕ ವಚನಸಾಹಿತ್ಯಕ್ಕೆ ಹರ್ಡೇಕರ ಮಂಜಪ್ಪನವರು ಆದ್ಯರೆನಿಸಿದ್ದಾರೆ. ಇವರ ಜನಸೇವಕರನ ವಚನಗಳು ಪ್ರಕಟವಾದುದು ೧೯೩೨ರಲ್ಲಿ. ಪ್ರಾಚೀನ ವಚನಗಳು ಸಾಮಾಜಿಕ, ನೈತಿಕ, ಧಾರ್ಮಿಕ ಆಶಯಗಳನ್ನು ಹೊಂದಿದ್ದರೆ, ಆಧುನಿಕ ವಚನಗಳು ಮುಖ್ಯವಾಗಿ ಸಾಮಾಜಿಕ ಸಂದರ್ಭವನ್ನು, ನೈತಿಕ ಮೌಲ್ಯಗಳನ್ನು ತೆರೆದಿಡುತ್ತವೆ. ಹೀಗಾಗಿ ರಾಜಕಾರಣದ ಅಟ್ಟಹಾಸ, ಚುನಾವಣೆ ಗೆಲ್ಲುವ ತಂತ್ರ, ನಿರುದ್ಯೋಗ ಸಮಸ್ಯೆ, ಮಹಿಳೆ ಸ್ಥಿತಿ–ಗತಿ, ಯುವ ಜನಾಂಗದ ರೀತಿ–ನೀತಿಗಳೊಂದಿಗೆ ಜೀವನ ಶ್ರದ್ಧೆ, ಹೃದಯ ಸಂಸ್ಕಾರ ಇತ್ಯಾದಿಗಳನ್ನು ಪ್ರತಿಬಿಂಬಿಸುತ್ತವೆ. ಈ ಆಯಾಮಗಳು ಮಂಜಪ್ಪನವರ ವಚನಗಳಿಗಿವೆ. ಪ್ರಭುದೇವ ಎಂಬ ವಚನಾಂಕಿತ ಹೊಂದಿದ ಇವು ಗುರು ಮಹಿಮೆ, ನಡೆ–ನುಡಿ, ಮಾನವೀಯತೆ, ಭಾವೈಕ್ಯತೆ, ಜನಸೇವೆ, ಸತ್ಸಂಗ, ದಾನಮೌಲ್ಯ ಮುಂತಾದವುಗಳನ್ನು ಪ್ರಸ್ತುತಪಡಿಸುತ್ತವೆ. ತಿಳಿಯಾದ ಭಾಷೆ, ಸರಳ ಸುಂದರ ಉಪಮೆಗಳಿಂದ ಅಭಿವ್ಯಕ್ತಿಯಲ್ಲಿ ಯಶಸ್ಸನ್ನು ಸಾಧಿಸುತ್ತವೆ.

ಬಾಳಿನುದ್ದಕ್ಕೂ ಬ್ರಹ್ಮಚಾರಿಗಳಾಗಿ ಬದುಕಿದ ಮಂಜಪ್ಪನವರು ಜನಸೇವೆಗೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡರು. ಸಮಾಜಸೇವೆಯೇ ಶಿವನಸೇವೆ ಎಂದರಿತ ಅವರು ತಮ್ಮನ್ನು ಜನಸೇವಕ ಎಂದು ಕರೆದುಕೊಂಡದ್ದು ಔಚಿತ್ಯವೆನಿಸುತ್ತದೆ. ತಮ್ಮದೊಂದು ವಚನದಲ್ಲಿ ಜನಸೇವಕಂಗೆ ಏಳೇಳು ಜನ್ಮದಲ್ಲಿ ಜನಸೇವೆಯನ್ನಿತ್ತು ರಕ್ಷಿಸಯ್ಯಾ ಎಂದು ಕೇಳಿಕೊಂಡಿದ್ದಾರೆ. ತಮ್ಮಲ್ಲಿ ಮೋಹ ಕರಗಿ ವೈರಾಗ್ಯ ಗಟ್ಟಿಗೊಂಡ ಪರಿಣಾಮವಾಗಿ ವೈರಾಗ್ಯನಿಧಿ ಪ್ರಭುದೇವನ ಪ್ರತೀಕವಾಗಿ ತಮ್ಮ ವಚನಾಂಕಿತ ಪ್ರಭುದೇವ ಎಂದು ಇಟ್ಟುಕೊಂಡಂತೆ ತೋರುತ್ತದೆ.

ಜನಸೇವಕನ ವಚನಗಳು ಮಂಜಪ್ಪನವರ ಆತ್ಮನಿವೇದನೆಯ ಪ್ರತೀಕದಂತೆ ತೋರುತ್ತವೆ. ವೈಚಾರಿಕತೆಯ ಎಳೆಗಳನ್ನು ಹೊಂದಿರುವ ಇವು, ಅರ್ಥೈಸುತ್ತಾ ಹೋದಂತೆ ವಿಚಾರಧಾರೆ ಬೆಳೆಯುವಂತೆ ಮಾಡುವ ಸಾಮರ್ಥ್ಯಹೊಂದಿವೆ. ಬಸವಣ್ಣ–ಪ್ರಭುದೇವರ ವಚನಗಳ ಪ್ರಭಾವದ ನೆರಳಿನಲ್ಲಿ ರಚನೆಗೊಂಡಿರುವ ಇವು ಮಂಜಪ್ಪನವರ ಬದುಕಿನ ದಿವ್ಯಸಂದೇಶಗಳಾಗಿ ನಿಲ್ಲುತ್ತವೆ. ಇದನ್ನು ಬಿಟ್ಟರೆ ಈ ಸಂಪುಟದಲ್ಲಿ ಸೇರಿರುವ ಸೃಜನಶೀಲ ವರ್ಗಕ್ಕೆ ಸಂಬಂಧಪಟ್ಟ ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ ಹೆಸರಿನ ಆತ್ಮಚರಿತ್ರೆಯನ್ನು ಕುರಿತು ಈ ಮೊದಲು ವಿವೇಚಿಸಲಾಗಿದೆ.

ಸಂಪಾದನೆ ಕ್ಷೇತ್ರಕ್ಕೆ ಮಂಜಪ್ಪನವರಿಂದ ವಿಶೇಷ ಕೊಡುಗೆ ಸಂದಿದೆ. ಇಂದು ಸಂಪಾದನೆ ಎಂಬ ಪದ ಕನ್ನಡದಲ್ಲಿ ತುಂಬ ಸಡಿಲಾಗಿ ಬಳಕೆಯಾಗುತ್ತಲಿದೆ. ದಿನಪತ್ರಿಕೆ, ವಾರಪತ್ರಿಕೆಗಳ ಸಂಪಾದನೆ; ಬೇರೆ ಬೇರೆಯವರಿಂದ ಲೇಖನ ಬರೆಯಿಸಿ ಸಂಕಲನಗೊಳಿಸುವ ಸಂಪಾದನೆಯ, ತಾಳೆಗರಿ ಮತ್ತು ಕೋರಿಕಾಗದಗಳಂತಹ ಹಸ್ತಪ್ರತಿಗಳಲ್ಲಿ ಹುದುಗಿದ್ದ ಯಾವುದೇ ಕೃತಿಯನ್ನು ನಿಜಪಾಠದ ನಿರ್ಣಯದೊಂದಿಗೆ ಹೊರತರುವ ಸಂಪಾದನೆ–ಇವು ಒಂದೇ ಅರ್ಥದಲ್ಲಿ ಪ್ರಯೋಗಗೊಂಡು, ವ್ಯಾಪಕ ಪ್ರಚಾರಗೊಳ್ಳುತ್ತಲಿವೆ. ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಈ ಮೂರರ ಮಧ್ಯೆ ಸಾಕಷ್ಟು ಅಂತರವಿರುವದನ್ನು ಕಾಣುತ್ತೇವೆ.

ಪತ್ರಿಕೆಯೊಂದರ ಸಂಪಾದನೆ ಸರಳವೂ ಹೌದು ಕಷ್ಟವೂ ಹೌದು. ಪತ್ರಿಕಾ ನಿಯಮಾನುಸಾರ ಸುದ್ದಿಗಳನ್ನು ಸಂಪಾದಿಸಿಕೊಟ್ಟರೆ ಬಹುಭಾಗ ಜವಾಬ್ದಾರಿ ಮುಗಿದಂತೆಯೇ, ಅಲ್ಲಿ ಸಂಪಾದಕರಾದವರಿಗೆ ತಮ್ಮದೇ ಆದ ನಿಯಮ ನಿರ್ಧಾರ ತೆಗೆದುಕೊಳ್ಳಲು ಮತ್ತು ವಿಷಯದ ಅರ್ಹತೆಯನ್ನು ಆಧರಿಸಿ ಪ್ರಕಟಿಸಲು ಸಂಪೂರ್ಣ ಸ್ವಾತಂತ್ರ್ಯ ಉಂಟು. ಇದಕ್ಕಿಂತ ಭಿನ್ನವಾದದ್ದು ಅನ್ಯರಿಂದ ಲೇಖನ ಬರೆಯಿಸಿ, ಪರಿಶೀಲಿಸಿ, ಸಂಪಾದಕೀಯ ರೂಪದ ಮಾತುಗಳನ್ನು ಬರೆದು ಪ್ರಕಟಿಸುವ ಸಂಪಾದನೆ. ನಿರ್ದಿಷ್ಟವಾದ ವಿಷಯಕ್ಕೆ ಅನುಗುಣವಾಗಿ ಬೇರೆ ಬೇರೆಯವರಿಂದ ಲೇಖನ ಬರೆಯಿಸಿ, ಸೂಕ್ತ ಅಲ್ಪ–ಸ್ವಲ್ಪ ಮಾರ್ಪಾಟುಗಳೊಂದಿಗೆ ಸಂಕಲನ ಮಾಡಿಕೊಡುವ ಕ್ರಿಯೆ ಇಲ್ಲಿ ನಡೆಯುತ್ತದೆ. ಇದರ ವ್ಯಾಪ್ತಿ ಇಂದು ವಿಸ್ತಾರವಾಗಿದೆ. ಸಾಹಿತ್ಯ ಅಕಾಡೆಮಿಯ ವಾರ್ಷಿಕ ಕಾವ್ಯ, ಕಥೆ, ಪ್ರಬಂಧ, ವಿಮರ್ಶೆ ಬರಹಗಳ ಸಂಪಾದನೆ, ಅಭಿನಂದನ ಗ್ರಂಥ, ಸ್ಮರಣ ಸಂಚಿಕೆಗಳ ಸಂಪಾದನೆಗಳೆಲ್ಲವೂ ಇಲ್ಲಿ ಒಳಗೊಳ್ಳುತ್ತವೆ. ಇವುಗಳಿಗಿಂತ ತುಂಬ ಭಿನ್ನವಾದ ಹಾಗೂ ಶಾಸ್ತ್ರೀಯವಾದ ಸಂಪಾದನೆಯೇ ಗ್ರಂಥಸಂಪಾದನೆ. ಹಳೆಯ ಹಸ್ತಪ್ರತಿಗಳಲ್ಲಿ ಅಡಗಿ ಕುಳಿತಿರುವ ಕೃತಿಗಳನ್ನು ಹೊರತೆಗೆದು ಮೂಲ ಪ್ರತಿಗೆ ಸಮೀಪವಾದ ಶುದ್ಧಪಾಠಗಳನ್ನು ಕಂಡುಕೊಂಡು ಕೃತಿರೂಪಗೊಳಿಸಿ ಕೊಡುವುದೇ ಗ್ರಂಥಸಂಪಾದನೆ. ಹರ್ಡೇಕರ ಮಂಜಪ್ಪನವರಿಂದ ಸಂಪಾದನೆಯ ಈ ಮೂರು ಪ್ರಕಾರಗಳಿಗೆ ಸೇವೆ ಸಂದಿದೆ. ಆರು ಪತ್ರಿಕೆಗಳ ಸಂಪಾದಕರಾಗಿ ಅವರು ಮಾಡಿದ ಕೆಲಸ ಅನುಪಮವಾದದ್ದು. ಇದನ್ನು ಬಿಟ್ಟರೆ ಲೇಖನ ಸಂಪಾದನೆಯ ಕೆಲಸವನ್ನು ಹಾಗೂ ಸ್ಥೂಲವಾಗಿ ಗ್ರಂಥಸಂಪಾದನೆ ವಲಯಕ್ಕೆ ಸೇರ್ಪಡೆಯಾಗುವ ಕೆಲಸವನ್ನು ಪೂರೈಸಿದ್ದಾರೆ.

'ಪ್ರಮಥಾಚಾರ ದೀಪಿಕೆ' : ಅಥಣಿಯ ಮುರುಘೇಂದ್ರಶಿವಯೋಗಿಗಳವರ ಚರಿತ್ರೆಯ ಘಟನೆಗಳನ್ನು ಬಸವಾದಿ ಪ್ರಮಥರ ವಚನಾನುಸಾರವಾಗಿ ಹೊಂದಿಸಿ ಸಂಪಾದಿಸಿದ ಕೃತಿಯಾಗಿದೆ. ಇಲ್ಲಿ ಶಿವಯೋಗಿಗಳವರ ಬದುಕಿನ ಕ್ರಮಗಳನ್ನು ಬೇರೆ–ಬೇರೆ ವಚನಕಾರರ ತಾತ್ವಿಕತೆಗೆ ಹೋಲಿಸಿ

ಸಂಕಲಿಸಿ ಹೇಳಿದ್ದು ಅಪರೂಪವೆನಿಸುತ್ತದೆ. ಒಂದು ರೀತಿಯಲ್ಲಿ ಅನ್ಯ ಆಕರಸಾಮಗ್ರಿಗಳನ್ನು ಆದರಿಸಿದ ಸ್ವತಂತ್ರ ರಚನೆಯಂತೆ ಈ ಸಂಪಾದನಾಕೃತಿ ರೂಪಗೊಂಡಿದೆ. ಇಲ್ಲಿಯ ಸರಳವಾದ ಭಾಷೆ, ವಿವೇಕದ ಮಾತುಗಳು ಸಹೃದಯನ ಮನ ಗೆಲ್ಲುತ್ತವೆ. ಅಥಣಿಯ ಶಿವಯೋಗಿಗಳವರ ಘನತೆ-ಗೌರವಗಳನ್ನು ಎತ್ತಿ ತೋರಿಸುವ ಈ ಕೃತಿ, ಮಂಜಪ್ಪನವರ ಜನಪ್ರಿಯ ಕೃತಿಗಳಲ್ಲಿ ಒಂದು.

'ವಚನಕಾರರ ಸಮಾಜರಚನೆ' ಕೃತಿಯನ್ನು ಶೀರ್ಷಿಕೆಗೆ ತಕ್ಕಂತೆ ಬೇರೆ ಬೇರೆಯವರಿಂದ ಲೇಖನ ಪಡೆದು ಸಂಕಲಿಸಿ ಸಂಪಾದಿಸಲಾಗಿದೆ. ಇಲ್ಲಿ ಮಂಜಪ್ಪನವರು ದೀರ್ಘ ಪೀಠಿಕೆಯನ್ನು ಬರೆದಿದ್ದಾರೆ. ಒಟ್ಟು ಹನ್ನೆರಡು ಲೇಖನಗಳ ಸಂಕಲ ಇದಾಗಿದ್ದು, ಆರ್. ಆರ್. ದಿವಾಕರ ಅವರ ನಾಲ್ಕು. ಟಿ. ಎಸ್. ವೆಂಕಣ್ಣಯ್ಯನವರ ಮೂರು ಹಾಗೂ ಶ್ರೀನಿವಾಸಮೂರ್ತಿಯವರ ಐದು ಲೇಖನಗಳು ಇಲ್ಲಿ ಅಡಕಗೊಂಡಿವೆ. ಬಸವಾದಿ ಪ್ರಮಥರು ತಿಳಿಸಿದ ಆದರ್ಶ ವಿಚಾರಗಳು ಇಲ್ಲಿವೆ. ಈ ಸಂಗ್ರಹದ ಹಿಂದೆ ಮಂಜಪ್ಪನವರ ಶ್ರದ್ಧೆ ಶ್ರಮಗಳು ಎದ್ದು ಕಾಣುತ್ತವೆ.

'ಬಸವ ಸಂದೇಶ' ಬಸವಣ್ಣನವರ ವಚನಗಳಿಂದ ಆಯ್ದ ನೂರೊಂದು ವಚನಗಳ ಸಂಪಾದನ ಕೃತಿ. ಬಸವ ಜಯಂತಿ ಕಾಲಕ್ಕೆ ಬಸವಣ್ಣನವರ ತತ್ವಗಳು ವ್ಯಾಪಕವಾಗಿ ಹರಡಲಿ – ಎಂಬ ಉದ್ದೇಶದಿಂದ ಈ ಕೃತಿ ಸಂಪಾದಿಸಿ ಪ್ರಕಟಿಸಿ ಪ್ರಸಾರಗೊಳಿಸಿದ್ದುಂಟು.

'ಭಕ್ತಿಯ ಬೆಳಕು' ಭಕ್ತಿಪರವಾದ ವಿಚಾರಗಳನ್ನು ತಿಳಿಸುವ ೨೧ ವಚನಗಳನ್ನು ಒಳಗೊಂಡ ಕೃತಿ. ಇಲ್ಲಿ ಹದಿನಾರು ಬಸವಣ್ಣನವರ ವಚನಗಳಿದ್ದು, ಇನ್ನುಳಿದವು ಬೇರೆ ವಚನಕಾರರ ಬಸವಸ್ತುತಿ ವಚನಗಳಿವೆ. ಇದೊಂದು ಸಾಮಾನ್ಯ ಪುಟ್ಟ ಕೃತಿ. ಬಸವಭಕ್ತರ ಕೈದೀವಿಗೆಯಾಗಿ ಬೆಳಗುವಂಥದು.

'ಮಹಾನುಭಾವರಾದ ಬಸವಣ್ಣನವರ ಉಪಮೆಗಳು' ಎಂಬುದು ತಮ್ಮ ವಚನಗಳಲ್ಲಿ ವಿಷಯದ ಪರಿಣಾಮಕಾರಿ ನಿರೂಪಣೆಗೆ ಬಸವಣ್ಣವನರು ಬಳಸಿರುವ ಉಪಮೆಗಳನ್ನು ಆಯ್ಕೆಮಾಡಿ ಸಂಗ್ರಹಿಸಿದ ಕೃತಿಯಾಗಿದೆ. ಇಲ್ಲಿ ಬಸವಣ್ಣನವರ ವಚನಗಳ ಪೂರ್ಣರೂಪ ಕಾಣದೆ ಉಪಮಾಭಾಗ ಮಾತ್ರ ಕಾಣುತ್ತೇವೆ. ಒಟ್ಟು ನೂರೆಂಟು ಉಪಮೆಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ವೈವಿಧ್ಯಮಯವಾದ ಇಪ್ಪತ್ತೈದು ವಿಚಾರಗಳಿಗೆ ಅನುಗುಣವಾಗಿ ಈ ಉಪಮೆಗಳನ್ನು ಬಸವಣ್ಣನವರು ಬಳಸಿಕೊಂಡ ಪರಿ ಎಂತು? ಎಂಬುದನ್ನು ಸರಳ ಮಾತುಗಳಲ್ಲಿ ಮಂಜಪ್ಪನವರು ನಿರೂಪಿಸಿದ್ದಾರೆ. ಇದು ಬಸವಣ್ಣನವರ ವಿಚಾರಧಾರೆಯ ಪ್ರಚಾರದ ಸೂಕ್ತ ಕೃತಿಯಾಗಿದೆ.

'ಸುಬೋಧಸಾರ' ಮುಪ್ಪಿನ ಷಡಕ್ಷರಿಗಳ ಪದಗಳನ್ನು ಒಳಗೊಂಡ ಕೃತಿಯಾಗಿದೆ. ಅನುಭಾವದ ಎಪ್ಪತ್ತಾರು ಹಾಡುಗಳು ಇಲ್ಲಿವೆ. ಕಾವ್ಯಾನಂದರ ಮುನ್ನುಡಿ ಹೊಂದಿದ ಈ ಕೃತಿ ಮುಪ್ಪಿನ ಷಡಕ್ಷರಿಗಳ ಅಲ್ಪಪರಿಚಯ ಹಾಗೂ ಅವರ ಹಾಡುಗಳ ಭಾವ ಬೆಡಗು, ಶೈಲಿ ಸೊಬಗುಗಳನ್ನು ತಿಳಿಸುವ ಕೃತಿ. ಬೋಧೆಯೇ ಪ್ರಮುಖ ಆಶಯವಾಗಿ ಹೊಂದಿದ ಇಲ್ಲಿಯ ಬಹುಪಾಲು ಪದಗಳು ತತ್ವಜ್ಞಾನದ ಅರಿವನ್ನು ಮಾಡಿಕೊಡುತ್ತವೆ. ಮಂಜಪ್ಪನವರು ಪ್ರತಿ ಹಾಡಿನ ಕೆಳಗೆ ಅದೇ ಅರ್ಥಕ್ಕೆ ಬಹುಪಾಲು ಸರಿಹೊಂದುವ ಬಸವಾದಿ ಪ್ರಮಥರ ಒಂದು ವಚನ ಕೊಟ್ಟಿರುವುದು, ಈ ಕೃತಿಯ ವಿಶೇಷತೆಯನ್ನು ಹೆಚ್ಚಿಸಿದೆ. ಪ್ರತಿ ಹಾಡಿಗೂ ರಾಗ ತಾಳ ಸೂಚಿಸಿ, ಅಲ್ಲಿರುವ ಕಠಿಣಪದಗಳ ಅರ್ಥ ಹೇಳಿರುವುದು ಅಭ್ಯಾಸಿಗಳಿಗೆ ಅನುಕೂಲವಾಗಿದೆ.

ಮಂಜಪ್ಪನವರು ರಚಿಸಿದ ಕೆಲವು ಕೃತಿಗಳು ಇಂಗ್ಲಿಷ್, ಮರಾಠಿ, ತೆಲಗು, ಹಿಂದಿ, ಉರ್ದು, ಭಾಷೆಗೆ ಅನುವಾದಗೊಂಡಿರುವುದುಂಟು. ಅವರ ಸಂಪಾದನಾ ಕೃತಿ ವಚನಕಾರರ ಸಮಾಜರಚನೆ ಎಂಬುದನ್ನು ಸ್ವಾಮಿರಾವ ಬೋಂದಾಡೆಯವರು ಇಂಗ್ಲೀಷಿಗೆ ಅನುವಾದಿಸಿದ್ದಾರೆ. Social structure of the Veerashaiva saints ಎಂಬ ಶೀರ್ಷಿಕೆಯೊಂದಿಗೆ ಇಂಗ್ಲೀಷನಲ್ಲಿ ಪ್ರಕಟಗೊಂಡ ಈ ಕೃತಿ, ಅನೇಕ ವಿದ್ವಾಂಸರ ಗಮನ ಸೆಳೆದಿರುವುದುಂಟು. ಈ ಕಾರಣ, ಈ ಕೃತಿಯ ಇಂಗ್ಲೀಷ ಆವೃತ್ತಿಯನ್ನು ಕೂಡ ಇಲ್ಲಿ ಸೇರ್ಪಡಿಸಲಾಗಿದೆ.

* * *

'ಆರ್ಯತೇಜ' ಎಂಬುದು ಆಲಮಟ್ಟಿಯಲ್ಲಿದ್ದ ವೀರಶೈವ ವಿದ್ಯಾಲಯದ ಉದ್ದೇಶ, ಕಾರ್ಯಕ್ಷೇತ್ರಗಳನ್ನು, ಕಾರ್ಯವಿಧಾನವನ್ನು ತಿಳಿಸುವ ಸಂಪಾದಿತ ಕೃತಿ. ವೀರಶೈವ ವಿದ್ಯಾಲಯದ ಗುರುತು (Emblem) ಷಟ್ಕೋನ, ಅಧಿಕಾರ ಮಂಡಳಿ, ನಿಯಮಗಳು ಮುಂತಾದವುಗಳನ್ನು ಇದು ವಾಚಕರಿಗೆ ಪರಿಚಯಿಸುತ್ತದೆ.

ಬ್ಯಾಳಿ ಕಲ್ಯಾಣಪ್ಪನವರ ಶ್ರೀ ಬಸವಸ್ತವನ ಎಂಬ ಗೀತೆ, ಮಂಜಪ್ಪನವರು ರಚಿಸಿದ ಆರ್ಯತೇಜ ಎಂಬ ಲೇಖನ ಹಾಗೂ ಶ್ರೀ ರಾಮಕೃಷ್ಣ ಮಿಷನ್ ಹಾಗೂ ಗುರುಕುಲ ವಿಶ್ವವಿದ್ಯಾಲಯ ಕುರಿತಾದ ಪರಿಚಯಾತ್ಮಕ ಲೇಖನಗಳು ಇಲ್ಲಿ ವಾಚಕರ ಗಮನ ಸೆಳೆಯುತ್ತವೆ.

ಡಾ. ಅವಿನಾಶ ಚಂದ್ರದಾಸ ಅವರು ಹರಿದ್ವಾರದಲ್ಲಿ ನಡೆದ ಸರಸ್ವತಿ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮಾಡಿದ ವೇದಗಳ ಸಂದೇಶ ಎಂಬ ಭಾಷಣವನ್ನು ಇಲ್ಲಿ ಲೇಖನವಾಗಿಸಿದ್ದಾರೆ. ಶ್ರೀ ಸ್ವಾಮಿ ಶಿವಾನಂದರ ಬ್ರಹ್ಮಚರ್ಯವೇ ಜೀವನ ಮತ್ತು ವೀರ್ಯನಾಶವೇ ಮೃತ್ಯು ಎಂಬ ಮರಾಠಿ ಕೃತಿಯ ೧೨ನೆಯ ಭಾಗವನ್ನು ವೀರಶೈವ ವಿದ್ಯಾಲಯದ ವಿದ್ಯಾರ್ಥಿ ಶ್ರೀ ಶಿವಬಸವ ದೇವರು ಜಾಗ್ರತೆ ಮಲಗುವದು ಮತ್ತು ಜಾಗ್ರತೆ ಏಳುವುದು ಎಂಬ ತಲೆಬರಹದಡಿಯಲ್ಲಿ ಅನುವಾದಿಸಿ ಇಲ್ಲಿ ಪ್ರಕಟಿಸಿದ್ದಾರೆ.

'ಶಿಕ್ಷಣ' ಇದು ಆಲಮಟ್ಟಿ ವೀರಶೈವ ವಿದ್ಯಾಲಯದ ಪ್ರಥಮ ವಾರ್ಷಿಕ ವರದಿಯನ್ನು ಒಳಗೊಂಡ ಕೃತಿ. ವಿದ್ಯಾಲಯದ ಸ್ಥಳ, ವಿದ್ಯಾರ್ಥಿಗಳು ಮತ್ತು ಪಾಲಕರು ಕುರಿತಾದ ದಾಖಲೆಗಳಿವೆ. ಬ್ಯಾಳಿ ಕಲ್ಯಾಣಪ್ಪನವರ ಜ್ಞಾನಮಾತೆ ಎಂಬ ಪ್ರಾರ್ಥನಾ ಪದ್ಯವಿದೆ. ಇವರೇ ಅನುವಾದಿಸಿದ ಗುರುಕುಲದ ಪ್ರಾಮುಖ್ಯತೆ ಎಂಬ ಲೇಖನ ಇಲ್ಲುಂಟು. ಗೃಹ ಶಿಕ್ಷಣ ಕುರಿತಾಗಿ ಮಂಜಪ್ಪನವರು ಬರೆದ ಮಹತ್ವದ ಲೇಖನ ಕೃತಿಯ ಮಹತ್ವನ್ನು ಹೆಚ್ಚಿಸಿದೆ. ಕಾಪಸೆ ರೇವಪ್ಪನವರ ಶಿಲ್ಪಕಲೆ ಗುಣಕಿ ಶಿವಲಿಂಗಪ್ಪನವರ ಕ್ರಮವೇ ಕೈಲಾಸ ಎಂಬ ಅಪರೂಪದ ಲೇಖನಗಳು ಇಲ್ಲಿವೆ. ವಿದ್ಯಾಲಯಕ್ಕೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುವ ಈ ಕೃತಿ ಕಾಯ್ದಿಡಬಲ್ಲ ಸಂಚಿಕೆಯಾಗಿ ಕೃತಿಯಾಗಿ ಹೊರಬಂದಿದೆ.

ಹೀಗೆ ಮಂಜಪ್ಪನವರ ಸಂಪಾದನ ಸಾಹಿತ್ಯ ಸಾಮಾಜಿಕ ಏಳ್ಗೆಗೆ ಬೇಕಾದ ವಿಚಾರಗಳನ್ನು ಪೂರೈಸುವ ಕೆಲಸಮಾಡಿದೆ. ಅವರ ಒಟ್ಟು ಸಂಪಾದನಾ ಸಾಹಿತ್ಯ ಸಂಗ್ರಹರೂಪವಾಗಿ ನಿಲ್ಲುತ್ತದೆ ಎನ್ನಬಹುದು. ಆದರೆ ಈ ಎಲ್ಲ ಕೃತಿಗಳ ಹಿಂದೆ ಮಂಜಪ್ಪನವರು ಹೊಂದಿದ ಕಾಳಜಿ ಮಾತ್ರ ಅನನ್ಯ ಸ್ವರೂಪದ್ದಾಗಿದೆ.

'ವ್ಯಾಪಾರ ಶಿಕ್ಷಣ' ಎಂಬುದು ವಾಣಿಜ್ಯ ವ್ಯವಹಾರದ ಕೈಪಿಡಿಯಾಗಿದೆ. ಶರಣ ಸಂದೇಶ ಪತ್ರಿಕೆಯ ವಾಣಿಜ್ಯ ಸಂಚಿಕೆ ಇದು. ಮಂಜಪ್ಪನವರು ವ್ಯವಹಾರಕ್ಕೆ ಸಂಬಂಧಿಸಿದ ವಿಚಾರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಇದರ ಸಂಪಾದನೆಯ ಹಿಂದೆ ಮಂಜಪ್ಪನವರ ಶ್ರಮ ಎದ್ದು ತೋರುತ್ತದೆ.

❖❖

ವೀರಶೈವ ವಿದ್ಯಾಲಯ ಗ್ರಂಥಮಾಲೆ ಸಂಖ್ಯೆ : ೧೮

॥ಓಂ॥

ಜನಸೇವಕನ ವಚನಗಳು

ॐ

विद्यामृतमश्नुते

ಲೇಖಕರು

ಜನಸೇವಕ

ಹರ್ಡೇಕರ ಮಂಜಪ್ಪ

ಕ್ರಿ.ಶ. ೧೯೩೨ ಕ್ರಯ ೩ ಪೈ ಶಾ.ಶ. ೧೮೫೩

೧

ಶ್ರೀ ಗುರು
ಮಾಯಾತೀತ ಗುರುವೆ
ಲೋಕಹಿತನಾಥ ಗುರುವೆ
ಮದ್ಗುರುವೆ
ಪ್ರಭುದೇವ ಜಗದ್‌ಗುರುವೆ
ಜನಸೇವಕಂಗೆ ಕೃಪೆಯಾಗು

೨

ಶ್ರೀ ಗುರುವೆ
ಜ್ಞಾನನಿಧಿ ಗುರುವೆ
ತೇಜೋಮೂರ್ತಿ ಗುರುವೆ
ಮದ್ಗುರುವೆ
ಪ್ರಭುದೇವ ಜಗದ್‌ಗುರುವೆ
ಜನಸೇವಕಂಗೆ ಕೃಪೆಯಾಗು

೩

ಶ್ರೀಗುರುವೆ
ಶುದ್ಧಭಾವವನೀಯುವ ಗುರುವೆ
ಬದ್ಧಜೀವಿಗಳ ಪೊರೆಯುವ ಗುರುವೆ
ಸದ್ಧರ್ಮವನುದ್ಧರಿಪ ಗುರುವೆ
ಮದ್ಗುರುವೆ
ಪ್ರಭುದೇವ, ಜಗದ್‌ಗುರುವೆ
ಜನಸೇವಕಂಗೆ ಕೃಪೆಯಾಗು.

೪

ಗುರುವೇ, ಗಂಟೆ ನುಡಿಯುವದೆ ಅಯ್ಯ
ತಾನೇ ನುಡಿಸುವರಿಲ್ಲದೆ?
ಗುರುವೇ, ಗಾಡಿ ನಡಿಯುವದೆ ಅಯ್ಯಾ
ತಾನೇ ನಡೆಸುವರಿಲ್ಲದೆ?
ಗುರುವೇ, ನೀ ನುಡಿಸಿದಂತೆ ನುಡಿವೆನಯ್ಯ
ನೀ ನಡೆಸಿದಂತೆ ನಡೆಯುವೆನಯ್ಯ,
ಜಡಮತಿ ಜನಸೇವಕನೆತ್ತ ಬಲ್ಲನಯ್ಯ ಪ್ರಭುದೇವ.

೫

ಪಂದರದೊಳು ಬಂದು
ಗುಡುಗುಟ್ಟುವ ಅರಗಿಳಿಯೆ
ನಿನ್ನ ನುಡಿ ನೀನು ಮರೆತೆಯಲ್ಲ
ಅಚ್ಚರಿಯ ಪಂಜರಕ್ಕೆ ಮರುಳಾದಿಯಲ್ಲ
ಪ್ರಭುದೇವ, ನೀನಿನ್ನು ಜನಸೇವಕಂಗೆ
ನಿನ್ನ ನುಡಿಗಲಿಸಿ
ನಿನ್ನತ್ತ ಬರಮಾಡಿಕೊಳ್ಳೋ ನಿನ್ನ ಧರ್ಮ.

೬

ಮನವೆ ತನುವಿಗೆ ಮೋಹಿಸಿದಡೆ
ಘನ ಬಾಧೆಗೆ ಈಡು ಮಾಡುವೆ
ಮನವೆ ಮೂತ್ರದ ಕುಣಿಗೆ ಮೋಹಿಸಿದಡೆ
ಗಾತ್ರವ ನರಕದಲ್ಲಿಕ್ಕುವೆ.
ಮನವೆ ಬಿಂದುವ ಕಳೆದಡೆ
ಮಂದಮತಿಯ ಮಾಡಿ
ಭವಬಂಧನದೊಳಗಿಕ್ಕುವೆ
ಅದರಿಂ ಪ್ರಭುದೇವ
ಮದಗಜವ ನಡೆಸುವ ಮಾವುತನಂತೆ
ಜನಸೇವಕಂಗೆ ನಡೆಗಲಿಸಿ,
ರಕ್ಷಿಸಯ್ಯಾ ನಿಮ್ಮ ಧರ್ಮ.

೭

ದೇವ ಸಾಕಾರನೆಂದು
ನುಡಿವರಯ್ಯಾ ಕೆಲವರು;
ದೇವ ನಿರಾಕಾರನೆಂದು
ನುಡಿವರಯ್ಯಾ ಕೆಲವರು.
ದೇವ ಸಾಕಾರ ನಿರಾಕಾರ
ಕೂಡಿಕೊಂಡಿರ್ಪನೆಂದು
ಸಾರುತಿರ್ಪರಯ್ಯಾ ಕೆಲವರು.
ಜನ್ಮಾಂಧರು ವರ್ಣನಿರ್ಣಯಕ್ಕೆ
ಕಲಹ ಮಾಡಿದಂತಾಯಿತಲ್ಲಾ!
ದೇವನು ಭಕ್ತರ
ಭಾವನೆಯಂತಿರ್ಪನಯ್ಯಾ
ಪ್ರಭುದೇವ, ಜನಸೇವಕಂಗೆ
ಸಾಕಾರವಿಡಿದು ನಿರಾಕಾರದಲ್ಲಿ
ಬೆರೆಸುವಂತೆ ಮಾಡಯ್ಯ.

೮

ಮಾನವ ಕುಲಂ ತಾನೊಂದೇ ವಲಂ
ದೇವನೊಬ್ಬ, ನಾಮ ಹಲವು
ಉದಕವೊಂದೆ, ನೀರು, ಅಗ್ಗವಣಿ
ಜಲ, ಪ್ರಾಣಿ, ತನ್ನಿಗಳೆಂಬ ನಾಮವನಂತ.
ಧರ್ಮವೊಂದೆ ನಾಮಾಚಾರಗಳನಂತ
ಮಾನವರೊಂದೆ ನಾಮರೂಪಗಳನೇಕ
ಇದನರಿಯದೆ
ದೇವ ಧರ್ಮದ ನಾಮ ಭಿನ್ನದ
ಕಲಹಾಗ್ನಿಯಲ್ಲಿಬೆಂದು ಬಳಲುವ ಮಾನವರ ರಕ್ಷಿಸಯ್ಯ,
ಪ್ರಭುದೇವ, ಜನಸೇವಕಂಗೆ
ಕಲಹಾಗ್ನಿ ಸೋಂಕದಂತಿರಿಸಯ್ಯಾ.

೯

ಜಗದುತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣನಾರಯ್ಯ?
ಅವನಿರವನಾರು ಬಲ್ಲರಯ್ಯ?
ಬಲ್ಲೆವೆಂಬುವರು
ಕನ್ನಡಿಯಲ್ಲಿ ತಮ್ಮ ಮುಖ ನೋಡಿ
ಕನ್ನಡಿ ತಮ್ಮ ಪರಿಯಂತೆಂಬುವ
ಮರುಳರಂತಾದರಲ್ಲಾ
ತಮ್ಮ ಭಾವನೆ ತಾವು ಕಾಂಬುವರಲ್ಲದೆ
ಜಗದೊಡೆಯನೆತ್ತ ಬಲ್ಲರಯ್ಯಾ
ಪ್ರಭುದೇವ, ಜನಸೇವಕಂಗೆ
ಜಗದೊಡೆಯನರಿಯುವ ಕಾತರವ ಹುಟ್ಟಿಸದಂತಿರಿಸಯ್ಯ.

೧೦

ವೇದ, ಆಗಮ, ಶಾಸ್ತ್ರಗಳು
ವಿಶ್ವೇಶ್ವರ ನಿನ್ನನರಿಯವಯ್ಯ.
ಋಷಿ, ಮುನಿ, ಸಿದ್ಧ, ಶರಣರು
ವಿಶ್ವೇಶ್ವರ ನಿನ್ನನರಿಯರಯ್ಯ.
ನೀನವರ ಮುನ್ನವೆ ಇದ್ದಿಯಲ್ಲ
ನಿನ್ನಿಂದಲಾದ ಜೀವಿಗಳು
ನಿನ್ನನ್ನೆತ್ತ ಬಲ್ಲವಯ್ಯಾ.
ತಂದೆ ಕೂಸಾಗಿದ್ದುಬಲ್ಲೆನೆಂಬ
ಮಗನ ಪರಿಯಂತಾಯಿತಲ್ಲಾ
ಪ್ರಭುದೇವ, ಜನಸೇವಕಂಗೆ
ಜಗದೊಡೆಯನರಿದೆನೆಂಬ
ಜಡಮತಿ ಬಾರದಿರಿಸಯ್ಯ.

೧೧

ಪರಮಾತ್ಮ ಅಗಮ್ಯನಯ್ಯ ಜೀವಿಗೆ
ಪರಮಾತ್ಮ ಅಜ್ಞನಯ್ಯ ಜೀವಿಗೆ
ಪರಮಾತ್ಮ ಅತರ್ಕನಯ್ಯ ಜೀವಿಗೆ

ಅತ್ತಿಯ ಹಣ್ಣಿನೊಳಗಣ ಜಂತು
ಬಲ್ಲುದೆ ಅಯ್ಯ ಮರದಲಿರ್ಪ
ಅನಂತ ಹಣ್ಣುಗಳ.
ತರು, ಮರ, ಪಶುಪಕ್ಷಿ, ಜಲಚರ
ಖಗೋಲಾದಿ ವಿಶ್ವವನ್ನು
ಪ್ರಭುದೇವ, ಅರಿಯಲಾಗದ
ಘನವನರಿತೆನೆಂಬ ಮರುಳತನ
ಜನಸೇವಕಂಗೆ ಬಾರದಿರಿಸಯ್ಯ.

೧೨

ಮಿಥ್ಯೆಯೆಂಬುದು ದುಃಖದ ಹೆಮ್ಮಡುವಯ್ಯಾ
ಅರಿದಾಗಲಿ ಮರೆದಾಗಲಿ
ನಗೆಗಾಗಲಿ ಎಂತಾದೊಡೆಯು
ಮಿಥ್ಯವ ನುಡಿಯಲಾಗದಯ್ಯ.
ಮರೆದು ಮಡುವಿನಲ್ಲಿ ಬಿದ್ದರೆ
ಮುಳುಗಿಸದೆ ಬಿಡುವುದೆ
ಅರಿಯದೆ ಉರಿಯ ಮುಟ್ಟಿದೊಡೆ
ದಹಿಸದೆ ಮಾಂಬುವದೆ
ನಗೆಗೆ ವಿಷ ಕೊಂಡರೆ ಕೊಲ್ಲದೆ ಬಿಡುವದೆ
ಪ್ರಭುದೇವ, ಜನಸೇವಕಂಗೆ
ಮಿಥ್ಯವ ಬಿಡಿಸಯ್ಯಾ.

೧೩

ಇಂದೆ ಹಿಡಿದ ವ್ರತವ
ಅಂದೇ ಮೀರುವ ಡಂಬಕ ನಾನಯ್ಯಾ.
ಜಲದ ಮೇಲಿನ ಲಿಪಿಯಂತೆ
ಎನ್ನ ವ್ರತವಯ್ಯಾ
ವ್ರತಹೀನನ ಸೇರಲಾಗದು
ಸೇರಿದೊಡೆ ನರಕ ತಪ್ಪದು

ಇದು ಸತ್ಯ ಸತ್ಯ ಪ್ರಭುದೇವ
ಶಿಲೆಯ ಮೇಲಣ ಲಿಪಿಯಂತೆ
ಜನಸೇವಕನ ದೃಢವ್ರತವ ಮಾಡಯ್ಯ.

೧೪

ಕಂಡ ಕಂಡಾಗಳೆನ್ನ ಮನ ಮೆಚ್ಚುವ
ನುಡಿ ನುಡಿಯೆಂಬುವದಯ್ಯ ಈ ಲೋಕವು.
ನುಡಿಯದಿರ್ದಡೆ ಮುನಿಸೆಂಬುವದಯ್ಯ
ಹಮ್ಮೆಂಬುವದಯ್ಯಾ ಈ ಲೊಕವು
ನಡೆ ತುಂಬಿದರೆ ನುಡಿ ನಿಲ್ಲುವದೇನು ಬಲ್ಲರಯ್ಯಾ ಈ ಲೋಕವು.
ತುಂಬಿದ ಕೊಡವು ತುಳುಕದು ನೋಡಾ
ಜನಸೇವಕಂಗೆ ನಡೆ ಘನ ಮಾಡಿ
ನುಡಿ ಅಡಗಿಸಯ್ಯಾ ಪ್ರಭುವೆ.

೧೫

ಛಲ ಬೇಕೊ ಮನುಜಂಗೆ
ಹಿಡಿದ ವ್ರತವ ಬಿಡೆನೆಂಬ.
ಛಲ ಬೇಕೊ ಮನುಜಂಗೆ
ಅಸುವಳಿಯೆ ಪುಸಿಯೆನೆಂಬ.
ಶಿರಬೀಳೆ ಅಧರ್ಮಕ್ಕೆ ತಲೆ ಬಾಗೆನೆಂಬ
ಇಂತಿ ಛಲವಿಲ್ಲದ ಮನುಜ
ಅಡಿಯಿಲ್ಲದ ಕಾಡುಕರುಳಂತೆ
ಕಷ್ಟದೊಳು ಉರುಳಾಡುವನಯ್ಯ
ಪ್ರಭುದೇವ, ಜನಸೇವಕಂಗೆ
ಛಲಗಲಿಸಿ ರಕ್ಷಿಸಯ್ಯ.

೧೬

ಧರ್ಮ ಧರೆಗಾಧಾರವಯ್ಯ
ಧರ್ಮ ಸುಖ ಶಾಂತಿಗಳ ಮೂಲವಯ್ಯಾ

ಧರ್ಮ ರಕ್ಷಿಪರ ರಕ್ಷಿಪುದಯ್ಯ.
ಕತ್ತಲೆಯಲ್ಲಿ ಕೈ ದೀಪ ಕಾಯುವಂತೆ
ಸಂಸಾರ ತಿಮಿರದೊಳಿರ್ಪ ಮಾನವರ
ರಕ್ಷಿಪ ಧರ್ಮ ಜ್ಯೋತಿಯು
ಘನವೆಂದು ಪೇಳಲಯ್ಯ
ಪ್ರಭುದೇವ, ಜನಸೇವಕಂಗೆ
ಧರ್ಮ ದೀವಟಗ್ಯಾನ ಮಾಡಯ್ಯ.

೧೭

ಧರ್ಮವು ವೇದ ಶಾಸ್ತ್ರಾದಿ, ಗ್ರಂಥಗಳಲುಂಟೆ ಅಯ್ಯಾ?
ಧರ್ಮವು ದೇಶ, ಕಾಲ, ಕುಲ, ಜಾತಿಗಳಲುಂಟೆ ಅಯ್ಯಾ?
ಧರ್ಮವು ಜಪ ತಪ, ಹೋಮ
ಹವನ ಪಾಂಡಿತ್ಯಾದಿಗಳಳಲುಂಟೆ ಅಯ್ಯಾ?
ಅಲ್ಲೆಲ್ಲಿಯು ಇಲ್ಲವಯ್ಯ.
ಬಂಜೆ ಆವಿಂಗೆ ಕ್ಷೀರವುಂಟೆ
ಕರುವುಳ್ಳ ಗೋವಿನ ಕೆಚ್ಚಲಲ್ಲಿ ಕ್ಷೀರ ಇಪ್ಪಂತೆ,
ದಯೆಯುಳ್ಳ ಮಹಾತ್ಮನ ನಡೆಯಲ್ಲಿ
ಧರ್ಮ ಬೆಳಗುತಿರ್ಪುದು ನೋಡಾ.
ಪ್ರಭುದೇವ, ಇದು ಕಾರಣ
ಜನಸೇವಕಂಗೆ ದಯಾಘನನ
ಸೇವೆಯಲ್ಲಿರಿಸಿ ರಕ್ಷಿಸಯ್ಯಾ.

೧೮

ಎಲ್ಲಾ ಗೋಟಗಾರನಂತಲ್ಲಯ್ಯಾ ನೋಡಾ
ಎನ್ನೊಡೆಯ ಪ್ರಭುದೇವ
ಪವಿತ್ರ ಹೃದಯ ಭೂಮಿಯಲ್ಲಿ
ಪರ ಹಿತಾಂಕುರವನ್ನೂರಿ
ಕರುಣಾಜಲವನ್ನೆರೆದು
ಸದಾಚಾರ ಕಟ್ಟೆಯ ಕಟ್ಟಿ

ಧರ್ಮ ವೃಕ್ಷವ ಬೆಳಸಿರ್ಪನಯ್ಯ.
ಇಂತೀ ಸೋಜಿಗದ ವೃಕ್ಷವನೇರಿ
ಅನಂತ ಪ್ರಾಣಿಗಳು ಧರ್ಮ ಫಲ ಸೇವನೆಯಿಂ
ತೃಪ್ತಿಯಾಗುತಿರ್ಪವಯ್ಯಾ ಜನಸೇವಕನ ಕಳೆ ಕೀಳುವ
ಕೂಲಿಗನಾಗಿರಿಸಯ್ಯ ಪ್ರಭುದೇವಾ.

೧೯
ಧರ್ಮವು ಮನಕಲ್ಲದೆ
ತನುವಿಗುಂಟೆ ಅಯ್ಯಾ?
ಮನ ಭಿನ್ನವಿರುವ ಪರಿ
ಧರ್ಮ ಬಿನ್ನವಾಗಿಪ್ಪುದು ಸಹಜ ನೋಡಾ
ಗೋವಿಗೆ ನಾನಾ ವರ್ಣಗಳುಂಟು
ಕ್ಷೀರಕೆ ನಾನಾ ವರ್ಣಗಳುಂಟೆ?
ಧರ್ಮ ಭಿನ್ನವಾಗಿರ್ದೊಡೆ
ದಯೆ ಭಿನ್ನವಾಗಿರಬಹುದೆ?
ಪ್ರಭುದೇವಾ, ಜನಸೇವಕಂಗೆ
ಗೋವರ್ಣ ಕಾಣದೆ
ಕ್ಷೀರವೊಂದೇ ಕಾಣುವಂತೆ ಮಾಡಯ್ಯ

೨೦
ಒಂದು ಪರಿಯ ಹವೆ ಭೂಮಿಗಳಲ್ಲಿ
ಎಲ್ಲಾ ಪರಿ ಸಸ್ಯಗಳು ಬೆಳೆಯುವುವು ನೋಡಾ.
ಒಂದು ಪರಿ ಆಚಾರ ವಿಚಾರಗಳಿಂದ
ಎಲ್ಲರಲ್ಲಿ ಧರ್ಮವೃಕ್ಷ
ಪಲ್ಲವಿಸಿ ಬೆಳೆವುದು ನೋಡಾ.
ಕಬ್ಬುಡೊಂಕಾದರೆ ರಸದ ರುಚಿ
ಡೊಂಕಾಗುವುದೇ ಅಯ್ಯ?
ಧರ್ಮ ಆಚಾರಗಳು ಭಿನ್ನವಾದರೆ
ದಯೆ ಭಿನ್ನವಾಗಬಹುದೆ ಅಯ್ಯಾ?

ಪ್ರಭುದೇವ, ಜನಸೇವಕಂಗೆ
ಕಬ್ಬಿನ ಡೊಂಕ ತಿದ್ದುವ ಬುದ್ಧಿಯ ಕೊಡದೆ
ರಸದ ರುಚಿಯಂತೆ ಮತಿಯ ಇರಿಸಯ್ಯಾ.

೨೧

ಕುಲ ಜಾತಿಗಳಲ್ಲಿ ಧರ್ಮವನರಸುವರೆ ಅಯ್ಯ:.
ಗುಣ ಕರ್ಮಗಳಲ್ಲಿ ಧರ್ಮವನರಸಬೇಕಲ್ಲದೆ
ಕಮಲ ಕೆಸರಲ್ಲಿ ಹುಟ್ಟಿತೆಂದು ಬಿಟ್ಟು
ಮುತ್ತಲ ಹೂವು ಉರವ ಭೂಮಿಯಲ್ಲಿ
ಹುಟ್ಟಿಮಾಡಿದವರುಂಟೆ?
ಪ್ರಭುದೇವಾ, ಜನಸೇವಕಂಗೆ
ಕುಲ ಹೆಮ್ಮಿಗರ ಸೇವೆಯನಿತ್ತು ಗುಣ ಹೆಮ್ಮಿಗರ
ಮಾಡುವಂತೆ ಕರುಣಿಸಯ್ಯ.

೨೨

ವೇದಾಗಮಾದಿಗಳು ಮಾನವರಿಗುಂಟಲ್ಲದೆ
ಮಾನವರು ವೇದಾಗಮಾದಿಗಳಿಗುಂಟೇನು ಅಯ್ಯಾ?
ರೋಗಕ್ಕೆ ಮದ್ದಲ್ಲದೆ
ಮದ್ದಿಗಾಗಿ ರೋಗವಿಲ್ಲ ನೋಡಾ.
ವೇದಾಗಮಾದಿಗಳೆಂದು
ಅನುಚಿತ ಆಚಾರಗಳನ್ನು ಆಚರಿಸುವವು
ಅಧರ್ಮ.
ನಡಿಯಲುಚಿತವಾದ ನುಡಿಗಳುಳ್ಳರೆ
ಅದೇ ವೇದಾಗಮವೆಂದರಿದು ನಡೆವದು
ಸ್ವಧರ್ಮ.
ಪ್ರಭುದೇವಾ, ಜನಸೇವಕಂಗೆ
ಗ್ರಂಥ ದಾಸತ್ವವ ಬಿಡಿಸಿ ಗುಣದಾಸನ
ಮಾಡಿಸಯ್ಯ.

೨೩

ನಾಮವಿಲ್ಲದೆ ಮಾನವರುಂಟೆ
ಧರ್ಮವಿಲ್ಲದೆ ಮನುಜರುಂಟೆ
ತನ್ನ ನಾಮ ತಾನೆಚ್ಚರಿಸು ಪರಿ
ತನ್ನ ಧರ್ಮ ತನಗೆ ಉನ್ನತಗೊಳಿಸುವುದಯ್ಯಾ
ಇದು ಕಾರಣ ಪ್ರಭುದೇವಾ
ಜನಸೇವಕನ ಸ್ವಧರ್ಮದಲ್ಲಿರಿಸಿ ರಕ್ಷಿಸಯ್ಯಾ.

೨೪

ಶುಭ್ರಾದಿ ಭಿನ್ನವರ್ಣಗಳ ಮಿಶ್ರಣವು
ನಾನಾ ವರ್ಣಗಳಿಗೆ ಕಾರಣವಾಗುವಂತೆ
ಸತ್ವಾದಿ ಭಿನ್ನಗುಣಗಳ ಸಂಯೋಗವು
ಮಾನವನ ನಾನಾ ಗುಣಗಳಿಗೆ ಕಾರಣವಾಗಿಪ್ಪುದಯ್ಯಾ.
ಇದು ಕಾರಣ "ಸ್ವಧರ್ಮೇ ನಿಧನಂ ಶ್ರೇಯಃ
ಪರಧರ್ಮೋಭಯಾವಹಃ" ಎಂಬ
ಗೀತೋಕ್ತಿ ಸತ್ಯ ಕಾಣಿರಣ್ಣಾ.
ತನ್ನ ಧರ್ಮ ತನಗೆ ಕಳೆ
ಅನ್ಯಧರ್ಮ ತನಗೆ ಹಗೆ
ಪ್ರಭುದೇವ, ಜನಸೇವಕನು
ಸ್ವಧರ್ಮನಿರತನಾಗುವಂತೆ ಮಾಡಯ್ಯ.

೨೫

ವೇದಾಗಮಾದಿಗಳು ಸತ್ಯ ಶರಣರ
ಸ್ವಾನುಭವದ ಉಕ್ತಿಗಳು ಕಾಣಿರಣ್ಣಾ.
ಅವು ಅಂದಿಗೆ ಪೂರ್ಣವಾದರೆ
ಇಂದಿಗೆ ಅಪೂರ್ಣ ನೋಡಾ.
ಜ್ಞಾನಕ್ಕೆ ಆದಿ ಅಂತ್ಯಗಳುಂಟೆ
ಅಂದಿದ್ದ ಶರಣರು ಇಂದಿಲ್ಲವೆ? ಮುಂದಾಗರೆ?

ಪ್ರಭುದೇವ, ನೀನಂದಂದಿಗೆ
ಬಂದು ಬಂದು ಬಂಧವನ ಬಿಡಿಸು
ನುಡಿವುದೆಲ್ಲ ವೇದ, ನಡೆವುದೆಲ್ಲಶಾಸ್ತ್ರ
ಜನಸೇವಕಂಗೆ ಹಿಂದಿನದೇ ಛಂದವೆಂಬ
ಮಂದಮತಿಯ ಬಿಡಿಸಯ್ಯ.

೨೬

ತನ್ನ ಸುಖಕ್ಕೆ ಅನ್ಯರ ಪೀಡಿಸುವುದು ಮೃಗಧರ್ಮ.
ಪರರ ಸುಖಕ್ಕೆ ತನ್ನನೀಡು ಮಾಡುವುದು ಮಾನವಧರ್ಮ.
ಬೀಜ ಸತ್ತಿಲ್ಲದೆ ಸಸಿ ಹುಟ್ಟುದು ನೋಡಾ.
ಸಸಿ ಇಲ್ಲದೆ ವೃಕ್ಷ, ಪುಷ್ಪ, ಫಲಗಳ ಸುಖ
ದೊರಕದು ನೋಡಾ.
ಇದು ಲೋಕ ಹಿತಕ್ಷೇತ್ರಾದಿ ದೇಹಾಂಕುರ
ಮೃತವಾದಡೆ ವೃಕ್ಷದ ಫಲ ದೊರಕುವುದು ನೋಡಾ.
ಪ್ರಭುದೇವಾ, ಜನಸೇವಕಂಗೆ
ಪರ ಸುಖಕ್ಕಾಹುತಿಯಾಗುವಂತೆ ಮಾಡಯ್ಯ ನಿಮ್ಮ ಧರ್ಮ.

೨೭

ಪ್ರಭುವೆ ಜಪ ತಪ ಹೋಮ
ಹವನಗಳನೊಲ್ಲೆನಯ್ಯ.
ಪ್ರಭುವೆ ಧ್ಯಾನ, ಧಾರಣ
ಸಮಾಧಿಗಳನೊಲ್ಲೆನಯ್ಯಾ.
ಪ್ರಭುವೇ ಸಾಯುಜ್ಯ ಸಾಮೀಪ್ಯ
ಸಾಲೋಕ್ಯ, ಸಾರೂಪ್ಯಾದಿ ಮುಕ್ತಿಗಳನೊಲ್ಲೆನಯ್ಯಾ,
ಪ್ರಭುದೇವ, ಜನಸೇವಕಂಗೆ
ಏಳೇಳು ಜನ್ಮದಲ್ಲಿ ಜನಸೇವೆಯನ್ನಿತ್ತು ರಕ್ಷಿಸಯ್ಯ.
ಪ್ರಭುವೆ ನೆರೆಯಲ್ಲಿ ಮಧುವಿರಲು
ಕಾನನದಲ್ಲಿ ಅರಸಲೇಕಯ್ಯಾ.

೨೮

ಶಿವನು ಕಾಶಿ ರಾಮೇಶ್ವರಗಳಲ್ಲಿ ಇಲ್ಲವಯ್ಯಾ.
ವಿಷ್ಣುವೃಂದಾವನ ಗಿರಿಗಳಲ್ಲಿ ಇಲ್ಲವಯ್ಯಾ.
ಅಲ್ಲಾ ಮಕ್ಕಾದಲ್ಲಿ ಇಲ್ಲವಯ್ಯಾ.
ಏಸು ಆಕಾಶದಲ್ಲಿ ಇಲ್ಲವಯ್ಯಾ.
ದೇವರ ಸ್ಥಾವರದಲ್ಲಿ ಅರಸುವುದೇಕೆ?
ಜಂಗಮದಲ್ಲಿ ಬೆಳಗುವುದಯ್ಯ.
ಪ್ರಾಣಿಗಳ ಹೃದಯದಲ್ಲಿ ಕುಳಿತು
ಕರೆವನಯ್ಯಾ ದೇವನು.
ದೇಹವೇ ದೇವಾಲಯವಯ್ಯಾ
ಜೀವನೇ ದೇವನೆಂದಾಚರಿಸುವಂತೆ
ಜನಸೇವಕಂಗೆ ಕರುಣಿಸಯ್ಯ ಪ್ರಭುವೆ.

೨೯

ಅಯ್ಯಾ ದೇವ ಭಕ್ತರು ಧಾವಿಸಿ ಬನ್ನಿರಯ್ಯಾ
ನಿಮ್ಮ ದೇವ ಕುರುಡರ ಹೃದಯದಲ್ಲಿ
ಕಣ್ಣಿಲ್ಲದೆ ಕಳವಳ ಪಡುತಿಹನಯ್ಯಾ.
ನಿಮ್ಮ ದೇವ ಕುಂಟರ ಹೃದಯದಲ್ಲಿ
ಕಾಲಿಲ್ಲದೆ ಕಷ್ಟಪಡುತಿರ್ದನಯ್ಯಾ.
ನಿಮ್ಮ ದೇವ ಅಂಗಹೀನರಲ್ಲಿ
ಭಂಗಪಡುತಿರ್ಪನಯ್ಯಾ.
ಬಿಡಿಸಿರಯ್ಯ ಸೆರಗೊಡ್ಡಿ ಬೇಡುವೆ
ಪ್ರಭುದೇವ, ಅಂಗಹೀನರ ಸಂಗಸೇವೆಯ
ಸುಖವ ಜನಸೇವಕಂಗೆ ಕರುಣಿಸಯ್ಯ.

೩೦

ಅಯ್ಯಾ ದೇವ ಭಕ್ತರು ನೀವು ಬನ್ನಿರಯ್ಯಾ
ನೀವು ಪತ್ರಿ ಪುಷ್ಪ ಗಂಧಾಕ್ಷತೆಗಳನ್ನೆಸದು ಧಾವಿಸಿ ಬನ್ನಿರಯ್ಯಾ.
ನಿಮ್ಮ ಜಪ, ತಪ, ಪ್ರಾರ್ಥನೆಗಳ ಬಿಟ್ಟು ಬೇಗ ಬನ್ನಿರಯ್ಯಾ.

ಅಗೋ, ನಿಮ್ಮ ದೇವ ಹೊಟ್ಟೆಗಿಲ್ಲದೆ ಕರುಳ ಕರಗಿ
ಕೃಶವಾಗಿರುವವರಲ್ಲಿ ಕಳವಳಪಡುತಿರ್ಪನಯ್ಯಾ.
ನಿಮ್ಮ ದೇವ ಬಟ್ಟೆಯಿಲ್ಲದೆ ಬಳಲುವವರಲ್ಲಿ
ನಡುಗುತ್ತ ಕುಳಿತು ಕೈ ಮಾಡಿ ಕರೆಯುತಿರ್ಪನಯ್ಯಾ.
ಮಗು ಅಳುವಾಗ ಮಗುವಿನ ಚಿತ್ರ ಮುದ್ದಾಡಿದವರುಂಟೆ?
ಪ್ರಭುದೇವ, ಜನಸೇವಕಂಗೆ
ಬಡವರಾಳಾಗಿ ಜೀವಿಸುವಂತೆ ಕರುಣಿಸಯ್ಯಾ.

೩೧
ಜನಸೇವಕಂಗೆ ತನು–ವಂಚಿಸಿಕೊಂಡಡೆ
ತನ್ನ ಮರಣವಯ್ಯಾ.
ಲೋಕಸೇವೆಗೆ ತನು ತ್ಯಾಗ ಮಾಡಿದೊಡೆ
ಅದು ತನ್ನ ಜೀವಿತವಯ್ಯಾ.
ಕಬ್ಬು ನುಚ್ಚು ನುಚ್ಚುಗಿದ್ದರೆ ರುಚಿಯುಂಟೆ?
ರುಚಿಯಿಲ್ಲದಡೆ ಕಬ್ಬಿನ ಘನತೆಯುಂಟೆ?
ಇದು ಕಾರಣ ಪ್ರಭುದೇವ, ಜನಸೇವಕಂಗೆ
ಕಬ್ಬಿನಂತೆ ತನುವನೀವ ಬಲವಿತ್ತು ಬದುಕಿಸಯ್ಯ.

೩೨
ಜನಹಿತಕೆ ಧನವಂಚಿಸಿಕೊಂಡಡೆ
ತನಗೆ ದಾರಿದ್ರ್ಯವಯ್ಯಾ.
ಪರಸೇವೆಗೆ ಧನ ಸೂರೆ ಮಾಡಿದರೆ
ಅದು ತನಗೆ ಸಿರಿವಂತಿಕೆ ಅಯ್ಯ
ಗೋವು ಕ್ಷೀರವಿತ್ತಾಗಲೇ
ಪೂಜೆಗೊಂಬುವುದು ನೋಡಾ.
ಇದು ಕಾರಣ ಪ್ರಭುದೇವ, ಜನಸೇವಕಂಗೆ
ಧನವಿಲ್ಲದ ದಾನಿಯಾಗಿರಿಸಯ್ಯಾ.

❖❖

॥ ಓಂ ॥

ಪ್ರಮಥಾಚಾರ ದೀಪಿಕೆ

ಲೇಖಕರು


ಹರ್ಡೇಕರ ಮಂಜಪ್ಪನವರು

೧೯೫೪

ದಿನಾಂಕ : ೭-೨-೧೯೫೪ ಬೆಲೆ : ೦-೮೦

ಪ್ರಕಾಶಕರು
ಶ್ರೀ ಮ.ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು
ಮುರುಘಾಮಠ, ಹಾವೇರಿ ಪೇಟೆ
ಮಠ, ನಂ. ೭೬೬೮
ಧಾರವಾಡ

ಮುದ್ರಕರು
ಬೀಳಗಿ ರಾಮಣ್ಣನವರು, ಲಿಂಗರಾಜ ಆರ್ಟ ಪ್ರೆಸ್
ಮ.ನಂ. ೨೨೦
ಮಾಳಮಡ್ಡಿ, ಧಾರವಾಡ



ಶ್ರೀ. ಮ.ನಿ.ಪ್ರ. ಮುರುಘೇಂದ್ರ ಮಹಾಶಿವಯೋಗಿಗಳು

ಗಚ್ಚಿನಮಠ, ಅಥಣಿ

॥ಶ್ರೀ ಗುರು ಬಸವಲಿಂಗಾಯ ನಮಃ॥

*

ಮುನ್ನುಡಿ

ಲಿಂಗೈಕ್ಯ ಶ್ರೀಮದಥಣಿ ಮುರುಘೇಂದ್ರ ಮಹಾಶಿವಯೋಗಿಗಳವರ ಸ್ಮರಣಾರ್ಥವಾಗಿ ಪ್ರಾರಂಭಿಸಿದ ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆಯಲ್ಲಿ ಹರ್ಡೇಕರ ಮಂಜಪ್ಪನವರು ಬರೆದ **"ಪ್ರಮಥಾಚಾರ ದೀಪಿಕೆ"**ಯು ಹನ್ನೊಂದನೆಯ ಗ್ರಂಥವಾಗಿದೆ.

೧೯೩೫ನೆಯ ಇಸ್ವಿಯಲ್ಲಿ ಹರ್ಡೇಕರ ಮಂಜಪ್ಪನವರ ಅಪೇಕ್ಷೆಯಂತೆ ನಾವು ಕೆಲವು ದಿನ ಆಲಮಟ್ಟಿಯಲ್ಲಿದ್ದಾಗ್ಗೆ ಶ್ರೀ ಅಥಣಿ ಮಹಾತಪಸ್ವಿಗಳವರ ವಿಷಯಕ್ಕೆ ಚಿಕ್ಕದಾದ ಪುಸ್ತಕ ಬರೆಯಲಿಕ್ಕೆ ಅಪ್ಪಣೆ ಮಾಡಿದ್ದೆವು. ಅಪ್ಪಣೆಯಂತೆ ಬೇಗನೆ ಬರೆದು ಒಂದು ದಿನ ಸಾಯಂಕಾಲ ಎಲ್ಲವನ್ನೂ ಓದಿದರು. ಅನಂತರ ಮುದ್ರಣವೂ ಆಯಿತು. ಅದೇ ಪುಸ್ತಕವೇ ಪ್ರಮಥಾಚಾರ ದೀಪಿಕೆಯು ಪುನಃ ಅದನ್ನೇ ಪರಿಷ್ಕರಿಸಿ ಮುದ್ರಿಸಲಾಗಿದೆ.

ಲಿಂಗರಾಜ ಮುದ್ರಣಾಲಯದ ಒಡೆಯರಾದ ಬೀಳಗಿ ಬಂಧುಗಳು ಅನೇಕ ಕಾರ್ಯಗಳಿದ್ದರೂ ಎಲ್ಲವನ್ನು ಬಿಟ್ಟು ಸ್ವಾಮಿಕಾರ್ಯವೆಂದು ಭಾವಿಸಿ ಬಹು ಶ್ರದ್ಧೆಯಿಂದ ಅಂದವಾಗಿ ಮುದ್ರಣ ಮಾಡಿಕೊಟ್ಟರು.

ಶ್ರೀ ಶಿವಯೋಗೀಶ್ವರನು ಸರ್ವರೀತಿಯಿಂದಲೂ ಸೇವೆ ಸಲ್ಲಿಸಿದ ಸರ್ವರಿಗೂ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಮುರುಘಾಮಠ, ಪ್ರಕಾಶಕರು
ಹಾವೇರಿ ಪೇಟೆ, ಧಾರವಾಡ
ಮಾ. ಶು. ೪. ರವಿವಾರ
೭-೨-೧೯೫೪

❖❖

*

ಪೀಠಿಕೆ

ಈವರೆಗಿನ ಎಲ್ಲ ಜನಾಂಗಗಳ ಚರಿತ್ರೆಗಳನ್ನು ನೋಡಿದರೆ ಪ್ರತಿಯೊಂದು ಜನಾಂಗದ ಗುಣ ಮತ್ತು ದೋಷಗಳು ಇದ್ದೇ ಇದ್ದವೆಂದು ತೋರುತ್ತದೆ. ಆದುದರಿಂದ ಎಲ್ಲ ಜನಾಂಗಗಳಲ್ಲಿಯೂ ಅವುಗಳ ದೋಷ ಕಳೆದು ಗುಣಗಳನ್ನು ಹೆಚ್ಚಿಸಲು ಅನೇಕ ಮಹಾಪುರುಷರು ಆಗಾಗ್ಗೆ ಪ್ರಯತ್ನಿಸುತ್ತಲೇ ಬಂದಿದ್ದಾರೆ.

ಎಂಟುನೂರು ವರುಷಗಳ ಹಿಂದೆ ಹಿಂದೂ ಜನಾಂಗದಲ್ಲಿದ್ದ ನಾನಾ ದೋಷಗಳನ್ನು ತೆಗೆದುಹಾಕಲು ಶ್ರೀಬಸವಾದಿ ಪ್ರಮಥರು ವಿಶೇಷವಾಗಿ ಪ್ರಮಥರು ವಿಶೇಷವಾಗಿ ಪ್ರಯತ್ನಿಸಿದರು. ಇವರ ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯು ಅತ್ಯದ್ಭುತವಾಗಿದ್ದಿತು. ಸಕಲರೂ ಗುಣಗ್ರಾಹಿಗಳಾಗಿ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರ ಭಾವನೆಗಳನ್ನು ಬೆಳೆಯಿಸಿಕೊಂಡು ಸುಖಶಾಂತಿಗಳಿಂಗ ಜೀವಿಸಲೆಂದು ಹೊಸ ಮಾರ್ಗವನ್ನು ತೋರಿಸಿದರು.

ಮಹಾನುಭಾವರಾದ ಆ ಬಸವಣ್ಣನವರ ಈ ಅದ್ಭುತ ಪ್ರಯತ್ನಕ್ಕೆ ಅನೇಕ ಮಹಾತ್ಮರು ನೆರವಾಗಿ ಕನ್ನಡ ನಾಡಿನಲ್ಲಿ ಧಾರ್ಮಿಕ ಜ್ಯೋತಿಯು ಹೆಚ್ಚಾಗಿ ಬೆಳಗುವಂತೆ ಮಾಡಿದರು. ಶ್ರೀ ಪ್ರಭುದೇವರು ಶ್ರೀ ಸಿದ್ಧರಾಮ ಶಿವಯೋಗಿಗಳನ್ನು ಕುರಿತು ಹೇಳಿದ ಈ ಕೆಳಗಿನ ವಚನದಿಂದ ಆ ಬಸವ ಸ್ವಾಮಿಯ ವಿಷಯದಲ್ಲಿ ಶ್ರೀ ಪ್ರಭುದೇವರಿಗೆ ಎಷ್ಟು ಭಕ್ತಿ ವಿಶ್ವಾಸಗಳಿದ್ದವೆಂಬುದು ಮತ್ತು ಆ ಮಹಾನುಭಾವರ ಕಾರ್ಯವು ಎಷ್ಟು ಪರಿಣಾಮಕಾರಿಯಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದಿತಯ್ಯಾ ಶಿವನ ಪ್ರಕಾಶ.
ಆ ಬೆಳಗಿನೊಳಗೊಪ್ಪುತ್ತಿರ್ದರಯ್ಯಾ ಅಸಂಖ್ಯಾತರು; ಹುಸಿಯೇ?
ಭಕ್ತನಿರ್ದ ಕ್ಷೇತ್ರವೇ ಮುಕ್ತಿಕ್ಷೇತ್ರವೆಂಬುದು ಹುಸಿಯೇ?
ಭಕ್ತನಿರ್ದ ದೇಶವು ಪಾವನವೆಂಬುದು ಹುಸಿಯೇ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ
ಸಂಗನಬಸವಣ್ಣನ ಕಂಡು ಬದುಕಿದೆ ಕಾಣಾ, ಸಿದ್ಧರಾಮಯ್ಯಾ.

ಶ್ರೀ ಬಸವಣ್ಣನವರು ಕಲ್ಯಾಣಪಟ್ಟಣದಲ್ಲಿ ಪ್ರಾರಂಭಿಸಿದ್ದ ಧಾರ್ಮಿಕ ಮಹತ್ಕಾರ್ಯಕ್ಕೆ ಸಹಾಯ ಮಾಡಲು ನಾನಾ ಭಾಗಗಳಿಂದ ಅನೇಕ ಮಹಾ ಮಹಾ ವಿಭೂತಿಗಳು ಆಗಮಿಸಿದ್ದರು. ಅಂತೆಯೇ ಅದು ಬಹು ಫಲಕಾರಿಯಾಯಿತು. ಆ ಎಲ್ಲ ವಿಭೂತಿಗಳು ತಮ್ಮ ತಮ್ಮ ಗುಣ ಸ್ವಭಾವಗಳಿಗನುಗುಣವಾಗಿ ಬೇರೆ ಬೇರೆ ಕಾರ್ಯಗಳನ್ನು ಮಾಡುತ್ತಿದ್ದರೂ ಅವೆಲ್ಲವೂ ವೀರಶೈವ ಮತ ಪ್ರಸಾರಣೆಗೆ ಮುಖ್ಯ ಸಾಧನಗಳಾಗಿಯೇ ಪರಿಣಮಿಸಿದವು.

ರಾಜಕೀಯ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳು ನೆಲೆಸಬೇಕಾದರೆ ಬೇರೆ ಬೇರೆಯವರು ತಮ್ಮ ತಮ್ಮ ಬುದ್ಧಿ ಮತ್ತು ಬಲಗಳಿಗನುಗುಣವಾದ ಬೇರೆ ಬೇರೆ ಕಾರ್ಯಗಳನ್ನು ವಹಿಸಿಕೊಂಡು ಹೇಗೆ ನಿರ್ವಹಿಸಬೇಕಾಗುತ್ತದೆಯೋ ಹಾಗೆಯೇ ಧಾರ್ಮಿಕ ರಾಜ್ಯದಲ್ಲಿಯೂ ಭಿನ್ನ ಭಿನ್ನ ವ್ಯಕ್ತಿಗಳಲ್ಲುಂಟಾಗುವ ಸಂಶಯ, ಅಸಮಾಧಾನ ಮುಂತಾದ ನಾನಾ ತಾಪಗಳನ್ನು ನಿವಾರಣೆ ಮಾಡಿ ಮಾನಸಿಕ ಶಾಂತಿ ಸಂತೋಷಗಳನ್ನು ನೆಲೆಗೊಳಿಸಲು ಬೇರೆ ಬೇರೆ ಶೀಲಾಚಾರಗಳ ದಿವ್ಯ ವಿಭೂತಿಗಳು ಬೇಕಾಗುತ್ತಾರೆ.

ಹಾಗೆ ಎಲ್ಲ ತರದ ಗುಣ ಕರ್ಮ ಸ್ವಭಾವಗಳ ಶ್ರೇಷ್ಠ ವ್ಯಕ್ತಿಗಳು ಒಂದು ಕಾರ್ಯದಲ್ಲಿ ಏಕ ಕಾಲಕ್ಕೆ ಸೇರಿದ್ದರೇನೇ ಆ ಕಾರ್ಯವು ಜಯ ಹೊಂದುತ್ತದೆ. ಶ್ರೀ ಬಸವಣ್ಣನವರು ಪ್ರಾರಂಭಿಸಿದ್ದ ಆ ಮಹಾತ್ಕಾರ್ಯಕ್ಕೆ ನೆರವಾದ ಯಾವ ಯಾವ ವಿಭೂತಿಗಳಲ್ಲಿ ಯಾವ ಯಾವ ಗುಣ ಶೀಲಾಚಾರಗಳಿದ್ದವೆಂಬುದು ಈ ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ.

> ಬಸವಣ್ಣಂಗೆ ಸರ್ವಗುಣ ಶೀಲ, ಚೆನ್ನಬಸವಣ್ಣಂಗೆ ದಿವ್ಯಜ್ಞಾನಗುಣ ಶೀಲ,
> ಪ್ರಭುದೇವರಿಗೆ ಬಸವಣ್ಣ ಚೆನ್ನಬಸವಣ್ಣನ ಉಭಯಗುಣ ಶೀಲ,
> ಮಡಿವಾಳಯ್ಯನಿಗೆ ವೀರಗುಣ ಶೀಲ. ಅಜಗಣ್ಣಂಗೆ ಐಕ್ಯಗುಣ ಶೀಲ.
> ಚಂದಯ್ಯನಿಗೆ ವೈರಾಗ್ಯಗುಣ ಶೀಲ. ಸಿದ್ಧರಾಮಯ್ಯಂಗೆ ಯೋಗಗುಣ ಶೀಲ.
> ಮೋಳಿಗಯ್ಯಂಗೆ ಭೇದಗುಣ ಶೀಲ. ಘಟ್ಟಿವಾಳಯ್ಯಂಗೆ ತ್ರಿವಿಧಗುಣ ಶೀಲ.
> ಅಕ್ಕಗಳಿಗೆ ನಿರ್ವಾಣಗುಣ ಶೀಲ.
> ಎನಗೆ ಏಲೇಶ್ವರಲಿಂಗವು ಕೊಟ್ಟುದೊಂದೇ ವಿಶ್ವಾಸಗುಣ ಶೀಲ.

ಹೀಗೆ ಭಕ್ತಿ, ಜ್ಞಾನ, ಕರ್ಮ ಮತ್ತು ಯೋಗ ಮುಂತಾದ ಬೇರೆ ಬೇರೆ ಗುಣ ಶೀಲಾಚಾರಗಳುಳ್ಳ ಪ್ರಮಥರೆಲ್ಲರೂ ಸೇರಿ ಪ್ರಯತ್ನಿಸಿದ್ದರಿಂದಲೇ ಆ ದಿವ್ಯತರವಾದ ಧಾರ್ಮಿಕ ಕ್ರಾಂತಿಯ ಕಾರ್ಯವು ಅಷ್ಟು ಪರಿಣಾಮಕಾರಿಯಾಗಿ ಪರಿಣಮಿಸಿತು. ಬಸವಣ್ಣನವರ ಸೇವಾರೂಪವಾದ ಭಕ್ತಿಯು, ಚೆನ್ನಬಸವಣ್ಣನವರ ಮತಸಿದ್ಧಾಂತ ಪ್ರತಿಪಾದನೆಯ ಜ್ಞಾನವು. ಮಡಿವಾಳ ತಂದೆಗಲ ವೀರ ವೃತ್ತಿಯ ಕರ್ಮಗಳು ಧರ್ಮಪ್ರಸಾರಣೆಗೆ ಸಹಾಯವಾಗಿರಬಹುದು. ಆದರೆ ಸಿದ್ಧರಾಮ ಶಿವಯೋಗಿಗಳಂತಹ ಯೋಗಗುಣಶೀಲರಿಂದ ವೀರಶೈವ ಮತ ಪ್ರಸಾರದ ಕಾರ್ಯಕ್ಕೆ ಯಾವ ಸಹಾಯವಾಯಿತೆಂದು ಕೆಲವರು ಶಂಕಿಸಬಹುದು.

ಎಲ್ಲರ ದೇಹಾರೋಗ್ಯಕ್ಕೆ ಒಂದೇ ವಿಧವಾದ ಆಹಾರವು ಹೇಗೆ ಅನುಕೂಲವಾಗಲಾರದೋ ಮತ್ತು ಎಲ್ಲ ಸಸ್ಯಾದಿಗಳೂ ಒಂದೇ ವಿಧವಾದ ಭೂಮಿ, ಹವೆ, ನೀರು, ಗೊಬ್ಬರಗಳಿಂದ ಹೇಗೆ ಪ್ರಫುಲ್ಲಿತವಾಗಿ ಬೆಳೆಯಲಾರವೊ ಹಾಗೆಯೇ ಜನಸೇವೆ ಅಥವಾ ಧರ್ಮೋಪದೇಶ ಮಾಡುವವರೇ

ಎಲ್ಲ ಮಾನಸಿಕ ತಾಪಗಳನ್ನು ಕಳೆದು ಸಕಲರೂ ಶಾಂತಿ ಸಂತೋಷಗಳನ್ನನುಭವಿಸುವಂತೆ ಮಾಡಲಾರರು. ಏಕೆಂದರೆ ಬೇರೆ ಬೇರೆ ವ್ಯಕ್ತಿಗಳ ಮನೋವೃತ್ತಿಗಳು ಬೇರೆಯಾಗಿಯೇ ಇರುತ್ತವೆ. ಆದುದರಿಂದ ಅವುಗಳ ಸಮಾಧಾನಕ್ಕೆ ಬೇರೆ ಬೇರೆ ಶೀಲಾಚಾರ ಶ್ರೇಷ್ಠ ವಿಭೂತಿಗಳೂ ಅವಶ್ಯವಾಗಿಯೇ ಇದ್ದಾರೆ.

ನಾನಾ ಧಾನ್ಯ, ಕಾಯಿಪಲ್ಲೆಗಳು ಜನಜೀವನಕ್ಕೆ ಅವಶ್ಯಕ. ಆದರೆ ಉದ್ಯಾನಗಳೇಕೆ? ಹಸಿವೆಯಾಗಿದೆ ಎಂದು ಅಲ್ಲಿಯ ಹೂವು ಹುಲ್ಲುಗಳನ್ನೇನಾದರೂ ತಿನ್ನುವರೆ? ನಾವೆ ಜನರನ್ನು ರಕ್ಷಿಸುತ್ತಿದ್ದೇವೆ; ಈ ಹೂವುಗಳು ಹುಟ್ಟಿದ್ದುದು ವ್ಯರ್ಥವೇ ಸರಿ, ಎಂದು ಆ ಧಾನ್ಯಾದಿಗಳು ಹೆಮ್ಮೆಪಡಬಹುದೇ? ಯಾರು ಆಯಾಸಗೊಂಡು ಆ ಉದ್ಯಾನಕ್ಕೆ ಬರುವರೋ ಅವರಿಗೆ ತಮ್ಮ ಸುಗಂಧವನ್ನು ಬೀರಿ, ಮನೋಹರವಾದ ನೋಟವನ್ನು ತೋರಿ, ಅವರ ಆಯಾಸವನ್ನು ಪರಿಹಾರ ಮಾಡುವದಿಲ್ಲವೆ? ಅವರ ಮನಸ್ಸಿನ ತಾಪವನ್ನು ಕಡಿಮೆ ಮಾಡುವುದಿಲ್ಲವೇ? ಸೃಷ್ಟಿಯ ಸೊಬಗು ಕೋಪ ತಾಪಗಳನ್ನು ಕಳೆದು ಶಾಂತಿ ಸಂತೋಷಗಳನ್ನುಂಟುಮಾಡುವುದಿಲ್ಲವೇ? ಎಂದಮೇಲೆ ಉದ್ಯಾನವೂ ಜನಜೀವನ ಸುಖಶಾಂತಿಗಳಿಗೆ ಸಾಧನವಾಗಿದೆಯೆಂದೇ ಸ್ಪಷ್ಟವಾಗುವುದಿಲ್ಲವೆ?

ಇಂದ್ರಿಯನಿಗ್ರಹದಿಂದ ಕೋಪತಾಪಗಳನ್ನೆಲ್ಲಾ ನೀಗಿ ದಿವ್ಯಾನಂದದ ಝುರಿಯನ್ನೇ ತಮ್ಮಲ್ಲುಂಟುಮಾಡಿಕೊಂಡು ಪ್ರಶಾಂತ ವಾತಾವರಣದಲ್ಲಿ ಶೋಭಿಸುತ್ತಿರುವ ತೇಜೋಮಯವಾದ ಆ ಶಿವಯೋಗಿಯ ಬೀಡು ಉದ್ಯಾನದಂತೆಯೇ ಸರಿ. ಹೊಟ್ಟೆ ಬಟ್ಟೆಗಳಿಗೆ ಕೊರತೆಯಿಲ್ಲದಿದ್ದರು ನಾನಾ ಮಾನಸಿಕ ತಾಪಗಳಿಂದ ಬೆಂದ ನೊಂದ ಧಾರ್ಮಿಕರು ಆ ಯೋಗಿಗಳ ದರ್ಶನ ಸ್ಪರ್ಶನ ಸಂಭಾಷಣೆಗಳಿಂದ ಶಾಂತಿ ಸಂತೋಷಗಳನ್ನನುಭವಿಸುವುದಿಲ್ಲವೇ? ಜನಾಂಗದಲ್ಲಿ ಇಂತಹ ಮನೋವೃತ್ತಿಯ ವ್ಯಕ್ತಿಗಳೂ ಇರುವುದರಿಂಗ ಯೋಗಿಗಳು ಲೋಕಕಲ್ಯಾಣದ ಕಾರ್ಯಗಳನ್ನು ಮಾಡುತ್ತಿದ್ದಾರೆಂದೇ ಸ್ಪಷ್ಟವಾಗುತ್ತದೆ. ಮುದುಡಿದ ಮನಸ್ಸನ್ನು ಅರಳಿಸಿ ಆನಂದಗೊಳಿಸುವ ದಿವ್ಯ ಶಕ್ತಿಯು ಆ ತಪೋವನಗಳಲ್ಲಿರುವುದರಿಂದ ಧಾರ್ಮಿಕ ಕ್ಷೇತ್ರಗಳಲ್ಲಿ ಯೋಗಿಗಳ ಬೀಡು ಉದ್ಯಾನವೆಂದು ಹೇಳಬಹುದು.

ಆದರೆ ಎಲ್ಲರೂ ಇದೇ ಮಾರ್ಗವನ್ನವಲಂಬಿಸಬೇಕಾದ ಅವಶ್ಯಕತೆ ಇಲ್ಲ. ಅದು ಇಷ್ಟವು ಅಲ್ಲ, ಶಕ್ಯವೂ ಇಲ್ಲ. ಎಲ್ಲವೂ ಉದ್ಯಾನಗಳಾದರೆ ಗದ್ದೆ ಹೊಲಗಳು ಬೇಡವೆ? ಜನಾಂಗದ ರಕ್ಷಣೆಗೆ ಅವು ಹೇಗೆ ಮುಖ್ಯವಾಗಿದ್ದು ಹೂದೋಟಗಳೂ ಅವಶ್ಯಕವಾಗಿವೆಯೋ ಹಾಗೇಯೇ ಧರ್ಮರಕ್ಷಣೆ ಮತ್ತು ಪ್ರಸಾರಣೆಗೆ ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗಿಗಳಂತೆ ಈ ಯೋಗ ಮಾರ್ಗಿಗಳೂ ಅವಶ್ಯಕವಾಗಿದ್ದಾರೆ.

ಯೋಗಿಗಳು ಏಕಾಂತವಾಸಿಗಳು, ಅವರಿಂದ ಸಮಾಜಕ್ಕೇನೂ ಪ್ರಯೋಜನವಿಲ್ಲ. ಆ ಯೋಗವು ಅವರ ಮಟ್ಟಿಗೇನೇ ಪ್ರಯೋಜನಕಾರಿಯಾಗಿರಬಹುದು. ಎಂಬ ತಪ್ಪು ಅಭಿಪ್ರಾಯಗಳು ಜನಾಂಗದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವುದರಿಂದ ಈ ವಿಷಯವನ್ನು ಇಷ್ಟು ವಿವರವಾಗಿ ಪ್ರಸ್ತಾಪಿಸಬೇಕಾಯಿತು.

ಆ ಬಸವಾದಿ ಪ್ರಮಥರು ತೋರಿಸಿದ ದಿವ್ಯ ಮಾರ್ಗವನ್ನೇ ಅನುಸರಿಸಿ ಈವರೆಗೂ ಅನೇಕ ವಿಭೂತಿಗಳು ತಮ್ಮ ತಮ್ಮ ಗುಣ ಶೀಲಾಚಾರಗಳಿಗನುಗುಣವಾಗಿ ನಡೆದುಕೊಳ್ಳುತ್ತಾ ಬಂದು

ವೀರಶೈವ ಮತವನ್ನು ಉಜ್ವಲಗೊಳಿಸಿ ಪೂಜ್ಯರಾಗುತ್ತಾರೆ. ಇಂತಹ ಪ್ರಮಥ ಶ್ರೇಣಿಗೆ ಸೇರಿದವರಲ್ಲಿ ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳವರೂ ಒಬ್ಬರು. ಈ ಮಹಾನುಭಾವರರು ೨೦ ನೆಯ ಶತಮಾನದ ಆದಿಭಾಗದವರಾಗಿದ್ದರು. ಇವರ ದಿವ್ಯವಾದ ನಡೆ ನುಡಿಗಳು ಹಿಂದಿನ ಪ್ರಮಥರ ನಡೆನುಡಿಗಳನ್ನೇ ಹೇಗೆ ಅವಲಂಬಿಸಿದ್ದವೆಂಬುದನ್ನು ತೋರಿಸುವುದೇ ಈ ಪುಸ್ತಕದ ಉದ್ದೇಶವಾಗಿದೆ. ಅಂದಿನ ಪ್ರಮಥರಿಗೆ ಇಂದಿನವರನ್ನು ಸರಿಹೋಲಿಸಬಹುದೇ? ಹಾಗೆ ಮಾಡುವುದು ಅನುಚಿತವೂ ಪಾಪವು ಆಗಿಲ್ಲವೇ? ಎಂದು ಯಾರಾದರೂ ಶಂಕಿಸಿದರೆ ಅವರಿಗೆ ಉತ್ತರವನ್ನು ಶ್ರೀ ಆದಯ್ಯನವರೆಂಬ ಪ್ರಮಥರೇ ಹೀಗೆ ಹೇಳಿದ್ದಾರೆ.

> ಅಂದಿನವರು ಇಂದಿನವರು ಎಂಬ ಸಂದೇಹಿಗಳಿಗೆ
> ಸಂದೇಹ ಮುಂದುಗೊಂಡಿಪ್ಪುದು ನೋಡಾ,
> ಅಂದೊಂದು ಪರಿ ಇಂದೊಂದು ಪರಿಯೇ ಗುರು ಲಿಂಗ ಜಂಗಮ?
> ಅಂದೊಂದು ಪರಿ ಇಂದೊಂದು ಪರಿಯೇ ಪಾದೋದಕ ಪ್ರಸಾದ?
> ಅಂದೊಂದು ಪರಿ ಇಂದೊಂದು ಪರಿಯೇ ಶರಣ ಲಿಂಗ ಸಂಬಂಧ?
> ಅಂದೊಂದು ಪರಿ ಇಂದೊಂದು ಪರಿಯೇ ಅರಿವು, ಆಚರಣೆ?
> ಅಂದೊಂದು ಪರಿ ಇಂದೊಂದು ಪರಿಯೆ ಸ್ಥಳಕುಳಂಗಳು?
> ಅಂದೊಂದು ಪರಿ ಇಂದೊಂದು ಪರಿಯೇ ಸೌರಾಷ್ಟ್ರ ಸೋಮೇಶ್ವರಲಿಂಗವು?

ನಮ್ಮಲ್ಲಿ ಭಕ್ತಿ ಭಾವನೆಗಳೂ ನಿಷ್ಠೆ ಸಾಹಸಗಳು ಕಡಿಮೆಯಾದರೆ ಆ ಮತತತ್ವಗಳೇನು ಮಾಡುವುವು? ಅವು ಅಂದಿದ್ದಂತೆಯೇ ಇಂದೂ ಇವೆ. ಅವುಗಳ ವಿಚಾರದಲ್ಲಿ ಅಂದಿನ ಭಕ್ತಿಭಾವನೆಗಳು ಇಂದು ನಮ್ಮಲ್ಲಿರಲಿಕ್ಕಿಲ್ಲ. ಆ ವ್ಯತ್ಯಾಸದಿಂದ ಫಲ ಪದಗಳು ವ್ಯತ್ಯಾಸವಾಗುವುದು ಸ್ವಾಭಾವಿಕವಲ್ಲವೇ? ಆದರೆ ಯಾರಿಗೆ ಅಂದಿನ ಭಕ್ತಿ ವಿಶ್ವಾಸಗಳು ಇಂದೂ ಇವೆಯೋ ಅವರು ಅಂದಿನ ಪ್ರಮಥ ಶ್ರೇಣಿಯಲ್ಲಿ ಸೇರಲು ಏಕೆ ತಾನೆ ಸಮರ್ಥರಾಗುವುದಿಲ್ಲ? ಆಗೇ ಆಗುವರು.

ಅಂದಿನ ಶ್ರೀ ಸಿದ್ಧರಾಮ ಶಿವಯೋಗಿಗಳಂತೆ ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳೂ ಯೋಗಗುಣ ಶೀಲಾಚಾರಿಗಳಾಗಿದ್ದರು. ಶ್ರೀ ಸಿದ್ಧರಾಮ ಶಿವಯೋಗಿಗಳು ಹೇಗೆ ಜಂಗಮಪುಂಗವರಾಗಿದ್ದರೋ ಹಾಗೆಯೇ ಈ ಶಿವಯೋಗಿಗಳೂ ಜಂಗಮವರೇಣ್ಯರಾಗಿದ್ದರು. ಆ ಹಿಂದಿನ ಪ್ರಮಥರ ವಚನಗಳಲ್ಲಿ ಉಕ್ತವಾದ ಆಚಾರ ವಿಚಾರಗಳನ್ನೇ ಈ ಶಿವಯೋಗಿಗಳು ಹೇಗೆ ಅನುಸರಿಸಿ ಆಚರಿಸುತ್ತಿದ್ದರೆಂಬುದನ್ನು ಈ ಪುಸ್ತಕದ ಆರು ಪ್ರಕರಣಗಳಲ್ಲಿ ಸಂಕ್ಷಿಪ್ತವಾಗಿ ಶ್ರೀ ಶಿವಯೋಗಿಗಳವರ ಆಚರಣೆಗನುಗುಣವಾದ ಪ್ರಮಥರ ವಚನಗಳನ್ನು ಆಯಾಯ ಪ್ರಕರಣಗಳಲ್ಲಿ ಆಧಾರವಾಗಿ ಕೊಟ್ಟಿದ್ದಾಗಿದೆಯೇ ವಿನಃ ಪ್ರಮಥರ ವಚನಗಳಿಗಣುಗುಣವಾಗಿ ಶಿವಯೋಗಿಗಳವರ ಚರಿತ್ರೆಯನ್ನು ಸರಿಪಡಿಸುವ ಅಸಂಗತ ಪ್ರಯತ್ನವನ್ನೇನೂ ಮಾಡಿಲ್ಲವೆಂಬುದು ವಾಚಕರಿಗೆ ಗೊತ್ತಾಗಬಹುದು.

ಶ್ರೀ ಶಿವಯೋಗಿಗಳವರು ನಿವೃತ್ತಿಪರರಾಗಿದ್ದರು. ಆದುದರಿಂದ ಪ್ರವೃತ್ತಿಪರರ ಚಾರಿತ್ರ್ಯದಲ್ಲಿ ದೊರೆಯುವಂತೆ ಹೇರಳವಾದ ಪ್ರಸಂಗಗಳು ಈ ಮಹಾನುಭಾವರ ಚಾರಿತ್ರ್ಯದಲ್ಲಿ ದೊರೆಯುವುದು ಶಕ್ಯವಿಲ್ಲ. ಹೀಗಿದ್ದರೂ ಈ ಪರಮ ಪೂಜ್ಯರ ಸೇವೆಯಲ್ಲಿಯೇ ತಮ್ಮ ತನುವ ಸವಿಸಿದ ಮಹನೀಯರು

ತಿಳಿಸಿದ ಸಂಗತಿಗಳನ್ನೂ ೧೦-೧೨ ವರುಷಗಳಲ್ಲಿ ಅನೇಕ ಸಾರೆ ಆ ಯೋಗಿವರೇಣ್ಯರ ದರ್ಶನಕ್ಕೆ ಪಾತ್ರನಾದಾಗ ನನಗೆ ತಿಳಿದ ಅನೇಕ ವಿಷಯಗಳನ್ನೂ ಆಯಾಯ ಪ್ರಕರಗಣಗಳಲ್ಲಿ ಉದಾಹರಿಸಿದ್ದಾಗಿದೆ.

ಶ್ರೀ ಶಿವಯೋಗಿಗಳವರ ಆ ಜನ್ಮಾಂತ್ಯದ ಚರಿತ್ರೆಯನ್ನೇನೂ ಈ ಪುಸ್ತಕದಲ್ಲಿ ಬರೆದಿಲ್ಲ. ಆ ಮಹಾತ್ಮರ ಮುಖ್ಯಾಚಾರಗಳನ್ನೂ ಅವುಗಳ ಸಾಧನೆಗಾಗಿ ಮಾಡಿದ ಪ್ರಯತ್ನಗಳನ್ನೂ, ಅವುಗಳೆಲ್ಲಾ ಪ್ರಮಥರ ಆಚಾರಗಳಿಗೆ ಹೇಗೆ ಸಂಬಂಧವಾಗಿದ್ದವೆಂಬುದನ್ನು ಮಾತ್ರ ವಿವರಿಸಿದ್ದಾಗಿದೆ. ಆದುದರಿಂದ ಶ್ರೀ ಶಿವಯೋಗಿಗಳು ಪ್ರಮಥಾಚಾರಗಳ ದಿವ್ಯಜ್ಯೋತಿಯಾಗಿದ್ದರೆಂದೇ ಸ್ಪಷ್ಟವಾಗದಿರಲಾರದು.

ಯಾರು ಯೋಗಗುಣ ಶೀಲಾಚಾರಿಗಳೋ ಮತ್ತು ಜಂಗಮಮಾರ್ಗಾವಲಂಬಿಗಳೋ ಅವರಿಗೆ ಈ ಪುಸ್ತಕವು ಮಾರ್ಗದರ್ಶಿಯಾಗುವುದು. ಇತರರಿಗೆ ತಮ್ಮ ಗುಣ ಶೀಲಾಚಾರಗಳಿಗೆ ಯುಕ್ತವಾಗಿದ್ದುದನ್ನೇ ತಾವು ಮಹಾತ್ಮರಂತೆ ದೃಢನಿಷ್ಠೆಯಿಂದಾಚರಿಸಿದರೆ ತಮ್ಮ ಇಷ್ಟವೂ ಸಾಧ್ಯವಾಗುವುದೆಂಬ ವಿಶ್ವಾಸವನ್ನುಂಟುಮಾಡಬಹುದು. ಆದುದರಿಂದ ಆ ಮಹಾ ಶಿವಯೋಗಿಗಳವರ ದಿವ್ಯ ಚಾರಿತ್ರ್ಯಕ್ಕೆ ಮುಖ್ಯ ಕಾರಣವಾದ ಶ್ರೀ ಬಸವಾದಿ ಪ್ರಮಥರು ನಡೆದು ನುಡಿದು ತೋರಿಸಿದ ಆಚಾರ ವಿಚಾರಗಳ ಕಡೆಗೆ ಸಕಲ ವೀರಶೈವರು ಇನ್ನು ಮೇಲಾದರು ತಿರುಗಲೆಂದು ಹಾರೈಕೆ.

❖❖

*

ಪರಿವಿಡಿ



ಅಥಣಿ ಗಚ್ಚಿನಮಠದ ಮುಂಭಾಗವು

॥ ಶ್ರೀ ಬಸವಲಿಂಗಾಯ ನಮಃ ॥

೧ನೆಯ ಪ್ರಕರಣ

ಆದ್ಯರ ವಚನ ಪರುಷ ಕಂಡಯ್ಯಾ

ಅಥಣಿಯ ಗಚ್ಚಿನಮಠದಲ್ಲಿ ಶ್ರೀ ಗುರುಶಾಂತ ಸ್ವಾಮಿಗಳೆಂಬ ಪರಮ ಪೂಜ್ಯ ಯತಿಗಳಿದ್ದರು. ಆ ಮಹಾನುಭಾವರೇ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಗುರುಗಳು. ಶಿವಯೋಗಿಗಳವರು ತಮ್ಮ ಗುರುಗಳ ಅಪ್ಪಣೆಯ ಪ್ರಕಾರ ವಿದ್ಯಾಭ್ಯಾಸ ಮಾಡಿ ಗುರುಸೇವಾತತ್ಪರರಾಗಿ ಆ ಗುರುಗಳ ಅನುಗ್ರಹದಿಂದ ತಮ್ಮ ಇಪ್ಪತ್ತನೆಯ ವರ್ಷದಲ್ಲಿ ಜಂಗಮಾಶ್ರಮವನ್ನು ಹೊಂದಿದರು.

ಜಂಗಮ ದೀಕ್ಷೆಯನ್ನು ಹೊಂದುವಾಗ ಕರಣಹಸಿಗೆ, ಮಿಶ್ರಾರ್ಪಣ ಮೊದಲಾದ ವಚನ ಗ್ರಂಥಗಳನ್ನು ಗುರುಗಳು ಜಂಗಮಮೂರ್ತಿಗಳಿಗೆ ಆಶೀರ್ವದಿಸುವ ಪದ್ಧತಿ ಇದೆ ಅಷ್ಟೇ, ಅದೇ ಪ್ರಕಾರ ಶಿವಯೋಗಿಗಳವರಿಗೂ ಅವರ ಗುರುಗಳು ವಚನ ಗ್ರಂಥಗಳನ್ನು ಆಶೀರ್ವದಿಸಿದ್ದರು. ಅವುಗಳಲ್ಲಿ ಶಿವಯೋಗಿಗಳಿಗೆ ಬಹು ಭಕ್ತಿ ವಿಶ್ವಾಸಗಳಿದ್ದುದರಿಂದ ಅವುಗಳನ್ನು ಯಾವಾಗಲೂ ಓದುತ್ತಿದ್ದರು.

ಶ್ರೀ ಬಸವಣ್ಣನವರ ವಚನಗಳ ವಿಷಯದಲ್ಲಿ ಶಿವಯೋಗಿಗಳವರಿಗೆ ವಿಶೇಷವಾದ ಭಕ್ತಿ ವಿಶ್ವಾಸಗಳಿದ್ದವು. ಬಸವ ಸ್ವಾಮಿಯ ಮಂತ್ರಮೂರ್ತಿಯಾಗಿದ್ದುದರಿಂದ ಅವರು ಬಸವಣ್ಣನವರ ವಚನ ಎಂದು ನಮ್ಮಂತೆ ಹೆಸರಿಟ್ಟು ಹೇಳುತ್ತಿರಲಿಲ್ಲ. **'ಅಪ್ಪನವರ ವಚನ'** ಎಂದು ನುಡಿಯುತ್ತಿದ್ದರು.

ಆ ಎಲ್ಲಾ ವಚನಗಳನ್ನೂ ಸ್ವಂತಾಕ್ಷರಗಳಿಂದ ಬರೆದುಕೊಂಡಿದ್ದರು. ಅಪ್ಪನವರ ವಚನ ಪುಸ್ತಕವು ತಮ್ಮ ಹತ್ತಿರವೇ ಇರಬೇಕು. ತಾವು ಯಾವ ಸ್ಥಳಕ್ಕೆ ಹೊರಡುವದಾದರು ಅದು ತಮ್ಮ ಸಂಗಡ ಮೊದಲು ಇರಲೇಬೇಕು. ಮಧ್ಯಾಹ್ನ ೧ ಘಂಟೆಯ ಸಮಯದಲ್ಲಿ ಮತ್ತು ರಾತ್ರಿ ಪವಡಿಸುವ ಮುಂಚೆ ಅಪ್ಪನವರ ವಚನಗಳನ್ನು ಕ್ರಮದಿಂದ ಓದಲೇಬೇಕಾದುದು ನಿತ್ಯಾಚಾರವಾಗಿದ್ದಿತು. ಆ ಸಮಯ ವಚನ ಪಾಠಕ್ಕೆ ಮೀಸಲಾಗಿಯೇ ಇರುತ್ತಿದ್ದಿತು. ಇದು ಶಿವಯೋಗಿಗಳು **'ವಚನ ನೋಡುವ ಕಾಲ'** ಎಂಬುದು ಎಲ್ಲರಿಗೂ ತಿಳಿದ ಸಂಗತಿಯು.

ಆ ವಚನ ಪುಸ್ತಕವನ್ನು ನೆಲದ ಮೇಲಿಡದೆ ತಮ್ಮ ತೊಡೆಯ ಮೇಲೆಯೇ ಇಟ್ಟುಕೊಂಡು ಅದನ್ನು ನಿಧಾನವಾಗಿ ಬಿಚ್ಚಿ ಬಹು ಪೂಜ್ಯ ಭಾವದಿಂದ ಮಸ್ತಕಕ್ಕೆ ಮುಟ್ಟಿಸಿ ಅತಿ ಮೆಲ್ಲಗೆ ಓದುತ್ತಿದ್ದರು. ಪಿಂಡಸ್ಥಲದಿಂದ ಜ್ಞಾನಶೂನ್ಯ ಸ್ಥಲದವರೆಗೆ ಕ್ರಮದಿಂದ ಕ್ಲುಪ್ತವಾದ ಕಾಲದ ವರೆಗೆ

ಓದಿ ಮುಗಿಸುತ್ತಿದ್ದರು. ಒಮ್ಮೆ ಮುಗಿದ ನಂತರ ಪುನಃ ಆರಂಭದಿಂದ ಓದುತ್ತ ನೂರಾರು ಸಾರೆ ಮುಗಿಸಿರಬಹುದು.

ಆ ಅಪ್ಪನವರ ವಚನ ಪುಸ್ತಕವನ್ನು ಬಿಚ್ಚುವುದು ಮತ್ತು ಕಟ್ಟುವುದು ಇವು ತಾವೇ ಮಾಡತಕ್ಕ ಕೆಲಸಗಳಾಗಿದ್ದವು. ಆ ಪುಸ್ತಕಕ್ಕೆ ನಾಲ್ಕಾರು ಒಳ್ಳೆಯ ಬಟ್ಟೆಗಳನ್ನು ಬಹು ಹೊದಿಕೆಯಾಗಿ ಕಟ್ಟುತ್ತಿದ್ದರು. ಈ ವಚನಾನುಭವದ ಪವಿತ್ರಾಚರಣೆಯು ಈ ಪ್ರಕಾರ ೪೦-೫೦ ವರುಷ ಅವಿಚ್ಛಿನ್ನವಾಗಿ ನಡೆದಿದ್ದಿತು.

ಶ್ರೀ ಬಸವಣ್ಣನವರ ವಚನಗಳಲ್ಲಿ ಶ್ರೀ ಶಿವಯೋಗಿಗಳವರಿಗೆ ಹೀಗೆ ಅಪಾರವಾದ ಭಕ್ತಿಯಿದ್ದುದೇಕೆ? ಮಹಾ ಶಿವಾನುಭವಿಗಳಾಗಿದ್ದ ಇಳಕಲ್ಲಿನ ಶ್ರೀ ಮಹಂತ ಶಿವಯೋಗಿಗಳೂ ಇದೇ ಪ್ರಕಾರ ಬಸವಣ್ಣನವರ ವಚನಗಳಲ್ಲಿ ವಿಶೇಷವಾದ ನಿಷ್ಠೆಯುಳ್ಳವರಾಗಿದ್ದರು. ತಾವು ಎಲ್ಲಿಗಾದರು ಹೊರಡುವಾಗ ಆ ವಚನ ಪುಸ್ತಕವನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡೇ ಹೊರಡುತ್ತಿದ್ದರು. ಜಂಗಮ ಸಂಸ್ಕಾರ ಹೊಂದಿದ ನಂತರ ವಚನ ಗ್ರಂಥಗಳನ್ನು ಅವರಿಗರ್ಪಿಸುವುದು ಒಂದು ಧಾರ್ಮಿಕ ಕ್ರಿಯೆಯಾಗಿಯೇ ಇದೆಯಷ್ಟೆ. ಈ ಪ್ರಕಾರ ವಚನ ಗ್ರಂಥಗಳನ್ನು ಕೊಡುವುದೇಕೆ? ಮತ್ತು ಅವುಗಳಲ್ಲಿ ಅತ್ಯಧಿಕವಾದ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡು ಬಹು ಕಾಲದಿಂದಲೂ ಅನೇಕ ಪರಮ ಪೂಜ್ಯರು ಅವುಗಳನ್ನೇ ತಮ್ಮ ಮಾರ್ಗದರ್ಶಿಯಾಗಿಟ್ಟುಕೊಂಡಿರುವುದೇಕೆ?

ಶಿವಪೂಜೆ ಮಾಡುವುದು ಮತ್ತು ಶಿವಪ್ರಸಾದ ಸೇವಿಸುವುದು ಹೇಗೆ ನಿತ್ಯ ಕರ್ಮಗಳಾಗಿವೆಯೋ ಹಾಗೆಯೇ ಶಿವಾನುಭವ ಗೋಷ್ಠಿಯೂ ನಿತ್ಯಾಚಾರವಾಗಿಯೇ ಇದೆ. ಪ್ರಮಥರ ವಚನಾನುಭವವಾದರೋ ಆ ಶಿವಾನುಭವ ಮುಖ್ಯಾಂಶವು ಮನಸ್ಸಿನ ಚಾಂಚಲ್ಯವನ್ನು ಕಳೆಯಲಿಕ್ಕೂ ಬುದ್ಧಿಯ ಸಂಶಯವನ್ನು ನಿವಾರಣೆ ಮಾಡಲಿಕ್ಕೂ, ಭಾವದ ಬೆಳಕನ್ನು ಹೆಚ್ಚಿಸಲಿಕ್ಕೂ, ಪ್ರಮಥರ ವಚನಗಳೇ ಬಹು ಪರಿಣಾಮಕಾರಿಯಾದವುಗಳಾಗಿವೆ.

ಈ ವಚನಗಳು ಆತ್ಮೋನ್ನತಿಗೆ ಸಾಧನಗಳಾಗಿರುವಂತೆಯೇ ಅನ್ಯರ ಸಂಶಯಾದಿಗಳನ್ನು ನಿವಾರಣೆ ಮಾಡಿ ನಿಜ ಜ್ಞಾನವನ್ನುಂಟುಮಾಡಿಕೊಡಲು ಕೂಡಾ ಪ್ರಬಲ ಶಾಸ್ತ್ರ ಸಿದ್ಧಾಂತಗಳಾಗಿಯೇ ಇವೆ. ವೇದ, ಆಗಮ, ಉಪನಿಷತ್ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿಯ ಸಾರಭೂತವಾದ ಅನೇಕ ಸತ್ಯ ಸಿದ್ಧಾಂತಗಳು ಪ್ರಮಥರ ಸ್ವಾನುಭವದ ಈ ವಚನಗಳಲ್ಲಿ ವಿಶೇಷ ತೇಜೋಮಯವಾಗಿ ಪ್ರಕಾಶಿಸುತ್ತವೆ; ಮತ್ತು ಆಧ್ಯಾತ್ಮಿಕ ಪ್ರಪಂಚದಲ್ಲಿ ಪ್ರಮಥರು ಸ್ವಾನುಭವದಿಂದ ಕಂಡುಹಿಡಿದ ಅನೇಕ ನೂತನ ಸಿದ್ಧಾಂತಗಳು ಅವರ ವಚನಗಳಿಂದಲೇ ಗೊತ್ತಾಗುತ್ತವೆ.

ಜಂಗಮಸ್ವಾಮಿಗಳಿಗಾದರೂ ವೀರಶೈವಧರ್ಮರಕ್ಷಣೆ ಮತ್ತು ಪ್ರಸಾರಣೆಗಳೇ ಅವರ ಶ್ವಾಸಕೋಶಗಳು ಎಂದ ಮೇಲೆ ಪ್ರಮಥರ ವಚನಗಳನ್ನು ಅವರು ಪ್ರಾಣಸ್ವರೂಪವಾಗಿಯೇ ತಿಳಿಯಬೇಕಾದುದು ವಿಹಿತವಷ್ಟೆ. ಅದಕ್ಕೋಸ್ಕರವಾಗಿಯೇ ಜಂಗಮಾಶ್ರಮ ಸ್ವೀಕರಿಸಿದೊಡನೆ ಪ್ರಮಥರ ವಚನಪುಸ್ತಕಗಳನ್ನು ಕೊಡುವ ಪದ್ಧತಿಯುಂಟಾಗಿದೆ. ಅನೇಕ ಪರಮ ಪೂಜ್ಯರು ಅವುಗಳನ್ನು ತಮ್ಮ ಪ್ರಾಣದಂತೆ ಜೋಕೆಮಾಡಿ ಅವುಗಳಿಂದಲೇ ತಮ್ಮ ನಡೆನುಡಿಗಳನ್ನು ತಿದ್ದಿಕೊಂಡು ತಾವು ಲೋಕವಂದ್ಯರಾದುದಲ್ಲದೆ ವೀರಶೈವಮತವನ್ನೂ ಊರ್ಜಿತ ಸ್ಥಿತಿಗೆ ತಂದರು.

ಮಹಾನುಭಾವರಾದ ಬಸವಣ್ಣನವರು ಪ್ರಮಥರ ವಚನಗಳಿಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದಾರೆಂಬುದು ಈ ಕೆಳಗಿನ ಅವರ ವಚನಗಳಿಂದಲೇ ಸ್ಪಷ್ಟವಾಗುತ್ತದೆ.

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು
ಬೇರೆಬ್ಭಾವಿಯ ತೋಡಿ ಉಪ್ಪನೀರ ಉಂಬುವವನ ವಿಧಿಯಂತೆ
ಆಯಿತೆನ್ನ ಮತಿ ಕೂಡಲ ಸಂಗಮದೇವಾ.

ಸಂಸಾರ ತಾಪದಿಂದ ಬಳಲಿ ಬಾಯಾರಿದವರಿಗೆ ಪ್ರಮಥರ ವಚನವೆಂಬುದೇ ಹಾಲಿನ ಹೊಳೆ, ಆ ಹೊಳೆಯ ಹತ್ತಿರಿರುವ ಕೆಸರಾದರೋ ಬೆಲ್ಲ. ದಂಡೆಯಲ್ಲಿರುವ ಉಸುಕಾದರೋ ಸಕ್ಕರೆ, ಆ ಹೊಳೆಯಲ್ಲಿರುವ ನೊರೆತೆರೆಗಳು ಅಮೃತ. ಹೀಗಿರುವ ವಚನಾಮೃತವನ್ನು ಸೇವಿಸಿ ಎಂದೂ ಬಾಯಾರಿಕೆಯಾಗದಂತೆ ಮಾಡಿಕೊಳ್ಳದೆ ಬಾವಿಯನ್ನು ತೋಡಿ ಉಪ್ಪ ನೀರನ್ನು ತೆಗೆದು ಕುಡಿಯಬಹುದೆ? ಪ್ರಮಥರ ವಚನಗಳನ್ನು ಬಿಟ್ಟು ವೇದ, ಆಗಮ, ಉಪನಿಷತ್ತು, ಪುರಾಣದಿಗಳನ್ನೆಲ್ಲಾ ಓದಿ ನಿಜ ತತ್ವಗಳನ್ನು ಶೋಧಿಸಿ ಶಾಂತನಾಗಬೇಕೆಂಬುದು ಬಾವಿಯನ್ನು ತೋಡಿ ಉಪ್ಪು ನೀರನ್ನು ಹೊಂದುವಂತೆಯೇ ಸರಿ.

ಆದ್ಯರ ವಚನ ಪರುಷ ಕಂಡಯ್ಯಾ, ಸದಾಶಿವನೆಂಬ ಲಿಂಗವ ನಂಬುವದು.
ನಂಬಲೊಡನೆ ನೀ ವಿಜಯಿ ಕಂಡಯ್ಯಾ,
ಅಧರಕ್ಕೆ ಕಹಿ; ಉದರಕ್ಕೆ ಸಿಹಿ ಕೂಡಲಸಂಗನ ಶರಣರ
ವಚನ ಬೇವ ಸವಿದಂತೆ.

ಮನಸ್ಸೆಂಬ ಕಬ್ಬಿಣಕ್ಕೆ ಪ್ರಮಥರ ವಚನವು ಪರುಷದಂತೆ, ಅದು ಮನಸ್ಸಿನ ಮಲಿನತ್ವವನ್ನೆಲ್ಲಾ ತೊಳೆದು ಬಂಗಾರದಂತೆ ಶುದ್ಧಗೊಳಿಸುತ್ತದೆ. ಬೇವು ಬಾಯಲ್ಲಿ ಕಹಿಯಾಗಿದ್ದರೂ ಹೊಟ್ಟೆಯೊಳಗಿನ ಹುಳಗಳನ್ನೆಲ್ಲಾ ಕೊಂದು ಹೇಗೆ ಆರೋಗ್ಯವನ್ನು ಕೊಡುತ್ತದೆಯೋ ಹಾಗೆಯೇ ಪ್ರಮಥರ ವಚನಗಳಲ್ಲಿ ಸತ್ಯ ನಿರ್ದಾಕ್ಷಿಣ್ಯಗಳ ಹೊಳಪಿರುವುದರಿಂದ ನಡೆಯಲು ಕಷ್ಟವಾಗಿಯೂ ಕೇಳಲು ಕಟುವಾಗಿಯೂ ಇದ್ದರೂ ಅವುಗಳನ್ನು ಆದರದಿಂದ ಕೇಳಿ ಅವುಗಳಂತೆ ನಡೆದರೆ ಮನಸ್ಸಿನ ನಾನಾ ಕುಕಲ್ಪನೆಗಳೆಂಬ ಕ್ರಿಮಿಗಳೆಲ್ಲಾ ನಾಶವಾಗಿ ಭವರೋಗವು ನಿವಾರಣೆಯಾಗುತ್ತದೆ.

ಪ್ರಮಥರ ವಚನಗಳಲ್ಲಿ ಇಂತಹ ಸತ್ಯ ಸಿದ್ಧಾಂತ ಮತ್ತು ಸಾಮರ್ಥ್ಯಗಳಿರುವುದರಿಂದಲೇ ಶ್ರೀ ಸಿದ್ಧರಾಮ ಶಿವಯೋಗಿಗಳು ಹೀಗೆ ಹೇಳಿದ್ದಾರೆ.

ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸರಿಬಾರದಯ್ಯಾ,
ನಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರಿಯಾದಿ ಸಮಬಾರವಯ್ಯಾ
ಎಮ್ಮ ವಚನ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷ ಜಪ
ಸಮಬಾರದಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಬೇರೆ ಪುರಾಣಪಾರಾಯಣಾದಿಗಳಿಗಿಂತ ಪ್ರಮಥರ ವಚನಗಳಲ್ಲಿರುವ ಮಹತ್ವವು ಆ ಸಿದ್ಧರಾಮ ಶಿವಯೋಗಿಗಳಿಗೆ ಎಷ್ಟು ಹೆಚ್ಚಿನದಾಗಿ ತೋರಿದ್ದಿತೆಂಬುದು ಮೇಲಣ ವಚನದಿಂದ ಗೊತ್ತಾಗುವುದಿಲ್ಲವೇ? ಆದುದರಿಂದ ಹೀಗೆ ಹೇಳಿದ್ದಾರೆ.

ನಮ್ಮ ನಡಾವಳಿಗೆ ನಮ್ಮ ಪುರಾತನರ ನುಡಿಯೇ ಇಷ್ಟವಯ್ಯಾ,
ಸ್ಮೃತಿಗಳು ಸಮುದ್ರ ಪಾಲಾಗಲಿ, ಶ್ರುತಿ ಗಳು ವೈಕುಂಠ ಸೇರಲಿ,
ಪುರಾಣಗಳು ಅಗ್ನಿಯ ಸೇರಲಿ, ಆಗಮಗಳು ವಾಯುವ ಹೊಂದಲಿ,
ಎಮ್ಮ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗ ಹೃದಯದೊಳು ಗ್ರಂಥಿಯಾಗಿರಲಿ,

ವೇದಾಗಮಪುರಾಣಗಳಿಗಿಂತಲೂ ಪುರಾತನ ವಚನಗಳೆ ವೀರಶೈವರ ನಡೆನುಡಿಗಳನ್ನು ತಿದ್ದಲು ಮುಖ್ಯ ಸಾಧನಗಳಾಗಿವೆಯೆಂತಲೂ ಆದುದರಿಂದ ಅನ್ಯ ಗ್ರಂಥಗಳ ಕಡೆಗೆ ಲಕ್ಷಿಸದೆ ವಚನಗಳನ್ನೇ ತಮ್ಮ ಹೃದಯದಲ್ಲಿಟ್ಟುಕೊಂಡು ಅವುಗಳಲ್ಲಿ ಹೇಳಿರುವಂತೆಯೇ ನಡೆಯಬೇಕೆಂತಲೂ ಸಿದ್ಧರಾಮ ಶಿವಯೋಗಿಗಳು ಮೇಲಣ ವಚನದಲ್ಲಿ ಸೂಚಿಸಿದ್ದಾರಷ್ಟೆ.

ಶ್ರೀ ಬಸವಾದಿ ಪ್ರಮಥರ ಕಾಲದಿಂದ ಹತ್ತೊಂಬತ್ತನೆಯ ಶತಮಾನದ ಮಧ್ಯದ ವರೆಗೂ ವಚನಗಳ ಪ್ರಸಾರವು ಇದ್ದೇ ಇದ್ದಿತು. ಗುರುಜಂಗಮರು ಇವುಗಳನ್ನು ಬಹು ಪೂಜ್ಯಭಾವನೆಯಿಂದ ಓದುತ್ತ ಅವುಗಳ ಮೂಲಕ ತಮ್ಮ ನಡೆನುಡಿಗಳನ್ನು ತಿದ್ದಿಕೊಂಡು ಭಕ್ತರಲ್ಲಿಯೂ ಪ್ರಸಾರ ಮಾಡುತ್ತಿದ್ದರು. ಭಕ್ತರಲ್ಲಿಯೂ ಅಸಂಖ್ಯ ಜನರು ಬಸವಣ್ಣನವರ ವಚನಗಳನ್ನು ನಿತ್ಯ ಪಾರಾಯಣ ಮಾಡುತ್ತಿದ್ದರು. ಈ ಪ್ರಕಾರ ವಚನಗಳ ಪ್ರಚಾರವಿದ್ದಾಗ ಸಮಾಜದಲ್ಲಿ ಧರ್ಮವೂ ಜಾಗೃತವಾಗಿಯೇ ಇದ್ದಿತು.

ಕಳೆದ ೭೦-೮೦ ವರುಷಗಳಿಂದ ಈ ಸ್ಥಿತಿಯು ಬೇರೆಯಾಗುತ್ತ ಬಂದಿತು. ಗುರುಜಂಗಮರು ಸಂಸ್ಕೃತ ವಿದ್ಯಾಭ್ಯಾಸದ ಕಡೆಗೇನೇ ದಿನೇ ದಿನೇ ಹೆಚ್ಚು ಲಕ್ಷಿಸಿದರು. ಸಂಸ್ಕೃತ ಪಾಂಡಿತ್ಯವೇ ಅವರ ಪೂಜ್ಯತೆಗೆ ಹೆಗ್ಗುರುತಾಯಿತು. ಆದುದರಿಂದ ಪ್ರಮಥರ ವಚನಗಳ ಕಡೆಗೆ ಉಪೇಕ್ಷೆ ಹೆಚ್ಚಾಯಿತು. ಪ್ರಮಥರ ಆಚಾರ ವಿಚಾರಗಳ ಅರಿವು ಕಡಿಮೆಯಾಯಿತು. ಮತ ಪರಿವರ್ತನೆಯ ಮತಿ ತಲೆದೋರಿತು.

ಅಥಣಿಯ ಶ್ರೀ ಶಿವಯೋಗಿಗಳವರು ಈ ಅನರ್ಥದ ಆಘಾತಕ್ಕೆ ಸಿಕ್ಕಿದವರಲ್ಲ. ಅವರು ಪ್ರಮಥರ ಪದ್ಧತಿಯನ್ನೇ ಅನುಸರಿಸಿ ವಚನಗಳಲ್ಲಿಯೇ ದೃಢತರವಾದ ವಿಶ್ವಾಸವನ್ನಿಟ್ಟುಕೊಂಡು ಅವುಗಳಲ್ಲಿಯ ತತ್ವಗಳಂತೆಯೇ ತಮ್ಮ ನಡೆನುಡಿಗಳನ್ನು ತಿದ್ದಿಕೊಂಡವರು. ಆ ಮಹಾತ್ಮರಲ್ಲಿ ಅಂತಹ ದಿವ್ಯ ಶಕ್ತಿ, ಆಚಾರ ವಿಚಾರಗಳುಂಟಾಗಲು ಪ್ರಮಥರ ವಚನಾನುಭವವೇ ಮೂಲ ಕಾರಣವಾಯಿತೆಂದು ಧಾರಾಳವಾಗಿ ಹೇಳಬಹುದು. ಇತ್ತೀಚೆಗೆ ವಚನಗಳ ವಿಷಯದಲ್ಲಿ ಪ್ರೇಮಾದರಗಳುಂಟಾಗಲಾರಂಭವಾಗಿವೆ. ಅಂತಹ ವಚನ ಪ್ರೇಮಿಗಳಿಗೆ ಶಿವಯೋಗಿಗಳವರ ಈ ದಿವ್ಯಾಚರಣೆಯು ಹೆಚ್ಚಾದ ವಿಶ್ವಾಸ ಮತ್ತು ಉತ್ಸಾಹಗಳನ್ನುಂಟು ಮಾಡಲಿಕ್ಕಿಲ್ಲವೇ?

❖❖

೨ನೆಯ ಪ್ರಕರಣ

ಬೇಕು ಬೇಡೆಂಬುವಿಲ್ಲ

ಶ್ರೀ ಶಿವಯೋಗಿಗಳವರು ವಚನಾನುಭಾವಿಗಳಾಗಿದ್ದುದರಿಂದ ಆ ವಚನಗಳಲ್ಲಿಯ ತತ್ವಗಳು ಸ್ವಾಭಾವಿಕವಾಗಿಯೇ ಅವರ ನಡೆ ನುಡಿಗಳಲ್ಲಿ ಒಡಮೂಡಿದವು. ನಾವು ಯಾವ ವಿಧವಾಗಿ ನಮ್ಮ ಮನಬುದ್ಧಿಗಳಿಗೆ ಶಿಕ್ಷಣವನ್ನು ಕೊಡುತ್ತೇವೆಯೋ ಅದೇ ಪ್ರಕಾರ ಅವು ರೂಪುಗೊಳ್ಳುವುದು ಸ್ವಾಭಾವಿಕವಷ್ಟೆ.

ಪ್ರಮಥರ ವಚನಗಳನ್ನು ಓದಲುಪಕ್ರಮಿಸಿದೊಡನೆ ಅವು ನಮಗೆ ನಮ್ಮ ಕರ್ತವ್ಯದ ಅರಿವನ್ನುಂಟು ಮಾಡುತ್ತವೆ. ಪುರಾತನರನ್ನು ಕೇವಲ ನೆನಸಿದ ಮಾತ್ರದಿಂದ ನಮ್ಮ ಉನ್ನತಿಯಾಗುವದಿಲ್ಲವೆಂತಲೂ ಅವು ನಮಗೆ ಎಚ್ಚರಿಕೆಯನ್ನು ಕೊಡುತ್ತವೆ. ಪ್ರಮಥಪುಂಗವರಾದ ಶ್ರೀ ಬಸವಣ್ಣನವರು ಈ ಪ್ರಕಾರ ಸ್ಪಷ್ಟವಾಗಿ ಲೋಕಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

> ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ?
> ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?
> ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ?
> ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ?
> ಮುನ್ನಿನ ಪುರಾತನರ ನೆನೆದು ಧನ್ಯರಾದಿಹೆವೆಂಬ ಮಾತಿನ ರಂಜಕನೇನೆಂಬೆ
> ಕೂಡಲಸಂಗಮದೇವಾ?

ಪ್ರಮಥವರೇಣ್ಯರಾದ ಶ್ರೀ ಪ್ರಭುದೇವರು ಕೂಡಾ ಪುರಾತನರ ನೆನೆದು ಕೃತಾರ್ಥರಾದೆವೆಂಬರು. ತಮ್ಮಲ್ಲಿ ಭಕ್ತಿ ನಿಷ್ಠೆ ಇಲ್ಲದವರ ಕಂಡಡೆ ಮೆಚ್ಚ ನಮ್ಮ ಗುಹೇಶ್ವರ ಎಂದು ಹೇಳಿದ್ದಾರೆ. ಎಂದ ಮೇಲೆ ಶ್ರೀ ಶಿವಯೋಗಿಗಳಂತಹ ತೇಜೋಮೂರ್ತಿಗಳು ಈ ವಚನಗಳನ್ನೆಲ್ಲಾ ಓದಿ ತಾವು ಅವುಗಳಂತೆ ಆಚರಿಸಲು ಪ್ರಯತ್ನಿಸದೆ ಬಿಡುವರೇ? ತಮ್ಮ ಗುಣಶೀಲಾಚಾರಗಳಿಗೆ ಅನುಕೂಲವಾಗಿರುವ ಪ್ರಮಥಾಚಾರಗಳನ್ನೆಲ್ಲ ಒಂದೊಂದಾಗಿಯೇ ಆಚರಿಸಿ ಅಳವಡಿಸಿ ಕೊಳ್ಳಲಾರಂಭಿಸಿದರು.

ಶ್ರೀ ಶಿವಯೋಗಿಗಳವರು ವೀರಶೈವ ಸಿದ್ಧಾಂತದ ಪ್ರಕಾರ ಜಂಗಮತತ್ವವನ್ನನುಸರಿಸಿದ ಜಂಗಮ ಪುಂಗವರು. ಜಂಗಮತತ್ವಕ್ಕೆ ಸ್ವಯ, ಚರ ಮತ್ತು ಪರ ಎಂಬ ಮೂರು ಅವಸ್ಥೆಗಳಿವೆ.

ಜಂಗಮರು ಅಥವಾ ವಿರಕ್ತರೆಂಬುವವರು ಬೇರೆ ಮತೀಯರಲ್ಲಿರತಕ್ಕ ಸನ್ಯಾಸಿಗಳಂತೆಯೇ ಸರಿಯೆಂದು ಅನೇಕರು ತಿಳಿದುಕೊಂಡಿರುವುದುಂಟು. ಅದು ಶುದ್ಧ ತಪ್ಪು. ಅನ್ಯ ಮತೀಯರ ಸನ್ಯಾಸಿಗಳೂ ವೀರಶೈವರಲ್ಲಿಯ ವಿರಕ್ತರಿಗೂ ಮಹದಂತರವಿದೆ. ಈ ವ್ಯತ್ಯಾಸ ತಿಳಿಯದಿದ್ದುದರಿಂದ ಸನ್ಯಾಸಿಗಳು ಊರಲ್ಲೇಕಿರಬೇಕು? ಮನೆಗಳಿಗೇಕೆ ಬರಬೇಕು? ಲಗ್ನಾದಿ ಶುಭಕಾರ್ಯಗಳಲ್ಲಿ ಅವರೇಕಿರಬೇಕು? ಹೀಗೆ ಅನೇಕ ಪ್ರಶ್ನೆಗಳನ್ನು ಮಾಡುತ್ತಿದ್ದಾರೆ.

ವೀರಶೈವಮತತತ್ವಗಳಲ್ಲಿ ಜಂಗಮವೂ ಒಂದಾಗಿದೆ. ಗುರು ಮತ್ತು ಲಿಂಗ ಹೇಗೆ ಅಗತ್ಯವಾಗಿವೆಯೋ ಹಾಗೆಯೇ ಜಂಗಮವೂ ಅವಶ್ಯಕವಾಗಿಯೇ ಇದೆ. ಆದರೆ ಆ ಜಂಗಮತ್ವದ ಅಂತಸ್ತುಗಳ ತಾರತಮ್ಯದಂತೆ ಕಾರ್ಯಕ್ರಮಗಳೂ ಬೇರೆ ಬೇರೆಯಾಗಿರುತ್ತವೆ.

ಜಂಗಮತ್ವವು ಮೊದಲು ಸ್ವಯದಲ್ಲಿ ಪ್ರಾರಂಭವಾಗುತ್ತದೆ. ಎಂದರೆ ತಾಯಿತಂದೆ ಮೊದಲಾದವರ ರಕ್ತ ಸಂಬಂಧವಾಗಲಿ ಇಲ್ಲವೇ ಅವರ ಕುಲ ಕಸಬು ಮೊದಲಾದವುಗಳ ಸಂಬಂಧವಾಗಲಿ ಮನಸ್ಸಿನಲ್ಲಿ ಕೂಡಾ ಇಲ್ಲದೆ ಗುರು ಸೇವೆಯಲ್ಲಿದ್ದು ಬ್ರಹ್ಮಚರ್ಯ ವ್ರತವನ್ನಾಚರಿಸುತ್ತ ಮತ ಸಂಬಂಧವಾದ ಸಕಲ ಕರ್ಮಗಳಲ್ಲಿಯೂ ಭಕ್ತರ ಪ್ರಾರ್ಥನೆಯಂತೆ ಗುರುಗಳ ಅಪ್ಪಣೆಯನ್ನು ಹೊಂದಿ ಹೋಗಿ ಅವುಗಳನ್ನು ಸಾಂಗಗೊಳಿಸುವುದು; ಇವು ಸ್ವಯ ಜಂಗಮದ ಮುಖ್ಯ ಕರ್ಮಗಳು.

ಗುರುಸೇವೆ ಮತ್ತು ವಿದ್ಯಾರ್ಜನೆಗಳನ್ನು ಮಾಡಿದನಂತರ ಗುರುವಿನ ಅಪ್ಪಣೆಯನ್ನು ಹೊಂದಿ ದೇಶ ಸಂಚಾರ ಮಾಡಿ ಆತ್ಮೋನ್ನತಿಯ ಅನೇಕ ಅನುಭವಗಳನ್ನು ಹೊಂದುತ್ತ ಮತ ಪ್ರಸಾರ ಮಾಡುವುದು ಆ ಜಂಗಮದ ಎರಡನೆಯ ಅಂತಸ್ತು. ಹೀಗೆ ಆಚರಿಸುವವರಿಗೇನೇ ಚರಜಂಗಮರೆನ್ನುವರು. ಆಗ ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿಗಳಂತೆ ಸಂಚರಿಸುತ್ತಿರಬೇಕು. ತಮ್ಮ ಇಷ್ಟಲಿಂಗಪೂಜೆ ಮೊದಲಾದ ನಿತ್ಯಕರ್ಮಗಳನ್ನು ತಪ್ಪದೇ ಮಾಡುತ್ತಿರಬೇಕು.

ಈ ಸಾಧಕಾವಸ್ಥೆಯಲ್ಲಿ ಸಂಚರಿಸುತ್ತಿರುವಾಗ ಭಿಕ್ಷಾನ್ನವು ಮೋಕ್ಷಕ್ಕೆ ಸಾಧನವೆಂದು ತಿಳಿದು ಲಿಂಗಾಂಗಿಗಳಲ್ಲಿ ಮಾತ್ರ ಒಂದೇ ವೇಳೆ ಭಕ್ತಿಯ ಭಿಕ್ಷವನ್ನು ಬೇಡಿ ಬಂದುದು ಶಿವಪ್ರಸಾದವೆಂದು ಭಾವಿಸಿ ಸ್ವೀಕರಿಸಬೇಕು. ತಮಗೆ ಇಂತಹುದೇ ಬೇಕೆಂದಾಗಲಿ ಅಥವಾ ಇಂತಹದು ಬೇಡವೆಂದಾಗಲಿ ಹೇಳುವುದು ವಿಹಿತವಲ್ಲ. ಏಕೆಂದರೆ ಬೇಕು ಮತ್ತು ಬೇಡವೆಂಬವೆರಡೂ ಭವದ ಬೀಜಗಳೆಂದೇ ಪ್ರಮಥರ ಸಿದ್ಧಾಂತ. ಆದುದರಿಂದ ಏನು ಬಂದರೂ ಅದೆಲ್ಲವೂ ಲಿಂಗ ಮುಖದಿಂದ ಬಂದ ಪ್ರಸಾದವೆಂದೇ ತಿಳಿದು ಅದರಲ್ಲಿ ಹಿಗ್ಗು ತಗ್ಗುಗಳಿಲ್ಲದೆ ಸ್ವೀಕರಿಸಬೇಕು. ಇವರ ಪವಿತ್ರಾಚರಣೆ ಮತ್ತು ಸದುಪದೇಶಗಳೇ ಭಕ್ತರು ಇವರಿಗೆ ಸಮರ್ಪಿಸಿದ ಭಕ್ತಿಯ ಭಿಕ್ಷಕ್ಕೆ ಪ್ರತಿಫಲವೆಂದು ಅವರು ತಿಳಿಯಬೇಕು.

ಹೀಗೆ ಹನ್ನೆರಡು ವರುಷವಾದರು ದೇಶ ಸಂಚಾರ ಮಾಡಿ ಅನಂತರ ಗುರುಗಳ ಬಳಿಗೆ ಬಂದು ಅವರ ಅಪ್ಪಣೆಯ ಪ್ರಕಾರ ಒಂದೇ ಸ್ಥಳದಲ್ಲಿದ್ದುಕೊಂಡು ಲಿಂಗಾನಂದತುಂದಿಲರಾಗಿರುವುದೇ ಜಂಗಮದ ಮೂರನೆಯ ಅಂತಸ್ತು. ಇವರೇ ಪರ ಜಂಗಮರು. ಹೀಗೆ ಪ್ರತಿಯೊಬ್ಬ ಜಂಗಮರು ಅಥವಾ ವಿರಕ್ತರು ಈ ಮೂರು ಅಂತಸ್ತುಗಳನ್ನು ಕ್ರಮದಿಂದ ಹೊಂದಲೇಬೇಕು. ವಿರಕ್ತಮಠಗಳಲ್ಲಿ ಈ ಪ್ರಕಾರ ಮೂರು ಅಂತಸ್ತುಗಳಲ್ಲಿರುವ ಜಂಗಮ ಸ್ವಾಮಿಗಳು ಇರುವುದೇ ವಿಹಿತವಾದುದು.

ವಿರಕ್ತ ಸ್ವಾಮಿಗಳಿಗೆ ಸ್ಥಳಕೂಡಿಸುವ ವಿಧಿಯು ನಡೆಯುವಾಗ ಈ ಎಲ್ಲಾ ಕ್ರಿಯೆಗಳೂ ಮಾತಿನಲ್ಲಾದರೂ ಜರುಗಲೇ ಬೇಕಾಗುತ್ತವಷ್ಟೆ. ಸ್ಥಳಕೂಡಿಸುವ ಸ್ವಾಮಿಗಳಿಗೆ ದೇಶ ಸಂಚಾರದ ವೇಷ ಧರಿಸಲು ಹೇಳಿ ಅವರನ್ನು, ನೀವು ದೇಶ ಸಂಚಾರ ಮಾಡಿ ಬಂದಿರಾ? ಯಾವ ಯಾವ ಸ್ಥಳಗಳಲ್ಲಿ ಸಂಚಾರ ಮಾಡಿದಿರಿ? ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಕೇಳುವುದು ಮತ್ತು ಅವುಗಳಿಗೆ ಅವರಃ ಪರವಾಗಿ ಬೇರೆಯವರು ಉತ್ತರಗಳನ್ನು ಹೇಳುವುದು ಇವೆಲ್ಲವುಗಳನ್ನು ನೋಡಿದರೆ ಮೇಲೆ ವಿವರಿಸಲ್ಪಟ್ಟ ಜಂಗಮದ ರೀತಿನೀತಿಗಳು ಬಹುಕಾಲದಿಂದಲೂ ಬಳಕೆಯಲ್ಲಿದ್ದವೆಂದೇ ಸ್ಪಷ್ಟವಾಗುವುದಿಲ್ಲವೇ? ಇತ್ತೀಚೆಗೆ ಆ ರೀತಿ ನೀತಿಗಳು ನುಡಿಯಲ್ಲಿಯೆ ಉಳಿದವು. ನಡೆಯು ಮಾಯವಾಯಿತು. ಪೂರ್ವ ಪದ್ಧತಿಯೇ ಪುನಃ ಆಚರಣೆಯಲ್ಲಿ ಬರಬೇಕಾದುದೇ ಕ್ಷೇಮಕರವು.

ಶ್ರೀ ಶಿವಯೋಗಿಗಳವರು ಜಂಗಮತ್ವದ ಈ ಮೂರೂ ಅಂತಸ್ತುಗಳನ್ನು ಬಹು ತೃಪ್ತಿಕರವಾಗಿ ಹೊಂದಿ ಲೋಕಪೂಜ್ಯರಾದವರು. ಈ ಮುಂಚೆ ವಿವರಿಸಿದಂತೆ ತಮ್ಮ ಗುರುಗಳಿಂದ ವಿರಕ್ತಾಶ್ರಮವನ್ನು ತಮ್ಮ ೨೦ನೆಯ ವರುಷದಲ್ಲಿ ಹೊಂದಿದರು. ಆವರೆಗೂ ಗುರುಗಳ ಅಪ್ಪಣೆಯಂತೆ ಸ್ವಯ ಜಂಗಮಾಚಾರದಲ್ಲಿದ್ದರು. ಅನಂತರ ಗುರುಗಳ ಅಪ್ಪಣೆಯನ್ನು ಹೊಂದಿ ದೇಶ ಸಂಚಾರಕ್ಕೆ ಹೊರಟರು.

ದೇಶ ಸಂಚಾರವು ಈಗಿನಂತೆ ಉಗಿಯ ಬಂಡಿ ಅಥವಾ ಮೋಟಾರು ಬಂಡಿಯಲ್ಲಿ ಅಲ್ಲ; ಕೇವಲ ಪಾದಚಾರಿಗಳಾಗಿಯೇ ಸಾವಿರಾರು ಗ್ರಾಮಗಳಲ್ಲಿ ಇಪ್ಪತ್ತು ವರುಷ ಸಂಚರಿಸಿದರು. ಸೊಲ್ಲಾಪೂರ, ಕಲ್ಯಾಣ, ಗೋಕರ್ಣ, ಬನವಾಸಿ, ಹರಿಹರ, ಹಂಪಿ, ಶ್ರೀಶೈಲ, ಕಂಚಿ, ರಾಮೇಶ್ವರ ಮೊದಲಾದ ದಕ್ಷಿಣ ಹಿಂದುಸ್ತಾನದ ಅನೇಕ ಸುಪ್ರಸಿದ್ಧ ಸ್ಥಳಗಳನ್ನು ಈ ಸಂಚಾರದಲ್ಲಿ ಕಂಡರು. ಇದಲ್ಲವೆ ನಿಜವಾದ ಚರಜಂಗಮತ್ವದ ದಿವ್ಯತೇಜ? ಅಂತಹ ಪೂರ್ವ ವಯಸ್ಸಿನಲ್ಲಿ ಇಂತಹ ಸಾಹಸದ ಸಂಚಾರದಿಂದಲೇ ತನುಮನಭಾವಗಳೆಲ್ಲಾ ಪರಿಶುದ್ಧವಾಗುತ್ತವಲ್ಲವೆ?

ಹೀಗೆ ಶ್ರೀ ಶಿವಯೋಗಿಗಳವರು ಸಂಚರಿಸುತ್ತಿದ್ದಾಗ ಒಂದು ದಿನ ಹಿಪ್ಪರಗಿ ಎಂಬ ಗ್ರಾಮದ ಒಬ್ಬ ಶಿವಭಕ್ತನ ಮನೆಗೆ ಭಕ್ತಿ ಭಿಕ್ಷಕ್ಕಾಗಿ ದಯಮಾಡಿಸಿದರು. ಶ್ರೀ ಪ್ರಭುದೇವರು ಶ್ರಿ ಬಸವಣ್ಣನವರ ಮನೆಗೆ ಭಿಕ್ಷಕ್ಕೆ ದಯಮಾಡಿಸಿದಾಗ ಯಾವ ಸ್ಥಿತಿಯಲ್ಲಿದ್ದರೆಂಬುದು ಅವರ ಈ ಕೆಳಗಿನ ವಚನದಿಂದ ಹೇಗೆ ತಿಳಿಯಬಹುದಾಗಿದೆಯೋ ಹಾಗೆಯೇ ಶ್ರೀ ಶಿವಯೋಗಿಗಳವರು ಆ ಭಕ್ತನ ಮನೆಗೆ ದಯಮಾಡಿಸಿದಾಗ ಇದ್ದರೆಂದು ಹೇಳಬಹುದು. ಆದರೆ ಆ ಭಕ್ತನೇನೋ ಬಸವಣ್ಣನವರಿಗೆ ಹೋಲುವವನಲ್ಲ, ಶ್ರೀ ಶಿವಯೋಗಿಗಳವರು ಮಾತ್ರ ಆ ಪ್ರಭುದೇವರನ್ನು ಹೋಲುವವರಾಗಿದ್ದರು.

ಸಮತೆಯೆಂಬ ಕಂಥೆಯ ತೊಟ್ಟು, ಸುಬುದ್ಧಿಯೆಂಬ ಟೊಪ್ಪರವನಿಕ್ಕಿ,
ವಿಷಯವೆಂಬ ಹಾವುಗೆಯ ಮೆಟ್ಟಿ,
ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ,
ಮರವೆಂಬ ಚಳಮೆಟ್ಟಿದೆ, ಗುಹೇಶ್ವರನ ಶರಣ ಬಂದೆನು;
ಭಕ್ತಿಯ ಭಿಕ್ಷೆಯನಿಕ್ಕು ಸಂಗನಬಸವಣ್ಣ,

ಚರಜಂಗಮಕ್ಕೆ ಸಲ್ಲುವ ಇಂತಹ ದಿವ್ಯ ಗುಣಗಳುಳ್ಳ ಶಿವಯೋಗಿಗಳವರು ಆ ಭಕ್ತನ ಮನೆಗೆ ದಯಮಾಡಿಸಲು ಆತನು ಒಂದು ಹಿಡಿ ಜೋಳವನ್ನು ನೀಡಿದನು. ಆಗ ಶಿವಯೋಗಿಗಳು ಆ ಜೋಳವನ್ನೇ ತೆಗೆದುಕೊಂಡು ಬಂದು ತಮ್ಮ ನಿತ್ಯ ಕರ್ಮವನ್ನು ತೀರಿಸಿಕೊಂಡು ಅವುಗಳನ್ನು ಅರೆದು ಶಿವ ಪ್ರಸಾದವೆಂದು ಸ್ವೀಕರಿಸಿದರು. ಇದಲ್ಲವೇ ಚರಜಂಗಮದ ನಿಜಾಚರಣೆಯ ಗುಟ್ಟು?

ಭಕ್ತರಿಂದ ಏನಾದರೊಂದನ್ನು ಸಂಪಾದಿಸಬೇಕೆಂಬ ಉದ್ದೇಶದಿಂದ ಜಂಗಮ ಸ್ವಾಮಿಗಳು ಈ ಸಂಚಾರವನ್ನು ಪ್ರಾರಂಭಿಸಿರುವುದಿಲ್ಲ. ತಮ್ಮ ಆತ್ಮೋನ್ನತಿಯ ಜತೆಗೆ ಭಕ್ತರಿಗೂ ಶಿವಭಕ್ತಿ ಶಿವಜ್ಞಾನ ಶಿವಾಚಾರಗಳ ಶಿಕ್ಷಣ ದೊರೆಯಲೆಂಬುದೇ ಈ ಸಂಚಾರದ ಮುಖ್ಯೋದ್ದೇಶವಾಗಿರುತ್ತದೆ. ಅದು ಸಾಧಿಸಬೇಕಾದರೆ ತಮಗೆ ಇಂತಹದೇ ಬೇಕೆಂದುದಿರಬಾರದಷ್ಟೆ. ಆದುದರಿಂದ ಶ್ರೀ ಶಿವಯೋಗಿಗಳವರು ಪ್ರಮಥರ ಕಟ್ಟಪ್ಪಣೆಯ ಪ್ರಕಾರವೇ ಹೀಗೆ ವರ್ತಿಸಿದರು. ವಿರಕ್ತೋತ್ತಮರಾದ ಶ್ರೀ ಚೆನ್ನಬಸವಣ್ಣನವರು ಪ್ರಭುದೇವರನ್ನು ಕುರಿತು ಹೀಗೆ ಹೇಳಿದ್ದಾರೆ.

ಹೊನ್ನಿಂಗೆ ಬಂದಾತನಲ್ಲ, ಹೆಣ್ಣಿಂಗೆ ಬಂದಾತನಲ್ಲ,
ಮಣ್ಣಿಂಗೆ ಬಂದಾತನಲ್ಲ, ಅಶನಕ್ಕೆ ಬಂದಾತನಲ್ಲ,
ವ್ಯಸನಕ್ಕೆ ಬಂದಾತನಲ್ಲ, ಕೂಡಲಚೆನ್ನಸಂಗಯ್ಯ
ಭಕ್ತಿಯ ಪಥವ ತೋರಬಂದನಯ್ಯಾ ಪ್ರಭುದೇವರು.

ಶ್ರೀ ಶಿವಯೋಗಿಗಳು ಆ ಪ್ರಭುದೇವರ ಸಂಪ್ರದಾಯದವರೇ ಆಗಿದ್ದುದರಿಂದ ಆ ಪ್ರಮಥಪುಂಗವರ ಆಚರಣೆಯನ್ನೇ ತಮ್ಮ ಮುಂದಿಟ್ಟುಕೊಂಡು ನಡೆದುದು ಸಹಜವಲ್ಲವೇ? ಇಪ್ಪತ್ತು ವರುಷ ಸಂಚಾರ ಮಾಡಿದ ನಂತರ ಆರು ವರುಷ ಏಕಾಂತವಾಸದಲ್ಲಿದ್ದು ಶಿವಯೋಗಾನುಸಂಧಾನವನ್ನು ಅಳವಡಿಸಿಕೊಂಡು ತಮ್ಮ ಗುರುಗಳ ದರ್ಶನಕ್ಕೆ ಬಂದರು.

ಅನಂತರ ಗುರುಗಳ ಅಪ್ಪಣೆಯಂತೆ ಅಥಣಿ ಗಚ್ಚಿನಮಠದ ಶಿವಯೋಗ ಮಂಟಪದಲ್ಲಿಯೇ ಇರಲಾರಂಭಿಸಿದರು. ಅಂದಿನಿಂದ ಪರ ಜಂಗಮದಾಚರಣೆಗಳು ಪ್ರಾರಂಭವಾದವು. ಆಗಲು ಕೂಡಾ ಬೇಕು ಬೇಡೆಂಬೆರಡು ಇರಲಿಲ್ಲ. ಲಿಂಗಾರ್ಪಿತ ಕಾಲಕ್ಕೆ ಯಾವುದು ಬರುತ್ತಿದ್ದಿತೋ ಅದನ್ನೇ ಶಿವಪ್ರಸಾದವೆಂದು ಸ್ವೀಕರಿಸುತ್ತಿದ್ದರು. ಎಡೆಯು ಬರಬೇಕೆಂದು ಕಾದು ಕುಳಿತುಕೊಳ್ಳುತ್ತಿರಲಿಲ್ಲ. ಸಕಾಲಕ್ಕೆ ಬಾರದಿದ್ದರೆ ಶಿವನಿಚ್ಛೆ ಇಲ್ಲವೆಂದು ತಿಳಿದು ತಮ್ಮ ಮುಂದಿನ ಕ್ರಿಯೆಗಳನ್ನು ಮುಗಿಸಿಬಿಡುತ್ತಿದ್ದರು.

ಎಡೆ ಬರಲಿಲ್ಲವೆಂದು ಸೇವಕರ ಮೇಲೆ ಆಗ್ರಹವೇ? ಛೇ; ಇಲ್ಲವೇ ಇಲ್ಲ, ಎಡೆ ತಪ್ಪಿತಲ್ಲಾ ಎಂದು ಅನ್ಯರು ಕಳವಳಪಡುತ್ತಿರುವಾಗ, ನೀವೇಕೆ ಹೀಗೆ ಚಿಂತಿಸುತ್ತೀರಿ? ನಿಮ್ಮಿಚ್ಛೆಯೇ? ಶಿವನಿಚ್ಛೆಯಿರಲಿಲ್ಲ. ಎಂದು ಹೇಳಿ ಸಮಾಧಾನಗೊಳಿಸುತ್ತಿದ್ದರು. ಎಡೆಯು ಸಕಾಲಕ್ಕೆ ಬಂದರೂ ಅದು ದೂರದಲ್ಲಿದ್ದರೆ ಬಾಗಿ ಕೈಚಾಚಿ ಅದನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಎಡೆಯು ತಾವಿದ್ದೆಡೆಯಲ್ಲಿಯೇ ಇರಬೇಕು. ಬಾಗಿ ಕೈನೀಡಿ ತೆಗೆದುಕೊಂಡಿದ್ದಾದರೆ ಅದು ಅಂಗದಾಸೆ; ಅಷ್ಟಕ್ಕು ಕೂಡಾ ಅವಕಾಶವಿರಲಿಲ್ಲ. ಬಂದುದ ಕೈಕೊಳ್ಳಬಲ್ಲಡೆ ನೇಮ ಎಂಬ ಅಪ್ಪನವರ ವಚನದಂತೆಯೇ ಕೈಗೆ ನಿಲುಕುವಷ್ಟರಲ್ಲಿಯೇ ಎಡೆಯಿದ್ದರೆ ಮಾತ್ರ ತೆಗೆದುಕೊಳ್ಳುತ್ತಿದ್ದರು.

ಸೇವಕರ ಅಜಾಗರೂಕತೆಯಿಂದ ಅನೇಕ ಸಾರೆ ಎಡೆ ತಪ್ಪಿದುದ್ದುಂಟು. ಆಗ ಯಾವ ಹೊಯಿದಾಟಗಳೂ ಇರುತ್ತಿರಲಿಲ್ಲ. ಸಂತುಷ್ಟ ಚಿತ್ತರಾಗಿಯೇ ತಮ್ಮ ನಿತ್ಯ ಕರ್ಮಗಳನ್ನು ನಡೆಸುತ್ತಿದ್ದರು. ಇದಲ್ಲವೆ ಪ್ರಮಥರಾಚರಣೆಯ ದಿವ್ಯ ತೇಜ?

ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ.
ಆವ ಪಥಾರ್ಥವಾದರೇನು? ತಾನಿದ್ದಡೆಗೆ ಬಂದುದ
ಲಿಂಗಾರ್ಪಿತ ಮಾಡಿ ಭೋಗಿಸುವುದೇ ಆಚಾರ.
ಕೂಡಲಸಂಗಮದೇವನ ಒಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು.

ಇಂತಹುದು ಬೇಡವೆಂಬುದು ವೈರಾಗ್ಯವೃತ್ತಿ. ಅದು ಲಿಂಗಾರ್ಪಿತ ಮಾರ್ಗಕ್ಕೆ ಸರಿಯಾದುದಲ್ಲ, ಇಂತಹದೇ ಬೇಕೆಂಬುದು ಅಂಗಭೋಗದ ಗುಣ. ಅದೂ ಶಿವಾನುಭವಿಗಳಿಗೆ ಸರಿಯಲ್ಲ. ತಾವಿದ್ದಲ್ಲಿಗೆ ಯಾವುದು ಬರುವುದೋ ಅದನ್ನು ಶಿವನೇ ಕಳಿಸಿದ್ದಾನೆಂದು ತಿಳಿದು ಆತನಿಗರ್ಪಿಸಿ ಆ ಲಿಂಗಪ್ರಸಾದವನ್ನು ಸೇವಿಸುವುದೇ ಪ್ರಮಥರ ಆಚಾರ. ಈ ದೇಹವು ಶಿವನನ್ನು ಒಲಿಸಲಿಕ್ಕಾಗಿ ಬಂದುದು. ಇದು ಶಿವಾನುಗ್ರಹದಿಂದಲೇ ಪ್ರಾಪ್ತವಾದುದು. ಆದಕಾರಣ ಇಂತಹುದನ್ನು ತೆಗೆದುಕೊಳ್ಳುವುದೇ ಇಲ್ಲವೆಂಬ ವೈರಾಗ್ಯದಿಂದಾಗಲಿ ಅಥವಾ ಇಂತಹದೇ ಬೇಕೆಂಬ ಭೋಗೇಚ್ಛೆಯಿಂದಾಗಲಿ ಕೆಡಿಸಿಕೊಳ್ಳಬಾರದೆಂಬ ಆ ಮಹಾನುಭಾವರಾದ ಬಸವಣ್ಣನವರ ಅಪ್ಪಣೆಯನ್ನು ಶ್ರೀ ಶಿವಯೋಗಿಗಳವರು ತಮ್ಮ ಆಚರಣೆಯಲ್ಲಿ ಹೇಗಿಟ್ಟುಕೊಂಡಿದ್ದರೆಂಬುದು ಮೇಲಣ ಆಚರಣೆಗಳಿಂದ ಸ್ಪಷ್ಟವಾಗುವುದಿಲ್ಲವೇ?

ಬಂದುದ ಕೈಕೊಳ್ಳುವ ನಿಯಮವಿದ್ದಿತೇ ವಿನಾ ಇಂತಹ ಹಾಲು, ತುಪ್ಪ, ಇಂತಿಂತಹ ಭಕ್ಷ್ಯಭೋಜ್ಯಗಳೇ ಬೇಕೆಂಬುದಾಗಲಿ ಅಥವಾ ವಿಹಿತಾಹಾರಗಳಲ್ಲಿಯೇ ಇಂತಿಂತಹವುಗಳು ತ್ಯಾಜ್ಯವೆಂಬುದಾಗಲಿ ಶಿವಯೋಗಿಗಳವರಿಗಿರಲಿಲ್ಲ. ಈ ಗ್ರಂಥಕಾರನು ಮೊದಲು ಹಾಲು ಮತ್ತು ಅನ್ನಗಳನ್ನೇ ತೆಗೆದುಕೊಳ್ಳುವ ನಿಯಮದವನಾಗಿದ್ದನು. ಈ ನಿಯಮವು ಹೇಗೋ ಆ ಮಹಾನುಭಾವರಿಗೆ ವೇದ್ಯವಾಯಿತು. ಆಗ ಒಂದುದಿನ ಹಾಲೇ ಬೇಕೆಂಬುವವರು ಮುಂದೆ ಬೆಕ್ಕಾಗಿ ಹುಟ್ಟುವರು ಎಂದು ಅಪ್ಪಣೆ ಮಾಡಿ ತಮ್ಮ ಯೋಗಾನಂದದಿಂದ ನಕ್ಕುಬಿಟ್ಟರು.

ಸಂಕಲ್ಪಾನುಗುಣವಾದ ಜನ್ಮಪ್ರಾಪ್ತಿಯ ಸಿದ್ಧಾಂತವು ಈ ನುಡಿಯಲ್ಲಿಯೇ ಆಗ ಭಾವಿಸಿದೆನು. ಇತ್ತಲಾಗಿ ಪ್ರಮಥರ ವಚನಗಳನ್ನು ಓದುವಾಗ ಈ ಕೆಳಗಿನ ವಚನವು ಕಣ್ಣಿಗೆ ಬಿದ್ದಿತ್ತು. ಆಗ ತಟ್ಟನೆ ಶಿವಯೋಗಿಗಳವರು ಅಪ್ಪಣೆ ಕೊಡಿಸಿದ್ದ ವಾಕ್ಯ ನೆನಪಿಗೆ ಬಂದಿತು. ಆ ವಚನ ಹೀಗಿದೆ. ಇದು ಶ್ರೀ ಪ್ರಭುದೇವರು ನುಡಿದುದು:

ಹಾಲ ನೇಮ ಹಿಡಿದವರು ಬೆಕ್ಕಾಗಿ ಹುಟ್ಟುವರು;
ಕಡಲೆ ನೇಮ ಹಿಡಿದವರು ಕುದುರೆಯಾಗಿ ಹುಟ್ಟುವರು
ಪುಷ್ಪದ ನೇಮ ಹಿಡಿದವರು ತುಂಬಿಯಾಗಿ ಹುಟ್ಟುವರು
ಅಗ್ಗವಣಿಯ ನೇಮ ಹಿಡಿದವರು ಕಪ್ಪೆಯಾಗಿ ಹುಟ್ಟುವರು
ಇವರು ಷಟ್‌ಸ್ಥಲಕ್ಕೆ ಹೊರಗು;
ಭಕ್ತಿ ನಿಷ್ಠೆಯಿಲ್ಲದವರ ಕಂಡಡೆ ಮೆಚ್ಚ ಗುಹೇಶ್ವರನು

ಇಂತಹ ಹಾಲು, ಇಂತಹ ಹೂವು, ಇಂತಹ ನದಿಯ ನೀರು ಹೀಗೆ ಇಂಥಾದ್ದೇ ಬೇಕೆಂಬ ನಿಯಮಗಳನ್ನು ಮಾಡಿಕೊಳ್ಳುವುದು ಪ್ರಮಥರ ಮಾರ್ಗವಲ್ಲ, ಆದುದರಿಂದ ಆ ಮಹಾ ಶಿವಯೋಗಿಗಳವರು ಇಂತಹ ಯಾವ ನಿಯಮಗಳನ್ನೂ ಇಟ್ಟುಕೊಂಡಿರಲಿಲ್ಲ. ಹುಣ್ಣಿಮೆ, ಅಮವಾಸಿ, ಸೋಮವಾರ, ಶಿವರಾತ್ರಿ, ಏಕಾದಶಿ ಮೊದಲಾದ ಬೇರೆ ಬೇರೆ ತಿಥಿ ವಾರಗಳಲ್ಲಿ ಉಪವಾಸಾದಿ ವೃತಗಳನ್ನೂ ಆಚರಿಸುತ್ತಿರಲಿಲ್ಲ. ಶ್ರೀ ಬಸವಣ್ಣನವರು ಈ ವಿಚಾರವಾಗಿ ಹೇಳಿದ ವಚನದಲ್ಲಿ ಹೀಗಿದೆ;

ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ
ಲಿಂಗಭಕ್ತಂಗೆಂತು ಸರಿಯೆಂಬೆನಯ್ಯಾ?
ದಿನಶ್ರೇಷ್ಠವೋ? ಲಿಂಗಶ್ರೇಷ್ಠವೋ? ..... ಇದು ಕಾರಣ
ದಿನ ವಾರಂಗಳು ಶ್ರೇಷ್ಠವೆಂದು ಏಕ ಭುಕ್ತೋಪಾವಾಸಂಗಳಂ ಮಾಡುವ ಭಕ್ತಂಗೆ
ಕುಂಭೀ ಪಾತಕ ನರಕ ತಪ್ಪದು ಕೂಡಲಸಂಗಮದೇವಾ.

ಪ್ರಸಾದವೇದ್ಯರಿಗೆ ಈ ಉಪವಾಸಾದಿ ವೃತಗಳು ಬೇಕಾಗಿಲ್ಲ. ಪ್ರಮಥರು ಪ್ರಸಾದಕಾಯರು. ನಮ್ಮಂತೆ ರುಚಿಗಾಗಿ ಮನಬಂದಂತೆ ಉಂಡು ನರಳುವವರಲ್ಲ, ಅವರಿಗೆ ಈ ವಾರ ತಿಥಿಗಳ ಲಂಘನ ಚಿಕಿತ್ಸೆ ಬೇಕಾಗಿರಲಿಲ್ಲ. ಪ್ರಸಾದವೇದ್ಯರು ಹಿತಮಿತಗಳನ್ನು ಅರಿತವರೇ ಆಗಿರುತ್ತಾರೆ. ಆದುದರಿಂದಲೇ ಪ್ರಸಾದವೇದ್ಯರಿಗೆ ಮನ ವಿಕಾರವಿಲ್ಲವೆಂದು ಪ್ರಮಥರು ನಿರ್ಧರಿಸಿದ್ದಾರೆ. ಈ ವರೆಗಿನ ವಿವೇಚನೆಯಿಂದ ಶ್ರೀ ಶಿವಯೋಗಿಗಳವರ ಈ ಸಂಬಂಧವಾದ ಎಲ್ಲ ಆಚರಣೆಗಳ ಸಾರವೂ ಈ ಕೆಳಗಿನ ಒಂದೇ ಒಂದು ವಚನದಲ್ಲಿದೆಯೆಂದು ಧಾರಾಳವಾಗಿ ಹೇಳಬಹುದು.

ಅಂಗವುಳ್ಳನ್ನಕ್ಕ ಶಿವಲಿಂಗ ಪೂಜೆಯ ಮಾಡಲೇಬೇಕು.
ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತವ
ಮಾಡಿಕೊಳ್ಳಲೇಬೇಕು. ಇದೇ ಅರಿವಿನ ಬಿತ್ತು.
ಜ್ಞಾನದ ಗೊತ್ತು, ಸರ್ವಮಯದ ಯುಕ್ತಿ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವ ಶಕ್ತಿ.

ಜೀವನು ದೇಹವನ್ನು ಧರಿಸಿರುವವರೆಗೂ ಶಿವಲಿಂಗವನ್ನು ಪೂಜಿಸಲೇಬೇಕು. ಜ್ಞಾನೋದಯವಾಯಿತೆಂದೇ ಕ್ರಿಯೆಯನ್ನು ಬಿಡಬಾರದು. ದೇಹ ಬಿಟ್ಟಾಗಲೇ ಕ್ರಿಯೆಯು ಅಡಗುವದು. ದೇಹವಿರುವ ವರಗೂ ಹಸಿವು ತೃಷೆಗಳಿರುವುದು ಸ್ವಾಭಾವಿಕ. ಆಗ ಇಂತಹದು ಬೇಡ ಅಥವಾ ಇಂತಹದು ಬೇಕೆಂಬ ಆಗ್ರಹ ತೊಡದೆ ಬಂದುದನ್ನು ಲಿಂಗಾರ್ಪಿತ ಮಾಡಿ ಸೇವಿಸಬೇಕಾದುದೇ ಶಿವಾಚಾರದ ಜ್ಞಾನವಿದ್ದುದರ ಗುರುತು. ಜೀವನನ್ನು ಭೋಗದಲ್ಲಾಗಲಿ ಬಳಲಿಕೆಯಲ್ಲಾಗಲಿ ತಳ್ಳದೆ ಶಿವಭಾವದಲ್ಲಿರಸಿದ್ದಾದರೆ ಕೊನೆಗೆ ಶಿವನಲ್ಲಿಯೇ ಸೇರುವ ಶಕ್ತಿಯನ್ನು ಹೊಂದಲನುಕೂಲವಾಗುತ್ತದೆ.

ಆದಕಾರ್ರಣ ಭೋಗ ಮತ್ತು ತ್ಯಾಗ ಮಾರ್ಗಗಳನ್ನು ಬಿಟ್ಟು ಶಿವಯೋಗಮಾರ್ಗವನ್ನೇ ಪ್ರಮಥರು ಬೋಧಿಸಿದ್ದಾರೆ. ಶಿವಯೋಗಿಗಳವರು ಅದನ್ನು ಅನುಸರಿಸಿದ್ದರಿಂದ ಬೇಕು ಬೇಡೆಂಬೆರಡು ಭವಬೀಜಗಳ ಹುರಿದು ಲೋಕದೊಳಗಿದ್ದು ಇಲ್ಲದ ಮಹಾನುಭಾವಿಗಳಾದರು.

❖❖

೩ನೆಯ ಪ್ರಕರಣ

ಅಂಜೆ : ಅಂಜುವೆ

ಶ್ರೀ ಶಿವಯೋಗಿಗಳವರು ಇಪ್ಪತ್ತು ವರುಷ ದೇಶ ಸಂಚಾರ ಮಾಡಿದನಂತರ ಸವದೆ ಗ್ರಾಮದ ಹತ್ತಿರ ಗುಹೇಶ್ವರ ಗವಿಯಲ್ಲಿ ಆರು ವರುಷ ಶಿವಯೋಗಾನುಸಂಧಾನಕ್ಕೋಸ್ಕರ ಏಕಾಂತವಾಸದಲ್ಲಿದ್ದರು. ಒಂದು ದಿನ ಒಂದು ಸರ್ಪವು ಆ ಗವಿಯ ಬಾಗಿಲಲ್ಲಿ ಮಲಗಿದ್ದಿತು. ಒಳಗೆ ಶಿವಯೋಗಿಗಳಿದ್ದರು. ಅಷ್ಟರಲ್ಲಿ ಆ ಸವದೆ ಗ್ರಾಮದ ಭಕ್ತರು ಶಿವಯೋಗಿಗಳವರ ದರ್ಶನ ಹೊಂದಬೇಕೆಂದು ಅಲ್ಲಿಗೆ ಬಂದರು.

ಗವಿಯ ಬಾಗಿಲಲ್ಲೇ ಹಾವು ಮಲಗಿದ್ದನ್ನು ನೋಡಿ ಅವರು ಅಂಜಿದರು. ಇದು ಒಳಗೆ ಹೋದರೆ ಘಾತವಾಗುವುದಲ್ಲಾ ಎಂದು ಚಿಂತಿಸುತ್ತ ಏನು ಮಾಡಬೇಕೆಂದು ತಮ್ಮ ತಮ್ಮಲ್ಲಿಯೇ ಮಾತನಾಡುತ್ತಿದ್ದರು. ಅಷ್ಟರಲ್ಲಿ ಶಿವಯೋಗಿಗಳು ಒಳಗಿನಿಂದ ಹೊರಗೆ ಬಂದರು. ಆ ಹಾವೂ ಮುಂದೆ ಹರಿದು ಹೋಯಿತು. ಅದೇನು ಮಾಡುತ್ತದೆ? ಎಂದು ಶಿವಯೋಗಿಗಳು ಆಗ ನುಡಿದರು.

ಸವದೆ ಗ್ರಾಮದ ಭಕ್ತರು ಶಿವಯೋಗಿಗಳಿಗೆ ತಾವು ಈ ಸ್ಥಳವನ್ನು ಬಿಟ್ಟು ಊರಲ್ಲಿ ಬರಬೇಕೆಂತಲೂ ನಾವು ತಮಗೆ ಬೇಕಾಗುವ ಎಲ್ಲ ವ್ಯವಸ್ಥೆಗಳನ್ನು ಮಾಡುತ್ತೇವೆಂತಲೂ ಬಹಳವಾಗಿ ಹೇಳಿಕೊಂಡರು. ಆದರೆ ಶಿವಯೋಗಿಗಳು ಅವರ ಪ್ರಾರ್ಥನೆಯನ್ನು ಒಪ್ಪದೆ ಆ ಗವಿಯಲ್ಲಿಯೇ ಇದ್ದರು.

ಶ್ರೀ ಶಿವಯೋಗಿಗಳು ಅಥಣಿ ಗಚ್ಚಿನಮಠದಲ್ಲಿ ನೆಲೆಸಿದಾಗ ಇವರ ಯೋಗಮಂಟಪದಲ್ಲಿ ಒಮ್ಮೆ ಒಂದು ಸರ್ಪವು ಬಂದಿದ್ದಿತು. ಅನೇಕರು ಬಹು ಭಯಪಟ್ಟು ಇನ್ನೇನು ಮಾಡಬೇಕೆಂದು ಬಹು ಚಿಂತಿಸುತ್ತಿದ್ದರು. ಆಗ ಒಳಗಿದ್ದ ಶಿವಯೋಗಿಗಳು ಅದೇನು ಮಾಡುತ್ತದೆ? ಈಗ ತಾನೇ ಹೋಗುತ್ತದೆ ಎಂದು ಹೇಳಿದರು. ಸ್ವಲ್ಪ ಹೊತ್ತಿನಲ್ಲಿ ಅದು ಅಲ್ಲಿಂದ ಹೊರಗೆ ಹರಿದುಹೋಯಿತು.

ಅಂಕಲಗಿಯ ಮಹಾತಪಸ್ವಿಗಳಾದ ಶ್ರೀ ಅಡವಿಸ್ವಾಮಿಗಳ ದರ್ಶನಕ್ಕೆಂದು ಶಿವಯೋಗಿಗಳು ಒಂದು ದಿನ ಹೋಗುತ್ತಿದ್ದರು. ಆಗ ದಾರಿಯಲ್ಲಿ ಒಂದು ಹುಲಿ ಮಲಗಿದ್ದಿತು. ಅದನ್ನು ನೋಡಿ ತಮ್ಮ ಜೋಳಿಗೆಯಲ್ಲಿದ್ದ ಒಂದು ಉತ್ತುತ್ತೆಯನ್ನು ಅದರ ಕಡೆಗೆ ಎಸೆದರು. ಅದು ಇವರನ್ನು ನೋಡಿ ಅಲ್ಲಿಂದ ಎದ್ದು ಹೋಯಿತು.

ಈ ಪ್ರಕಾರ ಅನೇಕ ಸಾರೆ ಕ್ರೂರ ಪ್ರಾಣಿಗಳು ಹತ್ತಿರ ಬಂದರೂ ಕೂಡಾ ಇವರು ಅಂಜುತ್ತಿರಲಿಲ್ಲ. ಇದು ಸರ್ವಾತ್ಮ ಭಾವವು ಬಲಿತಿದ್ದರ ಗುರುತು. ಪ್ರಾಣಿಗಳಲ್ಲಿ ಅಪಾರವಾದ ದಯೆಯುಳ್ಳವರಿಗೆ ಕ್ರೂರ ಪ್ರಾಣಿಗಳು ಕೂಡಾ ಸಾಧು ಪ್ರಾಣಿಗಳಾಗುತ್ತವೆ. ಯಾರು ಆತ್ಮಜ್ಯೋತಿಯಿಂದ ವೈರತ್ವವನ್ನು ಸುಟ್ಟಿದ್ದಾರೆಯೇ ಅವರ ನೇತ್ರದಿಂದ ಒಂದು ದಿವ್ಯ ತೇಜವು ಹೊರಸೂಸುತ್ತದೆ. ಆ ತೇಜವು ಕ್ರೂರ ಪ್ರಾಣಿಗಳನ್ನು ಸಾಧು ಪ್ರಾಣಿಗಳನ್ನಾಗಿ ಮಾಡುವುದೆಂದು ಯೋಗಶಾಸ್ತ್ರದ ಸಿದ್ಧಾಂತ.

ಸಂಪೂರ್ಣ ನಿರ್ವೈರಿಯಾದ ಮಹಾತ್ಮನನ್ನು ಯಾವ ಪ್ರಾಣಿಯೂ ಹಿಂಸಿಸಲಾರದೆಂದೆ ಯೋಗಿಗಳ ಮತ. ಅಕ್ಕಸಾಲಿಗರು ಬಂಗಾರವನ್ನು ಪರೀಕ್ಷಿಸಲು ತಮ್ಮ ಹತ್ತರ ಹೇಗೆ ಒರೆಗಲ್ಲನ್ನಿಟ್ಟು ಕೊಂಡಿರುತ್ತಾರೆಯೋ ಹಾಗೆಯೇ ಯೋಗಿಗಳು ತಮ್ಮಲ್ಲಿ ಪ್ರಾಪ್ತವಾದ ಯೋಗಸಿದ್ಧಿಯ ಪರೀಕ್ಷೆಗಾಗಿಯೇ ಯೋಗಾಶ್ರಮದಲ್ಲಿ ಗಿಳಿ ಮತ್ತು ಚಿಗರೆಗಳನ್ನು ಇಟ್ಟುಕೊಳ್ಳುತ್ತಾರಂತೆ. ಅವು ತಮ್ಮ ನೆರೆಯಲ್ಲಿ ಬೇಕಾದ ಹಾಗೆ ತಿರುಗಾಡುತ್ತಿದ್ದರು. ಅವುಗಳನ್ನು ಅವುಗಳ ಜಾತಿವೈರಿಗಳಾದ ಬೆಕ್ಕು ಮತ್ತು ಹುಲಿಗಳು ಹಿಂಸಿಸದಿದ್ದರೆ ತಮಗೆ ಯೋಗಸಿದ್ಧಿ ಯಾಗಿದೆಯೆಂದು ತಿಳಿಯುತ್ತಾರಂತೆ.

ಶ್ರೀ ಶಿವಯೋಗಿಗಳೇನೂ ಇಂಥ ಯಾವ ತೋರಿಕೆಯ ಉಪಕರಣಗಳನ್ನಿಟ್ಟುಕೊಂಡು ತಮ್ಮ ಶಿವಯೋಗ ಸಿದ್ಧಿಯನ್ನು ಪರೀಕ್ಷಿಸಿರಲಿಲ್ಲ. ಹಾಗೆ ಮಾಡುವುದು ಪ್ರಮಥರ ಮಾರ್ಗವೂ ಅಲ್ಲ. ತಾನಾಗಿಯೆ ಸಂಭವಿಸಿದ ಕೆಲವು ಸಂಗತಿಗಳ ಮೇಲಿಂದ ಶ್ರೀ ಶಿವಯೋಗಿಗಳು ಕ್ರೂರ ಪ್ರಾಣಿಗಳಿಗೆ ಅಂಜದಿದ್ದು ಮತ್ತು ಅವು ಇವರಿಗೆ ಹಿಂಸಿಸದಿದ್ದುದು ಯೋಗಸಿದ್ಧಿಯ ಪರಿಣಾಮಗಳೆಂದು ನಾವು ಯೋಚಿಸಬಹುದಾಗಿದೆ.

ಯಾರು ಲಿಂಗಾನುಭವಿಗಳೋ ಮತ್ತು ಪವಿತ್ರಾಚರಣೆಯ ಪುತ್ಥಳಿಯಾಗಿದ್ದಾರೆಯೋ ಅವರು ಮರಣಕ್ಕೆ ಅಂಜುವುದಿಲ್ಲ. ಯಾರಿಗೆ ಜೀವದಾಸೆಯಿಲ್ಲವೋ ಅವರು ಯಾವ ಕ್ರೂರಪ್ರಾಣಿಗಳಿಗೆ ತಾನೆ ಅಂಜುವರು? ಅವರಿಗೆ ಅಪವಿತ್ರಾಚರಣೆಗಳು ಮಾತ್ರ ಭಯಗೊಳಿಸುತ್ತವೆ. ಶ್ರೀ ಬಸವಣ್ಣನವರ ಈ ಕೆಳಗಿನ ವಚನದಲ್ಲಿರುವ ತತ್ವವು ಶಿವಯೋಗಿಗಳಲ್ಲಿ ಅಳವಟ್ಟಿತ್ತೆಂದು ಸ್ಪಷ್ಟವಾಗಿ ತೋರುತ್ತದೆ.

> ಹರಿವ ಹಾವಿಂಗಂಜೆ, ಉರಿಯ ನಾಲಿಗೆಗಂಜೆ, ಸುರಿಗೆಯ ಮೊನೆಗಂಜೆ,
> ಒಂದಕ್ಕಂಜುವೆ, ಒಂದಕ್ಕಳುಕುವೆ.
> ಪರಸ್ತ್ರೀ ಪರಧನವೆಂಬ ಜೂಬಿಗಂಜುವೆ
> ಮುನ್ನಂಜದ ರಾವಣನೇನು ವಿಧಿಗೊಳಗಾದ? ನಾನಂಜುವೆನಯ್ಯ ಕೂಡಲಸಂಗಮದೇವಾ.

ಹಾವಿಗಾಗಲಿ ಅಥವಾ ಬೆಂಕಿಗಾಗಲಿ ಇಲ್ಲವೆ ಶಸ್ತ್ರಕ್ಕಾಗಲಿ ಯಾರು ಅಂಜುವದಿಲ್ಲವೋ ಅವರು ಮರಣಕ್ಕೆ ಭಯಪಡುವವರಲ್ಲ. ಶ್ರೀ ಶಿವಯೋಗಿಗಳು ಇಂಥ ಸ್ಥಿತಿಯಲ್ಲಿದ್ದರು. ಈ ನಿರ್ಭಯವು ತಮೋಗುಣ ಅಥವಾ ರಜೋಗುಣದಿಂದುಟಾಗಿರಲಿಲ್ಲ. ಅದು ಕೇವಲ ಸತ್ವಗುಣಶೀಲವಾದುದಾಗಿದ್ದಿತು. ಲಿಂಗಾಂಗ ಸಾಮರಸ್ಯ ಜ್ಞಾನದಿಂದುದಯವಾದುದಾಗಿದ್ದಿತು.

ಪವಿತ್ರಾಚರಣೆಯ ಪುತ್ಥಳಿಯಾಗಿದ್ದರೆಂಬುದಕ್ಕೆ ಈ ಕೆಳಗಿನ ಒಂದು ಪ್ರಸಂಗವೇ ಸಾಕು. ಅವರ ಸೇವೆಯಲ್ಲಿಯೇ ಇದ್ದ ಒಬ್ಬ ಪೂಜ್ಯರು ಹೀಗೆ ಆ ಪ್ರಸಂಗವನ್ನು ತಿಳಿಸಿದ್ದಾರೆ.

ಶಿವಯೋಗಿಗಳು ಒಂದು ದಿನ ತಮ್ಮ ಯೋಗಮಂಟಪದಿಂದ ಹೊರಗೆ ಬಂದನಂತರ ನನ್ನನ್ನು ಕರೆದು ಚೇಳಿದೆ ಕಸಬರಿಗೆ ತೆಗೆದುಕೊಂಡು ಬಾ ಎಂದು ನನಗೆ ಅಪ್ಪಣೆ ಮಾಡಿದರು. ನಾನು ಬಹು ಅವಸರದಿಂದ ಕಸಬರಿಗೆಯನ್ನು ತೆಗೆದುಕೊಂಡು ಹೋದೆನು. ಆ ಯೋಗಮಂಟಪದ ಮುಂದೆ ಒಂದು ರೂಪಾಯಿ ಇದ್ದಿತು. ಅದನ್ನು ತೋರಿಸಿ ತಮ್ಮ ಯೋಗಾನಂದದಿಂದ ನಕ್ಕು ಇದನ್ನು ತೆಗೆದುಕ್ಕೊಂಡು ಹೋಗೆಂದು ಅಪ್ಪಣೆ ಮಾಡಿದರು.

ತಮ್ಮ ಗುಣ ಶೀಲಾಚಾರಗಳಿಗೆ ಅತ್ಯಂತ ತ್ಯಾಜ್ಯವಾಗಿರತಕ್ಕ ಧನಾದಿಗಳ ವಿಷಯದಲ್ಲಿ ಎಷ್ಟು ಅಂಜಿಕೆಯುಳ್ಳವರಾಗಿದ್ದರೆಂಬುದು ಮೇಲಣ ಸಂಗತಿಯಿಂದ ಸ್ಪಷ್ಟವಾಗುತ್ತದೆ. ದ್ರವ್ಯಾರ್ಜನೆ ಅಥವಾ ದ್ರವ್ಯಸಂಗ್ರಹವು ಆ ಮಹಾಶಿವಯೋಗಿಗಳವರ ಶೀಲಾಚಾರಗಳಿಗೆ ವಿರೋಧವಾದುದು. ಅದೇ ಅವರಿಗೆ ಪರಧರ್ಮ ಎಂದ ಮೇಲೆ ಅದು ಭಯಪ್ರದವಾದುದೆಂದೇ ತಿಳಿದುದು ಸ್ವಾಭಾವಿಕವಲ್ಲವೇ?

ಹಣ, ಬಂಗಾರ, ವಸ್ತ್ರ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು ಕಂಡು ಕಾತರಿಸಿ ಕೈಮುಟ್ಟಿ ಎತ್ತದ ನಡತೆಯೇ ಪ್ರಮಥರ ನಡತೆ. ಶಿವಯೋಗಿಗಳಾದರೋ ಪ್ರಮಥರ ಮಾರ್ಗವನ್ನೇ ಅನುಸರಿಸಿ ನಡೆಎವರು. ಎಂದ ಮೇಲೆ ಆ ಹಣವನ್ನು ತಾವು ಮುಟ್ಟುವರೆ? ಅದಕ್ಕಾಗಿಯೇ ಹಾಗೆ ಹೇಳಿ ತೆಗೆಯಿಸಿ, ಆ ಸೇವೆಯಲ್ಲಿರುವವರಿಗೂ ಅದೊಂದು ಶಿಕ್ಷಣವನ್ನೇ ಕೊಟ್ಟರೆಂದು ತಿಳಿಯಬಹುದಲ್ಲವೆ?

❖❖

೪ನೆಯ ಪ್ರಕರಣ

ಛಲಬೇಕು ಶರಣಂಗೆ

ಶ್ರೀ ಶಿವಯೋಗಿಗಳು ಚರ ಜಂಗಮ ಸ್ಥಿತಿಯಲ್ಲಿ ಇಪ್ಪತ್ತು ವರುಷ ದೇಶ ಸಂಚರಿಸಿದ ಮೇಲೆ ಗುಹೇಶ್ವರ ಗವಿಯಲ್ಲಿ ಆರು ವರುಷ ಶಿವಯೋಗಾನುಸಂಧಾನದಲ್ಲಿದ್ದು ಆ ಬಳಿಕ ಅಥಣಿಗೆ ಆಗಮಿಸಿದರು. ಇವರ ಈ ಅಸಾಧಾರಣವಾದ ವಿರತಿಯನ್ನು ಗುರುಗಳು ನೋಡಿ ಪರಮ ಸಂತೋಷಪಟ್ಟರು.

ಇನ್ನು ಮೇಲೆ ಇವರು ಎಲ್ಲಿಯೂ ಸಂಚಾರಕ್ಕೆ ಹೋಗಬಾರದೆಂದು ಆ ಗಚ್ಚಿನಮಠದ ಅಧಿಕಾರವನ್ನು ವಹಿಸಿಕೊಳ್ಳಲು ಅಪ್ಪಣೆ ಮಾಡಿದರು. ಆಗ ಶಿವಯೋಗಿಗಳು ತಮ್ಮ ಗುರುಗಳಲ್ಲಿ ಹೀಗೆ ಬಿನ್ನವಿಸಿಕೊಂಡರು.

ಈ ಮಠ ಮಾನ್ಯಗಳ ಅಧಿಕಾರ ನನಗೆ ಬೇಕಿಲ್ಲ. ತಮ್ಮ ಪಾದಸೇವೆಯೇ ಸಾಕು. ಗುರುಗಳು ಇವರ ಮನೋಗತವನ್ನು ಅರಿತುಕೊಂಡರು. ಇವರಲ್ಲಿದ್ದ ಅದ್ವಿತೀಯವಾದ ವಿರತಿಯು ಮೊದಲೇ ಗೊತ್ತಿದ್ದಿತು. ಶಿವಯೋಗಿಗಳ ಈ ಪ್ರಾರ್ಥನೆಯನ್ನು ಗುರುಗಳು ಮನ್ನಿಸಿ ಹೀಗೆ ಅಪ್ಪಣೆ ಮಾಡಿದರು.

ಈ ಮಠದ ಅಧಿಕಾರ ನಿಮಗೆ ಬೇಕಾಗಿಲ್ಲದಿದ್ದರೆ ಬಿಡಿರಿ, ನೀವು ಮಾತ್ರ ಇನ್ನು ಮೇಲೆ ಎಲ್ಲಿಯೂ ಸಂಚಾರಕ್ಕೆ ಹೋಗಕೂಡದು. ಈ ಮಠದಲ್ಲಿಯೇ ನಿಮ್ಮ ಲಿಂಗಪೂಜೆಯ ಆನಂದದಲ್ಲಿರಬೇಕು. ಗುರುಗಳ ಈ ಅಪ್ಪಣೆಯನ್ನು ಶಿವಯೋಗಿಗಳು ಒಪ್ಪಿಕೊಂಡು ನಾಲ್ವತ್ತು ವರುಷಗಳ ವರೆಗೆ ಆ ಗಚ್ಚಿನಮಠದ ಯೋಗಮಂಟಪದಲ್ಲಿ ವಾಸವಾಗಿದ್ದರು. ಅಂದಿನಿಂದ ಪರ ಜಂಗಮ ವೃತ್ತಿಯು ಬಲಿಯಲಾರಂಭಿಸಿತು.

ಶ್ರೀ ಶಿವಯೋಗಿಗಳು ಯೋಗಗುಣಶೀಲರಷ್ಟೇ. ಆದುದರಿಂದ ಲಿಂಗಪೂಜೆಯೇ ಇವರ ಮಹಾ ವ್ರತವಾಗಿದ್ದಿತು. ತ್ರಿಕಾಲಗಳಲ್ಲಿಯೂ ಲಿಂಗಪೂಜೆಯು ಅವಿಚ್ಛಿನ್ನವಾಗಿ ಸಕಾಲಕ್ಕೆ ನಡೆಯಲಾರಂಭವಾಯಿತು. ಸರ್ವ ಶಕ್ತಿ, ಸರ್ವ ವೃತ್ತಿ, ಸರ್ವ ಭಾವನೆಗಳೆಲ್ಲ ಲಿಂಗಪೂಜೆಯಲ್ಲಿಯೇ ಲಯವಾಗಲಾರಂಭಿಸಿದವು. ಶ್ರೀ ಪ್ರಭುದೇವರು ನುಡಿದ ಈ ಕೆಳಗಿನ ವಚನದಂತೆಯೇ ಆಗ ಶಿವಯೋಗಿಗಳವರ ಸ್ಥಿತಿಯಿದ್ದಿತೆಂದು ಧಾರಾಳವಾಗಿ ಹೇಳಬಹುದು.

ಸ್ವಸ್ಥಾನ ಸುಸ್ಥಿರ ಸುಮನ ಮಂಟಪದೊಳಗೆ
ನಿತ್ಯನಿರಂಜನದ ಪ್ರಭೆಯ ಬೆಳಗು, ಶಿವಯೋಗದನುಭಾವವು ಏಕಾರ್ಥವಾಗಿ
ಗುಹೇಶ್ವರ ನಿಮ್ಮ ಶರಣನು ಅನುಪಮ ಸುಖಿಯಾಗಿರ್ದ.

ಮನಸ್ಸು ನಾನಾ ವಿಷಯಗಳಲ್ಲಿ ಸಂಚರಿಸುವುದುಂಟಷ್ಟೆ. ಅದಕ್ಕೆ ಯೋಗ್ಯವಾದ ಶಿಕ್ಷಣವನ್ನು ಅವ್ಯಾಹತವಾಗಿ ಬಹುಕಾಲ ಕೊಟ್ಟದ್ದಾದರೆ ಅದು ನಮ್ಮ ಅಧೀನವಾಗುತ್ತದೆ. ಅಭ್ಯಾಸ ಮತ್ತು ವೈರಾಗ್ಯಗಳಿಂದಲೇ ಆ ಮನಸ್ಸನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವುದು ಸಾಧ್ಯ.

ಶ್ರೀ ಶಿವಯೋಗಿಗಳು ೨೬ ವರುಷ ಅಭ್ಯಾಸ ಮತ್ತು ವೈರಾಗ್ಯಗಳಿಂದ ಮನಸ್ಸಿಗೆ ಲಿಂಗಪೂಜೆಯಲ್ಲಿ ಆಸಕ್ತವಾಗುವ ಸುಸಂಸ್ಕಾರವನ್ನು ಕೊಟ್ಟಿದ್ದರಷ್ಟೆ. ಅದರಿಂದ ಆ ಮನಸ್ಸು ಸುಮನವಾಗಿತ್ತು. ಇಂತಹ ಒಳ್ಳೆಯ ಮನಸ್ಸು ಮತ್ತು ಶಿವಯೋಗದನುಭವಜ್ಞಾನ ಇವೆರಡೂ ಕೂಡಿದ ಮೇಲೆ ಆನಂದಕ್ಕೆ ಎಣೆಯುಂಟೆ? ಅಂತೆಯೇ ಇಂತಹ ಶರಣರು ಪರಮ ಸುಖಿಗಳಾಗಿರುತ್ತಾರೆಂದು ಪ್ರಭುದೇವರು ಮೇಲಣ ವಚನದಲ್ಲಿ ಹೇಳಿದ್ದಾರೆ.

ಶ್ರೀ ಶಿವಯೋಗಿಗಳು ಯೋಗಮಂಟಪದಲ್ಲಿ ವಾಸಿಸಲುಪಕ್ರಮಿಸಿದನಂತರ ನಿತ್ಯ ಕರ್ಮಗಳು ಈ ಪ್ರಕಾರ ಪ್ರಾರಂಭವಾದವು. ಪ್ರತಿನಿತ್ಯ ಪ್ರಾತಃಕಾಲ ೪ ಗಂಟೆಗೆ ಶಿವನಾಮಸ್ಮರಣೆ ಮಾಡುತ್ತ ಏಳುವುದು, ಅನಂತರ ಕರಚರಣಾದಿ ಅವಯವಗಳನ್ನು ತೊಳೆದುಕೊಂಡು ಭಸ್ಮಧಾರಣ ಮಾಡಿ ತಮ್ಮ ಯೋಗಮಂಟಪವನ್ನು ಮತ್ತು ಅದರ ಸುತ್ತಲಿನ ಸ್ಥಳವನ್ನು ತಾವೇ ಬಹು ಶುಚಿಯಾಗಿ ಉಡುಗುವುದು.

ಬೆಳಗಾದನಂತರ ಊರ ಹೊರಗೆ ಸಂಚರಿಸಿ ಶೌಚಾದಿ ವಿಧಿಗಳನ್ನು ತೀರಿಸಿಕೊಂಡು ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಂಡು ಹೂದೋಟದಲ್ಲಿ ಪತ್ರೆಪುಷ್ಪಗಳನ್ನು ಗಿಡಗಳಿಗೆ ಅಪಾಯವಾಗದಂತೆ ಬಹು ಮೆಲ್ಲಗೆ ಉಪಾಯದಿಂದ ಮಿತವಾಗಿಯೇ ಎತ್ತಿಕೊಂಡು ಬಂದು ತಮ್ಮ ಪ್ರಾತಃಕಾಲದ ಪೂಜೆಯನ್ನು ಪೂರೈಸಿಕೊಳ್ಳುತ್ತಿದ್ದರು. ಈ ಆಚರಣೆಯು ಮಹಾನುಭಾವರಾದ ಆ ಬಸವಣ್ಣನವರ ಈ ಕೆಳಗಿನ ವಚನದ ಅರ್ಥವೆಂದು ಹೇಳಬಹುದು.

ಹೊತ್ತಾರೆ ಎದ್ದು ಅಗ್ಗವಣಿ ಪತ್ರೆಯ ತಂದು,
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ,
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.

ಲಿಂಗಪೂಜೆಯ ಸಾಮಗ್ರಿಗಳು ಬಹು ಮಿತವಾಗಿಯೇ ಇದ್ದವು. ಎಲ್ಲವುಗಳನ್ನೂ ತಿಕ್ಕಿ ತೊಳೆಯುವ ಕಾರ್ಯವು ತಮ್ಮದೇ ಆಗಿದ್ದಿತು. ತಮ್ಮ ಅಥವಾ ಲಿಂಗಪೂಜೆಯ ಯಾವ ಕಾರ್ಯವನ್ನೂ ಅನ್ಯರಿಗೆ ವಹಿಸುತ್ತಿರಲಿಲ್ಲ. ಅತ್ಯಂತ ಮುಪ್ಪಿನಲ್ಲಿಯೂ ಕೂಡಾ ಇದೇ ಆಚರಣೆಯಿದ್ದಿತು. ಯಾರಾದರೂ ಸೇವೆಗೆ ನೆರವಾದರೆ ಬೇಡ, ಶಿವನು ಕೈಕಾಲುಗಳನ್ನು ಕೊಟ್ಟಿದ್ದಾನೆ. ಅವು ದುಡಿಯಬೇಕು. ಎಂದು ಹೇಳಿ ತಾವೇ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದರು. ಶ್ರೀ ಬಸವಣ್ಣನವರ ಈ ಕೆಳಗಿನ ವಚನಾಭಿಪ್ರಾಯವೇ ಅವರ ಸ್ವಂತಾಚರಣೆಯಲ್ಲಿದ್ದಿತು.

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತ ಬಲ್ಲರು
ಕೂಡಲಸಂಗಮದೇವಾ

ಪತ್ರೆಪುಷ್ಪಗಳನ್ನು ರಾಶಿಯಾಗಿ ಎಂದೂ ತರುತ್ತಿರಲಿಲ್ಲ. ಯಾರಾದರೂ ತೆಗೆದುಕೊಂಡು ಬಂದು ಅತ್ತಿತ್ತ ಚಲ್ಲಿದರೆ ಶಿವನು ಕೊಟ್ಟಿದ್ದಾನೆಂದು ಹೀಗೆ ಕೆಡಿಸಬಾರದು ಎಂದು ಹೇಳುತ್ತಿದ್ದರು. ಬಂಡಿ ತುಂಬ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆರೆಯುವ ರೀತಿಯು ಪ್ರಮಥರಂತೆಯೇ ಶಿವಯೋಗಿಗಳಿಗೂ ಮಾನ್ಯವಿರಲಿಲ್ಲ.

ಪತ್ರೆ ಇಲ್ಲದಿದ್ದರೆ ಇಲ್ಲವೆಂದು ಹಾಗೆಯೇ ಲಿಂಗಪೂಜೆಯನ್ನು ಮಾಡುತ್ತಿರಲಿಲ್ಲ. ಲಿಂಗಪೂಜೆಯಲ್ಲಿ ಇಂಥ ಯಾವ ಆಲಸಿಕೆಯೂ ಇರಲಿಲ್ಲ. ಮನೋಹರವಾದ ಒಂದೆರಡು ದಳಗಳಾದರೂ ಇರಲೇಬೇಕು. ಅವು ದೊರೆಯುವ ವರೆಗೂ ಎಲ್ಲೆಲ್ಲಿಯೋ ಸಂಚರಿಸುತ್ತಿದ್ದರು.

ಪುಷ್ಯ ಮಾಘ ಮಾಸಗಳಲ್ಲಿ ಪತ್ರೆ ಗಿಡದ ದಳಗಳು ಉದುರಿಹೋಗುವುದುಂಟಷ್ಟೆ. ಆಗ ಪತ್ರೆ ದೊರೆಯುವುದು ದುರ್ಲಭ. ಅಂತಹ ಕಾಲದಲ್ಲಿ ಎರಡು ಮೂರಾವರ್ತಿ ಶಿವಯೋಗಿಗಳು ಪತ್ರೆಗಾಗಿ ಶ್ರಮಪಟ್ಟಿದ್ದು ಬಹು ಜನರ ಸ್ಮರಣೆಯಲ್ಲಿದೆ. ಪಾದದರಲ್ಲಿ ಮುಳ್ಳು ನಟ್ಟಿದ್ದರೂ ಅತ್ತ ಲಕ್ಷಿಸದೆ ಪತ್ರೆಯ ಶೋಧದಲ್ಲಿಯೇ ಸಂಚರಿಸುತ್ತಿದ್ದರು. ಇದನ್ನು ನೋಡಿ ಬಹು ಜನರು ನೊಂದುಕೊಂಡರು. ಆದರೆ ಆ ಮಹಾತ್ಮರಿಗೆ ಪತ್ರೆ ದೊರೆತೊಡನೆ ಶಿವನು ಕೊಟ್ಟನೆಂದು ಅತ್ಯಾನಂದ ಹೊಂದುತ್ತಿದ್ದರು.

ಲಿಂಗಪೂಜೆಯ ವಿಷಯದಲ್ಲಿ ಎಳ್ಳಷ್ಟಾದರೂ ಯಾವ ಕಾಲಲ್ಲಿಯೂ ಆಲಸಿಕೆಯಿರಲಿಲ್ಲ. ಆ ವಿಚಾರದಲ್ಲಿ ತುಂಬಾ ಛಲವುಳ್ಳವರೇ ಆಗಿದ್ದರೆಂದು ಹೇಳಬಹುದು. ಹೀಗೆ ಛಲವಿರಬೇಕೆಂದು ಪ್ರಮಥರು ಹೇಳಿದ್ದಾರೆ.

ಆದಂತೆ ಆಗಲಿ, ಮಾದಂತೆ ಮಾಣಲಿ, ಎನಲಾಗದು,
ನೇಮದಾತಂಗೆ ಛಲಬೇಕು ಛಲಬೇಕಯ್ಯ ಹಿಡಿದುದ ಬಿಡಲಾಗದು.
ಹುಲಿಗೆರೆಯ ವರದ ಸೋಮನಾಥನ
ಮನ ಮುಟ್ಟಿದ ಧೀರನು ಏತಕ್ಕೂ ಸೋಲುವವನಲ್ಲ.

ಆದಕಾರಣ ಲಿಂಗಪೂಜೆಯು ಆದಂತಾಗಲಿ ಎಂದು ಆ ಶಿವಲಿಂಗದೇವನ ಸೇವೆಯಲ್ಲಿ ಆಲಸಿಕೆಯನ್ನು ಹೊಂದಿರಲಿಲ್ಲ. ಎಲ್ಲಿ ಭಕ್ತಿಯುಂಟೋ ಅಲ್ಲಿ ಆಲಸಿಕೆಯುಂಟೆ? ನಾವು ಯಾರಲ್ಲಿ ಪ್ರೇಮಾದರಗಳನ್ನು ಅಂತಃಕರಣಪೂರ್ವಕವಾಗಿಟ್ಟಿರುತ್ತೇವೆಯೋ ಅವರ ಸೇವಾಸತ್ಕಾರಗಳಲ್ಲಿ ನಾವು ಸೋಮಾರಿಗಳಾಗುವೆವೋ? ಹಾಗೆ ಸೋಮಾರಿತನವುಳ್ಳವರು ನಿಜವಾದ ಪ್ರೇಮಿಗಳೆನ್ನಬಹುದೋ? ಆ ಶಿವಲಿಂಗ ದೇವನಲ್ಲಿ ಅಗಾಧವಾದ ಭಕ್ತಿಯುಳ್ಳವರಾಗಿದ್ದುದರಿಂದ ಯಾವ ಸೇವೆಯನ್ ಸ್ವಲ್ಪವೂ ಕೊರತೆಯಿಲ್ಲದೆ ಮಾಡುತ್ತಿದ್ದರು.

ಛಲವಿರಬೇಕು ಭಕ್ತಿಯ ಮಾಡುವಲ್ಲಿ, ಹಿಡಿದು ಬಿಡೆನೆಂಬ
ಛಲವಿರಬೇಕು ನಿತ್ಯ ನೇಮದಲ್ಲಿ ಹಿಡಿದು ಬಿಡೆನೆಂಬ
ಛಲವಿರಬೇಕು ನಮ್ಮ ಅಖಂಡೇಶ್ವರ ಲಿಂಗವ ಕೂಡಿ ಅಗಲಬಾರದೆಂಬ ನೈಷ್ಠೆಯಲ್ಲಿ.

ಶ್ರೀ ಷಣ್ಮುಖಸ್ವಾಮಿಗಳು ಹೇಳಿರುವ ಮೇಲಣ ವಚನದಂತೆಯೇ ಲಿಂಗಪೂಜೆಯ ನಿತ್ಯ ನಿಯಮಗಳನ್ನು-ಶ್ರೀ ಶಿವಯೋಗಿಗಳು ತಪ್ಪದೇ ಆಚರಿಸುವವರಾಗಿದ್ದರು. ಬೆಳಗಿನ ಪೂಜೆಯನಂತರ ಮತ್ತೆ ಮಧ್ಯಾಹ್ನದ ಪೂಜೆ. ಆ ಮೇಲೆ ಅಪ್ಪನವರ ವಚನಾನುಭವ. ಆ ಬಳಿಕ ಸಾಯಂಕಾಲದ ಪೂಜೆಗೆ ಹೊರಡುವದು. ಈ ಪ್ರಕಾರ ಲಿಂಗಪೂಜೆಯ ಕಾರ್ಯವು ಸಕಾಲಕ್ಕೆ ತಪ್ಪದೇ ಜರುಗುತ್ತಿದ್ದಿತು.

ಪುರಾಣ, ಕೀರ್ತನೆ, ಉಪನ್ಯಾಸ ಮುಂತಾದವು ಸಾಯಂಕಾಲ ಪ್ರಾರಂಭವಾಗಿದ್ದರೂ ಶಿವಯೋಗಿಗಳ ಪೂಜೆಯ ಕಾಲದೊಳಗಾಗಿಯೆ ಅವು ಪೂರೈಸುತ್ತಿದ್ದವು. ಒಂದು ವೇಳೆ ಪೂರೈಸದಿದ್ದರೆ ಅವರು ಸಕಾಲಕ್ಕೆ ತಮ್ಮ ಕಾರ್ಯಕ್ಕೆ ಹೊರಟುಬಿಡುತ್ತಿದ್ದರು.

ಕಾಯಾ ವಾಚಾ ಮನಸ್ಸುಗಳಿಂದ ಮೊದಲು ಪರಮ ಪವಿತ್ರರಾಗಿ ನೈತಿಕ ಬಲದಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಅನಂತರ ಅದನ್ನು ಈ ಪ್ರಕಾರ ಶಿವಲಿಂಗದೇವನ ಸೇವೆಗೆ ಹಚ್ಚಿದರೆ ಆ ನಿಷ್ಠೆಯ ಬೆಳಕು ಎಲ್ಲೆಲ್ಲಿಯೂ ಬೆಳಗದೆ ಬಿಟ್ಟೀತೆ? ಬೆಳಕು ತಾನು ಕಾಣಿಸಿಕೊಳ್ಳಬಾರದೆಂದು ಕತ್ತಲೆಯಲ್ಲಿ ಅಡಗಿಕೊಂಡಿರುವುದು ಶಕ್ಯವೆ? ಶಿವಯೋಗಿಗಳ ಅಪಾರವಾದ ಆ ಲಿಂಗನಿಷ್ಠೆಯ ಬೆಳಕೇ ಅಸಂಖ್ಯ ಭಕ್ತರನ್ನು ಎಳೆದುಕೊಳ್ಳಲಾರಂಭಿಸಿತು. ಅಥಣಿಯು ಪರಮಪವಿತ್ರ ಕ್ಷೇತ್ರಸ್ಥಳವಾಯಿತು. ಪ್ರತಿನಿತ್ಯ ಅನೇಕ ಭಾವಿಕರು ಬೇರೆ ಬೇರೆ ಭಾಗಗಳಿಂದ ತಂಡೋಪತಂಡವಾಗಿ ಬರಲಾರಂಭಿಸಿದರು.

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು?
ಅದು ಪಟ್ಟಣವೆಂದೆನಿಸುವುದು.
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಕಾಣಾ ರಾಮನಾಥಾ.

ಶ್ರೀ ದಾಸಿಮಯ್ಯನವರು ನುಡಿದ ಮೇಲಣ ವಚನದಲ್ಲಿಯ ಮೊದಲನೆಯ ಸಿದ್ಧಾಂತವು ಶ್ರೀ ಶಿವಯೋಗಿಗಳ ಕಾಲದಲ್ಲಿ ಅಥಣಿಗೆ ತುಂಬಾ ಅನ್ವಯಿಸುವಂತಿದ್ದಿತು. ಭಕ್ತಿ ಭಾವವುಳ್ಳ ಎಲ್ಲ ಮತಪಂಥದವರೂ ಶಿವಯೋಗಿಗಳ ದರ್ಶನ ಹೊಂದುವುದು ಮಹದ್ಭಾಗ್ಯವೆಂದೇ ತಿಳಿದಿದ್ದರು. ಅಥಣಿಗೆ ಬಂದ ಲೋಕಮಾನ್ಯ ಟಿಳಕರಂಥ ಮಹಾ ದೇಶಭಕ್ತರಾಗಲಿ, ಅಥವಾ ಬೇರೆ ದೊಡ್ಡ ದೊಡ್ಡ ಅಧಿಕಾರಿಗಳಾಗಲಿ, ಪ್ರಸಿದ್ಧ ವ್ಯಾಪಾರಿಗಳಾಗಲಿ, ಯಾರು ಯಾವ ಮತಪಂಥದವರಿದ್ದರೂ ಶಿವಯೋಗಿಗಳ ದರ್ಶನ ಹೊಂದಬೇಕೆಂದೇ ಇಚ್ಛಿಸುತ್ತಿದ್ದರು. ಈ ಪ್ರಕಾರ ಕೇವಲ ಲಿಂಗಪೂಜೆಯ ನಿಷ್ಠೆಯಿಂದಲೇ ಹೀಗೆ ಸಕಲರಿಗೂ ಪರಮಪೂಜ್ಯ ವಿಭೂತಿಗಳಾದುದನ್ನು ನೋಡಿದರೆ ಬಸವಣ್ಣನವರ ಈ ಕೆಳಗಿನ ವಚನದ ಸತ್ಯತೆಯು ಸ್ಪಷ್ಟವಾಗುತ್ತದೆ.

ಹೊಯ್ದರೆ ಹೊಯ್ಗಳು ಕಯ್ಯಮೇಲೆ, ಬಯ್ದರೆ ಬಯ್ಗಳು ಕಯ್ಯಮೇಲೆ,
ಹಿಂದಣ ಜನನವೇನಾದಡಾಗಲಿ, ಇಂದಿನ ಭೋಗವು ಕಯ್ಯಮೇಲೆ.
ಕೂಡಲ ಸಂಗಮದೇವಯ್ಯಾ
ನಿಮ್ಮ ಪೂಜಿಸಿದ ಫಲವು ಕಯ್ಯಮೇಲೆ

ಹಿಂದಿನ ಪ್ರಮಥರ ವಚನದಂತೆ ನಿಷ್ಠೆಯಿಂದ ನಡೆದ ಕಾರಣ ಶ್ರೀ ಶಿವಯೋಗಿಗಳು ಹೇಗೆ ಇಂದಿನ ಪ್ರಮಥರಾದರೋ ಹಾಗೆಯೇ ಇನ್ನು ಮುಂದೆ ಯಾರು ಈ ಪ್ರಕಾರ ನಿಷ್ಠೆಯಿಂದ ನಡೆಯುವರೋ ಅವರು ಕೂಡಾ ಮುಂದಣ ಪ್ರಮಥರಾಗಲು ಅಡ್ಡಿಯಿಲ್ಲ. ಏಕೆಂದರೆ ತಾವು ಸ್ಥಾಪಿಸುವಂತೆ ಲಿಂಗದಲ್ಲಿ ದೈವತ್ವವು ಹಿಂದೆ ಉಂಟಾದಂತೆ ಈಗಲೂ ಉಂಟಾಗುತ್ತದೆ. ಇನ್ನು ಮುಂದೆಯೂ ಉಂಟಾಗುವುದು.

ಕಾಮಕ್ರೋಧಾದಿ ಮನೋವೃತ್ತಿಗಳು ಹೇಗೆ ನಮ್ಮಲ್ಲಿಯೇ ಉಂಟಾಗಿ ಅವು ನಮ್ಮ ನಾಶಕ್ಕೇನೆ ಕಾರಣವಾಗುತ್ತವೆಯೋ ಹಾಗೆಯೇ ದಯೆ, ಶಾಂತಿ, ಭಕ್ತಿ ಮೊದಲಾದ ಮನೋವೃತ್ತಿಗಳು ಕೂಡಾ ನಮ್ಮಲ್ಲಿಯೇ ಉಂಟಾಗಿ ನಮ್ಮ ಉನ್ನತಿಗೆ ಕಾರಣವಾಗುತ್ತವೆ. ಕಾಮಾದಿ ವಿಕಾರಗಳುಂಟಾಗಲು ಹೇಗೆ ಬಾಹ್ಯ ಉಪಕರಣಗಳು ಸಾಧನವಾಗುತ್ತವೆಯೋ ಮತ್ತು ಅವುಗಳಲ್ಲಿ ನಮ್ಮ ಭಾವ ಬಲಿತರೆ ಮಾತ್ರ ಅವು ಆಯಾಯ ಸ್ಥಿತಿಗಳನ್ನುಂಟು ಮಾಡುತ್ತವೆಯೋ ಹಾಗೆಯೇ ಧೈವೀ ಶಕ್ತಿಯು ಕೂಡಾ ನಮ್ಮಲ್ಲುಂಟಾಗಲು ಲಿಂಗಪೂಜಾದಿ ಬಾಹ್ಯಕ್ರಿಯೆಗಳು ಬೇಕೇ ಬೇಕು. ಮತ್ತು ಆ ಕ್ರಿಯೆಗಳಲ್ಲಿ ದೈವೀ ಭಾವನೆಯೂ ದೃಢಗೊಂಡಿರಬೇಕು. ಹಾಗಾದರೇನೇ ಲಿಂಗಪೂಜೆಯು ಇಷ್ಟು ಫಲಕಾರಿಯಾಗುತ್ತದೆ.

❖❖

೫ನೆಯ ಪ್ರಕರಣ

ಜಂಗಮಜ್ಯೋತಿ

ಶ್ರೀ ಶಿವಯೋಗಿಗಳು ಜಂಗಮವರೇಣ್ಯರಾಗಿದ್ದರಷ್ಟೆ. ಆದುದರಿಮದ ಅವರ ದಿವ್ಯತರವಾದ ಆತ್ಮಜ್ಯೋತಿಯು ಎಲ್ಲೆಲ್ಲಿಯೂ ಪ್ರಕಾಶಿಸಿದ್ದಿತು. ಆ ಮಹಾಪೂಜ್ಯರ ಸನ್ನಿಧಿಯಲ್ಲಿ ತಮ್ಮ ಸೇವೆಯನ್ನು ಸಮರ್ಪಿಸಿ ಕೃತಾರ್ಥರಾಗಬೇಕೆಂದು ನಾನಾ ಭಾಗಗಳಿಂದ ಅನೇಕ ಪಂಡಿತರು ತಾವಾಗಿಯೇ ಅಲ್ಲಿಗೆ ಬಂದು ಪುರಾಣ, ಕೀರ್ತನೆ ವ್ಯಾಖ್ಯಾನಗಳ ಮೂಲಕ ಧರ್ಮ ಜಾಗೃತಿಯನ್ನು ಮಾಡುತ್ತಿದ್ದರು.

ಶ್ರೀ ಶಿವಯೋಗಿಗಳ ಸನ್ನಿಧಿಯಲ್ಲಿ ಗಣಾರಾಧನೆಯನ್ನು ಮಾಡಿಸಿ ಕೃತಾರ್ಥರಾಗಬೇಕೆಂದು ಅನೇಕ ಧನಿಕರು ಅಥಣಿ ಗಚ್ಚಿನಮಠಕ್ಕೆ ಬಂದು ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಆದುದರಿಂದ ಪ್ರತಿನಿತ್ಯ ಅನೇಕ ಜನಗಳಿಗೆ ತನುಮನಗಳ ತಾಪನಿವಾರಣೆಗೆ ಶಿವಪ್ರಸಾದ ಮತ್ತು ಶಿವಾನುಭವ ಗೋಷ್ಠಿಗಳು ಲಭಿಸುತ್ತಿದ್ದವು.

ಮಹಾಧನಿಕರು ಎಷ್ಟೋ ಹಣವನ್ನು ವೆಚ್ಚಮಾಡಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿದರೂ ಕೂಡಾ ನಡೆಯಲಾರದಂತಹ ವಿತರಣೆ ಸೌಕರ್ಯ, ಸದ್ಬೋಧಗಳೆಲ್ಲಾ ಇಲ್ಲಿ ಜರಗುತ್ತಿದ್ದುದೇಕೆ? ಮಂತ್ರತಂತ್ರಗಳನ್ನು ಮಾಡುತ್ತಿರಬಹುದು; ಇಲ್ಲವೆ ಔಷಧೋಪಚಾರಗಳನ್ನು ತಿಳಿಸುತ್ತಿರಬಹುದು; ಅಥವಾ ಜನರ ಇಷ್ಟಾನುಸಾರ ಶುಭ ಸಂಗತಿಗಳನ್ನು ಸೂಚಿಸುತ್ತಿರಬಹುದು; ಅದಕ್ಕೋಸ್ಕರ ಭಾವಿಕರು ಹೀಗೆ ತಂಡೋಪತಂಡವಾಗಿ ಬರುತ್ತಿದ್ದರೆಂದು ಯಾರಾದರೂ ಯೋಚಿಸಿದರೆ ಅದು ಶುದ್ಧ ತಪ್ಪು. ಇಂತಹ ಯಾವ ಕಾರ್ಯಗಳಿಗೂ ಅಲ್ಲಿ ಎಳ್ಳಷ್ಟಾದರೂ ಅವಕಾಶವಿರಲಿಲ್ಲ.

ಶಿವಯೋಗಿಗಳ ದರ್ಶನಕ್ಕೆ ಪಂಡಿತರು ಬಂದರೂ ಒಂದೇ ರೀತಿ; ಪಾಮರರು ಬಂದರೂ ಒಂದೇ ರೀತಿ. ಧನಿಕರು ಬಂದರೆ ಅವರ ವಿಚಾರದಲ್ಲಿ ಶಿವಯೋಗಿಗಳು ಹೆಚ್ಚು ಲಕ್ಷಿಸುತ್ತಿರಲಿಲ್ಲ. ದರಿದ್ರರು ಬಂದಿದ್ದಾರೆಂದು ಉಪೇಕ್ಷಿಸುತ್ತಿರಲಿಲ್ಲ. ಒಬ್ಬರ ಸಂಗಡ ಒಂದು ವಿಚಾರವಾಗಿ ಸಂಭಾಷಿಸುವ ರೂಢಿಯೇ ಬಹು ಕಡಿಮೆ ಎಂದ ಮೇಲೆ ಬೇರೆ ಬೇರೆ ಸಂಗತಿಗಳ ಪ್ರಸ್ತಾಪಕ್ಕೆ ಅವಕಾಶವೆಲ್ಲಿ?

ಯಾರಿಗೂ ಎಂದೂ ಏನನ್ನೂ ಕೇಳಿದುದಿಲ್ಲ. ಲಿಂಗಪೂಜೆಯ ವ್ರತವೇ ವ್ರತ. ಇಂತಹ ದಿವ್ಯತರವಾದ ಪ್ರಮಥಾಚಾರವು ಆ ಮಹಾತ್ಮರಲ್ಲಿ ಅಳವಟ್ಟಿದ್ದರಿಂದಲೇ ಸಕಲ ಸತ್ಕಾರ್ಯಗಳೂ ಅಲ್ಲಿ ತಾವಾಗಿಯೇ ಜರುಗುತ್ತಿದ್ದವು. ಶ್ರೀ ಸಕಳೇಶ ಮಾದರಸರು ಹೇಳಿದ ಈ ಕೆಳಗಿನ ವಚನಾಭಿಪ್ರಾಯಕ್ಕೆ

ಶಿವಯೋಗಿಗಳ ಸನ್ನಿಧಿಯಲ್ಲಿ ನಡೆಯುತ್ತಿದ್ದ ಆಗಿನ ಕಾರ್ಯಗಳು ದೃಷ್ಟಾಂತವಾಗಿದ್ದವೆಂದು ಹೇಳಬಹುದು.

ಅದು ಬೇಕು, ಇದು ಬೇಕೆಂಬ ಎದೆಗುದಿಹತನ ಬೇಡ,
ಸಮಾಧಾನಿಯಾಗಿರ್ದಡೆ ಸಾಕು. ಪಡಿಪದಾರ್ಥ ತಾನಿದ್ದೆಡೆಗೆ ಬಹುದು.
ನಿಧಿ ನಿಕ್ಷೇಪಂಗಳು ಇರ್ದೆಡೆಗೆ ಬಹವಯ್ಯಾ
ಹೃದಯ ಶುದ್ಧವಾಗಿ ಸಕಳೇಶ್ವರದೇವ ಶರಣೆಂದಡೆ ನಿಜಪದವನೀವನು.

ಪ್ರಾಪಂಚಿಕ ಪದಾರ್ಥಗಳು ನಮಗೆ ಬೇಕೆಂದು ನಾವು ಅವುಗಳ ಬೆನ್ನು ಹತ್ತಿದರೆ ಅವು ದೂರ ಹೋಗುತ್ತವೆ. ಅವುಗಳನ್ನು ಉಪೇಕ್ಷಿಸಿ ನಾವು ಪಾರಮಾರ್ಥದ ಕಡೆಗೆ ತಿರುಗಿದರೆ ಅವು ನಮ್ಮ ಬೆನ್ನುಹತ್ತಿ ಬರುತ್ತವೆ. ಶಿವಯೋಗಿಗಳು ಧನಧಾನ್ಯಾದಿಗಳನ್ನು ಉಪೇಕ್ಷಿಸಿ ಶಿವನ ಕಡೆಗೆ ತಿರುಗಿದ್ದರು. ಆದುದರಿಂದಲೇ ಅವರಿದ್ದಲ್ಲಿಗೆ ಅವು ರಾಶಿ ರಾಶಿಯಾಗಿ ಎಲ್ಲೆಲ್ಲಿಂದಲೋ ಬರುತ್ತಿದ್ದವು.

ಹೀಗಿರಬೇಕಾದುದೇ ಜಂಗಮ ಲಕ್ಷಣ. ಜಂಗಮ ಸ್ವಾಮಿಯು ತನಗಾಗಿ ಜೀವಿಸುವುದಿಲ್ಲ. ಲೋಕೋಪಕಾರಕ್ಕಾಗಿಯೇ ಜೀವಿಸುವುದು.

ಗಿಡಗಳು ಗಾಳಿ ಬಿಸಿಲುಗಳ ತಾಪವನ್ನು ತಾಳಿಕೊಂಡು ಫಲಪುಷ್ಪಗಳನ್ನು ಹೊತ್ತುಕೊಂಡಿರುವುದೇಕೆ? ತಮಗಾಗಿಯೇ? ಅಲ್ಲವೇ, ಅಲ್ಲ, ತಮ್ಮಲ್ಲಿ ಬರುವ ಪ್ರಾಣಿಗಳಿಗಾಗಿಯೇ ಅವು ಹೇಗೆ ಆ ಫಲಪುಷ್ಪಗಳನ್ನು ಹೊತ್ತುಕೊಂಡಿರುತ್ತವೆಯೋ ಹಾಗೆಯೇ ಅನೇಕ ಪರಜಂಗಮರು ಕೂಡಾ ತಮ್ಮಲ್ಲಿಗೆ ಬರುವ ಭಕ್ತರ ಉದ್ಧಾರಕ್ಕಾಗಿಯೇ ತಾವು ಲಿಂಗ ಪೂಜಾದಿ ಸತ್ಕಾರ್ಯಗಳನ್ನು ವಹಿಸಿಕೊಂಡಿರುತ್ತಾರೆ! ಹೂವು ಅರಳಿದೊಡನೆ ಅದರ ಗಂಧವು ಸುತ್ತಲೂ ಹರಡುವುದು ಹೇಗೆ ಸ್ವಾಭಾವಿಕವೋ ಹಾಗೆಯೇ ಲಿಂಗಪೂಜಾದಿ ಸತ್ಕಾರ್ಯಗಳು ಇಂಥ ಮಹಾತ್ಮರಲ್ಲುಂಟಾದರೆ ಅವುಗಳ ಸಾತ್ವಿಕ ಫಲಗಳು ತಾವಾಗಿಯೇ ತೋರುವುದೂ ಸಹಜ. ಆದಕಾರಣ ಜಂಗಮ ಸ್ವಾಮಿಗಳಲ್ಲಿ ಕೆಲವು ಮಹಾತ್ಮರು ಫಲ ಪುಷ್ಪಗಳ ವೃಕ್ಷಗಳಂತಿರುತ್ತಾರೆ.

ಮೋಡಗಳು ನೀರನ್ನು ತಮಗಾಗಿ ಹೊತ್ತುಕೊಂಡು ತಿರುಗಾಡದೆ ಪ್ರಾಣಿಗಳ ಹಿತಾರ್ಥವಾಗಿ ಎಲ್ಲೆಲ್ಲಿಯೂ ಮಳೆಗರೆಯಲು ಹೇಗೆ ಸಂಚರಿಸುತ್ತಿವೆಯೋ ಹಾಗೆಯೇ ಕೆಲವು ಜಂಗಮ ಸ್ವಾಮಿಗಳು ಲೋಕಹಿತಾರ್ಥವಾಗಿಯೇ ಸಂಚರಿಸಿ ಧನ ಧಾನ್ಯಾದಿಗಳನ್ನು ಕೂಡಿಸುತ್ತಾ ಅವೆಲ್ಲವನ್ನೂ ಜನಾಂಗದ ಕ್ಷೇಮಕ್ಕಾಗಿಯೇ ಸೂರೆ ಮಾಡುತ್ತಿರುತ್ತಾರೆ. ಇಂತಹ ಜಂಗಮಸ್ವಾಮಿಗಳು ಮೋಡಗಳಂತೆ ಈ ಪ್ರಕಾರ ನಿಜ ಜಂಗಮ ಸ್ವಾಮಿಗಳ ಉಭಯ ವಿಧ ಪ್ರವೃತ್ತಿಗಳಲ್ಲಿ ಶ್ರೀ ಶಿವಯೋಗಿಗಳವರು ಫಲವೃಕ್ಷಗಳಂತೆ ಒಂದೇ ಕಡೆಗಿದ್ದು ಲೋಕಕಲ್ಯಾಣವನ್ನು ಮಾಡುವವರಾಗಿದ್ದರು.

ಈ ಮಹಾಪೂಜ್ಯರ ಸನ್ನಿಧಿಯಲ್ಲಿ ಅನೇಕರು ಅನೇಕ ಮಹತ್ಕಾರ್ಯಗಳನ್ನು ತಾವಾಗಿಯೇ ಬಂದು ಮಾಡುತ್ತಿದ್ದರು. ಅನೇಕ ಸಾರೆ ಮಹಾ ಮಹಾ ಪುರಾಣ ಶ್ರವಣ ಸಮಾರಂಭಗಳನ್ನು ನಡೆಸಿದಂತೆಯೇ ಒಂದು ಸಾರೆ ೬೩ ಪುರಾತನರ ಪೂಜೆಯ ಮಹತ್ಕಾರ್ಯವನ್ನೂ ಅನೇಕ ಭಕ್ತರು ಸೇರಿ ಶ್ರೀ ಶಿವಯೋಗಿಗಳವರ ಸನ್ನಿಧಿಯಲ್ಲಿ ಜರುಗಿಸಿದರು. ಆ ಕಾಲಕ್ಕೆ ಕೂಡಿದ್ದ ಎಷ್ಟೋ ದರಿದ್ರರಿಗೂ ಅಂಗಹೀನರಿಗೂ ಶಿವಯೋಗಿಗಳ ಹಸ್ತ ಸ್ಪರ್ಶಮಾಡಿಸಿ ಸಹಸ್ರಾವಧಿ ರೂಪಾಯಿಗಳನ್ನು ಅನೇಕ ಧನಿಕರು ಸೂರೆಮಾಡಿಸಿದರು.

ಆ ಪೂಜೆಯ ಕಾಲದ ವೈಭವ ಅಸಾಧಾರಣವಾಗಿದ್ದಿತು. ಜನರು ದಾನ ಮಾಡುವುದರಲ್ಲಿ ಬಹು ಉತ್ಸಾಹಭರಿತಾಗಿದ್ದರು. ಇದರಲ್ಲಿ ಫಲಾಪೇಕ್ಷಿಗಳೇ ಹೆಚ್ಚಾಗಿರುವುದು ಸ್ವಾಭಾವಿಕವಷ್ಟೆ ಅದಕ್ಕಾಗಿ ಅವರು ತಾವು ದಾನಮಾಡಿದ್ದು ಶ್ರೀ ಶಿವಯೋಗಿಗಳವರ ದೃಷ್ಟಿಗೆ ಬೀಳಬೇಕೆಂಬ ಕುತೂಹಲವುಳ್ಳವರಾಗಿಯೇ ಇರುತ್ತಿದ್ದರು. ಶಿವಯೋಗಿಗಳ ಮುಂದುಗಡೆ ಆ ದಿನ ರೂಪಾಯಿಗಳನ್ನು ತಂದು ತಂದು ಅರ್ಪಿಸುವುದರಲ್ಲಿ ತೆರಪಿರಲಿಲ್ಲ.

ಪುರಾತನರ ಪೂಜಾಮಂಡಲದ ವ್ಯವಸ್ಥಾಪಕರು ಅಲ್ಲಿ ಅರ್ಪಿಸುತ್ತಿದ್ದವರ ಹೆಸರನ್ನೂ ಆ ಹಣದ ಸಂಖ್ಯೆಯನ್ನೂ ಬರೆದುಕೊಂಡು ತಮ್ಮ ಸ್ವಾಧೀನ ತೆಗೆದುಕೊಳ್ಳುತ್ತಿದ್ದರು. ಆ ದಿನ ಸಾಯಂಕಾಲಕ್ಕೆ ಜನರ ಗಲಾಟೆ ಸ್ವಲ್ಪ ಕಡಿಮೆಯಾಯಿತು. ಶಿವಯೋಗಿಗಳ ಮುಂದೆ ಯಾರೋ ಸಾಧಾರಣ ೨೦೦ ರೂಪಾಯಿಗಳನ್ನು ಇಟ್ಟು ಹೋದರು. ಆಗ ಆ ವ್ಯವಸ್ಥಾಪಕರಿರಲಿಲ್ಲ. ಆ ರೂಪಾಯಿಗಳು ಅಲ್ಲೇ ಇದ್ದವು. ಆಗ ಶಿವಯೋಗಿಗಳ ಹತ್ತಿರ ಇದ್ದ ಒಬ್ಬ ಸೇವಕನನ್ನು ಕರೆದು ಹೀಗೆ ಅಪ್ಪಣೆ ಮಾಡಿದರು.

ಅಕೋ ಅಲ್ಲಿ ಒಬ್ಬರು ನಿಂತಿದ್ದಾರೆ. ಶಿವನೂ ಇಲ್ಲಿ ರೂಪಾಯಿ ಕೊಟ್ಟಿದ್ದಾನೆ. ಅವರಿಗೆ ಕೊಟ್ಟು ಬಿಡು.

ಅಪ್ಪಣೆಯ ಪ್ರಕಾರ ಸೇವಕನು ಕೊಟ್ಟುಬಿಟ್ಟನು. ಇಂತಹ ಅದ್ವಿತೀಯ ಸ್ಥಿತಿಯು ಎಲ್ಲರಿಗೂ ಸಾಧ್ಯವೆ? ಬಸವಣ್ಣನವರು ಈ ವಿಚಾರವಾಗಿ ಹೀಗೆ ಹೇಳಿದ್ದಾರೆ.

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾರಿಂಗಳವಡುವುದಯ್ಯಾ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವರಿಲ್ಲ
ಪ್ರಮಾದವಶದಿಂ ಬಂದರೆ ಹುಸಿಯೆನೆಂಬುವರಿಲ್ಲ
ನಿರಾಶೆ, ನಿರ್ಭಯ, ಕೂಡಲಸಂಗಮದೇವಾ
ನೀನೊಲಿದ ಶರಣಂಗಲ್ಲದಿಲ್ಲ.

ತಾನಾಗಿಯೇ ಹಣ ಬಂದರೆ ಬೇಡೆನ್ನುವವರುಂಟೆ? ಜೀವ ಹೋಗುವ ಸಮಯ ಬಂದಾಗ ಸುಳ್ಳು ಹೇಳಿದರೆ ಬದುಕುತ್ತೇನೆಂದು ಗೊತ್ತಾದ ಮೇಲೆ ಸುಳ್ಳು ಹೇಳಲು ಒಪ್ಪದಿರುವವರುಂಟೆ? ಇಂಥ ನಿರಾಶೆ, ನಿರ್ಭಯ ಯಾರಿಗಿರುವವು? ಎಂದು ಬಸವಣ್ಣನವರು ತಾವೇ ಪ್ರಶ್ನೆಮಾಡಿ ಶಿವನ ಕೃಪೆಗೆ ಪಾತ್ರರಾದ ಮಹಾತ್ಮರಲ್ಲಿ ಮಾತ್ರ ಇಂಥ ನಿರಾಶೆ, ನಿರ್ಭಯಗಳಿರುತ್ತವೆಂದು ಉತ್ತರವನ್ನು ಹೇಳಿದ್ದಾರೆ. ಈ ಎರಡೂ ಸಂಗತಿಗಳು ಶಿವಯೋಗಿಗಳವರಲ್ಲಿ ದೃಢತರವಾಗಿದ್ದವೆಂದು ಈ ವರೆಗಿನ ವಿವೇಚನೆಯಿಂದ ಸ್ಪಷ್ಟವಾಗುವುದಿಲ್ಲವೆ?

ಲಿಂಗಪೂಜೆಯಂತೆಯೇ ಜಂಗಮ ದಾಸೋಹದಲ್ಲಿಯೂ ಶಿವಯೋಗಿಗಳಿಗೆ ತುಂಬಾ ಆಸಕ್ತಿಯಿದ್ದಿತು. ಈ ಮಹಾನುಭಾವರ ಕೀರ್ತಿಯನ್ನು ಕೇಳಿ ಅನೇಕ ಪೂಜ್ಯರು ಅನೇಕ ಸ್ಥಳಗಳಿಂದ ಬರುತ್ತಿದ್ದರು. ಒಂದು ಸಾರೆ ಒಬ್ಬ ವೃದ್ಧ ಜಂಗಮ ಸ್ವಾಮಿಗಳು ಶಿವಯೋಗಿಗಳ ಹತ್ತಿರ ಬಂದರು. ಆಗ ೪–೫ ತಾಸು ಹೊತ್ತಾಗಿದ್ದಿತು. ಶಿವಯೋಗಿಗಳನ್ನು ಏಕವಚನದಿಂದಲೇ ಮಾತನಾಡಿಸಿ ನಮಗೆ ಹಸಿವಾಗಿದೆ; ಹೋಳಿಗೆ ಸೀಕರಣೆ ಉಣಿಸಬೇಕೆಂದು ತಿಳಿಸಿ ಏನೇನೋ ಮಾತನಾಡಿದರು. ಅವರ ಸ್ಥಿತಿಗತಿಯೂ ಹೇಗೇಗೋ ಇದ್ದಿತು. ಆದರೂ ಶಿವಯೋಗಿಗಳು ಹೀಗೆ ಅರಿಕೆ ಮಾಡಿಕೊಂಡರು.

ಸ್ನಾನ ಪೂಜೆ ಪೂರೈಸಿರಿ. ಶಿವನು ಕೊಟ್ಟಂತಾಗಲಿ ಆ ವೃದ್ಧ ಜಂಗಮರು ಸ್ನಾನಕ್ಕೆ ತೆರಳಿದರು. ಅನಂತರ ಸ್ವಲ್ಪ ಹೊತ್ತಿನಲ್ಲಿಯೇ ಮಠಕ್ಕೆ ಮಾವಿನ ಹಣ್ಣಿನ ಒಂದು ಪುಟ್ಟಿ ಬಂದಿತು. ಮುಂಬೈಯಿಂದ ಒಬ್ಬ ಭಕ್ತರು ಮಠಕ್ಕೆ ಕಳುಹಿಸಿದ್ದರು. ಸೇಡಬಾಳ ಸ್ಟೇಶನ್ನಿನಿಂದ ಒಬ್ಬರು ಅದೇ ಸಮಯಕ್ಕೆ ತಂದು ಕೊಟ್ಟರು. ಈ ಸಂಗತಿಯನ್ನು ಆಗ ಶಿವಯೋಗಿಗಳಲ್ಲಿ ಅರಿಕೆ ಮಾಡಿಕೊಂಡದ್ದಾಯಿತು. ಆಗ ಹೀಗೆ ಅಪ್ಪಣೆಯಾಯಿತು. ಒಳ್ಳೆಯದಾಯಿತು ಆ ಜಂಗಮರೂ ಕೇಳಿದ್ದರು, ಶಿವನೂ ಕೊಟ್ಟ. ಅದು ಕಾರ್ತಿಕ ಮಾಸದಲ್ಲಿ ಸಂಭವಿಸಿತು. ಮುಂಬೈಯಲ್ಲಿ ಆ ಕಾಲಕ್ಕೆ ಮಾವಿನ ಹಣ್ಣುಗಳು ದೊರೆಯುವುದುಂಟಷ್ಟೆ.

ದೊಡ್ಡ ಮಠದವರೇ ಬರಲಿ, ಅಥವಾ ಮಹಾ ಪಂಡಿತರೇ ಬರಲಿ, ಇಲ್ಲವೆ ಪರಿಚಯವಿಲ್ಲದೆ ಇಂತಹವರೇ ಬರಲಿ, ಯಾವ ಜಂಗಮ ಸ್ವಾಮಿಗಳು ಬಂದರೂ ಅವರ ವಿಚಾರದಲ್ಲಿ ಶಿವಯೋಗಿಗಳು ಸಮಾನರಾದ ಆದರಭಕ್ತಿಗಳುಳ್ಳವರಾಗಿಯೇ ಇರುತ್ತಿದ್ದರು. ಬಸವಣ್ಣನವರ ಈ ಕೆಳಗಿನ ವಚನಾಭಿಪ್ರಾಯವು ಶಿವಯೋಗಿಗಳಲ್ಲಿ ಒಡಮೂಡಿತ್ತು.

> ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು ಕಂಡು,
> ಕಂತೆ ಬೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದರೆ
> ಪಂಚಮಹಾಪಾತಕ
> ಇದು ಕಾರಣ ಅನ್ನ ವಸ್ತ್ರ, ಧನ ಮಾಟದಲು ಎರಡಾಗಿ ಕಂಡೆನಾದಡೆ
> ನರಕದಲ್ಲಿಕ್ಕುವ ಕೂಡಲಸಂಗಮದೇವ.

ಒಂದು ಸಾರೆ ಅಥಣಿಯ ನೆರೆಹಳ್ಳಿಯಲ್ಲಿ ಅಲ್ಲಿಯ ಭಕ್ತರು ಬಸವ ಪುರಾಣವನ್ನು ಹೇಳಿಸುತ್ತಿದ್ದರು. ಅದರ ಕೊನೆಯ ಸಮಾರಂಭಕ್ಕೆ ಶ್ರೀ ಶಿವಯೋಗಿಗಳವರನ್ನು ಕರೆದುಕೊಂಡು ಹೋಗಬೇಕೆಂದು ಅಲ್ಲಿಯ ಭಕ್ತರು ಬಂದರು. ಮಠದಲ್ಲಿರುವವರಿಗೆ ಇದು ವಿಹಿತ ತೋರಲಿಲ್ಲ. ಶಿವಯೋಗಿಗಳು ನಿಮ್ಮಲ್ಲಿಗೆ ದಯಮಾಡಿಸಿದರೆ ಸರಿಯಾದ ವ್ಯವಸ್ಥೆಯಾಗಲಿಕ್ಕಿಲ್ಲ. ಅದು ಹಳ್ಳಿ, ಶಿವಯೋಗಿಗಳು ದಯಮಾಡಿಸುತ್ತಾರೆಂದು ಬಹು ಜನರು ಬರಬಹುದು. ನಿಮಗೆ ಬಹಳ ತೊಂದರೆಯಾದೀತು ಎಂದು ಆ ಜನರಿಗೆ ಮಠದ ವ್ಯವಸ್ಥಾಪಕರು ತಿಳಿಸಿದರು.

ಆ ಹಳ್ಳಿಯವರು ಅವರ ಮಾತನ್ನು ಕೇಳದೆ ಅಪ್ಪಾರ ಹತ್ತಿರ ನಾವೇ ಹೋಗಿ ಕರಕೊಂಡು ಹೋಗುತ್ತೇವೆ. ಅಪ್ಪಾರು ಬಂದರೆ ಎಲ್ಲಾ ನಡೀತದೆ ಎಂದು ಹೇಳಿ ಶಿವಯೋಗಿಗಳ ಬಳಿಗೆ ಹೋಗಿ ಬಸವ ಪುರಾಣ ನಡೆದಿದೆ, ತಾವು ಬಂದು ಪೂರೈಸಿಕೊಡಬೇಕು ಎಂದು ಹೇಳಿಕೊಂಡರು. ಅಪ್ಪನವರ ಪುರಾಣವೆಂದರೆ ಶಿವಯೋಗಿಗಳಿಗೆ ಮೊದಲೇ ಬಹು ಭಕ್ತಿವಿಶ್ವಾಸ. ಕರೆಯಲು ಬಂದ ಆ ಹಳ್ಳಿಯ ಜನರ ಭಕ್ತಿ ಭಾವಗಳನ್ನು ನೋಡಿ ಬಹು ಸಂತೋಷದಿಂದ ಬರುತ್ತೇವೆಂದು ಅಪ್ಪಣೆ ಮಾಡಿದರು. ಆಗ ಹಳ್ಳಿಯ ಜನರ ಸಂತೋಷಕ್ಕೆ ಎಣೆಯೇ ಇಲ್ಲ.

ಹಳ್ಳಿಗೆ ಹೊರಡುವ ಸಿದ್ಧತೆಯಾಯಿತು. ಅಲ್ಲಿಯ ಜನರಿಗೆ ತೊಂದರೆಯಾಗಬಾರದೆಂದು ಮಠದಿಂದಲೇ ಎಲ್ಲಾ ಪದಾರ್ಥಗಳನ್ನೂ ತೆಗೆದುಕೊಂಡು ಹೊರಟದ್ದಾಯಿತು. ಆ ಹಳ್ಳಿಗೆ ಹೋಗಿ ಅವರ ಇಷ್ಟದಂತೆ ಆ ಮಹಾ ಗಣಾರಾಧನೆಯನ್ನು ಪೂರ್ತಿಗೊಳಿಸಿ ಸಕಲರಿಗೂ ಅತ್ಯಾನಂದವನ್ನುಂಟುಮಾಡಿದರು. ಶಿವಯೋಗಿಗಳು ಈ ಪ್ರಕಾರ ಅಂಥ ಹಳ್ಳಿಗೆ ದಯಮಾಡಿಸಿ

ಆ ಭಕ್ತರ ಕಾರ್ಯವನ್ನು ಎಷ್ಟು ಸಂಭ್ರಮದಿಂದ ಸಾಂಗಗೊಳಿಸಿದರಲ್ಲಾ! ಮಠದಿಂದಲೇ ಎಷ್ಟೋ ವೆಚ್ಚವಾಯಿತು. ಹೀಗೇಕೆ ಮಾಡಿರಬಹುದೆಂದು ಅನೇಕರು ಆಗ ಯೋಚಿಸಿದರು. ವಿರಕ್ತೋತ್ತಮವಾದ ಶ್ರೀ ಚೆನ್ನಬಸವಣ್ಣನವರ ಈ ಕೆಳಗಿನ ವಚನವನ್ನು ನೋಡಿದರೆ ಶಿವಯೋಗಿಗಳ ಆಗಿನ ಆಚರಣೆಯ ಇಂಗಿತವು ಗೊತ್ತಾಗುತ್ತದೆ.

ಕಲ್ಪಿತದಿಂದ ಮಾಡುವ ಭಕ್ತ ನಿರ್ಧನಿಕನಾದರೆ
ತನ್ನ ಕೈಧನವ ವೆಚ್ಚಿಸಿ ದಾಸೋಹಮಂ ಮಾಡಿಸಿ
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯಂ ಮಾಡಿ
ಅವನ ದಾಸೋಹಕ್ಕೆ ಸಲಿಸಿ ತಾ ಕರ್ತೃವಾಗಿ ನಿಂದು
ಪರಿಣಮಿಸಬಲ್ಲಡೆ ಜಂಗಮವೆಂಬೆ, ಅವಂಗೆ ನಮೋ ನಮೋ,
ಅಂತಲ್ಲದೆ ಮುನ್ನ ಮಾಡಿರಿ, ಈಗ ಮಾಡಿರಿ; ಇದೇನು ಭೋ?
ಎಂದು ಜರೆದು ಝೋಂಕರಿಸಿ ಹೋಹರ ಜಂಗಮವೆಂಬೆನೆ? ಎನ್ನೆನು,
ಆತ ಸೊನೆಗಾರ. ಆತ ದೋಷಾರ್ಥಿ. ಆತ ಭವಭಾರಿ
ಕೂಡಲಚೆನ್ನಸಂಗಮದೇವಾ.

ಒಂದು ದಿವಸ ಅಥಣಿಯ ವಾಸಸ್ಥರೇ ಶಿವಯೋಗಿಗಳ ದರ್ಶನಕ್ಕೆ ಪ್ರತಿನಿತ್ಯ ಬರುವಂತೆ ಬಂದರು. ಅವರ ಮನಸ್ಸಿನಲ್ಲಿ ತಮ್ಮ ಹೆಸರಿನಿಂದ ಶಿವಯೋಗಿಗಳ ಯೋಗಮಂಟಪದಲ್ಲಿ ಒಂದು ನಂದಾದೀವಿಗೆ ಇರಬೇಕೆಂಬ ಇಚ್ಛೆಯಿದ್ದಿತು. ಅದಕ್ಕಾಗಿ ಅವರು ಕೆಲವು ರೂಪಾಯಿಗಳನ್ನು ಆ ದಿವಸ ತೆಗೆದುಕೊಂಡು ಬಂದು ಶಿವಯೋಗಿಗಳ ಮುಂದಿಟ್ಟು ಇವು ಇಲ್ಲಿ ನಂದಾದೀವಿಗೆಗೆ ಉಪಯೋಗವಾಗಲೆಂದು ಹೇಳಿಕೊಂಡರು.

ಆಗ ಶಿವಯೋಗಿಗಳು ಬೇಡವಾಗಿ ತಿಳಿಸಿದರು. ತಮ್ಮ ಮಂಟಪದಲ್ಲಿ ನಂದಾದೀವಿಗೆ ಇರಲಿ ಬುದ್ದೀ, ಎಂದು ಪುನಃ ಪುನಃ ಹೇಳಿದರು. ಶಿವಯೋಗಿಗಳು ಬೇಡವಾಗಿ ಎಷ್ಟು ಸಾರೆ ಅಪ್ಪಣೆ ಮಾಡಿದರೂ ಲಕ್ಷಿಸದೆ ಸ್ವಲ್ಪ ಸಲಿಗೆಯ ರೀತಿಯಲ್ಲಿ ಇರಲಿ ಬುದ್ದೀ ಎಂದು ಹೇಳಿ ಆ ರೂಪಾಯಿಗಳನ್ನು ಅಲ್ಲಿಯೇ ಬಿಟ್ಟು ಹೊರಟುಹೋದರು.

ಆಗ ಶಿವಯೋಗಿಗಳು ಎದ್ದು ಅಲ್ಲಿದ್ದ ಸೇವಕನನ್ನು ಕರೆದು ಈ 'ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವರ ಸೆರಗಿನಲ್ಲಿ ಕಟ್ಟು, ಅವರೇ ಮನೆಯಲ್ಲಿ ನಂದಾದೀವಿಗೆ ಇಟ್ಟುಕೊಳ್ಳಲಿ' ಎಂದು ಸ್ವಲ್ಪ ತೇಜವಾಗಿಯೇ ಅಪ್ಪಣೆ ಮಾಡಿದರು. ಆ ಪ್ರಕಾರ ಆ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ಸೇವಕನು ಕೊಟ್ಟನು. ಅಣತೀ ಚಂದಯ್ಯನವರ ಈ ಕೆಳಗಿನ ವಚನವನ್ನು ನೋಡಿದರೆ ಶಿವಯೋಗಿಗಳ ಈ ನಿರ್ದಾಕ್ಷಿಣ್ಯವು ಸಹಜವಾಗಿದ್ದಿತೆಂದೇ ತೋರುತ್ತದೆ.

ನಿಜ ಜಂಗಮವೆಂದೆನಿಸಿರ್ಪರು ಕುಂದು ಕೊರತೆಯ ನುಡಿವರೆ?
ಅನಾದಿ ಜಂಗಮವೆಂದೆನಿಸುವರು ಆಚರಣೆಯ ಭೇದದಲ್ಲಿ ದಾಕ್ಷಿಣ್ಯವಿಡಿದಿರ್ಪರೇ?
ಶೂರ ರಣಪ್ರಸಂಗದಲ್ಲಿ ಮಗನ ನೋಡುವನೆ?
ಇದು ಕಾರಣ ತಮ್ಮವರೇನು? ಅನ್ಯರೇನು?
ಮೃದುವಾಗಿ ಮಾತಾಡರು ಅಣತಿಯರ ಲಿಂಗದ ಆಜ್ಞೆಯಲ್ಲಿ.

ನಂದಾದೀವಿಗೆಯ ವಿಚಾರದಲ್ಲಿ ಶಿವಯೋಗಿಗಳು ಇಷ್ಟು ವಿರೊಧ ತೋರಿಸಿದುದೇಕೆಂದು ಆಗ ಅನೇಕರು ಯೋಚಿಸಿದರು. ಬಸವಣ್ಣನವರ ಈ ಕೆಳಗಿನ ವಚನವನ್ನು ನೋಡಿದರೆ ಶಿವಯೋಗಿಗಳಿಗೆ ಆ ವಿಚಾರದಲ್ಲಿ ಅಷ್ಟು ಬೇಸರವುಂಟಾದುದು ಯುಕ್ತವಾಗಿದ್ದಿತೆಂದೇ ಸ್ಪಷ್ಟವಾಗುತ್ತದೆ.

ಹತ್ತು ಮತ್ತರ ಭೂಮಿ, ಬತ್ತುವ ಹಯನ,
ನಂದಾದೀವಿಗೆಯ ನಡಿಸಿಹೆವೆಂಬವರ ಮುಖವ ನೋಡಲಾಗದು.
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೋ?
ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೇ ಆಯಿತ್ತು ಎನ್ನಿಂದಲೇ ಹೋಯಿತ್ತು ಎಂಬವರ ಬಾಯಲ್ಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಬನೇ ಕೂಡಲಸಂಗಮದೇವ?

ಮುಂದೆ ಸ್ವಲ್ಪ ದಿನಗಳಲ್ಲಿಯೇ ಆ ನಂದಾದೀವಿಗೆ ಇಡಿಸಲು ಬಂದವರ ಮನೆಗೆ ಬೆಂಕಿ ಹತ್ತಿ ಬಹು ಅನರ್ಥವಾಯಿತು. ಅದೇನೇ ಇರಲಿ. ಸಲಿಗೆಯಿದೆಯೆಂದು ಸಲ್ಲದ ರೀತಿಯಲ್ಲಿ ಮಹಾತ್ಮರ ಸಂಗಡ ನಡೆಯಬಹುದೇ? ಹಾಗೆ ಮಾಡಿದರೆ ಹೀಗಾಗುತ್ತದೆಂದು ಬಸವಣ್ಣನವರೇ ಹೇಳಿದ್ದಾರೆ.

ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿಕೊಂಬಂತೆ,
ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕು ಬಿಡಿಸಿಕೊಂಬಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಉಯ್ಯಾಲೆಯನಾಡುವಂತೆ
ಕೂಡಲ ಸಂಗನಶರಣರೊಡನೆ ಮರೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ.

❖❖

೭ನೆಯ ಪ್ರಕರಣ

ಲಿಂಗ-ಲೀಲೆ

ಶ್ರೀ ಶಿವಯೋಗಿಗಳು ಅಥಣಿ ಗಚ್ಚಿನಮಠದಲ್ಲಿ ೪೦ ವರುಷಗಳ ವರೆಗೆ ತಮ್ಮ ಗುರುಗಳ ಆಜ್ಞೆಯ ಪ್ರಕಾರ ವಾಸವಾಗಿದ್ದರು. ಆ ಮುಂಚೆ ದೇಶ ಸಂಚಾರ ಮಾಡಿ ಬಂದಾಗ ೪೫ ವರುಷದವರಾಗಿದ್ದರು. ಈ ಪ್ರಕಾರ ೮೫ ವರುಷ ಜೀವಿಸಿ ಶ್ರೀ ಬಸವಾದಿ ಪ್ರಮಥರು ಬೋಧಿಸಿರುವ ಆಚಾರಗಳಿಗನುಗುಣವಾಗಿಯೇ ಆಚರಿಸಿ ಪರಮಪೂಜ್ಯರಾದರು. ಕಳೆದ ಐದು ಪ್ರಕರಣದಲ್ಲಿ ವಿವರಿಸಿದ ಅನೇಕ ಸಂಗತಿಗಳಿಂದ ಪ್ರಮಥರ ಆಚಾರಗಳನ್ನೇ ಶಿವಯೋಗಿಗಳು ಆಚರಿಸಿದ್ದರೆಂಬುದು ಸ್ಪಷ್ಟವಾಗುವುದಿಲ್ಲವೆ?

ಶ್ರೀ ಶಿವಯೋಗಿಗಳು ೮೫ ವರುಷದ ಮುಪ್ಪಿನಲ್ಲಿಯೂ ಕೂಡಾ ತಮ್ಮ ಲಿಂಗಪೂಜೆಗೆ ಪತ್ರೆಪುಷ್ಪಾದಿಗಳನ್ನು ತಾವೆ ತಂದುಕೊಳ್ಳುತ್ತಿದ್ದರು. ಶಾಲಿವಾಹನ ಶಕೆ ೧೮೪೨ನೆಯ ಕಾರ್ತಿಕ ಮಾಸದಲ್ಲಿ ಒಂದು ದಿನ ಬೆಳಗ್ಗೆ ಹೂವುಗಳನ್ನೆತ್ತುತ್ತಿದ್ದಾಗ ಏಕೋ ದೇಹ ಜೋಲಿ ಹೋಯಿತು. ಚಳಿಗಾಲವಾದುದರಿಂದ ಹೀಗಾಗಿರಬಹುದೆಂದು ಕೆಲವರು ತಿಳಿದರು. ಮುಪ್ಪಿನವರಾದುದರಿಂದ ಹೀಗೆ ಜೋಲಿ ಹೋಗಿರಬೇಕೆಂದು ಕೆಲವರು ಯೋಚಿಸಿದರು.

ಆದರೆ ಅವೆಲ್ಲ ಸುಳ್ಳೆಂದು ತೋರಿತು. ಅಂದಿನಿಂದ ಶಿವಯೋಗಿಗಳ ನಡೆನುಡಿಗಳೇ ಬೇರೆಯಾದವು. ಜಗತ್ತಿನ ಕಡೆ ಚಿತ್ತವೇ ಇಲ್ಲದಂತಾಯಿತು. ಪರಿಚಯಸ್ಥರನ್ನು ಕೂಡ ಗುರುತಿಸದಂತಾದರು. ಯಾವಾಗಲೂ ಲಿಂಗಪೂಜೆಯ ನೆನಹು. ಸ್ನಾನಕ್ಕೆ ಹೊತ್ತಾಯಿತು. ಲಿಂಗಪೂಜೆ ಮಾಡಬೇಕು, ಇದೇನು ಎಷ್ಟು ಬೆಳ್ಳಗೆ? ಎಂಬುದಾಗಿ ಮಾತನಾಡಲಾರಂಭಿಸಿದರು.

ಕುಳಿತಾಗ, ಮಲಗಿದಾಗ, ನಡೆಯುವಾಗ ಲಿಂಗ ಪೂಜೆಯ ದೃಷ್ಟಿ ಹಸ್ತದಲ್ಲಿ ಭಸ್ಮವಿಲ್ಲದಿದ್ದರೂ ಭಸ್ಮವನ್ನು ಧರಿಸಿಕೊಳ್ಳುವುದು, ಜಪಮಾಲೆಯಿಲ್ಲದಿದ್ದರೂ ಜಪವನ್ನು ಎಣಿಸುವುದು.

ಎಲ್ಲಿ ನೋಡಿದಡಲ್ಲಿ ನೀನೇ ದೇವ.
ಎಲ್ಲಿ ಮುಟ್ಟಿದಡಲ್ಲಿ ನೀನೇ ದೇವ.
ಎಲ್ಲಿ ಭಾವಿಸಿದಡಲ್ಲಿ ನೀನೇ ದೇವ.
ಎಲ್ಲೆಡೆಯಲ್ಲಿ ನಿಮ್ಮ ಪ್ರಭೆಯೇ ಮುಸುಕಿತಾಗಿ
ಅಖಂಡೇಶ್ವರಾ ನೀನೆಂಬುದಕ್ಕೆ ತೆರಹಿಲ್ಲ ದೇವಾ.

ಎಂಬುದಾಗಿ ಶ್ರೀ ಷಣ್ಮುಖಸ್ವಾಮಿಗಳು ಹೇಳಿದಂತೆ ಶಿವಯೋಗಿಗಳು ಲಿಂಗಪೂಜೆ ಮತ್ತು ಬೆಳಕುಗಳಲ್ಲಿಯೇ ಲೀನವಾಗಿದ್ದರು. ಹೀಗೆ ಲಿಂಗಲೀಲೆಯುಂಟಾದ ಕಾರಣವನ್ನು ಶ್ರೀ ಪ್ರಭುದೇವರ ಈ ಕೆಳಗಿನ ವಚನದಿಂದ ತಿಳಿದುಕೊಳ್ಳಬಹುದು.

ಕರಸ್ಥಳದ ಲಿಂಗವು ಕಾಯಕ್ಕೆ ವೇಧಿಸಿದಲ್ಲಿ ಕಾಯಲಿಂಗವಾಯಿತ್ತು.
ಅಂತಾದ ಮಹಾ ಘನಲಿಂಗವೇ
ಭಾವಕ್ಕೆ ವೇಧಿಸಿದಲ್ಲಿ ಭಾವಲಿಂಗವಾಯಿತ್ತು.
ಅಂತಾದ ಮಹಾ ಘನಲಿಂಗವೇ ಜ್ಞಾನಕ್ಕೆ ವೇಧಿಸಿದಲ್ಲಿ ಜ್ಞಾನಲಿಂಗವಾಯಿತ್ತು.
ಅಂತಾದ ಕಾರಣ ನಮ್ಮ ಗುಹೇಶ್ವರನ ಶರಣಂಗೆ
ಅರಿವರತು, ಕುರುಹು ನಷ್ಟವಾಗಿ
ತಾನೆಂಬ ಭಾವ ಉರಿಯುಂಡ ಕರ್ಪುರದಂತಾಯಿತ್ತು.

ಶ್ರೀ ಶಿವಯೋಗಿಗಳು ೬೦-೭೦ ವರ್ಷಗಳಿಂದಲೂ ಇಷ್ಟಲಿಂಗದಲ್ಲಿ ಅಪಾರವಾದ ನಿಷ್ಠೆಯುಳ್ಳವರಾಗಿ ಅದನ್ನು ಪೂಜಿಸುತ್ತಾ ಬಂದುದರಿಂದ ಅಂಗಕ್ಕೆ ದೃಢತರವಾದ ಲಿಂಗಸಂಸ್ಕಾರವುಂಟಾಗಿದ್ದಿತು. ಅದಕ್ಕಾಗಿಯೇ ಹಸ್ತಾದಿ ಅವಯವಗಳು ಭಸ್ಮಧಾರಣಾದಿ ಲಿಂಗಪೂಜೆಯ ಕಾರ್ಯಗಳನ್ನು ತಾವೇ ಮಾಡುತ್ತಿದ್ದವು. ಮನಸ್ಸಿನಲ್ಲಿಯೂ ಬುದ್ಧಿಯಲ್ಲಿಯೂ ಲಿಂಗಧ್ಯಾನ, ಲಿಂಗಜ್ಞಾನಗಳೇ ದೀರ್ಘಕಾಲದಿಂದಲೂ ಅಳವಟ್ಟಿದ್ದರಿಂದ ಅವು ಕೂಡಾ ಲಿಂಗಮಯವಾಗಿದ್ದವು. ಆದುದರಿಂದ ಜೀವನಿಗಾಗುವ ಬಾಹ್ಯ ವಸ್ತು ಜ್ಞಾನವು ಶೂನ್ಯವಾಗಿ ಆಂತರ್ಯದ ಶಿವಜ್ಞಾನವೇ ಪ್ರಕಾಶಿಸುತ್ತಿದ್ದಿತು. ಕರ್ಪುರಕ್ಕೆ ಉರಿಯನ್ನು ತಗಲಿಸಿದರೆ ಹೇಗೆ ಅದು ಸುಟ್ಟು ಉರಿಯಲ್ಲಿಯೇ ಬೆರೆತು ಹೋಗುತ್ತದೆಯೋ ಹಾಗೆಯೇ ಜೀವಭಾವವು ನಷ್ಟವಾಗಿ ಶಿವಭಾವದಲ್ಲಿ ಬೆರೆತು ಹೋಗಿದ್ದಿತು.

ಇದೇ ವೀರಶೈವ ಸಿದ್ಧಾಂತ. ಇದೇ ಲಿಂಗಾಂಗ ಸಾಮರಸ್ಯ. ಇದೇ ಪ್ರಮಥರಾಚಾರದಂತೆ ಆಚರಿಸಿದರಾಗುವ ಫಲ, ಸತ್ತು ಸ್ವರ್ಗವನ್ನು ಸೇರಬೇಕೆಂಬುದು ಪ್ರಮಥರ ಉದ್ದೇಶವಲ್ಲ, ಇದ್ದಾಗಲೇ ಕಾಯವನ್ನು ಕೈಲಾಸ ಮಾಡಿ ಜೀವನನ್ನು ಶಿವನನ್ನಾಗಿ ಮಾಡಿಕೊಳ್ಳಬೇಕು. ಬಸವಣ್ಣನವರೂ ಹೀಗೆ ಸ್ಪಷ್ಟವಾಗಿ ಸಾರಿದ್ದಾರೆ.

ದೇವಲೋಕ ಮೃತ್ಯುಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲರಿಯ
ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ! ಕೂಡಲ ಸಂಗಮದೇವಾ.

ಕಬ್ಬಿನ ತುದಿಯಲ್ಲಿ ಹೇಗೆ ಸ್ವಾರಸ್ಯವಿಲ್ಲವೋ ಹಾಗೆಯೇ ದೇಹವನ್ನು ಬಿಟ್ಟನಂತರ ದೇವರಲ್ಲಿ ಸೇರುತ್ತೇವೆಂಬುದರಲ್ಲಿಯೂ ಸ್ವಾರಸ್ಯವಿಲ್ಲ. ದೇಹವನ್ನು ಧರಿಸಿರುವಾಗಲೇ ಶಿವನಲ್ಲಿ ಸೇರಿರಬೇಕು. ಎಂದರೆ ಅಂಗದ ಎಲ್ಲ ಕ್ರಿಯೆಗಳು ಲಿಂಗಕ್ರಿಯೆಗಳಾಗಿರಬೇಕು. ಇದೇ ಲಿಂಗಲೀಲೆ. ಇಂತಹ ಲೀಲೆಯಲ್ಲಿ ಶಿವಯೋಗಿಗಳವರು ೪ ತಿಂಗಳುಗಳನ್ನು ಕಳೆದು ಚೈತ್ರ ಬಹುಳ ಪ್ರತಿಪದೆಯ ಸಾಯಂಕಾಲ ಜಡದೇಹವನ್ನು ಬಿಟ್ಟು ಲಿಂಗದಲ್ಲಿ ಬೆರೆದರು. ಅತ್ತ ಸೂರ್ಯನು ಅಸ್ತನಾದ. ಇತ್ತ ಪ್ರಮಥರಾಚಾರ ದೀಪಿಕೆ ಅಡಗಿತು. ಪುನಃ ಸೂರ್ಯನು ಉದಯವಾದಂತೆಯೇ ಆ ಪ್ರಮಥರ ತತ್ವಜ್ಯೋತಿಯೂ ಉದಯವಾಗುವುದಿಲ್ಲವೇ? ಆಗೇ ಆಗುವದು. ಅಗೋ ಈಗಾಗಲೇ ಕತ್ತಲೆ ಹರಿಯುತ್ತಿದೆ. ಬರಲಿ! ಆ ಬೆಳಕು ಜಾಗ್ರತೆ ಬರಲಿ.

❖❖



ಶಿವಯೋಗಿಗಳವರ ಸಮಾಧಿಯು

ವೀರಶೈವ ವಿದ್ಯಾಲಯ ಗ್ರಂಥಮಾಲೆಯ ಸಂಖ್ಯೆ : ೨೬

॥ಓಂ॥

ವಚನಕಾರರ ಸಮಾಜರಚನೆ

ಸಂಗ್ರಾಹಕರು
ಹರ್ಡೇಕರ ಮಂಜಪ್ಪನವರು

[ಕ್ರಿ.ಶ. ೧೯೩೬] ಕ್ರಯ ೨ ಆಣೆ [ಶಾ.ಶ. ೧೮೫೮]

*

ಪೀಠಿಕೆ

ಈ ನಮ್ಮ ಕರ್ನಾಟಕದ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಗಳ ಚರಿತ್ರೆಗಳಲ್ಲಿ ೧೨ನೆಯ ಶತಮಾನದ ಶ್ರೀ ಬಸವಾದಿ ಶಿವಶರಣರು ಮಾಡಿದ ಮಹಾತ್ಕಾರ್ಯಗಳು ಬಹು ಗಣ್ಯವಾದವುಗಳು. ಇವರ ಈ ಕಾರ್ಯಗಳನ್ನು ಹಿಂದುಸ್ಥಾನದ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯ ಸುಧಾರಣೆಯ ಚರಿತ್ರೆಗಳಲ್ಲಿ ಉದಾಹರಿಸದಿದ್ದರೆ ಎಷ್ಟೋ ಕೊರತೆಯುಂಟಾಗುವಂತಿರುವಾಗ ಕರ್ನಾಟಕದ ಚರಿತ್ರೆಯಲ್ಲಂತೂ ಇವರ ಅದ್ವಿತೀಯ ಕಾರ್ಯಗಳು ಮುಖ್ಯಾಂಗಗಳಾಗಿಯೇ ಪರಿಣಮಿಸಿರುವುದು ಸ್ವಾಭಾವಿಕವಷ್ಟೆ.

ಶ್ರೀ ಬಸವಾದಿ ಶರಣರ ಕಾರ್ಯಗಳು ಕರ್ನಾಟಕದ ಚರಿತ್ರೆಯಲ್ಲಿ ಇಷ್ಟು ಪ್ರಜ್ವಲಿಸುತ್ತಿರುವುದರಿಂದ ಕನ್ನಡ ನಾಡಿದನ ಅಭಿಮಾನಿಗಳೂ, ಈ ನಾಡಿನ ಚರಿತ್ರೆಯ ಸರ್ವಾಂಗಗಳನ್ನು ತಿಳಿದುಕೊಳ್ಳಲಪೇಕ್ಷಿಸುವವರೂ, ಅವರು ಯಾವ ಧರ್ಮ, ಮತ, ಪಂಥ, ಅಥವಾ ದೇಶದವರಿದ್ದರೂ ಆ ಶರಣರ ಕಾರ್ಯಗಳ ಕಡೆಗೆ ಲಕ್ಷಿಸಲೇಬೇಕಾಗುವುದು.

ಆದುದರಿಂದ ಕನ್ನಡ ನಾಡಿನ ಹೆಚ್ಚಳಕ್ಕಾಗಿ ಹಗಲಿರುಳು ಪರಿಶ್ರಮಪಡುತ್ತಿರುವ ಅನೇಕ ಪಂಡಿತರು ಮತ ಪಂಥಗಳ ಭಿನ್ನತೆಯನ್ನು ಗಮನಿಸದೆ ಶ್ರೀ ಬಸವಾದಿ ಶಿವಶರಣರು ಮಾಡಿದ ಧಾರ್ಮಿಕ, ಸಾಮಾಜಿಕ, ಮತ್ತು ಸಾಹಿತ್ಯಗಳ ಸಂಬಂಧವಾದ ಕಾರ್ಯಗಳ ಕಡೆಗೆ ಇತ್ತೀಚೆಗೆ ವಿಶೇಷ ಲಕ್ಷಿಸಿ ವಿಮರ್ಶಾತ್ಮಕ ಗ್ರಂಥಗಳನ್ನು ಬರೆಯಲುಪಕ್ರಮಿಸಿದ್ದಾರೆ. ಇಂತಹ ಮಹನೀಯರಲ್ಲಿ **ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ** ಎಂ. ಎ. ಎಲ್. ಎಲ್. ಬಿ. ಇವರು, **ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು** ಎಂ. ಎ. ಇವರು. ಮತ್ತು **ಶ್ರೀಮಾನ್ ಎಮ್. ಆರ್. ಶ್ರೀನಿವಾಸಮೂರ್ತಿಗಳು** ಬಿ. ಎ. ಇವರು, ಈ ಪಂಡಿತತ್ರಯರು ಮುಖ್ಯರಾದವರು. ಇದಕ್ಕೆ ಇವರು ಶ್ರೀ ಬಸವಾದಿ ಶರಣರ ಸಂಬಂಧವಾಗಿ ಬರೆದ ಗ್ರಂಥಗಳ ಸಾಕ್ಷಿಯಾಗಿರುವಾಗ ವಿವರಿಸಿ ಹೇಳಬೇಕಾದುದೇ ಇಲ್ಲ.

ನಾನು ಈ ಮಹಾಶಯರ ಗ್ರಂಥ, ಲೇಖನ, ಭಾಷಣಗಳಲ್ಲಿಯ ಕೆಲವು ಸಾಮಾಜಿಕ ವಿಚಾರಗಳನ್ನು ಮಾತ್ರವೇ ಒಟ್ಟುಗೂಡಿಸಿ ಈ ಚಿಕ್ಕ ಪುಸ್ತಕವನ್ನು ಮಾಡಿದ್ದೇನೆ. ಶ್ರೀ ಬಸವಾದಿ ಶರಣರ ಸಾಮಾಜಿಕ ಕಾರ್ಯಕಲಾಪಗಳ ಸಂಬಂಧವಾದ ಈ ಮಹನೀಯರ ವಿಚಾರಗಳು ಒಂದೇ ಕಡೆಗೆ ಎಲ್ಲರಿಗೂ ಸುಲಭದರಲ್ಲಿ ತಿಳಿಯುವಂತಾಗಲೆಂದೇ ಹೀಗೆ ಮಾಡಿದ್ದರ

ಮುಖ್ಯೋದ್ದೇಶವು. ಇದನ್ನು ಓದಿದನಂತರ ಹೆಚ್ಚು ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬ ಲವಲವಿಕೆಯು ವಾಚಕರಲ್ಲುಂಟಾಗಿ ಆಯಾಯ ಗ್ರಂಥಗಳನ್ನೇ ಓದಿದ್ದಾದರೆ ಗ್ರಂಥಕರ್ತರ ಉದ್ದೇಶ ನೆರವೇರಲು ಸಹಾಯವಾಗಬಹುದೆಂತಲೂ ಒಂದು ಯೋಚನೆ.

ಇವೂ ಅಲ್ಲದೆ, ಅನ್ಯಮತೀಯ ವಿದ್ವಾಂಸರು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೋಧಿಸಿ ಹೇಳಿರುವ ಸಂಗತಿಗಳು ಸ್ವಮತಿಯರ ಅಭಿಪ್ರಾಯಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗುವದರಿಂದ ಬ್ರಾಹ್ಮಣ ವರ್ಣದ ಭಿನ್ನ ಭಿನ್ನ ಸಾಂಪ್ರದಾಯಗಳ ಈ ವಿದ್ವಾಂಸರ ಅಭಿಪ್ರಾಯಗಳನ್ನು ಈ ಪ್ರಕಾರ ಕೂಡಿಸಿ ಪ್ರಕಟಿಸುವುದರ ಮೂಲಕ ಆ ಬಸವಾದಿ ಶರಣರ ಸಾಮಾಜಿಕ ವಿಚಾರಗಳ ಮಹತ್ವವನ್ನು ವ್ಯಕ್ತಗೊಳಿಸಬೇಕೆಂಬುದೂ ಮತ್ತೊಂದು ಉದ್ದೇಶ.

ಇಷ್ಟೇ ಅಲ್ಲ; ಶ್ರೀ ಬಸವಾದಿ ಶರಣರಿಂದಲೇ ಏರ್ಪಟ್ಟ ಈಗಿನ ವೀರಶೈವ ಸಮಾಜದಲ್ಲಿಯ ಇತ್ತೀಚೆಗೆ ಕೆಲವರು ವೀರಶೈವರಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳಿವೆಯೆಂದೂ ಇವು ಜನ್ಮದಿಂದಲೇ ಮೇಲು ಕೀಳೆಂದೂ ಹೇಳುತ್ತಿದ್ದಾರೆ. ಕೆಲವರು ಭಕ್ತ ಮತ್ತು ಮಾಹೇಶ್ವರ ಎಂಬೆರಡೇ ಜಾತಿಗಳಿವೆಯೆಂದೂ ಇವು ಜನ್ಮ ವಿಶಿಷ್ಟವಾಗಿ ಮೇಲು ಕೀಳೆಂದೂ ಪ್ರತಿಪಾದಿಸುತ್ತಿದ್ದಾರೆ. ಇನ್ನುಳಿದವರಾದರೋ ವೀರಶೈವರಲ್ಲಿ ವರ್ಣಗಳಾಗಲಿ ಅಥವಾ ಜಾತಿಗಳಾಗಲಿ ಇಲ್ಲವೇ ಇಲ್ಲವೆಂದೂ ಜನ್ಮದಿಂದ ಯಾರೂ ಹೆಚ್ಚುಕಡಿಮೆಯಲ್ಲವೆಂದೂ ಸಾರುತ್ತಿದ್ದಾರೆ. ಇವರ ವಾದವು ಅನ್ಯಮತೀಯ ನಿಷ್ಪಕ್ಷಪಾತಿಗಳಾದ ವಿದ್ವಾಂಸರ ಕಡೆಗೆ ತೀರ್ಮಾನಕ್ಕೆ ಹೋದರೆ ಹೇಗಾಗಬಹುದೆಂಬುದು ತಿಳಿಯಲೆಂಬ ಇನ್ನೊಂದು ಉದ್ದೇಶವೂ ಈ ಕಾರ್ಯವನ್ನು ಮಾಡಿಸಿದೆ.

ಈಗಿನ ವೀರಶೈವಸಮಾಜಕ್ಕೆ ಬಸವಣ್ಣನವರೇ ಮೂಲಪುರುಷರೆಂದು ಶ್ರೀಮಾನ್ ದಿವಾಕರ ರಂಗನಾಥರಾಯರು ಅಭಿಪ್ರಾಯಪಟ್ಟುದನ್ನು ಈ ಪುಸ್ತಕದ ಮೊದಲನೆಯ ಪುಟದಲ್ಲಿಯೇ ವಾಚಕರು ಕಾಣಬಹುದು. ಬಸವಣ್ಣನವರ ಪೂರ್ವದಲ್ಲಿ ಶೈವದ ಯಾವ ಯಾವ ಪಂಗಡಗಳು ಹೇಗಿದ್ದವೆಂಬುದು ೪೧-೪೪ ನೆಯ ಪುಟಗಳಲ್ಲಿರುವ ಶ್ರೀಮಾನ್ ಶ್ರೀನಿವಾಸಮೂರ್ತಿಗಳ ವಿವೇಚನೆಯಿಂದಲೂ ಬುದ್ಧದೇವನ ತರುವಾಯ ಬಸವಣ್ಣನವರ ವಿನಾ ಇನ್ನಾರೂ ಈ ವಿಧವಾದ ಕಾರ್ಯಮಾಡಿರಲಿಲ್ಲವೆಂದು ಈ ಮಹಾಶಯ ಹೇಳಿರುವುದನ್ನು ೩೦ ನೆಯ ಪುಟದಲ್ಲಿಯೂ ವಾಚಕರು ತಿಳಿದುಕೊಳ್ಳಬಹುದು.

ವಚನಕಾರರಾದ ಈ ಬಸವಾದಿ ಶರಣರು ಜನ್ಮ ವಿಶಿಷ್ಟವಾದ ಜಾತಿಯ ಕಲ್ಪನೆಯನ್ನೇ ತೆಗೆದುಹಾಕಿ ಜನಜೀವನಕ್ಕೆ ಆಧಾರವಾಗಿರತಕ್ಕ ಎಲ್ಲ ಕಸಬುಗಳು ಸಮಾನವಾದವುಗಳೂ ಅವಶ್ಯಕವಾದವುಗಳೂ ಎಂದು ಏರ್ಪಡಿಸಿದುದನ್ನು ಈ ಪಂಡಿತತ್ರಯರ ವಿಸ್ತಾರವಾದ ವಿವೇಚನೆಯಿಂದ ವಾಚಕರು ಮನಗಾಣಬಹುದು. ಮತ್ತು ಬಸವಣ್ಣನವರ ಮುಂಚೆ ಶೈವಾಗಮಗಳು ಅನುಸರಿಸಿದ್ದ ಶೈವ ಪಂಗಡಗಳಲ್ಲಿ ಯಾವ ಮಹತ್ವ ಸಾಮಾಜಿಕ ಸುಧಾರಣೆಯನ್ನು ಈ ವಚನಕಾರರು ಮಾಡಿದರೆಂಬುದು ಪುಟ ೧೪ ಮತ್ತು ೨೭ ರಲ್ಲಿರತಕ್ಕ ಸಂಗತಿಗಳಿಂದ ಚೆನ್ನಾಗಿ ಗೊತ್ತಾಗಬಹುದು. ಈ ಪ್ರಕಾರ ಬಸವಾದಿ ವಚನಕಾರರ ಸಮಾಜ ರಚನೆಯ ಎಲ್ಲ ಮುಖ್ಯ ರೀತಿ ನೀತಿಗಳು ಈ ಚಿಕ್ಕ ಪುಸ್ತಕವನ್ನು ಓದುವುದರಿಂದ ಸ್ಪಷ್ಟ ಗೊತ್ತಾಗುವವು.

ಈಗಿನ ಹಿಂದು ಸಮಾಜ ಸುಧಾರಕರು ಯಾವ ಯಾವ ತತ್ವಗಳನ್ನು ಜನಾಂಗದ ಉದ್ಧಾರಕ್ಕಾಗಿ

ಹೇಳುತ್ತಿದ್ದಾರೆಯೋ ಅವುಗಳೆಲ್ಲಾ ೮೦೦ ವರುಷಗಳ ಹಿಂದೆಯೇ ಬಸವಾದಿ ವಚನಕಾರರಿಂದ ಎಷ್ಟರ ಮಟ್ಟಿಗೆ ಹೇಳಲ್ಪಟ್ಟಿವೆಯೆಂಬುದನ್ನು ಸ್ವಲ್ಪ ನೋಡೋಣ. ಹಾಗಾದರೆ ವಚನಕಾರರ ಬೋಧದಲ್ಲಿರತಕ್ಕ ಮಹತ್ವವೂ ಚೆನ್ನಾಗಿ ಹೊಳೆಯುವುದು.

ಈಗಿನ ಪರಿವರ್ತನವಾದಿಗಳಲ್ಲಿ ಒಬ್ಬ ಪ್ರಮುಖರಾದ **ತರ್ಕತೀರ್ಥ ಶ್ರೀ ಲಕ್ಷ್ಮಣಶಾಸ್ತ್ರಿ ಜೋಶಿ** ಎಂಬುವವರು ತಾ. ೨೭-೮-೧೯೩೬ನೆಯ ದಿವಸ ಮುಂಬೈ ಬ್ರಾಹ್ಮಣ ಸಭೆಯ ಪರವಾಗಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿದರು.

ಐಹಿಕ ಜೀವನದಲ್ಲಿ ಯಾವುದು ಉಪಯುಕ್ತವೂ ಹಿತಕರವೂ ಆಗಿದೆಯೆಂದು ತೋರುತ್ತದೆಯೋ ಅದೇ ಪಾರಲೌಕಿಕ ದೃಷ್ಟಿಯಿಂದಲೂ ಶ್ರೇಯಸ್ಕರವಾದುದೆಂದು ತಿಳಿಯುವುದೇ ಪರಿವರ್ತನವಾದಿಗಳ ಪ್ರಥಮ ಸಿದ್ಧಾಂತ.

ಬಸವಣ್ಣನವರು ಹೀಗೆ ಹೇಳಿದ್ದಾರೆ :

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ,
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲಸಂಗಮದೇವ.

ಈ ಲೋಕವು ದೇವರ ಟಂಕಶಾಲೆ. ಇಲ್ಲಿ ಸಲ್ಲುವಂತಹ ನಡೆನುಡಿಗಳುಳ್ಳವರೆಲ್ಲಾ ಒಳ್ಳೆಯ ನಾಣ್ಯ. ಈ ನಾಣ್ಯ ಪರಲೋಕದಲ್ಲಿಯೂ ಸಲ್ಲುವ ರೀತಿಯಲ್ಲಿಯೇ ನಡೆಯುತ್ತದೆ ಎಂದು ಬಸವಣ್ಣವರು ಹೇಳಿದರು. ವಚನವು ಈಗಿನ ಪರಿವರ್ತನಾವಾದಿಗಳ ಸಿದ್ಧಾಂತವನ್ನು ಬಹು ಸ್ವಾರಸ್ಯವಾಗಿ ಪುಷ್ಟೀಕರಿಸುವುದಿಲ್ಲವೆ?

ದೇವಲೋಕ ಮರ್ತ್ಯಲೋಕ ಎಂಬುದು ಬೇರಿಲ್ಲ ಕಾಣಿಭೋ.
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ. ಕೂಡಲ ಸಂಗಮದೇವ ನೀವೇ ಪ್ರಮಾಣ.

ಬಸವಣ್ಣನವರ ಈ ವಚನವು ಪರಲೋಕದ ಭ್ರಮೆಯನ್ನು ಬಿಡಿಸಿ ಇಹಲೋಕವೇ ಸ್ವರ್ಗವಾಗಿ ಪರಿಣಮಿಸುವಂತೆ ಪ್ರಯತ್ನಿಸಲು ಸೂಚಿಸುವುದಿಲ್ಲವೆ?

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ
ಸತ್ತು ಬೆರಿಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಕೂಡಲ ಸಂಗಮದೇವ.

ಬಸವಣ್ಣನವರ ಈ ವಚನವು ವಚನಕಾರರ ಬೋಧದ ಸಾರವಾಗಿದೆ. ಸಮಾಜಶಾಸ್ತ್ರದ ತಿರುಳಾಗಿದೆ. ಯಾರ ನಡೆನುಡಿಗಳು ಐಹಿಕ ಮತ್ತು ಪಾರಲೌಕಿಕಗಳೆಂಬ ಭೇದಗಳಿಂದ ಭಿನ್ನ ಭಿನ್ನವಾಗಿವೆಯೋ ಅವರು ಜನಾಂಗದ ಆದರ್ಶ ವ್ಯಕ್ತಿಗಳಲ್ಲ. ಸತ್ತ ಮೇಲೆಯೇ ಸ್ವರ್ಗವೆಂದು ಹೇಳುವವರು ಲೋಕೋದ್ಧಾರಕರಲ್ಲ. ಜನ್ಮ ವಿಶಿಷ್ಟವಾದ ಅಥವಾ ಸ್ತ್ರೀ ಪುರುಷರೆಂಬ ಕೀಳುಮೇಲುಗಳ ಕಲ್ಪನೆಯಿಂದ ಇಹಲೋಕದಲ್ಲಿ ಭಿನ್ನ ಭಿನ್ನವಾಗಿದ್ದುಕೊಂಡು ಸತ್ತ ಮೇಲೆ ನಿಮ್ಮ ನಿಮ್ಮ ಸದ್ಗುಣ ಸದಾಚಾರಗಳಂತೆ ಪರಲೋಕದಲ್ಲಿ ಕೂಡಿಕೊಂಡಿರಬಹುದೆಂದು ಬೋಧಿಸುವವರು ನಿಜಬೋಧಕರಲ್ಲ. ಇವರ ಮಾತುಗಳನ್ನು ಕೇಳಿ ನಡೆದರೆ ಕಬ್ಬಿನ ತುದಿಯನ್ನು ತಿಂದಂತಾಗುವುದು. ಸದ್ಗುಣ ಸದಾಚಾರಗಳಿಗೆ

ಇಲ್ಲಿಯೇ ಜನಾಂಗದ ಮಧ್ಯದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಳಿರಬೇಕು. ಜೀವಿಸಿರುವಾಗಲೇ ಇಹಲೋಕದಲ್ಲಿಯೇ ಪರಮಾತ್ಮನಲ್ಲಿ ಬೆರೆಯುವ ಮಾರ್ಗವನ್ನನುಸರಿಸಬೇಕು. ಹಾಗಾದರೆ ಕಬ್ಬಿನ ಬುಡದ ಗಣಿಕೆಯನ್ನು ತಿಂದಂತಾಗುವುದು. ಆ ದಿವ್ಯ ಮಾರ್ಗವನ್ನೇ ವಚನಕಾರರು ಬೋಧಿಸಿದ್ದಾರೆ.

ಮಹಾತ್ಮಾ ಗಾಂಧಿಯವರು ಜನ್ಮದಿಂದಲೇ ಯಾರು ಮೇಲಲ್ಲ; ಅಥವಾ ಕೀಳಲ್ಲವೆಂದು ಸಾರುತ್ತಾ ಅಂತ್ಯಜರ ಮಗುವನ್ನೇ ಮಗಳನ್ನಾಗಿ ಕೂಡಾ ಮಾಡಿಕೊಂಡಿರುವರಷ್ಟೆ. ಡಾ. ಅಂಬೇಡ್ಕರರ ಧರ್ಮಾಂತರದ ವಿಚಾರವಾಗಿ ಕಳೆದ ಜುಲೈ ತಿಂಗಳ **ಹರಿಜನ** ಎಂಬ ಪತ್ರಿಕೆಯಲ್ಲಿ ಗಾಂಧೀಜಿಯವರು ಹೀಗೆ ಬರೆದಿದ್ದಾರೆ.

ಮನುಷ್ಯಜಾತಿಯ ಹಿತಾರ್ಥವಾದ ಎಲ್ಲ ಉದ್ಯೋಗಗಳು ಶ್ರೇಷ್ಠವಾದವುಗಳೂ ಸಮಾನವಾದವುಗಳೂ ಇವೆ. ಬ್ರಾಹ್ಮಣನ ಉಪದೇಶ ಮತ್ತು ಭಂಗಿಯ ಉದ್ಯೋಗ (ಮಲಕೂಪಗಳನ್ನು ತೊಳೆಯುವುದು) ಇವೆರಡೂ ಸಮಾಂತರ ಗತಿಯವುಗಳೇ ಆಗಿವೆ. ಇವುಗಳನ್ನು ತೃಪ್ತಿಕರವಾಗಿ ನೆರವೇರಿಸುವವರು ದೇವರ ದೃಷ್ಟಿಯಲ್ಲಿಯೂ ಸಮಾನರೇ ಇದ್ದಾರೆ. ತಾವು ಇಂತಹ ವರ್ಣದವರಾಗಿದ್ದರಿಂದ ಶ್ರೇಷ್ಠರೆಂದು ಹೇಳಿಕೊಂಡರೆ ಅವರು ವರ್ಣ ಧರ್ಮಕ್ಕೆ ವಿರೋಧವಾಗಿ ನಡೆದಂತೆಯೇ ಸರಿ.

ಬಸವಣ್ಣನವರು ಹೀಗೆ ಹೇಳುತ್ತಾರೆ.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ,
ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಎನ್ನವರಾದರೆ ಜನ್ಮಕ್ಕೆ ನಡೆವರೆ? ಎನ್ನವರಲ್ಲ ಕೂಡಲ ಸಂಗಮದೇವ ನಿಮ್ಮಾಣೆ.
ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ.
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ.
ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ,
ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯಾ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇತಕ್ಕರಿಯಿರಿ. ಕೂಡಲ ಸಂಗಮದೇವ?

ಈ ದಿವ್ಯವಚನಗಳು ಜನ್ಮ ವಿಶಿಷ್ಟ ಮೇಲು ಕೀಳುಗಳನ್ನೂ ಉದ್ಯೋಗ ವಿಶಿಷ್ಟ ಹೆಚ್ಚು ಕುಂದುಗಳನ್ನೂ ಸ್ಪಷ್ಟವಾಗಿಯೇ ಖಂಡಿಸಿ ಉದ್ಯೋಗ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಸಮಾಜದಲ್ಲಿ ಸ್ಥಾಪಿಸಲು ಬೋಧಿಸಿಲ್ಲವೇ?

ಧರ್ಮಾತ್ಮ ಮಾಲವೀಜಿಯವರು ಕೂಡಾ ಜನ್ಮ ವಿಶಿಷ್ಟವಾದ ಮೇಲು ಕೀಳುಗಳನ್ನು ನಿಷೇಧಿಸುತ್ತಿದ್ದಾರೆ. ಕಳೆದ ಶಿವರಾತ್ರಿಯ ಕಾಲದಲ್ಲಿ ಅನೇಕ ಅಂತ್ಯಜರಿಗೆ ಶಿವಪಂಚಾಕ್ಷರಿ ಮಂತ್ರವನ್ನುಪದೇಶಮಾಡಿ, ಅವರಿಗೆ ಯಜ್ಞೋಪವೀತವನ್ನೂ ಧಾರಣ ಮಾಡಿಸಿದರಷ್ಟೇ. ಇವರು ತಾ. ೨೯-೧೨-೧೯೩೬ ನೆಯ ದಿವಸ ಹದಿನೇಳನೆಯ ಹಿಂದು ಮಹಾಸಭೆಯ ಅಧ್ಯಕ್ಷರಾಗಿ ಪುಣೆಯಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿದ್ದಾರೆ.

ಮುಸಲ್ಮಾನರಲ್ಲಿ ಕಲಮಾ ಓದಿದ ಮಾತ್ರಕ್ಕೆ ಪವಿತ್ರರಾಗುತ್ತಾರೆ. ಕ್ರಿಸ್ತರು ತಮ್ಮ ಸಂಸ್ಕಾರದಿಂದ ಶುದ್ಧಗೊಳಿಸುತ್ತಾರೆ. ಹಿಂದು ಧರ್ಮದ ಮಂತ್ರಗಳಲ್ಲಿ ಅಂಥ ಶಕ್ತಿಯಿಲ್ಲವೆ? ಶಿವ ಪಂಚಾಕ್ಷರಿ ಮಂತ್ರವನ್ನಾಗಲಿ ಅಥವಾ ಶ್ರೀ ಶಂಕರಾಚಾರ್ಯರೇ ಮೊದಲಾದವರು ನಿಶ್ಚಯಿಸಿದ ಮಂತ್ರವನ್ನಾಗಲಿ ಅವರಿಗೆ ಬೋಧಮಾಡಿದರಾಯಿತು. ಅಸ್ಪೃಶ್ಯರ ಮನೆಗಳೆಲ್ಲಾ ದೇವಾಲಯಗಳಾಗಲಿ, ಶಿವ, ವಿಷ್ಣು ಮೊದಲಾದ ಯಾವುದಾದರೊಂದು ದೇವರನ್ನು ಅವರು ಪೂಜಿಸಲಿ.

ಒಬ್ಬ ಬ್ರಾಹ್ಮಣನು ಮದ್ಯದಂಗಡಿಯನ್ನಿಟ್ಟಿದ್ದರೆ ಆತನು ಬ್ರಾಹ್ಮಣನೆಂದು ತಿಳಿದು ನಾನು ನಮಸ್ಕಾರ ಮಾಡುವೆನೋ? ಇಲ್ಲವೇ ಇಲ್ಲ. ಹಿಂದು ಧರ್ಮಾಭಿಮಾನಿಯಾದ ಸದಾಚಾರಗಳುಳ್ಳ ಒಬ್ಬ ಭಂಗಿಣಿಯ ಪಾದ ಧೂಳಿಯು ಕೂಡಾ ನನಗೆ ಪವಿತ್ರವಾದುದು. ಅದನ್ನು ನಾನು ತಿಲಕದಂತೆ ಧರಿಸುವೆನು. ಜನ್ಮದಿಂದಲೇ ಪೂಜ್ಯರಲ್ಲ. ಅವರವರ ಗುಣ ಕರ್ಮಗಳಿಂದಲೇ ಶ್ರೇಷ್ಠರಾಗುತ್ತಾರೆ. ಇಂಥ ಅನೇಕ ಸಂಗತಿಗಳು ನಮ್ಮ ಧರ್ಮ ಗ್ರಂಥಗಳಲ್ಲಿವೆ.

ಬಸವಣ್ಣನವರು ಹೀಗೆ ಹೇಳುತ್ತಾರೆ :

> ಶ್ವಪಚನಾದರೇನು ಲಿಂಗಭಕ್ತನೇ ಕುಲಜನು. ನಂಬಿನಂಬದಿದ್ದರೆ ಸಂದೇಹಿ ನೋಡಾ.
> ಪಟ್ಟವ ಕಟ್ಟಿದ ಬಳಿಕ ಲಕ್ಷಣನರಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ?
> ದೂಷಕನವನೊಬ್ಬ ದೇಶವ ಕೊಟ್ಟರೆ ಆಸೆಮಾಡಿ ಅವನ ಹೊರೆಯಲ್ಲಿರಬೇಡ.
> ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯ.
> ಆವನಾದೊಡೇನು? ಶ್ರೀ ಮಹಾದೇವನ ನೆನೆವನ ಬಾಯ ತೊಂಬುಲವ ಮೆಲುವೆ,
> ಬೀಳುಡುಗೆಯ ಹೊದಿವೆ, ಪಾದರಕ್ಷೆಯ ಕಾಯ್ದು ಬದುಕುವೆ ಕೂಡಲಸಂಗಮದೇವ.

ಈ ಮಹಾವಾಕ್ಯಗಳು ಧರ್ಮಾತ್ಮ ಮಾಲವೀಜಿಯವರ ಮೇಲಣ ಉಕ್ತಿಗಳ ಅರ್ಥವನ್ನೇ ಎಷ್ಟೋ ಸ್ಪಷ್ಟವಾಗಿಯೂ ಬಹು ಹೃದಯಂಗಮವಾಗಿಯೂ ಬೋಧಿಸುವುದಿಲ್ಲವೇ?

> ಓಂ ನಮಃ ಶಿವಾಯ ಎಂಬ ಮಂತ್ರವ, ಶಿವನಂತುವನರಿಯದೆ ಚಿಂತಿಸುತ್ತಿದ್ದಿತ್ತು ಲೋಕ.
> ಕೂಡಲಸಂಗಮದೇವ ಶ್ವಪಚ ಮೆರೆದರೆ ಜಾತಿಭೇದವ ಮಾಡಲಮ್ಮವು.

ಬಸವಣ್ಣನವರ ಈ ವಚನದ ಅರ್ಥವನ್ನೇ ಮಾಲವೀಜಿಯವರು ಹೇಳಿದ್ದಾರೆಯೋ, ಏನೋ, ಎಂದು ಭಾಸವಾಗುವುದಿಲ್ಲವೆ?

ಈಗ ಸಮತಾವಾದಿಗಳು ತಮ್ಮ ಪಂಗಡದವರಿಂದ ಪೂಜ್ಯರೆಂದಾಗಲಿ ಮಹಾಶ್ರೇಷ್ಠರೆಂದಾಗಲಿ ಹೇಳಿಸಿಕೊಳ್ಳಲು ಕೂಡಾ ಸಿದ್ಧರಿಲ್ಲವಷ್ಟೇ. ತಾವೆಲ್ಲರೂ ಬಂಧುಗಳೆಂದೇ ಪರಸ್ಪರ ಹೇಳಿಕೊಳ್ಳಲು ಬಹು ಅಭಿಮಾನಪಡುತ್ತಿದ್ದಾರಲ್ಲವೇ? ಈಗ ಆಚಾರ್ಯ, ಗುರು, ಮಹಾಸ್ವಾಮಿ, ಒಡೆಯ ಎಂಬ ಹೆಸರುಗಳಿಗೆ ಸಮತಾವಾದಿಗಳಲ್ಲಿ ಮನ್ನಣೆಯಿಲ್ಲ. ಎಲ್ಲರೂ ಕಾಮ್ರೇಡ್ ಭಾಯಿ (ಅಣ್ಣಾ) ಎಂದೇ ಸಂಬೋಧಿಸಲ್ಪಡುತ್ತಿದ್ದಾರೆ.

ಪಂಡಿತ ಜವಾಹರಲಾಲ ನೆಹರುರವರು ಮುಂಬೈಯಿಯ ಕೂಲಿಕಾರರ ಸಭೆಯ ಮುಂದೆ ಭಾಷಣ ಮಾಡುವಾಗ ತನಗೆ ಪಂಡಿತ ಎಂದು ಹೇಳದೆ ಭಾಯಿ ಎಂದು ಹೇಳಬೇಕಾಗಿ

ಸೂಚಿಸಿರಲಿಲ್ಲವೇ? ಇಂತಹ ಪ್ರಮುಖರು ಕೂಡಾ ಹೀಗೆ ಹೇಳಿದುದರ ಕಾರಣವೇನು? ಬಂಧು ಭಾವವನ್ನು ವ್ಯಕ್ತಗೊಳಿಸಲಿಕ್ಕಲ್ಲವೆ?

ಬಸವಣ್ಣನವರು ಹೀಗೆ ಹೇಳಿದ್ದಾರೆ.

ಎನಗಿಂತ ಕಿರಿಯರಿಲ್ಲ. ಶಿವ ಭಕ್ತರಿಗಿಂತ ಹಿರಿಯರಿಲ್ಲ.
ಮುಗಿದ ಕೈಯಾಗಿರಿಸು.

ಈ ವಾಕ್ಯಗಳಿಂದ ಎಂತಹ ಬಂಧು ಭಾವವನ್ನು ನೆಲೆಗೊಳಿಸುತ್ತಿದ್ದರೆಂಬುದು ಗೊತ್ತಾಗುವುದಿಲ್ಲವೆ? ಬಸವಣ್ಣ ಎಂಬುದಾಗಿಯೇ ಆಗ ಕರೆಯುತ್ತಿದ್ದರೇ ವಿನಾ ಬಸವಾಚಾರ್ಯ, ಬಸವೇಶ್ವರ, ಬಸವಸ್ವಾಮಿ ಎಂದು ಹೇಳುತ್ತಿರಲಿಲ್ಲವೆಂಬುದು ಆಗಿನ ವಚನಕಾರರ ವಚನಗಳಿಂದಲೇ ಸ್ಪಷ್ಟ ಗೊತ್ತಾಗುತ್ತದೆ.

ಈ ಪ್ರಕಾರ ಸಮಾಜದಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಸಮಾನತೆ ಮತ್ತು ಬಂಧು ಭಾವಗಳಿಗಾಗಿ ಈಗ ಯಾವ ಯಾವ ನಡೆ ನುಡಿಗಳಲ್ಲಿ ಸುಧಾರಣೆಗಳಾಗಬೇಕೆಂದು ಪ್ರಮುಖರು ಪ್ರಯತ್ನಿಸುತ್ತಿದ್ದಾರೆಯೋ ಅವುಗಳೆಲ್ಲಾ ಎಂಟುನೂರು ವರುಷಗಳ ಹಿಂದೆಯೇ ಬಸವಾದಿ ವಚನಕಾರರು ಆಚರಿಸಿ ತೋರಿಸಿದ್ಧಾರೆಂದು ಈ ಸಂಕ್ಷಿಪ್ತ ವಿವೇಚನೆಯಿಂದಲೇ ಗೊತ್ತಾಗುವುದಿಲ್ಲವೇ? ಅಂತೆಯೇ ಸರ್. **ಜೇಮ್ಸ್, ಕ್ಯಾಂಬಲ್**ರವರು ಹೀಗೆ ಹೇಳಿದ್ದಾರೆ:

"ಟಾಯಿಮ್ಸ್ ಆಫ್ ಇಂಡಿಯಾ" ಪತ್ರಿಕೆಯ ತಾರೀಖು ೧೭-೫-೧೯೧೮ನೆಯ ಸಂಚಿಕೆಯಲ್ಲಿ ಬಸವಣ್ಣನವರ ವಿಚಾರವಾಗಿ ಹೀಗೆ ಪ್ರಕಟವಾಗಿದೆ.

" It was the distinctive feature of his mission that while illustrious religious and social reformers in India before him had each laid his emphasis on one or other items of religious and social reform, either sobordinating more or less other items to it, or ignoring them altogether, Basawa skeehed and bodly tried to work out a large and comprehensive programme of social reform with the elevation and independence of womanhood as its guiding point.

Neither social conferences which are annually held in these days in several parts of India, social reforms, can improve upon that programme as to the essentials. As was in substance remarked by the late Sir James Campbell, whose knowledge of Indian History, customs and manners was almost phenomenal, the present day social reformer in India is but speaking the language and seeking to enforce the mind of Basava."

ಭರತಖಂಡದಲ್ಲಿ ಬಸವನ ಮುಂಚೆ ಪ್ರಸಿದ್ಧರಾದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರು ಆಯಾಯ ವಿಷಯಗಳಿಗೆ ಸಂಬಂಧಿಸಿದ ಯಾವುದಾದರೊಂದು ಸಂಗತಿಗೇನೇ ಹೆಚ್ಚು ಮಹತ್ವವನ್ನು ಕೊಟ್ಟು ಅನ್ಯ ವಿಷಯಗಳನ್ನು ಉಪೇಕ್ಷಿಸಿದ್ದರು. ಅಥವಾ ಅವುಗಳಿಗೆ ಗೌರವತತ್ವವನ್ನು ಕೊಟ್ಟಿದ್ದರು.

ಆದರೆ ಬಸವನು ಸ್ತ್ರೀಯರ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಗಳನ್ನೇ ಮುಂದಿಟ್ಟುಕೊಂಡು ಸಮಾಜ ಸುಧಾರಣೆಯ ಸರ್ವಾಂಗವಿಶಿಷ್ಟವಾದ ಬಹು ದೊಡ್ಡ ಕಾರ್ಯಕ್ರಮಗಳನ್ನು ಗೊತ್ತುಪಡಿಸಿ ಅತಿ ಧೈರ್ಯದಿಂದ ಅದನ್ನು ಸಾಗಿಸಿದನು.

ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಈ ಕಾಲದಲ್ಲಿ ಪ್ರತಿವರ್ಷ ಸೇರುತ್ತಿರುವ ಸಾಮಾಜಿಕ ಪರಿಷತ್ತುಗಳಾಗಲಿ ಅಥವಾ ಈ ದೇಶದ ಸುಧಾರಕರಾಗಲಿ ಬಸವನ ಕಾರ್ಯಕ್ಕಿಂತ ಹೆಚ್ಚಿನದಾವುದನ್ನೂ ಮಾಡಲಾರರು. ಭರತಖಂಡದ ಚರಿತ್ರೆ ಮತ್ತು ಭಾರತೀಯರ ಆಚಾರ ಪದ್ಧತಿಗಳನ್ನು ಬಹು ಚೆನ್ನಾಗಿ ತಿಳಿದುಕೊಂಡಿದ್ದ ಸರ್. ಜೇಮ್ಸ್ ಕ್ಯಾಂಬೆಲ್‌ರವರು ಹೇಳಿರುವಂತೆ ಭರತಖಂಡದ ಈಗಿನ ಸಮಾಜ ಸುಧಾರಕರು ಬಸವನ ನುಡಿಯನ್ನೇ ನುಡಿಯುತ್ತಲೂ, ಆತನ ಅಭಿಪ್ರಾಯವನ್ನೇ ಬೋಧಿಸುತ್ತಲೂ ಇದ್ದಾರೆ.

ಈಗಿನಂತೆ ಆ ಕಾಲದಲ್ಲಿ ಸಮಾಜಶಾಸ್ತ್ರವೆಂಬ ಒಂದು ಶಾಸ್ತ್ರವೇನು ಬೇರೆಯಾಗಿ ಏರ್ಪಟ್ಟಿರಲಿಲ್ಲ. ಈಗ ಪ್ರಚಾರದಲ್ಲಿ ಬಂದಿರುವ ಸಮಾಜಶಾಸ್ತ್ರವು ಪಾಶ್ಚಾತ್ಯರ ವಿಚಾರ ಸರಣಿಯಿಂದುಂಟಾದುದು. ಮೊದಲು ಧರ್ಮಶಾಸ್ತ್ರದಲ್ಲಿಯೇ ಈ ಸಮಾಜಶಾಸ್ತ್ರವೂ ಅಡಕವಾಗಿದ್ದಿತು. ಅಂತೆಯೇ ಬಸವಾದಿ ವಚನಕಾರರು ಸಮಾಜಶಾಸ್ತ್ರವೆಂಬ ಒಂದು ಶಾಸ್ತ್ರವನ್ನು ಬೇರೆಯಾಗಿ ಹೇಳಿಲ್ಲ. ಆದರೂ ಈಗಿನ ಸಮಾಜಶಾಸ್ತ್ರಜ್ಞರ ಎಲ್ಲ ಮುಖ್ಯ ತತ್ವಗಳೂ ಆಗ ಧರ್ಮದ ಹೆಸರಿನಿಂದಲೇ ಬಳಕೆಯಲ್ಲಿ ತರಲ್ಪಟ್ಟಿದ್ದವು.

ಸಮಾಜಶಾಸ್ತ್ರದ ಸುಪ್ರಸಿದ್ಧ ಆಚಾರ್ಯರಾದ **ಹರ್ಬರ್ಟ ಸ್ಪೆನ್ಸರರು** ದಿ ಡಾಟಾ ಆಫ್ ಸೋಷಿಯಾಲಜಿ ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ.

ಅನ್ಯಾಯ ವಿಷಯಕವಾದ ಮನೋವೃತ್ತಿಯು ಒಂದು ಸಮಾಜದಲ್ಲಿ ಎಷ್ಟರ ಮಟ್ಟಿಗಿದೆಯೆಂಬುದು ಗೊತ್ತಾಗಬೇಕಾದರೆ ಈ ಸಮಾಜವು ಸ್ತ್ರೀಯರನ್ನು ಹೇಗೆ ನಡೆಯಿಸಿಕೊಳ್ಳುತ್ತದೆಂಬುದನ್ನು ನೋಡಬೇಕು. ಕಾಡು ಜನಾಂಗವು ಸ್ತ್ರಿಯರನ್ನು ಕೀಳಾಗಿ ಕಂಡು ಕ್ರೂರತನದಿಂದ ನಡೆಯಿಸಿಕೊಳ್ಳುತ್ತದೆ.

ಬಸವಾದಿ ವಚನಕಾರರು ಸ್ತ್ರೀಯರಿಗೆ ಪುರುಷರಂತೆಯೇ ಸಕಲ ವಿಷಯಗಳಲ್ಲಿಯೂ ಸಮಾನತತ್ವವನ್ನುಂಟುಮಾಡಿಕೊಟ್ಟರೆಂಬುದು ಈ ಪುಸ್ತಕದ ೩೮-೩೯ನೆಯ ಪುಟಗಳಲ್ಲಿ ವಿವರಿಸಲ್ಪಟ್ಟಿದೆ. ಹೀಗೆ ಸ್ತ್ರೀಯರಿಗೆ ಸಮಾನತ್ವವನ್ನು ಕೊಟ್ಟಿದ್ದರಿಂದಲೇ ಆಗ ಧರ್ಮಚರ್ಚೆಗಾಗಿ ಏರ್ಪಟ್ಟಿದ ಶಿವಾನುಭವ ಮಂಟಪದಲ್ಲಿ ಹೆಣ್ಣುಮಕ್ಕಳು ಕೂಡಾ ವಾದವಿವಾದಗಳನ್ನು ನಡೆಯಿಸುತ್ತಿದ್ದರು. ಅಕ್ಕಮಹಾದೇವಿ, ಮುಕ್ತಾಯಕ್ಕ, ಕದರಿ ರೆಮ್ಮವ್ವೆ, ಕೊಟ್ಟಣದ ಸೋಮವ್ವೆ, ಕನ್ನಡಿ ಕಾಯಕದ ರೇಮವ್ವೆ, ಕಾಲುಕಣ್ಣಿಯ ಕಾಮಮ್ಮ, ಹಡಪದ ಲಿಂಗಮ್ಮ, ಲಕ್ಷ್ಮಮ್ಮ, ಮಹದೇವಿ, ಕಾಳವ್ವೆ, ಗಂಗಮ್ಮ, ವೀರಮ್ಮ, ಗುಡ್ಡವ್ವೆ, ಸತ್ಯಕ್ಕ, ರೇಕಮ್ಮ ಮೊದಲಾದ ಅನೇಕ ಶಿವಶರಣೆಯರು ವಚನಗಳನ್ನು ರಚಿಸಿ ಜನಾಂಗಕ್ಕೆ ಮಾರ್ಗದರ್ಶಕರಾದರು.

ಈಗ ರಾಜಕೀಯ, ಧಾರ್ಮಿಕ, ಸಾಮಾಜಿಕ, ಮೊದಲಾದ ವಿಷಯಗಳ ಸಂಬಂಧವಾಗಿ ಚರ್ಚೆಗಳನ್ನು ನಡೆಯಿಸಿ ಹೊಸ ಹೊಸ ಏರ್ಪಾಟುಗಳನ್ನು ಮಾಡಲು ಹೇಗೆ ಸಮಿತಿಗಳು ಏರ್ಪಡುತ್ತಲಿವೆಯೋ ಹಾಗೆಯೇ ಆ ಕಾಲದಲ್ಲಿ ವಚನಕಾರರು ಶಿವಾನುಭವಿಗಳ ಸಮಿತಿಯನ್ನು ಏರ್ಪಡಿಸಿದ್ದರು. ಅವರು ಧಾರ್ಮಿಕ ಚರ್ಚೆಯನ್ನು ಮಾಡುವ ಸ್ಥಾನ ಶಿವಾನುಭವ ಮಂಟಪ.

ಅಲ್ಲಿಯ ಧಾರ್ಮಿಕ ಚರ್ಚೆಯಲ್ಲಿ ಮಾದಾರ ಧೂಳಯ್ಯ, ಒಕ್ಕಲ ಮುದ್ದಯ್ಯ, ತಳವಾರ ಕಾಮಿದೇವ, ಕಿನ್ನರಿ ಬ್ರಹ್ಮಯ್ಯ, ಕುಪ್ಪಸದ ಚಂದಯ್ಯ, ಗಾವುದಿ ಮಾಚಯ್ಯ, ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ, ಗಾಣದ ಕಣ್ಣಪ್ಪ, ತುರುಗಾಯಿ ರಾಮಣ್ಣ, ಮೇದಾರ ಕೇತಯ್ಯ, ನುಲಿಯ ಚಂದಯ್ಯ, ಕನ್ನಡಿ ಕಾಯಕದ ಅಮ್ಮಿದೇವಯ್ಯ, ಸೂಜಿಕಾಯಕದ ರಾಮಿತಂದೆ, ಬಾಚಿಕಾಯಕದ ಬಸವಣ್ಣ, ಸುಂಕದ ಬಂಕಣ್ಣ, ವೈದ್ಯ ಸಂಗಣ್ಣ, ಬಹುರೂಪಿ ಚೌಡಯ್ಯ ಮೊದಲಾದ ಶರಣರಿದ್ದರು. ಇವರೆಲ್ಲರೂ ವಚನಕಾರರು. ಇವರು ಬೇರೆ ಬೇರೆ ಕಸಬಿನವರಿದ್ದರೆಂಬುದು ಅವರ ಹೆಸರಿನ ಮೇಲಿಂದಲೇ ಸ್ಪಷ್ಟವಾಗುತ್ತದೆ. ಹೀಗೆ ಎಲ್ಲ ಕಸಬುಗಳನ್ನು ಮಾಡುವವರು ಮೇಲುಕೀಳುಗಳ ಭಾವನೆಯಿಲ್ಲದೆ ನಡೆದಿದ್ದುದನ್ನು ನೋಡಿದರೆ ಈಗಿನ ಸಮತಾವಾದಿಗಳ ತತ್ವವು ಅವರ ಆಚರಣೆಯಲ್ಲಿದ್ದಿತೆಂದು ವ್ಯಕ್ತವಾಗುವುದಿಲ್ಲವೆ?

ಹರಳಯ್ಯನವರೆಂಬ ಪಾದರಕ್ಷೆಗಳನ್ನು ಹೊಲಿಯುತ್ತಿದ್ದವರ ಮಗನಿಗೂ ಮಧುವಯ್ಯನವರೆಂಬ ಸೈನ್ಯ ಶಾಖೆ ಗಜಪತಿಯ ಶ್ರೇಷ್ಠಾಧಿಕಾರದಲ್ಲಿದ್ದವರ ಮಗಳಿಗೂ ವಿವಾಹವು ಕೂಡಾ ಆಯಿತು. ಹರಳಯ್ಯನವರು ಜನ್ಮದಿಂದ ಅಂತ್ಯಜರಾಗಿದ್ದರು. ಮಧುವಯ್ಯನವರಾದರೋ ಬ್ರಾಹ್ಮಣರಾಗಿದ್ದರು. ಇವರು ಬಸವಾದಿ ವಚನಕಾರರ ಮತವನ್ನು ಅನುಸರಿಸಿದನಂತರ ಅವರ ಜನ್ಮ ವಿಶಿಷ್ಟ ಕೀಳು ಮೇಲುಗಳೆಲ್ಲಾ ಅಳಿದುಹೋಗಿ ಸಮಾನರಾದರು. ಈ ಪ್ರಕಾರ ಈಗ ಸಮಾಜ ಸುಧಾರಕರು ಅಪೇಕ್ಷಿಸುತ್ತಿರುವ ಉತ್ತಮೋತ್ತಮ ತತ್ವಗಳನ್ನೆಲ್ಲಾ ಆಗ ವಚನಕಾರರು ಆಚರಣೆಯಲ್ಲಿಯೇ ತಂದಿದ್ದರು.

ವಚನಕಾರರು ಜನ್ಮ ವಿಶಿಷ್ಟವಾದ ಬ್ರಾಹ್ಮಣಾದಿ ವರ್ಣಗಳನ್ನು ಜನಾಂಗದಿಂದ ತೆಗೆದುಹಾಕಲು ಪ್ರಯತ್ನಿಸಿದರಲ್ಲದೆ ಗುಣಕರ್ಮ ವಿಶಿಷ್ಟವಾದ ವರ್ಣ ಕಲ್ಪನೆಯನ್ನು ಕೂಡಾ ನಿರಾಕರಿಸಿದರು. ವರ್ಣ ಕಲ್ಪನೆಯು ಜನಾಂಗದ ಉನ್ನತಿಗೆ ಪ್ರತಿಕೂಲವಾದುದೆಂದೇ ಅವರ ಮುಖ್ಯ ಸಿದ್ಧಾಂತ. ಅಂತೆಯೇ ಬಸವಣ್ಣನವರು ವರ್ಣಗಳಿಂದ ಪ್ರಯೋಜನವೇನು? ಎಂಬುದಾಗಿ ಒಂದು ವಚನದಲ್ಲಿ ಸ್ಪಷ್ಟ ಕೇಳಿದ್ದಾರೆ. ವಚನಕಾರರ ಸಮಾಜಶಾಸ್ತ್ರದಂತೆ ಮನುಷ್ಯರಲ್ಲಿ ಲಿಂಗಾಂಗಿಗಳಾದವರೆಲ್ಲ ಒಂದು ವರ್ಗದವರು, ಇನ್ನಿತರರೆಲ್ಲ ಮತ್ತೊಂದು ವರ್ಗದವರೆಂಬ ಎರಡೇ ಭೇದಗಳಲ್ಲದೆ ಇನ್ನಾವ ವರ್ಣ, ಜಾತಿ, ಕುಲ, ಪಂಗಡಗಳ ವಿಭಾಗಗಳು ಇಲ್ಲವೇ ಇಲ್ಲ.

ಹೀಗೆ ೮೦೦ ವರುಷಗಳ ಹಿಂದೆಯೇ ಸಮಾಜ ಸುಧಾರಣೆಯ ಎಲ್ಲ ಮುಖ್ಯ ತತ್ವಗಳೂ ವಚನಕಾರರಿಂದ ಪ್ರತಿಪಾದಿಸಲ್ಪಟ್ಟು ಆಚರಣೆಯಲ್ಲಿ ಬಂದಿದ್ದರೂ ಆ ಸಮಾಜವಾದರೂ ಅವುಗಳನ್ನೆಲ್ಲಾ ಈಗೇಕೆ ಆಚರಣೆಯಲ್ಲಿ ಇಟ್ಟುಕೊಂಡಿಲ್ಲ. ಅನ್ಯ ಸಮಾಜಗಳು ಈವರೆಗು ಏಕೆ ಅನುಕರಿಸಲಿಲ್ಲ? ಎಂಬ ಪ್ರಶ್ನೆಗಳುಂಟಾಗುವುದು ಸ್ವಾಭಾವಿಕ. ಸಮಾಜಶಾಸ್ತ್ರ ಪ್ರವರ್ತಕರಲ್ಲಿ ಮುಖ್ಯರಾದ **ಹರ್ಬರ್ಟ ಸ್ಪೆನ್ಸರ**ವರು ಅದೇ ತಮ್ಮ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ :

ಯಾವ ಸಮಾಜದ ಕಡೆಗೆ ನಾವು ನೋಡಿದರೂ ಆ ಸಮಾಜದಲ್ಲಿಯ ಅಶಿಕ್ಷಿತರು ಸುಧಾರಣೆಗೆ ಇಷ್ಟಪಡುವುದಿಲ್ಲ. ಜನಸಾಮಾನ್ಯದಲ್ಲಿ ಒಂದು ಉಪಯುಕ್ತವಾದ ವಿಷಯವನ್ನು ಸೇರಿಸಬೇಕಾದರು ಬಹು ತೊಂದರೆಯಾಗುತ್ತದೆ. ಜನರ ಬೌದ್ಧಿಕ ಉನ್ನತಿಯು ಯಾವ ಪ್ರಮಾಣದಂತೆ ಕಡಿಮೆಯಿರುತ್ತದೆಯೋ ಆ ಪ್ರಮಾಣದಂತೆ ಅವರಲ್ಲಿ ಪುರಾತನ ರೂಢಿಯ ಕಡೆಗೆ ಒಲಿಮೆ ಹೆಚ್ಚು

ಅವರ ಜ್ಞಾನತಂತು ಜಾಲವು ಗಟ್ಟಿಗೊಂಡಿರುವುದರಿಂದ ಹೊಸ ಕಾರ್ಯ ಪದ್ಧತಿಯನ್ನು ಗ್ರಹಣ ಮಾಡಿಕೊಳ್ಳುವ ಸಾಮರ್ಥ್ಯವು ಅದರಲ್ಲಿರುವುದಿಲ್ಲ. ಅಂತೆಯೇ ಯಾವುದು ರೂಢಿಯಲ್ಲಿದೆಯೋ ಅದನ್ನೇ ಹಿಡಿದುಕೊಂಡಿರುತ್ತದೆ.

ಸಾವಿರಾರು ವರುಷಗಳಿಂದ ವರ್ಣ, ಜಾತಿ, ಕುಲ, ಮೇಲು, ಕೀಳು ಮೊದಲಾದ ನಾನಾ ತಪ್ಪು ತಿಳುವಳಿಕೆಗಳಲ್ಲಿಯೇ ಹುಟ್ಟಿ ಬೆಳೆದ ಹಿಂದು ಜನಸಮುದಾಯಕ್ಕೆ ವಚನಕಾರರ ಉದಾರ ವಿಚಾರ ಸರಣಿಯನ್ನು ಗ್ರಹಣ ಮಾಡಿಕೊಳ್ಳುವ ಶಕ್ತಿಯಿಲ್ಲ. ಎಂದಮೇಲೆ ಅವರಿದ್ದಾಗ ಅವರ ದಿವ್ಯ ಪ್ರಭೆಯಿಂದಾದ ಕಾರ್ಯಗಳು ಮುಂದೆಯೂ ಸರ್ವತ್ರ ಸಾಗುವುದೆಂತು? ವಚನಕಾರರ ಸಂದೇಶವು ಇನ್ನು ಮುಂದೆ ಹೆಚ್ಚು ಪ್ರಚಾರವಾಗುವುದು. ಈಗಿನ ಸಮಾಜ ಸುಧಾರಣೆಯ ಪ್ರಯತ್ನಗಳೆಲ್ಲಾ ಬೇರೆ ಬೇರೆ ಹೆಸರುಗಳಿಂದ ನಡೆಯುತ್ತಿದ್ದರೂ ತತ್ವಗಳೇನೂ ಅವೇ ಸರಿ. ಔಪಸಣಾ ಮೂರ್ತಿ ಅಥವಾ ಸಾಂಪ್ರದಾಯದ ಆಚಾರ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ವಚನಕಾರರ ಸಾಮಾಜಿಕ ತತ್ವಗಳು ಸರ್ವರಿಗೂ ಅನುಕರಣೀಯವಾಗಿವೆಯೆಂದು ಈ ಪುಸ್ತಕವನ್ನು ಓದಿದ ನಿಷ್ಪಕ್ಷಪಾತಿಗಳಿಗೆ ವ್ಯಕ್ತವಾಗದಿರಲಾರದು.

ಆದಕಾರಣ ವಚನಕಾರರ ಸಮಾಜ ರಚನೆಯ ದಿವ್ಯ ತತ್ವಗಳು ಹಿಂದು ಜನಾಂಗದಲ್ಲಿ ವ್ಯಾಪಿಸಲು ಸಹಾಯವಾಗುವಂತೆ ಈ ಪಂಡಿತತ್ರಯರು ವಿವೇಚಿಸಿ ವೀರಶೈವಸಮಾಜಕ್ಕೂ ಮಹದುಪಕಾರವನ್ನು ಮಾಡಿರುವುದರಿಂದ ನಾನು ಈ ಮಹಾಶಯರನ್ನು ಹೃದಯ ಪೂರ್ವಕ ಅಭಿನಂದಿಸುತ್ತೇನೆ. ಅನೇಕ ವೀರಶೈವರು ತಮ್ಮಲ್ಲಿರುವ ತಪ್ಪು ತಿಳುವಳಿಕೆಯನ್ನು ಈ ಪಂಡಿತರ ಬೋಧದಿಂದಲಾದರೂ ತೆಗೆದುಹಾಕಿ ಬಸವಾದಿ ವಚನಕಾರರು ಈ ಸಮಾಜವು ದಿವ್ಯತರವಾದುದಾಗುವಂತೆ ಮಾಡಲೆಂದು ಹಾರೈಸುತ್ತೇನೆ.

ತಾ. ೧೬-೯-೩೬ **ಹರ್ಡೇಕರ ಮಂಜಪ್ಪ**

ವೀರಶೈವ ವಿದ್ಯಾಲಯ

❖❖

ಬಸವನ ಕಾರ್ಯಕ್ಷೇತ್ರ

[ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಎಂ. ಎ. ಎಲ್. ಎಲ್. ಬಿ. ಇವರು **"ವಚನಶಾಸ್ತ್ರ ರಹಸ್ಯ"** ಎಂಬ ತಮ್ಮ ಗ್ರಂಥದಲ್ಲಿ ಬಸವಣ್ಣನವರ ಕುರಿತು ಹೀಗೆ ಹೇಳಿದ್ದಾರೆ-ಭಾಗ : ೨ ಪುಟ, ೨೫೧-೫೨]

ಬಸವನ ಕಾರ್ಯಕ್ಷೇತ್ರವು ಬಹಳೇ ವಿಸ್ತೃತವಿತ್ತು. ಬರಿಯ ಆಧ್ಯಾತ್ಮಿಕ ಮತ್ತು ನೀತಿಯ ತತ್ವಗಳನ್ನು ಬಾಯಿಂದ ಪ್ರತಿಪಾದಿಸಿ, ಉಪದೇಶಿಸಿ ಸುಮ್ಮನಿರದೆ ಅವನು ವೀರಶೈವ ಭಕ್ತಿ ಮಾರ್ಗವನ್ನು ಚೆನ್ನಾಗಿ ಪ್ರಸ್ಥಾಪಿಸಿ ಸಮತೆ ಬಂಧುಭಾವ ನೀತಿಗಳ ಆಧಾರವಾದ ಒಂದು ಉಚ್ಚತರದ ಸಮಾಜವನ್ನು ಏರ್ಪಡಿಸಿದನು. ಕುಲ ಮತ್ತು ಉದ್ಯೋಗ ಇವುಗಳ ಬಗ್ಗೆ ಸಮಾಜದಲ್ಲಿ ರೂಢವಿದ್ದ ಕೃತಕ ಉಚ್ಚ ನೀಚ ಭಾವನೆಗಳನ್ನು ತೊಡೆದುಬಿಟ್ಟನು. ಸ್ತ್ರೀ ಶೂದ್ರಾದಿಗಳ ಬಗ್ಗೆ ಇದ್ದ ತಿರಸ್ಕಾರ ಭಾವವನ್ನು ಅಳಿಸಿಬಿಟ್ಟು ಎಲ್ಲರಿಗೂ ಸಾಮಾನ್ಯವಾಗಿರುವ ಧರ್ಮ ದ್ವಾರವನ್ನು ಅವರಿಗೆ ತೆರೆದುಕೊಟ್ಟನು.

ತತ್ವಜ್ಞಾನಕ್ಕಿಂತ ಧರ್ಮಾಚಾರದಲ್ಲಿ, ಧರ್ಮಾಚಾರಕ್ಕಿಂತ ನೀತಿ ಮಾರ್ಗದ ಪ್ರಸ್ಥಾಪನೆಯಲ್ಲಿ, ನೀತಿ ಮಾರ್ಗಕ್ಕಿಂತ ಸಮಾಜ ಸುಧಾರಣೆಯಲ್ಲಿ ಬಸವಣ್ಣನು ಹೆಚ್ಚಿನ ಕರ್ತೃತ್ವವನ್ನೂ ಆತ್ಮವಿಶ್ವಾಸವನ್ನೂ ದೂರದೃಷ್ಟಿಯನ್ನೂ ತೋರಿಸಿದನು. ಇದು ಅವನ ವ್ಯವಹಾರಿಕ ದೃಷ್ಟಿಯನ್ನೂ ಜ್ಞಾನ ಭಕ್ತಿ ಕರ್ಮಗಳ ಸಮ್ಮೇಳನ ಮಾಡುವ ಶೈಲಿಯನ್ನೂ ವ್ಯಕ್ತಗೊಳಿಸುವದು. ಅವನ ಮಹತ್ಕಾರ್ಯದಲ್ಲಿ ಮಿಕ್ಕ ಶರಣರೆಲ್ಲರೂ ಸಹಾಯಭೂತರಾದರು. ಆದರೆ ಅವನೇ ಇವೆಲ್ಲವುಗಳಿಗೆ ಮೂಲನು, ಮುಖ್ಯನು, ಚಾಲಕನು, ಮಧ್ಯ ಬಿಂದುವು. ಈ ಮಹಾ ಮಹಿಮನ ಗುಣಗಳನ್ನು ಅನೇಕ ವಚನಕಾರರು ಬಗೆ ಬಗೆಯಿಂದ ಬಣ್ಣಿಸಿರುವರು. ಅವನ ಸಮಕಾಲೀನರಲ್ಲಿ ಆಗಲಿ ಅವನ ಹಿಂದಿನಿಂದ ಬಂದವರಲ್ಲಿ ಆಗಲಿ, ಅವನನ್ನು ಒಳ್ಳೇ ಶ್ರೇಷ್ಠನೆಂದು ಬಣ್ಣಿಸದೆ ಇದ್ದವರು ಒಬ್ಬರೂ ಇಲ್ಲವೆಂದರೂ ಸಲ್ಲುವದು.

ಅವನು ಪರಶಿವನ ಸ್ಥೂಲ ತತ್ವವೆಂದು, ಭಕ್ತಿ ಭಾಂಡಾರಿಯೆಂದು ಭಕ್ತಿಗೆ ಶೃಂಗಾರವೆಂದು ಶಿವಾಚಾರ ಚಕ್ರವರ್ತಿ ಎಂದು, ಸರ್ವಾಚಾರ ಸಂಪನ್ನರೆಂದು ಆರೂಢ ದಾಸೋಹಿ ಎಂದು, ಐವತ್ತೆರಡು ಶರಣ ಲಕ್ಷಣಗಳುಳ್ಳ ಆದರ್ಶ ಶರಣನೆಂದು, ವಿಧ ವಿಧವಾಗಿ ವರ್ಣಿಸಲ್ಪಟ್ಟಿರುವನು. ಬಸವಣ್ಣನ ಕೀರ್ತಿ ಪ್ರಭಾವಗಳು ಅಂದಿನಿಂದ ಇಂದಿನ ವರೆಗೆ ಬೆಳೆಯುತ್ತ ಬಂದಂತೆ ಇನ್ನಾವ ಶರಣನ ಹೆಸರು ಹೆಚ್ಚುತ್ತ ಬಂದಿಲ್ಲ. ಬಸವಣ್ಣನ ಅನುಪಮ ಗುಣಶೀಲಗಳೂ ಅವನ ಅದ್ವಿತೀಯ ಕರ್ತೃತ್ವಶಕ್ತಿಯೂ ಇವೇ ಹಾಗೆ ಆಗುವ ಕಾರಣಗಳು.

ಅವನಲ್ಲಿಯ ಅತ್ಯುತ್ಕಟ ಏಕಾಂತಿಕ ನಿರ್ಹೇತುಕ ಭಕ್ತಿ, ತತ್ವ ಹಿಡಿದವರಿಗೆ ತೊತ್ತಾಗಿ ನಡೆವೆನು, ಶ್ರೀ ಮಹಾದೇವನ ನೆನೆವನ ಪಾದರಕ್ಷೆಯ ಕಾಯ್ದು ಬದುಕುವೆ, ಎಂಬ ಅವನ ವಿನಯಾತಿಶಯ ಮತ್ತು ತತ್ವನಿಷ್ಠೆ ಪ್ರತ್ಯಕ್ಷ ಧರ್ಮಾಚರಣೆಯಲ್ಲಿಯ ಮತ್ತು ದಾಸೋಹದಲ್ಲಿಯ ಅವನ ದಕ್ಷತೆ, ಅವನಲ್ಲಿರುವ ನಡೆನುಡಿಗಳ ಮೇಳ, ಕಳ್ಳನು ಹೆಂಡತಿಯ ಒಡವೆಗಳನ್ನು ಕಳಚತೊಡಗಿರಲು, ಅವನ ಕೈ ನೊಂದೀತು ಎಲೆ ಚಂಡಾಲಗಿತ್ತೀ ಬೇಗ ತೆಗೆದುಕೊಡು, ಅವನೂ ಕೂಡಲ ಸಂಗಮದೇವನಲ್ಲವೇ? ಎಂದು ಹೇಳುವಲ್ಲಿ ಒಡೆದು ಕಾಣುವ ಅವನ ನಿಃಸ್ಪೃಹತೆ, ನಿಮಗಂಜುವೆನಲ್ಲದೆ ಆಂ ಬಿಜ್ಜಳನಿಗಂಜುವೆನೆ ಎಂಬುವ ಅವನ ಅಭಯ ಮತ್ತು ಪಾಪ ಭೀರುತ್ತ ಈ ಮುಂತಾದ ಗುಣರಾಶಿಯೆಲ್ಲ ಯಾವನಲ್ಲಿ ಒಟ್ಟುಗೂಡಿತ್ತೋ ಅವನ ಮಹಿಮೆಯು ಅಷ್ಟಿಷ್ಟೆಂದು ವರ್ಣಿಸಲಿಕ್ಕೆ ಬರುವಂತಿಲ್ಲ.

ವಚನ ಲೇಖಕ ಎಂಬ ದೃಷ್ಟಿಯಿಂದ ಸಹ ಬಸವಣ್ಣನು ಬಹಳ ಉಚ್ಚ ತರಗತಿಯವರನಿರುವನು. ಅವನ ವಚನಗಳೆಂದರೆ ಅವನ ಅಂತರ್ಹೃದಯದಲ್ಲಿಯ ಭಕ್ತಿ, ಆರ್ತಭಾವ, ಉಚ್ಚವಾದ ಧ್ಯೇಯವಾದ, ಪರಮಾತ್ಮನನ್ನು ಸಾಕ್ಷಾತ್ಕರಿಸಬೇಕೆಂಬ ಅವನ ತವಕ, ಆಯಾ ಪ್ರಸಂಗಗಳಲ್ಲಿ ಅವನಲ್ಲಿ ಎದ್ದ ಶ್ರೇಷ್ಠ ಭಾವಗಳ ಊರ್ಮಿಗಳೂ, ಇವೆಲ್ಲವುಗಳಿಗೆ ಹಿಡಿದ ಕೈಗನ್ನಡಿಯೆ ಇರುವವು. ಅವನ ಸ್ವಂತ ಭಾವನೇತಿಹಾಸವೂ ಚಾರಿತ್ರ್ಯವೂ ಅವನ ವಚನಗಳಲ್ಲಿ ಎಷ್ಟು ಸ್ಪಷ್ಟವಾಗಿ ಮತ್ತು ನಿರ್ವಂಚಕ ರೀತಿಯಿಂದ ಪ್ರತಿಬಿಂಬಿತವಾಗಿದೆಯೋ ಅಷ್ಟು ಇನ್ನಾವ ವಚನಕಾರರ ಇತಿಹಾಸವೂ ಆಯಾ ವಚನಗಳಲ್ಲಿ ಎದ್ದು ಕಾಣಿಸುವುದಿಲ್ಲ.

❖❖

ವಚನಕಾರರ ಸಾಮಾಜಿಕ ವಿಚಾರ

[ಶ್ರೀ ದಿವಾಕರರು ತಮ್ಮ "ವಚನಶಾಸ್ತ್ರ ರಹಸ್ಯ" ಎಂಬ ಪುಸ್ತಕದಲ್ಲಿ ವಚನಕಾರರ ಸಾಮಾಜಿಕ ವಿಚಾರಗಳನ್ನು ಕುರಿತು ಹೀಗೆ ಹೇಳಿದ್ದಾರೆ. – ಭಾಗ : ೨, ಪುಟ, ೧೯೩–೨೦೫]

ಇನ್ನು ವಚನಕಾರರ ಸಾಮಾಜಿಕ ವಿಚಾರಗಳನ್ನು ಸ್ವಲ್ಪ ನೋಡುವ. ಸಮಾಜವೆಂದರೆ ದೇಶ, ಭಾಷೆ, ಜಾತಿ, ಗುಣ, ಧರ್ಮ ಹಿತಾಹಿತ ಸಂಬಂಧ ಇವುಗಳಲ್ಲಿ ಒಂದೆರಡು ಅಥವಾ ಎಲ್ಲವೂ ಯಾವ ವ್ಯಕ್ತಿಗಳ ಗುಂಪಿಗೆ ಸಾಮಾನ್ಯವಿರುವವೋ ಆ ಗುಂಪು ಸಮಾಜದಲ್ಲಿ ಶಾಂತಿಯನ್ನೂ ಸ್ಥಿರತೆಯನ್ನೂ ಪ್ರಸ್ಥಾಪಿಸುವ ಉದ್ದೇಶದಿಂದಲೇ ನೀತಿ ನಿಯಮಗಳು ಅಸ್ತಿತ್ವದಲ್ಲಿ ಬಂದಿರುವವು. ಆದುದರಿಂದ ವಚನಕಾರರು ಹೇಳಿದ ನೀತಿ ನಿಯಮಗಳನ್ನು ನೋಡಿದರೆ ಒಂದು ನೀತಿ ಶುದ್ಧವಾದ ಸ್ಥಿರ, ಮತ್ತು ಧರ್ಮ ಭಾವನೆಯುಳ್ಳ ಸಮಾಜವನ್ನು ಕಟ್ಟುವುದು ಅವರ ಉದ್ದೇಶವಾಗಿತ್ತೆಂಬುದು ಒಡೆದು ಕಾಣುವಂತಿದೆ.

ನೀತಿ ನಿಯಮಗಳಲ್ಲದೆ ಸಮಾಜದ ಶಾಂತಿ ಸ್ಥಿರತೆ ಮುಂತಾದವುಗಳನ್ನು ಭದ್ರವಾಗಿಡಲಿಕ್ಕೆ ಇನ್ನಾವ ಸಂಗತಿಗಳು ಅವಶ್ಯ ಎಂಬ ಬಗ್ಗೆ ವಿಚಾರ ಮಾಡಿದರೆ, ಸಮಾಜದಲ್ಲಿ ಕೃತ್ರಿಮ ಉಚ್ಚ, ನೀಚಭಾವಗಳಿಲ್ಲದಿರೋಣ, ಸಮಾನತೆ, ಉಚ್ಚ ಆದರ್ಶಗಳು, ಸಮಾನ ಸಂಸ್ಕೃತಿ, ಗುಣ ಗ್ರಾಹಕತೆ, ಉದ್ಯೋಗಶೀಲತೆ, ಮುಂತಾದವುಗಳು ಅವಶ್ಯವೆಂದು ಕಂಡುಬರುವುದು. ಜಾತಿ ಸಂಸ್ಥೆಯ ಮತ್ತು ಅದರೊಡನೆ ಹಲವು ಜಾತಿಗಳು ಉಚ್ಚ ಮತ್ತು ಹಲವು ನೀಚ ಎಂಬ ಭಾವವು ಹಿಂದುಸ್ಥಾನದಲ್ಲಿ ಬಹಳ ಪುರಾತನ ಕಾಲದಿಂದ ಪ್ರಚಲಿತವಿರುವುದು. ಈ ಬಗೆಯ ಭೇದವೂ ವೈಷಮ್ಯವೂ ಯಾಕೆ ಮತ್ತು ಸರಿಯಾಗಿ ಯಾವ ಕಾಲಕ್ಕೆ ಉತ್ಪನ್ನವಾದವು ಇದನ್ನು ಪರಿಶೋಧಿಸುವ ಸ್ಥಲವು ಇದಲ್ಲ.

ಇಲ್ಲಿ ಅನೇಕ ವಿವಿಧ ಸಂಸ್ಕೃತಿಯ ಜನಾಂಗಗಳು ಒತ್ತಟ್ಟಿಗೆ ಇರುವ ಪ್ರಸಂಗವು ಬಂದುದರಿಂದ ಈ ಅನೇಕ ಜಾತಿಗಳು ಉಂಟಾದವು ಎಂದು ಐತಿಹಾಸಿಕ ದೃಷ್ಟಿಯಿಂದ ನೋಡುವವರ ಮತವಿರುವದು. ಕದಾಚಿತ್ ಅವು ಆಯಾಕಾಲಕ್ಕೆ ಅವಶ್ಯವೂ ಅನಿವಾರ್ಯವೂ ಇದ್ದಿರಬಹುದು. ಆದರೆ ಕಾಲಾಂತರದಿಂದ ಆ ಪದ್ಧತಿಯಲ್ಲಿ ಅನೇಕ ದೋಷಗಳು ಉಂಟಾಗಿ ಸಮಾಜದಲ್ಲಿ ಒಡಕು ದುರ್ಬಲತೆಗಳು ಹಬ್ಬಿದವು. ಹೀಗಾಗುವದಿಂದ ಸಮಾಜದ ಬಲವು ಕುಗ್ಗಿ ಹೋಯಿತು. ಉಚ್ಚರೆನಿಸಿಕೊಳ್ಳುವವರಲ್ಲಿ ಅಹಂಮನ್ಯತೆ, ದುರಭಿಮಾನ, ಈಶ್ವರ ಭಾವ ಅಂದರೆ ಎರಡನೆಯವರನ್ನು ಆಳಬೇಕು ಎಂಬ ಬುದ್ಧಿ, ಇವು

ಉತ್ಪನ್ನವಾದವು ಮತ್ತು ನೀಚರೆನಿಸಿಕೊಳ್ಳುವವರಲ್ಲಿ ದಾಶ್ಯಭಾವ, ಸ್ವಾಭಿಮಾನಶೂನ್ಯತೆ, ಆತ್ಮ ವಿಶ್ವಾಸಹೀನತೆ ಇವು ಹೆಚ್ಚಾದವು. ಸಮಾಜದ ಕರ್ತೃತ್ವಶಕ್ತಿಯು ಹಾಳಾಗಿ ಹೋಯಿತು.

ಕೃತ್ರಿಮ ವಿಷಮತೆಯ ಮೂಲಕ ಹೀಗೆ ಮಾತ್ಸರ್ಯಾದಿಗಳು ಪ್ರಬಲವಾದುದನ್ನು ನೋಡಿ ವಚನಕಾರರು ಸಮಾಜದಲ್ಲಿ ಎಲ್ಲರ ಸಮ ಸಮಾನತೆಯನ್ನು ಸಾರಿದರು. ಜನ್ಮ ಕುಲಾದಿಗಳಿಂದ ಮನುಷ್ಯನು ಯೋಗ್ಯಾಯೋಗ್ಯನೆನ್ನದೆ ಗುಣ ಕರ್ಮಗಳಿಂದ ಅವನನ್ನು ಪರೀಕ್ಷಿಸಬೇಕು ಎಂಬ ತತ್ವವನ್ನು ಅವರು ಬಹಳ ಒತ್ತಿ ಹೇಳಿರುವರು. ಅವರು ಮಾಡಿದ ಇನ್ನೊಂದು ಮಹತ್ವದ ಸುಧಾರಣೆಯೆಂದರೆ, ತಾವು ನಡೆದ ಮುಕ್ತಿ ಮಾರ್ಗವನ್ನು ಹಿರಿಯರು, ಕಿರಿಯರು, ಹೆಂಗಸರು, ಗಂಡಸರು, ಉಚ್ಚರು, ನೀಚರು ಎನ್ನದೆ ಅವರು ಎಲ್ಲರಿಗೂ ಸಮವಾಗಿ ತೆರೆದಿಟ್ಟರು.

ಭಕ್ತಿ ಸೂತ್ರದ ಕರ್ತರಾದ ನಾರದ ಶಾಂಡಿಲ್ಯರು ಮತ್ತು ಆಗಮಕಾರರು ಪ್ರಾರಂಭಿಸಿದ ಪರಂಪರೆಯನ್ನೇ ಅವರು ಮುಂದುವರಿಸಿ ಸಮಾಜದಲ್ಲಿಯ ಎಲ್ಲ ತರಗತಿಯ ಜನರಲ್ಲಿ ಪ್ರಚಂಡ ಧರ್ಮೋತ್ಸಾಹವನ್ನುಂಟುಮಾಡಿದರು. ಸಮಾಜವು ಮುಂದೆ ಸಾಗಬೇಕಾದರೆ ಇನ್ನೊಂದು ಮಹತ್ವದ ಸಂಗತಿಯ ಅವಶ್ಯಕತೆ ಇರುವದು. ಅದಾವುದೆಂದರೆ, ಉಚ್ಚ ಆದರ್ಶಗಳ ಪ್ರೇರಣೆಯು. ಸಮಾಜದ ಕಣ್ಣೆದುರಿಗೆ ಉಚ್ಚ ಆದರ್ಶಗಳು ಇರದೆ ಹೋದರೆ ಸಮಾಜದಲ್ಲಿಯ ವ್ಯಕ್ತಿಗಳು ಬೇಗನೆ ಇಂದ್ರಿಯ ಪ್ರವೃತ್ತಿಗಳ ಸೆಳವಿಗೆ ಸಿಕ್ಕು ಅಧೋಗತಿಗೆ ಹೋಗಲಾರಂಭಿಸುವವು.

ಈ ಆದರ್ಶಗಳು ಸಹ ಬರಿಯ ಶಾಬ್ದಿಕ ಇಲ್ಲವೆ ಗ್ರಾಂಥಿಕವಿದ್ದು ಉಪಯೋಗವಿಲ್ಲ. ಆಯಾ ಆದರ್ಶವನ್ನು ಪ್ರತ್ಯಕ್ಷ ಆಚರಣೆಯಲ್ಲಿ ತರುವವರು ಸಮಾಜಕ್ಕೆ ಮುಂದಾಳುಗಳಾಗಿ ನಿಲ್ಲುವದು ಅವಶ್ಯವಿರುವುದು. ಹಾಗೆ ಆದರೆ ಸ್ವಾಭಾವಿಕವಾಗಿ ಸಮಾಜದ ತರಗತಿಯು ಏರುವದು. ಒಳ್ಳೇ ಸಮಾಜವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ವಚನಕಾರರು ಇನ್ನೊಂದು ಹೆಜ್ಜೆಯನ್ನಿಟ್ಟರು. ಒಂದೇ ಇಷ್ಟದೇವತೆ, ಒಂದೇ ಮಂತ್ರ, ಒಂದೇ ದೀಕ್ಷೆ, ಒಂದೇ ಬಗೆಯ ಸಾಧನಮಾರ್ಗ, ಒಂದೇ ಬಗೆಯ ಆಚಾರ, ತಾತ್ಪರ್ಯವೇನೆಂದರೆ, ಒಂದೇ ಬಗೆಯ ಧಾರ್ಮಿಕ ಸಂಸ್ಕೃತಿಯನ್ನು ರೂಢಿಯಲ್ಲಿ ತಂದು ಅದನ್ನನುಸರಿಸುವ ಎಲ್ಲರಲ್ಲಿ ಧರ್ಮ ಬಂಧುತ್ವವನ್ನು ನೆಲೆಗೊಳಿಸಲು ಅವರು ಯತ್ನಿಸಿದರು.

ಭಕ್ತಿ ಸಾಮ್ರಾಜ್ಯದಲ್ಲಿ ಕಾಲಿಟ್ಟವರೆಲ್ಲರೂ ಭಕ್ತ ಬಂಧುಗಳಾಗುವರು. ಶಿವದೀಕ್ಷೆಯನ್ನು ಪಡೆದವರೆಲ್ಲರೂ ಒಂದೇ ಮನೆಯವರು ಎಂದು ವಚನಕಾರರು ಬರಿಯ ಬಾಯಿಂದ ಸಾರಿ ಸುಮ್ಮನಿರದೆ ಆ ಪ್ರಕಾರದ ರೂಢಿಗಳನ್ನು ಪ್ರಚಾರದಲ್ಲಿ ತಂದರು. ಸಮಾಜವು ಸ್ವಯಂಪೂರ್ಣವಿರಬೇಕಾದರೆ ಸಮಾಜ ಧಾರಣೆಗೆ ಅವಶ್ಯವಿದ್ದ ಪ್ರತಿಯೊಂದು ಕೆಲಸವನ್ನು ಮೇಲು ಕೀಳೆನ್ನದೆ ಎಲ್ಲರೂ ಮಾಡಲಿಕ್ಕೆ ಸಿದ್ಧರಿರಬೇಕು. ಅಂದರೆ ಎಲ್ಲ ಕೆಲಸಗಳೂ ಸುಸೂತ್ರವಾಗಿ ಸಾಗಿ ಅವೇ ಆಯಾ ಜನರ ಆತ್ಮೋನ್ನತಿ ಸಾಧನಗಳೂ ಆಗುವವು.

ಕಾಯಕದ ತತ್ವವನ್ನು ಪ್ರತಿಪಾದಿಸಿ ಈ ಮಾತನ್ನು ವಚನಕಾರರು ಸಾಧಿಸಿದರು. ಈ ತತ್ವದ ಮುಖ್ಯ ಲಕ್ಷಣಗಳಾವವೆಂದರೆ ಸಮಾಜದಲ್ಲಿಯ ಪ್ರತಿಯೊಬ್ಬರು ಏನಾದರೊಂದು ಉದ್ಯೋಗ ಮಾಡಿಯೇ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಬೇಕು. ಮತ್ತು ಒಕ್ಕಲುತನ, ಬಡಿಗತನ, ಸಮಗಾರತನ, ಅಥವಾ ಮತ್ತಿನ್ನಾವ ಉದ್ಯೋಗವೇ ಆಗಲಿ, ಅದು ಸಮಾಜಕ್ಕೆ ಅವಶ್ಯವೂ ನೀತಿಕರವೂ ಇದ್ದ

ಪಕ್ಷದಲ್ಲಿ ಅದು ದೇವರ ಪೂಜೆಯಷ್ಟೇ ಪವಿತ್ರವೂ ಕರ್ತವ್ಯವೂ ಇರುವದು. ಈ ತತ್ವದ ಪ್ರಚಾರದ ಮೂಲಕ ಸಮಾಜದಲ್ಲಿ ಪ್ರಚಲಿತವಿದ್ದ ಎಲ್ಲ ಉದ್ಯೋಗಗಳೂ ಮಹತ್ವವೂ ಪ್ರಾಪ್ತವಾಯಿತು ಮತ್ತು ಸೋಮಾರಿಗಳ ಸುಳಿದಾಟವು ಅಡಗಿತು.

ಜಂಗಮರು ಸರ್ವಸಂಗ ಪರಿತ್ಯಾಗ ಮಾಡಿದವರಿದ್ದರೂ ಅವರು ಭಿಕ್ಷೆಬೇಡಿ ಅನ್ಯರಿಗೆ ಭಾರವಾಗುವದಕ್ಕಿಂತ ಯಾವುದೊಂದು ಕಾಯಕದಲ್ಲಿ ತೊಡಗಬೇಕು. ಜಂಗಮರಿಗೆ ಕೂಡಾ ಕಾಯಕದಿಂದಲೇ ಮುಕ್ತಿ ಎಂದು ವಚನಕಾರರು ನುಡಿದಿರುವರು. ಅವರು ಈ ವಿಷಯಕ್ಕೆ ಇಷ್ಟೊಂದು ಮಹತ್ವವನ್ನು ಕೊಟ್ಟರು. ಸಮಾಜ ರಚನೆಯಲ್ಲಿ ಸ್ತ್ರೀ ಪುರುಷರ ಪರಸ್ಪರ ಸಂಬಂಧವೆಂಬುದೊಂದು ವಿಚಾರಕ್ಕೆ ಪಾತ್ರವಾದ ವಿಷಯವಿರುವುದು. ಈ ಬಗ್ಗೆಯೂ ವಚನಕಾರರು ಮನನೀಯ ವಿಚಾರಗಳನ್ನು ವ್ಯಕ್ತಗೊಳಿಸಿದ್ದಾರೆ. ಪರಸ್ತ್ರೀಯರೆಂದರೆ ಮಾತೆಯ ಸಮಾನ ಎಂದು ಗಂಡಸರಿಗೆ ಏಕಪತ್ನಿ ವ್ರತದ ಕಟ್ಟನ್ನು ಹಾಕಿದ್ದಲ್ಲದೆ ನಾರಿಯು ಪ್ರತ್ಯಕ್ಷ ಮಹಾದೇವಿಯು ಎಂಬ ಭಾವನೆಯನ್ನು ರೂಢಿ ಮಾಡಿ ಒಂದು ಉಚ್ಚ ಆದರ್ಶವನ್ನು ಸಮಾಜದೆದುರಿಗೆ ಇಟ್ಟರು.

ಸಮಾಜದೊಳಗೆ ಸ್ತ್ರೀಗೆ ಮಾನದ ಸ್ಥಾನವನ್ನು ಕೊಟ್ಟದ್ದರಿಂದಲೂ ಆಧ್ಯಾತ್ಮಿಕ ವಿಷಯಗಳಲ್ಲಿ ಪುರುಷರಿಗಿದ್ದ ಅಧಿಕಾರಗಳನ್ನೆಲ್ಲ ಅವರಿಗೆ ಕೊಟ್ಟಿದ್ದರಿಂದಲೂ ವಚನಕಾರರಲ್ಲಿ ನಮಗೆ ಅನೇಕ ಸ್ತ್ರೀಯರು ಕಂಡುಬರುವರು. ಮತ್ತು ಮಹದೇವಿಯಕ್ಕನಂಥ ದಿವ್ಯ ಸಾಧ್ವಿಯು ಎಲ್ಲರ ಮುಕುಟ ಮಣಿಯಂತೆ ಕಂಗೊಳಿಸುತ್ತಿರುವಳು. ಯಾವುದೇ ವ್ಯಕ್ತಿಯಾಗಲಿ, ಸಮಾಜವಾಗಲಿ, ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸಲು ಯತ್ನಿಸುವುದು ಅದರ ಸ್ವಭಾವವಾಗಿದೆ. ಅವುಗಳಲ್ಲಿ ಕಾಮವೆಂಬುದು ದೇಹೇಂದ್ರಿಯಗಳ ಹಸಿವೆಯು. ಅರ್ಥವೆಂಬುದು ಈ ಹಸಿವೆಯನ್ನು ಪೂರೈಸುವ ಸಾಧನವು. ಮೋಕ್ಷವು ಆತ್ಮನ ಹಸಿವು, ಧರ್ಮವು ಅದನ್ನು ತೃಪ್ತಿಪಡಿಸುವ ಸಾಧನವು.

ಕಾಮ ಅರ್ಥಗಳು ಅಭ್ಯುದಯವನ್ನು ಸಂಬಂಧಿಸಿದವುಗಳು. ಧರ್ಮ ಮೋಕ್ಷಗಳು ನಿಶ್ರೇಯಸವನ್ನು ಸಂಬಂಧಿಸಿದವುಗಳು. ಈ ನಾಲ್ಕೂ ಧ್ಯೇಯಗಳು ಯಾವ ವ್ಯಕ್ತಿಯ ಜೀವನದಲ್ಲಿ ಸಮನ್ವಯದಿಂದ ಕೈಸೇರಬಲ್ಲವೋ ಮತ್ತು ಯಾವ ಸಮಾಜದಲ್ಲಿದ್ದರೆ ಇವು ವ್ಯಕ್ತಿಗಳಿಗೆ ಕೈವಶವಾಗಬಲ್ಲವೊ ಆ ವ್ಯಕ್ತಿಯ ಜೀವನ ಕ್ರಮವು ಮತ್ತು ಆ ಸಮಾಜದ ರಚನೆಯು ಆದರ್ಶಪ್ರಾಯವು ಎಂದು ಹೇಳಬಹುದು. ಅಂಥ ಸಮಾಜವನ್ನು ರಚಿಸಲು ವಚನಕಾರರು ಯತ್ನಿಸಿದರೆಂಬುದು ಅವರ ವಚನಗಳಿಂದ ವ್ಯಕ್ತವಾಗುವದು.

ವಚನಕಾರರ ಸಾಮಾಜಿಕ ವಿಚಾರಗಳನ್ನು ಪರಿಶೀಲಿಸುವಾಗ ಬರಿಯ ಕುಲಶೀಲ, ಜನ್ಮ ಅಥವಾ ವಯ ಇವುಗಳ ವರ್ಚಸ್ಸನ್ನು ಕಿತ್ತಿಹಾಕಿ ಗುಣಕರ್ಮಗಳ ಮಹತ್ವವನ್ನು ಸಮಾಜದಲ್ಲಿ ಪ್ರಸ್ತಾಪಿಸಲಿಕ್ಕೆ ಅವರು ಹೇಗೆ ಹೆಣಗಿದರು ಇದನ್ನು ಮೊಟ್ಟಮೊದಲು ನೋಡುವದು ಅವಶ್ಯವು. ನಾನು ಶ್ರೇಷ್ಠ ನೀನು ಶ್ರೇಷ್ಠ ಎಂಬುವವರು ಜಗತ್ತಿನಲ್ಲಿ ಹಿರಿಯರೆನಿಸಿಕೊಳ್ಳಲಾರರು. ಅವರು ನಿಜವಾದ ಹಿರಿಯರಲ್ಲ. ಹಿರಿಕಿರಿದೆಂಬ ಶಬ್ದವಡಗಿ ಸಮದೃಷ್ಟಿ ನೆಲೆಗೊಂಡಲ್ಲಿಯೇ ನಿಜ ಹಿರಿತನವು ಇರಬಲ್ಲುದು(೪೧೧). ಮೇಲಿನ ದೇಹವು ಹೆಣ್ಣಿರಲಿ ಗಂಡಿರಲಿ, ಬ್ರಾಹ್ಮಣನದಿರಲಿ ಹೊಲೆಯನದಿರಲಿ, ಅವರ ಪ್ರಾಣ ಮನ ಆತ್ಮಗಳಲ್ಲಿ ಹೆಣ್ಣು ಗಂಡು, ಹಾರುವ, ಹೊಲೆಯ ಎಂಬ ಭೇದಗಳಿರಬಲ್ಲವೆ?

ಇವೆಲ್ಲ ಕೃತಕ ಭೇದ ಭಾವಗಳು, ಆತ್ಮವು ಎಲ್ಲಿ ಹೋದರು ಒಂದೇ (೪೧೨) ಆತ್ಮಂಗೆ ಆವ ಕುಲ ಉಂಟು ಹೇಳಿರೋ (ವ. ೩೨೦) ಎಂದು ವಚನಕಾರರು ಆಹ್ವಾನಿಸಿರುವರು.

ಬರಿಯ ಜಾತಿ ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದರೆ ಅಥವಾ ಅದೇಕೆ, ಪ್ರತ್ಯಕ್ಷ ಬ್ರಹ್ಮಜ್ಞಾನಿಯ ಹೊಟ್ಟೆಯಲ್ಲಿ ಹುಟ್ಟಿದರೂ ಮನುಷ್ಯನು ನಿಜವಾದ ಬ್ರಾಹ್ಮಣನಾಗನು. ಅದೇ ಪ್ರಕಾರ ವೇದಗಳನ್ನೋದುವರಿಂದ, ಯಜ್ಞ ಯಾಗಾದಿ ಕರ್ಮಗಳನ್ನು ಮಾಡುವುದರಿಂದ ಯ್ಯಾರಾದರು ಬ್ರಾಹ್ಮಣರಾಗಬಲ್ಲರೇ? ಬ್ರಹ್ಮವನ್ನರಿತವನೆ ಬ್ರಾಹ್ಮಣನು ಎಂದು ಶ್ರುತಿಯು ಸಾರುತ್ತಿರಲು ಬ್ರಾಹ್ಮಣತ್ವವು ಹೀಗೆ ಅಗ್ಗವಾಗಿ ಹೇಗೆ ಸಿಕ್ಕಬಲ್ಲುದು? (೫೨೫). ಗುಣದಿಂದ ಹಾರುವನಾಗಬಲ್ಲವನಲ್ಲದೆ ಅಗಣಿತ ಅಭ್ಯಾಸಂದಿದಲ್ಲ. ಮಲತ್ರಯಗಳನ್ನೂ ದ್ವಂದ್ವಗಳನ್ನೂ ಸೃಷ್ಟಿಸ್ಥಿತಿಲಯಗಳನ್ನೂ ಹಾರಿದವನೇ ಹಾರುವನು ಹೊರತು, ಹಾದಿಯಿಂದ ಹೋಗುವಾಗ ಮಡಿ ಮಡಿ ಎಂದು ಹಾರುವವನು ಹಾರುವನಾಗಲರಿಯನು (೫೨೪).

ಬ್ರಹ್ಮವನರಿದವನು ಬ್ರಾಹ್ಮಣನು, ಸರ್ವಜೀವಹತಕ್ಕೊಳಗಾದವನು ಸಮ್ಮಗಾರನು. ಹೀಗೆ ಇವೆರಡೇ ಉಚ್ಚ ನೀಚ ಭೇದಗಳು. ಇವು ಗುಣಕರ್ಮಗಳನ್ನವಲಂಬಿಸಿರುವವರು (೫೨೫). ಅರಿದಲ್ಲಿಯೆ ಪರತತ್ವಭಾವಿ, ಮರೆದಲ್ಲಿಯೆ ಮಾಯಾಮಲ ಸಂಬಂಧಿ (೫೨೬), ಆಚಾರವೆ ಕುಲ ಅನಾಚಾರವೆ ಹೊಲೆ (೪೮೦), ಕೊಲ್ಲುವವನೆ ಮಾದಿಗನು, ಹೊಸಲು ತಿಂಬುವವನೆ ಹೊಲೆಯನು. ಸಕಲ ಜೀವಾತ್ಮರಿಗೆ ಲೇಸನೆ ಬಯಸಿ ಲೇಸನೆ ಮಾಡುವವನು ಕುಲಜನು (೪೮೧), ಕೆಟ್ಟ ಕೆಲಸಗಳನ್ನು ಮಾಡುವವನು ಹೊಲೆಯನೆನಿಸುವನೆಂದು ಮಾದರಿಗಾಗಿ ಹಲವು ದುರಾಚಾರಗಳನ್ನು ವಚನಕಾರರು ಕೊಟ್ಟಿರುವರು. ತಂದೆ ತಾಯಿಗೆ ಬೈದವನೆ ಹೊಲೆಯ, ತಂದೆಗೆ ಮಾರುತ್ತರ ವನಿತ್ತವನೆ ಹೊಲೆಯ, ನಡುದಾರಿಗೆ ಮುಳ್ಳು ಬಡಿದವನೆ ಹೊಲೆಯ, ಹತ್ತು ಆಡಿ ಒಂದೂ ನಿಜವಿಲ್ಲದವನೆ ಹೊಲೆಯ, ಧನಕ್ಕಾಗಿ ಜೀವಕೊಲ್ಲುವವನೆ ಹೊಲೆಯ, ಚಿತ್ತದಲ್ಲಿ ಪರಸತಿಯ ಬಯಸುವವನೆ ಹೊಲೆಯ, ಪರನಿಂದೆಗೆಳಸುವವನೆ ಹೊಲೆಯ, ಧರ್ಮವನಾಚರಿಸದವನೆ ಹೊಲೆಯ. ಇಂಥ ಹೊಲೆಯರು ಊರ ತುಂಬ ಇರುವರು. ಇವರನ್ನು ಹುಡುಕಲು ಹೊಲಗೇರಿಗೆ ಹೋಗುವ ಕಾರಣವೇನು? (ವ. ೩೨೪).

ಇದೇ ಪ್ರಕಾರ, ಸ್ನಾನ, ಮಡಿ, ತೀರ್ಥಾಟನ, ಸೋಸಿ ನೀರು ಕುಡಿಯುವದು ಮುಂತಾದ್ದನ್ನು ಮಾಡಿ ತಾವು ತಮ್ಮ ಶೀಲದ ಮೂಲಕ ಹೆಚ್ಚಿನವರೆಂದು ಹೇಳಿಕೊಳ್ಳುವವರ ಸಮಾಚಾರವನ್ನೂ ಅವರು ಚೆನ್ನಾಗಿ ತೆಗೆದುಕೊಂಡಿದ್ದಾರೆ. ಶೀಲಶೀಲವೆಂದು ಗರ್ವದಿಂದ ಹೇಳಬೇಡಿರಿ. ಅದರಿಂದ ನಾವು ಹೆಚ್ಚು ನೀವು ಹೆಚ್ಚು ಎಂದು ಹೇಳಿಕೊಳ್ಳಬೇಡಿರಿ. ಯಾಕೆಂದರೆ, ನಿಜಶೀಲವು ಈ ಬಾಹ್ಯಾಚಾರಗಳಲ್ಲಿಲ್ಲ. ಅದು ನೀತಿಶುದ್ಧ ಆಚಾರದಲ್ಲಿದೆ (೪೩೫). ಕೆರೆ ಭಾವಿ ಹಳ್ಳಗಳ ನೀರು ಬಿಟ್ಟರೆ, ಕೊಡದ ಬಾಯಿಗೆ ಅರಿವೆ ಹಾಕಿ ನೀರು ಸೋಸಿದರೆ, ಆ ಹಣ್ಣು ಈ ಕಾಯಿ ಮುಂತಾದವುಗಳನ್ನು ಬಿಟ್ಟರೆ, ಉಪ್ಪುಕಾರಗಳನ್ನು ತೊರೆದರೆ, ಪರಪಾಕ ಬಿಟ್ಟರೆ, ಅದು ಶೀಲವೆ? ಇದೆಲ್ಲ; ಬಾಹ್ಯ ಆಡಂಬರವು, ಸಂಸಾರ ವಿಷಯ ರಸವನ್ನು ಬಿಟ್ಟು, ಅರಿಷಡ್ವರ್ಗಂಗಳನ್ನು ಮೆಟ್ಟಿ, ಅಂತಃಶುದ್ಧಿಯನ್ನು ಮಾಡಿದರೆಯೆ ಅದು ನಿಜವಾದ ಶೀಲವು, ಅದರಿಂದ ಮನುಷ್ಯನು

ಉಚ್ಚನೆನಿಸಬಲ್ಲನು ಹೊರತು ಬಾಹ್ಯಾಚಾರಗಳಿಂದಲ್ಲ (೪೩೬). ನಿಜವಾದ ಕುಲಶೀಲಗಳು ಯಾವವು ಎಂಬುದನ್ನು ಈ ಪ್ರಕಾರ ತೋರಿಸಿ ಸದಾಚಾರ ಸದ್ಭಕ್ತಿಗಳ ಗುಣಗಾನವನ್ನು ವಚನಕಾರರು ಮಾಡಿರುವರು.

ಆದರೆ ಅವರು ಪ್ರತಿಪಾದಿಸಿದ ಸಮಾನತೆಯು ರೂಢಿಯಲ್ಲಿ ಬರುವ ಬಗೆ ಯಾವುದು? ಆದುದರಿಂದ ಶಿವದೀಕ್ಷೆಯನ್ನು ಪಡೆದು ಶಿವಲಿಂಗವನ್ನು ಧರಿಸಿದವರು ಯಾವ ಕುಲಜಾತಿಗಳನ್ನೆಣಿಸದೆ ಒಂದೇ ಮನೆಯವರಂತೆ ಆಚರಿಸಬೇಕೆಂದು ವಚನಕಾರರು ಸಾರಿದರು ಮತ್ತು ಅದರಂತೆ ಸ್ವತಃ ನಡೆದು ರೂಢಿಯನ್ನು ಹಾಕಿದರು. ಉಂಬಲ್ಲಿ ಉಡುವಲ್ಲಿ ಕ್ರಿಯೆ ಅಳಿಯಿತು ಎನ್ನುವುದು ತಪ್ಪು. ಕೊಂಬಲ್ಲಿ ಕೊಡುವಲ್ಲಿ ಕುಲವನ್ನರಸವುವದೂ ತಪ್ಪು. ಹಾಗೆ ಕುಲವನ್ನು ನೋಡುವವರು ಭಕ್ತರೂ ಅಲ್ಲ ಯುಕ್ತರೂ ಅಲ್ಲ (೫೨೯). ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನು ಒಂದೇ ಎಂದು, ಅದೇ ರೀತಿ ಹಾರುವ ಮೊದಲು ಶ್ವಪಚಕಡೆಯಾಗಿ ಭವಿಯಾದವರನೆಲ್ಲರನು ಅಂದರೆ ಶಿವದೀಕ್ಷೆಯನ್ನು ಹೊಂದದೆ ಕೇವಲ ವಿಷಯಲಂಪಟರಿದ್ದವರನೆಲ್ಲರನು ಒಂದೇ ಎಂದು ಭಾವಿಸತಕ್ಕದ್ದು (೪೭೯). ಭಕ್ತರು ತಮ್ಮ ತಮ್ಮೊಳಗೆ ಒಬ್ಬರನೊಬ್ಬರೂ ದೂರ ನೋಡಿದರೆ ಅಥವಾ ಅನ್ನೋದಕ ಲಗ್ನವ್ಯವಹಾರಗಳನ್ನು ಮಾಡದಿದ್ದರೆ ಅವರಲ್ಲಿ ಪರಸ್ಪರ ಸ್ನೇಹವು ಹಿತಸಂಬಂಧಾದಿಗಳೂ ಬೆಳೆಯುವದು ಅಸಾಧ್ಯವು ಯಾಕೆಂದರೆ, ಎಡೆಗೆ ಬಾರದಾತ ಅಡಿಗೆಗೆ ದೂರ. ಅಡಿಗೆಗೆ ದೂರಾದಾತ ಮನೆಗೆ ದೂರ, ಮನೆಗೆ ದೂರಾದಾತ, ಮನಕ್ಕೆ ದೂರ (೫೨೮). ಹೀಗೆ ಅವರು ಒಬ್ಬರೊಬ್ಬರಿಗೆ ದೂರಾಗುತ್ತಲೇ ಹೋಗುವರು. ಆದುದರಿಂದ ಶರಣರಲ್ಲಿ ಕುಲವನ್ನರಸದೆ ಆಚಾರವನ್ನೇ ಅರಸಬೇಕು.

ದೀಕ್ಷೆ ಪಡೆದು ಶಿವಾಚಾರಸಂಪನ್ನರಾದವರೆಲ್ಲರ ಕುಲವು ಶಿವಕುಲವೆಂಬುದೊಂದೇ, ಆ ಬಳಿಕ ತನ್ನ ಕುಲ ಶೀಲದಭಿಮಾನವನ್ನು ತಾಳಕೂಡದು. ಒಮ್ಮೆ ಭವಿತನ ಬಿಟ್ಟು ಭಕ್ತನಾದ ಮೇಲೆ ಸಿರಿಯಾಳನು ಸೆಟ್ಟಿಯಲ್ಲ. ಮಾಚಯ್ಯನು ಮಡಿವಾಳನಲ್ಲ, ಕಕ್ಕಯ್ಯನು ಡೋಹರನಲ್ಲ. ಚನ್ನಯ್ಯನು ಮಾದಾರನಲ್ಲ, ಯಾಕೆಂದರೆ ಅವರೆಲ್ಲರೂ ಭಕ್ತಬಂಧುಗಳಾಗಿರುವರು (ವ. ೩೩). ವಚನಕಾರರು ಆ ರೀತಿ ಜಾತಿಕುಲಗಳನ್ನು ಅಲ್ಲಗಳೆದು, ಪರಸ್ಪರ ಅನ್ನೋದಕ ಲಗ್ನ ವ್ಯವಹಾರಗಳನ್ನು ಮಾಡಿ, ತಾವು ನುಡಿದಂತೆ ನಡೆದು ತೋರಿಸಿದರು. ಈ ವಿಷಯವನ್ನು ಕುರಿತು ಅವರು ಪುರಾತನ ಋಷಿ ಮುನಿಗಳ ಉದಾಹರಣೆಯನ್ನಾದರೂ ಕೊಟ್ಟು ಜಾತಿ ಕುಲಗಳಿಗಿಂತ ಗುಣಕರ್ಮಗಳೇ ಶ್ರೇಷ್ಠ ಎಂದು ಸಿದ್ಧಮಾಡಿದ್ದಾರೆ. ಆ ಪುರಾತನರಲ್ಲಿ ಎಷ್ಟೋ ಜನರು ಕೀಳೆಂದು ತಿಳಿಯಲ್ಪಟ್ಟ ಜಾತಿಯವರಿದ್ದರೂ ತಮ್ಮ ಗುಣಕರ್ಮಗಳಿಂದ ಶ್ರೇಷ್ಠರಾಗಿ ಸಮಾಜದ ಶಿರೋಭಾಗದಲ್ಲಿ ಮೆರೆದು ಎಲ್ಲರಿಗೂ ಮಾರ್ಗದರ್ಶಿಗಳಾದರು(೫೨೭).

ಇಡೀ ಸಮಾಜದಲ್ಲಿಯ ಜಾತಿಭೇದಾದಿಗಳನ್ನು ಒಮ್ಮೆಲೆ ತೆಗೆದುಹಾಕುವದು ಸಾಧ್ಯವಾಗದ ಮಾತಾದುದರಿಂದ ವಚನಕಾರರು ತಮ್ಮ ಸಂಪ್ರದಾಯದೊಳಗಿಂದ ಅವುಗಳನ್ನು ತೆಗೆದುಹಾಕಿ ಅದರಿಂದ ಸುತ್ತಲಿನ ಜನಸಾಮಾನ್ಯರಲ್ಲಿ ಉಂಟಾಗುವ ಉತ್ಸಾಹವನ್ನೂ ಇಡೀ ಸಮಾಜಕ್ಕೆ ಆಗುವ ಲಾಭವನ್ನೂ ತೋರ್ಪಡಿಸಿದರು. ಅವರು ದೀಕ್ಷೆ ಕೊಡುವಾಗ ಜಾತಿಕುಲಗಳನ್ನು ನೋಡದೆ

ಆಚಾರವನ್ನು ನೋಡಬೇಕೆಂದು ಉಪದೇಶಿಸಿದರು. ನಡೆನುಡಿ ಶುದ್ಧವಾದವರಿಗಲ್ಲದೆ ದೇವರು ಅನುಗ್ರಹಿಸನು.

ಆದುದರಿಂದ ಅಂಥವರಿಗೆ ದೀಕ್ಷೆಕೊಡುವುದು ವ್ಯರ್ಥ (ವ. ೬೯). ಒಮ್ಮೆ ದೀಕ್ಷೆಕೊಟ್ಟಬಳಿಕ. ಯಾವುದೇ ಜಾತಿಯವನಾಗಲಿ, ಅವನು ಪರಿಶುದ್ಧನು, ಮತ್ತು ಪೂರ್ವಜನ್ಮ (ಜಾತಿ) ವಿವರ್ಜಿತನು (ವ. ೩೨೫). ಉರಿಯುವ ಕೆಂಡದಮೇಲೆ ತೃಣವನ್ನು ತಂದಿರಿಸಿದರೆ ಆ ತೃಣವನ್ನು ಕಿಚ್ಚು ನುಂಗಿದಂತೆ ಗುರು ಚರಣದ ಮೇಲೆ ತಲೆಯಿಟ್ಟ ಬಳಿಕ ಅವನ ಜಾತಿಭೇದಾದಿಗಳೆಲ್ಲ ಸುಟ್ಟು ಹೋಗುವವು (ವ. ೭೧). ಹೀನಹೀನವೆಂದು ಜನರು ಅನ್ನುವ ಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವದೀಕ್ಷೆಯನ್ನು ಪಡೆದ ಬಳಿಕ ಮರಳಿ ಹೀನನೆನಿಸಿಕೊಳ್ಳನು.

ಯಾಕೆಂದರೆ, ನೀರು ಗಟ್ಟಿಗೊಂಡು ಮುತ್ತಾಗಬಲ್ಲದಲ್ಲದೆ ಮುತ್ತು ಮರಳಿ ನೀರಾಗಲರಿಯದು (ವ. ೭೫). ಗುರುವುಪದೇಶ ಪಡೆದು ಗುರುಪುತ್ರನೆನಿಸಿಕೊಂಡ ಬಳಿಕ ಪೂರ್ವಜಾತಿಯ ಸಂಬಂಧವನ್ನೇ ಇಡಕೂಡದು. ಯಾಕೆಂದರೆ, ಆ ದೀಕ್ಷೆ ಪಡೆದವನು ಎಲ್ಲರೂ ಸಮಸಮಾನವಿದ್ದ ಹೊಸ ಸಮಾಜವನ್ನು ಸೇರಿರುವನು (ವ. ೭೮). ಜಾತಿ, ಕುಲ, ವಯ, ಉದ್ಯೋಗ ಮುಂತಾದ ಭೇದಗಳನ್ನು ಮನ್ನಿಸದೆ ದೀಕ್ಷೆಕೊಟ್ಟು ವಚನಕಾರರು ಎಲ್ಲರನ್ನೂ, ಸಮಾನತೆಯ ತಳಹದಿಯಾಗಿರುವ ಸಮಾಜದಲ್ಲಿ ಸೇರಿಸಲೆತ್ನಿಸಿರುವರು. ಅದೇ ಪ್ರಕಾರ, ಅವರು ಧರ್ಮ ವಿಷಯದಲ್ಲಿ ಲಿಂಗಭೇದವನ್ನು ತೆಗೆದುಹಾಕಿ ಸ್ತ್ರೀಯರಿಗೆ ಪುರುಷರಿಗಿದ್ದ ಎಲ್ಲ ಹಕ್ಕುಗಳನ್ನು ಕೊಟ್ಟುಬಿಟ್ಟರು. ಸತಿಪತಿಗಳಿಬ್ಬರೂ ಸರಿಯಾಗಿ ಭಕ್ತಿ ಮಾಡಿದರೆ ಅದು ದೇವರಿಗೆ ಹಿತವಾಗಿರುವದು. ಇಲ್ಲದಿದ್ದರೆ ಅಮೃತದೊಳಗೆ ವಿಷ ಕಲಸಿದಂತಾಗುವುದು.

ಕಣ್ಣುಗಳು ಎರಡು ಇದ್ದರು ದೃಷ್ಟಿಯು ಒಂದೇ ಇರುವಂತೆ, ಗಂಡ ಹೆಂಡಿರು ಏಕಭಾವರಾಗಿ ಭಜಿಸಿದರೆ ಅದು ದೇವರಿಗೆ ಯೋಗ್ಯರೀತಿಯಿಂದ ಅರ್ಪಿತವಾಗುವುದು (ವ. ೧೪೨). ಧರ್ಮ ಸಾಧನೆಯಲ್ಲಿ ಧರ್ಮಪತ್ನಿಯ ಪೂರ್ಣ ಸಾಹಚರ್ಯವನ್ನು ಎಷ್ಟು ಹೊಗಳಿದರೂ ಸಾಲದು. ಆ ತರದ ಸಾಹಚರ್ಯವಿಲ್ಲದಿದ್ದರೆ ಆಗುವ ತೊಂದರೆಗೂ ಧರ್ಮಪಥದಲ್ಲಿ ಬರುವ ಅಡ್ಡಿಗೂ ಎಣೆಯಿಲ್ಲ. ಆದುದರಿಂದ ದೀಕ್ಷೆ, ಪೂಜೆ, ಮುಂತಾದ ಪ್ರತಿಯೊಂದು ವಿಷಯದಲ್ಲಿ ಸ್ತ್ರೀಯರು ಪುರುಷರಷ್ಟೆ ಅರ್ಹರು, ಎಂದು ವಚನಕಾರರು ನಿರ್ಣಯಿಸಿ ಅದರಂತೆ ಸ್ತ್ರೀಯರಿಗೆ ಧರ್ಮ ಸಾಮ್ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವರು.

ಇನ್ನು ವಚನಕಾರರು ಸಮಾಜದೆದುರಿಗೆ ಯಾವ ಆದರ್ಶಗಳನ್ನಿಟ್ಟರು ಇದನ್ನು ವಿಚಾರಿಸುವದು ಇಷ್ಟವು. ಪೂರ್ವಪರಂಪರೆಯು ಏನೇ ಇರಲಿ, ಗ್ರಂಥಸ್ಥ ಧರ್ಮವು ಯಾವುದೇ ಇರಲಿ, ಆಯಾ ಕಾಲದ ರೂಢಿಗಳೂ ಹೇಗೇ ಇರಲಿ, ಪ್ರತ್ಯಕ್ಷ ಜೀವಂತ ಮಹಾನುಭಾವರ ಆದರ್ಶಗಳ ಮತ್ತು ವರ್ತನೆಯ ಪರಿಣಾಮವು ವರ್ತಮಾನ ಕಾಲದ ಮೇಲೆ ಯಾವಾಗಲೂ ಆಗೇ ಆಗುವುದು. ಶ್ರೇಷ್ಠರು ನಡೆದಂತೆ ನಡೆಯುವದು ಜನರ ಹುಟ್ಟು ಸ್ವಭಾವವು. ಮಹಾಜನರು ಹೋದ ಹಾದಿಯಿಂದ ಜನರು ಸಾಗುವದು ಸ್ವಭಾವಿಕವು. ಅಂತರ್ಬಾಹ್ಯಶುದ್ದರು ಪರಮಾತ್ಮಪರಾಯಣರೂ ಆತ್ಮಜ್ಞಾನಿಗಳೂ ಸಮಚಿತ್ತರೂ ಆತ್ಮೌಪಮ್ಯಬುದ್ಧಿಯುಳ್ಳವರೂ ಲೋಕಹಿತದಕ್ಷರೂ ಇದ್ದವರೆ ಸಮಾಜಕ್ಕೆ ದಾರಿತೋರಲು ಸಮರ್ಥರು.

ಇಂಥವರು ಸಮಾಜದ ಮುಂದೆ ಇಟ್ಟ ಆದರ್ಶಗಳು ಆದರಣೀಯದಾಗಿ ಅವು ಎಲ್ಲರಿಂದ ಅನುಕರಿಸಲ್ಪಡುವವು. ಪರಮಾತ್ಮನಿಗೆ ಸರ್ವಾರ್ಪಣಮಾಡಿದ ಕರ್ಮಯೋಗಿಯ ಆದರ್ಶವನ್ನೇ ವಚನಕಾರರು ಸಮಾಜದೆದುರಿಗೆ ಇಟ್ಟಿರುವರೆಂದು ಹೇಳಬಹುದು. ಅವರ ದೃಷ್ಟಿಯಿಂದ ಈ ಸೃಷ್ಟಿಯು ಮಿಥ್ಯವಿರದೆ ಸತ್ಯವಿರುರುವುದು. ಈ ಸೃಷ್ಟಿಯಲ್ಲಿರುವವರೆಗೆ ಪರಮಾತ್ಮನೊಡನೆ ಸಮರಸವಾಗಿರುವುದೇ ಅತ್ಯಂತ ಶ್ರೇಷ್ಠ ನಿಲುವು ಎಂದು ಅವರ ಮತವಿರುವುದು. ಆದುದರಿಂದ ಪರಮಾತ್ಮ ಲೀಲೆಯಿಂದೊಗೆದ ಈ ವಿಶ್ವದಲ್ಲಿ ಎಲ್ಲವನ್ನು ಅವನಿಗೆ ಸಮರ್ಪಿಸಿ, ಅಂತರದಲ್ಲಿ ತತ್ಪ್ರಾರಾಣರಾಗಿ, ಬಾಹ್ಯದಲ್ಲಿ ಅವನ ಸಂಕಲ್ಪದಂತೆ, ಸ್ವಕರ್ಮಮಾಡುತ್ತ ಪರಮಾನಂದದಲ್ಲಿರುವುದೇ ಐಕ್ಯಸ್ಥಲವೆನಿಸುವದು.

ಪರಮಾತ್ಮನ ಸ್ನೇಹ, ನೋಟ, ಕೂಟಗಳಿಗಿಂತ ಪರಮಾತ್ಮನೊಡದೆ ಸಮರಸವಾಗಿ ಪರವಶರಾಗುವುದೆ ಶ್ರೇಷ್ಠವೆಂದು (೬೩) ವಚನಕಾರರು ಅಂದಿರುವರು. ತನುವಿಡಿದಲ್ಲಿಯೇ ನಿತ್ಯ ನಿರಂಜರೂಪದಲ್ಲಿ ಏಕರಸರಾಗಿ ಆಚರಿಸಿದರೆ ಅದೇ ನಿಜೈಕ್ಯವು (ವ.೮೫). ಈ ಆದರ್ಶವೂ ಈ ಲೋಕ ಮತ್ತು ಪರಲೋಕದ ಧ್ಯೇಯಗಳನ್ನು ಸಮನ್ವಯಿಸುವದು, ಅಭ್ಯುದಯ ನಿಃಶ್ರೇಯಸಗಳನ್ನು ಒಮ್ಮೆಲೆ ಸಾಧಿಸುವುದು, ಕಾಮ ಮತ್ತು ಮೋಕ್ಷ ಇವೆರಡಕ್ಕೂ ಎಡೆಕೊಡುವದು. ಆಗಮಕಾರರ ಭಕ್ತಿ ಮುಕ್ತಿ ಮಾರ್ಗವೆಂದರೆ ಇದೇ. ಇದು ಕೇವಲ ಸನ್ಯಾಸ ಮಾರ್ಗವೂ ಅಲ್ಲ, ಸಂಸಾರಮಾರ್ಗವೂ ಅಲ್ಲ, ಸಂಸಾರದಲ್ಲಿದ್ದು ಸನ್ಯಾಸವನ್ನಾಚರಿಸುವ ಮಾರ್ಗವಿದು. ಬಳಸಿ ಬ್ರಹ್ಮಚಾರಿಗಳು, ಉಂಡು ಉಪವಾಸಿಗಳು, ವ್ಯವಹರಿಸಿ ನಿರ್ಲೇಪಕರು ಇರುವ ರಹಸ್ಯವಿದು.

ಇದೇ ದೃಷ್ಟಿಯಿಂದ ಅರ್ಪಣಕ್ಕೆ ಮತ್ತು ಕಾಯಕಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ವಚನಕಾರರು ಕೊಟ್ಟಿರುವರು. ಮನುಷ್ಯನು ಸದೇಹನಿರುವ ತನಕ ಜೀವಂತನಿರಲಿಕ್ಕೆ ಅವಶ್ಯವಿದ್ದ ಇಂದ್ರಿಯಕರ್ಮಗಳು ನಿಲ್ಲಲಾರವು. ಉಸುರಾಡಿಸುವದು, ಉಣ್ಣುವದು, ಉಡುವದು, ಮೂಸುವುದು, ನೋಡುವುದು, ಮಲಗುವುದು, ಏಳುವುದು, ಈ ಮುಂತಾದ ಕ್ರಿಯೆಗಳು ಸತತ ಹಗಲಿರುಗಳು ನಡೆದೇ ಇರುವವು. ಈ ನೈಸರ್ಗಿಕ ಕ್ರಿಯೆಗಳನ್ನೂ ನಾವು ಬುದ್ಧಿ ಪುರಸ್ಕಾರವಾಗಿ ಮಾಡುವ ಕರ್ತವ್ಯಕರ್ಮಗಳನ್ನೂ ನಾವು ಭೋಗಿಸುವ ಭೋಗಗಳನ್ನೂ ಅಥವಾ ಒಂದೇ ಶಬ್ದದಿಂದ ಹೇಳುವುದೆಂದರೆ ನಾವು ಆಜೀವನ ಮಾಡುತ್ತಿರುವ ಕರ್ಮಮಾತ್ರವನ್ನು ಪರಮಾತ್ಮನಿಗೆ ಅರ್ಪಣಮಾಡುತ್ತಿರುವುದೆ ಅರ್ಪಣ ತತ್ವವು. ಅರ್ಪಣವೆಂದರೆ ಇದು ನನ್ನದಲ್ಲ ನಿನ್ನದೇ, ಪರಮಾತ್ಮನದೇ, ಎಂದು ಭಾವಿಸುವದು, ಭಕ್ತನು ಈ ತತ್ವದಂತೆ ಆಚರಿಸಿದರೆ ಅವನು ಭೋಗಿಸುವುದೆಲ್ಲ ಪ್ರಸಾದವೆನಿಸುವದು. ಅವನು ಕಲ್ಪಿಸುವುದೆಲ್ಲ ಈಶಪ್ರೇರಣೆಯೆನಿಸುವದು ಮತ್ತು ಅವನು ಮಾಡುವುದೆಲ್ಲ ಈಶ್ವರಲೀಲೆಯೆನಿಸುವದು.

ಈ ಅರ್ಪಣತತ್ವವು ಸಾಧಕನಲ್ಲಿಯ ಅಹಂಕಾರದ ಕಸವನ್ನು ಕಿತ್ತಿ ಅವನ ಮನಸ್ಸಿನಲ್ಲಿ ನಿಷ್ಕಾಮಕರ್ಮದ ಬೀಜವನ್ನೂರುವದು, ಕಾಯಕದ ತತ್ವವು ಸಮಾಜದ ಅದರ್ಶವೆಂಬ ದೃಷ್ಟಿಯಿಂದ ಅರ್ಪಣ ತತ್ವದಂತೆಯೆ ಮಹತ್ವದ್ದಿರುವದು. ಮನುಷ್ಯನು ತನ್ನ ಶಕ್ತಿಯ ಉಪಯೋಗವನ್ನು ಸಮಾಜಸೇವೆಗಾಗಿ ಮಾಡಿಯೇ ತನ್ನ ಪೋಷಣಮಾಡಿಕೊಳ್ಳಬೇಕು ಹೊರತು ಸೋಮಾರಿತನದಿಂದ ಭೂಮಿಗೆ ಮತ್ತು ಬಾಂಧವರಿಗೆ ಭಾರವಾಗಿ ಜೀವಿಸಬಾರದು ಎಂದು ಈ ತತ್ವವು ಹೇಳುವದು. ಭಿಕ್ಷೆ ಬೇಡುವ ಅಧಿಕಾರವು ಯಾರಿಗೂ ಇಲ್ಲವೆಂದು ವಚನಕಾರರು ಸಾರಿರುವರು.

ಈ ತತ್ವದ ಎರಡನೆಯ ಲಕ್ಷಣವೆಂದರೆ, ಯಾವುದೇ ಉದ್ಯೋಗವಾಗಲಿ ಅದು ಅನೀತಿಮಯವಿಲ್ಲದಿದ್ದರೆ ಆಯಿತು, ಅದು ಮಿಕ್ಕ ಶ್ರೇಷ್ಠವೆಂದೆನಿಸುವ ಉದ್ಯೋಗಗಳಷ್ಟೇ ಪವಿತ್ರವಿರುವುದು. ಈ ರೀತಿ ಎಲ್ಲರೂ ತಮ್ಮ ಉದ್ಯೋಗಗಳನ್ನು ಭಾವಿಸಿದರೆ ಮತ್ತು ಅನ್ಯರ ಉದ್ಯೋಗಗಳಿಗೂ ಮಾನಕೊಟ್ಟರೆ ಉದ್ಯೋಗಗಳ ಮೂಲಕ ಹುಟ್ಟಿದ ಉಚ್ಚ ನೀಚ ಭಾವನೆಗಳೆಲ್ಲ ನಷ್ಟವಾಗಿ ಹೋಗುವವು ಮತ್ತು ಎಲ್ಲ ಉದ್ಯೋಗಗಳು ಚೆನ್ನಾಗಿ ಸಾಗುವವು. ಇದಲ್ಲದೆ ತಮ್ಮಂತೆ ಎಲ್ಲರೂ ಇರುವರು, ಅವರೂ ಪರಮಾತ್ಮನ ಅಂಶರು ಎಂಬ ಭಾವನೆಯಿಂದ ಆದರ್ಶಪುರುಷರು ಅವರೆಲ್ಲರೂ ಲೇಸನ್ನೆ ಬಯಸಿ ಅದನ್ನೇ ಮಾಡುವುದರಲ್ಲಿ ತಮ್ಮ ಆಯುಷ್ಯವನ್ನು ಕಳೆಯುವರು. ಈ ರೀತಿ ವಚನಕಾರರ ಆದರ್ಶ ಜೀವನವು ಪರಮಾತ್ಮಾರ್ಪಿತವು. ಭಕ್ತಿಪೂರ್ಣವು, ನಿಷ್ಕಾಮಕರ್ಮನಿರತವು, ನೀತಿಮಯವು, ಕಾಯಕಯುಕ್ತವು, ಲೋಕಹಿತದಕ್ಷವು ಇರುವದು.

ಇದುವರೆಗೆ ವಿವರಿಸಿದ ವಚನಕಾರರ ನೈತಿಕ ಮತ್ತು ಸಾಮಾಜಿಕ ವಿಚಾರಗಳನ್ನು ಅವರು ಸಮಾಜದ ಮುಂದೆ ಇಟ್ಟ ಆದರ್ಶಗಳನ್ನು ನೋಡಿದರೆ ಅವರು ಯಾವ ಬಗೆಯ ಸಮಾಜ ಸಂಘಟನೆಯನ್ನು ಮಾಡಬೇಕೆನ್ನುತ್ತಿದ್ದರು ಎಂಬುದು ಸ್ಪಷ್ಟವಾಗುವದು. ಅವರು ಸಂಸಾರವನ್ನು ಬಿಡಹೇಳದೆ ಆತ್ಮವಿಕಾಸವಾಗುವಂತೆ ಅದನ್ನು ಮಾಡಬೇಕೆಂದು ಉಪದೇಶಿಸಿದರು. ಪ್ರಪಂಚವನ್ನು ತೊರೆಯಿರೆಂದು ಉಪದೇಶಿಸದೆ ಪರಮಾರ್ಥವೆ ಪ್ರಧಾನವೆಂದು ಅವರು ಹೇಳಿದರು. ಈ ರೀತಿ, ವಚನಕಾರರಿಗೆ ಇಷ್ಟವಾದ ಸಮಾಜಸಂಘಟನೆಯಲ್ಲಿ ಪ್ರತಿಯೊಬ್ಬನು ಮೋಕ್ಷಾರ್ಥಿಯಾಗಿರುವನು. ಪರಮಾತ್ಮನೊಡನೆ ಸಮರಸವಾಗಿರುವುದೇ ಮೋಕ್ಷವೆನಿಸುವುದರಿಂದ ಸಾಧಕನು ಈ ಮೋಕ್ಷವನ್ನು ಎಲ್ಲಿಯಾದರೂ ಸಮಾಜದಿಂದ ಸಿಡಿದುಹೋಗಿ ತನಗೊಬ್ಬನಿಗಾಗಿಯೇ ಶೋಧಿಸುತ್ತ ಕೂಡದೆ ಸಮಾಜದಲ್ಲಿಯೇ ಇದ್ದು ಜೀವನ್ಮುಕ್ತಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳಲು ಅವನು ಇಚ್ಛಿಸುವನು. ಈ ಸಮಾಜವೆಂದಾದರೂ ಪರಮಾತ್ಮ ನಿರ್ಮಿತವೇ ಇರುವುದರಿಂದ ಇದು ಪರಮಾತ್ಮ ಸಾಕ್ಷಾತ್ಕಾರಮಾಡಿಕೊಡಲಿಕ್ಕೆ ಸಹಾಯಭೂತವಾಗಬಲ್ಲದು. ತಾನಿರುವ ಸಮಾಜವೆ ಸಾಧನಭೂಮಿಯಾಗಬೇಕೆಂದೂ ಸಮಾಜದಲ್ಲಿರುವ ವಿವಿಧ ವ್ಯಕ್ತಿಗಳೆಲ್ಲ ತನ್ನ ಆಧ್ಯಾತ್ಮ ಬಂಧುಗಳಾಗಬೇಕೆಂದೂ ಅವನು ಹವಣಿಸುವವನಾದ್ದರಿಂದ ಅವರೆಲ್ಲರು ಸಮಸಮಾನರೆಂದು ಅವನು ಭಾವಿಸುವನು. ಅವರು ಯಾವುದೇ ಜಾತಿಯವರಿರಲಿ, ಯಾವುದೇ ಉದ್ಯೋಗಮಾಡುತ್ತಿರಲಿ, ಅವರೆಲ್ಲರೂ ಮೋಕ್ಷಬಂಧುಗಳು, ಯಾರು ಪರಮಾರ್ಥವನ್ನು ಹೀಯಾಳಿಸಿಬಿಡುವರೋ ಅವರು ಮಾತ್ರಭವಿಗಳು ಹೊರತು ಮಿಕ್ಕವರೆಲ್ಲರೂ ಭಕ್ತರು, ಸ್ತ್ರೀಯರೆಲ್ಲರು ಮಾತೆಯ ಸಮಾನರು ಅಥವಾ ಜಗನ್ಮಾತೆಯಾದ ಪ್ರತ್ಯಕ್ಷ ಮಹಾದೇವಿಗೆ ಸಮಾನರು.

ಈ ಸಮಾಜದಲ್ಲಿಯ ಪ್ರತಿಯೊಬ್ಬನು ತನ್ನ ಪಾಲಿಗೆ ಬಂದ ಕಾಯಕವನ್ನು ಮಾಡಿ, ಸಮಾಜದ ಋಣದಿಂದ ಮುಕ್ತನಾಗಿ ಹೊಟ್ಟೆತುಂಬಿಕೊಳ್ಳುವನು ಮತ್ತು ತನ್ನ ಶಕ್ತಿಯ ಸದುಪಯೋಗವನ್ನು ಮಾಡುವನು, ಪ್ರತಿಯೊಬ್ಬನು ಸುಬದ್ಧವಾದ ನೀತಿನಿಯಮಗಳನ್ನು ಪಾಲಿಸಬೇಕೆಂದು ಅವುಗಳನ್ನು ವಚನಕಾರರು ವಿವರವಾಗಿ ಹೇಳಿರುವರು. ನೀತಿಯು ಸಮಾಜದ ಆಧಾರಸ್ತಂಭವಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀತಿನಿಯಮಗಳಲ್ಲಿ ಸತ್ಯವನ್ನು ನುಡಿಯಬೇಕು, ಹಿಂಸೆಯನ್ನು ಮಾಡಬಾರದು, ಕಳವು ಮಾಡಕೂಡದು, ಬ್ರಹ್ಮಚರ್ಯದಿಂದಿರಬೇಕು, ಅಹಂಕಾರವನ್ನು ತೊರೆಯಬೇಕು, ಆಶೆಯನ್ನು

ಬಿಡಬೇಕು. ಇಂದ್ರಿಯವನ್ನು ಸಂಯಮಿಸಬೇಕು ಎಂಬವೇ ಮುಖ್ಯವಾದವುಗಳು. ವಚನಕಾರರು ಉಪದೇಶಿಸಿದ ಮುಕ್ತಿಪಥದಲ್ಲಿ ಎಲ್ಲರಿಗೂ ಮುಕ್ತದ್ವಾರವಿರುವುದರಿಂದ ನಾವು ಇದನೊಲ್ಲೆವು ಎಂಬುವವರೆ ಹತಭಾಗಿಗಳು ಹೊರತು ಅವರು ವಿಶ್ವಕ್ಕೆಯೆ ಆಮಂತ್ರಣವನ್ನು ಕೊಟ್ಟಿರುವರು! ಒಂದೇ ದೈವತ್ವ ಒಂದೇ ಕುರುಹು, ಒಂದೇ ಮಂತ್ರ, ಒಂದೇ ಆಚಾರ, ಇವುಗಳಿಂದ ಏಕಸೂತ್ರದಲ್ಲಿ ಬದ್ಧವಾದ ಮತ್ತು ಸಮತೆಯ ತಳಹದಿಯ ಮೇಲೆ ರಚಿಸಲ್ಪಟ್ಟ ಸಮಾಜವನ್ನು ಏರ್ಪಡಿಸಲು ಅವರು ಯತ್ನಿಸಿದರು. ಈ ಅವರ ಶ್ರೇಷ್ಠ ಪ್ರಯತ್ನವು ವಚನಶಾಸ್ತ್ರದಲ್ಲಿ ಉತ್ತಮ ರೀತಿಯಿಂದ ಪ್ರತಿಬಿಂಬಿತವಾಗಿದೆ. ಬಸವಾದಿ ಪ್ರಮಥರು ತಮ್ಮ ಜೀವಮಾನದಲ್ಲಿ ಈ ಪ್ರಯತ್ನವನ್ನು ಎಷ್ಟೋಮಟ್ಟಿಗೆ ಯಶಸ್ವಿಯನ್ನಾದರೂ ಮಾಡಿದರು.

❖❖

ವಚನಕಾರರು ಮತ್ತು ಆಗಮಕಾರರು

[ವಚನಕಾರರಿಗೂ ಆ ಮುಂಚಿನ ಆಗಮಕಾರರಿಗೂ ಸಮಾಜ ರಚನೆಯಲ್ಲಿ ಭಿನ್ನಾಭಿಪ್ರಾಯಗಳನ್ನು ಎರಡನೆಯ ಭಾಗದ ೩೩೨-೩೩೩ನೆಯ ಪುಟಗಳಲ್ಲಿ ಶ್ರೀ ದಿವಾಕರರು ಹೀಗೆ ಬರೆದಿದ್ದಾರೆ]

ಇನ್ನು ವಚನಕಾರರು ಸಾಮಾನ್ಯವಾಗಿ ಎಲ್ಲ ಮುಖ್ಯ ಮಾತುಗಳಲ್ಲಿ ಆಗಮಕಾರರನ್ನೇ ಹಿಂಬಾಲಿಸಿ ನಡೆದಿದ್ದರೂ ಹಲ ಕೆಲವು ಮಾತುಗಳಲ್ಲಿ ಅವರು ಸ್ವಲ್ಪ ಭಿನ್ನಾಭಿಪ್ರಾಯಗಳನ್ನು ವ್ಯಕ್ತಮಾಡಿರುವರು. ಮತ್ತು ಆಗಮಗಳಲ್ಲಿಯ ಕೆಲವೊಂದು ಮಾತುಗಳನ್ನು ವಿಶೇಷ ಒತ್ತಿ ಹೇಳಿರುವರು.

ಹಲವು ಆಗಮಗಳಲ್ಲಿ ಇನ್ನೂ ಜಾತಿಭೇದಕ್ಕೆ ಅನುವು ಮತ್ತು ಮಹತ್ವವು ಕೊಡಲ್ಪಟ್ಟಂತೆ ತೋರುವುದು. ಉದಾ: **ಸೂಕ್ಷ್ಮಾಗಮ**ದ ಏಳನೆಯ ಪಟಲದಲ್ಲಿ ಶೈವರಲ್ಲಿಯ ಸಪ್ತ ಭೇದಗಳು ಜಾತ್ಯನುಕ್ರಮದಿಂದ ಎಂದು ಹೇಳಲ್ಪಟ್ಟಿರುವವು. ಸ್ತ್ರೀ ಶೂದ್ರರಿಗೆ ಪ್ರಣವರಹಿತ ಮಂತ್ರವನ್ನು ಕೊಡಬೇಕು, ಇಲ್ಲದಿದ್ದರೆ ಅದು ವ್ಯರ್ಥವಾಗುವದು ಎಂದು **ಸೂಕ್ಷ್ಮಾಗಮ**ದಲ್ಲಿ (ಪ. ೩. ಶ್ಲೋ. ೨೫-೨೬) ಹೇಳಿದೆ. ವಚನಕಾರರು ಈ ಮಾತುಗಳನ್ನು ಮನ್ನಿಸಿಲ್ಲ. ಒಮ್ಮೆ ಲಿಂಗ ದೀಕ್ಷೆಯಾದ ಬಳಿಕ ಯಾವ ಭೇದವನ್ನೂ ಇಡಕೂಡದು ಎಂದು ವಚನಕಾರರ ಪ್ರತಿಪಾದನವಿರುವದು.

ಆಗಮದಲ್ಲಿ ಕ್ವಚಿತ್ ಪ್ರಸಂಗಗಳಲ್ಲಿ ನಿಷ್ಕಾಮಕರ್ಮದ ಮಹತ್ವವು ಹೇಳಲ್ಪಟ್ಟಿದ್ದರೂ (ಸೂಕ್ಷ್ಮಾಗಮ ಪ. ೬ ಶ್ಲೋ. ೩೫) ಕಾಯಕದ ಮಹತ್ವವು ವಚನಗಳಲ್ಲಿ ಯಾವ ರೀತಿಯಿಂದ ಮತ್ತು ಎಷ್ಟರಮಟ್ಟಿಗೆ ಹೊಗಳಲ್ಪಟ್ಟಿದೆಯೋ ಆ ಮಟ್ಟಿಗೆ ಅದು ಅವುಗಳಲ್ಲಿಲ್ಲ.

❖❖

ವಚನಕಾರರ ಸಂದೇಶ

[ಶ್ರೀ ದಿವಾಕರರು ತಮ್ಮ ಗ್ರಂಥದ ಕೊನೆಗೆ ವಚನಕಾರರ ಸಂದೇಶವನ್ನು ಕುರಿತು ಬರೆದುದರಲ್ಲಿ ಪು. ೩೯೩ ರಿಂದ ೩೯೬ರ ವರೆಗೆ ಈ ಪ್ರಕಾರವಾಗಿದೆ]

ವಚನಕಾರರು ಎಲ್ಲ ಬಗೆಯ ಡಂಭ, ದೌರ್ಬಲ್ಯ, ದುರಾಚಾರಗಳನ್ನು ಬಲವಾಗಿ ಖಂಡಿಸಿರುವರು. ಜನರು ನೋಡಬೇಕೆಂದು ಮಾಡುವವನು ಕೀರ್ತಿಗಾಗಿ ಮಾಡುವವನು, ಅಹಂಕಾರ ಯುಕ್ತನಾಗಿ ಮಾಡುವವನು, ವ್ಯರ್ಥ ಶ್ರಮಪಡುತ್ತಿರುವವನೆಂದು, ಅವರ ಮತವು. ಅಂಥ ಕರ್ಮಗಳಿಂದ ಅವನು, ಹೆಚ್ಚೆಚ್ಚು ಬದ್ಧನಾಗುತ್ತಲೇ ಹೋಗುವನು. ಡಾಂಭಿಕ ಪೂಜೆ, ಹೋಮ, ಹವನ, ಜಪತಪ, ಮುಂತಾದವುಗಳಿಗೆ ವಚನಕಾರರ ಸಾಧನ ಮಾರ್ಗದಲ್ಲಿ ಎಳ್ಳಷ್ಟೂ ಸ್ಥಾನವಿಲ್ಲ. ಶುದ್ಧ, ನಿರ್ಮಲ, ನೈತಿಕ ಜೀವನವು ಅವೆಲ್ಲವುಗಳಿಗಿಂತ ಶ್ರೇಷ್ಠರು ಎಂದು ಅವರ ಮತವು.

ಶುಭಾಶುಭಶಕುನ, ಸ್ವಪ್ನ, ನಕ್ಷತ್ರ, ಮುಂತಾದವುಗಳನ್ನು ನಂಬಿ ಕಾರ್ಯ ಮಾಡುವವರನ್ನು ಅವರು ಅತಿಶಯವಾಗಿ ಹೀಯಾಳಿಸಿರುವರು. ಇದೊಂದು ಮೂಢ ಕಲ್ಪನೆಗಳ ದಾಸ್ಯವು. ನಾವು ಮಾಡತಕ್ಕ ಕಾರ್ಯವನ್ನು ಇಂಥ ಮೂರ್ಖ ಕಲ್ಪನೆಗಳಿಗೆ ಗುರಿಯಾಗಿ ಮುಂದೆ ಹಾಕುವದು ಅಥವಾ ಬಿಟ್ಟು ಬಿಡುವುದೆಂದರೆ ನಮ್ಮ ಮಾನಸಿಕ ದೌರ್ಬಲ್ಯದ ಪರಮಾವಧಿಯೆ ಸೈ. ಬೆಕ್ಕು ಅಡ್ಡಬರುವದಕ್ಕೂ ನಮ್ಮ ಕಾರ್ಯಕ್ಕೂ ಏನು ಸಂಬಂಧ, ಹಂಗ ಹಾರುವದಕ್ಕೂ ನಾವು ಹೊರಟ ಉದ್ದೇಶಕ್ಕೂ ಏನು ಸಂಬಂಧ ಎಂದು ಕೇಳಿ ವಚನಕಾರರು ನಮ್ಮನ್ನು ನೋಡಿ ನಗುವರು. ಪರಧನದಿಚ್ಛೆ, ಪರಸ್ತ್ರೀಕಾಮನೆ, ಪರನಿಂದೆ, ಕಳವು, ಹುಸಿ, ಮದ್ಯ, ಮಾಂಸ ಸೇವನೆ, ಭಿಕ್ಷಾ ವೃತ್ತಿ, ಆಲಸ್ಯ ಮುಂತಾದವುಗಳ ಮೇಲೆ ಅವರು ತಮ್ಮ ಕಠೋರವಾದ ಕತ್ತಿಯನ್ನು ಹಿಡಿದಿರುವರು. ಇಂಥ ಎಲ್ಲ ದುರ್ಗುಣ, ದುರಾಚಾರಗಳನ್ನು ಅವರು ನಿರಲಸತೆಯಿಂದ ಕಾಲ್ಕೆಳಗೆ ಮೆಟ್ಟಿ ಬಿಡಬೇಕೆಂದು ಪುನಃ ಪುನಃ ಬೇಸರಿಲ್ಲದೆ ಹೇಳಿರುವರು.

ಅವರು ವ್ಯಕ್ತಿಗಳಿಗಷ್ಟೆ ಉಪದೇಶ ಮಾಡಿ ಸುಮ್ಮನೆ ಕೂಡಲಿಲ್ಲ. ವ್ಯಕ್ತಿಯು ಸಮಾಜದ ಒಂದು ಘಟಕನಿರುವನು. ಸಮಾಜವು ಸುಧಾರಿಸದಿದ್ದರೆ ವ್ಯಕ್ತಿಯು ಸುಧಾರಿಸುವದು ಕಠಿಣ ಎಂಬ ಮಾತು ಅವರಿಗೆ ಗೊತ್ತಿತ್ತು. ಆದುದರಿಂದ ಸಮಾನತೆ, ಸ್ವಾತಂತ್ರ್ಯ, ಧರ್ಮ ಬಾಂಧವ್ಯ, ಉದ್ಯೋಗಶೀಲತೆ, ಗುಣ ಗ್ರಾಹಕತೆ, ಮುಂತಾದವುಗಳು ಇರುವಂಥ ಸಮಾಜವನ್ನು ನಿರ್ಮಿಸಲಿಕ್ಕೆ ಅವರು ಯತ್ನಿಸಿದರು. ಒಡಕು, ಮತ್ಸರ, ಘಾತಕ ಸ್ಪರ್ಧೆ ಇವು ಸಾಂಘಿಕ ಜೀವನಕ್ಕೆ ವಿಷತುಲ್ಯವಿರುವವು.

ಇವುಗಳ ಮೂಲವು ಉಚ್ಚ-ನೀಚ ಭಾವ, ಅಹಂಕಾರ, ದುರಭಿಮಾನ, ಸಹಕಾರದ ಅಭಾವ ಇವುಗಳಲ್ಲಿದೆ, ಆದುದರಿಂದ ಜಾತಿಗತವಾದ ಅಥವಾ ಲಿಂಗ ಗತವಾದ ಕೃತಕ ಉಚ್ಚ ನೀಚ ಭಾವಗಳನ್ನು ವಚನಕಾರರು ನಿರಾಕರಿಸಿದರು. ಆ ಸ್ಥಾನದಲ್ಲಿ ಗುಣ ಕರ್ಮಗಳ ಶ್ರೇಷ್ಠತೆಯನ್ನು ಸಾರಿದರು. ಗುಣ ಕರ್ಮಗಳೇ ಪೂಜಾ ಸ್ಥಾನವೆಂದು ಸ್ಥಾಪಿಸಿದರು.

ಸ್ತ್ರೀಗೆ ಪೂಜೆಯ ಅಧಿಕಾರವಿಲ್ಲ, ಮಂತ್ರದ ಅಧಿಕಾರವಿಲ್ಲ ಎಂಬ ಮುಂತಾದ ಕಲ್ಪನೆಗಳಿಗೆ ಮಣ್ಣುಕೊಟ್ಟು ಆಕೆ ಪ್ರತ್ಯಕ್ಷ ಮಹಾದೇವಿಯು, ಆಕೆ ಸಮಾನ ಹಕ್ಕುಳ್ಳ, ಸ್ವಾತಂತ್ರ್ಯವುಳ್ಳ ಪುರುಷನ ಸಹಭಾಗಿನಿಯು, ಧರ್ಮ ಭಗಿನಿಯು ಎಂಬುದನ್ನು ಆಚರಣದಲ್ಲಿ ತಂದರು. ಪರಮಾತ್ಮನ ಓಲಗದಲ್ಲಿ ಜಾತಿಗಳಿಗೆ ಸ್ಥಾನವಿಲ್ಲ ಎಂದು ಸಿದ್ಧಮಾಡಿ ಎಲ್ಲ ಜಾತಿಯವರನ್ನೂ ಪಂಥದವರನ್ನೂ ಒಂದೇ ಸಮಾಜದಲ್ಲಿ ಸಮವಾಗಿ ಸೇರಿಸಿ ಕೊಡುಕೊಳ್ಳುವ ವ್ಯವಹಾರಗಳನ್ನು ಪ್ರಚಲಿತ ಮಾಡಿದರು. ಪರಮಾತ್ಮನ ಪ್ರೇರಿತ ಕಾರ್ಯವೊಂದನ್ನೇ ಕಣ್ಣು ಮುಂದಿಟ್ಟುಕೊಂಡು ಅದನ್ನು ಹೇಗೆ ಪೂರೈಸಬೇಕು. ಮತ್ತು ಅದಕ್ಕೆ ತಾನು ಹೇಗೆ ಸಹಾಯಭೂತನಾಗಬೇಕು ಎಂಬುದೊಂದೆ ಭಾವವು ಎಲ್ಲರ ಹೃದಯದಲ್ಲಿ ತುಂಬಿರುವಂತೆ ಅವರು ಮಾಡಿದರು. ಆದುದರಿಮದ ಉಚ್ಚ ನೀಚಾದಿ ಭಾವಗಳಿಗೆ ಎಡೆಯಿಲ್ಲದಂತಾಯಿತು. ಕಾಯಕಗಳ ಉಚ್ಚ ನೀಚತೆಯ ಬಗ್ಗೆಯೂ ಇದೇ ಬಗೆಯ ವಿಚಾರ ಕ್ರಾಂತಿಯನ್ನು ಅವರು ಒದಗಿಸಿದರು.

ಪ್ರತಿಯೊಂದು ಕಾಯಕವೂ ಪರಮಾತ್ಮನ ಚರಣಕ್ಕೆ ಅರ್ಪಿತವಾದ ಪುಷ್ಪವೆ ಇರುವದರಿಂದ ಅದರಲ್ಲಿ ಉಚ್ಚ ನೀಚತೆಗೆ ಎಡೆ ಎಲ್ಲಿಂದ ಬರಬೇಕು? ಸಮಾಜದಲ್ಲಿ ಅವರು ಈ ಭಾವವನ್ನು ನೆಲೆಗೊಳಿಸಿದರು. ಬೆಂಕಿಯಲ್ಲಿ ಬಿದ್ದ ಕಟ್ಟಿಗೆಯೆಲ್ಲ ಕೆಂಡವೆ ಆಗುವಂತೆ ಅರ್ಪಿತ ಕಾಯಕವೆಲ್ಲ ಪಾವನವೇ ಆಗಿಹೋಗುವುದು. ಯಾವ ಕಾಯಕವು ಸಮಾಜ ರಕ್ಷಣೆಗೆ ಅಥವಾ ಪೋಷಣೆಗೆ ಅವಶ್ಯಕವೋ ಹಾಗು ಯಾವುದು ಅನೀತಿಕರವಿಲ್ಲವೋ ಅದು ಪವಿತ್ರವೆಂದೆ ವಚನಕಾರರು ನಿರ್ಧರಿಸಿದರು. ಇದರಿಂದ, ಆಯಾ ಕಾಯಕಗಳನ್ನು ಮಾಡುವವರಲ್ಲಿ ಹುಟ್ಟಿದ ಅವಾಸ್ತವ ಉಚ್ಚ ನೀಚ ಭಾವಗಳೆಲ್ಲ ಅಲ್ಲಿಯೇ ಇಂಗಿಹೋದವು. ಮತ್ತು ಎಲ್ಲರಲ್ಲಿ ಒಂದು ಬಗೆಯ ಅನುಪಮವಾದ ಧರ್ಮ ಬಂಧುಭಾವವು ರೂಢವಾಯಿತು. ಈ ರೀತಿ ವ್ಯಕ್ತಿಗೆ ಸಮಾಜಕ್ಕೆ, ಸಮಾಜದಲ್ಲಿ ಉಚ್ಚ ನೀಚವೆನಿಸಿಕೊಳ್ಳುವವರಿಗೆ, ಸ್ತ್ರೀಯರಿಗೆ ಪುರುಷರಿಗೆ, ಎಲ್ಲರಿಗೆ ಅವರ ಸಂದೇಶವಿತ್ತು.

ಬನ್ನಿರಿ, ಎಲ್ಲರೂ ಬನ್ನಿರಿ, ದೊಡ್ಡವರು ಚಿಕ್ಕವರು, ಸ್ತ್ರೀಯರು ಪುರುಷರು, ಹೊಲೆಯರು, ಬ್ರಾಹ್ಮಣರು, ಸಮಗಾರರು, ಅರ್ಚಕರು, ಆಳುಗಳು, ಅರಸರು, ಸೈನಿಕರು, ಸೇನಾಪತಿಗಳು, ಜಾಲಗಾರರು, ಸಂಗೀತಗಾರರು, ಬನ್ನಿರಿ. ನಿಮ್ಮ ನಿಮ್ಮ ಕ್ಷುದ್ರ ಅಹಂಭಾವಗಳನ್ನು ಮರೆಯಿರಿ. ನಾವು ಆ ಕುಲದವರು ಈ ಕುಲದವರು, ಇಂಥ ಉಚ್ಚ ಉದ್ಯೋಗ ಮಾಡುವವರು ಅಂಥ ಹೆಚ್ಚಿನ ಕಾಯಕದವರು ಎಂಬ ವೃಥಾಭಿಮಾನವನ್ನು ತೊರೆಯಿರಿ. ನಿಮ್ಮಲ್ಲಿರುವ ಶಕ್ತಿಗಳೆಲ್ಲ ವಿಶ್ವ ಸಂಗೀತದೊಡನೆ ಮೇಳಗೂಡಿಸಲು ಕೊಟ್ಟ ವಿವಿಧ ವಾದ್ಯಗಳಿರುವವು. ಅವುಗಳನ್ನು ತಿದ್ದಿ, ತೀಡಿ, ನೆಟ್ಟಗೆ ಮಾಡಿ, ಸಂಸ್ಕಾರ ಕೊಟ್ಟು ಸರಿಪಡಿಸಿರಿ. ಅವೆಲ್ಲ ಪರಸ್ಪರ ಪೋಷಕವೆ ಇಲ್ಲವೆ ಪೂರಕವೆ ಇರುವವೆಂಬುದನ್ನು ಮರೆಯಬೇಡಿರಿ.

ನೀವು ಒಂದು ಬೇಸುರ, ಬೇತಾಲ, ಭಯಾನಕ ಬಡಿದಾಟದಲ್ಲಿ ತೊಡಗಿರುವಿರಿ ಎಂಬ ಕಲ್ಪನೆಯನ್ನು ಕಿತ್ತಿಹಾಕಿರಿ. ನೀವು ಕಿವಿಗೊಟ್ಟು ಕೇಳಿರಿ. ಅಕೋ ಇದು ಶಿವಲೋಕದ ಸುಂದರ ಸಂಗೀತವು! ಭವ್ಯವಾದ ಅನಂತ ಸೂರ್ಯ ಮಂಡಲಗಳೆಲ್ಲ ಆ ಸಂಗೀತದೊಡನೆ ತಾಲ ಹಿಡಿದು ಕುಣಿಯುತ್ತಿರುವವು. ವಿಶ್ವದಲ್ಲಿಯ ಅಣು ರೇಣುಗಳ ಆಕರ್ಷಣ ವಿಕರ್ಷಣಗಳೆಲ್ಲ ಈ ಸಂಗೀತ ಲಹರಿಗನುಸರಿಸಿಯೆ ಅಗುವವು. ಈ ಸಂಗೀತದ ತಾನಗಳಿಂದಲೇ ಪ್ರಾಣವೂ ಪ್ರೇರಿತವಾಗಿ ಪರಮಾಣುಗಳಲ್ಲಿ ಸೇರಿ ಜೀವ ಕೋಟಿಯನ್ನು ನಿರ್ಮಿಸುವದು. ಈ ಸಂಗೀತದ ಆಲಾಪಗಳಿಂದಲೇ ಚೈತನ್ಯವೂ ಮನುಷ್ಯನಲ್ಲಿ ಸ್ವ ಸಂವೇದವುಳ್ಳದ್ದಾಗಿ ಆತ್ಮಜ್ಞಾನವನ್ನು ಪಡೆಯಲಿಚ್ಚಿಸುವದು. ಈ ದಿವ್ಯ ಸಂಗೀತದಲ್ಲಿ ಜಗತ್ಕಾರಣ, ಜಗದ್ಧಾರಣ, ಜಗನ್ಮಾರಣವಾದ ಈ ವಿಲಕ್ಷಣ ಸಂಗೀತದಲ್ಲಿ ನೀವೆಲ್ಲರೂ ಮೇಳಗಾರರಾಗಿರುವಿರಿ. ನಿಮ್ಮ ನಿಮ್ಮ ಸ್ವರವನ್ನು ಇದರಲ್ಲಿ ಕೂಡಿಸಿ ಇದನ್ನು ಇನ್ನೂ ಹೆಚ್ಚು ಸುರಮ್ಯ ಮಾಡಿರಿ. ಈ ಸಂಗೀತದೊಡನೆ ಹೆಜ್ಜೆಯಿಕ್ಕಿ ಸುಖದಲ್ಲಿ ನಲಿದಾಡುತ್ತ ಪರಮ ಸುಖದತ್ತ ಸಾಗಿರಿ.

ನೀವು ಹೊರಟಿರುವದು ಶಿವಲೋಕದ ಯಾತ್ರೆಗೆ, ನಿಮ್ಮ ಶಕ್ತಿಗಳ ಪುಷ್ಪಾಂಜಲಿಯು ನಿಮ್ಮ ಕೈಯಲ್ಲಿ. ಅವು ಬಾಡದಂತೆ, ಬತ್ತದಂತೆ, ಅವು ಅತ್ತಿತ್ತ ಬೀಳದಂತೆ ಆ ಸುಕೋಮಲ ಹೂಗಳನ್ನು ಎಚ್ಚರದಿಂದ ಒಯ್ದು ಅವುಗಳನ್ನು ಶಿವಚರಣದಲ್ಲಿ ಅರ್ಪಿಸುವ ಭಾರವು ನಿಮ್ಮದಿದೆ. ನಿಮ್ಮ ಅಂಜಲಿಯು ಅಲ್ಲಿ ಸಲ್ಲಬೇಕಾಗಿದ್ದರೆ ನಿಮ್ಮ ಕಾಯ-ವಾಚ-ಮನಗಳು ಶುದ್ಧವಿರಬೇಕು. ನಿಮ್ಮ ಭಾವವು ಅನನ್ಯವಿರಬೇಕು. ನೀವು ನಡೆಯುವ ದಾರಿಯು ಕಠಿಣವಿರಬಹುದು. ಆದರೆ ಚೈತ್ರ ಯಾತ್ರೆಗೆ ಹೊರಟವರ ವೀರ ಭಾವವು ನಿಮ್ಮಲ್ಲಿ ನೆಲೆಸಲಿ, ನೀತಿ, ನಿಷ್ಠೆ, ಪರಸ್ಪರ ಸಹಾಯ ಇವುಗಳಿಂದ ನೀವು ಎಲ್ಲಿ ಹೋದರೂ ಗೆದ್ದೇತೀರುವಿರಿ, ನಿಮ್ಮ ಧ್ಯೇಯವನ್ನು ಮುಟ್ಟಿಯೇ ಬಿಡುವಿರಿ. ಆದುದರಿಂದ, ಏಳಿರಿ, ಧೈರ್ಯಗೊಳ್ಳಿರಿ, ಧರ್ಮ ಪಥವನ್ನು ಹಿಡಿಯಿರಿ ಮತ್ತು ಧರ್ಮಸಾಮ್ರಾಜ್ಯದ ನಿವಾಸಿಗಳಾಗಿ ಪರಮ ಸುಖದ ಅಧಿಕಾರಿಗಳಾಗಿರಿ. ಹೀಗಿರುವದು **ವಚನಕಾರರ ಸಂದೇಶವು.**

ವಚನಗಳ ಆಧಾರ

[ಶ್ರೀ. ದಿವಾಕರರು ತಮ್ಮ ಪ್ರತಿಪಾದನೆಗೆ ಆಧಾರವಾಗಿ ಕೊಟ್ಟ ವಚನಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ]

೪೧೧. ನಾನು ಘನ, ತಾನು ಘನವೆಂಬ ಹಿರಿಯರುಂಟೇ ಜಗದೊಳಗೆ? ಹಿರಿಯರ ಹಿರಿಯತನದಿಂದೇನಾಯಿತ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ ಆತನೇ ಶರಣ ಗುಹೇಶ್ವರಾ.

೪೧೨. ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ? ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ? ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

೪೮೦. ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ, ನುಡಿ ಲೇಸು ನಡೆ ಅಧಮವಾದಲ್ಲಿ ಅದೇ ಬಿಡುಗಡೆ, ಇಲ್ಲದ ಹೊಲೆ ಕಳವು ಪರದಾರಂಗಳಲ್ಲಿ ಹೊಲಬನರಿಯದೆ ಕೆಟ್ಟು ನಡೆವುತ್ತ

ಮತ್ತೆ ಕುಲಜನೆಂಬ ಒಡಲುಂಟೆ? ಆಚಾರವೇ ಕುಲ, ಅನಾಚಾರವೇ ಹೊಲೆ, ಇಂತೀ ಉಭಯವ ತಿಳಿದು ಅರಿಯಬೇಕು, ಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ, ಅರಿ ನಿಜಾತ್ಮಾರಾಮ ರಾಮನಾ.

೪೮೧. ಕೊಲ್ಲುವನೇ ಮಾದಿಗನು. ಹೊಲಸು ತಿಂಬವನೇ ಹೊಲೆಯ. ಕುಲವೇನೋ? ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವರು ನಮ್ಮಕೂಡಲ ಸಂಗನ ಶರಣರೆಲ್ಲ ಕುಲಜರು.

೫೨೩. ವೇದವನೋದಿ ವೇದಾಧ್ಯಯನವ ಮಾಡಿದರೇನು? ಬ್ರಾಹ್ಮಣನಾಗಬಲ್ಲನೇ? ಬ್ರಹ್ಮವೇತ್ತುಗಳ ಶುಕ್ಲಶೋಣಿತದಿಂದ ಜನಿಸಿದರೇನು? ಬ್ರಾಹ್ಮಣನಾಗಬಲ್ಲನೇ? ಯಜನಾದ್ಯಷ್ಟ ಷಟ್ಕರ್ಮಂಗಳ ಬಿಡದೆ ಮಾಡಿದರೇನು? ಬ್ರಾಹ್ಮಣನಾಗಬಲ್ಲನೇ? 'ಬ್ರಹ್ಮ ಜಾನಾತಿ ಬ್ರಾಹ್ಮಣಃ', ಎಂಬ ವೇದವಾಕ್ಯವನರಿತು ಬ್ರಹ್ಮಭೂತನಾದಾತನೆ ಬ್ರಾಹ್ಮಣ ನೋಡ, ಕಪಿಲಸಿದ್ಧ ಮಲ್ಲಿಕಾರ್ಜುನಾ.

೫೨೪. ಗುಣದಿಂದ ಹಾರುವನಲ್ಲದೆ ಅಗಣಿತ ಅಭ್ಯಾಸದಿಂದ ಹಾರುವನಲ್ಲ, ನೋಡಾ, ಹಾರಬೇಕು ಮಲತ್ರಯಂಗಳ, ಹಾರಬೇಕು ಸೃಷ್ಟಿ ಸ್ಥಿತಿ ಲಯವ, ಹಾರಬೇಕು ಸರ್ವಹಾರ ಕಪಿಲಸಿದ್ಧ ಮಲ್ಲಿಕಾರ್ಜುನನ ಆಹಾರದಲ್ಲಿ.

೫೨೫. ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿರತಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ಕೃಷಿಯ ಮಾಡುವಲ್ಲಿ ಶೂದ್ರನಾಗಿ, ಇಂತೀ ಜಾತಿ ಗೋತ್ರದೊಳಗೆ ನೀಚ ಶ್ರೇಷ್ಠವೆಂಬ ಎರಡು ಕುಲವಲ್ಲದೆ ಹೊಲೆಹದಿನೆಂಟು ಜಾತಿ ಎಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ, ಸರ್ವಜೀವಹತ ಕರ್ಮಕ್ಕೊಳಗಾದಲ್ಲಿ ಸಮ್ಮಕಾರ, ಈ ಉಭಯವನರಿದು ಮರೆಯಲಿಲ್ಲ. ಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ ಅರಿ ನಿಜಾತ್ಮಾರಾಮ ರಾಮನಾ.

೫೨೭. ಶುಕ್ಲ ಶೋಣಿತ, ಮಜ್ಜೆ ಮಾಂಸ, ಹಸಿವು ತೃಷೆ, ವ್ಯಸನ ವಿಷಯಾದಿಗಳೊಂದೇ ಭೇದ, ಮಾಡುವ ಕೃಷಿವ್ಯವಸಾಯ ಹಲವು ಅಲ್ಲದೆ ತೋರುವ ತೋರಿಕೆ ಅರಿವ ಆತ್ಮನೊಂದೇ ಭೇದ. ಆವ ಕುಲವಾದರೂ ಅರಿದಲ್ಲಿಯೆ ಪರತತ್ವಭಾವಿ, ಮರೆದಲ್ಲಿಯೆ ಮಲಮಾಯ ಸಂಬಂಧಿ. ಇಂತೀ ಉಭಯವನರಿದು ಮರೆಯಲಿಲ್ಲ. ಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ ಅರಿ ನಿಜಾತ್ಮಾರಾಮ ರಾಮನಾ.

೪೩೫. ಶೀಲ ಶೀಲವೆಂದು ಗರ್ವಿಸಿ ನುಡಿವುತಿರ್ಪಿರಿ, ಶೀಲವಾವುದಂದರಿಯಿರೆ! ಕೇಳಿರಣ್ಣಾ, ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ. ಇಲ್ಲದುದಕ್ಕೆ ಕಡನ ಮಾಡದಿಪ್ಪುದೇ ಶೀಲ. ಪರಧನ, ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ. ನಮ್ಮ ಕೂಡಲ ಚೆನ್ನಸಂಗನ ಶರಣರ ಬರವಿಂಗೆ ಮುಯ್ಯಾಂತುದೇ ಅಚ್ಚ ಶೀಲ.

೪೩೬. ಶೀಲ ಶೀಲವೆಂದು ನುಡಿವುತಿರ್ಪರೆಲ್ಲರೂ. ಶೀಲದ ಹೊಲಬನಾರೂ ಅರಿಯರಲ್ಲಾ. ಕೆರೆ, ಬಾವಿ, ಹಳ್ಳ, ಕೊಳ್ಳ, ಹೊಳೆಗಳ ನೀರ ಬಳಸದಿರ್ದೊಡೆ ಶೀಲವೆ? ಕೊಡಕ್ಕೆ ಪಾವುಡ ಹಾಕಿ ಚಿಲುಮೆ ಸಿತಾಳ ತಂದರೆ ಅದು ಶೀಲವೇ? ಬೆಳೆದ ಬೆಳಸು ಕಾಯಿ ಹಣ್ಣುಗಳ ಬಿಟ್ಟರೆ ಶೀಲವೆ? ಉಪ್ಪು, ಎಣ್ಣೆ ಹಾಲು, ತುಪ್ಪ, ಇಂಗು, ಮೆಣಸು, ಅಡಿಕೆ, ಬೆಲ್ಲಗಳ ಬಿಟ್ಟರೆ ಶೀಲವೆ? ಪರಪಾಕವ ಬಿಟ್ಟು ಸ್ವಯಂಪಾಕದಲ್ಲಿದ್ದರೆ ಶೀಲವೇ? ಭವಿಯ ಕಾಣದಂತಿರ್ದಡೆ ಶೀಲವೇ? ಅಲ್ಲಲ್ಲ. ಅದೇನೂ

ಕಾರಣವೆಂದಡೆ, ಇಂತಿವೆಲ್ಲವು ಹೊರಗಣ ವ್ಯವಹಾರವು. ಇನ್ನು ಅಂತರಂಗದ ಅರಿಷಡ್ವರ್ಗಂಗಳೆಂಬ ಭವಿಗಳ ಕಳೆಯಲಿಲ್ಲ. ಮಾಯಾಮೋಹ ಬೆಳೆ ಉಳಗುನ್ನಿಯ ಬಿಡಲಿಲ್ಲ. ಸಂಸಾರ ವಿಷಯರಸವೆಂಬ ಹಳ್ಳ ಕೊಳ್ಳ, ಕೆರೆ ಬಾವಿಗಳಲಿಲ್ಲ. ಅಷ್ಟಮದಗಳೆಂಬ ಉಪ್ಪು, ಎಣ್ಣೆ, ತುಪ್ಪ, ಹಾಲು, ಇಂಗು, ಮೆಣಸು, ಅಡಿಕೆ, ಬೆಲ್ಲಗಳ ಬಿಡಲಿಲ್ಲ. ಸಕಲ ಕರಣಂಗಳೆಂಬ ಎಳೆ ಸುಫಲಂಗಳ ಬಿಡಲಿಲ್ಲ. ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವುಡವ ಮುಚ್ಚಲಿಲ್ಲ. ಚಿತ್ಕೊಡವೆಂಬ ಚಿಲುಮೆಯಲ್ಲಿ ಚಿದಮೃತವೆಂಬ ಚಿಲುಮೆಯಲ್ಲಿ ಚಿದಮೃತವೆಂಬ ಸಿತಾಳವ ತಂದು ಚಿನ್ಮಯ ಲಿಂಗಕ್ಕೆ ಅಭಿಷೇಕವ ಮಾಡಲಿಲ್ಲ. ಇಂತೀ ಅಂತರಂಗ ವಿಚಾರವನರಿಯದೆ ಹಾಳ ಸಂಕಲ್ಪದಿಂದೆ ಬಹಿರಂಗದ ಪದಾರ್ಥಗಳ ಬಿಟ್ಟು, ಮುಕ್ತಿಯ ಪಡೆದೆವೆಂಬ ಯುಕ್ತಿಗೇಡಿಗಳಿಗೆ ಭವಬಂಧನಗಳು ಹಿಂಗಲಿಲ್ಲ. ಜನನ ಮರಣಂಗಳು ಜಾರಲಿಲ್ಲ. ಸಂಸಾರ ಮಾಯಾ ಮೋಹವು ನೀಗಲಿಲ್ಲ. ಇಂತಪ್ಪ ಅಜ್ಞಾನಿಗಳ ವಿಧಿ ಎಂತಾಯಿತ್ತೆಂದರೆ, ಹುತ್ತದೊಳಗಣ ಹಾವ ಕೊಲ್ಲುವೆನೆಂದು ಮೇಲೆ ಹುತ್ತವ ಬಡಿಯುವ ಮರುಳನಂತಾಯಿತ್ತು ನೋಡಾ, ಅಖಂಡೇಶ್ವರಾ.

೫೨೯. ಉಂಬಲ್ಲಿ ಉಡುವಲ್ಲಿ ಕ್ರಿಯೆಯಳಿಯಿತ್ತೆಂಬರು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರೆಂತಯ್ಯ? ಅವರು ಭಕ್ತರೆಂತೆಂಬೆ? ಅವರು ಯುಕ್ತರೆಂತೆಂಬೆನಯ್ಯಾ? ಕೂಡಲ ಸಂಗಮದೇವ ಕೇಳಯ್ಯ, ಹೊಲತಿ ಶುದ್ಧ ನೀರು ಮಿಂದಂತಾಯಿತ್ತು.

೪೭೯. ದೇವ ದೇವ ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನು ಒಂದೇ ಎಂಬೆ, ಹಾರುವ ಮೊದಲು ಶ್ವಪಚರ ಕಡೆಯಾಗಿ ಭವಿಯಾದವರನೆಲ್ಲರನು ಒಂದೇ ಎಂಬೆ. ಹೀಗೆಂದು ನಂಬುವುದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ, ನೀನಂದೇ ಮೂಗ ಕೊಯ್ಯಿ, ಕೂಡಲಸಂಗಮದೇವಾ.

೫೨೮. ಎಡೆಗೆ ಬಾರದಾತ ಅಡಿಗೆಗೆ ದೂರ. ಅಡಿಗೆಗೆ ದೂರಾದಾತ ಮನೆಗೆ ದೂರ. ಮನೆಗೆ ದೂರಾದಾತ ಮನಕ್ಕೆ ದೂರ. ಮನಕ್ಕೆ ದೂರಾದಾತ ಗುಹೇಶ್ವರ ಲಿಂಗಾನುಭವಕ್ಕೆ ದೂರ, ಚನ್ನಬಸವಾ.

೫೨೭. ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿಂದ, ಎಂಬುದನರಿಯದೆ ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕ್ಕೆ? ಇಂತೀ ಸಪ್ತಋಷಿಗಳೆಲ್ಲರೂ ಸತ್ಯದಿಂದ ಮುಕ್ತರಾದುದನರಿಯದೆ ಅಸತ್ಯದಲ್ಲಿ ನಡೆದು, ವಿಪ್ರರು ನಾವು ಘನವೆಂದು ಹೋರುವ ಹೊತ್ತು ಹೋಕರ ಮಾತೇತಕ್ಕೆ? ಕಯ್ಯುಳಿಗತ್ತಿ ಅಡಿಗೂಂಟಕೆಡೆಯಾಗಬೇಡ, ಅರಿ ನಿಜಾತ್ಮಾರಾಮ ರಾಮನಾ.

೬೩. ನೇಹದ ಸುಖವ ನೋಟ ನುಂಗಿತ್ತು. ನೋಟದ ಸುಖವ ಕೂಟ ನುಂಗಿತ್ತು. ಕೂಟದ ಸುಖವ ಆಲಿಂಗನ ನುಂಗಿತ್ತು. ಆಲಿಂಗನದ ಸುಖವ ಸಂಗ ನುಂಗಿತ್ತು. ಸಂಗಸುಖವ ಸಮರಸ ನುಂಗಿತ್ತು. ಸಮರಸದ ಸುಖವ ಪರವಶ ನುಂಗಿತ್ತು. ಪರವಶದ ಸುಖವ ಕೂಡಲ ಚನ್ನಸಂಗಯ್ಯ ತಾನೇ ಬಲ್ಲ.

ಮುದ್ರಿಕೆಗಳ ವಿವರ

(ಮೇಲೆ ಉದಾಹರಿಸಿದ ವಚನಗಳು ಯಾವ ಯಾವ ಶರಣರವುಗಳೆಂಬುದನ್ನು ಆ ವಚನಗಳ ಮುದ್ರಿಕೆಗಳಿಂದ ಈ ಕೆಳಗೆ ವಿವರಿಸಿರುವಂತೆ ತಿಳಿದುಕೊಳ್ಳಬೇಕು)

ಮುದ್ರಿಕೆ		ವಚನಕಾರರು
ಕಯ್ಯುಳಿಗತ್ತಿ ಅಡಿಗೂಂಟ	-------------	ಚೆನ್ನಯ್ಯನವರು
ಕೂಡಲಸಂಗಮದೇವ	-------------	ಬಸವಣ್ಣನವರು
ಗುಹೇಶ್ವರ	-------------	ಪ್ರಭುದೇವರು
ಕೂಡಲಚೆನ್ನಸಂಗಯ್ಯ	-------------	ಚೆನ್ನಬಸವಣ್ಣನವರು
ಅಖಂಡೇಶ್ವರ	-------------	ಷಣ್ಮುಖ ಸ್ವಾಮಿಗಳು
ಚೆನ್ನಮಲ್ಲಿಕಾರ್ಜುನ	-------------	ಅಕ್ಕಮಹಾದೇವಿ
ರಾಮನಾಥಾ	-------------	ದೇವರ ದಾಸಿಮಯ್ಯ

❖❖

ಬಸವಯುಗದ ವಚನಕಾರರು

[ಶ್ರೀಮಾನ್ ಟಿ. ಎಸ್. ವೆಂಕಣ್ಣನವರು ಎಂ.ಎ. ಇವರು ತಾರೀಖು ೨೪-೪-೧೯೩೬ನೆಯ ದಿವಸ ಬಸವಜಯಂತಿಯ ಕಾಲಕ್ಕೆ ಗದಗಿನಲ್ಲಿ ಮಾಡಿದ ಭಾಷಣವು ಈ ಪ್ರಕಾರವಾಗಿತ್ತು]

ಬಸವಯುಗದಲ್ಲಿ ಅಂದರೆ ೧೨ನೆಯ ಶತಮಾನದಲ್ಲಿ ಧರ್ಮಗ್ರಂಥಗಳ ಪ್ರಸಾರಣೆಯು ಅತ್ಯುತ್ತಮ ರೀತಿಯಿಂದ ಜರುಗಿತು. ಆ ಶ್ರೇಯಸ್ಸಿಗೆ ಆ ಯುಗದ ವಚನಕಾರರೇ ಕಾರಣರು. ಬಸವ ಯುಗದ ವಚನಕಾರರು ಜನಜೀವನದಲ್ಲಿ ಕ್ರಾಂತಿಯನ್ನುಂಟುಮಾಡಿದರು. ಧರ್ಮದ ತಿರುಳನ್ನು ತಿಳುಹಿದರು. ಐಕ್ಯ ಪ್ರೇಮ ಸಮತಾಭಾವಗಳನ್ನು ಬೀರಿದರು. ನಮ್ಮ ಹಿಂದು ಸಂಸ್ಕೃತಿಯ ನೆನಹು ನಮಗಿಂದು ಬರಬೇಕಾದರೆ ಬಸವಯುಗದ ಮಹನುಭಾವಿಗಳಿಂದಲೇ ಎಂದರೆ ತಪ್ಪಾಗಲಾರದು. ಅವರ ಒಂದೊಂದು ವಚನಗಳಲ್ಲಿ ಅಖಿಲ ವಿಶ್ವದ ಸಾರಸಂಗ್ರಹವೂ ಅಡಕವಾಗಿದೆ. ಮತ್ತೊಂದು ವಿಶೇಷವೆಂದರೆ ವಚನಕಾರರು ನಿರ್ದಾಕ್ಷಿಣ್ಯಪರರು. ಇದ್ದುದನ್ನು ಇದ್ದಂತೆ ಹೇಳಲು ಯಾರ ಭಿಡೆ ಮುರವತ್ತುಗಳು ಅವರಿಗಿಲ್ಲ.

ಬಸವಯುಗದ ವಚನಕಾರರು ಜನಜೀವನದ ಉದ್ಧಾರಕ್ಕಾಗಿ ಇದೊಂದು ಬಗೆಯ ಚಳವಳಿಯನ್ನೇ ಹೂಡಿದರೆನ್ನಬಹುದು. ಮಹಾನುಭಾವಿ ಬಸವಣ್ಣನವರ ಬುದ್ಧಿಶಕ್ತಿ, ಸಮಾಜ ಪ್ರೀತಿಗಳು ಯಾರ ಮನವನ್ನೂ ಆಕರ್ಷಿಸದಿರಲಿಲ್ಲ. ವೀರಶೈವಮತವು ಯಾವ ಮತಕ್ಕೂ ವಿರೋಧವಾದುದಲ್ಲೆಂಬುದನ್ನು ತೋರಿಸಿಕೊಟ್ಟರು. ಒಂದುಕಡೆ ಕಾಶ್ಮೀರದಿಂದಲೂ ಮತ್ತೊಂದು ಕಡೆ ತಮಿಳು ನಾಡಿನಿಂದಲೂ ಬಂದ ವೀರಶೈವ ಪ್ರವಾಹದ್ವಯಗಳನ್ನು ಒಂದುಗೂಡಿಸಿ, ಬಸವಣ್ಣನವರು ಅಲ್ಲಿ ತಮ್ಮ ಚಳುವಳಿಯನ್ನಾರಂಭಿಸಿದರು. ಲಿಂಗಧಾರಣೆಯು ಈ ಸಮಯದಲ್ಲಿ ಸಾರ್ವತ್ರಿಕವಾಗಿರಲಿಲ್ಲ. ಬಸವಣ್ಣನವರು ಬೋಧಿಸಿದ ಲಿಂಗಧಾರಣೆಯ ತತ್ವದ ಮಥಿತಾರ್ಥವಿಷ್ಟೆ: **ಈಶ್ವರ ಸಾನ್ನಿಧ್ಯವು ನಿನ್ನಲ್ಲಿದೆ: ನಿನ್ನ ಪರಿಶುದ್ಧ ತನುವಿನಲ್ಲಿದೆ, ಗುಡಿ ಗುಂಡಾರಗಳಲ್ಲಿಲ್ಲ; ತೀರ್ಥ ಪ್ರಸಾದಗಳಲ್ಲಿಲ್ಲ**. ಎಂಬುದನ್ನು ಪ್ರತಿಯೊಬ್ಬರೂ ಪದೇ ಪದೇ ನೆನಪಿಗೆ ತಂದುಕೊಳ್ಳಲೆಂದೇ.

ಬಸವಣ್ಣನವರು ಬೋಧಿಸಿದ ತತ್ವವಿದೇನು ಹೊಸದಲ್ಲ, ನಮ್ಮ ಅಂತರಂಗದಲ್ಲಿ ಪರಮಾತ್ಮನಿದ್ದಾನೆ: ಸರ್ವರ ಹೃದಯಗಳಲ್ಲೂ ಪರಮಾತ್ಮನಿದ್ದಾನೆ ಎಂದು ಹೇಳಿದುದು ಶ್ರುತಿ ಸ್ಮೃತಿ ಪುರಾಣಗಳಲ್ಲೂ ಕಂಡುಬರುತ್ತಿದೆ.

ಹಾಗಾದರೆ ಇದುವರೆಗೆ ಆ ಪರಮಾತ್ಮನನ್ನು ಕಂಡವರೆಷ್ಟು ಜನ? ಕಾಣುವ ಅಧಿಕಾರ ನಮಗಿದೆಯೇ? ಕಂಡಿಲ್ಲವೇಕೆ? ಕಾಣುವ ಬಗೆ ಹೇಗೆ?

ಸಕಲ ಶಾಸ್ತ್ರ ಪುರಾಣಗಳನ್ನೂ ನಾವು ತಿಳಿದುಕೊಳ್ಳಬೇಕು. ಪಂಡಿತರಾಗಬೇಕು. ತರ್ಕ ಶಾಸ್ತ್ರಜ್ಞರಾಗಬೇಕು. ಇದು ಜನಸಾಮಾನ್ಯರಾದ ನಮಗೆ ಸಾಧ್ಯವಿಲ್ಲ. ಹಾಗಾದರೆ ದೇವರನ್ನು ಕಾಣುವ ಬಗೆಯೆಂತು? ಒಂದೇ ಒಂದು ಸುಲಭೋಪಾಯವೆಂದರೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡವರನ್ನು ಕಾಣುವದು. ಅವರು ತೋರಿಸಿದ ಮಾರ್ಗವನ್ನು ಹಿಡಿಯುವದು.

ಇಲ್ಲಿಯೇ ಬಸವಯುಗದ ವಚನಕಾರರಿಗೆ ಒಂದು ಮಹೋನ್ನತ ಸ್ಥಾನ ಪ್ರಾಪ್ತವಾಗುವದು, ಬಸವಯುಗದ ವಚನಕಾರರು ಸಕಲ ಶಾಸ್ತ್ರ ಪುರಾಣಗಳ ತಿರುಳನ್ನು ತಿಳಿದುಕೊಂಡು. ಆ ಸಕಲ ಶಾಸ್ತ್ರ ಪುರಾಣಗಳ ಸಾರಸಂಗ್ರಹವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ತಿಳಿಗನ್ನಡ ಭಾಷೆಯಲ್ಲಿ ವಚನ ರೂಪದಲ್ಲಿ ಅರುಹಿದರು.

ಯಾವನಿಗೆ ಪರಮಾತ್ಮನನ್ನು ಕಾಣುವ ಆಶೆಯಿದೆ. ಭಕ್ತಿಯಿದೆ, ಯಾವನು ತ್ರಿಕರಣ ಶುದ್ಧನಾಗಿದ್ದಾನೆ. ಅವನು ಹೊಲೆಯನಿರಲಿ, ಚಾಂಡಾಲನಿರಲಿ, ಬ್ರಾಹ್ಮಣನಿರಲಿ, ಸ್ತ್ರೀಯಿರಲಿ, ಪುರುಷನಿರಲಿ, ಜ್ಞಾನಭಿಕ್ಷೆ ಬೇಡಲು ಶಿವದೀಕ್ಷೆ ಪಡೆಯಲು ಅಧಿಕಾರಿ, ಯೋಗ್ಯ. ಬಸವಣ್ಣನವರ ಈ ತತ್ವದಂತೆ ಒಬ್ಬ ಬ್ರಾಹ್ಮಣನೂ ಶಿವದೀಕ್ಷೆ ಪಡೆದ. ಒಬ್ಬ ಹೊಲೆಯನೂ ಶಿವದೀಕ್ಷೆ ಪಡೆದ, ಈರ್ವರೂ ವೀರಶೈವರು. ಈರ್ವರಿಗೂ ಸಮಾಜದಲ್ಲಿ ಒಂದೇ ಸ್ಥಾನ. ಇದೇ ಬಸವ ಮಹಾನುಭಾವಿಯು ಮಾಡಿದ ಮಹಾಕ್ರಾಂತಿ.

ಒಟ್ಟಾರೆ ಹೇಳುವದಾದರೆ ಬಸವಯುಗದ ಮಹಾನುಭಾವರು, ವಚನಕಾರರು ಕ್ರಾಂತಿಯನ್ನುಂಟುಮಾಡಿದರು. ನಮ್ಮವರ ಉದ್ಧಾರ ಮಾಡಿದರು. ತಮ್ಮ ಅನುಭವವನ್ನು ವಚನರೂಪದಲ್ಲಿ ನಮ್ಮೆದುರಿಗಿಟ್ಟರು. ನಾನು ಮೊದಲೇ ಹೇಳಿದ್ದೇನೆ. ಅವರ ವಚನಗಳಲ್ಲಿ ಸಕಲ ಶಾಸ್ತ್ರ ಪುರಾಣಗಳ ಸಾರವಿದೆ ಸಂಗ್ರಹವಿದೆ. ಅವುಗಳನ್ನು ತಿಳಿದುಕೊಳ್ಳಲು ನಾವು ಪಂಡಿತರಾಗಬೇಕಿಲ್ಲ; ವಿದ್ವಾಂಸರಾಗಬೇಕಿಲ್ಲ. ಸುಲಭ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ತಿಳಿಗನ್ನಡ ಸರಳ ಶೈಲಿಯಲ್ಲಿವೆ. ನಮ್ಮ ಮಾರ್ಗವನ್ನು ನಾವು ಅರಿತುಕೊಳ್ಳಬೇಕಾದರೆ, ನಮ್ಮ ಕರ್ತವ್ಯಗಳನ್ನು ನಾವು ತಿಳಿದುಕೊಳ್ಳಲಪೇಕ್ಷಿಸಿದರೆ, ಆ ಮಹಾನುಭಾವಿಗಳ ವಚನಗಳನ್ನು ಮುಂದರಿಸಿಕೊಂಡರೆ ಸಾಕು.

❖❖

ವಚನಕಾರರ ಹೊಸ ಸಂಸ್ಕರಣ

[ಶ್ರೀಮಾನ್ ಟಿ. ಎಸ್. ವೆಂಕಣ್ಣನವರು ಎಂ.ಎ. ಇವರು ಮೈಸೂರಲ್ಲಿ ಪ್ರಕಟವಾಗುವ ಪ್ರಬುದ್ಧ ಕರ್ನಾಟಕ ಪತ್ರಿಕೆಯ ಭಾವ ಸಂವತ್ಸರದ (ಕ್ರಿ. ಶ. ೧೯೩೪) ದೀಪಾವಳಿ ಸಂಚಿಕೆಯಲ್ಲಿ ಶಿವತತ್ವಸಾರ ಎಂಬ ವಿಮರ್ಶಾತ್ಮಕ ಲೇಖನದಲ್ಲಿ ಹೀಗೆ ಬರೆದಿದ್ದಾರೆ]

ವೀರಶೈವ ಗ್ರಂಥಗಳಲ್ಲಿ ಮೊಟ್ಟ ಮೊದಲಿನವಾದ **"ವಚನ"**ಗಳು ವೀರಶೈವಮತವು ನಮ್ಮ ದೇಶದಲ್ಲಿಯೇ ಆವಿರ್ಭಾವವಾಗಿರುವದೆಂಬ ಅನುಮಾನವನ್ನು ದೃಢಪಡಿಸುತ್ತವೆ. ಈ ವಚನಗಳೇ ವೀರಶೈವಸಾಹಿತ್ಯದಲ್ಲಿ ಅಗ್ರಗಣ್ಯವಾದವು. ಇವು ಹುಟ್ಟಿದ್ದೂ ವಿಶೇಷವಾಗಿ ರಚಿತವಾದದ್ದು ಬಸವೇಶ್ವರನ ಮುಂದಾಳುತನದಲ್ಲಿ. ವೀರಶೈವಮತವು ಪ್ರಾಬಲ್ಯಕ್ಕೆ ಬಂದ ೧೨ನೆಯ ಶತಮಾನದಲ್ಲಿ, ೧೨ನೆಯ ಶತಮಾನಕ್ಕೆ ಮೊದಲು ವಚನ ಸಾಹಿತ್ಯವಿದ್ದಂತೆ ತೋರುವುದಿಲ್ಲ. ಅಲ್ಲಿಂದೀಚೆಗೆ ಕೆಲವು ವಚನ ಗ್ರಂಥಗಳು ಹುಟ್ಟಿದ್ದರೂ ಆ ಶತಮಾನದ ವಚನ ಗ್ರಂಥಗಳಷ್ಟು ಓಜಸ್ವಿಗಳಾಗಿಲ್ಲ. ಆ ವಚನ ಗ್ರಂಥಗಳು ಸಾಹಿತ್ಯದ ದೃಷ್ಟಿಯಿಂದ ಗೌರವಾರ್ಹವಾಗಿರುವುದೂ ಅಲ್ಲದೆ ಮತಧರ್ಮದ ದೃಷ್ಟಿಯಿಂದಲೂ ಅತ್ಯಂತ ಮಹತ್ವವುಳ್ಳವಾಗಿವೆ.

ಸಾಹಿತ್ಯದ ದೃಷ್ಟಿಯಿಂದ, ವಚನ ಗ್ರಂಥಗಳು ಕನ್ನಡಸಾಹಿತ್ಯದ ಒಂದು ವೈಶಿಷ್ಟ್ಯವೆಂದು ಹೇಳಬಹುದು. ಏಕೆಂದರೆ, ಈ ರೂಪದ ಸಾಹಿತ್ಯವು ಕನ್ನಡದ ಸಾಕುತಾಯಿಯಾದ ಸಂಸ್ಕೃತದಲ್ಲಾಗಲೀ, ಅಕ್ಕ ತಂಗಿಯರಂತಿರುವ ತಮಿಳು ತೆಲಗುಗಳಲ್ಲಾಗಲಿ ಅಥವಾ ಮತ್ತಾವ ಭಾರತೀಯ ದೇಶ ಭಾಷೆಗಳಲ್ಲಾಗಲಿ ಇದ್ದಂತೆ ತಿಳಿದುಬಂದಿಲ್ಲ. ಆದಕಾರಣ ಇದು ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆದದ್ದೆಂದು ತೋರುತ್ತದೆ. ಈ ವಚನಗಳು ಗದ್ಯ ರೂಪದಲ್ಲಿರುತ್ತವೆ; ಆದರೆ ಇವುಗಳಲ್ಲಿ ಪದ್ಯದ ಧಾಟಿಯಿರುತ್ತದೆ. ಇವುಗಳನ್ನು ಹಾಡುವ ಸಂಪ್ರದಾಯವುಂಟೆಂದೂ ಹೇಳುತ್ತಾರೆ. ಒಂದೊಂದು ವಚನದಲ್ಲಿ ಒಂದೊಂದು ಭಾವವಿರುತ್ತದೆ. ಈ ವಚನಗಳನ್ನು ಗದ್ಯ ಭಾವಗೀತೆಗಳೆಂದು ಕರೆಯಬಹುದು. ಇವುಗಳು ಮತಧರ್ಮವನ್ನು ಬೋಧಿಸುವುದು ಮಾತ್ರವೇ ಅಲ್ಲ. ಅನೇಕ ವೇಳೆ ವಚನಕಾರರು ತಮ್ಮ ಮನಸ್ಸಿನಲ್ಲಿ ನಡೆಯುವ ಒಳತೋಟಿಯನ್ನೂ ಸ್ವಂತ ಸುಖ ದುಃಖಗಳನ್ನೂ ತಮ್ಮ ಸುತ್ತುಮುತ್ತಿನ ಆವರಣದೊಡನೆ ತಾವು ಮಾಡುವ ಹೋರಾಟವನ್ನೂ ವಚನಗಳಲ್ಲಿ ವ್ಯಕ್ತಪಡಿಸುತ್ತಾರೆ. ಇವರು ವ್ಯಕ್ತಪಡಿಸುವ ಭಾವಗಳು ಸ್ವಾನುಭವಜನ್ಯವಾದವುಗಳಾದದ್ದರಿಂದ ಅವುಗಳಲ್ಲಿ ಅಧಿಕಾರವಾಣಿ ಇರುತ್ತದೆ. ಉತ್ತಮ ಕಾವ್ಯದಲ್ಲಿ ಕವಿಯ ವ್ಯಕ್ತಿತ್ವ ಪರಿಚಯವಾಗುವಂತೆ ಕೆಲವು ವಚನ ಗ್ರಂಥಗಳಲ್ಲಿ

ಉದಾಹರಣೆಗೆ ಬಸವಣ್ಣನವರ ಷಟ್ಸ್ಥಲ ವಚನದಲ್ಲಿ ವಚನಕಾರರ ಯುಕ್ತಿ ಪರಿಚಯವು ಚೆನ್ನಾಗಿ ದೊರೆಯುತ್ತದೆ. ಹೀಗೆ ವಚನಗಳು ನವೀನವಾದ ತಮ್ಮ ಹೊರ ಆಕಾರದಿಂದಲೂ ಭಾವ ಪುಷ್ಟಿಯಿಂದ ಹೊರಹೊಮ್ಮುವ ಒಳತಿರುಳಿನಿಂದಲೂ ಕನ್ನಡಸಾಹಿತ್ಯದಲ್ಲಿ ಉತ್ತಮ ಸ್ಥಾನವನ್ನು ಪಡೆದು ಕನ್ನಡ ಸಾಹಿತ್ಯ ವಿಚಾರಕರ ಗಮನವನ್ನು ತಮ್ಮ ಕಡೆಗೆ ಆಕರ್ಷಿಸಿರುತ್ತವೆ. ೧೨ನೆಯ ಶತಮಾನದ ವಚನ ಗ್ರಂಥಗಳಲ್ಲಿ ವಚನಕಾರರಿಗೆ ತಮ್ಮ ಕಾಲದ ಸಮಾಜ ಪರಿಸ್ಥಿತಿಯಲ್ಲಿದ್ದ ಅತೃಪ್ತಿ, ಅದರ ಕುಂದು ಕೊರತೆಗಳನ್ನು ಬಯಲಿಗೆಳೆದು ಅವನ್ನು ನಿವಾರಿಸಬೇಕೆಂಬುದರಲ್ಲಿದ್ದ ವೀರಾವೇಶ, ಹೊಸ ಭಾವಗಳನ್ನು ಜನರ ಮನಸ್ಸಿನಲ್ಲಿ ತುಂಬಬೇಕೆಂಬ ಸಂಕಲ್ಪದಲ್ಲಿದ್ದ ಧೀರೋತ್ಸಾಹ, ಇವು ಒಡೆದು ಮೂಡಿರುತ್ತವೆ. ಆ ವಚನಗಳ ಧೋರಣೆಯನ್ನು ನೋಡಿದರೆ ವಚನಕಾರರು ಯಾವುದೋ ಒಂದು ಹೊಸ ಸಂಸ್ಕರಣ ಕಾರ್ಯದಲ್ಲಿ ಉದ್ಯುಕ್ತರಾಗಿದ್ದರೆಂದೂ, ಹಿಂದೆ ಇಲ್ಲದೆ ಇದ್ದ ಮತ್ತು ಬಹು ಕಾಲದ ಸಂಪ್ರದಾಯಕ್ಕೆ ವಿರುದ್ಧವಾದ ಅನೇಕ ಭಾವಗಳನ್ನು ಜನರಲ್ಲಿ ಪ್ರಚಾರಕ್ಕೆ ತರುವ ಸಾಹಸ ಕಾರ್ಯಕ್ಕೆ ಕೈ ಹಾಕಿದ್ದರೆಂದೂ ಬೋಧೆಯಾಗುತ್ತದೆ.

ಮತಧರ್ಮದ ದೃಷ್ಟಿಯಿಂದ ವಚನಗಳಿಗೆ ದೊರೆತಿರುವ ಪ್ರಾಶಸ್ತ್ಯವೂ ಇದೇ ಭಾವನೆಗಳನ್ನುಂಟುಮಾಡುತ್ತದೆ. ಅವು ಶಾಸ್ತ್ರಗಳೆಂದು ಪರಿಗಣಿತವಾಗಿವೆ. ವಚನಗಳಿಗೆ ವೀರಶೈವರಲ್ಲಿ ದೊರೆತಿರುವ ಗೌರವವೂ ಪೂಜ್ಯತೆಯೂ ಕನ್ನಡದಲ್ಲಿ ರಚಿತವಾಗಿರುವ ಜೈನ, ಬ್ರಾಹ್ಮಣ ಗ್ರಂಥಗಳು ಯಾವುದಕ್ಕೂ ಆಯಾ ಮತಿಯರಿಂದ ದೊರೆತಿಲ್ಲ. ಹನ್ನೆರಡನೆಯ ಶತಮಾನದಿಂದೀಚೆಗೆ ವಚನಗಳ ಸಂಕಲನಗಳೂ ಅವುಗಳ ಮೇಲಿನ ವ್ಯಾಖ್ಯಾನಗಳೂ ಅನೇಕವಾಗಿ ಹುಟ್ಟಿರುವುದೂ, ಅವುಗಳನ್ನು ರಚಿಸಿದ ಗ್ರಂಥಕರ್ತರು ಕಾರಣ (ಅವತಾರ) ಪುರುಷರೆಂದು ಪೂಜನೀಯರಾಗಿರುವುದೂ ಅವರ ಜೀವನವನ್ನು ಕುರಿತು ಅನೇಕ ವೀರಶೈವಪುರಾಣಗಳು ರಚಿತವಾಗಿರುವದೂ ವೀರಶೈವ ಕವಿಗಳು ತಮ್ಮ ಗ್ರಂಥಗಳ ಆದಿಯಲ್ಲಿ ಅವರನ್ನು ಪುರಾಣ ಪುರುಷರೆಂದು ಗೌರವ ಪುರಸ್ಕಾರವಾಗಿ ಸ್ಮರಿಸುವುದೂ ಆ ಗ್ರಂಥಗಳಿಗೆ ದೊರೆತಿರುವ ಪೂಜ್ಯತೆಯನ್ನು ತೋರಿಸುತ್ತದೆ. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ, ಅಲ್ಲಮ ಮೊದಲಾದ ವಚನಕಾರರಿಗೆ ನೂತನ ಮತ ಪ್ರವರ್ತಕರಿಗೆ ದೊರೆಯಬಹುದಾದ ಪೂಜ್ಯತೆ ದೊರೆತಿದೆ. ಇದನ್ನೆಲ್ಲ ನೋಡಿದರೆ ೧೨ನೆಯ ಶತಮಾನದಲ್ಲಿ ಶೈವಮತವು ಒಂದು ಹೊಸ ಹುಟ್ಟನ್ನು ಪಡೆಯಿತೆಂದು ತೋರಿಬರುವುದಲ್ಲವೆ?

ಆದರೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಬಸವಣ್ಣನೇ ಮೊದಲಾದ ಶಿವಶರಣರು ಬೋಧಿಸಿದ ಮತ ಧರ್ಮವು ಅನಾದಿಯಾದದ್ದು ಅಥವಾ ಅತ್ಯಂತ ಪ್ರಾಚೀನವಾದದ್ದು; ಅದರಲ್ಲಿ ಹೊಸದೇನೂ ಇರಲಿಲ್ಲ; ಹಿಂದೆ ಇದ್ದು ಖಿಲವಾಗಿದ್ದ ವೀರಶೈವಧರ್ಮವನ್ನೇ ಅವರು ಎತ್ತಿ ಹಿಡಿದರು ಎಂಬುದು ಒಂದು ಮತ. ಅವರು ತಮ್ಮ ಕಾಲದಲ್ಲಿ ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿದ್ದ ಶೈವಧರ್ಮದಲ್ಲಿ ಒಂದು ಪ್ರಬಲವಾದ ಸಂಸ್ಕರಣವನ್ನು ಮಾಡಿ ಅದಕ್ಕೆ ಒಂದು ಹೊಸ ಚೈತನ್ಯವನ್ನೂ ಒಂದು ಹೊಸ ರೂಪವನ್ನೂ ಕೊಟ್ಟರು. ಪ್ರಾಚೀನವಾದ ಶೈವಧರ್ಮವು ವಚನಕಾರರ ಕೈಯಲ್ಲಿ ಒಂದು ತರದಲ್ಲಿ ಹೊಸದೇ ಆಯಿತು ಎಂಬುದು ಇನ್ನೊಂದು ಮತ. ಈ ವಿಷಯದಲ್ಲಿ ವಾದವಿವಾದಗಳು ಇನ್ನೂ ನಡೆಯುತ್ತಲೇ ಇವೆ. ಇತಿಹಾಸದ ದೃಷ್ಟಿಯಿಂದ ನಿಜಾಂಶವೇನೆಂದು ಇನ್ನೂ ನಿಶ್ಚಿತವಾಗಿಲ್ಲ. ಈ ಸಮಸ್ಯೆಯನ್ನು ಬಿಡಿಸಲು ಸಾಧನಗಳು ನಾಲ್ಕಾರು ಕಡೆಗಳಿಂದ ಇನ್ನೂ ಬರಬೇಕಾಗಿದೆ.

ಇಂಥ ಸಾಧನಗಳಲ್ಲಿ ಶಿವತತ್ವಸಾರವೂ ಒಂದೆಂದು ನಾವು ಭಾವಿಸುತ್ತೇವೆ. ಈ ಗ್ರಂಥವು ತೆಲಗು ಭಾಷೆಯಲ್ಲಿರುವುದರಿಂದ ಅದರ ಪರಿಚಯವನ್ನು ಹೊಂದಲು ತೆಲಗು ತಿಳಿಯದ ಕನ್ನಡಿಗರಿಗೆ ಅವಕಾಶವಿಲ್ಲ. ಆದಕಾರಣ ಆ ಗ್ರಂಥದಿಂದ ಈ ಸಮಸ್ಯೆಯ ಮೇಲೆ ಬೆಳಕು ಬೀರುವ ಕೆಲವು ಭಾಗಗಳನ್ನು ಆರಿಸಿ ಅವಶ್ಯಕವಾದ ಸಣ್ಣ ಟಿಪ್ಪಣಿಗಳೊಡನೆ ಇಲ್ಲಿ ಕೊಟ್ಟಿದೆ.

❖❖

ಶ್ರೀ ಪಂಡಿತಾರಾಧ್ಯರು ಮತ್ತು ವಚನಕಾರರು

[ವೀರಶೈವರ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ **ಪಂಡಿತಾಚಾರ್ಯ**ರಿಗೂ ಮತ್ತು ವಚನಕಾರರಿಗೂ ಇದ್ದ ಮತ ಸಂಬಂಧವಾದ ಭಿನ್ನಾಭಿಪ್ರಾಯಗಳನ್ನು ಕುರಿತು ಶ್ರೀಮಾನ್ ವೆಂಕಣ್ಣಯ್ಯನವರು ಅದೇ ಲೇಖನದಲ್ಲಿ ಹೀಗೆ ಬರೆದಿದ್ದಾರೆ. ಶ್ರೀಪಂಡಿತಾರಾಧ್ಯರು ತಮ್ಮ ಶಿವತತ್ವಸಾರ ಎಂಬ ತೆಲಗು ಗ್ರಂಥದಲ್ಲಿ ಬರೆದುದನ್ನು ಸಣ್ಣಕ್ಷರಗಳಲ್ಲಿ ಕೊಟ್ಟಿದೆ]

"ವೇದಗಳಿಗೂ ಪಂಚಾಕ್ಷರಿಗೂ ಭಸಿತಕ್ಕೂ ಮಾಹೇಶ್ವರರಿಗೂ ಜಯವಾಗಲಿ, ಶಿವಮಾರ್ಗಕ್ಕೂ ಶಿವ ಸಂಹಿತೆಗಳಿಗೂ ಪ್ರಮಥಗಣಂಗಳಿಗೂ ವೇದಾದಿ ಧರ್ಮಚರಿತರಿಗೂ ಜಯವಾಗಲಿ, ಧಾರ್ಮಿಕ ನೃಪರಿಗೂ ಗೋ ಬ್ರಾಹ್ಮಣರಿಗೂ ಶಿವನಿಂದಾ ವಿರಹಿತವಾದ ಭುವನತ್ರಯದ ಜನರೆಲ್ಲರಿಗೂ ಮಂಗಳವಾಗಲಿ."

ವಚನಕಾರರ ಮತದ ಪ್ರಕಾರ ವೀರಶೈವ ದೀಕ್ಷೆಯನ್ನು ಪಡೆದವರು ವರ್ಣಾಶ್ರಮ ಧರ್ಮಗಳಿಗೆ ಅತೀತರಾದವರು. ಆದಕಾರಣ ಅವರು ಇಲ್ಲಿ ಕೊಟ್ಟಿರುವಂತೆ ವೈದಿಕ ಸಂಪ್ರದಾಯಾನುಸಾರಿಗಳಿಗೂ ಬ್ರಾಹ್ಮಣರಿಗೂ ಪ್ರಾಶಸ್ತ್ಯವನ್ನು ಕೊಡುವುದಿಲ್ಲ. ಇದರಿಂದ ಪಂಡಿತಾರಾಧ್ಯರು ಬೋಧಿಸುವ ಶಿವಧರ್ಮವು ವಚನಕಾರರು ಬೋಧಿಸುವ ಶಿವಧರ್ಮದಿಂದ ಭಿನ್ನವಾದದ್ದೆಂದು ಗೊತ್ತಾಗುತ್ತದೆ. ತೆಲಗುದೇಶದಲ್ಲಿರುವ ಲಿಂಗಧಾರಿಗಳಾದ ಆರಾಧ್ಯ ಬ್ರಾಹ್ಮಣರು ತಾವು ಪಂಡಿತಾರಾಧ್ಯ ಸಂಪ್ರದಾಯದವರೆಂದು ಹೇಳಿಕೊಳ್ಳುತ್ತಾರೆ.

"ಶಿಖಾ ಗಾಯತ್ರೀ ಯಜ್ಞೋಪವೀತಗಳನ್ನು ಬಿಟ್ಟ ನಾಸ್ತಿಕರೂ ಅಜ್ಞರೂ ಅದ್ವೈತವನ್ನು ಸ್ವೀಕರಿಸುವರೇ ಹೊರತು ಪ್ರಾಜ್ಞರೂ ವೇದಜ್ಞರು ಲೋಕಜ್ಞರೂ ಸ್ವೀಕರಿಸುತ್ತಾರೆಯೋ?"

ಇಲ್ಲಿ ಅದ್ವೈತಗಳನ್ನು ಬಯ್ಯುವಾಗ "ಗತಶಿಖಾಗಾಯತ್ರೀ ಯಜ್ಞೋಪವೀತ ನಾಸ್ತಿಕುಲು" ಎಂದು ಹೇಳುವುದರಿಂದ ಶಿಖಾಯಜ್ಞೋಪವೀತಗಳು ಆಸ್ತಿಕರ ಒಂದು ಕುರುಹು ಎಂಬ ಭಾವನೆ ಬರುತ್ತದೆ. ಬಸವಣ್ಣನೇ ಮೊದಲಾದ ವಚನಕಾರರು ಈ ಬ್ರಾಹ್ಮಣ್ಯದ ಕುರುಹುಗಳನ್ನು ತ್ಯಜಿಸಿದ್ದರೆಂಬುದು ಗಮನಿಸಬೇಕಾದ ಸಂಗತಿ.

ವಚನಕಾರರ ಮತದ ಪ್ರಕಾರ ಶಿವದೀಕ್ಷೆಯನ್ನು ಪಡೆದವರಿಗೆ ಪೂರ್ವಾಶ್ರಮವು ತಪ್ಪಿ ಒಂದು ಹೊಸ ಜನ್ಮ ಬರುತ್ತದೆ. ಈ ಹೊಸ ಹುಟ್ಟು ಬಂದಮೇಲೆ ಅವರು ಹಿಂದಿನ ಆಚಾರ ವ್ಯವಹಾರಗಳನ್ನು

ಸಂಪೂರ್ಣವಾಗಿ ಬಿಡಬೇಕು. ಉದಾಹರಣೆಗೆ: ಒಬ್ಬ ಶ್ರೋತ್ರೀಯ ಬ್ರಾಹ್ಮಣನೂ ಒಬ್ಬ ಹೊಲೆಯನೂ ಶಿವದೀಕ್ಷೆಯನ್ನು ಪಡೆದರೆಂದು ಭಾವಿಸೋಣ. ದೀಕ್ಷೆಗೆ ಮೊದಲು ಕುಲದಲ್ಲಿ ಬ್ರಾಹ್ಮಣನು ಶ್ರೇಷ್ಠ, ಹೊಲೆಯನು ಕನಿಷ್ಠ ಅವನ ಕುಲಾಚಾರವೇ ಬೇರೆ, ಇವನ ಕುಲಾಚಾರವೇ ಬೇರೆ. ದೀಕ್ಷೆಯಾದ ಮೇಲೆ ಇಬ್ಬರಿಗೂ ಹಿಂದಿನ ಜನ್ಮ ಹೋಗಿ ಹೊಸ ಜನ್ಮ ಬರುತ್ತದೆ. ಆಗ ಬ್ರಾಹ್ಮಣನಾಗಿದ್ದವನು ಬ್ರಾಹ್ಮಣನೂ ಅಲ್ಲ, ಹೊಲೆಯನಾಗಿದ್ದವನು ಹೊಲೆಯನೂ ಅಲ್ಲ; ಇಬ್ಬರೂ ಶಿವಕುಲದವರಾಗುತ್ತಾರೆ. ಇವರಲ್ಲಿ ಮೇಲು ಕೀಳೆಂಬ ಭೇದವಿರಕೂಡದು. ಇದು ಕೇವಲ ತತ್ವ ದೃಷ್ಟಿಯಿಂದ ಹೇಳುವ ಮಾತಲ್ಲ. ಸಾಮಾಜಿಕ ದೃಷ್ಟಿಯಿಂದಲೂ ಇದು ನಿಜವಾಗಬೇಕು. ಅವರಲ್ಲಿ ಸಹಭೋಜನ, ಹೆಣ್ಣು ಕೊಟ್ಟು ತರುವ ಬಾಂಧವ್ಯ ಮುಂತಾದವು ಆಗಬಹುದು, ಆಗಬೇಕು, ಎಂಬುದು ವಚನಕಾರರ ಮತವೆಂಬುದು ವಚನ ಗ್ರಂಥಗಳಿಂದ ಗೊತ್ತಾಗುತ್ತದೆ. ಈ ಮತಕ್ಕೂ **ಶಿವತತ್ವಸಾರ**ದ ಮತಕ್ಕೂ ವ್ಯತ್ಯಾಸವಿದೆ. ಶಿವತತ್ವಸಾರದಲ್ಲಿ ಉಕ್ತವಾದ ಶೈವಮತದ ತಳಹದಿ ವೇದೋಕ್ತ ಮಾರ್ಗ, ಶಿವನಲ್ಲಿ ಗಾಢವಾದ ಭಕ್ತಿ ಇರುವವರಲ್ಲಿ ಮೇಲು ಜಾತಿ, ಕೀಳು ಜಾತಿ ಎಂಬ ಭಾವವನ್ನಿಡಬಾರದೆಂಬ ಮಾತಿರುವುದಾದರೂ ಇದು ತಾತ್ವಿಕ ದೃಷ್ಟಿಯ ಭಾವನೆಯ ಮಾತೇ ಹೊರತು ಸಾಮಾಜಿಕ ವ್ಯವಸ್ಥೆಗೆ ಸಂಬಂಧಪಟ್ಟ ಭಾವವಲ್ಲವೆಂದು ತೋರುತ್ತದೆ.

ಮಲ್ಲಿಕಾರ್ಜುನ ಪಂಡಿತರ ವಿಚಾರವಾಗಿ ಜನಜನಿತವಾಗಿರುವ ಒಂದು ಕಥೆ ಇದನ್ನು ಸ್ಪಷ್ಟಪಡಿಸುತ್ತದೆ. ಒಮ್ಮೆ ಬಸವೇಶ್ವರರು ಪಂಡಿತಾರಾಧ್ಯರಿಗೆ ಜನಿವಾರವನ್ನು ತೆಗೆದುಹಾಕಿ ಜಾತಿಯನ್ನು ಬಿಟ್ಟು ತನ್ನೊಡನೆ ಬಂದು ಸೇರಿಕೊಳ್ಳುವಂತೆ ಹೇಳಿ ಕಳುಹಿಸಿರನಂತೆ. ಅದಕ್ಕೆ ಪ್ರತ್ಯುತ್ತರವಾಗಿ ಆತನು 'ಭಕ್ತಿಮೀರಿ ವಲವು ಬ್ರಾಹ್ಮಂಬುತೋ ಬೊತ್ತು ಬಾಯಲೇನು ನೇನು ಬಸವಲಿಂಗ' ಎಂದು ಪ್ರತ್ಯುತ್ತರವಿತ್ತನಂತೆ, ವಚನಕಾರರ ಮತದವನಾವನೂ **ಶಿವತತ್ವಸಾರ**ದಲ್ಲಿರುವಂತೆ ವೇದಾದಿಧರ್ಮನಿರತರಿಗೆ ಜಯವಾಗಲಿ, ಗೋ ಬ್ರಾಹ್ಮಣರಿಗೆ ಶುಭವಾಗಲಿ ಎಂದು ಕಾವ್ಯಾರಂಭದಲ್ಲಿ ಹರಸಿ ಬರೆಯಲಾರನೆಂದು ತೋರುತ್ತದೆ. ಏಕೆಂದರೆ, ವಚನಕಾರರ ಮತದಂತೆ ವೇದ ವಿಹಿತವಾದ ವರ್ಣಾಶ್ರಮಾಚಾರಗಳು ಷಟ್ಸ್ಥಲ ಸಿದ್ಧಾಂತದ ಆಚರಣೆಗಳಿಗೆ ಕೀಳ್ತರದವು. ಅಷ್ಟೇ ಅಲ್ಲ. ಶಿವದೀಕ್ಷೆಯನ್ನು ಪಡೆದವನು ಅನುಷ್ಠಿಸಬಾರದವು. ಇನ್ನೊಂದು ವಿಚಾರ. ಗುರು ತನಗೆ ಅನುಗ್ರಹಿಸಿದ ಲಿಂಗವನ್ನು ಅಂಗದ ಮೇಲೆ ಧರಿಸಿದ ಲಿಂಗಾಂಗಿಯಾದ ಶೈವನು ಬೇರೆ ಲಿಂಗವನ್ನು ಪೂಜಿಸಕೂಡದು. ಆದಕಾರಣ ದೇವಸ್ಥಾನಗಳ ಸ್ಥಾವರಲಿಂಗಗಳನ್ನು ಪೂಜಿಸುವುದನ್ನೂ ಶ್ರೀಶೈಲಾದಿ ಶೈವತೀರ್ಥ ಕ್ಷೇತ್ರಗಳಿಗೆ ಹೋಗುವುದನ್ನೂ ವಚನಕಾರರು ನಿಷೇಧಿಸುತ್ತಾರೆ. ಶಿವತತ್ವಸಾರದ ಬೋಧೆ ಇದಕ್ಕೆ ವಿರೋಧವಾಗಿದೆ. ಸ್ಥಾವರಲಿಂಗ ಪೂಜೆ ಅವಶ್ಯಕವೆಂದು ಹೇಳಿದೆ. ಈ ವಿಷಯಗಳಲ್ಲಿ ಹರಿಹರ ರಾಘವಾಂಕರ ಮತವು **ಶಿವತತ್ವಸಾರ**ದ ಮತವನ್ನು ಬಹುಮಟ್ಟಿಗೆ ಹೋಲುತ್ತದೆ.

ಇವೆಲ್ಲವನ್ನೂ ನೋಡಿದರೆ ವಚನಕಾರರ ಕಾಲದಲ್ಲಿ ಎಂದರೆ ಸುಮಾರು ೧೨ನೆಯ ಶತಮಾನದಲ್ಲಿ ಶೈವಮತದ ಒಂದು ಒಳಪಂಗಡವು ಹುಟ್ಟಿ ತನ್ನ ಅಂತಃಸತ್ವದಿಂದಲೂ ವಚನಕಾರರ ದೃಢವಿಶ್ವಾಸಪೂರ್ವಕವಾದ ಪ್ರಚಾರದಿಂದಲೂ ಬಹು ಬೇಗ ಕನ್ನಡ ನಾಡಿನಲ್ಲಿ ಹಬ್ಬಿ ಶೈವಮತದ ಬಹುಮಂದಿಯನ್ನು ತನ್ನ ಕಡೆಗೆ ಆಕರ್ಷಿಸಿರಬಹುದೆ? ಈ ಪಂಗಡದವರ ಒಂದು ವಿಶೇಷವೇನೆಂದರೆ– ವರ್ಣಾಶ್ರಮಾಚಾರಗಳ ಅಡ್ಡಿಯನ್ನು ಬದಿಗೊತ್ತಿ ಶಿವಾಚಾರದವರಲ್ಲೆಲ್ಲ ಸಾಮಾಜಿಕ ಸಮತಾಭಾವವನ್ನು

ಹರಡಿ ಶೈವಸಮಾಜಕ್ಕೆ ಒಂದು ಹೊಸ ಚೈತನ್ಯವನ್ನು ಕೊಡುವದು ಎಂದು ತೋರುತ್ತದೆ. ಷಟ್ಸ್ಥಲ ಸಿದ್ಧಾಂತದ ಅಡಿಗಲ್ಲಿನ ಮೇಲೆ ಕಟ್ಟಿದ ಈ ಹೊಸ ಹುಟ್ಟಿನ ಶೈವವು ತನ್ನ ಅನುಯಾಯಿಗಳನ್ನು ಇತರ ಶೈವದಿಂದ ಬೇರೆಯಾಗಿ ತೋರುವುದಕ್ಕಾಗಿ ಲಿಂಗಧಾರಣವನ್ನು ಒಂದು ಮುಖ್ಯವಾದ ಕುರುಹಾಗಿ ಬಳಕ್ಕೆಗೆ ತಂದಿರಬಹುದೆ? ಲಿಂಗಧಾರಣ ಷಟ್‌ಸ್ಥಲ ಸಿದ್ಧಾಂತಗಳಿಗೆ ಬಸವಣ್ಣನೇ ಮೊದಲಾದ ವಚನಕಾರರು ಆದ್ಯಪ್ರವರ್ತಕರಲ್ಲದಿದ್ದರೂ, ಅವು ಅವರ ಕಾಲಕ್ಕೆ ಹಿಂದೆಯೇ ಅಲ್ಲಲ್ಲಿ ಇದ್ದಿರಬಹುದಾದರೂ, ವಚನಕಾರರು ಅವುಗಳನ್ನು ರೂಢಿಸಿ, ವ್ಯವಸ್ಥೆಗೊಳಿಸಿ, ಸಾರ್ವಜನಿಕವಾಗಿ ಪ್ರಸರಿಸುವ ಕಾರ್ಯದಲ್ಲಿ ಉದ್ಯುಕ್ತರಾಗಿರಬೇಕೆಂದು ಏಕೆ ನಂಬಬಾರದು?

❖❖

ಬಸವಣ್ಣನವರ ಸಮಾಜೋದ್ಧಾರ

[ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿಗಳು ಬಿ. ಎ. ಬೆಂಗಳೂರು ಇವರು ಭಕ್ತಿ ಭಾಂಡಾರಿ ಬಸವಣ್ಣನವರು ಎಂಬ ಗ್ರಂಥದ ಪುಟ-೪೩ ರಿಂದ ೪೮ ರ ವರೆಗೆ ಹೀಗೆ ಬರೆದಿದ್ದಾರೆ]

ಬಸವಣ್ಣನವರಲ್ಲದೆ ನಮ್ಮ ಈ ಭರತ ಭೂಮಿಯಲ್ಲಿ ಎಷ್ಟೋ ಜನ ಮತೋದ್ಧಾರಕರೂ ನೂತನ ಮತಸ್ಥಾಪಕರೂ ಅವತಾರ ಮಾಡಿರುತ್ತಾರೆ. ಆದರೆ ಬಸವಣ್ಣನವರು ಕೈಕೊಂಡ ಕಾರ್ಯವನ್ನು, ಬುದ್ಧದೇವನ ಹೊರತು ಮತ್ತಾವ ಅವತಾರ ಪುರುಷರೂ ಮಾಡಲಿಲ್ಲ. ರಾಮಾನುಜರು ಹೀನ ಮತದವರಿಗೆ ವೈಷ್ಣವ ದೀಕ್ಷೆಯನ್ನು ಕೊಟ್ಟರೂ ಅವರಿಗೆ ಸಮಾಜದಲ್ಲಿ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಡಲಿಲ್ಲ. ಯಾವ ಹೀನ ಜಾತಿಯವನಾದರೂ ಅವನನ್ನು ಕೈ ಹಿಡಿದು ಸಮಾಜದಲ್ಲಿ ಅವನಿಗೊಂದು ಸ್ಥಾನವನ್ನು, ಸಮಾಜದಲ್ಲಿ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಡಲಿಲ್ಲ. ಬಸವಣ್ಣನವರು ಜಾತಿ ಭೇದಗಳನ್ನು ಗಣಿಸದೆ ಲಿಂಗವಂತರೆಲ್ಲ ಕುಲಜರು ಎಂದು ಭಾವಿಸಿದರು. **'ಸರ್ವಂ ಶಿವಮಯಂ ಜಗತ್'** ಪರಮಾತ್ಮನು ಪ್ರತಿಯೊಬ್ಬನ ಅಂತರಂಗದಲ್ಲಿಯೂ ಇದ್ದಾನೆ. ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಒಂದೇ, ಮುಕ್ತಿಮಾರ್ಗವು ಎಲ್ಲರಿಗೂ ಸುಗಮವೆಂದು ಮುಂತಾಗಿ ಹೇಳುವ ಬಾಯಲ್ಲಿಯೆ ವರ್ಣ ವ್ಯತ್ಯಾಸಗಳನ್ನೂ ಅಸ್ಪೃಶ್ಯತೆಯನ್ನೂ ಪ್ರತಿಪಾದಿಸುವುದು ಪರಸ್ಪರ ವಿರೋಧವಲ್ಲವೇ? ಸಮಾಜ ನಿಯಮಗಳನ್ನು ಮೀರುವುದು ಹೇಗೆಂದು ಅವುಗಳನ್ನು ಅಂಧ ಶ್ರದ್ಧೆಯಿಂದ ಅನುಸರಿಸುತ್ತ ಅತ್ಯಾಚಾರ ಮಾಡುವುದು ಯಾವ ಧರ್ಮ? ದೇವರಲ್ಲಿ ಭಕ್ತಿಯುಕ್ತನಾಗಿ ಸದಾಚಾರ ಸದ್ವರ್ತನೆಗಳಿಂದ ಜೀವಿಸುತ್ತಿರುವ ಮಾನವನಿಗೆ ಜಾತಿಯೆಂಬ ಬಂಧನವೇನು? ಯಾವ ಜೀವನು ಯಾವ ಜಾತಿ? ಬ್ರಾಹ್ಮಣರ ಭಗವಂತನು ಒಬ್ಬನು, ಶ್ವಪಚರ ಭಗವಂತನೊಬ್ಬನು ಬೇರೆ ಬೇರೆ ಉಂಟೇ? ಭಗವಂತನು ಒಬ್ಬನೇ ಎಂದು ಹೇಳುತ್ತ ಹೇಳುತ್ತ ಇಲ್ಲದ ಭೇದಗಳನ್ನು ಏಕೆ ಮಾಡುವಿರಿ? ಭಗವಂತನು ಅಂತಹ ಭೇದವನ್ನು ಮಾರ್ಗದರ್ಶಕನಾಗಿರುವಾಗ ಹಿಂದೆಗೆಯಲೇಕೆ? ನೀವು ನಿಜವಾಗಿಯೂ ಜ್ಞಾನಿಗಳಾದರೆ ಭಗವಂತನ ಸಾಕ್ಷಾತ್ಕಾರವನ್ನು ಎಲ್ಲರಲ್ಲಿಯೂ ಮಾಡಿ-ಎಂಬ ಪಂಥವನ್ನು ಬಸವಣ್ಣನವರು ಹಿಡಿದರು.

ನಾನಾವೃತ್ತಿಗಳು ನಾನಾ ಜಾತಿಗಳೆಂದು ಗಣನೀಯವಾಗಿದ್ದಾಗ, ನಾನಾ ಜಾತಿಗಳಿಂದಲೂ ಜನರು ವೀರಶೈವದೊಳಕ್ಕೆ ಬಂದು ಸೇರಿಕೊಂಡಾಗ, ಲಿಂಗಪೂಜಾ ನಿರತರಾದವರೆಲ್ಲ ಒಂದೇ

ಜಾತಿ, ಸಹಭೋಜನವೂ ಕೊಳಕೊಡೆಯಿಂದ ಬಾಂಧವ್ಯವೂ ಬೆಳೆಯಬಹುದು ಎಂದು ಐಕ್ಯಮತಕ್ಕೆ ಪ್ರೋತ್ಸಾಹವಿತ್ತರು. ಒಂದೇ ಜಾತಿಯಲ್ಲಿ ಒಂದೇ ಮತದಲ್ಲಿ ಒಳಪಂಡಗಳು ಸಾವಿರಾರು ಸೃಷ್ಟಿಯಾಗಿ ಒಂದೊಂದು ಪಂಗಡವೂ ಒಂದೊಂದು ದಿಕ್ಕಿನಲ್ಲಿ ಕಣ್ಣು ಮುಚ್ಚಿಕೊಂಡು ಬಹುಮುಖವಾಗಿ ಹೊರಡುತ್ತಿರುವುದನ್ನು ಬಸವಣ್ಣನವರು ನೋಡಿ ಇವುಗಳೆಲ್ಲವೂ ಏಕಕೇಂದ್ರಾಭಿಮುಖವಾಗಿ ಗಮಿಸುವಂತೆ ಮಾಡಿದರು. ಒಂದು ಜಾತಿ ಒಂದು ಮತ ಎಂದು ಸೇರಿಕೊಂಡ ಮೇಲೆ ಸಮಾನವಾದ ಹಕ್ಕು ಬಾಧ್ಯತೆಗಳು ಎಲ್ಲರಿಗೂ ಇವೆ ಎಂದು ತಿಳಿಯಹೇಳಿದರು. ಈ ಸಮಾನವಾದ ಹಕ್ಕು ಬಾಧ್ಯತೆಗಳು ಐಕ್ಯಮತ್ಯಕ್ಕೆ ಒರೆಗಲ್ಲಾದ ಸಹಭೋಜನ ಕೊಳಕೊಡೆಯಿಲ್ಲದೆ ಮತ್ತೆಲ್ಲಿ ವ್ಯಕ್ತವಾಗಬೇಕು? ಆದರೆ ನಮ್ಮಲ್ಲಿನ ಸಮಾಜ ವ್ಯವಸ್ಥೆಯು, ಶಾಸ್ತ್ರಗಳು, ಟೀಕುಗಳು, ಕರ್ಮಗಳು ಎಂದು ಮುಂತಾದ ನೂರು ಸುತ್ತಿನ ಕೋಟೆಯನ್ನು ಬಲವಾಗಿ ಕಟ್ಟಿಕೊಂಡು ಮಧ್ಯೆ ಕುಳಿತುಬಿಟ್ಟಿದೆ. ಲಿಂಗಧಾರಿಗಳಾದ ಮಾತ್ರಕ್ಕೆ ಪೂರ್ವಾಚಾರದಿಂದ ಸಂಕುಚಿತವಾಗಿರುವ ಮನಸ್ಸು ಒಮ್ಮೆಗೇ ಧಾರಾಳವಾಗಿ ಸಮಾಜದ ಬಂಧನಗಳನ್ನು ನಿರಾಕರಿಸುವುದೇ? ಅದು ಬಸವಣ್ಣನವರಂಥ ಮಹಾತ್ಮರಿಗೆ ಸುಲಭ ಸಾಧ್ಯವಾದರೂ ಜನಸಾಮಾನ್ಯಕ್ಕೆ ಪ್ರಯಾಸವೆಂದೇ ಹೇಳಬೇಕು.

ಶರಣಜನರೂ ಭಕ್ತರೂ ಜಾತಿ ಬಂಧನಗಳಿಂದ ಮುಕ್ತರೆಂಬುದನ್ನು ಸಾಮಾನ್ಯವಾಗಿ ಗ್ರಹಿಸಲಾಗುವುದಿಲ್ಲ. ದಿವ್ಯ ಕ್ಷೇತ್ರಗಳಲ್ಲಿ ಭಗವಂತನು ಬುದ್ಧಿಗಲಿಸಿರುವನೆಂದು ಕಥೆಗಳನ್ನು ಹೇಳಬಹುದು. ಆದರೆ ಅವುಗಳಿಂದ ಜನರೇನನ್ನೂ ಕಲಿತಿಲ್ಲ. ಪೂರ್ವಾಚಾರದ ಅಭಿಮಾನದಿಂದ ಹೀಗೆ ಹಿಂದೆಗೆಯುತ್ತಿದ್ದ ಜನರನ್ನು ತಿದ್ದಿಕೊಳ್ಳುವ ಭಾರವು ಬಸವಣ್ಣನವರ ಪಾಲಿಗೆ ಬಂತು. ಕುಲಾಚಾರಗಳು ಮತಾಚಾರಗಳಿಂದ ಭಿನ್ನವಾಗಿ ಆಗಾಗ್ಗೆ ನಿಂತರೂ ಸಾಮಾನ್ಯವಾಗಿ ಕುಲಾಚಾರಗಳೇ ಅಂಗೀಕೃತವಾಗುವವು. ಈ ಆಚಾರಗಳ ಮಾತು ಬಂದಾಗ

ಎಂತವನಾದಡೇನು? ಲಿಂಗ ಮುಟ್ಟದವನೇ ಕೀಳು ಜಾತಿ–ಕುಲವಹುದು ತಪ್ಪದು. ಲಿಂಗವ ಮುಟ್ಟಲೊಡನೆ, ಶಿವಕುಲವಹುದು ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಹುದು ತಪ್ಪದು. ಕೂಡಲಸಂಗಮದೇವನೊಲ್ಲ ಸರ್ವ ಸಂದೇಹಿಗಳಾ.

"ಉಂಬಲ್ಲಿ ಉಡುವಲ್ಲಿ ಕುಲವಳಿಯಿತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಮಾದಿಗರನೇನೆಂಬಯ್ಯ. ಇವರನೆಂತು ಭಕ್ತರೆಂಬೆನಯ್ಯಾ? ಇವರನೆಂತು ಯುಕ್ತರೆಂಬೆನಯ್ಯಾ? ಇವರು ವಚ್ಚೊಚ್ಚಿ ಭಕ್ತರು. ವಚ್ಚೊಚ್ಚಿಭವಿಗಳು. ಅದೆಂತೆಂದೊಡೆ, ಲೈಂಗ್ಯೇ 'ಸ್ತ್ರೀ ವಾ ಪುರುಷಷ್ಷಂಡ ಚಾಂಡಾಲ ದ್ವಿಜವಂಶಜಾಃನ ಜಾತಿ ಭೇದೋ ಲಿಂಗಾರ್ಚನೆ ಸರ್ವೇರುದ್ರಗಣಾಃ ಸ್ಮೃತಾಃ' ಎಂದುದಾಗಿ ಇಂತೆಂಬ ಪುರಾಣವಾಕ್ಯವ ತಿಳಿದು ನೋಡಿರೇ. ಸರ್ವರೂ ರುದ್ರಗಣಂಗಳೆಂಬೆ. ಸರ್ವರೂ ಸದ್ಭಕ್ತರೆಂಬೆ. ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ, ಅವರಿಗೆ ಬೇಕಾದ ಹೆಣ್ಣು ಕೊಟ್ಟು, ತನಗೆ ಬೇಕಾದುದ ತೆಗೆದುಕೊಂಬುವುದು. ಈ ಕ್ರಮವನರಿಯದವನ ಭಕ್ತಿ ಹೊಲತಿ ಶುದ್ಧ ನೀರ ಮಿಂದಂತಾಯಿತ್ತು ಕೂಡಲಸಂಗಮದೇವಾ."

ಎಂಬುದಾಗಿ ಖಂಡಿತ ತಿಳಿಹೇಳಿದರು. ಇದೇ ವಿಷಯವನ್ನು ಚನ್ನಬಸವೇಶನು "ಉಂಬುವುದು ಉಡುವುದು ಶಿವಾಚಾರ, ಕೊಂಬುವುದು, ಕೊಡುವುದು ಕುಲಾಚಾರ ಎಂಬ ಅನಾಚರಿಯ ಮಾತು ಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೇ ಎಂದು, ಕೊಟ್ಟು

ಕೊಂಬುದು ಸದಾಚಾರ ಎಂದು ಪುಷ್ಟೀಕರಿಸಿದರು. 'ನುಡಿದಂತೆ ನಡೆಯದಿದ್ದರೆ ಕೂಡಲಸಂಗಮ ಮೆಚ್ಚನು ಕಾಣಿರಯ್ಯ, ಮನೋವಾಕ್ಕಾಯಗಳಿಂದ ಹಿಡಿದ ನೇಮವನ್ನು ಸಾಂಗಗೊಳಿಸಿ' ಎಂದು ಬಸವಣ್ಣನವರು ಒತ್ತಿ ಹೇಳಿದರು. ಆ ಮಹಾನುಭಾವರು ಜಾತ್ಯಹಂಕಾರವನ್ನು ಸ್ವತಃ ತ್ಯಜಿಸಿದ್ದರು. ಕಾರ್ಯತಃ ಶ್ವಪಚರನ್ನು ಉತ್ತಮರನ್ನಾಗಿ ಮಾಡಿದರು. ಆಚಾರದಿಂದ ಜಾತಿ ನಿರ್ಣಯವಾಗಬೇಕೆಂದು ತೀರ್ಮಾನಿಸಿದರು. ಜಾತಿಯೊಂದೇ ಆಗಿರುವಾಗ ಸಮಾನವಾದ ಹಕ್ಕುಗಳಿರಬೇಕೆಂದು ಪ್ರಕಟಿಸಿದರು. ಇದು ಐಕ್ಯಮತದ ಜೀವಾಳ. ಆದರೆ ಈ ಆಚರಣೆಗಳು ಬಹು ಜನರಿಗೆ ಸರಿಯಾಗಿ ತೋರಲಿಲ್ಲ ಪೂರ್ವ ಸಂಪ್ರದಾಯದವರಿಂದ ಬಸವಣ್ಣನವರಿಗೆ ಬಹಿಷ್ಕಾರವೇ ಆಯಿತು. ಸನಾತನವಾದ ವೇದೋಕ್ತವಾದ ವೀರಶೈವವನ್ನು ಸಂಕರದಿಂದ ಹೊಲಸು ಮಾಡಿದರೆಂದು ಪಂಚಾಚಾರ್ಯ ಪಕ್ಷದವರ ದೋಷಾರೋಪಣೆಯು ಅಂದಿಗೂ ಆಯಿತು. ಇಂದಿಗೂ ಇದೆ. ಆದರೆ ಆತ್ಮ ಸಾಕ್ಷಿಗೆ ವಿರೋಧವಾಗಿಯೂ ಸತ್ಯಮಾರ್ಗಕ್ಕೆ ತಪ್ಪಿಯೂ ಬಸವಣ್ಣನವರು ನಡೆಯುವರಾಗಲಿಲ್ಲ. ಪ್ರಭುವಾದ ಬಿಜ್ಜಳನು ಪ್ರತಿಭಟಿಸಿ ನಿಂತನು. ಸಮಾಜವೆಲ್ಲ ಅಲ್ಲೋಲ ಕಲ್ಲೋಲವಾಯಿತು. ಧರ್ಮವು ಲುಪ್ತವಾಯಿತೆಂದು ಪ್ರಳಯಕಾರಕ ವಾತಾವರಣವೆದ್ದಿತು. ಜನಗಳು ಗುಡಿಗಟ್ಟಿದರು. ಆದರೇನು?

"ಆರು ಮುನಿದು ಎಮ್ಮನೇನ ಮಾಡುವರು? ಊರು ಮುನಿದು ಎಮ್ಮನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲ್ಲಿಕ್ಕಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ? ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನಕ್ಕ?"

ಎಂದು ಹೇಳುತ್ತ ಬಸವಣ್ಣನವರು ಈ ಜಾತಿಭೇದ ನಿರಾಕರಣವನ್ನು ಮಾಡದೇ ಹೋಗಲಿಲ್ಲ. ವೀರಶೈವ ದೀಕ್ಷೆಯನ್ನು ತಳೆದು ಸದಾಚಾರ ನಿರತರಾದವರೆಲ್ಲರೂ ಈಶ್ವರ ದೃಷ್ಟಿಯಲ್ಲಿ ಒಂದೇ ಎಂಬ ಪಂಥವನ್ನು ಸಾಧಿಸದೆ ಹೋಗಲಿಲ್ಲ. ಜನ್ಮವನ್ನು ನಂಬಿಕೊಂಡು ಇಲ್ಲದ ಭೇದಭಾವಗಳನ್ನು ಹೂಡಿ ನರಕಕ್ಕೆ ಇಳಿಯುವವರು ಇಳಿಯಲಿ. ನಮ್ಮ ಪ್ರಶ್ನೆಯೊಂದೇ ಕೂಡಲಸಂಗನು ಯಾವ ಜಾತಿ? ಅವನನ್ನು ನಂಬಿದ ಶರಣರು ಯಾವ ಜಾತಿ? ಎಂದು ಕೇಳುವುದನ್ನು ಬಿಡಲಿಲ್ಲ. ಈ ಪತಿತೋದ್ಧಾರಕ್ಕೆ ಪ್ರತಿಭಟಿಸಿ ಸನಾತನ ಧರ್ಮಸ್ತಂಭಗಳು ತಮ್ಮ ಮೇಲೆ ದಂಡಯಾತ್ರೆಯನ್ನು ಕೈಕೊಳ್ಳುವುದಾದರೂ, ಅದರಿಂದ ತಮ್ಮ ಪ್ರಾಣ ಹೋಗುವುದಾದರೂ ಬಸವಣ್ಣನವರು ಹಿಂಜರಿಯಲಿಲ್ಲ; ಅಂತಹ ಮರಣವು ಮಹಾನವಮಿ ಎಂದುಕೊಂಡರು.

"ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ. ಇದಕಾರಂಜುವರು? ಇದಕಾರಳುಕುವರು? ಜಾತಸ್ಯ ಮರಣಂ ಧ್ರುವಂ ಎಂಬುದಾಗಿ ನಮ್ಮ ಕೂಡಲಸಂಗಮದೇವ ಬರೆದ ಬರಹ ತಪ್ಪಿಸುವರೆ ಹರಿ ಬ್ರಹ್ಮಾದಿಗಳವಲ್ಲ."

"ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಗ್ಯ ತೀರಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕವಿಗರ್ಭಣಿಗೆ? ಅಳುಕಲೇಕೋ ಕೂಡಲಸಂಗಮದೇವ, ನಿಮ್ಮಾಳಾಗಿ?"

ಎಂದು ತಮ್ಮ ಅನುಯಾಯಿಗಳಿಗೆ ಪ್ರೋತ್ಸಾಹಿಸುತ್ತ ಮತವಿಸ್ತರಣ ಕಾರ್ಯವು ಮುಂದುವರಿಯಲಿ, ಬಂದುದನ್ನು ಅನುಭವಿಸೋಣ, ಹಣೆಯಲ್ಲಿ ಬರೆದುದನ್ನು ಅಳಿಸಲಾಗುವುದಿಲ್ಲ. ರಣರಂಗದಲ್ಲಿ ಇಳಿದುದಾಯಿತು. ಇನ್ನು ಉತ್ತರ ಕುಮಾರನಂತೆ ಓಡಲೇಕೆ? ಅರ್ಜುನದೇವನಂತೆ

ಕುರು ತುತ್ತಗಳನ್ನು ನಿರ್ಮೂಲ ಮಾಡುವುದೇ ಸರಿ ಎಂದು ಧೀರತೆಯನ್ನು ತೋರಿದರು. ಸಮಾಜ ನಿಯಮಗಳು ಈಗಿನ ಕಾಲಕ್ಕಿಂತ ನೂರುಮಡಿ ಬಿಗಿಯಾಗಿದ್ದಾಗ, ಸಮಾಜ ನಿಯಮಗಳು ಮತ ಕಟ್ಟಳೆಗಳ ಬಲೆಯಲ್ಲಿ ಬಂಧಿತವಾಗಿದ್ದಾಗ, ಜಾತಿಭ್ರಷ್ಟರೂ ಮತಭ್ರಷ್ಟರೂ ಆಗುವುದಕ್ಕೆ ಜನಗಳು ಸಾವಿರ್‍ಪಾಲು ಹೆಚ್ಚು ಹೆದರಿ ಸಾಯುತ್ತಿದ್ದಾಗ ಬಸವಣ್ಣನವರು ಮುಂದೆ ಬಂದು ಪತಿತೋದ್ಧಾರವನ್ನು ಮಾಡಿ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಟ್ಟರು.

ಬಸವಣ್ಣನವರ ಧೈರ್ಯ ಸ್ಥೈರ್ಯಗಳೂ ಮನೋಭಾವವೂ ಎಂತಹವೆಂಬುದು ಎಲ್ಲರಿಗೂ ವ್ಯಕ್ತವೇ ಆಗುತ್ತದೆ. ಈ ಮನೋಧರ್ಮದ ಬಸವಣ್ಣನವರು ಮತೋದ್ಧಾರಕರಾಗಿ ಮುಂದೆ ನಿಂತು ಕೆಲಸ ಕಾರ್ಯಗಳನ್ನು ಕೈಕೊಂಡಾಗ ಅದರ ಫಲವನ್ನು ನಾವು ಹೇಳಬೇಕೆ? ಬಸವಣ್ಣನವರು ಮಾಡಿದ ಏರ್ಪಾಡನಿಂದ ಪೂರ್ವ ಸಂಪ್ರದಾಯದವರು ಹೆಸರು ಹೇಳಿಕೊಳ್ಳುವುದೇ ಕಷ್ಟವಾಯಿತು. ಇಷ್ಟಾದರೂ ಸಮಾಜ ಸ್ಥಿತಿಯನ್ನು ಈಗ ನೋಡಿದರೆ ಹರಿಹರ ಬ್ರಹ್ಮಾದಿಗಳಿಗಿಂತ ಸಮಾಜವೇ ಪ್ರಬಲವೆಂದು ನಮಗೆ ಕಾಣುತ್ತದೆ. ಭಗವಂತನು ಬುದ್ಧದೇವನಾಗಿ ಅವತರಿಸಬಹುದು. ಆದಿಶೇಷನು ರಾಮಾನುಜರಾಗಿ ಹುಟ್ಟಬಹುದು. ನಂದೀಶ್ವರನು ಬಸವಣ್ಣನವರಾಗಿ ಜನ್ಮವೆತ್ತಬಹುದು, ನಮ್ಮ ಸಮಾಜವು ಹಿಮಾಚಲದಂತೆ ಸ್ವಲ್ಪ ಕರಗಬಹುದಾದರೂ ಚಲಿಸುವುದಿಲ್ಲ. ವರ್ಣಾಶ್ರಮಗಳ ಕಟ್ಟು ಬಲಪಟ್ಟು ಭೂತನಾಟ್ಯವನ್ನು ಆಡುತ್ತಿದೆ. ಉಚ್ಚನೀಚಗಳೆಂಬ ವಿಷ ಮೂಲಗಳೂ ಬೇರುಬಿಟ್ಟು ಹರಡಿಕೊಂಡಿದೆ. ಜಾತಿ ಪಂಡಗಳು ನಾಗದಾಳಿಯಂತೆ ಹೊಲಗದ್ದೆಗಳನ್ನು ಆಕ್ರಮಿಸಿಕೊಂಡಿವೆ. ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳುತ್ತಿರುವ ವೀರಶೈವರೇ ಭೋಜನಾದಿಗಳಲ್ಲಿಯೂ ಕೊಳುಕೊಡೆಯಲ್ಲಿಯೂ ವಿಮರ್ಶೆ ಬುದ್ಧಿಯನ್ನು ಪ್ರಬಲವಾಗಿ ತೋರಿಸುತ್ತಿದ್ದಾರೆ. ಮಾಡುವದೇನು? ಸಮಾಜ ಬಲವೇ ಬಲವಲ್ಲದೆ ಧರ್ಮ ಬಲವೆಲ್ಲಿಯದು!

❖❖

ಬಸವಣ್ಣನವರು ಮತ್ತು ಜಾತಿಭೇದ

["ಭಕ್ತಿಭಂಡಾರಿ" ಪುಸ್ತಕ : ಪುಟ ೮೨-೮೩]

ಬಸವಣ್ಣನವರು ಜಾತಿ ಭೇದಗಳನ್ನು ನಿರಾಕರಿಸಿದರೆಂದೂ ಲಿಂಗ ಧಾರಣೆಗೆ ಸರ್ವರಿಗೂ ಅವಕಾಶ ಕಲ್ಪಿಸಿದರೆಂದೂ, ಹಾಗೆ ಮಾಡಿದ್ದು ನ್ಯಾಯವಾದುದೆಂದೂ ನಾವು ಅಭಿಪ್ರಾಯಪಡುತ್ತೇವೆ. ರಾಮಾನುಜಾರ್ಯರನ್ನು ಕರೆದು ಅವರ ಗುರುಗಳಾದ ಗೋಷ್ಠಿಪೂರ್ಣರು "ಈ ಮಂತ್ರ ರಹಸ್ಯವನ್ನು ಬಯಲಿಗೆ ಹಾಕಬಾರದು. ಗುಟ್ಟಾಗಿಟ್ಟುಕೊಂಡಿರಬೇಕು."-ಎಂದು ಉಪದೇಶಿಸಿದರಂತೆ, ಆದರೆ ರಾಮಾನುಜಾಚಾರ್ಯರು ದೇವಸ್ಥಾನದ ಗೋಪುರವನ್ನೇರಿ ಉಚ್ಚ ಕಂಠದಿಂದ ಆ ಗುಟ್ಟನೆಲ್ಲ ಸಾರಿಬಿಟ್ಟರು. ಪತಿತೋದ್ಧಾರಕರಾಗಿ ಏರ್ಪಟ್ಟಿರುವ ಮಾರ್ಗಗಳನ್ನು ರಟ್ಟುಮಾಡುವದೇ? ನ್ಯಾಯವೆಂದು ರಾಮಾನುಜಾಚಾರ್ಯರು ವ್ಯಕ್ತಗೊಳಿಸಿದರು.'ಪಾಪಿಗಳನ್ನು ಉದ್ಧಾರ ಮಾಡಲು ನಾನು ಬಂದಿರುವೆನು' ಎಂದು ಕ್ರೈಸ್ತನು ಸಾರಿ ಭಗವಂತನ ಕಾರುಣ್ಯ ರೂಪವನ್ನು ಪ್ರತ್ಯಕ್ಷಪಡಿಸಿದನು. ಮನುಷ್ಯರ ಸರ್ವ ಸಮಾನ ಹಕ್ಕುಗಳನ್ನು ಸ್ಥಾಪಿಸಿ ಬುದ್ಧದೇವರು ಪರಮನ ಅವತಾರವಾದನು. ಬಸವಣ್ಣನವರು ಈ ಮಹಾ ಪುರುಷರ ಪಂಥದಲ್ಲಿ ಸೇರಿದವರಾಗಿದ್ದಾರೆ. ವೇದಾಗಮಾದಿಗಳು ವಿರುದ್ಧವಾಗಿ ಹೇಳುವುದೇನೆಂದರೆ,

"ವೇದಕ್ಕೆ ಒರೆಯಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯ್ವೆ, ನೋಡಯ್ಯ ಮಹಾದಾನಿ ಕೂಡಲಸಂಗಮದೇವ, ಮಾದರ ಚನ್ನಯ್ಯನ ಮನೆಯ ಮಗ ನಾನಯ್ಯ."

ಎಂದು ನುಡಿದರು ಬಸವಣ್ಣನವರು. ಅಂತಹ ಆಗಮಾದಿಗಳಿಂದ ಪ್ರಯೋಜನವಿಲ್ಲವೆಂದು ಒತ್ತಿ ಹೇಳಿದರು ಬಸವಣ್ಣನವರು. "ನೀನು ಕಲ್ಲಾದೊಡೆ ನಾನೇನಪ್ಪೆನಯ್ಯಾ" ಎಂದು ಪ್ರಭುವು ಕೇಳಿದಷ್ಟೆ. ಪರಿತರನೊಲ್ಲದ ಪರಮಾತ್ಮನು ಕಲ್ಲಲ್ಲದೆ ಬೇರೆಯಲ್ಲವೆಂದು ನಾವು ಹೇಳುತ್ತೇವೆ. ಈ ಜಾತಿಭೇದ ನಿರಾಕರಣವು ಅತ್ಯಾಶ್ರಮಿಗಳಿಗೆ ಮಾತ್ರ ಅನ್ವಯಿಸತಕ್ಕುದೆಂದೂ ಸಾಮಾನ್ಯರಿಗೆ ಅಲ್ಲವೆಂದೂ ಹೇಳುವ ಸಂಪ್ರದಾಯವೊಂದು ರೂಢಿಗೆ ಬಂದಿದೆ. ಈ ಪ್ರಯತ್ನವು ಬಸವಣ್ಣನವರು ಕಟ್ಟಿದ ಮಹತ್ತಾದ ಕಟ್ಟಡದ ತಳಹದಿಯನ್ನೇ ತೆಗೆಯುವುದಾದುದರಿಂದ ಬಸವಣ್ಣನವರ ಅಭಿಮತಕ್ಕೆ ವಿರೋಧವಾದುದೆಂದು ಅದನ್ನು ನಾವು ತಿರಸ್ಕರಿಸುವೆವು. ಬಸವಣ್ಣನವರು ಅದ್ಭುತವಾದ ಕೆಲಸವನ್ನು ಸಾಂಗವಾಗಿ ನೆರವೇರಿಸಿದರು. ನೀಚೋಚ್ಚ ಭಾವಗಳೆಂಬ ಸಂಕಲೆಗಳನ್ನು ಏರ್ಪಡಿಸಿ "ದೇವರಿಗೆ

ನೀವು ದೂರ, ನಿಮಗೆ ಯಾವುದಕ್ಕೂ ಅಧಿಕಾರವಿಲ್ಲ" ಎಂದು ಮನಸ್ಸನ್ನು ಕುಗ್ಗಿಸಿ ಆತ್ಮವಿಕಾಸಕ್ಕೆ ಅವಕಾಶವನ್ನು ಕೊಡದೆ ಯಾವ ಜನರನ್ನು ಅಧಃಪಾತಾಳದಲ್ಲಿ ತುಳಿದಿದ್ದರೋ ಅಂಥವರ ಬಂಧ ವಿಮೋಚನೆಯನ್ನು ಮಹಾನುಭಾವರಾದ ಬಸವಣ್ಣನವರು ಮಾಡಿದರು. ಅವರ ಹೃದಯದಲ್ಲಿ ನವಜೀವನವನ್ನು ತುಂಬಿದರು. ಅವರ ಆತ್ಮಪ್ರಕಾಶವು ಕೈಲಾಸ ಪರ್ವತಕ್ಕೂ ಪ್ರಸರಿಸಿ ಪಾರ್ವತೀ ಪರಮೇಶ್ವರರ ಪಾದಕಮಲಗಳು ವಿಕಸಿಸುವಂತೆ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು.

❖❖

ಬಸವಣ್ಣನವರು ಮತ್ತು ಕಾಯಕ

["ಭಕ್ತಿ ಭಂಡಾರಿ" ಪುಸ್ತಕ : ಪು ೧೦೬-೧೧೦]

ಬಸವಣ್ಣನವರು ಅಲ್ಪ ಕಾಲ ಮಾತ್ರ ಜೀವಿಸಿ ಲಿಂಗೈಕ್ಯರಾದರೂ ಅವರ ಪ್ರಭಾವವು ಕರ್ನಾಟಕದಲ್ಲಿ ಬಹುಮುಖವಾಗಿ ಕಂಡುಬರುತ್ತಿದೆ. ಒಬ್ಬ ಮಹಾತ್ಮರ ಅವತಾರದಿಂದ ಒಂದು ಜನಾಂಗದ ಜನಜೀವನದಲ್ಲಿ ಅನೇಕ ಮಾರ್ಪಾಟುಗಳಾಗುವುದುಂಟು. ಇನ್ನು ಬಸವಣ್ಣನವರಂತಹ ಮಹಿಮಾಪುರುಷರು ಅವತರಿಸಿ ಒಳ್ಳೆಯ ಸ್ಫೂರ್ತಿಯಿಂದ ಕೆಲಸ ಮಾಡತೊಡಗಿದರೆ, ಆ ಸ್ಫೂರ್ತಿಯ ಮುದ್ರಣವು ಎಲ್ಲ ಕಡೆಗಳಲ್ಲೂ ಕಂಡುಬರಬೇಕಾದುದು ಸಹಜ. ಒಟ್ಟಿನಲ್ಲಿ ಅವರ ಪ್ರಭಾವವು ಸಮಾಜದಲ್ಲಿಯೂ ಸಾಹಿತ್ಯದಲ್ಲಿಯೂ ಮತದಲ್ಲಿಯೂ ಪ್ರಸರಿಸಿತೆಂದು ವಿಭಾಗ ಮಾಡಿ ಹೇಳಬಹುದಾಗಿದೆ.

ಜನರು ಸ್ವಾವಲಂಬಿಗಳಾಗುವಂತೆಯೂ ಜೀವನೋಪಾಯಕ್ಕೆ ವೃತ್ತಿಗಳನ್ನನುಸರಿಸುವಂತೆಯೂ ಬಸವಣ್ಣನವರು ಪ್ರೋತ್ಸಾಹಿಸಿದರು. ಹಿರಿಯನಾಗಲಿ ಕಿರಿಯನಾಗಲೀ ಬಡವನಾಗಲೀ ಭಾಗ್ಯವಂತನಾಗಲಿ ಎಲ್ಲರೂ ಕಾಯಕವನ್ನು ಮಾಡಬೇಕು ಎಂದು ಅವರು ತಿಳಿಯಹೇಳಿದರು. ಬಸವಣ್ಣನವರ ಕಾಲಕ್ಕೆ ಹಿಂದೆ ವೀರಶೈವರು ಕಾಯಕಗಳನ್ನು ಮಾಡುತ್ತಿರಲಿಲ್ಲವೆಂದಲ್ಲ. ಹಿಂದೆ ಅವು ಪ್ರಚಾರದಲ್ಲಿದ್ದುವು. ಆದರೆ ಬಸವಣ್ಣನವರು ಆ ಕಾಯಕಗಳಿಗೆ ಹೊಸದಾದ ಅರ್ಥವನ್ನು ಕೊಟ್ಟರು. ಅವುಗಳಲ್ಲಿ ಜೀವಕಳೆಯನ್ನು ತುಂಬಿದರು. ಭವಿಯ ಸಂಭಾಷಣೆ ಸಹವಾಸಗಳನ್ನು ನಿಷೇಧಿಸಿದ್ದ ಬಸವಣ್ಣನವರು ತಮ್ಮ ವೀರಶೈವ ಸಮಾಜವು ಯಾವ ವಿಷಯಕ್ಕೂ ಪರತಂತ್ರವಾಗಿರದೆ, ಎಲ್ಲ ವಿಷಯಗಳಲ್ಲೂ ಸ್ವತಂತ್ರವಾಗಿರಬೇಕೆಂದು ಇಚ್ಛೆಪಟ್ಟಿದ್ದರು. ಆದುದರಿಂದ ತಮ್ಮ ಸಮಾಜಕ್ಕೆ ಬೇಕಾದ ಅನುಕೂಲಗಳನ್ನು ತಾವೇ ಒದಗಿಸಿಕೊಳ್ಳಬೇಕಾದ ಅವಶ್ಯಕತೆಯು ವೀರಶೈವರಿಗೆ ಹೆಚ್ಚಾಯಿತು. ಕೆಲವು ಕಾಯಕಗಳು ಬಿಟ್ಟುಹೋಗಿದ್ದರೂ ಈಗ ಅವುಗಳನ್ನು ತಪ್ಪದೆ ಕಲಿಯಬೇಕಾಗಿ ಬಂತು. ಬಸವಣ್ಣನವರ ಬಳಿಗೆ ಯಾರೂ ಬಂದರೂ ಕಾಯಕವಾವುದು? ಯಾವ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುತ್ತಿರುವಿರಿ? ಎಂಬ ಪ್ರಶ್ನೆಗಳೂ ಬಾರದಿರುತ್ತಿರಲಿಲ್ಲ. ಆದುದರಿಂದ ಪ್ರತಿಯೊಬ್ಬರೂ ಸ್ವತಂತ್ರರಾಗಿ ಜೀವನ ಮಾಡುವವರಾದರು. ಈ ಸ್ವಾತಂತ್ರ್ಯದಿಂದ ಆತ್ಮೋನ್ನತಿಯು ಹೆಚ್ಚುವಂತಾಯಿತು.

ಕಾಯಕವು ಐಹಿಕಕ್ಕೆ ಮಾತ್ರ ಬೇಕಾಗುವುದೆಂದು ಬಸವಣ್ಣನವರು ಹೇಳಲಿಲ್ಲ. ಅದು ಮುಕ್ತಿಗೂ ಸಾಧನವೆಂದು ಹೇಳಿದರು. ತನು ಸವೆಯುವಂತೆ ಕಾಯಕ ಮಾಡಿ ಕಷ್ಟಾರ್ಜಿತ ಧನವನ್ನೆಲ್ಲ

ಜಂಗಮಮಾರ್ಚಿಗೆ ವಿನಿಯೋಗಿಸಬೇಕು. ಕಷ್ಟಾರ್ಜಿತ ಧನವನ್ನಲ್ಲದೆ ಜಂಗಮದೇವನೊಲ್ಲ. ಈಶ್ವರನು ಜಂಗಮನಾಗಿ ಬಂದು ದಾಸಿಮಯ್ಯನನ್ನು ಬೇಡಿದ್ದು ಆತನು ಕಷ್ಟದಿಂದ ನೇಯ್ದಿದ್ದ ಬಟ್ಟೆಯನ್ನು. ಈಶ್ವರನು ಜಂಗಮನಾಗಿ ಬಂದು ಚನ್ನಯ್ಯನೊಡನೆ ಉಂಡದ್ದು ಆತನು ಕಷ್ಟಪಟ್ಟು ಸಂಪಾದಿಸಿದ್ದ ಗಂಜಿಯನ್ನು.

"ಕೃಷಿಕೃತ್ಯ ಕಾಯಕದಿಂದಾದೊಡೇನು? ತನುಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ, ಅದೆಂತೆನೆ, ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ ಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು. ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪವರ ನಾನು ನೆರೆನಂಬಿ, ನಮೋ ನಮೋ ಎಂಬೆನಯ್ಯ ಕೂಡಲಸಂಗಮದೇವಾ."

ಎಂದು ಬಸವಣ್ಣನವರು ಕೊಂಡಾಡಿದರು. ಕಾಯಕವನ್ನು ಕೈಕೊಳ್ಳುವುದಕ್ಕೆ ಜಂಗಮ ಪೂಜೆಯೆ ಧ್ಯೇಯ. ಜಂಗಮವೇ ಲಿಂಗವೆಂದೂ ಜಂಗಮ ಲಿಂಗ ಸಾಮರಸ್ಯವನ್ನು ಪಡೆಯಿರೆಂದೂ ಬಸವಣ್ಣನವರು ಬೋಧಿಸಿದರು. ಜಂಗಮಕ್ಕೆ ನೀಡಿದರೆ ಲಿಂಗದೇವನು ಪ್ರಸನ್ನನಾಗುವನು. ಲಿಂಗವಿಲ್ಲದವನು ಹೇಗೆ ವೀರಶೈವಕ್ಕೆ ಹೊರಗೋ ಹಾಗೆಯೇ ಕಾಯಕವಿಲ್ಲದವನೂ ಹೊರಗು. ಲಿಂಗಧಾರಿಗೆ ಹೇಗೆ ಮುಕ್ತಿಯು ನಿಶ್ಚಯವೋ ಹಾಗೆಯೇ ಕಾಯಕವುಳ್ಳವನಿಗೂ ಮೋಕ್ಷವು ನಿಶ್ಚಯ. ಇನ್ನು ಕಾಯಕವು ಕೈಲಾಸವಾಗದೇಕೆ?

ಕಾಯಕಗಳಲ್ಲಿ ಉಚ್ಚ ನೀಚಗಳೆಂಬ ಭೇದ ಭಾವವಿಲ್ಲ. ಕಾಯಕವನ್ನು ನೋಡಿ ಜಾತಿ ನಿರ್ಣಯಗಳನ್ನು ಮಾಡಲಾಗದು. ಜಾತಿಯೆಲ್ಲವೂ ಶಿವಜಾತಿ. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ಈ ಎಲ್ಲ ಕಾಯಕಗಳೂ ಸನ್ಮಾನ್ಯವಾದುವೇ. ಜೇಡಂಗೆ, ಬೇಡಂಗೆ, ಡೋಹರಂಗೆ, ಹೊಲೆಯಂಗೆ, ರೂಢಿಗೀಶ್ವರನೊಲಿದ ಪರಿಯ ನೋಡಾ. ಆದುದರಿಂದ ಕಾಯಕವನ್ನು ಬೆಸಗೊಂಡು ಮಣೆಯನ್ನು ಹಾಕಬೇಕಾಗಿಲ್ಲ.

"ದೇವ ಸಹಿತ ಭಕ್ತ ಮನೆಗೆ ಬಂದರೆ, ಕಾಯಕವಾವುದೆಂದು ಬೆಸಗೊಂಡೆನಾದರೆ, ನಿಮ್ಮಾಣೆ, ನಿಮ್ಮ ಪುರಾತನರಾಣೆ, ತಲೆದಂಡ, ತಲೆದಂಡ ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಿಸಿದರೆ ನಿಮ್ಮ ರಾಣಿವಾಸದಾಣೆ."

ಎಂದು ಅಭೇದ ಬುದ್ಧಿಯನ್ನು ಬಸವಣ್ಣನವರು ತೋರಿದರು. ಕಾಯಕದ ವಿಷಯದಲ್ಲಿ ಲೌಕಿಕರಿಗೆ ಮಾತ್ರ, ಸಾಮಾನ್ಯ ಜನರಿಗೆ ಮಾತ್ರ, ಒತ್ತಾಯಪಡಿಸುತ್ತಿದ್ದರೆಂದೂ ಜಂಗಮರನ್ನು ಸುಮ್ಮನೆ ಬಿಡುತ್ತಿದ್ದರೆಂದೂ ತಿಳಿಯಲಾಗದು. ಜಗದ ಹಂಗಿಗರು ಜಂಗಮರು ಎಂಬ ಅಪವಾದವನ್ನು ಹೋಗಲಾಡಿಸಬೇಕೆಂಬುದು ಬಸವಣ್ಣನವರ ಉದ್ದೇಶವಾಗಿತ್ತು. ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ ಆದುದರಿಂದ ಭಕ್ತನಿಂದ ಪೂಜೆಯನ್ನು ಕೈಕೊಳ್ಳುವುದಾದರೂ ಜಂಗಮನು ಕಾಯಕವನ್ನು ಮಾಡಲೇಬೇಕು. ಚಾತುರ್ವರ್ಣ್ಯ ಭೇದಗಳನ್ನು ಮೊದಲೇ ನಿರಾಕರಿಸಿ, ಲಿಂಗವಿದ್ದವನೇ ಕುಲಜನು, ಲಿಂಗವಿಲ್ಲದವನೇ ಹೊಲೆಯ ಎಂದು ಸಾರಿದ್ದ ಬಸವಣ್ಣನವರು ವೃತ್ತಿಗಳನ್ನಾಶ್ರಯಿಸಿ ಜಾತಿ

ಭೇದಗಳೂ ಉಚ್ಚ ನೀಚ ಭಾವಗಳೂ ಏರ್ಪಟ್ಟಿರುವುದನ್ನು ನೋಡಿ ಎಲ್ಲ ಕಾಯಕಗಳಿಗೂ ಉನ್ನತ ಸ್ಥಾನವನ್ನು ಕಲ್ಪಿಸಿ ಆ ಭೇದ ಬುದ್ಧಿಯನ್ನು ಖಂಡಿಸಿದರು. ಆದುದರಿಂದ ವೀರಶೈವಸಮಾಜದಲ್ಲಿ ಸ್ವಾತಂತ್ರ್ಯವೂ, ಸಮಾನತ್ವವೂ, ಭ್ರಾತೃಭಾವವೂ ಏಕ ಕಾಲದಲ್ಲಿ ತಲೆದೋರಿ ಐಕ್ಯಮತವು ಚೆನ್ನಾಗಿ ಏರ್ಪಡುವಂತಾಯಿತು.

ಸ್ತ್ರೀಯರ ವಿಚಾರದಲ್ಲಿ ಬಸವಣ್ಣನವರು ಉನ್ನತ ಭಾವಗಳನ್ನಿಟ್ಟುಕೊಂಡಿದ್ದರು. ಪುರುಷರು ದೀಕ್ಷೆಗೆ ಹೇಗೆ ಯೋಗ್ಯರೋ ಹಾಗೆಯೇ ಸ್ತ್ರೀಯರೂ ಯೋಗ್ಯರು. ಸ್ತ್ರೀಯರು ಕೇವಲ ಸಂಸಾರ ನಿರ್ವಹಣಕ್ಕೆ ಮಾತ್ರ ಸಾಧಕರೆಂದು ಬಸವಣ್ಣನವರು ಹೇಳಲಿಲ್ಲ. ಸ್ತ್ರೀಯರು ತಮ್ಮ ಸದ್ಗತಿಯನ್ನೂ ತಮ್ಮ ಪತಿಗಳ ಸದ್ಗತಿಯನ್ನು ಸಾಧಿಸಬೇಕೆಂಬುದು ಅವರ ಮತ. ಸತಿಪತಿಗಳಿಬ್ಬರೂ ಒಬ್ಬರಿಗೊಬ್ಬರೂ ಸಹಾಯಕರಾಗಿ ವೀರಶೈವಧರ್ಮವನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕೆಂಬುದು ಅವರ ಇಚ್ಛೆ. ಗಂಡನು ಶ್ರೇಷ್ಠನೆಂದಾಗಲಿ ಹೆಂಡತಿಯು ನಿಕೃಷ್ಟಳೆಂದಾಗಲಿ ತಿಳಿಯಲಾಗದು. ಉಭಯ ಸಮ.

"ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ, ದಂಪತಿ ಏಕ ಭಾವವಾಗಿ ನಿಂದಲ್ಲಿ, ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಸಂಗನಬಸವಣ್ಣ."

ಎಂದು ಅಲ್ಲಮನು ಉಪದೇಶಿಸಿದಂತೆ ಬಸವಣ್ಣನವರು ತಿಳಿದರು. ಆದುದರಿಂದ ಸತಿ ಪತಿಗಳು ಹೊಂದಿಕೆಯಾಗಿ ಧರ್ಮ ಕಾರ್ಯಗಳನ್ನು ಮಾಡತಕ್ಕದ್ದು.

ಭವಿಯನ್ನು ಕೈ ಹಿಡಿಯಬಾರದೆಂಬುದು ಸ್ವತಸ್ಸಿದ್ಧವಾಗಿಯೇ ಇದ್ದಿತು. ಒಂದು ವೇಳೆ ತಕ್ಕ ಪತಿಯು ದೊರೆಯದಿದ್ದರೆ ಶರಣಸತಿ ಲಿಂಗಪತಿ ಎಂಬ ಭಾವದಿಂದ ಲೌಕಿಕ ಸಂಸಾರವನ್ನು ತ್ಯಜಿಸಿ ಪಾರಮಾರ್ಥಿಕ ಸಂಸಾರವನ್ನು ಕೈಕೊಳ್ಳಬಹುದು. ಮಹಾದೇವಿಯಕ್ಕನು ಹೀಗೆ ಪಾರಮಾರ್ಥಿಕ ಸಂಸಾರವನ್ನು ನಡೆಸಿ ಖ್ಯಾತಿವಂತಳಾದಳು. ಆಕೆಗೆ ಬಸವಣ್ಣನವರೇ ಉಪದೇಶಕರು.

"ಕಾಮನ ಗೆಲಿದೆನು ಬಸವ ನಿಮ್ಮ ದಯದಿಂದ, ಸೋಮಧರನ ಹಿಡಿತಪ್ಪೆನು ಬಸವ ನಿಮ್ಮ ಕೃಪೆಯಿಂದ, ನಾಮದಲ್ಲಿ ಹೆಂಗೂಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪು ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಎರಡುವರಿಯದೆ ಕೂಡಿದೆನು ಬಸವ ನಿಮ್ಮ ಕೃಪೆಯಿಂದ."

ಎಂದು ಮಹಾದೇವಿಯಕ್ಕ ಕೃತಜ್ಞತೆಯನ್ನು ಸೂಚಿಸಿದಳು. ಆದುದರಿಂದ ಹೆಂಗಸಾಗಿ ಹುಟ್ಟಿದ ಪಾಪಕ್ಕೆ ಮದುವೆಯಾಗಲೇಬೇಕೆಂಬ ನಿರ್ಬಂಧವಾಗಲಿ, ವಿವಾಹದ ವಯಸ್ಸು ಮೀರಿಹೋಯಿತು. ಯಾರಿಗಾದರೂ ಗಂಟುಹಾಕಿ ಬಿಡಬೇಕೆಂಬ ಆತುರವಾಗಲಿ ಬಸವಣ್ಣನವರ ಮತದಲ್ಲಿ ಪ್ರವೇಶಿಸಲಿಲ್ಲ. ಕಡೆಗೆ ಭವಿಯೆಂದೆನಿಸಿ ರಾಣಿಯಾಗುವುದಕ್ಕಿಂತ ಭಕ್ತೆಯೆಂದೆನಿಸಿ ತೊತ್ತಾಗುವುದಾದರೂ ಒಳ್ಳೆಯದು.

"ಅರಸರ ಮನೆಯಲ್ಲಿ ಅರಿಸಿಯಾಗಿಯಿಪ್ಪುದರಿಂದ, ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯ! ತಾರೌ ಅಗ್ಗವಣಿಯ, ನೀಡೌ ಪತ್ರಿಯ, ಲಿಂಗಕ್ಕೆ ಬೋನವ ಹಿಡಿಯೌ ಎಂಬರು. ಕೂಡಲಸಂಗನ ಮಹಾ ಮನೆಯಲ್ಲಿ ಒಕ್ಕುದನುಣ್ಣೌ ತೊತ್ತೇ ಎಂಬರು" ಎಂದು ಉಪದೇಶಿಸಿದರು.

❖❖

ಬಸವಣ್ಣ ಮತ್ತು ಬುದ್ಧದೇವ

["ಭಕ್ತಿ ಭಂಡಾರಿ" ಪುಸ್ತಕ : ಪುಟ : ೧೧೧-೧೧೩]

ಬುದ್ಧದೇವನು ನೀತಿಗೆ ಪ್ರಾಶಸ್ತ್ಯವನ್ನು ಕೊಟ್ಟು ಬೌದ್ಧ ಮತವನ್ನು ಸ್ಥಾಪಿಸಿದರೂ ಬಸವಣ್ಣನವರು ಹೇಳಿದ ಫಲಕ್ಕೂ ಬುದ್ಧದೇವನು ಹೇಳಿದ ಫಲಕ್ಕೂ ಬಹಳ ವ್ಯತ್ಯಾಸವಿದೆ. ಒಳ್ಳೆಯ ಯೋಚನೆಯಿಂದಲೂ ಒಳ್ಳೆಯ ಕಾರ್ಯದಿಂದಲೂ ನಮಗೆ ಒಳ್ಳೆಯದಾಗುತ್ತದೆ. ಕೆಟ್ಟ ಯೋಚನೆಯಿಂದಲೂ ಕೆಟ್ಟ ಕಾರ್ಯದಿಂದಲೂ ಕೆಟ್ಟದಾಗುತ್ತದೆ ಎಂಬ ಬೋಧನೆಯಲ್ಲಿ ಸಾಮಾನ್ಯ ಜನರಿಗೆ ಫಲ ಮಹತ್ವವೂ ಚೆನ್ನಾಗಿ ಗೋಚರಿಸುವುದಿಲ್ಲ. ಯಾವುದೊಂದು ಕೆಲಸ ಮಾಡಿದರೂ ಅದರ ಫಲಾಫಲಗಳನ್ನು ದೈವ ಪ್ರಸನ್ನತೆ ಮತ್ತು ಅಪ್ರಸನ್ನತೆಗಳಲ್ಲಿ ಗುಣಿಸಿ ನೋಡುವ ಸಾಮಾನ್ಯ ಜನರಿಗೆ ಬುದ್ಧದೇವನ ದೈವ ವಿರಹಿತವಾದ ಬೋಧೆಯಲ್ಲಿ ಫಲ ಸಂಬಂಧವು ಆಕರ್ಷಣೀಯವಾಗಲಿಲ್ಲ. ಬಸವಣ್ಣನವರಾದರೋ-

"ಕಿರಿದಾಗಿ ಭೃತ್ಯಾಚಾರವ ನುಡಿದು ವಿನಯ ತದ್ಧ್ಯಾನವುಳ್ಳವರ ಎತ್ತಿಕೊಂಬನಯ್ಯ ಕೂಡಲಸಂಗಮದೇವಾ. ಪ್ರಮಥರ ಮುಂದೆ, ಅಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ ನರಕದಲ್ಲಿಕ್ಕುವ ಕೂಡಲಸಂಗಮದೇವಾ. ನರಕದಲ್ಲಿಕ್ಕದೆ ಮಾಬನೆ ಕೂಡಲಸಂಗಮದೇವ."

ಎಂದು ಮುಂತಾಗಿ ಫಲ ಸಂಬಂಧವನ್ನು ತೋರುತ್ತಿದ್ದುದರಿಂದ ಸಾಮಾನ್ಯ ಜನರಿಗೆ ಸದಾಚಾರದ ಅವಶ್ಯಕತೆಯು ಮೂರ್ತಿವೆತ್ತಾಗಿ ಕಂಡುಬರುತ್ತಿತ್ತು.

ಒಂದು ಸಮಾಜವು ಒಂದೇ ಮತವನ್ನು ಅನುಸರಿಸಿ ಆ ಸಮಾಜದ ಭಿನ್ನ ಭಿನ್ನ ವ್ಯಕ್ತಿಗಳು ಸಮಾಜ ಸೌಕರ್ಯಕ್ಕೆ ಅವಶ್ಯಕವಾದ ಸಮಸ್ತವಾದ ಕಾಯಕಗಳನ್ನೂ ಕೈಗೊಂಡು, ಚಾತುರ್ವರ್ಣ್ಯಾದಿಗಳ ಸಂಕಲೆಯಿಲ್ಲದೆ, ಉಚ್ಚ ನೀಚಗಳೆಂಬ ಪಾಶಗಳಿಲ್ಲದೆ, ಸರ್ವ ಸಮತಾಭಾವದಿಂದಲೂ, ಭ್ರಾತೃ ಸ್ನೇಹದಿಂದಲೂ ಐಕ್ಯಮತದಿಂದಲೂ ಬೆಳೆದುಬಂದರೆ ಆ ಸಮಾಜದ ಶಕ್ತಿಯು ಎಷ್ಟರಮಟ್ಟಿಗೆ ಇದ್ದೀತು! ಯಾರು ಬೇಕಾದರೂ ಈ ಸಮಾಜಕ್ಕೆ ಸೇರಬಹುದಾಗಿಯೂ, ಸೇರಿದವರಿಗೆಲ್ಲ ಸಮಾನವಾದ ಹಕ್ಕು ಬಾಧ್ಯತೆಗಳು ದೊರೆಯುವುದಾಗಿಯೂ, ಒಂದು ಮತವು ಏರ್ಪಡಿಸಿದರೆ ಅಂತಹ ಮತವು ದೇಶದಲ್ಲೆಲ್ಲ ಹರಡಿದರೆ ಆ ದೇಶದ ಸಂಪತ್ತೂ ಐಕ್ಯಮತವೂ

ಶಕ್ತಿಯೂ ಮತ್ತಾವ ದೇಶಕ್ಕೂ ಬರಲಾರದು. ರಾಜಕೀಯಾಭಿವೃದ್ಧಿಗೆ ಮತವು ಸಹಾಯ ಮಾಡುವುದಾದರೆ ಅಂತಹ ಸಹಾಯವು ಬೌದ್ಧ ಮತದಿಂದ ದೊರೆಯಿತು; ವೀರಶೈವ ಮತದಿಂದ ದೊರೆಯಬಹುದಾಗಿತ್ತು. ರಾಜ್ಯದ ದೃಢತೆಗೂ ಅದರಲ್ಲಿರುವ ಮತಗಳಿಗೂ ಸಂಬಂಧವಿಲ್ಲವೆಂಬುದೂ, ದೇಶಭಕ್ತಿಯೆಂಬುದು ಮತಪ್ರೀತಿಗೆ ಮೀರಿದ ಉನ್ನತ ಭಾವವೆಂಬುದೂ ಸ್ವಲ್ಪ ಮಟ್ಟಿಗೆ ನಿಜ. ಆದರೆ ರಾಜ್ಯಾಂಗ ಪದ್ಧತಿಯು ಸಮಾಜ, ಮತ, ಪಂಗಡ ಮೊದಲಾದವುಗಳಿಗಿಂತ ಬಲಿಷ್ಠರಾಗಿ, ಸರ್ವರಿಗೂ ಸಮಾನವಾದ ಹಕ್ಕುಗಳನ್ನು ಕೊಡಬಲ್ಲುದಾದರೆ, ವ್ಯಕ್ತಿ ಸ್ವಾತಂತ್ರ್ಯ ಮತ ಸ್ವಾತಂತ್ರ್ಯಗಳು ದೇಶ ಭಕ್ತಿಯೆಂಬ ಉನ್ನತ ಭಾವಕ್ಕೆ ಅಡಿಯಾಳುಗಳಾಗಿ ನಿಲ್ಲುವುದಾದರೆ ಯಾವ ಮತವಾದರೇನು? ಯಾವ ಪಂಗಡವಾದರೇನು? ಎಂದು ಹೇಳಬಹುದು; ಭಿನ್ನತೆಯಿದ್ದರೂ ಐಕಮತ್ಯ ಸಾಧನೆಯಾಗುವದೆಂದು ಒಪ್ಪಬಹುದು. ಸದ್ಯದಲ್ಲಿ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕೊಡುವ ಒಂದು ಮತವು ದೇಶದಲ್ಲೆಲ್ಲ ಹರಡುವುದಾದರೆ ಬಾಧಕಕ್ಕಿಂತ ಸಾಧಕವೇ ಹೆಚ್ಚೆಂದು ಹೇಳೋಣ.

❖❖

ಮತಾಚಾರ್ಯರಲ್ಲಿ ಬಸವಣ್ಣನ ಸ್ಥಾನ

["ಭಕ್ತಿ ಭಂಡಾರಿ" ಪುಸ್ತಕ : ಪುಟ : ೧೧೫-೧೨೭]

ಮತವಿಚಾರದಲ್ಲಿ ಬಸವಣ್ಣನವರು ಪ್ರಭಾವವನ್ನೂ, ಅವರ ಸ್ಥಾನವನ್ನೂ ತಿಳಿಯಬೇಕಾದರೆ ಶೈವಮತ ಚರಿತ್ರೆಯ ಜ್ಞಾನವು ಅವಶ್ಯಕ. ಆದ್ದರಿಂದ ಅದರ ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ಸಂಗ್ರಹಿಸಿ ಬರೆಯುತ್ತೇವೆ. ನಮ್ಮ ದೇಶದಲ್ಲಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳು ಗಂಗಾ ಯಮುನಾ ನದಿಗಳಂತೆ ಪರಸ್ಪರ ಮಿಳಿತವಾಗಿಹೋಗಿವೆ. ಇವು ಯಾವ ರೀತಿಯಲ್ಲಿ ಯಾವ ಕಾಲದಲ್ಲಿ ಹೇಗೆ ಮಿಳಿತವಾದುವು ಎಂಬುದನ್ನು ಸುಲಭದಲ್ಲಿ ತಿಳಿಯಲಾಗುವುದಿಲ್ಲ. ಶಿವನೂ ಶೈವಮತವೂ ಮೊದಲು ದ್ರಾವಿಡ ಸಂಸ್ಕೃತಿಗೆ ಸೇರಿದ್ದುವೆಂದೂ ಕಾಲಕ್ರಮದಲ್ಲಿ ವೇದಗಳ ರುದ್ರನೊಂದಿಗೆ ಈ ಶಿವನು ಒಂದಾಗಿ ಹೋಗಿ ಶೈವಮತವು ವೈದಿಕಮತವಾಗಿ ಏರ್ಪಟ್ಟಿತೆಂದೂ ಅನೇಕರು ಅಭಿಪ್ರಾಯಪಡುತ್ತಾರೆ.

ಯಾಜ್ಞಿಕ ಮತವು ಭರತಖಂಡದಲ್ಲಿ ವ್ಯಾಪಿಸಿದಾಗ ಯಜ್ಞ ಯಾಗಾದಿಗಳ ಪ್ರಾಬಲ್ಯವು ಹೆಚ್ಚಾಗಿಯೇ ಇದ್ದಿರಬೇಕು. ಇಲ್ಲಿಯ ಪೂರ್ವ ನಿವಾಸಿಗಳ ಮತ್ತು ಅಸಂಸ್ಕೃತ ಜನರ ಗ್ರಾಮ ದೇವತೆಗಳ ಹಾವಳಿಯಿಂದ ಪ್ರಾಣಿ ಹಿಂಸಾತ್ಮಕವಾದ ಪೂಜೆಯೂ ಇನ್ನೊಂದೆಡೆ ಹೆಚ್ಚಿದಿರಬೇಕು. ಶಾಕ್ತ ಮತ್ತು ಕೆಲವು ಶೈವ ಶಾಖೆಗಳ ವಿಧಿಗಳು ಸಾಧನೆಗಳೂ ರೌದ್ರ ಬಿಭತ್ಸಮಯವಾಗಿದ್ದಿರಬೇಕು. ಭಗವಂತನ ಭಯಂಕರ ಸ್ವರೂಪವನ್ನು ಮಾರ್ಪಡಿಸಿ ಆತನು ಪ್ರೇಮಮಯನೆಂದೂ ದಯಾಮಯನೆಂದೂ ಪತ್ರ. ಪುಷ್ಪ ಫಲಾದಿಗಳಿಂದಲೇ ಸುಲಭ ತೃಪ್ತನೆಂದೂ ಶೈವ ಭಕ್ತಿ ಪಂಥವು ಸಾರತೊಡಗಿತು. ಶೈವಭಕ್ತಿಮಾರ್ಗವನ್ನು ಶ್ವೇತಾಶ್ವತರೋಪನಿಷತ್ತಿನಲ್ಲಿಯೇ ಕಾಣಬಹುದು. ಈ ಶೈವ ಭಕ್ತರಲ್ಲಿ ಜಾತಿ ಭೇದ ಬಂಧನಗಳು ಕಡಿಮೆಯಾಗಿದ್ದುವು. ಹೀನ ಜಾತಿಯ ಭಕ್ತರೂ ಇವರಲ್ಲಿ ಆರಾಧ್ಯರೆಂದೆನಿಸಿದರು. ಯಾರು ಬೇಕಾದರೂ ಈ ಮತಕ್ಕೆ ಸೇರಬಹುದಾಗಿತ್ತು. ಈ ಶೈವಭಕ್ತಿ ಪ್ರವಾಹವನ್ನು ಅಂಡಾರಿಗಳು ಹೆಚ್ಚಿಸಿದರು.

ಯಾಜ್ಞಿಕ ಮತದ ಪ್ರಾಬಲ್ಯವು ಬೌದ್ಧ ಮತ್ತು ಜೈನಮತಗಳಿಂದಲೂ ಕಡಿಮೆಯಾಯಿತು. ಬುದ್ಧದೇವನು ಯಜ್ಞ ಯಾಗಾದಿಗಳನ್ನು ಖಂಡಿಸಿ ಪ್ರೇಮವನ್ನೂ ದಯೆಯನ್ನೂ ತುಂಬಿದನು. ಚಾತುರ್ವರ್ಣ್ಯದ ಕಟ್ಟನ್ನು ತೆಗೆದುಹಾಕಿ. ಮನುಷ್ಯರೆಲ್ಲರೂ ಸಮಾನರು, ಎಲ್ಲರಿಗೂ ಸಮಾನಾಧಿಕಾರವುಂಟು ಎಂದು ಪ್ರಚಾರಮಾಡಿದನು. ಬೌದ್ಧ ಮತ್ತು ಜೈನಮತಗಳು ದಕ್ಷಿಣದೇಶದಲ್ಲಿ ಸುಲಭವಾಗಿ ಹರಡಿದವು. ಆದರೆ ಈ ಮತಗಳು ಮೊದಲಿನ ತಮ್ಮ ಸ್ವಚ್ಛತೆಯನ್ನು ಕಳೆದುಕೊಂಡು

ಕಾಲಕ್ರಮದಲ್ಲಿ ಮಲಿನವಾದವು. ಈ ಬೌದ್ಧ ಮತ್ತು ಜೈನಮತಗಳನ್ನು ಅಡಗಿಸುವುದಕ್ಕಾಗಿ ವೈದಿಕ ಮತವು ಹೋರಾಡುತ್ತಲೇ ಇದ್ದಿತು. ದ್ರಾವಿಡದೇಶದಲ್ಲಿ ಶೈವ ಮತವು ವೈದಿಕಮತದೊಂದಿಗೆ ಸಹಕಾರ ಮಾಡಿ ಆ ಬೌದ್ಧ ಮತ್ತು ಜೈನಮತಗಳ ಪ್ರಾಬಲ್ಯವನ್ನು ಮುರಿಯಿತು.

ಈ ಸಹಕಾರ ತಿರುಜ್ಞಾನ ಸಂಬಂಧಿಯ ಮೂಲಕ ಹೆಚ್ಚಾಗಿ ದೊರೆಯಿತು. ಆತನು ಕ್ರಿ. ಶ. ಏಳನೆಯ ಶತಮಾನದಲ್ಲಿ ಅವತಾರ ಮಾಡಿದನು. ಆಗ ಜೈನ ಮತವು ಉಚ್ಛ್ರಾಯ ಸ್ಥಿತಿಯಲ್ಲಿತ್ತು; ಬೌದ್ಧ ಮತವು ಕ್ಷೀಣದೆಸೆಯಲ್ಲಿತ್ತು. ಈ ಮತಗಳು ಧ್ವಂಸ ಮಾಡುವುದಕ್ಕೂ ಶೈವಮತವನ್ನು ಉದ್ಧಾರ ಮಾಡುವುದಕ್ಕೂ ಆತನು ಬದ್ಧಕಂಕಣನಾದನು. ಶೈವವು ವೇದದ ಸಾರವೆಂದು ಆತನು ತಿಳಿದನು. ಆದುದರಿಂದ ವೇದಗಳಿಗೆ ಪ್ರಾಶಸ್ತ್ಯವನ್ನು ದೊರಕಿಸುವುದೂ, ಜೈನರು ದ್ವೇಷಿಸುತ್ತಿದ್ದ ಯಜ್ಞ ಯಾಗಗಳನ್ನು ಪುನರುಜ್ಜೀವಗೊಳಿಸುವುದೂ, ಜೈನರು ದೂಷಿಸುತ್ತಿದ್ದ ದೇವರುಗಳನ್ನು ಪ್ರತಿಷ್ಠಿಸುವುದೂ, ಗೋ ಬ್ರಾಹ್ಮಣರನ್ನು ಸಂರಕ್ಷಿಸುವುದೂ ಆತನ ಧ್ಯೇಯಗಳಾದವು. ತಿರುಜ್ಞಾನ ಸಂಬಂಧಿಯು ಕೈಕೊಂಡ ಈ ವೈದಿಕ ಮತದುದ್ಧಾರವನ್ನು ಕೆಲವರು ಒಪ್ಪಿದಂತೆ ತೋರುವುದಿಲ್ಲ. ಆದುದರಿಂದ ಏಳನೆಯ ಶತಮಾನದಲ್ಲಿ ಶೈವರಲ್ಲಿ ಕೆಲವರು ವೈದಿಕ ಸಂಪ್ರದಾಯದವರಾಗಿಯೂ, ಕೆಲವರು ಆಗಮಿಕ ಸಂಪ್ರದಾಯದವರಾಗಿಯೂ, ಕೆಲವರು ಪುರಾತನ ಭಕ್ತಿ ಸಂಪ್ರದಾಯದವರಾಗಿಯೂ ಬೇರ್ಪಟ್ಟರೆಂದು ತೋರುತ್ತದೆ. ಈ ಪುರಾತನ ಭಕ್ತಿ ಸಂಪ್ರದಾಯದವರನ್ನು ಬೇಕಾದರೆ ವೀರಶೈವರೆಂದು ಹೇಳಬಹುದು.

ಕರ್ನಾಟಕದಲ್ಲಿಯೂ ಶೈವ ಮತದ ಭಿನ್ನ ಭಿನ್ನ ಶಾಖೆಗಳು ಇದ್ದವು. ಪಾಶುಪತ, ಕಾಳಾಮುಖ, ಕಾಪಾಲಿ, ಶುದ್ಧಶೈವ ಮುಂತಾದವು ನಮಗೆ ಗೋಚರಿಸುತ್ತವೆ. ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿ ಲಕುಲೀಶ್ವರ ಪಂಡಿತರು ಕರ್ನಾಟಕದಲ್ಲಿ ಸಂಚಾರ ಮಾಡಿ ಕಾಳಾಮುಖರ ಮಠಗಳಿಗೂ ದೇವಸ್ಥಾನಗಳಿಗೂ ಪ್ರೋತ್ಸಾಹಕನಾಗಿದ್ದು ಗುಜರಾತ ಪ್ರಾಂತವನ್ನು ಸೇರಿ ಅಲ್ಲಿ ಪಾಶುಪತವನ್ನುದ್ಧಾರಮಾಡಿದಂತೆ ಕಂಡುಬರುತ್ತದೆ. ಕಾಳಾಮುಖರ ಸ್ಥಾನಗಳು ಕರ್ನಾಟಕ ಬಹು ಭಾಗಗಳಲ್ಲಿ ಹರಡಿದ್ದುದೂ, ಆ ಸ್ಥಾನಪತಿಗಳು ಪ್ರಬಲರಾಗಿ ದಂಡನಾಯಕರ, ಮಾಂಡಲಿಕರ ಮತ್ತು ಮಹಾರಾಜರ ಆಶ್ರಿತರಾಗಿದ್ದುದೂ ಕ್ರಿ.ಶ. ೧೧-೧೨ನೆಯ ಶತಮಾನಗಳ ಶಿಲಾಶಾಸನಗಳಲ್ಲಿ ಕಂಡುಬರುತ್ತವೆ. ಕಾಶ್ಮೀರ ರಾಜ್ಯವು ಮುಸಲ್ಮಾನರಿಂದ ಆಕ್ರಾಂತವಾಗಿ ಅಲ್ಲಿದ್ದ ಶೈವ ಪಂಡಿತರಿಗೆ ರಾಜಾಶ್ರಯವು ತಪ್ಪಲು, ಅವರಲ್ಲಿ ಕೆಲ ಕೆಲವರು ದಕ್ಷಿಣದೇಶಕ್ಕೂ ಬಂದು ನೆಲೆಸಿದರು. ಆದುದರಿಂದ ಕ್ರಿ. ಶ.೧೧-೧೨ನೆಯ ಶತಮಾನಗಳಲ್ಲಿ ಶೈವಮತದ ಭಾಗ್ಯವು ಉಕ್ಕೇರಿತು. ಇದಕ್ಕೆ ಇನ್ನು ಕೆಲವು ಕಾರಣಗಳನ್ನು ಹೇಳಬಹುದು. ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ **ತೇವಾರಂ** ಎಂಬ ತಮಿಳು ಕೀರ್ತನ ಗ್ರಂಥವು ಸಂಕಲಿತವಾಯಿತು. ಹಿಂದೆ ತಿರುಜ್ಞಾನ ಸಂಬಂಧಿ, ಅಪ್ಪರ್, ಸುಂದರರ್ ಮುಂತಾದವರು ಹಾಡಿದ್ದ ಭಕ್ತಿರಸಪೂರಿತವಾದ ಕೀರ್ತನೆಗಳು ಇದರಿಂದ ಜನಸಾಮಾನ್ಯರಲ್ಲಿ ಹರಡಿದವು. ಎರಡನೆಯದಾಗಿ ರಾಜೇಂದ್ರಚೋಳನು ಗೋದಾವರಿ ತೀರದಲ್ಲಿದ್ದ ಅಮರ್ಧಕ ಮಠದಿಂದ ಶೈವ ಬ್ರಾಹ್ಮಣರನ್ನು ಕರೆಸಿದನು. ಅವರು ಚೋಳ ಮಂಡಲದಲ್ಲಿ ನೆಲಸಿ ಶೈವ ಸಿದ್ಧಾಂತವನ್ನು ಪ್ರಚಾರ ಮಾಡಿದರಲ್ಲದೆ ಶಿವಾದ್ವೈತ ವೇದಾಂತಕ್ಕೆ ಶಾಸ್ತ್ರ ಸಮ್ಮತವಾದ ತಳಹದಿಯನ್ನು ಹಾಕಿದರು. ಮೂರನೆಯದಾಗಿ ಅರುವತ್ತು ಮೂರು ಪುರಾತನರ ಚರಿತ್ರೆಗಳನ್ನು ಶೇಕ್ಕಿಲಾರನು

ಕಣ್ಣಿಗೆ ಕಟ್ಟುವಂತೆ, ಕರ್ಣ ರಸಾಯನವಾಗುವಂತೆ ಸರಳ ಶೈಲಿಯಲ್ಲಿ ವಿವರಿಸಿದನು. ಈ ಪೆರಿಯ ಪುರಾಣದ ರಚನೆಯು ಒಂದು ದೊಡ್ಡ ಸಾಧನವಾಯಿತು. ಅರುವತ್ತು ಮೂವರ ಚರಿತ್ರೆಗಳು ಜನರಿಗೆ ಸುಲಭ ಪರಿಚಯವಾದವು. ಪಂಚಾಕ್ಷರೀ ಮಹಾತ್ಮ್ಯವೂ ಶೈವ ಭಕ್ತಿಯ ಸ್ವಾರಸ್ಯವೂ ಜನರಿಗೆ ಬೋಧೆಯಾದುವು. ಪರಮೇಶ್ವರನನ್ನು ಸುಲಭದಲ್ಲಿ ಒಲಿಸಬಹುದೆಂಬ ತಿಳುವಳಿಕೆಯು ಬಂತು, ಆ ಪರಮೇಶ್ವರನು ಸ್ತ್ರೀಯರಿಗೂ, ಪುರುಷರಿಗೂ ಉಚ್ಚ ಜಾತಿಯವರಿಗೂ, ನೀಚ ಜಾತಿಯವರಿಗೂ, ಎಲ್ಲರಿಗೂ ಭೇದವನ್ನೆಣಿಸದೆ ಒಲಿಯುವನೆಂಬ ನಂಬಿಕೆಯುಂಟಾಯಿತು. ಮೋಕ್ಷಕ್ಕೆ ಭಕ್ತಿಯು ಸುಲಭೋಪಾಯವೆಂದು ಧೈರ್ಯವುಂಟಾಯಿತು. ಜಾತಿಮತಗಳ ವ್ಯತ್ಯಾಸವಿಲ್ಲದೆ ಸೌಹಾರ್ದಭಾವವು ಎಲ್ಲರಲ್ಲೂ ರೂಢಮೂಲವಾಯಿತು. ತಮ್ಮ ಉಪಾಸನಾ ದೈವವೇ ಪರದೈವವೆಂದೂ ಉಳಿದವು. ತುಚ್ಛವೆಂದೂ ತುಚ್ಛದೈವೋಪಾಸಕರು ತಿರಸ್ಕರಣೀಯರೆಂದೂ ಭಾವನೆಯುಂಟಾಯಿತು. ಸ್ವಮತಾಭಿಮಾನವೂ ನೂರ್ಮಡಿಯಾಯಿತು. ಪುರಾತನ ಶೈವ ಮತವು ತನ್ನ ಸಹಜ ಲಕ್ಷಣಗಳಿಂದ ತಲೆಯೆತ್ತಿ ಸರ್ವತ್ರ ವ್ಯಾಪಿಸುವಂತಾಯಿತು. ಈ ಶೈವ ಅಥವಾ ವೀರಶೈವ ಮತ ಪ್ರವಾಹವು ಕಾವೇರಿ ಪ್ರವಾಹವನ್ನು ದಾಟಿ ಕರ್ನಾಟಕದಲ್ಲೂ ಹರಡಿತು. ಜೈನ ರಾಜ್ಯವಾದ ಗಂಗ ರಾಷ್ಟ್ರವು ಹನ್ನೊಂದನೆಯ ಶತಮಾನದ ಆದಿಯಲ್ಲಿಯೇ ರಾಜೇಂದ್ರ ಚೋಳನಿಂದ ಧ್ವಂಸವಾಗಿತ್ತು. ಆದುದರಿಂದ ಈ ಮತ ಪ್ರವಾಹವು ತಡೆಯಿಲ್ಲದೆ ಮುಂದೆ ನುಗ್ಗಿತು. ಈ ನೂತನ ವಾತಾವರಣದಲ್ಲಿ ಕರ್ನಾಟಕಸ್ಥರಾದ ಶೈವರು ಎಚ್ಚೆತ್ತರು. ಅರುವತ್ತು ಮೂವರು ಪುರಾತನರು ಕನ್ನಡಿಗರೂ ಪರಿಚಿತರಾದರು. ಆ ಶೈವಭಕ್ತಿಯ ಮಹಿಮೆಯು ಕನ್ನಡಿಗರನ್ನು ಆನಂದಗೊಳಿಸಿತು. ಅನೇಕರು ಆ ಪುರಾತನರ ಮಾರ್ಗಾನುವರ್ತಿಗಳಾದರು. ಕರ್ನಾಟಕದಲ್ಲಿ ನೂತನ ಪುರಾತನರು ತಲೆಯೆತ್ತಿದರು.

ಆಗ ಕರ್ನಾಟಕದಲ್ಲಿ ಪ್ರಬಲವಾದೊಂದು ವಾತಾವರವಣವು ಉತ್ಪನ್ನವಾಗಿ, ವೀರಶೈವವು ಅನೇಕರನ್ನು ಆಕರ್ಷಿಸಿತು. ಕೆಲವರು ಕಾಳಾಮುಖಿಯ ಪಂಥದಿಂದ ಬಂದಿರಬಹುದು. ಕೆಲವರು ಲಕುಲೀಶ ಪಾಶುಪತ ಪಂಥದಿಂದ ಬಂದಿರಬಹುದು. ಕೆಲವರು ಶುದ್ಧಶೈವ ಸಂಪ್ರದಾಯದಿಂದ ಬಂದಿರಬಹುದು; ಒಂದು ವೇಳೆ ನೂತನ ಪಂಥದ ಅನಾದಿ ಭಕ್ತರು ಅಜ್ಞಾತವಾಸ ಮಾಡುತ್ತಿದ್ದು, ಈ ಮತ ಪ್ರಚಾರದ ಸೆಳೆತಕ್ಕೆ ಸಿಕ್ಕಿರಬಹುದು. ಹೇಗಾದರೂ ಇರಲಿ, ಎಲ್ಲರೂ ಈ ನೂತನ ಪ್ರವಾಹದಲ್ಲಿ ತೇಲಿ ಬಂದು ಒಬ್ಬ ಅವತಾರ ಪುರುಷನ ಮಹಿಮಾತಿಶಯದಿಂದ ಗಡ್ಡೆಗೇರಿದರು. ಆ ಅವತಾರ ಪುರುಷರ ಪರುಷ ಹಸ್ತಸ್ಪರ್ಶಕ್ಕೆ ಸಿಕ್ಕಿದುದೆಲ್ಲ ಸುವರ್ಣವಾಯಿತು. ಆ ಅವತಾರ ಪುರುಷರ ಮೂರ್ತಿ ಸ್ವರೂಪದಿಂದ ಎಲ್ಲವೂ ಮಾರ್ಪಟ್ಟವು. ನೂತನ ಪುರಾತನರಲ್ಲಿ ಅದ್ವಿತೀಯ ತೇಜೋಮೂರ್ತಿಗಳಾಗಿ ದಿವ್ಯ ಕಾಂತಿಯನ್ನು ಬೀರಿ ಮತವನ್ನೂ ದೇಶವನ್ನೂ ಬೆಳಗಿದ ಆ ಮಹಾತ್ಮರು ಬಸವಣ್ಣನವರಲ್ಲದೆ ಬೇರೆಯಲ್ಲ. ಬಸವಣ್ಣನವರು ಸಕಾಲದಲ್ಲಿ ಜನಿಸಿದರು. ಅವರು ತಮ್ಮ ಕಾಲದ ವರೆಗೂ ಬೆಳೆದುಬಂದಿದ್ದ ಶೈವ ಶಾಖೆಗಳ ಭಿನ್ನ ಭಿನ್ನ ಲಕ್ಷಣಗಳನ್ನು ವಿಮರ್ಶಿಸಿ ರೌದ್ರ ಮತ್ತು ಭಯಾನಕಗಳನ್ನು ತೆಗೆದು ಪ್ರೇಮವನ್ನೂ ದಯೆಯನ್ನು ತುಂಬಿ ಭಕ್ತಸ್ಥಲದಿಂದ ಕ್ರಮವಾಗಿ ಐಕ್ಯಸ್ಥಲದವರಗೂ ದ್ವೈತಾ ದ್ವೈತವನ್ನು ಸ್ಥಾಪಿಸಿದರು ಬಸವಣ್ಣನವರು ಮಾಡಿದ ಜೀರ್ಣೋದ್ಧಾರದಲ್ಲಿ ಅಂಡಾರಿಗಳ ಶೈವಭಕ್ತಿ ಲಕ್ಷಣಗಳೂ, ಪಶು ಪಶುಪತಿ ಸಂಬಂಧದ ದ್ವೈತ ಲಕ್ಷಣಗಳೂ, ಕಾಶ್ಮೀರ ಶೈವದ ಅದ್ವೈತ ಲಕ್ಷಣಗಳೂ ಸೇರಿವೆ.

"ಶೈವ ಸ್ವೈರಗಾದ, ಪಾಶುಪತಿ ಪಥವನರಿಯ, ಕಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇರಿದ, ಸನ್ಯಾಸಿ ಪಾಷಂಡಿಯಾದ, ಕೌಲಿ ಮರುಳಾಗಿ ಹೋದ, ಈ ಆರು ಭಕ್ತಿಸ್ಥಲಕ್ಕೆ ಸಲ್ಲವು ಕೇಳಿರಣ್ಣಾ."

ಎಂದು ಚನ್ನಬಸವೇಶನು ಹೇಳಿದಂತೆ ಬಸವಣ್ಣನವರು ಷಟ್ಸ್ಥಲಾತ್ಮಕ ವೀರಶೈವವನ್ನು ಉದ್ಧಾರ ಮಾಡಿದರು. ಷಟ್ಸ್ಥಲಗಳು ವೇದಾದಿಗಳಲ್ಲಿ ಅಡಗಿರಬಹುದು. ಬಸವಣ್ಣನವರಿಗೆ ಪೂರ್ವದಲ್ಲಿಯೇ ರೇಣುಕಾದಿಗಳು ಅವುಗಳನ್ನು ಸಾಧಿಸಿರಬಹುದು; ಆದರೆ ಮತ ಪ್ರಚಾರದಲ್ಲಿ ಷಟ್ಸ್ಥಲ ಸ್ಥಾಪನಾಚಾರ್ಯರೆಂಬ ಬಿರುದು ಬಸವಣ್ಣನವರಿಗೆ ಮಾತ್ರ ಸಲ್ಲತಕ್ಕದ್ದೆಂದು ನಾವು ಹೇಳುತ್ತೇವೆ. ಲಿಂಗಧಾರಣವೂ ರುದ್ರಾಕ್ಷಿ ವಿಭೂತಿಗಳೂ ಅನಾದಿಯೇ ಆಗಿದ್ದರೂ ಬಸವಣ್ಣನವರು ಅವುಗಳಲ್ಲೆಲ್ಲ ಜೀವ ಕಳೆಯನ್ನು ತುಂಬಿ ಪ್ರಾಣದಾತೃಗಳಾದರು. ಅವುಗಳಿಗೆಲ್ಲ ನಿಷ್ಕಪ್ಪ ಧ್ಯೆಯಗಳನ್ನು ತೋರಿ ಮಾರ್ಗದರ್ಶಕರಾದರು.

ಬಸವಣ್ಣನವರು ಕೈ ಹಿಡಿದು ಧೈರ್ಯವನ್ನೂ ತಿಳಿವಳಿಕೆಯನ್ನೂ ತುಂಬಿ ನೈಜ ಶಕ್ತಿಯನ್ನು ನೈಜ ಸ್ವರೂಪವನ್ನು ತಿಳಿಯಪಡಿಸಿದ್ದರಿಂದ ಅನೇಕರಲ್ಲಿ ಚಿಜ್ಯೋತಿಯು ಬೆಳಗಿ ಅಜ್ಞಾನಾಂಧಕಾರವು ತೊಲಗಿತು. ಕರ್ಮ ಪಾಶಗಳು ಉರಿದುಹೋದವು. ಈ ಮಾನವ ಶರೀರದಲ್ಲಿ ಅಡಗಿರುವ, ನಾನಾ ಕರ್ಮ ಬಂಧನಗಳಿಂದ ಬಿಗಿವಡೆದಿರುವ, ಅನೇಕ ದೌರ್ಬಲ್ಯಗಳಿಂದ ಕುಗ್ಗಿ ಹೋಗಿರುವ ಅಂತರಾತ್ಮನನ್ನು ಅವರು ಹೀಗೆ ಬಿಡುಗಡೆ ಮಾಡಿದರು. ಆ ಅಂತರಾತ್ಮನು ಸ್ವಯಂ ಪ್ರಕಾಶಕನೆಂಬುದು ಲಕ್ಷಾಂತರ ಜನಗಳಿಗೆ ಗೋಚರಿಸಿತು. ಅವರೆಲ್ಲರೂ ಭೂಲೋಕದಲ್ಲಿದ್ದರೂ ಮುಕ್ತಜೀವರಾದರು. ಆ ಮಹಾನುಭಾವರೆಲ್ಲರೂ ಸತ್ಯವನ್ನು ಪ್ರಸಾರ ಮಾಡತೊಡಗಿದರು. ಅವರನ್ನು ನಾವು ಏನೆಂದಾದರೂ ಕರೆಯಬಹುದು. ಬಸವಣ್ಣನವರ ಸಹಾಯಾರ್ಥವಾಗಿ ಭೂಮಿಯಲ್ಲವತರಿಸಿದ ಗಣಗಳೆಂದರೂ ಸರಿಯೆ; ಭೂಮಿಯಲ್ಲಿ ಸಾಮಾನ್ಯ ಮನುಜರಾಗಿ ಜನಿಸಿ, ಬಸವಣ್ಣನವರ ಪರುಷ ಹಸ್ತ ಸ್ಪರ್ಶದಿಂದ ಗಣಗಳಾದರೆಂದರೂ ಸರಿಯೆ. ಒಟ್ಟಿನಲ್ಲಿ ಅವರು ಮಹಾತ್ಮರು, ಆ ಮಹಾತ್ಮರು ಕಾಣಿಸಿಕೊಂಡದ್ದು ಬಸವಣ್ಣನವರ ಜನ್ಮ ಕಾರಣದಿಂದ ಅದು ಮಹಾತ್ಮರಿಗೂ ತಿಳಿದಿದ್ದಿತು. ತಮ್ಮಲ್ಲಿದ್ದ ಅವಲೋಹವನ್ನು ಕಳೆದು ಅಪರಂಜಿಗಳನ್ನಾಗಿ ಮಾಡಿದ ಬಸವಣ್ಣನವರಿಗೆ ಅವರು ಕೃತಜ್ಞರಾಗಿರರೇಕೆ? ಅವರನ್ನು ಸದಾ ಧ್ಯಾನಿಸದೇ ಇರರೇಕೆ? ಬಸವಣ್ಣನವರಿಂದ ಪುನೀತರಾದುದರಿಂದ ಅವರ ನಾಮಸ್ಮರಣೆಯಿಂದಲೇ ದುರಿತೌಘಗಳು ನಾಶವಾಗುವವೆಂದು ತಿಳಿಯರೇಕೆ? ಬಸವಾಕ್ಷರತ್ರಯವು ಕರ್ಮಬಂಧನಗಳನ್ನು ಹರಿಸಿ ಮುಕ್ತಿಯನ್ನೀವುದೆಂದು ನಂಬರೇಕೆ? ನೂರಾರು ವರ್ಷಗಳಾದರೂ ಲಕ್ಷಾಂತರ ಜನರ ಮೇಲೆ ಅವರ ಪ್ರಭಾವ ಮುದ್ರೆಯು ಮಾಸದಿರಬೇಕಾದರೆ, ಆ ಮಹಾನುಭಾವರಲ್ಲಿ ಅದ್ಭುತ ಮೂರ್ತಿ ಸ್ವರೂಪವಿದ್ದಿರಬೇಕು. ಅವರಲ್ಲಿ ದಿವ್ಯ ತೇಜಸ್ಸು ಇದ್ದಿರಬೇಕು.

ಬಸವಣ್ಣನವರ ಜೀವನ ಚರಿತ್ರೆಯು ಇಂತಹುದು. ಅಭಿಮಾನಶಾಲಿಗಳಾದ ವೀರಶೈವ ಮಹಾಜನಗಳು ಬಸವಣ್ಣನವರನ್ನು ಕೇವಲ ನಂದೀಶ್ವರಾವತಾರವೆಂದು ಭಾವಿಸಲು; ಅಭಿಜ್ಞರು ಅವರನ್ನು ಮಾನವರಾಗಿ ಜನಿಸಿ ದೇವತ್ವಕ್ಕೆ ಏರಿದ ಮಹಿಮಾ ಪುರುಷರೆಂದೇ ಭಾವಿಸಲಿ; ಬಸವಣ್ಣನವರು ಮಾಡಿರುವ ಕಾರ್ಯ ನಿರ್ವಾಹದಿಂದ ಅವರನ್ನು ನಾವು ಕಾರಣಪುರುಷರೆಂದು ಹೇಳಲೇಬೇಕು. ಪ್ರಪಂಚದ ಇತಿಹಾಸದಲ್ಲಿ ಮತಸ್ಥಾಪಕರೂ ಮತೋದ್ಧಾರಕರೂ ಯಾವುದೊಂದು ಚಿತ್ಕಳೆಯನ್ನು ಪಡೆದು ಭಗವಂತನ ಸಂಕಲ್ಪಕ್ಕಾಗಿ ಅವತರಿಸಿದರೋ ಅದೇ ಚಿತ್ಕಳೆಯನ್ನು ಪಡೆದು

ಬಸವಣ್ಣನವರೂ ಅವತರಿಸಿದರು. ಮತ ಪ್ರಚಾರಕರಾಗಿ ಅವರ ಸ್ಥಾನವು ಉನ್ನತವಾಗಿದೆ. ತತ್ವಬೋಧಕರಾಗಿ ಅವರ ಸ್ಥಾನವು ಇನ್ನೂ ಉನ್ನತವಾಗಿದೆ. ಭಕ್ತರಾಗಿ ಅವರ ಸ್ಥಾನವು ಅತ್ಯುನ್ನತವಾಗಿದೆ. ಇಂತಹ ಮಹಾತ್ಮರು ಕರ್ನಾಟಕದೇಶದಲ್ಲಿ ಅವತರಿಸಿದರು. ಕರ್ನಾಟಕದ ಕೀರ್ತಿಯು ಅವರಿಂದಲೂ ಹೆಚ್ಚಿರುವುದು. ಸಮಾಜ ಸುಧಾರಣೆಗಾಗಲಿ, ರಾಷ್ಟ್ರ ಸುಧಾರಣೆಗಾಗಲಿ, ಅವರು ಹಾಕಿರುವ ಮೇಲ್ಪಂಕ್ತಿಯನ್ನು ಇಂದಿಗೂ ನಾವು ಅನುಸರಿಸಬೇಕಾಗಿದೆ. ಅವರ ವಚನಗಳಿಂದ ಅವರ ಮೂರ್ತಿ ಸ್ವರೂಪವನ್ನು ಚಿತ್ರಿಸಿ, ಅವರ ಕಾರ್ಯ ಕಲಾಪಗಳಿಂದ ಅವರ ಮಹಿಮೆಯನ್ನು ರೂಪಿಸಿ, ಲೋಕದ ಮುಂದೆ ನಿಜವಾದ ಬಸವಣ್ಣನವರನ್ನು ಸ್ಥಾಪಿಸುವುದೇ ಅವರಿಗೆ ನಾವು ನ್ಯಾಯವಾಗಿ ಸಲ್ಲಿಸುವ ಭಕ್ತಿಯ ಕಾಣಿಕೆಯಾಗಿರುತ್ತದೆ. ಬಸವಣ್ಣನವರು ವೀರಶೈವರಿಗೆ ಮಾತ್ರ ಸಂಬಂಧಪಟ್ಟವರಲ್ಲ; ಕರ್ನಾಟಕಕ್ಕೆ ಮಾತ್ರ ಸಂಬಂಧಪಟ್ಟವರೂ ಅಲ್ಲ; ಅವರು ಇಡೀ ಭರತಖಂಡಕ್ಕೆ. ಇಡೀ ಪ್ರಪಂಚಕ್ಕೆ ಸಂಬಂಧಪಟ್ಟ ಮಹಾಪುರುಷರು.

❖❖

ವೀರಶೈವ ವಿದ್ಯಾಲಯ ಗ್ರಂಥಮಾಲೆಯ ಸಂಖ್ಯೆ : ೨೧

॥ಓಂ॥

ಬಸವ ಸಂದೇಶ

ಬಸವಜಯಂತಿ ಕಾಣಿಕೆ

(ಒಟ್ಟು ಅರ್ಧ ಲಕ್ಷ ಪ್ರತಿಗಳು)

ಸಂಪಾದಕರು

ಹರ್ಡೇಕರ ಮಂಜಪ್ಪ

ಶಾ.ಶ. ೧೮೫೫ನೆಯ

ಪ್ರಕಾಶಕರು

ಶ್ರೀಯುತ ಮುದಿಯಪ್ಪ ಬಸವಪ್ಪ ಬಳ್ಳೊಳ್ಳಿ

ಗದಗ

ಗದಗ ಶ್ರೀ ಶಿವಾನಂದ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು

ನವೀನ ಜಾಗ್ರತಿಯ ಪತ್ರಿಕೆ! ಜಾಗ್ರತೆ ಚಂದಾದಾರರಾಗಿರಿ

ಶರಣ ಸಂದೇಶ

ಸಂಪಾದಕರು

ಶ್ರೀ ಹರ್ಡೇಕರ ಮಂಜಪ್ಪನವರು

ಹಿಂದು ಸಂಘಟನೆಗಾಗಿ ಪ್ರಯತ್ನಿಸುವ ಪತ್ರಿಕೆ!

ಶ್ರೀ ಬಸವಾದಿ ಪ್ರಮಥರ ವೀರಶೈವ ತತ್ವಗಳನ್ನು ಪ್ರಸಾರಗೊಳಿಸುವ ಉಜ್ವಲ ಪತ್ರಿಕೆ!

ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೩ ರೂ. ಮಾತ್ರ

ಮ್ಯಾನೇಜರ - ಶರಣ ಸಂದೇಶ

ಪೋ. ಆಲಮಟ್ಟಿ

ಜಿ. ವಿಜಾಪೂರ

॥ಓಂ॥

ಬಸವ ಸಂದೇಶ



೧. ಎನಗಿಂತ ಕಿರಿಯರಿಲ್ಲ : ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ ಕೂಡಲಸಂದಮದೇವಾ ಎನಗಿದೆ ದಿಬ್ಯ.

೨. ಭವಬಂಧನ ಭವ ಪಾಶವಾದ ಕಾರಣವೇನಯ್ಯಾ? ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಜರಿದೆನಾಗಿ. ಅರಿದಡೀ ಸಂಸಾರವ ಹೊದ್ದಲೀವೆನೆ ಕೂಡಲಸಂಗಮದೇವಾ?

೩. ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ. ಅಕಟಕಟ ಸಂಸಾರ ವೃಥಾ ಹೋಯಿತಲ್ಲಾ! ಕರ್ತೃ ಕೂಡಲಸಂಗಮದೇವಾ ಇದ ತಪ್ಪಿಸಿ ಎನ್ನನ್ನು ರಕ್ಷಿಸಯ್ಯಾ.

೪. ಲೇಸ ಕಂಡು ಮನ ಬಯಸಿ ಬಯಸಿ, ಆಸೆ ಮಾಡಿದರಿಲ್ಲ ಕಂಡಯ್ಯಾ, ತಾಳ ಮರಕ್ಕೆ ಕೈಯನೀಡಿ. ಮೇಲೆ ನೋಡಿ ಗೋಣು ನೊಂದುದಯ್ಯ. ಕೂಡಲಸಂಗಮದೇವ ಕೇಳಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

೫. ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದಯ್ಯಾ, ಚಂದ್ರ ಕುಂದೆ, ಕುಂದುವುದಯ್ಯಾ, ಚಂದ್ರಂಗೆ ರಾಹು ಅಡ್ಡಬಂದಲ್ಲಿ, ಅಂಬುಧಿ ಬೊಬ್ಬಿಟ್ಟಿತ್ತೆ? ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ, ಚಂದ್ರಮನಡ್ಡ ಬಂದನೆ? ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆ ಇಲ್ಲ. ಜಗದ ನೆಂಟ ನೀನೇ ಅಯ್ಯಾ ಕೂಡಲಸಂಗಮದೇವಾ.

೬. ಒಲೆ ಹತ್ತಿ ಉರಿದಡೆ, ನಿಲ್ಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲ್ಲಬಹುದೇ? ಏರಿ ನಿರುಂಬಡೆ ಬೇಲಿ ಕೆಯಿ ಮೇವಡೆ ನಾರಿ ತನ್ನ ಮನೆಯಲ್ಲಿ ಕಳವಡೆ, ತಾಯಿ ಮೊಲೆ ಹಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

೭ ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ. ವಿಚಾರಿಸಿದರೆ ಏನೂ ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪು ಮಾಡಿ, ನೀವಿರಿಸಿದಿರಯ್ಯಾ ಕೂಡಲಸಂಗಮದೇವಾ.

೮. ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ ನಿಮ್ಮ ಚರಣ ಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ.

೯. ತನ್ನಿಚ್ಛೆಯ ನುಡಿದರೆ ಮೆಚ್ಚುವುದೀಮನವು, ಇದರಿಚ್ಛೆಯ ನುಡಿದರೆ ಮೆಚ್ಚದೀ ಮನವು. ಕೂಡಲಸಂಗನ ಶರಣರ ನೆಚ್ಚದ ಮನವ ಕಿಚ್ಚಿನೊಳಗಿಕ್ಕು.

೧೦. ಮುನಿದೆಯಾದೊಡೆ ಒಮ್ಮೆ ಜರಿದಡೆ ಸಾಲದೆ? ಅಕಟಕಟಾ ಮದನಂಗೆ ಮಾರುಗುಡುವರೇ? ಹಗೆಗೆ ಮಾರುಗೊಟ್ಟು ನಿನ್ನವರನೊಪ್ಪಿಸುವರೆ ಕೂಡಲಸಂಗಮದೇವ?

೧೧. ನೀವು ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ, ಎನ್ನ ವಶವೇ ಅಯ್ಯ? ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯ ಕೂಡಲಸಂಗಮ ದೇವಯ್ಯ

೧೨. ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ. ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಸದಂತೆ ಇರಿಸು ಕೂಡಲಸಂಗಮದೇವಾ.

೧೩. ಅಕಟಕಟ ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ ಶಿವ ನಿನಗಿನಿತು ಕೃಪೆಯಿಲ್ಲ, ಏಕೆ ಹುಟ್ಟಿಸಿದೆ ಕೂಡಲಸಂಗಮದೇವಾ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೆ?

೧೪. ನರ ಕೂರಂಬಿನಲ್ಲಿ ಎಚ್ಚವಂಗೊಲಿದೆಯಯ್ಯ! ಅರಳಂಬಿನಲ್ಲೆಚ್ಚ ಕಾಮನನುರುಹಿದೆ. ಇರುಳು ಹಗಲೆನ್ನದೆ ಪ್ರಾಣ ಘಾತವ ಮಾಡಿದ ಬೇಡನ ಕೈಲಾಸಕೊಯ್ದೆಯಯ್ಯಾ! ಎನ್ನನೇತಕ್ಕೊಲ್ಲೆ ಕೂಡಲಸಂಗಮದೇವಾ?

೧೫. ಮಡಿಕೆಯ ಮಾಡುವರೆ ಮಣ್ಣೇ ಮೊದಲು, ತೊಡಿಗೆಯ ಮಾಡುವರೆ ಹೊನ್ನೇ ಮೊದಲು, ಶಿವಪಥವನರಿವಡೆ ಗುರುಪಥವೇ ಮೊದಲು, ಕೂಡಲ ಸಂಗಮದೇವರನರಿವಡೆ, ಶರಣರ ಸಂಗವೇ ಮೊದಲು.

೧೬. ನೀರಿಗೆ ನೈದಿಲೆ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ, ನಾರಿಗೆ ಗುಣವೇ ಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ, ನಮ್ಮ ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ.

೧೭. ಆರಾಧ್ಯ ಪ್ರಾಣಲಿಂಗವೆಂದರಿದು, ಪೂರ್ವಗುಣವಳಿದು ಪುನರ್ಜಾತನಾದಬಳಿಕ, ಸಂಸಾರ ಬಂಧುಗಳೆನ್ನವರೆಂದರೆ, ನಂಟುಭಕ್ತಿ ನಾಯಕ ನರಕ ಇಂತೆಂದುದು ಕೂಡಲಸಂಗನ ವಚನ.

೧೮. ಸಗಣಿಯ ಬೆನಕಂಗೆ ಸಂಪಿಗೆಯರಳಿನಲ್ಲಿ ಪೂಜಿಸಿದರೆ ರಂಜನೆಯಲ್ಲದೆ, ಅದರ ಗಂಜಳ ಬಿಡದಣ್ಣಾ, ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ, ನಿಚ್ಚ ಕೆಸರಲ್ಲದೆ ಅದರಚ್ಚುಗ ಬಿಡದಣ್ಣಾ, ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ, ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ?

೧೯. ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೆ? ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿದ್ದ ಬೆಂತರನಂತೆ ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ.

೨೦. ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆ; ಗಂಡಕೊಂಬುದು ಪಾದೋದಕ, ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ, ಭಾಂಡ ಭಾಜನ ಶುದ್ಧಿ ಇಲ್ಲದವರ ಭಕ್ತಿ, ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

೨೧. ಆನು ನಿಮ್ಮ ಶರಣರಿಗೆ ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ. ಕೂಡಲಸಂಗಮದೇವ ನಿಮ್ಮ ಶರಣರಿಗೆ.

೨೨. ಲಿಂಗದ ಉಂಡಿಗೆಯ ಪಶು ನಾನಯ್ಯ, ವೇಷಧಾರಿಯಾನು. ಉದರಪೋಷಕ ನಾನಯ್ಯ, ಕೂಡಲಸಂಗನ ಶರಣರ ಧರ್ಮದ ಕವಿಲೆಯಾನು.

೨೩. ವೇದಾತೀತ, ಷಡುವರ್ಣರಹಿತ, ಅಷ್ಟತ್ರಿಂಶತ್ಕಳಾತೀತ ವ್ಯೋಮಾತೀತ, ಕೂಡಲಸಂಗಮದೇವ,

೨೪. ಅರ್ಥರೇಖೆ ಇದ್ದಲ್ಲಿ ಫಲವೇನೋ ಆಯುಷ್ಯ ರೇಖೆ ಇಲ್ಲದನ್ನಕ್ಕ? ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು? ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು? ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದುಫಲವೇನು? ನಮ್ಮ ಕೂಡಲಸಂಗನ ಶರಣರನರಿಯ ದವರ ಕೈಯಲ್ಲಿ ಲಿಂಗವಿದ್ದು ಫಲವೇನು?

೨೫. ಹೊಲೆಯ ಹೊಲಬಿನಾದೊಡೆ, ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ, ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯ. ಹೊಲಬುಗೇಡಬೇಡ. ಶಿವಶರಣೆನ್ನಿರಯ್ಯಾ. ನಮ್ಮ ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯ.

೨೬. ದೂಷಕನವನೊಬ್ಬ ದೇಶವ ಕೊಟ್ಟಡೆ, ಆಶೆಮಾಡಿ ಅವನ ಹೊರೆಯಲ್ಲಿರಬೇಡ, ಮಾದರ ಶಿವಭಕ್ತನಾದಡೆ, ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯಾ, ಕಾಡ ಸೊಪ್ಪ ತಂದು ಓಡಿನಲ್ಲಿ ಹುರಿದಿಟ್ಟುಕೊಂಡು ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ.

೨೭. ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ ಅಯ್ಯಾ? ಕೂಡಲಸಂಗಮದೇವ ಭಕ್ತಕಾಯ ಮಮಕಾಯವೆಂಬುದಾಗಿ,

೨೮. ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲವಯ್ಯ, ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲವಯ್ಯ, ನಾದವಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮಂಗೆ ಶಿರಹೋಯಿತ್ತು. ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ. ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ.

೨೯. ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟನಾಗರ ಕಂಡರೆ ಕೊಲ್ಲೆಂಬರಯ್ಯ, ಉಂಬುವ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ! ನಮ್ಮ ಕೂಡಲಸಂಗನ ಶರಣರ ಕಂಡು, ಉದಾಸೀನ ಮಾಡಿದರೆ ಕಲ್ಲತಾಗಿದ ಮಿಟ್ಟೆಯಂತಿಪ್ಪರಯ್ಯಾ.

೩೦. ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ. ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ. ಸ್ಮೃತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ.

೩೧. ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯ. ನಾಯಿಯ ಹಾಲು ನಾಯಿಂಗಲ್ಲದೆ, ಪಂಚಾಮೃತಕ್ಕೆ ಸಲ್ಲದಯ್ಯ. ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥವ್ಯರ್ಥ ಕಂಡಯ್ಯ.

೩೨. ಓಡಲಾರದ ಮೃಗವು ಸೊಣಗಂಗೆ ಮಾಂಸಕೊಡುವಂತೆ, ಮಾಡಲಾಗದು ಭಕ್ತನು, ಕೊಳಲಾಗದು ಜಂಗಮ. ಹಿರಿಯರು ನರಮಾಂಸವ ಭುಂಜಿಸುವರೆ? ತನು ಉಕ್ಕಿ ಮನ ಉಕ್ಕಿ ಮಾಡಬೇಕು ಭಕ್ತಿಯ. ಮಾಡಿಸಿಕೊಳ್ಳಬೇಕು ಜಂಗಮ, ಕೂಡಲಸಂಗಮದೇವಾ.

೩೩. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು ಶಿವನ ಡಂಗುರ, ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿದ್ದನೀವನು ಕೂಡಲಸಂಗಮದೇವ.

೩೪. ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣೀರೋ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಕೂಡಲಸಂಗಮದೇವಾ ನೀವೇ ಪ್ರಮಾಣ.

೩೫. ಪುಣ್ಯಪಾಪಗಳೆಂಬುವು ನಮ್ಮ ಇಷ್ಟವು ಕಂಡಿರೇ, ಅಯ್ಯಾ ಎಂದಡೆ ಸ್ವರ್ಗ; ಎಲವೋ, ಎಂದಡೆ ನರಕ. ದೇವ ಭಕ್ತ, ಜಯ ಜೀಯಾ ಎಂಬ ನುಡಿಯೊಳಗೆ ಕೈಲಾಸವಿಹುದು, ಕೂಡಲಸಂಗಮದೇವಾ.

೩೬. ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ. ಮೃದುವಚನವೇ ಸಕಲ ಜಪಂಗಳಯ್ಯಾ; ಮೃದುವಚನಗಳೇ ಸಕಲ ತಪಂಗಳಯ್ಯಾ. ಸುದುವಿನಯವೇ ಸದಾಶಿವನ ಒಲುಮೆಯಯ್ಯ. ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.

೩೭. ದಯವಿಲ್ಲದ ಧರ್ಮವದಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.

೩೮. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ. ತನಗಾದ ಆಗೇನು? ಅವರಿಗಾದ ಚೇಗೇನು ತನುವಿನ್ನಃ ಕೋಪ ತನ್ನ ಹಿರಿತನದ ಕೇಡು. ಮನದ ಕೋಪ ತನ್ನ ಅರುಹಿನ ಕೇಡು, ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲಸಂಗಮದೇವಾ.

೩೯. ಅರ್ಥಕ್ಕೆ ತಪ್ಪಿದರೇನು? ಪ್ರಾಣಕ್ಕೆ ತಪ್ಪಿದರೇನು? ಅಭಿಮಾನಕ್ಕೆ ತಪ್ಪಿದರೇನು? ಶರಣರು ಶರಣರಲ್ಲಿ ಗುಣವನರಸುವರೆ ಕೂಡಲಸಂಗನ ಶರಣರು ನೊಂದರೆ ಸೈರಿಸಬೇಕು.

೪೦. ಕಾಣದ ಠಾವಿನಲ್ಲಿ ಜರಿದರೆಂದರೆ ಕೇಳಿ ಪರಿಣಾಮಿಸಬೇಕು, ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ, ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೪೧. ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ. ಒರೆಗೆ ಬಣ್ಣಕ್ಕೆ ತಂದೆನ್ನ ಪುಟವನಿಕ್ಕಿ ನೋಡಯ್ಯ. ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡಿಯಾಣಿಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲಸಂಗಮದೇವಾ.

೪೨. ಇರಿಸಿಕೊಂಡು ಭಕ್ತರಾದರೆಮ್ಮವರು, ತರಿಸಿಕೊಂಡು ಭಕ್ತರಾದರೆಮ್ಮವರು, ಜರಿಸಿಕೊಂಡು ಭಕ್ತರಾದರೆಮ್ಮವರು, ಕೊರಿಸಿಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣರಿಗೆ ಮುನಿಸ ತಾಳಿ ಎನ್ನ ಭಕ್ತಿ ಅರೆಯಾಯಿತ್ತು.

೪೩. ಅಪ್ಪನು ಡೋಹರ ಕಕ್ಕಯ್ಯನಾಗಿ. ಮುತ್ತಯ್ಯ ಚನ್ನಯ್ಯನಾದರೆ, ಆನು ಬದುಕುವೆನು, ಮತ್ತಾಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ ನಾನರಿವೆನಯ್ಯ. ಕಷ್ಟ ಜಾತಿ ಜನ್ಮದಲ್ಲಿ ಜನಿಸಿದೆ. ಎನ್ನ ಎನಗಿದು ವಿಧಿಯೇ ಕೂಡಲಸಂಗಮದೇವಾ?

೪೪. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ, ಕಷ್ಟತನದ ಹೊರೆಯ ಹೊರಿಸಿದಿರಯ್ಯ. ಕಕ್ಕಯ್ಯ ನೊಕ್ಕುದನಿಕ್ಕ ನೋಡಯ್ಯ, ದಾಸಯ್ಯ ಶಿವದಾನವನೆರೆಯನೋಡಯ್ಯ, ಮನ್ನಣೆಯ ಚನ್ನಯ್ಯನೆನ್ನ ಮನ್ನಿಸ, ಉನ್ನತ ಮಹಿಮೆ, ಕೂಡಲಸಂಗಮದೇವಾ. ಶಿವಧೋ ಶಿವಧೋ.

೪೫. ಶೆಟ್ಟಿ ಎಂಬೆನೆ ಸಿರಿಯಾಳನ, ಮಡಿವಾಳನೆಂಬೆನೆ ಮಾಚಯ್ಯನ, ಡೋಹರನೆಂಬೆನೆ ಕಕ್ಕಯ್ಯನ, ಮಾದರನೆಂಬೆನೆ ಚನ್ನಯ್ಯನ. ಆನು ಹಾರುವನೆಂದಡೆ ಕೂಡಲಸಂಗಮದೇವಯ್ಯ ನಗುವನಯ್ಯ.

೪೬. ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ; ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯಾ. ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ! ಎನ್ನನೇತಕ್ಕೆ ಅರಿಯಿರಿ ಕೂಡಲಸಂಗಮದೇವ?

೪೭. ತನುವಿನಲೊಂದಿಟ್ಟು ಮನದಲೆರಡಿಟ್ಟಡೆ ಒಲ್ಲನೊಲ್ಲನಯ್ಯ ಲಿಂಗವು. ಒಲ್ಲನೊಲ್ಲನಯ್ಯ, ಪರಚಿಂತೆಯನೊಲ್ಲ ಕೂಡಲಸಂಗಮದೇವ.

೪೮. ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು. ಭಕ್ತದೇಹಿಕದೇವ ಅನಿಮಿಷನಾಗಿ ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು.

೪೯. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲಸಂಗಮದೇವ.

೫೦. ಎಲೆಎಲೆ ಮಾನವ ಅಳಿಯಾಸೆ ಬೇಡವೋ, ಕಾಳಬೆಳದಿಂಗಳಸಿರಿ ಸ್ಥಿರವಲ್ಲ, ಕೇಡಿಲ್ಲದ ಪದವಿ ಕೊಡುವ ಕೂಡಲಸಂಗಮದೇವನ ಮರೆಯದೆ ಪೂಜಿಸು.

೫೧. ನೀರಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತ ಮಾಡುವ ಭರವ ನೋಡ, ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯವ ನಿಶ್ಚಯಿಸದೆ.

೫೨. ಅಚ್ಚುಗವೇಕಯ್ಯ ಸಂಸಾರದೊಳಗೆ? ನಿಚ್ಚನಿಚ್ಚ ಶಿವರಾತ್ರಿಯ ಮಾಡುವದು, ಬೇಗಬೇಗ ಅರ್ಚನೆ ಪೂಜನೆಯ ಮಾಡುವುದು, ಕೂಡಲಸಂಗನ ಕೂಡುವುದು.

೫೩. ಅಂದು ಇಂದು ಮತ್ತೊಂದೆನಬೇಡ. ದಿನವೊಂದೇ ಶಿವಶರಣೆಂಬುವಂಗೆ, ದಿನವಿಂದೇ ಹರ ಶರಣೆಂಬುವಂಗೆ ದಿನವೊಂದೇ ನಮ್ಮ ಕೂಡಲಸಂಗನಮಾಣದೆ ನೆನೆವಂಗೆ.

೫೪. ಹೊಲಬುಗೊಂಡರಸಬೇಡ, ಬಿಲಿತು ತರಬೇಡ, ಒಲಿದೊಮ್ಮೆ ಶಿವಶರಣೆನ್ನಿರಯ್ಯ, ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ, ಕೂಡಲಸಂಗಮದೇವ ಭಕ್ತಿ ಲಂಟಪನಾಗಿ.

೫೫. ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮನ ನೋಡಿರೆ, ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ. ಸ್ಥಾವರ ಜಂಗಮ ಒಂದೇ ಎಂದುದು ಕೂಡಲಸಂಗನ ವಚನ.

೫೬. ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು, ಮರ್ಮವನರಿಯದ ಮಾಟ ಸುಯಿಧಾನದ ಕೇಡು. ಬಂದ ಸಮಯೋಚಿತವನರಿಯದಿದ್ದರೆ ನಿಂದಿರಲೊಲ್ಲ ಕೂಡಲಸಂಗಮದೇವ.

೫೭. ಎರೆದರೆ ನೆನೆಯದು. ಮರೆದರೆ ಬಾಡದು. ಹುರುಳಿಲ್ಲ ಹುರಳಿಲ್ಲ ಲಿಂಗಾರ್ಚನೆ. ಕೂಡಲ ಸಂಗಮದೇವ ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು.

೫೮. ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು. ತನುಮನಧನವ ಸವೆಸಲೇಬೇಕು. ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು.

೫೯. ಮಾಡಿಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳರೆ ಕೂಡಿಕೊಂಬ ನಮ್ಮ ಕೂಡಲಸಂಗಮದೇವ.

೬೦. ಮತ್ತೊಂದ ಕಾಣದಂತೆ ಮತ್ತೊಂದ ಕೇಳದಂತೆ ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸಯ್ಯ ಕೂಡಲಸಂಗಮದೇವ.

೬೧. ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯ. ಬಡವನೆಂದೆನ್ನ ಕಾಡದಿರಯ್ಯ, ಎನಗೊಡೆಯರುಂಟು ಕೂಡಲಸಂಗನ ಶರಣರು.

೬೨. ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ, ಗಣತಿಂಥಿಣಿಯೊಳಗಿರಿಸೆನ್ನ ಲಿಂಗವೆ. ಶಿವ ಶಿವ ಕೂಡಲಸಂಗಮದೇವ ಸೆರಗೊಡ್ಡಿ ಬೇಡುವೆನು.

೬೩. ಮನೆದೈವವು ಕುಲದೈವವು ಎನಗೆ ನಿಮ್ಮವರಯ್ಯ. ತನುಮೀಸಲು ಮನಮೀಸಲು, ನಯನ ಮೀಸಲು ಎನ್ನ ಕೂಡಲಸಂಗಮದೇವ. ನಿಮ್ಮ ಶರಣರಿಗೆ.

೬೪. ಶಿವಭಕ್ತರೇ ಅಧಿಕರು ನೋಡಯ್ಯ. ಇವರಿಗಧಿಕವಾಗಿ ಜಂಗಮವ ಕಂಡೆ. ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲಸಂಗಮದೇವ.

೬೫. ತನುವ ನೋಯಿಸಿ ಮನವ ಬಳಲಿಸಿ ನಿಮ್ಮ ಪಾದ ವಿಡಿದವರೊಳರೇ? ಈ ನುಡಿ ಸುಡದಿಹುದೇ? ಕೂಡಲಸಂಗಮದೇವ ಶಿವಭಕ್ತರ ನೋವೇ ಅದು ಲಿಂಗದ ನೋವು.

೬೬. ಜಂಗಮನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೋ ಶಿವ ಶಿವ! ನಿಂದಿಸುವ ಪೂಜಿಸುವ ಪಾತಕವ ಕೇಳಲಾಗದು, ಗುರುವಿನ ಗುರು ಜಂಗಮವಿಂತೆಂದುದು ಕೂಡಲಸಂಗನ ವಚನ.

೬೭. ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ, ಓಡಲಾಗದು ಲೆಂಕನು, ಬೇಡಲಾಗದು ಭಕ್ತರು. ಓಡೆನಯ್ಯ ಬೇಡೆನಯ್ಯ ಕೂಡಲಸಂಗಮದೇವ.

೬೮. ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಪರವಧುವನು ಮಹಾದೇವಿಯೆಂಬೆ ಕೂಡಲಸಂಗಮದೇವ.

೬೯. ಶ್ರೀ ವಿಭೂತಿ ರುದ್ರಾಕ್ಷಿ ಇದ್ದವರ ಲಿಂಗವೆಂಬೆ, ಇಲ್ಲದವರ ಭವಿಯೆಂಬೆ, ಕೂಡಲಸಂಗಮದೇವ ಸದುಭಕ್ತರ ನೀನೆಂಬೆ.

೭೦. ದೇವಸಹಿತಭಕ್ತಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮಪುರಾತನರಾಣೆ, ತಲೆದಂಡ, ಕೂಡಲಸಂಗಮದೇವ ಭಕ್ತರಲ್ಲಿ ಕುಲವನರಿಸಿದರೆ ನಿಮ್ಮ ರಾಣಿವಾಸದಾಣೆ.

೭೧. ಗುರುಲಿಂಗ ಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾಪ್ರಸಾದವಾಗಿ ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲಸಂಗಮದೇವ.

೭೨. ಒಂದುವನರಿಯದ ಸಂದೇಹಿ ನಾನಯ್ಯ, ನಂಬುಗೆಯಿಲ್ಲದ ಡಂಭಕ ನಾನಯ್ಯ, ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ನೀರಲ್ಲದ್ದು.

೭೩. ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರು ಇಲ್ಲವಯ್ಯಾ, ಕೂಡಲಸಂಗಮದೇವ ಹಾಲಲ್ಲದ್ದು ನೀರಲ್ಲದ್ದು.

೭೪. ಪರಚಿಂತೆ ಎಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲಸಂಗಯ್ಯನೊಲಿದಾನೋ ಒಲ್ಲನೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು.

೭೫. ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ, ಒಬ್ಬನೇ ಕಾಣೀರೋ, ಇಬ್ಬರೆಂಬುದು ಹುಸಿ ನೋಡಾ, ಕೂಡಲಸಂಗಮದೇವನೊಬ್ಬನಲ್ಲದಿಲ್ಲೆಂದಿತ್ತು ವೇದ.

೭೬. ಮಾತಿನ ಮಾತಿಂಗೆ ನಿನ್ನ ಕೊಂದಾರೆಂದು ಎಲೆ ಹೋತೆ ಅಳು ಕಂಡೆಯಾ, ವೇದವನೋದಿದವರ ಮುಂದೆ ಅಳುಕಂಡೆಯಾ ಹೋತೆ, ಶಾಸ್ತ್ರವನೋದಿದವರ ಮುಂದೆ ಅಳುಕಂಡೆಯಾ, ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವನವರ.

೭೭. ನೀರಕಂಡಲ್ಲಿ ಮುಳುಗುವರಯ್ಯ, ಮರನ ಕಂಡಲ್ಲಿ ಸುತ್ತುವರಯ್ಯ, ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ.

೭೮. ಕೊಲ್ಲುವನೆ ಮಾದಿಗನು, ಹೊಲಸು ತಿಂಬುವನೇ ಹೊಲೆಯ, ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

೭೯. ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸರಿಬಾರದು, ಸರಿಯಲ್ಲ ನೋಡಾ. ಕೂಡಲಸಂಗಮದೇವ ನಿಮ್ಮ ಶರಣರ ಚಮ್ಮಾವುಗೆಗೆ.

೮೦. ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ, ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ, ಕೇಳು ಕೂಡಲಸಂಗಮದೇವ ಮರಣವೇ ಮಹಾನವಮಿಯೆನಗೆ.

೮೧. ಅಣ್ಣತಮ್ಮ ಹೆತ್ತಪ್ಪ ಗೋತ್ರವಾದಡೇನು? ಲಿಂಗಸಾಹಿತ್ಯರಲ್ಲದವರ ಎನ್ನವರೆನ್ನೆನಯ್ಯ, ನಂಟುಭಕ್ತಿ ನಾಯಕ ನರಕ ಕೂಡಲಸಂಗಮದೇವ.

೮೨. ಒಡೆಯರಿಲ್ಲದ ಮನೆಯ ತುಡುಗುಣಿನಾಯಿ ಹೋಗುವಂತೆ ನೀನಿಲ್ಲದವರ ಮನೆಯನು ಹೊಗೆನು. ಸಂಗಯ್ಯ, ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯ ನೀನಿದ್ದವನೇ ಕುಲಜನು.

೮೩. ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ಕೂಡಲಸಂಗಮದೇವ ನೀ ಸಾಕ್ಷಿಯಾಗಿ ಛೀ ಎಂಬೆನು.

೮೪. ಕಲಿಯ ಕೈಯ ಕೈದುವಿನಂತಿರಬೇಕಯ್ಯ, ಎಲುದೋರಿ ಸರಸವಾಡಿದರೆ ಸೈರಿಸಬೇಕಯ್ಯ, ರಣದಲ್ಲಿ ತಲೆಹರಿದು ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೊಲಿವ ಕೂಡಲಸಂಗಮದೇವ.

೮೫. ಮೌನದಲುಂಬುದು ಆಚಾರವಿಲ್ಲ, ಲಿಂಗಾರ್ಪಿತವ ಮಾಡಿದ ಬಳಿಕ ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು. ಕರಣ ವೃತ್ತಿಗಳಡಗುವವು. ಕೂಡಲಸಂಗನ ನೆನೆಯುತ್ತ ಉಂಡರೆ.

೮೬. ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ ಜ್ಞಾನತ್ರಯಗಳೇನಾದವು? ಕೂಡಲ ಸಂಗಮದೇವಾ ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನ.

೮೭. ಮನವಂಚನೆಯ ಅನ್ಯಲಿಂಗಾರ್ಚನೆ. ಅದು ನಿಜವಲ್ಲ, ನಿಜವಲ್ಲ ಕೂಡಲಸಂಗಮದೇವನು ಮನದಂತರಿಯಾಗಿ ತಾನಾಗಿ.

೮೮. ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ? ಎನ್ನೊಳಗಿದ್ದು ನಿನ್ನ ತೋರಲಿಕ್ಕೆ ನೀನೇ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವ.

೮೯. ಅರಸು ಮುನಿದರೆ ನಾಡೊಳಗಿರಬಾರದಯ್ಯ, ಗಂಡ ಮುನಿದರೆ ಹೆಂಡತಿಯಾಗಿರ ಬಾರದಯ್ಯ, ಕೂಡಲಸಂಗಮದೇವ, ಜಂಗಮ ಮುನಿದರೆ ನಾನೆಂತು ಬದುಕುವೆ?

೯೦. ಜನ್ಮಕ್ಕೆ ಹೋಗಲೀಯ್ಯದೆ ಸೋಹಂಮೆಂದೆನಿಸದೆ, ದಾಸೋಹಂಮೆಂದೆನಿಸಯ್ಯ, ಲಿಂಗ ಜಂಗಮದ ಪ್ರಸಾದದ ನಿಲವತೋರಿ ಬದುಕಿಸಯ್ಯ ಕೂಡಲಸಂಗಮದೇವ.

೯೧. ಆದ್ಯರ ವಚನ ಆದ್ಯರಿಗಾಯಿತ್ತು. ವೇದ್ಯರಿಗಲ್ಲದೆ ಸಾಧ್ಯವಾಗು; ಕೂಡಲಸಂಗಮದೇವ ನಿಮ್ಮನುಭಾವದಿಂದೆನ್ನ ಭವಂ ನಾಸ್ತಿಯಾಯಿತ್ತು.

೯೨. ಉಪಮಿಸಬಾರದ ಉಪಮಾತೀತರು, ಕಾಲಕರ್ಮರಹಿತರು, ಭವರಹಿತರು ಕೂಡಲಸಂಗಮದೇವ ನಿಮ್ಮ ಶರಣರು.

೯೩. ಬ್ರಹ್ಮಂಗೆ ವಾಕ್ಪರುಷ, ವಿಷ್ಣುವಿಂಗೆ ನಯನ ಪರುಷ, ರುದ್ರಂಗೆ ಹಸ್ತಪರುಷ, ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷ.

೯೪. ಅರಿದುದನರಿಯಲೊಲ್ಲದು, ಅದೆಂತಯ್ಯ? ಮರೆದುದ ಮರೆಯಲೊಲ್ಲದು, ಅದೆಂತಯ್ಯ? ಅರಿದು ಮರೆದ ಮನವ ಕೂಡಲಸಂಗಯ್ಯ ತಾನೇ ಬಲ್ಲ.

೯೫. ತನು ಮನ ಧನವೆಂಬ ಕನ್ನಡಿಯ ನೋಡಯ್ಯ. ಎನ್ನದು ಅಲ್ಲ, ನಿನ್ನದು ಅಲ್ಲ, ಬರಿಯ ಭ್ರಮೆಯ ಮಾತು. ಭ್ರಮೆಗೊಳಗಾಗದೆ ನಿಮ್ಮ ಶ್ರೀ ಚರಣವ ಬಿಡೆ ಕೂಡಲಸಂಗಮದೇವ.

೯೬. ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಷೆ ತೀರಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕವಿಗರ್ಭಣೆಗೆ? ಅಂಜಲೇಕೋ ಕೂಡಲಸಂಗಮದೇವ ನಿಮ್ಮಾಳಾಗಿ?

೯೭. ಪಾಪಿಗೆ ಕೋಪಿಗೆ ಭಕ್ತಿಗೆ ಭಕ್ತಿಯಾಗೆಂದಡೆ ಅಪ್ಪುದೆ? ನಾರಿವಾಳವಕ್ಕುದೆ ನಾಯಿಗೆ? ಕೂಡಲಸಂಗಮದೇವ ನಿಮ್ಮ ನಂಬಿಯೂ ನಂಬದ ಡಂಭಕರಿಗೆ.

೯೮. ಗುರೂಪದೇಶ ಮಂತ್ರ ವೈದ್ಯ, ಜಂಗಮೋಪದೇಶ ಶಸ್ತ್ರ ವೈದ್ಯ ನೋಡಾ. ಭವರೋಗವ ಕಳೆವ ಪರಿಯ ನೋಡಾ. ಕೂಡಲಸಂಗನ ಶರಣರನುಭಾವ ಮಡಿವಾಳನ ಕಾಯಕದಂತೆ.

೯೯. ಸಂಚಲವಿಲ್ಲದ ಭಕ್ತಿ, ವಂಚನೆಯಿಲ್ಲದ ಮಹಂತರ ತೋರಾ, ತನುಶುಚಿಗಳ ಮನಶುಚಿಗಳ ತೋರಾ, ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸು ಕೂಡಲಸಂಗಮದೇವ.

೧೦೦. ವೇದವನೋದಿದರೇನು? ಶಾಸ್ತ್ರವ ಕೇಳಿದರೇನು? ಜಪವ ಮಾಡಿದರೇನು? ತಪವಮಾಡಿದರೇನು? ಏನು ಮಾಡಿದರೇನು ನಮ್ಮ ಕೂಡಲಸಂಗಯ್ಯನ ಮನಮುಟ್ಟದನ್ನಕ್ಕ?

❖❖

ಕೆಲವು ಕಠಿಣ ಶಬ್ದಗಳ ಅರ್ಥ

ಅಚ್ಚುಗ–ಪ್ರೀತಿ
ಅಟ್ಟು–ಅಡಿಗೆಮಾಡಿ
ಉಂಡಿಗೆ–ಮುದ್ರೆ
ಓಡು–ಹುರಿಯುವ ಹಂಚು
ಕಮ್ಮಟ–ಟಂಕಶಾಲೆ
ಕವಿಲೆ –ಆಕಳು
ಕಾಳ–ಕತ್ತಲೆ
ಕೈದು –ಕತ್ತಿ
ಕೆಯಿ–ಬೆಳೆ, ಹೊಲ
ಕೆಳೆ–ಗೆಳೆಯ
ಚಮ್ಮಾವುಗೆ–ಮಚ್ಚೆಯ ಜೋಡು
ದಿಬ್ಯ–ಪ್ರಮಾಣ, ಪರೀಕ್ಷೆ
ನಾರಿವಾಳ–ತೆಂಗು
ನಿಧಾನ–ದ್ರವ್ಯ
ಬಿಲಿತು–ಕೊಂಡುಕೊಂಡು
ಬೆಂತರ–ಪಿಶಾಚಿ
ಮುಂಡೆ–ಜುಟ್ಟ
ಮಿಟ್ಟೆ –ದಿನ್ನಿ
ಲೆಂಕ–ಸೇವಕ
ವಿಗರ್ಭಣೆ–ಕೋಪ, ನಿಂದೆ
ವ್ಯೋಮ–ಆಕಾಶ
ಸೊಣಗ–ನಾಯಿ
ಹಂದೆ–ಹೇಡಿ
ಹೊಲಬು–ಜ್ಞಾನ, ದಾರಿ

❖❖

॥ ಓಂ ॥

ಭಕ್ತಿಯ ಬೆಳಕು



ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಗೆ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ
—ಶ್ರೀ ಪ್ರಭುದೇವರು

ಸಂಪಾದಕರು
ಹರ್ಡೇಕರ ಮಂಜಪ್ಪನವರು

೧. **ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲವಯ್ಯ, ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲವಯ್ಯ, ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮನ ಶಿರಹೋಯಿತ್ತು. ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ.**

ಅರ್ಥ : ವೀಣೆ ಮೊದಲಾದ ಅನೇಕ ಮಂಜುಳ ವಾದ್ಯಗಳನ್ನು ಬಾರಿಸಿದರಾಗಲಿ ಅಥವಾ ವೇದಾದಿ ಗ್ರಂಥಗಳನ್ನು ಓದಿ ಮಹಾ ಪಂಡಿತನಾದರಾಗಲಿ ಶಿವನು ಮೆಚ್ಚುವುದಿಲ್ಲ. ಅವುಗಳಿಗೆ ಮೆಚ್ಚುತ್ತಿದ್ದರೆ ಬಹು ಚೆನ್ನಾಗಿ ವೀಣೆಯನ್ನು ಬಾರಿಸಿದ ರಾವಣನು ಯುದ್ಧದಲ್ಲಿ ಸೋತು ಸತ್ತನೇಕೆ? ವೇದಗಳನ್ನು ತಿಳಿದ ಬ್ರಹ್ಮನು ತನ್ನ ಶಿರಸ್ಸನ್ನೇಕೆ ಕಳೆದುಕೊಂಡನು? ಆದಕಾರಣ ಶಿವನು ಸಂಗೀತಕ್ಕಾಗಲಿ ಅಥವಾ ಸಾಹಿತ್ಯಕ್ಕಾಗಲಿ ಮೆಚ್ಚುವುದಿಲ್ಲ, ಆತನು ಭಕ್ತಿಗೆ ಮಾತ್ರ ಒಲಿಯುತ್ತಾನೆ.

೨. **ಮಾತಿನ ಮಾತಿನಲ್ಲಪ್ಪುದೆ ಭಕ್ತಿ? ಮಾಡಿ ತನು ಸವೆಯದನ್ನಕ್ಕ, ಮನಸವೆಯದನ್ನಕ್ಕ, ಧನಸವೆಯದನ್ನಕ್ಕ, ಅಪ್ಪುದೆ ಭಕ್ತಿ? ಕೂಡಲಸಂಗಮದೇವನೆಲುದೋರೆ ಸರಸವಾಡುವನು. ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?**

ಅರ್ಥ: ಭಕ್ತಿಯ ರೀತಿಯನ್ನು ಈ ವಚನದಲ್ಲಿ ಹೇಳಿದ್ದಾರೆ. ಗುರುಗಳ ಮತ್ತು ಶಿವಭಕ್ತರ ಸೇವೆಯನ್ನು ಮಾಡಿ ಈ ದೇಹವನ್ನು ಸವೆಸಬೇಕು. ಲಿಂಗಪೂಜೆ, ಸ್ತುತಿ, ಧ್ಯಾನಗಳಲ್ಲಿ ಮನಸ್ಸು ಮಗ್ನವಾಗಿರಬೇಕು. ತನ್ನ ಸಂಪತ್ತನ್ನು ಶಿವಭಕ್ತರ ಹಿತಾರ್ಥವಾಗಿ ವಿನಿಯೋಗಿಸಲು ಜಂಗಮಮೂರ್ತಿಗಳಿಗೆ ಅರ್ಪಿಸಿ ಅದನ್ನು ಸವೆಸಬೇಕು.

ಹೀಗೆ ತನುಮನ ಧನಗಳನ್ನು ಸವೆಸುವುದಕ್ಕೇನೇ ತ್ರಿವಿಧ ದಾಸೋಹವೆಂದು ಹೇಳುತ್ತಾರೆ. ಹೀಗೆ ಮಾಡದೆ ಬರೆ ಮಾತುಗಳನ್ನು ಎಷ್ಟಾಡಿದರೇನು? ಭಕ್ತಿಯೆಂದೆನಿಸುವುದೇ? ಇಲ್ಲವೇ ಇಲ್ಲ. ಶಿವನು ನಾನಾ ರೀತಿಗಳಿಂದ ನಮಗೆ ವಿಪತ್ತುಗಳನ್ನುಂಟುಮಾಡಿ ನಮ್ಮ ಎಲವುಗಳೇ ಹೊರಗೆ ಬರುವಂತಹ ದುಃಖವನ್ನು ಕೂಡಾ ನಮಗೆ ಕೊಡಬಹುದು. ಆಗ ಅವುಗಳನ್ನೆಲ್ಲಾ ಸೈರಿಸಿಕೊಂಡು ತನುಮನಧನಗಳನ್ನು ಗುರುಲಿಂಗಜಂಗಮಗಳಿಗೆ ಸವೆಸುವುದೇನೇ ಭಕ್ತಿಯು.

೩. **ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ, ಹಲವು ಪರಿಯಲಿ ವಿಭೂತಿಯ ಧರಿಸಿ, ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು ತಾಂಬೂಲಗೊಂಡು ಹೋಹುದಲ್ಲ. ತನುಮನ ಧನವ ಸಮರ್ಪಿಸದವರ ಕೂಡಲಸಂಗಮದೇವನೆಂತೊಲಿವ?**

ಅರ್ಥ : ನಾನಾ ರೀತಿಗಳಿಂದ ರುದ್ರಾಕ್ಷಿಗಳನ್ನು ಕಟ್ಟಿಕೊಂಡು ಮತ್ತು ವಿಭೂತಿಯನ್ನು ಹಚ್ಚಿಕೊಂಡು ಅನೇಕ ಪ್ರಕಾರ ಕುಣಿಯುತ್ತ ಗಣಾರಾಧನೆ ನಡೆದಾಗ ಬೇಕಾದುದನ್ನು ಊಟಮಾಡಿ ಸಂತೋಷದಿಂದ ತಾಂಬೂಲವನ್ನು ತೆಗೆದುಕೊಂಡು ಹೋಗುವುದು ಭಕ್ತಿಯೇ? ಅಲ್ಲ ಅಲ್ಲ, ಇಂಥ ಡಂಭಾಚಾರಗಳು ಭಕ್ತಿಯ ಲಕ್ಷಣಗಳಲ್ಲ, ಶಿವಭಕ್ತರ ಹಿತಕ್ಕಾಗಿ ಯಾರು ತನ್ನ ತನುಮನಧನಗಳನ್ನು ಅರ್ಪಿಸುವುದಿಲ್ಲವೋ ಅವರಿಗೆ ಶಿವನು ಹೇಗೆ ತಾನೆ ಒಲಿವನು?

೪. **ತನುಮನಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯ ಮಳಲೊಟ್ಟೆಯ ನುಡಿವರು ನೀವೆಲ್ಲ ಕೇಳಿರೆ. ತಲೆಯಿಲ್ಲದ ಕೋಲು ಹೊಳ್ಳಹಾರುವದಲ್ಲದೆ ಗುರಿಯ ತಾಕಬಲ್ಲುದೆ? ಮಾಯಾಪಾಶವ ಹಿಂಗಿ ಮನದಗಂಟು ಬಿಡದನ್ನಕ್ಕ ಕೂಡಲಸಂಗಮದೇವನೆಂತೊಲಿವನಯ್ಯ?**

ಅರ್ಥ : ಶಿವಭಕ್ತರ ಸೇವೆಗೆ ತನ್ನ ದೇಹವು ಸ್ವಲ್ಪವಾದರೂ ದಣಿಯದಂತೆ ಶಿವನ ಪೂಜೆ, ಸ್ತುತಿ, ಜಪಾದಿಗಳಲ್ಲಿ ಮನಸ್ಸನ್ನು ಸ್ವಲ್ಪ ಕಾಲವಾದರೂ ಇಡದಂತೆ ಮತ್ತು ತನ್ನ ಸಂಪತ್ತಿನಲ್ಲಿ ಒಂದು ಕಾಸನ್ನಾದರೂ ಶಿವಭಕ್ತರ ಹಿತಾರ್ಥವಾಗಿ ಜಂಗಮಮೂರ್ತಿಗೆ ಅರ್ಪಿಸದಂತೆ ಇವೆಲ್ಲವನ್ನೂ ವಿಷಯೋಪಭೋಗಕ್ಕಾಗಿ ಕಾದಿಟ್ಟುಕೊಂಡು ಭಕ್ತಿ, ಜ್ಞಾನ, ವೈರಾಗ್ಯ, ಆಚಾರ ಮೊದಲಾದ ವಿಷಯಗಳಲ್ಲಿ ಬೇಕಷ್ಟು ಮಾತುಗಳನ್ನಾಡಿದರೆ ಭಕ್ತಿಯೇ? ಅಲ್ಲ, ಅಲ್ಲ ಕೋಲಿನ ತುದಿ ಚಂಡುಳ್ಳದ್ದಾಗಿದ್ದರೆ ಗುರಿ ಕಟ್ಟಿದಲ್ಲಿಗೆ ಹೋಗಿ ತಾಗುವುದು, ಇಲ್ಲದಿದ್ದರೆ ಗಾಳಿಗೆ ಹಾರಿಹೋಗುವುದಿಲ್ಲವೆ? ಹಾಗೆಯೇ ಶಿವನಲ್ಲಿಗೆ ಹೋಗಿ ಸೇರಬೇಕಾದರೆ ಈ ತನುಮನ ಧನಗಳ ಅರ್ಪಣೆಯು ಬೇಕೇಬೇಕು. ಇವಿಲ್ಲದೆ ಬರೆ ಮಾತುಗಳಿಂದ ಶಿವನನ್ನು ಸೇರಲಾಗುವುದೇ? ವಿಷಯೋಪಭೋಗದ ಅಪೇಕ್ಷೆ ಇಲ್ಲದಂತಾಗಿ ಮನಸ್ಸಿನ ಮಲಿನತ್ವ ಹೋದ ವಿನಾ ಈ ತನುಮನಧನಗಳ ತ್ಯಾಗವು ಸಂಭವಿಸುವುದಿಲ್ಲ, ಈ ಭಕ್ತಿಯುಂಟಾಗದೆ ಶಿವನೆಂತು ಮೆಚ್ಚುವನು?

೫. **ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ. ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ. ಶ್ರುತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ? ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ.**

ಅರ್ಥ : ಧರ್ಮಶಾಸ್ತ್ರಗಳು ಹೆಚ್ಚಿನವುಗಳೇ? ಅಲ್ಲ. ಏಕೆಂದರೆ ಅವುಗಳಲ್ಲಿ ಅನೇಕ ಫಲ ಪದವಿಗಳನ್ನು ಕೊಡುವ ಕರ್ಮಗಳೇ ಹೇಳಲ್ಪಟ್ಟಿವೆ. ವೇದ ಹೆಚ್ಚಿನದೆನ್ನಬಹುದೇ? ಅಲ್ಲ. ಏಕೆಂದರೆ ಅದರಲ್ಲಿ ನಾನಾ ಪಶುಗಳನ್ನು ಕೊಂದು ಯಜ್ಞಮಾಡಬೇಕೆಂದು ಹೇಳಿದೆ. ಉಪನಿಷತ್ತುಗಳು ಹೆಚ್ಚಿನವೆಂದು ತಿಳಿಯಬೇಕೇ? ಇಲ್ಲ. ಏಕೆಂದರೆ, ಅಗ್ನಿ, ವಾಯು ಪ್ರಾಣ, ಆತ್ಮ ಇವುಗಳಲ್ಲಿ ಶಿವನಿದ್ದಾನೆಯೇ? ಎಲ್ಲಿದ್ದಾನೆ? ಎಂದು ಹುಡುಕುತ್ತಿವೆ. ಅಂತೆಯೇ ಅವುಗಳಲ್ಲಿ ನೇತಿ (ಇದಲ್ಲ, ಇದಲ್ಲ) ಎಂಬ ತತ್ವವಿದೆಯೆಂದು ಹೇಳುತ್ತಿದ್ದಾರೆ. ಸ್ಮೃತಿಗಳಲ್ಲಿ ಹೇಳಿದ ಕರ್ಮಗಳಿಂದಾಗಲಿ ಅಥವಾ ವೇದಗಳಲ್ಲಿ ಹೇಳಿದ ಯಜ್ಞಯಾಗಾದಿಗಳಿಂದಾಗಲಿ ಇಲ್ಲವೆ ಉಪನಿಷತ್ತುಗಳ ಆತ್ಮಶೋಧದಿಂದಾಗಲಿ ಶಿವನು ದೊರೆಯುವುದಿಲ್ಲ. ತನು ಮನ ಧನಗಳನ್ನು ಗುರು ಲಿಂಗ ಜಂಗಮಗಳಿಗೆ ಅರ್ಪಿಸುವ ಈ ಭಕ್ತಿಯಿಂದಲೇ ಶಿವನು ಕಾಣುತ್ತಾನೆ.

೬. **ಆಡಿದರೇನು, ಹಾಡಿದರೇನು, ಓದಿದರೇನು; ತ್ರಿವಿಧ ದಾಸೋಹವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.**

ಅರ್ಥ: ಶಿವಭಕ್ತರ ಸೇವೆಯಲ್ಲಿ ದೇಹವನ್ನು ಸವೆಸದೆ, ಲಿಂಗಮೂರ್ತಿಯ ಧ್ಯಾನದಲ್ಲಿ ಮನಸ್ಸನ್ನಿರಿಸದೆ, ಮತ್ತು ಶಿವಭಕ್ತರ ಸಹಾಯಾರ್ಥವಾಗಿ ಹಣವನ್ನು ವೆಚ್ಚಮಾಡದೆ ಗುರುಜಂಗಮರ ಮುಂದೆ ನಾನಾ ಪ್ರಕಾರ ಕುಣಿದಾಡಿದರೇನು? ಶಿವನ ಘನತೆಯ ಎಷ್ಟು ಪದಗಳನ್ನು ಎಷ್ಟು ಓದಿದರೇನು? ಶಿವನು ಮೆಚ್ಚುವನೇ? ಇಲ್ಲವೇ ಇಲ್ಲ, ನವಿಲು ಬಹು ಚೆನ್ನಾಗಿ ಕುಣಿಯುತ್ತದೆಂದಾಗಲಿ ಅಥವಾ ತಂತಿಯು ಬಹು ಮಂಜುಳವಾದ ನಾದವನ್ನು ಮಾಡುತ್ತದೆಂದಾಗಲಿ ಅವುಗಳಿಗೆ ಶಿವನು ಮೆಚ್ಚುವನೇ? ಇಲ್ಲವೇ ಇಲ್ಲ. ಆದಕಾರಣ ಈ ಮೂರು ಪ್ರಕಾರಗಳ ಅರ್ಪಣವನ್ನು ಮಾಡುವ ಭಕ್ತಿಯಿಲ್ಲದೆ ಬರೆ ಕುಣಿದಾಟ, ಹಾಡುಗಾರಿಕೆ, ಮಾತುಗಾರಿಕೆಗಳು ಎಷ್ಟಿದ್ದರೂ ವ್ಯರ್ಥವೇ ಸರಿ.

೭. **ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು. ಲಿಂಗಕ್ಕೆ ಅದು ಬೇಡದು, ಬೆಸಗೊಳ್ಳದು, ತಂದೊಮ್ಮೆ ನೀಡಬಹುದು. ಕಾಡುವ ಬೇಡುವ ಜಂಗಮ ಬಂದರೆ ನೀಡಲುಬಾರದು ಕೂಡಲಸಂಗಮದೇವ.**

ಅರ್ಥ : ಗುರು ಲಿಂಗ ಜಂಗಮಗಳ ಭಕ್ತಿಯನ್ನು ಮಾಡುವುದರಲ್ಲಿ ಯಾವುದು ಸುಲಭ? ಯಾವುದು ಕಷ್ಟ? ಎಂಬಂಶಗಳನ್ನು ಈ ವಚನದಲ್ಲಿ ಹೇಳಿದ್ದಾರೆ. ಲಿಂಗಪೂಜೆ ಮಾಡುವುದು ಸುಲಭ, ಅಂಗೈಯಲ್ಲಿ ಲಿಂಗಯ್ಯನನ್ನು ಹಿಡಿದುಕೊಂಡು ಬೇಕಾದ ಹಾಗೆ ಹಾಡಬಹುದು. ಮತ್ತು ಕುಣಿದಾಡಬಹುದು. ಇದು ಸುಲಭ. ಏಕೆಂದರೆ ಆ ಲಿಂಗವು ಇದು ಬೇಕು, ಅದು ಬೇಕು, ಎಂದು ಯಾವುದನ್ನೂ ಕೇಳುವುದಿಲ್ಲ. ನೀಡಿದುದನ್ನು ಉಣ್ಣುವುದೂ ಇಲ್ಲ. ಆದರೆ ನಾನಾ ಪದಾರ್ಥಗಳನ್ನು ಶಿವಭಕ್ತರ ಕಲ್ಯಾಣಕ್ಕಾಗಿ ಬೇಡುವ ಮತ್ತು ಅವುಗಳನ್ನು ಕೊಡದಿದ್ದರೆ ಕಾಡುವ ಜಂಗಮಮೂರ್ತಿಗಳ ಭಕ್ತಿಯನ್ನು ಮಾಡುವುದು ಕಷ್ಟವಲ್ಲವೆ? ಈ ಕಷ್ಟತರವಾದ ಜಂಗಮ ಸೇವೆಯನ್ನು ಮಾಡಿದರೇನೇ ಶಿವನು ಮೆಚ್ಚುವನಲ್ಲದೆ ಕೇವಲ ಲಿಂಗಪೂಜೆಯ ಭಕ್ತಿಯೊಂದಕ್ಕೇನೇ ಶಿವನು ಒಲಿಯುವುದಿಲ್ಲ.

೮. **ಎರೆದರೆ ನೆನೆಯದು. ಮರೆದರೆ ಬಾಡದು. ಹುರುಳಿಲ್ಲ, ಹುರುಳಿಲ್ಲ, ಲಿಂಗಾರ್ಚನೆ. ಕೂಡಲಸಂಗಮದೇವ, ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು.**

ಅರ್ಥ : ಇಷ್ಟಲಿಂಗಕ್ಕೆ ಎಷ್ಟು ಸಾರೆ ಅಭಿಷೇಕ ಮಾಡಿದರೂ ಅದೇನು ನೆನೆಯುತ್ತದೆಯೇ? ಎಂದರೆ ಸಂತೋಷದಿಂದ ಕೃಪೆ ಮಾಡುವುದೇ? ಇಲ್ಲವೇ ಇಲ್ಲ, ಅಭಿಷೇಕ ಮಾಡುವುದನ್ನು ಮರೆತುಬಿಟ್ಟರೆ ಅದೇನು ಬಾಡುತ್ತದೆಯೇ? ಎಂದರೆ ಖಿನ್ನವಾಗಿ ಶಾಪವನ್ನೇನಾದರೂ ಕೊಡುವುದೇ? ಇಲ್ಲವೇ ಇಲ್ಲ ಎಂದ ಮೇಲೆ ಲಿಂಗಪೂಜೆಯೊಂದನ್ನೇ ಎಷ್ಟು ಸಾರೆ ಎಷ್ಟು ವೈಭವದಿಂದ ಮಾಡಿದರೇನು? ಎರಡೂ ಒಂದೇ ಸರಿ. ತನು ಮತ್ತು ಧನಗಳನ್ನು ವಂಚನೆ ಮಾಡಿಟ್ಟುಕೊಂಡು ಕಾಡದ ಬೇಡದ ಲಿಂಗಮೂರ್ತಿಗೆ ಮಾತ್ರ ಪುಷ್ಪಾದಿಗಳು ಯಥೇಚ್ಛವಾಗಿ ದೊರೆಯುತ್ತವೆಂದು ಎಷ್ಟು ಪೂಜೆಯ ಮಾಡಿದರೂ ಸೇರಲಾಗುವುದೇ? ಇಲ್ಲವೇ ಇಲ್ಲ.

೯. **ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬರು ನೀವೆಲ್ಲಾ ಕೇಳಿರಣ್ಣಾ. ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ. ಧನವನಿರಿಸದಿರಾ. ಇರಿಸಿದರೆ ಭವ ಬಪ್ಪುದು ತಪ್ಪದು. ಕೂಡಲಸಂಗನ ಶರಣರಿಗೆ ಸವೆಸಲೇಬೇಕು.**

ಅರ್ಥ : ಕೈಯಲ್ಲಿಯ ಕಾಸನ್ನಾದರೂ ಶಿವಭಕ್ತರ ಸೇವೆಗೆ ಸಲ್ಲಿಸದೆ ಲಿಂಗಪೂಜೆಯನ್ನು ಇಷ್ಟು ಸಾರೆ, ಇಷ್ಟು ಹೊತ್ತು, ಇಷ್ಟುವೈಭವದಿಂದ ಮಾಡಿ ಇಂತಿಂತಹ ಪಕ್ವಾನ್ನಗಳನ್ನು ಲಿಂಗಕ್ಕೆ ನೀಡಿದೆವೆಂದು ಹೇಳುತ್ತಿರುವ ಭಕ್ತರೇ, ಕೇಳಿರಿ, ಒಬ್ಬಾತನು ಒಂದು ಜತಿ ಒಳ್ಳೆಯ ಪಾದರಕ್ಷೆಗಳನ್ನು ಹಾಕಿಕೊಂಡು ದೇವರ ದರ್ಶನಕ್ಕೆಂದು ದೇವಾಲಯಕ್ಕೆ ಹೋಗಿದ್ದನು. ಆಗ ಆ ಜೋಡುಗಳನ್ನು ಯಾರಾದರೂ ತೆಗೆದುಕೊಂಡು ಹೋಗುವರೋ ಎಂಬ ಯೋಚನೆಯಿಂದ ಆ ಜೋಡುಗಳಲ್ಲಿ ಮನಸ್ಸನ್ನಿಟ್ಟು ದೇವರಿಗೆ ನಮಸ್ಕಾರ ಮಾಡಿ ಬಂದನು. ಅಂಥ ನಮಸ್ಕಾರದಿಂದ ದೇವರು ಆತನಿಗೆ ಒಲಿವನೇ? ಇಲ್ಲವೇ ಇಲ್ಲ. ಹಾಗೆಯೇ ನಿಮ್ಮ ಲಿಂಗಪೂಜೆಯಾಯಿತು. ನಿಮ್ಮ ಸಂಪತ್ತಿನ ಕಡೆಗೆ ನಿಮ್ಮ ಮನಸ್ಸು ಅದರಲ್ಲಿ ಕಾಸನ್ನಾದರೂ ವೆಚ್ಚಮಾಡಲಿಲ್ಲ. ಹೀಗೆ ಸಂಪತ್ತನ್ನು ಕೂಡಿಡಬೇಡಿರಿ. ಅದರಿಂದ ಜನನ ಮರಣಗಳು ಪುನಃ ಬಂದೇ ಬರುವುವು. ಶಿವಭಕ್ತರಿಗೆ ಆ ನಿಮ್ಮ ಸಂಪತ್ತನ್ನು ಸೂರೆಮಾಡಿರಿ. ಅದೇ ನಿಜಭಕ್ತಿ, ಅದರಿಂದಲೇ ನಿಮಗೆ ಭವ ತಪ್ಪುವುದು.

೧೦. **ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು. ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರ ಕಠಿಣವಾಯಿತ್ತು. ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು. ಕಡೆಯಲ್ಲಿ ಜಂಗಮ ಭಕ್ತಿ ಕಠಿಣವಾಯಿತ್ತು. ಇದುಕಾರಣ ಕೂಡಲ ಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯ.**

ಅರ್ಥ : ಚಳಿಗಾಲದ ಮುಂಜಾನೆಯು ಬಿಸಿಲಿನಲ್ಲಿ ಕುಳಿತು ಕೊಂಡರೆ ಬಹು ಸೊಗಸು. ಆದರೆ ಮಧ್ಯಾಹ್ನದಲ್ಲಿ ಹಾಗೆ ಕುಳಿತುಕೊಂಡರೆ ಮೈಕಾದು ತಲೆ ತಿರುಗಿದಂತಾಗುವುದಿಲ್ಲವೆ? ಹಾಗೆಯೇ ಲಿಂಗಪೂಜೆ ಮೊದಲು ಬಹುಹಿತಕರವಾಗಿ ತೋರುತ್ತದೆ. ಏಕೆಂದರೆ ಅದಕ್ಕಾಗಿ ದೇಹವನ್ನಾಗಲಿ ಅಥವಾ ಧನವನ್ನಾಗಲಿ ಸವೆಸಬೇಕಾಗುವುದಿಲ್ಲ. ಹಾಗೆ ಲಿಂಗಪೂಜೆಯನ್ನು ಮಾಡುತ್ತ ಹೋದಮೇಲೆ ಲಿಂಗಭಕ್ತಿಯ ಪರೀಕ್ಷಿಸಲು ಜಂಗಮಮೂರ್ತಿಯು ಬರುತ್ತಾನೆ. ಆಗ ತನುವನ್ನು ದುಡಿಸಬೇಕಾಗುತ್ತದೆ. ಮತ್ತು ಭಕ್ತರ ಹಿತಾರ್ಥವಾಗಿ ಆ ಮೂರ್ತಿಗೆ ತನ್ನ ಸಂಪತ್ತನ್ನು ಸೂರೆ ಮಾಡಬೇಕಾಗುತ್ತದೆ. ಅದು ಕಷ್ಟವಲ್ಲವೆ? ಆಗ ತನು ಧನಗಳನ್ನು ವಂಚಿಸುವರಲ್ಲವೆ? ಇಂಥ ಡಂಭದ ಲಿಂಗಪೂಜೆಯನ್ನು ಶಿವನು ಬಲ್ಲನು. ಆದುದರಿಂದ ಅಂತಹ ತನು ಧನ ವಂಚಕರಿಗೆ ಶಿವನು ಮೆಚ್ಚುವುದಿಲ್ಲ.

೧೧. **ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡ. ಲಿಂಗದಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ ಮುಂದೆ ಸಕಲಾರ್ಥವನೀವನು. ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ ನರಕ ತಪ್ಪದು ಕಾಣಾ ಕೂಡಲಸಂಗಮದೇವ.**

ಅರ್ಥ : ಗಿಡಗಳಿಗೆ ಬೇರು ಬಾಯಿಯಂತಿರುವ ಕಾರಣ ಬುಡದಲ್ಲಿ ನೀರನ್ನು ಹಾಕಿದರೆ ಬೇರುಗಳ ಮೂಲಕ ಗಿಡದಲ್ಲೆಲ್ಲಾ ನೀರು ಸೇರುತ್ತದೆ. ಆಗ ಆ ಗಿಡವು ಚಿಗಿತು ಹೂವು ಕಾಯಿ ಹಣ್ಣುಗಳನ್ನು ಕೊಡುತ್ತದೆ. ಹಾಗೆಯೇ ಲಿಂಗದೇವನಿಗೆ ಜಂಗಮಮೂರ್ತಿಯೇ ಬಾಯಿಯಾಗಿರುವ ಕಾರಣ ಜಂಗಮಕ್ಕೆ ಬೇಕಾಗಿರುವ ಸಕಲ ವಸ್ತುಗಳನ್ನೂ ಅರ್ಪಿಸಿದ್ದಾದರೆ ಆ ಮೂರ್ತಿಯು ಶಿವಭಕ್ತರಿಗೆ ಬೇಕಾದುದುದನ್ನೆಲ್ಲಾ ಆ ವಸ್ತುಗಳಿಂದ ಒದಗಿಸಿ ಕೊಡುವುದು. ಆಗ ಶಿವಭಕ್ತರ ಸುಖಶಾಂತಿಗಳೇ ಲಿಂಗಮೂರ್ತಿಯ ಪ್ರಸನ್ನತೆಗೆ ಕಾರಣವಾಗುವವು. ಲಿಂಗಮೂರ್ತಿಯ ಮೆಚ್ಚಿಗೆಯಿಂದ ನಿನಗೆ ಬೇಕಾದುದು ದೊರೆಯುತ್ತದೆ. ಆದಕಾರಣ ಭಕ್ತೋದ್ಧಾರಕ್ಕಾಗಿ ಸಂಚರಿಸುವ ಆ ಜಂಗಮ ಮೂರ್ತಿಯನ್ನೂ ಮೊದಲು ಶಿವನೆಂದೇ ಕಂಡು ಶರಣಾರ್ಥಿ ಮಾಡಿ ಆ ಮೇಲೆ ಅರ್ಪಿಸುವ ಸಮಯ ಬಂದಾಗ ತಿಳಿದು ವಂಚಕನಾದರೆ ಖಂಡಿತವಾಗಿಯೂ ಪಾಪಿಯಾಗುವಿ.

೧೨. **ಉಂಬಾಗಲಿಲ್ಲೆನ್ನ, ಉಡುವಾಗಲಿಲ್ಲೆನ್ನ, ಬಂಧುಗಳು ಬಂದಾಗಲಿಲ್ಲೆನ್ನ, ಲಿಂಗಕ್ಕೆ ಇಲ್ಲೆಂಬ, ಬಂದ ಪುರಾತನರಿಗೆ ಇಲ್ಲೆಂಬ, ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಕೂಡಲಸಂಗಮದೇವ?**

ಅರ್ಥ: ತನ್ನಬಾಯಿ ರುಚಿಗೆ ಬೇಕಾದುದನ್ನು ಮಾಡಿಸಿಕೊಂಡು ಊಟಮಾಡುವಾಗ ಹಣವಿಲ್ಲವೆಂದು ಹೇಳುವುದಿಲ್ಲ. ತನಗೆ ಬೇಕಾದ ತರತರದ ಉಡುಪುಗಳನ್ನು ಮಾಡಿಸಿಕೊಳ್ಳುವಾಗ ಹಣವಿನ ಕೊರತೆಯೆಂದು ಹೇಳುವುದಿಲ್ಲ. ತನ್ನ ನೆಂಟರು ಬಂದಾಗ ಅವರಿಗೆ ಬೇಕಾದುದನ್ನು ಮಾಡಿಸಿ ನೀಡುವಾಗಲೂ ಹಣದ ಅನಾನುಕೂಲವೆಂದು ಹೇಳುವುದಿಲ್ಲ. ಇವೆಲ್ಲ ತನ್ನ ಸುಖಕ್ಕೂ ಅಭಿಮಾನಕ್ಕೂ ಸಂಬಂಧಿಸಿರುತ್ತವೆ. ಆದರೆ ಲಿಂಗಪೂಜೆಗೆ ಕರ್ಪೂರ, ಧೂಪ, ದೀಪಗಳು, ಇಲ್ಲವಲ್ಲಾ! ಎಂದು ಕೇಳಿದರೆ ಹಣವಿನ ಕೊರತೆಯೆಂದು ಹೇಳುವನು. ಶಿವಭಕ್ತರ ದುಃಖ ನಿವಾರಣೆಗಾಗಿ ಸಂಚರಿಸುವ ಜಂಗಮಮೂರ್ತಿಗಳು ಬಂದಾಗ ಬುದ್ದೀ ಈಗಿನ ಕಾಲ ಬಹು ಕಷ್ಟ ಕೈಯಲ್ಲಿ ಕಾಸಿಲ್ಲವೆಂದು ಹೇಳುವನು. ಶಿವಧರ್ಮ ಪ್ರಸಾರಕರಾದ ಶಿವಶರಣರು ಬಂದರೂ ಹೀಗೆಯೇ ಹಣವಿನ ಕೊರತೆಯೆಂದು ಹೇಳುವರು. ಇಂತಹ ತನುಮನಧನ ವಂಚಕನು ಸಾಯುವಾಗ ತನ್ನನ್ನು ದೇವಾಲಯಕ್ಕೆ ತೆಗೆದುಕೊಂಡು ಹೋಗಿರಿ. ಅಲ್ಲಿಯಾದರೂ ಪ್ರಾಣಬಿಟ್ಟು ಶಿವನ ಕೃಪೆಗೆ ಪಾತ್ರನಾಗುತ್ತೇನೆಂದು ಕೂಗಿಕೊಂಡು ದೇವಾಲಯಕ್ಕೆ ಹೋದರೆ ಆತನ ಶವವೇನಾದರೂ ತನ್ನನ್ನು ಕಾಯಲಿಕ್ಕೆ ನೀನಿರೆಂದು ದೇವರಿಗೆ ಬಿಟ್ಟೀ ಹೇಳಿದ್ದೀತೇ? ಎಂದರೆ ಶಿವಭಕ್ತರ ಸೇವೆಗೆ ತನುಮನಧನಗಳನ್ನು ವಂಚಿಸಿಕೊಂಡು ತಾನು ಯಾವ ಗುಡಿ ಕ್ಷೇತ್ರ ತೀರ್ಥಗಳಲ್ಲಿ ಪ್ರಾಣಬಿಟ್ಟರೂ ಶಿವನ ಕೃಪೆಗೆ ಪಾತ್ರನಾಗುವುದಿಲ್ಲ.

೧೩. **ಶಿವಭಕ್ತರೇ ಅಧಿಕರು ನೋಡಯ್ಯ! ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ, ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲಸಂಗಮದೇವ.**

ಅರ್ಥ : ಬಸವ ಮಹಾನುಭಾವರು ಈ ವಚನದಲ್ಲಿ ಭಕ್ತರಿಗೂ ಜಂಗಮರಿಗೂ ಇರುವ ತಾರತಮ್ಯವನ್ನು ಹೀಗೆ ಹೇಳಿದ್ದಾರೆ. ಎಲ್ಲರಿಗಿಂತಲೂ ಶಿವಭಕ್ತರೇ ಹೆಚ್ಚಿನವರು. ಆ ಭಕ್ತರಿಗಿಂತಲೂ

ಜಂಗಮರು ಶ್ರೇಷ್ಠರು. ಈ ಪ್ರಕಾರ ಶಿವಭಕ್ತರಿಗಿಂತ ಜಂಗಮರು ಹೆಚ್ಚೆಂದು ತಿಳಿದು ಅವರಿಗೆ ಹೊರಗೆ ಹೆಚ್ಚಿನ ಮಾನ ಮನ್ನಣೆಗಳನ್ನು ಮಾಡಿದರೂ ಭಕ್ತ ಮತ್ತು ಜಂಗಮರಲ್ಲಿ ಭೇದವಿಲ್ಲವೆಂದೇ ಒಳಗೆ ಸಂಪೂರ್ಣ ನಂಬಿದ್ದೇನೆ. ಆದುದರಿಂದ ಜಂಗಮರಿಗೆ ಹೇಗೆ ಯಾವ ಕಷ್ಟನಷ್ಟಗಳೂ ಸಂಭವಿಸಬಾರದೋ ಹಾಗೆಯೇ ಯಾವ ಶಿವಭಕ್ತರಿಗೂ ಯಾವ ವಿಧವಾದ ನೋವು ಆಗಬಾರದು. ಶಿವಭಕ್ತರ ನೋವೇ ಅದೇ ಲಿಂಗಕ್ಕಾದ ನೋವು. ಶಿವಭಕ್ತರ ಕಷ್ಟನಷ್ಟಗಳ ನಿವಾರಣೆಗಾಗಿ ಜಂಗಮಮೂರ್ತಿಯು ಪ್ರಯತ್ನಿಸುತ್ತಿರುವುದರಿಂದಲೇ ಜಂಗಮಕ್ಕೆ ಸಂಪತ್ತನ್ನು ಸಮರ್ಪಿಸಿದರೆ ಅದು ಭಕ್ತರಿಗೆ ಮುಟ್ಟಿ ಅವರ ತಾಪ ನಿವಾರಣೆಯಾಗುವುದು. ಶಿವಭಕ್ತರ ತಾಪನಿವಾರಣೆಯೇ ಶಿವಲಿಂಗದ ಪ್ರಸನ್ನತೆ. ಈ ಪ್ರಕಾರ ಶಿವಸಮಾಜ ರಕ್ಷಣೆಯ ಕಾರ್ಯಕವನ್ನು ಜಂಗಮಮೂರ್ತಿಯು ವಹಿಸಿರುವುದರಿಂದಲೇ ಜಂಗಮಕ್ಕೆ ಸಂಪತ್ತನ್ನು ಸವೆಸಬೇಕೆಂತಲೂ ಜಂಗಮವೇ ಲಿಂಗದ ಮುಖವೆಂತಲೂ ಹೇಳಿದ್ದಾರೆ. ರಾಜನು ಪ್ರಜೆಗಳಿಂದ ಬಂದ ಹಣವನ್ನು ಹೇಗೆ ಪ್ರಜೆಗಳ ಹಿತಾರ್ಥವಾಗಿ ವಿನಿಯೋಗಿಸಿ ತಾನು ಆ ಪ್ರಜೆಗಳಲ್ಲಿಯ ಒಬ್ಬ ಸೇವಕನೆಂದೇ ಮನಸ್ಸಿನಲ್ಲಿ ತಿಳಿದಿರುತ್ತಾನೆಯೋ ಹಾಗೆಯೇ ಜಂಗಮರು ಭಕ್ತರಿಂದ ಬರುವ ಸಂಪತ್ತನ್ನು ಭಕ್ತರ ಹಿತವಾಗಿಯೇ ವಿನಿಯೋಗಿಸಿ ತಾವು ಆ ಭಕ್ತರಲ್ಲಿ ಒಬ್ಬ ಸೇವಕರೆಂಬ ಭಾವವುಳ್ಳವರಾಗಿರಬೇಕು. ಪ್ರಜೆಗಳು ತಮ್ಮ ರಾಜನಲ್ಲಿ ಹೇಗೆ ಭಕ್ತಿ ವಿಶ್ವಾಸಗಳುಳ್ಳವ ರಾಗಿಬೇಕೋ ಹಾಗೆಯೇ ಭಕ್ತರು ಜಂಗಮರಲ್ಲಿ ಭಕ್ತಿ ವಿಶ್ವಾಸಗಳುಳ್ಳವರಾಗಿರಬೇಕು. ಭಕ್ತಿ ಜಂಗಮರು ಈ ಭಾವನೆಯುಳ್ಳವರಾಗಿರಬೇಕೆಂಬುದನ್ನೇ ಮೇಲಣ ವಚನದಿಂದ ನಾವು ತಿಳಿದುಕೊಳ್ಳಬೇಕಾದ ಸಂಗತಿಯು.

೧೪. **ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು. ತನುಮನಧನ ಸವೆಸಲೇಬೇಕು. ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು.**

ಅರ್ಥ : ಶಿವನು ಎಲ್ಲಾ ಕಡೆಗೂ ವ್ಯಾಪಿಸಿದ್ದಾನೆ. ಕೊಡುವವನೂ ಶಿವ, ಕೊಡಲ್ಪಡುವ ಪದಾರ್ಥವೂ ಶಿವ. ಕೊಟ್ಟಿದ್ದನ್ನು ತೆಗೆದುಕೊಳ್ಳುವವನೂ ಶಿವ. ಎಂದಮೇಲೆ ಕೊಡುವವರಾರು? ತೆಗೆದುಕೊಳ್ಳುವವರಾರು? ಎಂಬ ಅದ್ವೈತದ ಕೇವಲ ಮಾತಿನಿಂದ ಜನನ ಮರಣಾದಿ ದುಃಖಗಳೆಲ್ಲಾ ನಿವಾರಣೆಯಾಗುವುದಿಲ್ಲ. ಇಂತಹ ಮಾತುಗಳನ್ನಾಡುತ್ತಾ ತನ್ನ ತನು ಮನ ಧನಗಳಲ್ಲಿ ವಂಚಕನಾಗಿರುವಾತನಿಗೆ ಸುಖ ಶಾಂತಿಗಳಿಲ್ಲ. ಅವುಗಳನ್ನು ಸವೆಸಲೇಬೇಕು. ಶಿವಾಚಾರಶೀಲರಾದ ಶಿವಶರಣರಿಗೆ ಅಂಜಿ ತನ್ನ ಅವಗುಣ ಅನಾಚಾರಗಳನ್ನು ತಿದ್ದಿಕೊಳ್ಳಲೇಬೇಕು.

೧೫. **ಭಕ್ತಿಯಿಲ್ಲದ ಬಡವನಾನಯ್ಯಾ, ಕಕ್ಕಯ್ಯನ ಮನೆಯಲ್ಲಿ ಬೇಡಿದೆ, ದಾಸಯ್ಯನ ಮನೆಯಲ್ಲಿ ಬೇಡಿದೆ, ಚೆನ್ನಯ್ಯನ ಮನೆಯಲ್ಲಿ ಬೇಡಿದೆ, ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವ.**

ಅರ್ಥ : ಈ ವಿಧವಾದ ಭಕ್ತಿಯು ತಮಗೆ ಯಾರಿಂದ ಬಂದಿತೆಂಬುದನ್ನು ಆ ಬಸವ ಮಹಾತ್ಮರು ಹೀಗೆ ಹೇಳಿದ್ದಾರೆ. ನನ್ನಲ್ಲಿ ಭಕ್ತಿಯೇ ಇರಲಿಲ್ಲ. ಡೋಹರ ಕಕ್ಕಯ್ಯನವರಲ್ಲಿ ದೇವರ

ದಾಸಿಮಯ್ಯನವರಲ್ಲಿ ಮಾದರ ಚೆನ್ನಯ್ಯನವರಲ್ಲಿ ನಾನು ಭಕ್ತಿಯನ್ನು ಬೇಡಿಕೊಂಡೆನು. ಎಲ್ಲಾ ಪುರಾತನರು ಸೇರಿ ನನಗೆ ಭಕ್ತಿಯೆಂಬ ಭಿಕ್ಷೆಯನ್ನು ನೀಡಿದುದರಿಂದ ನನಗೆ ಇಷ್ಟಾದರೂ ಭಕ್ತಿ ಬಂದಿತೆಂದು ತಮ್ಮ ಕಿರಿಯತನವನ್ನೂ ಶಿವ ಭಕ್ತರ ಹಿರಿಯತನವನ್ನೂ ತಿಳಿಸಿದ್ದಾರೆ.

೧೬. **ಅರ್ಥವನರ್ಥವ ಮಾಡಿ ಕೋಳಾಹಳಂಗೈಯ್ಯುತ್ತಿರಲಿ, ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿವುತ್ತಿರಲಿ, ಮುಟ್ಟುವ ಸ್ತ್ರೀಯ ಕಣ್ಣುಮುಂದೆ ಅಭಿಮಾನಗೊಂಡು ನೆರೆವುತ್ತಿರಲಿ, ಇಂತೀ ತ್ರಿವಿಧವು ಹೊರಗಣವು. ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡವ ಕೊಯ್ಯಲಿ, ಇಕ್ಕುವ ಶೂಲವ ಪ್ರಾಪ್ತಿಸಲಿ, ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ, ಮತ್ತೆಯೂ ಲಿಂಗಾರಾಧನೆಯ ಮಾಡುವೆ ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆನು, ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ ನೀನಂದೇ ಮೂಗ ಕೊಯ್ಯಿ ಕೂಡಲಸಂಗಮದೇವ.**

ಅರ್ಥ : ಆ ಮಹಾನುಭಾವರಾದ ಬಸವಣ್ಣನವರು ಭಕ್ತಿಯನ್ನು ಹೀಗೆಯೇ ಮಾಡಬೇಕೆಂದು ಅನ್ಯರಿಗೆ ಹೇಳಿದುದೇ ಅಲ್ಲ. ಅದರಂತೆಯೇ ತಾವೂ ಮಾಡಿದ್ದರಿಂದಲೇ ಅವರ ಭಕ್ತಿಯ ಬೆಳಕು ಯಾವಾಗಲೂ ಬೆಳಗುತ್ತಿದೆ. ಈ ವಚನದಲ್ಲಿ ಅವರು ತಮ್ಮ ನಡತೆಯನ್ನು ತೋರಿಸಿದ್ದಾರೆ.

ನನ್ನಲ್ಲಿರುವ ಸಂಪತ್ತನ್ನು ಸೂರೆಮಾಡಲಿ, ನನ್ನ ಮಕ್ಕಳನ್ನು ಕಡಿದು ಕಡಿದು ತುಂಡು ಮಾಡುತ್ತಿರಲಿ, ನನ್ನ ಪತ್ನಿಯನ್ನು ನನ್ನ ಮುಂದೆಯೇ ಭ್ರಷ್ಟಗೊಳಿಸುತ್ತಿರಲಿ, ಇಷ್ಟೆಲ್ಲಾ ಕಷ್ಟ ನಷ್ಟಗಳು ಬಂದರೂ ನಾನು ಲಿಂಗಪೂಜೆ ಜಂಗಮ ದಾಸೋಹಗಳನ್ನು ಬಿಡುವುದಿಲ್ಲ.

ಈ ಕಷ್ಟಗಳೆಲ್ಲಾ ನನ್ನ ವಿನಾ ಅನ್ಯರಿಗಾದವುಗಳಷ್ಟೆ ಆದುದರಿಂದ ಹಾಗೆ ಮಾಡಿದ ನಂತರ ನನ್ನ ಮೈ ಮೇಲೆ ಬರಲಿ, ನನ್ನ ಚರ್ಮವ ಸುಲಿದು ಮಾಂಸವನ್ನು ಹೊರಗೆ ತೆಗೆಯಲಿ, ಈ ಪ್ರಕಾರ ನನಗೆ ನಾನಾ ಹಿಂಸೆಗಳನ್ನುಂಟು ಮಾಡಿದರು ನಾನು ಬಿಡುವವನಲ್ಲ. ಹಾಗೆ ಬಿಟ್ಟಿದ್ದಾದರೆ ಶಿವನೇ, ನೀನು ಆಗಲೇ ನನ್ನನ್ನು ನಾಶಮಾಡು.

೧೭. **ಶರಣ ಸಮತೆಯ ನಿಧಿ ಬಸವನಯ್ಯ, ಭಕ್ತಿಯ ಬೆಳೆ ಸಿರಿ ಬಸವನಯ್ಯ, ಮುಕ್ತಿಯ ತವನಿಧಿ ಬಸವನಯ್ಯ, ಸತ್ಯದ ನಿಧಿ ಬಸವನಯ್ಯ, ಹರಪದ ಕಮಲ ಭೃಂಗ ಬಸವನಯ್ಯ, ಕೂಡಲ ಚೆನ್ನಸಂಗಯ್ಯನಲ್ಲಿ ಅನಿಮಿಷ ಬಸವನಯ್ಯ.**

೧೮. **ಎತ್ತೆತ್ತ ನೋಡಿದಡೆ, ಅತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ, ಆಯತವು ಬಸವಣ್ಣನಿಂದ, ಸ್ವಾಯತವು ಬಸವಣ್ಣನಿಂದ, ಸನ್ನಿಹಿತವು ಬಸವಣ್ಣನಿಂದ, ಗುರುವು ಬಸವಣ್ಣನಿಂದ, ಲಿಂಗವು ಬಸವಣ್ಣನಿಂದ, ಜಂಗಮವು ಬಸವಣ್ಣನಿಂದ, ಪಾದೋದಕವು ಬಸವಣ್ಣನಿಂದ, ಪ್ರಸಾದವು ಬಸವಣ್ಣನಿಂದ, ಅತ್ತಬಲ್ಲರೆ ನೀವು ಹೇಳಿರೇ ಇತ್ತ ಬಲ್ಲರೆ ನೀವು ಕೇಳಿರೇ, ಬಸವಾ, ಬಸವಾ, ಬಸವಾ ಮಜ್ಜನಕ್ಕೆರೆಯದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವ.**

೧೯. ಬಸವಣ್ಣನೇ ಶರಣು. ಬಸವಣ್ಣನೇ ಶರಣು. ಬಸವಣ್ಣನೇ ಪರಮಬಂಧು ಎನಗೆ, ವಸುಧೀಶ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೨೦. ಬಸವಣ್ಣನೇ ತಾಯಿ, ಬಸವಣ್ಣನೇ ತಂದೆ, ಬಸವಣ್ಣನೇ ಪರಮಬಂಧುವೆನಗೆ, ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮ ಹೆಸರಿಟ್ಟ ಗುರು ಬಸವಣ್ಣ ಕೇಳಾ ಪ್ರಭುವೆ.

೨೧. ಭಕ್ತಿ ರೂಪನು ಬಸವ, ನಿತ್ಯರೂಪನು ಬಸವ, ಮತ್ತಾನಂದ ಸ್ವರೂಪನು ಬಸವಣ್ಣನು, ಸದ್‌ರೂಪನು ಬಸವನು, ಚಿದ್ರೂಪನು ಬಸವ, ಎತ್ತೆತ್ತ ನೋಡಿದರೆ ಅತ್ತ ಪರಿಪೂರ್ಣವಾಗಿಪ್ಪನು. ಬಸವಣ್ಣನಿಂದ ನಿತ್ಯಸುಖಿಯಾದೆನಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

❖❖

॥ ಓಂ ॥

ಮಹಾನುಭಾವರಾದ ಬಸವಣ್ಣನವರ ಉಪಮೆಗಳು

ಸಂಗ್ರಾಹಕರು
ಹರ್ಡೇಕರ ಮಂಜಪ್ಪ

ಪ್ರಕಾಶಕರು
ಶ್ರೀ ಜವಳಿ ಮಹಂತಪ್ಪನವರು
ಚಿತ್ತವಾಡಗಿ

ಶಾ.ಶ. ೧೮೬೫ನೆಯ ಮಾರ್ಗಶಿರ ಶು. ೫
(ತಾ. ೨-೧೨-೧೯೪೩)

ಈ ಪುಸ್ತಕವು ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ
ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಶ್ರೀ ಜವಳಿ ಮಹಂತಪ್ಪನವರಿಂದ
ಚಿತ್ತವಾಡಗಿಯಲ್ಲಿ ಪ್ರಕಟಿಸಲ್ಪಟ್ಟಿತು

*

ಮುನ್ನುಡಿ

ಚಿತ್ತವಾಡಗಿ ಶ್ರೀ ಕಲ್ಮೇಶ್ವರಸ್ವಾಮಿ ರಥೋತ್ಸವ ಗ್ರಂಥಮಾಲೆಯಲ್ಲಿ ಇದು ಐದನೆಯ ಪುಷ್ಪ. ಪ್ರತಿ ವರುಷ ಶ್ರೀ ಕಲ್ಮೇಶ್ವರಸ್ವಾಮಿ ರಥೋತ್ಸವವನ್ನು ಮಾರ್ಗಶಿರ ಶುದ್ಧ ೫ ದಿವಸ ಚಿತ್ತವಾಡಗಿಯ ಶ್ರೀ ಜವಳಿ ಮಹಂತಪ್ಪನವರು ನಡೆಸುತ್ತಿರುವಾಗ ನಾಡು–ನುಡಿಗಳ ಏಳಿಗೆಗಾಗಿ ಸಭೆ ಮತ್ತು ವಸ್ತು ಪ್ರದರ್ಶನಗಳನ್ನು ನಡೆಸುತ್ತಿರುವಂತೆ ಒಂದು ಪುಸ್ತಕವನ್ನೂ ಅಚ್ಚು ಮಾಡಿಸಿ ಪ್ರಚಾರಗೊಳಿಸುತ್ತಿದ್ದಾರಷ್ಟೆ ಆ ಪ್ರಕಾರ ಈ ವರುಷ ಇದನ್ನು ಪ್ರಕಟಿಸಿದ್ದಾರೆ.

ಮಹಾನುಭಾವರಾದ ಬಸವಣ್ಣನವರು ಧಾರ್ಮಿಕ ಮತ್ತು ನೈತಿಕ ವಿಷಯಗಳನ್ನು ಕುರಿತು ಜನತೆಗೆ ವಿವಿಧ ಉಪಮೆಗಳ ಮೂಲಕ ಬೋಧಿಸಿರುವ ಅನೇಕ ದಿವ್ಯ ತತ್ವಗಳಲ್ಲಿ ೨೫ ವಿಷಯಗಳನ್ನು ಆಯ್ದುಕೊಂಡು ೧೦೮ ಉಪಮೆಗಳಿಂದ ಅವುಗಳನ್ನು ಹೇಗೆ ವಿವರಿಸಿದ್ದಾರೆಂಬುದನ್ನು ಈ ಚಿಕ್ಕ ಪುಸ್ತಕದಲ್ಲಿ ತೋರಿಸಿದ್ದಾಗಿದೆ

ಬಸವ ಮಹಾನುಭಾವರು ಜನಸಾಮಾನ್ಯರಲ್ಲಿ ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ವಿಚಾರ ಪ್ರತಿಭೆಯನ್ನುಂಟು ಮಾಡಲು ಅವರಾಡುವ ಮಾತಿನಲ್ಲಿಯೇ ಅವರ ಮನಸ್ಸಿಗೆ ನಾಟಿ, ಬುದ್ಧಿಗೆ ಹೊಳೆದು, ಭಾವದಲ್ಲಿ ಬೆರೆಯುವುದಕ್ಕೋಸ್ಕರ ಬಳಕೆಯಲ್ಲಿರುವ ಸಂಗತಿಗಳ ಉಪಮೆಗಳಿಂದ ಹೀಗೆ ಬೋಧಿಸಿರುವದು ನಮ್ಮ ದೇಶದ ಧರ್ಮೋಪದೇಶಗಳಲ್ಲಿಯೇ ಅಪೂರ್ವವಾದ ರೀತಿಯೆಂದು ಧಾರಾಳವಾಗಿ ಹೇಳಬಹುದು.

ಶ್ರೀ ಬಸವಣ್ಣನವರು ಉಪಮೆಯಿಲ್ಲದೆ ಹೇಳಿರುವ ವಚನಗಳು ಬಹು ಕಡಿಮೆ. ಒಂದು ವಿಷಯವು ಜನರಿಗೆ ಚೆನ್ನಾಗಿ ತಿಳಿಯಲೆಂದು ಮೂರುನಾಲ್ಕು ಉಪಮೆಗಳನ್ನು ಕೂಡಾ ಕೊಟ್ಟಿದ್ದಾರೆ.

ಉಪಮೆಗಳನ್ನೇ ಮುಂದಿಟ್ಟು ವಿವರಿಸುವುದು ನಮ್ಮ ಉದ್ದೇಶವಿದ್ದುದರಿಂದ ವಚನದಲ್ಲಿ ಉಪಮೆಯ ಭಾಗವನ್ನು ಮಾತ್ರವೇ ಈ ಪುಸ್ತಕದಲ್ಲಿ ಕೊಡಲಾಗಿದೆ.

ಆ ಉಪಮೆಗಳ ವಿವಿಧತೆಯನ್ನು ನೋಡಿದರೆ ಬಸವ ಮಹಾನುಭಾವರಲ್ಲಿದ್ದ ಅಸಾಧಾರಣವಾದ ಲೋಕಾನುಭವವು ವ್ಯಕ್ತವಾಗುತ್ತದೆ. ಜಗದೊಡೆಯನ ಬೆಳಕು ಯಾರ ಹೃದಯದಲ್ಲಿ ಬೆಳಗುತ್ತಲಿದೆಯೋ

ಅವರಿಗೆ ಜಗತ್ತಿನ ಯಾವ ಸಂಗತಿಯಾದರೂ ತಿಳಿಯುವುದೇನಾಶ್ಚರ್ಯ? ಸಾಮಾನ್ಯರಂತೆ ಎಲ್ಲವನ್ನು ಅವರು ಅನುಭವಿಸಿಯೇ ಅರಿತುಕೊಳ್ಳಬೇಕೆ?

ಬಹು ಘನವಾದ ವಿಷಯಗಳನ್ನು ಕೂಡಾ ಒಂದು ಚಿಕ್ಕ ಉಪಮೆಯಿಂದ ಆ ಮಹಾನುಭಾವರು ಹೇಗೆ ತಿಳಿಸಿಕೊಟ್ಟಿದ್ದಾರೆಂಬುದು ವಾಚಕರಿಗೆ ಈ ಪುಸ್ತಕವನ್ನು ಓದುವದರಿಂದ ಗೊತ್ತಾಗಿ ಅವರ ಎಲ್ಲ ವಚನಗಳನ್ನು ಓದಬೇಕೆಂಬ ಕುತೂಹಲವುಂಟಾದರೆ ಈ ಉಪಮೆಗಳ ಸಂಗ್ರಾಹಕನ ಉದ್ದೇಶವು ಎಷ್ಟೋ ಮೆಟ್ಟಿಗೆ ನೆರವೇರಿದಂತೆ.

ಸುಖ ಜೀವನದ ಮಾರ್ಗವನ್ನು ತೋರಿಸಲು ಕೈದೀವಿಗೆಯಂತಿರುವ ಈ ಪುಸ್ತಕದಲ್ಲಿಯ ಅನೇಕ ದಿವ್ಯೋಪದೇಶಗಳು ವಾಚಕರ ಆಚರಣೆಯಲ್ಲಿ ಸ್ವಲ್ಪಾದರೂ ಬಂದು ಪ್ರಕಾಶಕರ ಉದ್ದೇಶವು ಕೊನೆಗಾಣಲೆಂದು ಹಾರೈಕೆ.

ಕಾರ್ತಿಕ ಬ॥ ೧೦ — **ಹರ್ಡೇಕರ ಮಂಜಪ್ಪ**

ಶಾ.ಶ. ೧೮೬೩ — ಆಲಮಟ್ಟಿ

ವೀರಶೈವ ವಿದ್ಯಾಲಯ

❖❖

॥ ಓಂ ॥

ಮಹಾನುಭಾವರಾದ ಬಸವಣ್ಣನವರ ಉಪಮೆಗಳು

ದೇವರ ಇರುವಿಕೆ

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು. ಶಶಿಯೊಳಗಣ ರಸದ ರುಚಿಯಂತಿದ್ದಿತ್ತು. ನನೆಯೊಳಗಣ ಪರಿಮಳದಂತಿದ್ದಿತು. ಕನ್ನೆಯ ಸ್ನೇಹದಂತಿದ್ದಿತ್ತು.

ಅರ್ಥ : ನೀರಿನಲ್ಲಿ ಬೆಂಕಿಯು, ಬೆಳದಿಂಗಳಲ್ಲಿ ತಂಪು, ಮೊಗ್ಗೆಯಲ್ಲಿ ಪರಿಮಳವು ಮತ್ತು ಕನ್ನೆಯಲ್ಲಿ ಕಾಮಚಿಹ್ನವು ಹೇಗೆ ಕಾಣದಂತೆ ಬೆರೆತುಕೊಂಡಿರುತ್ತವೆಯೋ ಹಾಗೆ ದೇವರು ಈ ವಿಶ್ವದಲ್ಲಿ ಕಾಣದಂತೆ ಸರ್ವವ್ಯಾಪ್ತಿಯಾಗಿದ್ದಾನೆ.

ದೇವರ ನೆನೆವ ಮನಸ್ಸು

ಕರಿ ಘನ, ಅಂಕುಶ ಕಿರಿದೆನ್ನಬಹುದೆ? ಗಿರಿ ಘನ, ವಜ್ರ ಕಿರಿದೆನ್ನಬಹುದೆ? ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ? ಮರೆವು ಘನ, ನಿಮ್ಮ ನೆನೆವ ಮನವ ಕಿರಿದೆನ್ನಬಹುದೆ? ಬಾರದಯ್ಯಾ.

ಅರ್ಥ : ಆನೆ ದೊಡ್ಡದು, ಅದನ್ನು ಅಂಕಿತದಲ್ಲಿಟ್ಟುಕೊಳ್ಳುವ ಅಂಕುಶ ಚಿಕ್ಕದೆಂದು; ಪರ್ವತ ದೊಡ್ಡದು, ಅದನ್ನು ಒಡೆಯುವ ವಜ್ರವು ಚಿಕ್ಕದೆಂದು; ಕತ್ತಲೆಯು ದೊಡ್ಡದು, ಅದನ್ನು ಹೋಗಲಾಡಿಸುವ ದೀಪ ಚಿಕ್ಕದೆಂದು ಹೇಗೆ ಹೇಳಲಿಕ್ಕೆ ಬರುವುದಿಲ್ಲವೋ ಹಾಗೆಯೇ ಬಹುಕಾಲದಿಂದ ದೇವರ ಅರುವೇ ಇಲ್ಲದಿದ್ದ ಮರೆವೆಯೇ ದೊಡ್ಡದೆಂದು ತಿಳಿಯದೆ, ದೇವರನ್ನು ನೆನೆಯುವ ಮನಸ್ಸು ಆ ಮರೆವೆಯನ್ನು ನಿವಾರಣೆ ಮಾಡುವುದರಿಂದ ಇದೇ ದೊಡ್ಡದೆಂದು ತಿಳಿಯಬೇಕು.

ಸಂಸಾರ ಸ್ಥಿತಿ

ಸಂಸಾರ ಸಾಗರ ತೆರೆ ಕೊಬ್ಬಿ, ಮುಖದ ಮೇಲೆ ಅಲೆವುತ್ತಿದೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ. ಇಲಿಗಡಹನೊಡ್ಡಿದಲ್ಲಿ ಇರ್ಪಂತೆ ಎನ್ನ ಸಂಸಾರ. ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ. ಶೂಲದ ಮೇಲಣ ವಿಭೋಗವೇನಾದರೇನು? ಹಾವು ಹಾವಾಡಿಗನ ಸ್ನೇಹದಂತೆ, ಸಂಸಾರ ಎಂಬ ಬಲೆಯಲ್ಲಿ ಸಿಲುಕಿದೆನಯ್ಯಾ, ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ ವಿಷಯವೆಂಬ ವಿಷದಿಂದ ಆನು ಮುಂದುಗೆಟ್ಟೆನಯ್ಯಾ.

ಅರ್ಥ : ಸಮುದ್ರದಲ್ಲಿ ನಿಂತಿರುವ ಮನುಷ್ಯನ ಮುಖಕ್ಕೆ ಅದರಲ್ಲಿ ತೆರೆಗಳು ಉಬ್ಬುಬ್ಬಿ ಬಂದು ಹೊಡೆಯುವಂತೆ ಸಂಸಾರದಲ್ಲಿಯ ನಾನಾ ವಿಪತ್ತುಗಳು ನನ್ನನ್ನು ಆವರಿಸುತ್ತಲಿವೆ. ನಾನು ಚಂದ್ರನಂತೆ ಪ್ರಕಾಶಮಯವಾಗಿದ್ದೆನು. ಈ ಸಂಸಾರವೆಂಬ ರಾಹು ನುಂಗಿದ್ದರಿಂದ ನನಗೆ ಗ್ರಹಣ ಹಿಡಿದಂತಾಗಿದೆ. ಇದರಿಂದ ಬಿಡುಗಡೆಯೆಂದಾಗುವುದು? ಇಲಿಯನ್ನು ಹಿಡಿಯಲು ಇಲಿಗತ್ತರಿಯನ್ನು ಹೂಡಿದಂತೆ ನನ್ನನ್ನು ಹಿಡಿಯಲು ಸಂಸಾರವು ಇಲಿಗತ್ತರಿಯಾಗಿದೆಯಲ್ಲಾ!

ಕಪ್ಪೆಯು ನಾಗರ ಹಾವಿನ ಹೆಡೆಯ ಕೆಳಗೆ ನೆಳಲಿದೆಯೆಂದು ಹೋಗಿ ನಿಂತಂತೆ ಈ ಸಂಸಾರದಲ್ಲಿ ಸುಖವಿದೆಯೆಂದು ತಿಳಿದು ಇದರಲ್ಲಿರುವೆನಲ್ಲಾ! ಶೂಲವನ್ನು ಏರುವ ಮುಂಚೆ ಎಂಥ ಭೋಗಗಳನ್ನು ಅನುಭವಿಸಿದರೂ ಅವು ಕ್ಷಣಿಕವಾಗಿರುವಂತೆ ಈ ಸಂಸಾರದ ಸುಖಗಳು, ಹಾವಿಗೂ ಹಾವನ್ನಾಡಿಸುವವನಿಗೂ ಹೇಗೆ ಭಯಯುಕ್ತ ಸ್ನೇಹವಿರುತ್ತದೆಯೋ ಹಾಗೆ ಈ ಸಂಸಾರದ ಸ್ನೇಹವು ನನಗೆ. ನಾನು ಈ ಸಂಸಾರವೆಂಬ ಬಲೆಯಲ್ಲಿ ಸಿಕ್ಕಿಕೊಂಡಿದ್ದೇನೆ. ಈ ಸಂಸಾರವು ಸರ್ಪ, ಕಣ್ಣು, ನಾಲಿಗೆ, ಮೂಗು, ಕಿವಿ ಮತ್ತು ಚರ್ಮಗಳೆಂಬ ಪಂಚ ಜ್ಞಾನೇಂದ್ರಿಯಗಳೇ ಐದು ಹೆಡೆಗಳು. ಇವುಗಳಲ್ಲಿ ರೂಪ, ರಸ, ಗಂಧ, ಶಬ್ದ ಮತ್ತು ಸ್ಪರ್ಶಗಳೆಂಬ ಐದು ವಿಷಯಗಳೇ ಐದು ವಿಷಯಗಳು. ಇವುಗಳ ಸೇವನೆಯಿದ ನಾನು ಬಳಲುತ್ತಿದ್ದೇನೆ.

ಮನಸ್ಸಿನ ಸ್ವಭಾವ

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು. ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು ಮುನ್ನಿನ ಸ್ವಭಾವವನು. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ.

ಅರ್ಥ : ಕೊಂಬೆಯ ಮೇಲಿನ ಮಂಗವು ಹೇಗೆ ಅತ್ತಿಂದಿತ್ತ ಹಾರಾಡುತ್ತಲಿರುತ್ತದೆಯೋ ಹಾಗೆ ಮನಸ್ಸೆಂಬ ಮಂಗವು ರೂಪ ರಸ ಗಂಧ ಮೊದಲಾದ ವಿಷಯಗಳ ಬೇರೆ ಬೇರೆ ಕೊಂಬೆಗಳಿಗೆ ಹಾರುತ್ತಲಿರುತ್ತದೆ. ನಾಯಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿದರೂ ಮಲವನ್ನು ಕಂಡಕೂಡಲೇ ಹಾರುವಂತೆ ಮನಸ್ಸೆಂಬ ನಾಯಿಯು ಬಹು ಶ್ರೇಷ್ಠವಾದ ಮನುಷ್ಯನ ದೇಹವೆಂಬ ಪಲ್ಲಕ್ಕಿಯಲ್ಲಿದ್ದರೂ ವಿಷಯಗಳನ್ನು ಕಂಡಕೂಡಲೆ ಅವುಗಳ ಕಡೆಗೆ ಹೋಗುವುದೇ ವಿನಾ ದೇವರ ಧ್ಯಾನದಲ್ಲಿರುವುದಿಲ್ಲ.

ಕತ್ತಿಗೆ ಹಚ್ಚಿದ ತುಪ್ಪವನ್ನು ನೆಕ್ಕಲು ಹೋದ ನಾಯಿಯು ತನ್ನ ನಾಲಿಗೆ ಕೊಯಿದು ರಕ್ತ ಸುರಿಯುತ್ತಿದ್ದಾಗ ಕತ್ತಿಯಲ್ಲಿಯೇ ರಕ್ತವಿದೆಯೆಂದು ಭ್ರಮಿಸಿ ಅದನ್ನೇ ಪುನಃ ನೆಕ್ಕುವಂತೆ ವಿಷಯಗಳಲ್ಲಿ ಸುಖವಿದೆಯೆಂದು ಈ ಮನಸ್ಸೆಂಬ ನಾಯಿಯು ಪುನಃ ಪುನಃ ಅವುಗಳಲ್ಲಿಯೇ ರಮಿಸಿ ಹಾಳಾಗುತ್ತಿದೆ.

ಮನುಷ್ಯನ ಅಲ್ಪತ್ವ

ಪಶುವಾನು. ಪಶುಪತಿ ನೀನು. ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು ದೆಸೆ ದೆಸೆಗೆ ಬಾಯ ಬಿಡುತ್ತಿದ್ದೇನಯ್ಯ. ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ ಅಂಬಾ ಅಂಬಾ, ಎಂದು ಕರವುತ್ತಲಿದ್ದೇನೆ. ಕಾಡ ಬಸವನ ಹುಲಿ ಕೊಂಡೊಯ್ವರೆ ಆರೈಯ್ಯಲಾಗದೆ? ವಿಷಯವೆಂಬ

ಹಸುರೆನ್ನ ಮುಂದೆ ತಂದು ಪಸರಿಸಿದೆ ಅಯ್ಯ. ಪಶುವೇನು ಬಲ್ಲದು ಹಸುರೆಂದೆಳಸುವುದು. ಭಕ್ತಿ ರಸವ ದಣಿಯ ಮೇಯಿಸಿ ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹಯ್ಯ ನರವಿಂದ್ಯದೊಳಗೆನ್ನ ಹುಲುಗಿಳಿಯ ಮಾಡಿ ಭಕ್ತಿಯೆಂಬ ಪಂಜರದೊಳಿಕ್ಕಿ ಸಲಹು. ಆನು ಒಬ್ಬನು ಸುಡುವರೈವರು ಮೇಲೆ ಕಿಚ್ಚು ಘನ. ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಲಿದ್ದೇನಯ್ಯ. ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ ಎನ್ನ ಬಿಡು ತನ್ನ ಬಿಡು ಎಂಬವು ಕಾಯ ವಿಕಾರ ಮನ ವಿಕಾರ. ಎನ್ನ ಚಿತ್ತವು ಅತಿಯ ಹಣ್ಣು ನೋಡಯ್ಯ. ಬೆಳೆ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು, ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಸುಳಿದೆಗೆದು ಬೆಳೆವೆನು. ಬಳ್ಳಿಗೆ ಕಾಯಿ ದಿಮ್ಮಿತ್ತೆ? ಚಿತ್ತರಟ್ಟೆಯ ಕಾಯಲ್ಲಿ ಮತ್ತೇನರಸುವಿರಯ್ಯ? ಮೇರು ಗುಣವನರಸುವದೆ ಕಾಗೆಯಲ್ಲಿ? ಪರುಷ ಗುಣವನರಸುವುದೆ ಕಬ್ಬುನದಲ್ಲಿ? ಸಾದು ಗುಣವನರಸುವುದೆ ಅವಗುಣಿಯಲ್ಲಿ? ಚಂದನ ಗುಣವನರಸವುದೆ ತರುಗಳಲ್ಲಿ? ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹೊತ್ತಿ ಉರಿದರೆ ನಿಲ್ಲಬಹುದೆ? ಏರಿ ನೀರುಂಬಡೆ, ಬೇಲಿ ಕೆಯಿ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯಿ ಮೊಲೆಹಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ?

ಅರ್ಥ : ನಾನು ಪಶು, ದೇವರೆ, ನೀನು ಪಶುಪತಿ, ಬಲವಿಲ್ಲದ ಪಶು ಕೆಸರಲ್ಲಿ ಬಿದ್ದು ಸಿಕ್ಕಿಕೊಂಡರೆ ಒದರುತ್ತ ಯಾರಾದರೂ ಬಂದು ಎತ್ತುವರೋ ಎಂದು ಅತ್ತಿತ್ತ ನೋಡುವಂತೆ ಈ ಸಂಸಾರವೆಂಬ ಕೆಸರಿನಲ್ಲಿ ನಾನು ಸಿಕ್ಕಿಕೊಂಡು ಬಳಲುತ್ತ ದೇವರೆ ನಿನ್ನ ಬರುವಿಕೆಯನ್ನೇ ನೋಡುತ್ತಿದ್ದೇನೆ. ಅಡವಿಯಲ್ಲಿ ದಾರಿತಪ್ಪಿದ ಪಶು ಅಂಬಾ ಎಂದು ಕರೆಯುವಂತೆ ಈ ಸಂಸಾರವೆಂಬ ಅಡವಿಯಲ್ಲಿ ನಿನ್ನನ್ನು ಸೇರುವ ದಾರಿ ಕಾಣದೆ ಶಿವ, ಶಿವ ಎಂದು ದೇವರೇ ನಿನ್ನನ್ನು ಕರೆಯುತ್ತಿದ್ದೇನೆ. ರೂಪ, ರಸ ಗಂಧಾದಿ ವಿಷಯಗಳೆಂಬ ಹಸುರು ಹುಲ್ಲನ್ನು ನನ್ನ ಮುಂದೆ ತಂದು ಹಾಕಿರುವಿ. ಪಶುವಾದ ನಾನೇನು ಬಲ್ಲೆನು? ಹುಲ್ಲೆಂದು ಅತ್ತ ಹೋಗುತ್ತಿದ್ದೇನೆ. ಭಕ್ತಿಯೆಂಬ ಮೇವನ್ನು ಹಾಕಿ, ಸುಬುದ್ಧಿಯೆಂಬ ನೀರನ್ನು ಕುಡಿಸಿ ನನ್ನ ಸಲಹು ಶಿವನೆ.

ಸಂಸಾರವೆಂಬ ಅಡವಿಯಲ್ಲಿರುವ ಈ ಬಸವನೆಂಬ ಎತ್ತನ್ನು ಕಾಮ ಕ್ರೋಧಾದಿಗಳೆಂಬ ಹುಲಿ ಹಿಡಿದುಕೊಂಡು ಹೋಗದಂತೆ ಶಿವನೇ ನೀನು ಕಾಪಾಡಬಾರದೆ?

ಸಮುದ್ರದಲ್ಲಿಯ ಸಿಂಪಿಯು ಬಳಲಿ ಬಾಯ ಬಿಡುತ್ತಿರುವಂತೆ ನಾನು ಸಂಸಾರ ತಾಪದಿಂದ ಬಾಯ ಬಿಡುತ್ತಿದ್ದೇನೆ. ಜನಾಂಗವೆಂಬ ಪರ್ವತದಲ್ಲಿ ನನ್ನ ಒಂದು ಗಿಳಿಯನ್ನು ಮಾಡಿ ಭಕ್ತಿಯೆಂಬ ಪಂಜರದಲ್ಲಿಟ್ಟು ಶಿವನೇ ನನ್ನನ್ನು ಸಲಹು.

ನಾನು ಒಬ್ಬನು, ನನ್ನನ್ನು ಸುಡುವವರಾದರೋ ರೂಪ ರಸಾದಿ ಐದು ಜನರು. ಆಶೆ ಎಂಬ ಕಿಚ್ಚಾದರೋ ಬಹು ಪ್ರಜ್ವಲಿಸುವುದಾಗಿದೆ. ಒಂದು ಮೊಲವನ್ನು ಹಿಡಿಯಲು ಒಂಬತ್ತು ನಾಯಿಗಳು ನಾ ಮುಂದೆ ತಾ ಮುಂದೆ ಎಂದು ಬರುವಂತೆ ಜೀವಾತ್ಮನಾದ ಮೊಲವನ್ನು ಹಿಡಿಯಲು ರೂಪ ರಸಾದಿ ಐದು ಮತ್ತು ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ನಾಲ್ಕು, ಅಂತು ಒಂಬತ್ತು ನಾಯಿಗಳು ನಾ ಮುಂದೆ ತಾ ಮುಂದೆ ಎಂದು ಬರುತ್ತಲಿವೆ.

ನನ್ನ ಚಿತ್ತವು ಅತ್ತಿಯ ಹಣ್ಣಿನ ಹಾಗೆ ಮೇಲೆ ಹೊಳಪು ಒಳಗೆ ಹುಳುಕು. ಚಿತ್ತರಟ್ಟೆಯಕಾಯಲ್ಲಿ ಹೇಗೆ ತಿರುಳಿಲ್ಲವೋ ಹಾಗೆ ನನ್ನಲ್ಲಿ ಭಕ್ತಿ ಜ್ಞಾನ ವೈರಾಗ್ಯಾದಿ ಯಾವ ಒಳ್ಳೆಯ ನಡತೆಗಳು ಇಲ್ಲ. ಈ ಮನುಷ್ಯ ಜನ್ಮವೇನೋ ಮೋಕ್ಷ ಫಲ ಬಿಡುವ ಒಳ್ಳೆಯ ಭೂಮಿ. ಆದರೆ ಅವಗುಣಗಳೆಂಬ ನಾಶಕರವಾದ ಹುಲ್ಲು ಹುಟ್ಟಿದ್ದರಿಂದ ಬೆಳೆಯಲೊಲ್ಲದು. ಶಿವನೇ ಈ ಕಸವನ್ನು ತೆಗೆದು ಹಾಕು. ಆಗ ಸುಳಿ ಬಿಟ್ಟು ಬೆಳೆದು ಈ ದೇಹ ಸಾರ್ಥಕವಾಗುವುದು.

ಬಳ್ಳಿಗೆ ಕಾಯಿ ಹೇಗೆ ದೊಡ್ಡದಲ್ಲವೋ ಹಾಗೆ ನಾನು ನಿನ್ನಿಂದ ರಕ್ಷಿಸಲ್ಪಡಲು ಅಸಾಧ್ಯವಲ್ಲ.

ಮೇರು ಪರ್ವತವು ಕಾಗೆಯ ಗುಣವನ್ನು ಎಣಿಸದೆ ತನ್ನ ಮೇಲೆ ಕುಳಿತುಕೊಳ್ಳಲು ಅವಕಾಶವನ್ನು ಕೊಡುವುದಿಲ್ಲವೆ? ಪರುಷವು ಕಬ್ಬಿಣದ ಗುಣವನ್ನು ನೋಡದೆ ಅದನ್ನು ಬಂಗಾರವನ್ನಾಗಿ ಮಾಡುವುದಿಲ್ಲವೆ? ಸುಗಂಧದ ಪುಡಿಯು(ಸಾದು) ದುರ್ಗಣಿಯ ಮೈಮೇಲೂ ಬಿದ್ದು ಸುಗಂಧವನ್ನೇ ಉಂಟುಮಾಡುವುದಿಲ್ಲವೆ? ಚಂದನವು ಯಾವ ಗಿಡವನ್ನಾದರೂ ತನ್ನಂತೆ ಸುಗಂಧದ್ದಾಗುವಂತೆ ಮಾಡುವುದಿಲ್ಲವೆ? ಎಂದ ಮೇಲೆ ಶಿವನೇ ನೀನು ನನ್ನಲ್ಲಿಯ ಅವಗುಣಗಳನ್ನು ಎಣಿಸಿ, ನನ್ನನ್ನು ನಿನ್ನಿಂದ ದೂರ ಮಾಡಬಹುದೆ?

ಒಲೆಯಲ್ಲಿ ಬೆಂಕಿಯ ಉರಿಯಿದ್ದರೆ ಬೇರೆ ಕಡೆಗೆ ನಿಲ್ಲಬಹುದು. ಆದರೆ ಈ ಭೂಮಿಯೇ ಬೆಂಕಿಯಿಂದ ಉರಿಯಲಾರಂಭಿಸಿದರೆ ನಿಲ್ಲಲಿಕ್ಕೆ ಇಂಬುಂಟೆ? ನೀರಿನ ಸಂಗ್ರಹಕ್ಕಾಗಿ ಸುತ್ತಲೂ ಹಾಕಲ್ಪಟ್ಟಿದ್ದ ಮಣ್ಣಿನ ಏರಿಯೇ ನೀರನ್ನು ಕುಡಿದುಬಿಟ್ಟರೆ ನೀರು ದೊರೆಯುವುದೆ? ಬೆಳೆಯ ಜೋಪಾನಕ್ಕಾಗಿ ಕಟ್ಟಲ್ಪಟ್ಟ ಬೇಲಿಯೇ ಬೆಳೆಯನ್ನು ತಿಂದುಬಿಟ್ಟರೆ ಬೆಳೆಯು ಬರುವುದೆ? ಮನೆಯ ಯಜಮಾನಿಯೇ ಕದಿಯಲಾರಂಭಿಸಿದರೆ ಧನ ಧಾನ್ಯಗಳುಳಿಯುವವೆ? ತಾಯಿಯ ಮೊಲೆ ಹಾಲು ವಿಷವಾಗಿ ಬಿಟ್ಟರೆ ಕೂಸು ಬದುಕುವುದೆ? ಶಿವನೇ, ನೀನೆ ನನ್ನ ಮೇಲೆ ಮುನಿದದ್ದಾದರೆ ನಾನು ಇನ್ನಾರಲ್ಲಿ ಮೊರೆಯಿಡಲಿ?

ಕಷ್ಟ ಬಂದಾಗ ಕಾಯುವವರಿಲ್ಲ

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ, ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ? ಅಂಬುಧಿಯ ಮುನಿ ಅಪೋಷಣವ ಕೊಂಬಲ್ಲಿ ಚಂದ್ರಮನೇನು ಅಡ್ಡ ಬಂದನೆ?

ಅರ್ಥ : ಸಮುದ್ರವು ಬೆಳದಿಂಗಳಲ್ಲಿ ಉಕ್ಕೇರಿ ಬರುತ್ತದೆ. ಕರಿದಿಂಗಳಲ್ಲಿ ಇಳಿದು ಹೋಗುತ್ತದೆ. ಹೀಗೆ ಚಂದ್ರನಲ್ಲಿ ಸಮುದ್ರಕ್ಕೆ ಪ್ರೇಮವಿದ್ದರೂ ರಾಹು ಚಂದ್ರನಿಗೆ ಅಡ್ಡ ಬರಲು ಸಮುದ್ರವೇನಾದರೂ ತನ್ನ ಸ್ನೇಹಿತನಿಗೆ ಸಂಕಟ ಬಂದಿತೆಂದು ಕೂಗಿಕೊಂಡಿತೆ? ಅಗಸ್ತ್ಯ ಮುನಿಯು ಸಮುದ್ರವನ್ನು ಕುಡಿಯಲಾರಂಭಿಸಲು ತನ್ನ ಸ್ನೇಹಿತನಿಗೆ ವಿಪತ್ತು ಬಂದಿತೆಂದು ಚಂದ್ರನೇನಾದರೂ ಬಿಡಿಸಬಂದನೆ? ಯಾರಿಗಾರೂ ಇಲ್ಲ. ಕಷ್ಟಕ್ಕೊಳಗಾದವರಿಗೆ ಸ್ನೇಹಿತರೆಲ್ಲಿ? ಶಿವನೇ, ನೀನೊಬ್ಬನೆ ಜಗತ್ತಿನವರೆಲ್ಲರನ್ನು ಎಲ್ಲ ಕಾಲಗಳಲ್ಲಿ ಎಂಥ ಸ್ಥಿತಿಯಲ್ಲಿಯೂ ಕಾಪಾಡುವ ನೆಂಟನು.

ದೇವರನರಿಯುವ ದಾರಿ

ಮಡಕೆಯ ಮಾಡುವರೆ ಮಣ್ಣೆ ಮೊದಲು, ತೊಡಿಗೆಯ ಮಾಡುವರೆ ಹೊನ್ನೆ ಮೊದಲು, ಕೂಡಲಸಂಗಮದೇವರನರಿವಡೆ ಶರಣರ ಸಂಗವೇ ಮೊದಲು.

ಅರ್ಥ: ಮಡಕೆಯನ್ನು ಮಾಡಬೇಕಾದರೆ ಹೇಗೆ ಮೊದಲು ಮಣ್ಣು ಬೇಕೋ, ಆಭರಣಗಳನ್ನು ಮಾಡಬೇಕಾದರೆ ಹೇಗೆ ಮೊದಲು ಬಂಗಾರವು ಬೇಕೋ ಹಾಗೆ ದೇವರನ್ನು ಅರಿಯಬೇಕಾದ ರೀತಿ ತಿಳಿಯ ಬೇಕಾದರೆ ದೇವರಿಗೆ ಶರಣು ಹೋದ ಭಕ್ತರ ಸಹವಾಸವೇ ಮೊದಲು ಬೇಕು.

ಕಪಟಿಯಾಗಬಾರದು

ಎರೆದೆಲೆಯಂತೆ ಒಳಗೊಂದು ಹೊರಗೊಂದಾದರೆ ಮೆಚ್ಚುವನೆ? ಉಡುವಿನ ನಾಲಿಗೆಯಂತೆ ಎರಡಾದರೆ ಕೂಡಲಸಂಗಯ್ಯ ಮೆಚ್ಚುವನೆ?

ಅರ್ಥ : ದೇವರು ಒಲಿಯಬೇಕಾದರೆ ಒಳಗೂ ಹೊರಗೂ ಶುದ್ಧವಾಗಿಯೇ ಇರಬೇಕು. ಬಾರಿಯ ಎಲೆಯು ಮೇಲೊಂದು ಬಣ್ಣ ಕೆಳಗೊಂದು ಬಣ್ಣವಾಗಿರುವಂತೆ ಅಂತರಂಗದಲ್ಲಿ ಒಂದು ಹೊರಗೊಂದು ರೀತಿಯಾಗಿದ್ದರೆ ದೇವರು ಮೆಚ್ಚುವುದಿಲ್ಲ. ಉಡವಿನಂತೆ ಎರಡು ನಾಲಿಗೆಯವನಾದರೆ, ಎಂದರೆ ಹಿಂದೊಂದು ಮುಂದೊಂದು ಆಡಿದರೆ ಅಥವಾ ಸುಳ್ಳನಾಡಿದರೆ ದೇವರು ಮೆಚ್ಚುವುದಿಲ್ಲ.

ಸತಿ ಪತಿಗಳಾಚರಣೆ

ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ.

ಅರ್ಥ : ಅನ್ನದ ಪಾತ್ರೆಯು ಶುದ್ಧವಾಗಿರಬೇಕು. ಮತ್ತು ಅದರಲ್ಲಿಯ ಅನ್ನವೂ ಶುದ್ಧವಾಗಿರಬೇಕು. ಹಾಗಿದ್ದರೇನೇ ಅಂಥ ಅನ್ನ ಸೇವನೆಯಿಂದ ದೇಹ ಪೋಷಣೆಯಾಗುವುದಷ್ಟೆ. ಅದೇ ಪ್ರಕಾರ ಪತಿಯು ಆಚಾರಶೀಲನಾಗಿರುವಂತೆ ಸತಿಯೂ ಆಚಾರಶೀಲಳಾಗಿರಬೇಕು. ಪತಿಯು ಸದ್ಗುಣ ಶೀಲಾಚಾರಗಳುಳ್ಳನಿದ್ದರೆ ಸಾಕು, ಸತಿಯು ಹೇಗಿದ್ದರೇನೆಂದು ತಿಳಿದರೆ ಹೆಂಡದ ಮಡಕೆಯನ್ನು ಹೊರಗೆ ತೊಳೆದಂತಾಗುವುದು. ಮಡಕೆಯನ್ನು ಹೊರಗೆ ತೊಳೆದ ಮಾತ್ರದಿಂದ ಹೆಂಡವೇನಾದರೂ ಹಾಲಾಗಿ ಕುಡಿಯಲು ಯೋಗ್ಯವಾಗುವುದೇ? ಹೆಂಡದಂತೆ ಆ ಮಡಕೆಯೂ ತ್ಯಾಜ್ಯವಾಗುವುದಲ್ಲವೆ?

ಅಂತರಂಗ ಶುದ್ಧವಿರಬೇಕು

ಹುತ್ತವ ಬಡಿದರೆ ಹಾವು ಸಾಯಬಲ್ಲುದೆ? ಅಘೋರ ತಪವ ಮಾಡಿದಡೇನು?

ಅರ್ಥ : ಹುತ್ತಕ್ಕೆ ಹೊಡೆದರೆ ಹೇಗೆ ಹಾವು ಸಾಯುವುದಿಲ್ಲವೋ ಹಾಗೆಯೇ ವಿವಿಧ ರೀತಿಗಳಿಂದ ದೇಹವನ್ನು ಕ್ಷೀಣಗೊಳಿಸುವ ತಪಸ್ಸನ್ನು ಆಚರಿಸಿದ ಮಾತ್ರದಿಂದ ಮನಸ್ಸೇನೂ ಪರಿಶುದ್ಧವಾಗುವುದಿಲ್ಲ. ಮನಸ್ಸು ಪರಿಶುದ್ಧವಾಗದ ವಿನಾ ದೇವರು ಒಲಿಯುವುದಿಲ್ಲ.

ಜೀವಿತ ಕ್ಷಣಭಂಗುರ

ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು. ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಶೂಲವನೇರುವ ಕಳ್ಳ ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವ? ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತ ಮಾಡುವ ಭರವ ನೋಡಾ. ಪಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ ಎಂದೆಂದೂ ಅಳಿಯನೆಂದು ಗೂಡುಗಟ್ಟಿದೆಯಲ್ಲಾ

ಅರ್ಥ: ಹಬ್ಬದ ದಿನ ಕಡಿಯಲಿಕ್ಕೆ ತಂದ ಕುರಿಯು ತಾನು ಈಗ ಸಾಯುತ್ತೇನೆಂಬುವ ಕಲ್ಪನೆಯು ಕೂಡಾ ಇಲ್ಲದೆ ತೋರಣದ ಎಲೆಗಳನ್ನು ತಿನ್ನುತ್ತಿರುವಂತೆ. ಹಾವಿನ ಬಾಯಲ್ಲಿ ಸಿಕ್ಕಿಕೊಂಡ ಕಪ್ಪೆಯು ಒಂದು ನಿಮಿಷದಲ್ಲಿಯೇ ಹಾವಿನ ಹೊಟ್ಟೆಯಲ್ಲಿ ಹೋಗುತ್ತೇನೆಂಬುದನ್ನು ಅರಿಯದೆ ತನ್ನ ಮುಂದೆ ಹಾರುವ ನೊಣವನ್ನು ಹಿಡಿದು ತಿನ್ನಬೇಕೆಂದು ಬಯಸುವಂತೆ. ಮುಂದೊಂದು ಕ್ಷಣದಲ್ಲಿ ಶೂಲವನ್ನೇರಿ ಸಾಯುವ ಅಪರಾಧಿಯು ಹಾಲು ತುಪ್ಪಗಳನ್ನು ಯಥೇಚ್ಛೆಯಾಗಿ ಸೇವಿಸುವಂತೆ, ಮನುಷ್ಯನು ಕೂಡಾ ತಾನು ಮೃತ್ಯುವಿನ ಬಾಯಲ್ಲಿಯೇ ಇದ್ದನೆಂದು ಯಾವ ನಿಮಿಷದಲ್ಲಿ ತಾನು ಮೃತ್ಯುವಿಗೆ ತುತ್ತಾಗುವೆನೋ ಎಂದು ಯೋಚಿಸಿ ಸತ್ಕಾರ್ಯಗಳಿಗಾಗಿ ದೇಹವನ್ನು ಸವೆಸದೆ ವಿಷಯೋಪಭೋಗಿಯಾಗಬೇಕೆಂದು ಅಪೇಕ್ಷಿಸುತ್ತಿದ್ದಾನೆ.

ನೀರು ಗುಳ್ಳೆಗಳಂತೆ ಈ ಜೀವಿತವು ಕ್ಷಣಿಕವಾದುದೆಂಬುದನ್ನರಿಯದೆ ಕಬ್ಬಿಣದ ಕಟ್ಟು ಹಾಕಿ ನೀರು ಗುಳ್ಳೆಯನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕೆಂಬುವವನಂತೆ ನಾನಾ ಭಕ್ಷ್ಯ ಭೋಜ್ಯಗಳಿಂದ ಇದನ್ನು ಭದ್ರಗೊಳಿಸುವುದರಲ್ಲಿಯೇ ಮಗ್ನನಾಗಿದ್ದೇನೆಯೇ ವಿನಾ ಸತ್ಕಾರ್ಯಗಳಲ್ಲಿ ಇದನ್ನು ಸವೆಸುವುದಿಲ್ಲವಲ್ಲಾ.

ಪಂಜರವು ಭದ್ರವಾಗಿದೆ, ನನಗೆಲ್ಲಿ ಮರಣವೆಂದು ತಿಳಿದುಕೊಂಡ ಗಿಳಿಯಂತೆ ದೇಹವು ಭದ್ರವಾಗಿದೆ. ನನಗೆಲ್ಲಿ ಮನುಷ್ಯನು ತಿಳಿದಿದ್ದಾನೆ. ಮನಸ್ಸಿನಲ್ಲಿಯೇ ಉಂಟಾಗುವ ನಾನಾ ವಿಷಯಾಭಿಲಾಷೆಯ ಬೆಕ್ಕು ಜೀವಾತ್ಮನೆಂಬ ಗಿಳಿಯನ್ನು ತಿನ್ನುವಾಗ ಹೊರಗಿನ ದೇಹವೆಂಬ ಪಂಜರವೇನು ಕಾಯುವುದೇ? ಆಗ ದೇವರೇ ರಕ್ಷಿಸಬೇಕಲ್ಲವೆ? ಅದಕ್ಕಾಗಿ ಜೀವಿತವು ಕ್ಷಣಭಂಗುರವೆಂದು ದೇವರ ಸೇವೆಯನ್ನು ದೇಹವನ್ನು ಸವೆಸಬೇಕು.

ಸಂಪತ್ತು ಸ್ಥಿರವಲ್ಲ

ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ, ಕಾಳುಬೆಳದಿಂಗಳಂತೆ ಸಿರಿ ಸ್ಥಿರವಲ್ಲ.

ಅರ್ಥ : ಗಾಳಿಯಲ್ಲಿರುವ ದೀಪವು ಯಾವ ಕ್ಷಣದಲ್ಲಿ ಆರಿಹೋಗುವುದೆಂಬುದು ಹೇಗೆ ನಿಯಮವಿಲ್ಲವೋ ಹಾಗೆಯೇ ಹೆಂಡರು, ಮಕ್ಕಳು, ಸಂಪತ್ತು ಮೊದಲಾದ ಸಂಸಾರ ಸೌಲಭ್ಯಗಳು ಯಾವ ನಿಮಿಷದಲ್ಲಿ ಅಳಿದು ಹೋಗುವುವೋ ತಿಳಿಯದು.

ಸಂತೆಗೆ ಬಂದ ನಾನಾ ಕಡೆಯ ಜನರು ಸಂತೆ ತೀರಿದ ಕೂಡಲೆ ಹೇಗೆ ಹೋಗಿಬಿಡುವರೋ ಹಾಗೆ ಅನೇಕ ಕಡೆಗಳಿಂದ ಬಂದು ಕೂಡಿದ ಸಂಪತ್ತು ದೇವರ ಕೃಪೆ ತಪ್ಪಿದೊಡನೆ ಹೋಗಿಬಿಡುವುದು.

ಬೆಳದಿಂಗಳು ಸ್ಥಿರವಲ್ಲದೆ ಕರಿದಿಂಗಳು ಹೇಗೆ ಬಂದೆಬರುತ್ತದೆಯೋ ಹಾಗೆಯೇ, ಸಂಪತ್ತುಸ್ಥಿರವಾಗ್ಗಿಯೇ ಇರದೆ ಅದು ಹೋಗಿಬಿಡುವುದು. ಆದಕಾರಣ ಸಂಪತ್ತಿರುವಾಗಲೇ ಸತ್ಕಾರ್ಯಗಳನ್ನು ಮಾಡಿ ಪುಣ್ಯ ಪಡೆಯಬೇಕು.

ಧನದಾಸೆ

ಕಾಂಚನವೆಂಬ ನಾಯಿಯ ನೆಚ್ಚಿ ನಿಮ್ಮ ನಾನು ಮರೆದನಯ್ಯಾ, ಹಡಕಿಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ?

ಅರ್ಥ : ಧನವೆಂಬ ನಾಯಿಯನ್ನು ನಾನು ಪ್ರೀತಿಸುತ್ತಿದ್ದುದರಿಂದ ಶಿವನೇ, ನಾನು ನಿನ್ನನ್ನು ಮರೆತೆನು. ಹೇಸಿಗೆಯನ್ನು ತಿನ್ನುವ ನಾಯಿಯು ಹಾಲಿನ ರುಚಿಯನ್ನೇನು ಬಲ್ಲುದು?

ದೇವರ ಕೋಪ

ಹಗೆಯಲ್ಲಿ ಬಿದ್ದವರ ಮೇಲೆ ಒರಳನೂಂಕುವರೆ? ಕೋಳದ ಮೇಲೆ ಸಂಕೋಲೆಯನಿಕ್ಕುವರೆ? ಬೆಂದ ಹುಣ್ಣು ಕಂಬಿಯಲ್ಲಿ ಕೀಸುವರೆ?

ಅರ್ಥ: ಹಗೆಯಲ್ಲಿ ಬಿದ್ದವನು ಉಸುರುಗಟ್ಟಿ ಕಷ್ಟಪಡುತ್ತಿರುವಾಗ ಅವನನ್ನು ಹೊರಗೆ ತೆರೆಯದೆ ಅವನ ಮೇಲೆ ಒರಳಕಲ್ಲನ್ನು ನೂಕಬಹುದೆ?

ಕೈಗೆ ಕೋಳವನ್ನು ಹಾಕಿದಾಗ ಅದನ್ನು ತೆಗೆಯಬೇಕಲ್ಲದೆ ಅದರ ಮೇಲೆ ಮತ್ತೆ ಸಂಕೋಲೆಯನ್ನು ಹಾಕಬಹುದೆ?

ಬೆಂಕಿಯಿಂದ ಬೆಂದು ಹುಣ್ಣಾಗಿರುವುದನ್ನು ಗುಣಪಡಿಸಲು ಔಷಧಿಯನ್ನು ಹಚ್ಚಬೇಕಲ್ಲದೆ ಅದನ್ನು ಕಾದ ಕಂಬಿಯಿಂದ ಗೀಚಬಹುದೆ?

ಶಿವನೇ ನಾನು ಈ ಸಂಸಾರದಲ್ಲಿ ವಿವಿಧ ಕಷ್ಟನಷ್ಟಗಳಿಂದ ಬಳಲುತ್ತಿರುವಾಗ ಮತ್ತೆ ಹೆಚ್ಚಿನ ದುಃಖಗಳನ್ನು ನೀನು ನನಗೆ ಕೊಡಬಹುದೆ?

ಯಾರಿಗೆ ಯಾವುದರ ಚಿಂತೆ?

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ, ಎನಗೆ ಕೂಡಲಸಂಗಮದೇವರ ನೆನೆವ ಚಿಂತೆ.

ಅರ್ಥ : ಚಕೋರ ಪಕ್ಷಿಯು ಬೆಳದಿಂಗಳು ಯಾವಾಗ ಬರುವುದೋ ಎಂಬುದನ್ನು, ಕಮಲವು ಯಾವಾಗ ಸೂರ್ಯೋದಯವಾಗುವುದೋ ಎಂಬುದನ್ನು ಮತ್ತು ಗುಂಗಿಹುಳು ಯಾವಾಗ ಹೂವರಳುವುದೋ ಎಂಬುದನ್ನು ಚಿಂತಿಸುತ್ತಿರುವಂತೆ ಶಿವನೇ ನನಗೆ ನಿನ್ನ ಸ್ಮರಣೆಯ ಚಿಂತೆ.

ಸಂತೋಷದ ರೀತಿ

ಅಡವಿಯಲ್ಲೊಬ್ಬ ಕಡು ನೀರಡಿಸಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ, ಕುರುಡ ಕಣ್ಣ ಹಡೆದಂತೆ, ಬಡವ ನಿಧಾನವ ಹಡೆದಂತಾಯಿತ್ತಯ್ಯಾ, ಸಾಸಿವೆಯ ಮೇಲೆ ಸಾಗರ ಏರಿದಂತಾಯಿತ್ತಯ್ಯ. ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯ.

ಅರ್ಥ: ಅಡವಿಯಲ್ಲಿ ಬಹು ನೀರಡಿಸಿದವನಿಗೆ ಹತ್ತಿರವೇ ನೀರು ಕಂಡಾಗ, ಕುರುಡನಿಗೆ ತಟ್ಟನೆ ಕಣ್ಣು ಬಂದಾಗ, ಬಡವನಿಗೆ ಹಣದ ಕೊಪ್ಪರಿಗೆ ದೊರೆತಾಗ ಎಷ್ಟು ಸಂತೋಷವಾಗುವುದೋ ಅಷ್ಟು ಶಿವಶರಣರು ಬಂದರೆ ನನಗೆ ಸಂತೋಷ, ಸಾಸಿವೆಯಷ್ಟು ಚಿಕ್ಕವನಾದ ನನ್ನ ಮೇಲೆ ಸಂತೋಷದ ಆ ಸಾಗರವೇ ಉಕ್ಕಿ ಬಂದಂತೆ.

ನಾನು ಭಕ್ತನಲ್ಲ

ಹೇಡಿ ಬಿರಿದು ಕಟ್ಟಿದಂತಾಯಿತೆನ್ನ ವೇಷ. ಹೊತ್ತಾರೆ ಎದ್ದ ಕುರುಡಂಗೆ ಅಗುಸೆಯಲ್ಲಿ ಅಸ್ತಮಯವಾದಂತೆ ಎನ್ನ ಭಕ್ತಿ.

ಹೊರಿಸಿಕೊಂಡು ಹೋದ ನಾಯಿ ಮೊಲನೇನು ಹಿಡಿವುದಯ್ಯ? ಇರಿಯದ ವೀರ ಇಲ್ಲದ ಸೊಬಗುವ ಹೇಳುವುದೇ ನಾಚಿಕೆ. ಹಾವ ತೋರಿ ಹವಿಯ ಬೇಡುವಂತೆ ಎನ್ನ ಭಕ್ತಿ, ಆನೆ ಆ ದಾರಿಯಲ್ಲಿ ಹೋಯಿತ್ತೆಂದರೆ ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ? ಮರದ ನೆರಳಲ್ಲಿದ್ದು ತನ್ನ ನೆರಳನರಸಬಹುದೆ? ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ, ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತೆನ್ನ ಭಕ್ತಿ.

ಅರ್ಥ : ಹೇಡಿಯು ಕತ್ತಿ, ಕವಚ, ಕಿರೀಟಗಳನ್ನು ಧರಿಸಿದ ಮಾತ್ರದಿಂದ ಹೇಗೆ ವೀರನಾಗುವುದಿಲ್ಲವೋ ಹಾಗೆಯೇ ಲಿಂಗ ಭಸ್ಮ ರುದ್ರಾಕ್ಷಿಗಳನ್ನು ಧರಿಸಿದ ಮಾತ್ರದಿಂದ ಶಿವಭಕ್ತನಾಗುವುದಿಲ್ಲ. ಕುರುಡನು ಪರಸ್ಥಳಕ್ಕೆ ಹೋಗಬೇಕೆಂದು ಬೆಳಗಿನ ಜಾವದಲ್ಲಿ ಎದ್ದು ಹೊರಟರು ಕಣ್ಣು ಕಾಣದಿದ್ದುದರಿಂದ ಅಗಸಿ ಬಾಗಿಲಿಗೆ ಹೋಗುವುದರೊಳಗಾಗಿಯೇ ಸಂಜೆಯಾಗುವಂತೆ ಭಕ್ತಿಯಿಲ್ಲದವನು ಎಷ್ಟೇ ಮೊದಲು ಶಿವಾಚಾರಗಳನ್ನು ಆಚರಿಸಿದರೂ ಶಿವನನ್ನೇನೂ ಕೊನೆಗೂ ಸೇರುವುದಿಲ್ಲ.

ನಾಯಿಯು ತಾನೇ ಅನ್ಯರಿಂದ ಹೊರಿಸಿಕೊಂಡು ಬೇಟೆಗೆ ಹೋದರೆ ಅದೇನು ಓಡುವ ಮೊಲವನ್ನು ಹಿಡಿಯುವುದೇ? ತನ್ನಲ್ಲಿಯೆ ಭಕ್ತಿಯಿಲ್ಲದಿದ್ದ ಮೇಲೆ ಕಾಮ ಕ್ರೋಧಾದಿಗಳನ್ನು ಜಯಿಸುವನೆ? ಯುದ್ಧಕ್ಕೆ ಹೋದಾಗ ವೈರಿಯನ್ನು ಇರಿಯದಿದ್ದವನು ವೀರನೆ? ಆತನು ವೀರಾವೇಶದ ಮಾತುಗಳನ್ನಾಡುವುದು ಹೇಗೆ ಆತನಿಗೆ ನಾಚಿಕೆಯೋ ಹಾಗೆಯೇ ಭಕ್ತನೆಂದೂ ಹೇಳಿಕೊಳ್ಳುವವನು ದುರ್ಗುಣ ದುರಾಚಾರಗಳನ್ನು ನಿವಾರಣೆ ಮಾಡಿಕೊಳ್ಳದಿದ್ದರೆ ಅದು ಆತನಿಗೆ ಕಳಂಕ. ಆತನು ಭಕ್ತನಲ್ಲ.

ಹಾವಾಡಿಗನು ಹಾವನ್ನು ಹಿಡಿದುಕೊಂಡು ಬಂದು ಹಾವಿಗೆ ಹಾಲ ಕೊಡಿರೆಂದು ಬೇಡಿ ತನ್ನ ಜೀವನವನ್ನು ಸಾಗಿಸುವಂತೆ ಶಿವಶರಣರಿಗೆ ಶಿವಲಾಂಛನಗಳನ್ನು ತೋರಿಸಿ ಹೊಟ್ಟೆಹೊರೆದುಕೊಳ್ಳುವವನು ಭಕ್ತನಲ್ಲ ಡಂಭಾಚಾರಿಯು.

ಆನೆ ಕಂಧಕಗಳಿಂದ ಕೂಡಿದ ದಾರಿಯಲ್ಲಿ ಹೋಯಿತ್ತೆಂದು ಆಡು ಅಲ್ಲಿ ಹೇಗೆ ಹೋಗಲಾರದೋ ಹಾಗೆ ನಿಜವಾದ ಶಿವಭಕ್ತರು ಎಂಥ ಭಯಾನಕ ಸ್ಥಿತಿಯನ್ನಾದರೂ ನಿರಾಯಾಸವಾಗಿ ದಾಟುವಂತೆ ಭಕ್ತಿ ಹೀನರಿಗೆ ಶಕ್ಯವಿಲ್ಲ.

ಮರದ ನೆಳಲಲ್ಲಿ ತನ್ನ ನೆಳಲನ್ನು ಹುಡುಕುವುದು ಹೇಗೆ ಮೂಢತನವೋ ಹಾಗೆ ಮಹಾನುಭಾವರ ಭಕ್ತಿಯ ಆಶ್ರಯದಲ್ಲಿದ್ದವನು ತನ್ನ ಭಕ್ತಿಯ ಮಹತ್ವವನ್ನು ಹೇಳಿಕೊಳ್ಳುವುದು ಮಳ್ಳುತನವು.

ಗಾಣದಲ್ಲಿ ಎಳ್ಳಿಲ್ಲದಾಗ ಎತ್ತು ಎಷ್ಟುಸಾರೆ ಗಾಣವನ್ನು ಸುತ್ತಿದರೂ ಹೇಗೆ ವ್ಯರ್ಥವೋ ಹಾಗೆ ಭಕ್ತಿಯಿಲ್ಲದವನು ಎಷ್ಟು ಪೂಜಾದಿಗಳನ್ನು ಮಾಡಿದರೂ ವ್ಯರ್ಥ.

ಉಪ್ಪನ್ನು ನೀರಿನಲ್ಲಿ ಅದ್ದಿದ ಮೇಲೆ ಅದು ನೀರಿನಲ್ಲಿಯೇ ಬೆರೆತು ಹೋಗಿ ತನ್ನ ಊಟಕ್ಕೆ ಹೇಗೆ ಉಪ್ಪು ಇಲ್ಲದಂತಾಗುತ್ತದೆಯೋ ಹಾಗೆ ನಾನು ಮಾಡಿದ ಪೂಜಾದಿ ಕ್ರಿಯೆಗಳೆಲ್ಲವೂ ನನ್ನಲ್ಲಿ ಭಕ್ತಿಯಿಲ್ಲದ್ದರಿಂದ ವ್ಯರ್ಥವಾದವು.

ಹೀನ ಮನಸ್ಸಿನವರಿಗೆ ದೀಕ್ಷೆ ಸಲ್ಲದು

ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆ ಕೊಟ್ಟರೆ ಭಕ್ತಿಯೆಂತಹುದೆ? ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಿಲ್ಲದೆ ಅದರ ಗಂಜಳ ಬಿಡದಣ್ಣ.

ಅರ್ಥ : ಲಿಂಗಧಾರಣೆಯ ದೀಕ್ಷೆಯನ್ನು ಕೊಡುವಾಗ ದೀಕ್ಷೆ ಹೊಂದುವವರ ಕುಲ ಜಾತಿಗಳನ್ನು ನೋಡದೆ ಅವರ ಮನಸ್ಸು ಶುದ್ಧವಾಗಿದೆಯೋ ಇಲ್ಲವೋ ಎಂಬುದನ್ನೇ ನೋಡಬೇಕು. ಲಿಂಗನಿಷ್ಠೆ ಬಲಿಯುವ ಶುದ್ಧ ಮನಸ್ಸಿದ್ದವರಿಗೇನೇ ಶಿವದೀಕ್ಷೆಯನ್ನು ಕೊಡಬೇಕು. ಲಿಂಗನಿಷ್ಠೆ ನೆಲೆಗೊಳ್ಳದಂತಹ ಚಂಚಲ ಮನಸ್ಸಿನವನಿಗೆ ದೀಕ್ಷೆ ಕೊಟ್ಟು ಅವನ ಆತ್ಮೋನ್ನತಿಯಾಗಬೇಕೆಂದು ಅಪೇಕ್ಷಿಸುವುದು ಕುಂಬಳಕಾಯಿಯನ್ನು ಬಲಿಸಲು ಕಬ್ಬಿಣದ ಕಟ್ಟು ಕೊಟ್ಟಂತೆಯೇ ಸರಿ.

ಸಗಣಿಯಿಂದ ಗಣಪತಿಯನ್ನು ಮಾಡಿ ಅದನ್ನು ಸಂಪಿಗೆ ಹೂವಿನಿಂದ ಪೂಜಿಸಿದರೆ ನೋಡಲು ಚಂದಕಾಬಹುದೇ ವಿನಾ ಹತ್ತಿರ ಹೋದರೆ ಹೇಗೆ ಸಗಣಿಯ ದುರ್ವಾಸನೆಯು ಬಂದೇ ಬರುವುದು ಹಾಗೆಯೇ ಹೀನ ಮನಸ್ಸಿನವನಿಗೆ ಲಿಂಗಧಾರಣೆಮಾಡಿ ಭಸ್ಮ ರುದ್ರಾಕ್ಷಿಗಳನ್ನು ಧರಿಸಿದರೆ ನೋಡಲು ಶಿವಭಕ್ತನಂತೆ ಕಂಡರೂ ಆತನ ಹೀನಾಚಾರಗಳು ಅಸಹ್ಯವನ್ನೇ ಉಂಟುಮಾಡದಿರಲಾರವು.

ಶರಣರ ಸೇವೆ ಮಾಡು

ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯ ರೇಖೆ ಇಲ್ಲದನಕ್ಕರ? ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು? ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು? ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು? ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ ಲಿಂಗವಿದ್ದು ಫಲವೇನು? ಏತ ತಲೆಬಾಗಿದರೇನು ಗುರುಭಕ್ತನಾಗಬಲ್ಲುದೆ? ಇಕ್ಕುಳ ಕೈ ಮುಗಿದರೇನು ಭೃತ್ಯಾಚಾರಿಯಾಗಬಲ್ಲುದೆ? ಗಿಳಿಯೋದಿದರೇನು ಲಿಂಗವೇದಿಯಾಗಬಲ್ಲುದೆ? ಕೂಡಲಸಂಗನ ಶರಣರು ಬಂದ ಬರವ ನಿಂದ ನಿಲವ ಅಂಗಸಂಗಿಗಳೆತ್ತ ಬಲ್ಲರು?

ಅರ್ಥ : ಧನರೇಖೆಯು ಕೈಯಲ್ಲಿ ಘನವಾಗಿದ್ದರೂ ಅಲ್ಪಾಯುವಾಗಿದ್ದರೆ ಹೇಗೆ ಅದು ವ್ಯರ್ಥವೋ, ವೈರಿಗಳ ಸಂಹಾರಕ್ಕೆ ಬಹು ಶ್ರೇಷ್ಠವಾಗಿರುವ ಚಂದ್ರಾಯುಧವು ಹೇಡಿಯ ಕೈಯಲ್ಲಿದ್ದರೆ ಹೇಗೆ ಅದು ವ್ಯರ್ಥವೋ, ಕನ್ನಡಿಯು ಕುರುಡನ ಕೈಯಲ್ಲಿದ್ದರೆ ಮತ್ತು ಮಾಣಿಕ್ಯವು ಮಂಗನ ಕೈಯಲ್ಲಿದ್ದರೆ ಹೇಗೆ ವ್ಯರ್ಥವಾಗುವವೋ ಹಾಗೆಯೇ ಶಿವಶರಣರ ಇಂಗಿತವನರಿತು ಅವರಿಗೆ ಸೇವೆಯನ್ನು ಸಲ್ಲಿಸದವರು ಕೈಯಲ್ಲಿ ಲಿಂಗವನ್ನಿಟ್ಟುಕೊಂಡು ಎಷ್ಟು ಪೂಜಿಸಿದರೂ ವ್ಯರ್ಥವೇ ಸರಿ.

ಶಿವಶರಣರು ಬಂದು ಉದ್ದೇಶವನ್ನರಿತು ಅದಕ್ಕೆ ಸರಿಯಾಗಿ ತನು ಮನ ಧನಗಳಿಂದ ಸೇವೆಯನ್ನು ಸಲ್ಲಿಸದೆ ಕೇವಲ ತಲೆಬಾಗಿ ಎಷ್ಟುಸಾರೆ ನಮಸ್ಕಾರ ಮಾಡಿದರೇನು? ಯಾತವು (ನೀರುಹಾಕುವ) ಯಾವಾಗಲೂ ತಲೆಬಾಗಿಕೊಂಡಿದ್ದ ಮಾತ್ರದಿಂದ ಅದೇನು ಗುರುಭಕ್ತಿಯನ್ನು ತೋರಿಸಿದಂತಾಯಿತೆ? ಕೇವಲ ಕೈ ಮುಗಿದ ಮಾತ್ರಕ್ಕೆ ಸೇವೆಯನ್ನು ಸಲ್ಲಿಸಿದಂತಾಯಿತೇ? ಇಕ್ಕಳವೂ ಯಾವಾಗಲೂ ಕೈಗಳನ್ನು ಜೋಡಿಸಿಕೊಂಡೇ ಇರುತ್ತದಲ್ಲವೇ? ಗುರುವೇ ಬುದ್ಧಿ ಎಂದು ಒಣ ಮಾತುಗಳನ್ನೇ ಆಡಿದ ಮಾತ್ರಕ್ಕೆ ಫಲವೇನು? ಗಿಳಿಯು ಕೂಡಾ ಇಂಥ ಮಾತುಗಳನ್ನು ಕಲಿತಿರುವುದಿಲ್ಲವೆ?

ಲಿಂಗಾಂಗಿ ಸದ್ಗುಣಿಯಾಗಿರಬೇಕು

ಬೆಳ್ಳೆತ್ತಿನ ಮರೆಯಲ್ಲಿ ಹುಲ್ಲೆಗಂಬ ತೊಡುವಂತೆ ಕಳ್ಳ ಹಾದರಿಗರ ಕೈಯಲು ಪೂಜೆಯ ಕೊಳ್ಳ ನಮ್ಮ ಕೂಡಲಸಂಗಮದೇವ. ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ. ಪಾಪಿ ಹೂವನೇರಿಸಲು ಮಸೆದಾಯುಧದ ಗಾಯ. ಹಸಿದು ಎಕ್ಕೆಯಕಾಯಿ ಮೆಲಬಹುದೆ? ನೀರಡಿಸಿ ವಿಷವ ಕುಡಿಯಬಹುದೆ? ಸುಣ್ಣ ತುಯ್ಯಲ ಬಣ್ಣ ಒಂದೆಂದರೆ ನಂಟುತನಕ್ಕೆ ಉಣಬಹುದೆ? ಲಿಂಗ ಸಾರಾಯ ಸಜ್ಜನರಲ್ಲದವರ ಕೂಡಲಸಂಗಮದೇವರೆಂತೊಲಿವ?

ಅರ್ಥ : ಬೇಟೆಗಾರನು ಚಿಗರೆಗೆ ಬಾಣ ಬಿಡುವಾಗ ತಾನು ಅದಕ್ಕೆ ಕಾಣಬಾರದೆಂದು ಕೃತ್ರಿಮವಾಗಿ ಒಂದು ಎತ್ತಿನಂತೆ ಮಾಡಿಕೊಂಡಿದ್ದರೆ ಮರೆಯಲ್ಲಿ ಹೇಗೆ ಕುಳಿತುಕೊಳ್ಳುತ್ತಾನೆಯೋ ಹಾಗೆ ತಮ್ಮ ದುರ್ಗುಣಗಳು ಅನ್ಯರಿಗೆ ಗೊತ್ತಾಗಬಾರದೆಂದು ಲಿಂಗಪೂಜೆಯ ವೇಷ ಹಾಕಿಕೊಂಡು ಅನ್ಯರ ಹೊನ್ನು ಹೆಣ್ಣುಗಳನ್ನು ಅಪಹರಿಸುವ ಕಳ್ಳರ ಮತ್ತು ವ್ಯಭಿಚಾರಿಗಳ ಪೂಜೆಯನ್ನು ಶಿವನು ತೆಗೆದುಕೊಳ್ಳುವುದಿಲ್ಲ.

ಸಿಟ್ಟಿನವನು ಲಿಂಗದ ಮೇಲೆ ನೀರೆರೆದರೆ ಅದು ಶಿವನ ಮೇಲೆ ರಕ್ತವನ್ನು ಸುರವಿದಂತಾಗುವುದು. ಅನೇಕ ಪಾಪ ಕಾರ್ಯಗಳನ್ನು ಮಾಡುತ್ತಿರುವವನು ಲಿಂಗಕ್ಕೆ ಹೂವನೇರಿಸಿದರೆ ಅದು ಶಿವನಿಗೆ ಮಸೆದ ಕತ್ತಿಯಿಂದ ತಿವಿದು ಗಾಯಗೊಳಿಸಿದಂತಾಗುವುದು. ಹಸಿವೆಯಾಗಿದೆಯೆಂದು ಎಕ್ಕೆಯ ಕಾಯನ್ನು ತಿಂದ್ದರೆ ಹೊಟ್ಟೆಯ ತಾಪವು ಮತ್ತಷ್ಟು ಹೆಚ್ಚುವುದಲ್ಲವೆ? ನೀರಡಿಕೆಯಾಗಿದೆಯೆಂದು ವಿಷವನ್ನು ನಮ್ಮ ನೆಂಟರು ನೀಡಿದ್ದಾರೆಂದು ಉಂಡರೆ ಪ್ರಾಣಕ್ಕೆ ಅಪಾಯ ಸಂಭವಿಸುವುದಲ್ಲವೆ? ಹಾಗೆಯೇ ಸದ್ಗುಣ ಸದಾಚಾರಗಳಿಲ್ಲದ ಲಿಂಗಾಂಗಿಗಳಲ್ಲಾದರೂ ಬೆರೆತು ನಡೆದರೆ ಅಪಾಯವೇ ಸಂಭವಿಸುವುದು. ಸದ್ಗುಣಿಗಳಲ್ಲದವರು ಲಿಂಗಾಂಗಿಗಳಾಗಿದ್ದರೂ ಶಿವನು ಅವರಿಗೆ ಒಲಿಯುವುದಿಲ್ಲ.

ಧನಸಹಾಯ ಮಾಡಬೇಕು

ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು. ದಿಟ ನಾಗರ ಕಂಡರೆ ಕೊಲ್ಲೆಂಬರಯ್ಯ, ಉಂಬ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ, ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯ, ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ. ಜಂಗಮ ಆಪ್ಯಾಯನವಾದರೆ ಲಿಂಗ ಸಂತುಷ್ಟಿ, ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ. ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದ ತಪ್ಪುದು ಕೂಡಲಸಂಗನ ಶರಣರಿಗೆ ಸವೆಸಲೇಬೇಕು.

ಅರ್ಥ : ಕಲ್ಲಿನಲ್ಲಿ ಕೊರೆದ ಹಾವಿಗೆ ನಾಗರಪಂಚಮಿಯ ದಿನ ಹಾಲನ್ನು ಎರೆಯಿರೆಂದು ಹೇಳುತ್ತಿದ್ದಾರಷ್ಟೆ. ಅದೇ ಕಾಲಕ್ಕೆ ನಿಜವಾದ ಹಾವೇ ಬಂದರೆ ಕಲ್ಲು ಕೋಲುಗಳನ್ನು ತೆಗೆದುಕೊಂಡು ಹೊಡೆಯಿರೆಂದು ಹೇಳುವರೇ ವಿನಾ ಅದಕ್ಕೆ ಹಾಲನ್ನು ಹಾಕುವುದಿಲ್ಲ. ಅದೇ ಪ್ರಕಾರ ಉಣ್ಣದಿರುವ ಲಿಂಗಕ್ಕೆ ಎಡೆಯನ್ನು ಹಿಡಿಯಿರೆಂದು ಹೇಳುತ್ತಿದ್ದಾರೆಯೇ ವಿನಾ ಊಟ ಮಾಡುವ ಜಂಗಮ ಬಂದರೆ ಉಣಿಸದೆ ಮನೆಯಲ್ಲಿ ಯಾರೂ ಮಾಡುವವರಿಲ್ಲ ಹೋಗಿರೆಂದು ಹೇಳುತ್ತಾರೆ.

ಕಾದ ಕಬ್ಬಿಣದಲ್ಲಿರುವ ಅಗ್ನಿಯು ಕಬ್ಬಿಣದ ಮೂಲಕವೇ ನೀರನ್ನು ಕುಡಿಯುತ್ತದೆ. ಗಿಡಗಳು ಭೂಮಿಯ ಮೂಲಕವಾಗಿಯೇ ನೀರನ್ನು ಹೀರಿಕೊಂಡು ಬದುಕಿ ಬೆಳೆಯುತ್ತಲಿವೆ. ಅದೇ ಪ್ರಕಾರ ಜಂಗಮದ ಎಂದರೆ ಜೀವಿಯ ಮೂಲಕವಾಗಿಯೇ ಲಿಂಗವು ಎಂದರೆ ಪರಮಾತ್ಮನು ತೃಪ್ತಿಯನ್ನು ಹೊಂದುತ್ತಾನೆ. ಪ್ರಾಣಿಗಳ ವಿವಿಧ ತಾಪಗಳನ್ನು ನಿವಾರಣೆ ಮಾಡಿದರೆ ದೇವರು ಸಂತುಷ್ಟನಾಗುತ್ತಾನೆ.

ಪಾದರಕ್ಷೆ ಹಾಕಿಕೊಂಡು ದೇವಾಲಯಕ್ಕೆ ಹೋಗಿ ದೇವರಿಗೆ ನಮಸ್ಕಾರ ಮಾಡುವವಗೆ ಮನಸ್ಸು ಪಾದರಕ್ಷೆಯ ಕಡೆಗಿರುತ್ತದೆಯೇ ವಿನಾ ದೇವರ ಕಡೆಗೆ ಹೇಗೆ ಇರುವುದಿಲ್ಲವೋ ಹಾಗೆಯೇ ಧನವು ವ್ಯಯವಾಗಬಾರದೆಂಬ ಉದ್ದೇಶವಿದ್ದವನು ಮಾಡುವ ಲಿಂಗಪೂಜೆ, ಜಂಗಮಸೇವೆ ಮೊದಲಾದವುಗಳೆಲ್ಲ ತೋರಿಕೆಯವುಗಳಾಗಿರುತ್ತವೆಯೇ ವಿನಾ ಆತನ ಮನಸ್ಸೆಲ್ಲ ದುಡ್ಡಿನ ಕಡೆಗೇ ಇರುತ್ತದೆ. ಇಂಥ ಧನದಾಸೆಯುಳ್ಳವನಾಗಬೇಡ, ಊಟ, ಉಡಿಗೆ, ತೊಡಿಗೆ ಮುಂತಾದವುಗಳ ಮೂಲಕ ದುಃಖಿಗಳ ಸೇವೆ ಮಾಡಲು ಧನವನ್ನು ಸೂರೆ ಮಾಡಬೇಕು.

ಧನವನ್ನು ಕೊಡು-ಕೊಳ್ಳುವ ರೀತಿ

ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ ಮಾಡಲಾಗದು ಭಕ್ತ, ಕೊಳಲಾಗದು ಜಂಗಮವು, ಹಿರಿಯರು ನರಮಾಂಸವ ಭುಂಜಿಸುವರೆ? ತನು ಉಕ್ಕಿ, ಮನ ಉಕ್ಕಿ ಮಾಡಬೇಕು ಭಕ್ತಿಯ ಮಾಡಿಸಿಕೊಳ್ಳಬೇಕು ಜಂಗಮ.

ಅರ್ಥ: ನಾಯಿಗಳ ಬೆನ್ನಟ್ಟಿ ಬರುವಾಗ ಓಡಿ ಓಡಿ ದಣಿದು ಮುಂದೆ ಹೋಗಲಾರದ ಚಿಗರೆಯು ನೆಲದ ಮೇಲೆ ಬಿದ್ದು ನನ್ನ ದೇಹವು ನಿಮಗಾಗಿಯೇ ಇದೆ, ತೆಗೆದುಕೊಳ್ಳಿ ಎಂದು ನಾಯಿಗಳಿಗೆ ಹೇಳುವಂತೆ, ಜಂಗಮರಿಗೆ ಧನವನ್ನು ಕೊಡಬಾರದೆಂದು ತಪ್ಪಿಸಿಕೊಳ್ಳಲು ನಾನಾ ಹಂಚಿಕೆಗಳನ್ನು ಮಾಡಿ ಕೊನೆಗೆ ಯಾವುದಾದರೊಂದು ಶುಭಾಶುಭ ಕರ್ಮಗಳ ಇರಿಕಿನಲ್ಲಿ ಸಿಕ್ಕಾಗ ಜಂಗಮರ ವಿನಾ ತನ್ನ ಕಾರ್ಯವೆ ನಡೆಯುವುದಿಲ್ಲವೆಂಬ ಪ್ರಸಂಗ ಬರಲು ಸಹಾಯ ಮಾಡುತ್ತೇನೆಂದು ಭಕ್ತನು ಹೇಳುವುದು ಸರಿಯಲ್ಲ.

ಹಾಗೆ ಇರಿಕಿಗೆ ಸಿಕ್ಕಾಗ ಮನನೊಂದು ಧನವನ್ನು ಕೊಡುವ ಭಕ್ತನ ದಾನವನ್ನು ಜಂಗಮರು ತೆಗೆದುಕೊಳ್ಳಬಾರದು. ತೆಗೆದುಕೊಂಡರೆ ಆತನ ಮಾಂಸವನ್ನೇ ಸೇವಿಸಿದಂತೆ. ದೊಡ್ಡವರೆಂಬುವವರು ಹೀಗೆ ನರಮಾಂಸವನ್ನು ಸೇವಿಸುವರೆ?

ಭಕ್ತನು ತನ್ನ ಸಂತೋಷದಿಂದಲೂ ಪ್ರೇಮ ಉತ್ಸಾಹಗಳಿಂದಲೂ ಧನವನ್ನು ಕೊಡಬೇಕು. ಜಂಗಮರು ಹಾಗೆ ಕೊಡಲ್ಪಡುವುದನ್ನೇ ಸ್ವೀಕರಿಸಬೇಕು.

ಆಚಾರದ ಗುಟ್ಟು

ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಸಾಲದೆ ಅಯ್ಯ? ಮಾಲೆಗಾರನ ಕೇಳಿ ನನೆ ಅರಳುವುದೇ? ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯ? ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನಿದಿರಿಂಗೆ ತೋರುವುದು ಆಚಾರವೇ ಅಯ್ಯ?

ಅರ್ಥ : ಬೆಲ್ಲವನ್ನು ತಿಂದಾಗ ಸಿಹಿ ಆದುದು ತನ್ನ ಮನಸ್ಸಿಗೇನೇ ಗೊತ್ತಾಗುತ್ತದಲ್ಲದೆ ಅನ್ಯರ ಸಾಕ್ಷಿಯೇನೂ ಅದಕ್ಕೆ ಬೇಕಿಲ್ಲವಷ್ಟೆ. ಮೊಗ್ಗೆಯು ಕಾಲಕ್ಕೆ ಸರಿಯಾಗಿ ತಾನೇ ಅರಳುತ್ತದಲ್ಲದೆ ಹೂವು ಕಟ್ಟುವವನನ್ನು ಕೇಳಿ ಅವನು ಅಪೇಕ್ಷಿಸಿದಾಗಲೇ ಅದೇನಾದರೂ ಅರಳುತ್ತದೆಯೇ?

ಇದೇ ಪ್ರಕಾರ ತನ್ನ ಅನುಭಾವದಿಂದ ಹಿತಕರವೆಂದು ಗೊತ್ತಾದುದೇ ಆಚಾರವಾಗುತ್ತದಲ್ಲದೆ ಆಗಮದಲ್ಲಿ ಹೀಗೆ ಹೇಳಿದೆ, ಅದರಂತೆಯೇ ನಡೆಯಿರಿ, ಅದೇ ಆಚಾರವೆಂದು ಹೇಳಿದರೆ ಅದು ಆಚಾರವಾಗಿ ಪರಿಣಮಿಸುವುದೇ? ತಾನು ಶಿವನಲ್ಲಿ ಬೆರೆತಿದ್ದೇನೆಂದು ಅದನ್ನೇ ಮುಂದು ಮಾಡಿ ಹೇಳುವುದು ಆಚಾರವಲ್ಲ. ಆಚಾರದ ಗುಟ್ಟು ಅನುಭಾವವೇ ವಿನಾ ಅನ್ಯರ ಮಾತು ಮತ್ತು ಆಗಮಾದಿ ಗ್ರಂಥಗಳಲ್ಲ.

ಮೋಕ್ಷದ ಬೀಡು

ಸ್ವರ್ಗಲೋಕ, ಮರ್ತ್ಯಲೋಕ, ಎಂಬ ಸೀಮೆ ಉಳ್ಳನ್ನಕ್ಕ ಕೇವಲ ಶರಣನಾಗಲರಿಯ, ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ.

ಅರ್ಥ: ಇದು ಮರಣಾಧೀನರಾದ ಮನುಷ್ಯರ ಲೋಕ, ಮರಣರಹಿತವಾಗಿರುವ ಸ್ವರ್ಗಲೋಕವೆಂಬುದೊಂದು ಬೇರುಂಟು ಎಂದು ಯಾರು ತಿಳಿದಿದ್ದಾರೆಯೋ ಅವರು ಶಿವಶರಣರಲ್ಲ. ಈ ಲೋಕವೇ ಸ್ವರ್ಗಲೋಕ ಶಿವಾಚಾರಶೀಲರಿಗೆ, ಶಿವನಲ್ಲಿ ಸೇರುವುದು ಸತ್ತ ಮೇಲಲ್ಲ, ಸತ್ತ ಮೇಲೆ ಸ್ವರ್ಗವೆಂದರೆ ರಸವತ್ತಾದ ಕಬ್ಬಿನ ಬುಡವನ್ನು ಬಿಟ್ಟು ತುದಿಯಾದ ಚಂಡಿಯನ್ನು ತಿನ್ನುವಂತೆಯೇ ಸರಿ. ಈ ಲೋಕದಲ್ಲಿ ಬದುಕಿರುವಾಗಲೆ ಶಿವಾಚಾರ ಭಕ್ತಿ ಜ್ಞಾನ ವೈರಾಗ್ಯಗಳಿಂದ ನಡೆದುಕೊಂಡದ್ದಾದರೆ ರಸವತ್ತಾದ ಕಬ್ಬಿನ ಬುಡವನ್ನು ತಿಂದಂತೆ ಜೀವಿತವು ಶಿವಾನಂದಮಯ ವಾಗುವುದು.

ಶಿವನ ಕಾಣುವ ರೀತಿ

ಜಗವ ಸುತ್ತಿಪ್ಪುದು ನಿನ್ನ ಮಾಯೆ ಅಯ್ಯ, ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ

ಕರಿಯು ಕನ್ನಡಿಯೊಳಡಗಿದಂತೆ ನೀನೆನ್ನೊಳಡಗಿದೆ ಕೂಡಲಸಂಗಮದೇವಾ.

ಅರ್ಥ : ಶಿವನ ಮಾಯೆಯು ಈ ಜಗತ್ತನ್ನೇ ಸುತ್ತಿದೆ. ನನ್ನ ಮನಸ್ಸಾದರೋ ಶಿವನನ್ನು ಸುತ್ತಿದೆ. ಆದುದರಿಂದ ಘನವಾದ ಆನೆಯು ಚಿಕ್ಕದಾದ ಕನ್ನಡಿಯಲ್ಲಿ ತೋರುತ್ತಿರುವಂತೆ ವಿಶ್ವವ್ಯಾಪಿಯಾದ ಶಿವನು ಕನ್ನಡಿಯಂತಹ ಪರಿಶುದ್ಧವಾದ ನನ್ನ ಮನಸ್ಸಿನಲ್ಲಿಯೇ ತೋರುತ್ತಿದ್ದಾನೆ.

❖❖

ಶ್ರೀ ಕಲ್ಮೇಶ್ವರ ರಥೋತ್ಸವ ಗ್ರಂಥಮಾಲೆಯ
ಪುಷ್ಪಗಳು

(೧) ಜಾತ್ರೆಗಳ ಸುಧಾರಣೆ
(೨) ತುರಣರ ಕೈಗನ್ನಡಿ
(೩) ಗಾಂಧಿ ಸಂದೇಶ
(೪) ಗಾಂಧಿಯವರ ಗೋಸೇವೆ
(೫) ಮಹಾನುಭಾವರಾದ ಬಸವಣ್ಣನವರ ಉಪಮೆಗಳು

ಅಂಚೆ ವೆಚ್ಚಕ್ಕಾಗಿ ೨ ಆಣೆ ಅಂಚೆ ಚೀಟಿಗಳು ಕಳಿಸುವವರಿಗೆ ಐದು ಪುಸ್ತಕಗಳು ಉಚಿತವಾಗಿ ಕಳಿಸಲ್ಪಡುವವು

ಜವಳಿ ಮಹಂತಪ್ಪ ಚಿತ್ತವಾಡಗಿ

ಪೋಸ್ಟ–ಚಿತ್ತಾಡಗಿ ಜಿ. ಬಳ್ಳಾರಿ

*

ಹಿಂದುತ್ವಕ್ಕಾಗಿ ಹೋರಾಡುವ

ಶರಣ ಸಂದೇಶ

ವಾರ ಪತ್ರಿಕೆ

ಸಂಪಾದಕರು : ಶ್ರೀ ಹರ್ಡೇಕರ ಮಂಜಪ್ಪನವರು

ಹಿಂದುಗಳು ಅಗತ್ಯ ಓದಬೇಕು. ವಾರ್ಷಿಕ ಚಂದಾ ೩ ರೂ.

ಮ್ಯಾನೇಜರ–"ಶರಣ ಸಂದೇಶ"

ಆಲಮಟ್ಟಿ ಜಿ. ವಿಜಾಪುರ

ಶ್ರೀ ಮುಪ್ಪಿನ ಷಡಕ್ಷರಿದೇವ ಕೃತ

ಸುಬೋಧಸಾರ

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ : ೧೦

ಶ್ರೀ ಮುಪ್ಪಿನ ಷಡಕ್ಷರಿದೇವ ಕೃತ

ಸುಬೋಧಸಾರ


ಸ್ಥಾಪಕರು
ಸಂಚಾಲಕರು ಮತ್ತು ಪ್ರಕಾಶಕರು
ಶ್ರೀ.ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು
ಶ್ರೀ ಮ.ನಿ.ಪ್ರ. ಮುರುಘಾರಾಜೇಂದ್ರ ಪ್ರಸಾದನಿಲಯ
ಮುರುಘಾಮಠ, ಹಾವೇರಿ ಪೇಟೆ, ಧಾರವಾಡ

ಸಂಗ್ರಾಹಕರು
ಹರ್ಡೇಕರ ಮಂಜಪ್ಪನವರು

ಪ್ರಕಾಶಕರು :
ಶ್ರೀ.ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು
ಮುರುಘಾಮಠ, ಹಾವೇರಿ ಪೇಟೆ
ಮಠ, ನಂ. ೭೬೬೮
ಧಾರವಾಡ

ಮುದ್ರಣ - ೧೯೪೦

ಮುದ್ರಕರು :
ಬೀಳಗಿ ರಾಮಣ್ಣನವರು
ಲಿಂಗರಾಜ ಆರ್ಟ ಪ್ರೆಸ್
ಮನೆ ನಂ. ೨೨೦
ಮಾಳಮಡ್ಡಿ, ಧಾರವಾಡ



ಶ್ರೀ ಮ.ನಿ. ಪ್ರ ಮುರುಘೇಂದ್ರ ಮಹಾ ಶಿವಯೋಗಿಗಳು

ಗಚ್ಚಿನಮಠ, ಅಥಣಿ

*

ಅರ್ಪಣೆ

ಶ್ರೀ ಬಸವಾದಿ ಪ್ರಮಥರು ನಡೆದು ತೋರಿಸಿದ

ಷಟ್ಸ್ಥಲಮಾರ್ಗದಲ್ಲಿ ನಡೆದು, ನಡೆದಂತೆ ನುಡಿದು ಶಿವಯೋಗದ ಘನತೆಯನ್ನು ಬೀರಿದ

ಮಹಾತಪಸ್ವಿಗಳೂ ವೈರಾಗ್ಯ ಮೂರ್ತಿಗಳೂ ಕಾರಣಪುರುಷರೂ ಆದ

ಅಥಣಿ ಗಚ್ಚಿನಮಠದ

ಶ್ರೀಮನ್ನಿರಂಜನ ಪ್ರಣವಸ್ವರೂಪಿ

ಮುರುಘೇಂದ್ರ ಮಹಾಶಿವಯೋಗಿಗಳ

ಸ್ಮಾರಕವಾಗಿ

ಅವರ ಅಡಿದಾವರೆಗಳಿಗೆ ಈ ಗ್ರಂಥ ಪುಷ್ಪವನ್ನು ಭಕ್ತಿಯ ಕಾಣಿಕೆಯಾಗಿ ಅರ್ಪಿಸಿದೆ.

*

ಪ್ರಕಾಶಕರ ಮೊದಲ್ಮಾತು

ಲಿಂಗೈಕ್ಯ ಶ್ರೀಮದಥಣಿ ಮುರುಘೇಂದ್ರ ಮಹಾಶಿವಯೋಗಿಗಳವರ ಸ್ಮರಣಾರ್ಥವಾಗಿ ಪ್ರಾರಂಭಿಸಿದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯಲ್ಲಿ ಶ್ರೀ ಮುಪ್ಪಿನ ಷಡಕ್ಷರಿ ಸ್ವಾಮಿಗಳು ನಿರೂಪಿಸಿದ "ಸುಬೋಧ ಸಾರ" (ಕೈವಲ್ಯವೂ) ಹತ್ತನೆಯದಾಗಿದೆ.

೧೯೪೦ನೆಯ ಇಸ್ವಿಯಲ್ಲಿ ಲಿಂ. ಹರ್ಡೇಕರ ಮಂಜಪ್ಪನವರು ಬಹು ಪರಿಶ್ರಮಪಟ್ಟು ಅಂದವಾಗಿ ಇದನ್ನು ಪ್ರಕಟಿಸಿದ್ದರು. ಅವರು ಸಂಗ್ರಹಿಸಿರುವದನ್ನೇ ಪುನಃ ಪರಿಷ್ಕರಿಸಿ ಮುದ್ರಿಸಲಾಗಿದೆ.

ಈ ಕಾರ್ಯದಲ್ಲಿ ನಿವೃತ್ತ ನ್ಯಾಯಾಧೀಶರಾದ ಶ್ರೀಮಾನ್ ಹಾಲಬಾವಿ ವೀರಭದ್ರಪ್ಪನವರು ತಮ್ಮ ಇಳಿಯ ವಯಸ್ಸಿನಲ್ಲಿಯೂ ಕೂಡ ಈ ಗ್ರಂಥವು ಶುದ್ಧವಾಗುವ ಹಾಗೆ ಬಹು ಪರಿಶ್ರಮಪಟ್ಟು ಸಹಾಯವನ್ನು ನೀಡಿದರು.

ಲಿಂಗರಾಜ ಮುದ್ರಣಾಲಯದ ಒಡೆಯರಾದ ಬೀಳಗಿ ಬಂಧುಗಳು ಅನೇಕ ಕಾರ್ಯಗಳಿದ್ದರೂ ಎಲ್ಲವನ್ನೂ ಬಿಟ್ಟು ಸ್ವಾಮಿಕಾರ್ಯವೆಂದು ಭಾವಿಸಿ ಬಹು ಶ್ರದ್ಧೆಯಿಂದ ಅಂದವಾಗಿ ಮುದ್ರಣ ಮಾಡಿ ಕೊಟ್ಟರು.

ಶ್ರೀ ಶಿವಯೋಗೀಶ್ವರನು ಸರ್ವರೀತಿಯಿಂದಲೂ ಸೇವೆ ಸಲ್ಲಿಸಿದ ಸರ್ವರಿಗೂ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಮುರುಘಾಮಠ
ಹಾವೇರಿ ಪೇಟೆ, ಧಾರವಾಡ
ಭಾ.ಶು. ೨, ಶಕ ೧೮೭೩
ತಾ. ೩-೯-೧೯೫೧

ಪ್ರಕಾಶಕರು

❖❖

*

ನನ್ನದೊಂದು ಅರಿಕೆ

ಸಮಾಜ ಸುಧಾರಣೆಯ ಸಲುವಾಗಿ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀ ಮೃತ್ಯುಂಜಯ ಸ್ವಾಮಿಗಳು ಬಹುಮುಖವಾಗಿ ಮಾಡಿದ ಕೆಲಸವು ಎಲ್ಲರಿಗೂ ಗೊತ್ತೇ ಅದೆ. ಅದರಲ್ಲಿ ವಚನಶಾಸ್ತ್ರ ಮತ್ತು ಶರಣಸಾಹಿತ್ಯಗಳನ್ನು ಪ್ರಕಟ ಮಾಡುತ್ತಿರುವ ಕೆಲಸವು ಬಹು ಮಿಗಿಲಾದದ್ದು. ಅವರು ಆರಂಭ ಮಾಡಿದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯಲ್ಲಿ ಈಗ ಪ್ರಕಟವಾಗುತ್ತಲಿರುವ ಗ್ರಂಥವು ಹತ್ತನೆಯದು. ಇದರ ಒಂದನೆಯ ಮುದ್ರಣದ ಪ್ರತಿಗಳು ತೀರಿಹೋಗಿ ಬಹುದಿನಗಳಾದುದರಿಂದ ಇದರ ಎರಡನೆಯ ಮುದ್ರಣ ಮಾಡಿಸಬೇಕೆಂದು ಶ್ರೀ ಸ್ವಾಮಿಗಳು ನಿರ್ಧರಿಸಿ ಅದರ ಅಚ್ಚಿನ ಕರಡುಗಳನ್ನು ನೋಡಲಿಕ್ಕೆ ನನಗೆ ಅಪ್ಪಣೆ ಮಾಡಿದರು. ಆ ಪ್ರಕಾರ ಅದರ ಮೊದಲನೆಯ ಪುಟಗಳ ಕರಡುಗಳನ್ನು ಅಚ್ಚುಕೂಟದವರು ನನ್ನ ಕಡೆಗೆ ತಂದಾಗ ಅವುಗಳನ್ನು ನೋಡಲಾಗಿ ಅವುಗಳಲ್ಲಿ ಶಬ್ದ ವಿಭಜನೆಯ ತಪ್ಪುಗಳಲ್ಲದೆ ವ್ಯಾಕರಣ, ಛಂದಸ್ಸು ಮೊದಲಾದವುಗಳ ಕೆಲವು ತಪ್ಪುಗಳು ನನಗೆ, ತೋರಿದವು. ನಾನೇನು ಈ ವಿಷಯಗಳ ಅಭ್ಯಾಸ ಮಾಡಿದವನಲ್ಲ. ಈ ತಪ್ಪುಗಳನ್ನು ನಾನು ತಿಳಿದಿದ್ದರೆ ಸರಿಯಾಗುವದೆಂದು ಪೂರ್ಣ ನಂಬಿಗೆಯೂ ನನಗಿಲ್ಲ. ತಿದ್ದಬೇಕೋ ಅಥವಾ ಇದ್ದಕ್ಕಿದ್ದಂತೆ ಇಡಬೇಕೋ ಎಂಬ ತೊಡಕು ಉಂಟಾಯಿತು. ಈ ಮುದ್ರಣವು ನಿಯಮಿತ ಕಾಲದಲ್ಲಿಯೇ ಮುಗಿಯಬೇಕಾದುದರಿಂದ ಈ ಗ್ರಂಥದ ಬೇರೆ ಹಳೇ ಕೈಬರಹದ ಪ್ರತಿಗಳನ್ನು ಹುಡುಕಿ ಅವುಗಳ ಸಹಾಯದಿಂದ ತಿದ್ದುವಷ್ಟು ಅವಕಾಶ ಇರಲಿಲ್ಲ. ಏನೇ ಆಗಲಿ, ನನಗೆ ತಿಳಿದ ಮಟ್ಟಿಗೆ ತಿದ್ದಬೇಕೆಂದು ನಿಶ್ಚಯಿಸಿ ತಿದ್ದಿರುವೆನು. ಸುಹೃದಯರಾದ ವಾಚಕರು ಈ ಬಗ್ಗೆ ಸೂಚನೆಗಳನ್ನು ಮಾಡಿದಲ್ಲಿ ಮುಂದಿನ ಮುದ್ರಣದಲ್ಲಿ ಅವುಗಳ ಉಪಯೋಗ ಮಾಡಲಿಕ್ಕೆ ಅನುಕೂಲವಾಗುವದು.

ಈ ಗ್ರಂಥವನ್ನು ಈ ಮೊದಲು ನಾನು ನೋಡಿರಲಿಲ್ಲ. ಇದರ ಉತ್ಕೃಷ್ಟತೆಯ ಬಗ್ಗೆ ಶ್ರೀ ಕಾವ್ಯಾನಂದ ಅವರು ತಮ್ಮ ಮುನ್ನುಡಿಯಲ್ಲಿ ಸಾಕಷ್ಟು ವಿವರಿಸಿದ್ದಾರೆ. ಇದರ ಕರಡುಗಳನ್ನು ನೋಡುವದರಿಂದ ನನಗೆ ಇದರ ಅಭ್ಯಾಸವೇ ಆದಂತಾಯಿತು. ಈ ಸುಸಂಧಿಯನ್ನು ಒದಗಿಸಿಕೊಟ್ಟದ್ದಕ್ಕಾಗಿ ಶ್ರೀ ಸ್ವಾಮಿಗಳವರ ಅಡಿದಾವರೆಗಳನ್ನು ನಾನು ಭಕ್ತಿಪೂರ್ವಕವಾಗಿ ನೆನೆಯುತ್ತೇನೆ.

ಗೋಗ್ರಾಮ(ಗೋಕಾಕ)
ಸೋಮವಾರ ಶ್ರಾ.ವ. ೧೦, ಶಕ ೧೮೭೩ — **ವೀರಭದ್ರಪ್ಪ ಹಾಲಬಾವಿ**
ತಾ. ೨೭-೮-೧೯೫೧

❖❖

*

ಪರಿವಿಡಿ

❖❖

॥ ಶ್ರೀ ಶರಣ ॥

*

ಮುನ್ನುಡಿ

ಕೆಲ ದಿನಗಳ ಹಿಂದೆ ಆರೋಗ್ಯ ನಿಮಿತ್ತವಾಗಿ ಆಲಮಟ್ಟಿಯಲ್ಲಿದ್ದಾಗ ಕನ್ನಡ ನಾಡುನುಡಿಗಳ ಬಹುಮುಖ ಸೇವೆಯ ಶ್ರೀಮಾನ್ ಮಂಜಪ್ಪಣ್ಣನವರು ಖುಷಿಕವಿಯಾದ ಮುಷ್ಟಿನ ಷಡಕ್ಷರಿ ಯತಿಯ ಹಾಡುಗಬ್ಬಗಳ ಸಂಕಲನ ಸಂಶೋಧನ ಕಾರ್ಯತತ್ಪರರಾಗಿದ್ದರು. ಅವರಿತ್ತ ಆಣತಿಯಂತೆ ನಾನೂ ಆ ಕಾರ್ಯದಲ್ಲಿ ನನ್ನ ಅಳಿಲು ಸೇವೆಯನ್ನು ಸಲ್ಲಿಸಿದೆನು. ಸಾಮಾನ್ಯವಾಗಿ ತಾವು ಬರೆದು ಪ್ರಕಟಿಸಿದ ಗ್ರಂಥಗಳಿಗೆ ಹಿರಿಯರಿಂದ ಮುನ್ನುಡಿ ಬರೆಯಿಸುವುದು ಈಗಿನ ಸಂಪ್ರದಾಯ. ಹಿರಿಯರಾದ ತಮ್ಮ ಪ್ರಕಟನೆಗೆ ಕಿರಿಯನಾದ, ಸಾಹಿತ್ಯ ಕ್ಷೇತ್ರದಲ್ಲಿ ಹೊಸಬನಾದ, ನನ್ನಿಂದ ಮುನ್ನುಡಿ ಬರೆಯಿಸುವದು ಪ್ರತಿ ಮಾತಿನಲ್ಲಿಯೂ ಹೊಸತನವನ್ನು ಹುಡುಕುವ ಶ್ರೀ ಮಂಜಪ್ಪನವರ ಸಂಪ್ರದಾಯ! ನಾನವರಿಗೆ ಎದೆದುಂಬಿ, ತಲೆವಾಗಿ, ನಿಯಮಿಸಿದ ಸೇವೆಯನ್ನು ಸಲ್ಲಿಸುವೆ.

ವಿಸ್ತಾರ, ವೈವಿಧ್ಯ, ವಿಪುಲತೆ, ವಿಚಾರವೈಶಾಲ್ಯ, ವೈಶಿಷ್ಟ್ಯ, ನಾವೀನ್ಯ, ನಿರ್ದುಷ್ಟ, ಉದಾತ್ತ ಉದ್ದೇಶಗಳ ಮೂಲಕ ವೀರಶೈವಸಾಹಿತ್ಯಕ್ಕೆ ಕನ್ನಡ ಸಾಹಿತ್ಯದಲ್ಲಿ ಉಚ್ಚವಾದ ಉನ್ನತವಾದ ಸ್ಥಾನ-ಮಾನವಿದೆ ಮನ್ನಣೆಯಿದೆ. ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ. ನ. ಕೃಷ್ಣರಾಯರು ಹೇಳುವಂತೆ, ಮಾನವನ ಸಂಸ್ಕೃತಿಯನ್ನು ಉಚ್ಚಗೊಳಿಸಿ, ಮಾನವನನ್ನು ಉನ್ನತ ವಿಹಾರ, ಉತ್ತಮ ವಿಚಾರಗಳಲ್ಲಿ ಲೀನನನ್ನಾಗಿ ಮಾಡುವುದೇ ಸಾಹಿತ್ಯದ ಉದ್ದೇಶವೆಂದು ಒಪ್ಪಿಕೊಂಡರೆ ವೀರಶೈವಸಾಹಿತ್ಯಕ್ಕೆ ಆ ಕೀರ್ತಿಯು ಯಥೇಚ್ಛವಾಗಿ ಸಲ್ಲುತ್ತದೆ. ಕೈವಲ್ಯಗಳ ಸಾಹಿತ್ಯ ಅಥವಾ ಶರಣಸಾಹಿತ್ಯವೂ ವೀರಶೈವ ಸಾಹಿತ್ಯ ಕಲ್ಪಕುಂಜದ ಕುಸುಮಶೋಭಿತ ಶಾಖೆಯೊಂದು.

ಉಗಮ

ಹರಿಹರನ ಹೇಳಿಕೆಯಂತೆ ವಚನಗಳೂ ಹಾಡುಗಬ್ಬಗಳಾಗುತ್ತವೆ. ಬಸವನ ಗೀತೆ ಎಂಬ ಹರಿಹರನ ವಾಕ್ಯದಲ್ಲಿ ವಚನಗಳು ಸಂಗೀತಸಾಹಿತ್ಯಗಳ ಸಂಗಮವೆಂಬರ್ಥವೇ ಧ್ವನಿತವಾಗುತ್ತದೆ. ವೀರಶೈವ ವೇದವ್ಯಾಸನಾದ ಪಾಲ್ಕುರಿಕೆ ಸೋಮನಾಥನು ಬಸವಣ್ಣನವರನ್ನು ಕವಿ, ಪಂಡಿತ, ಗಾಯಕ, ಚಕ್ರವರ್ತಿ ಎಂದು ಸಂಬೋಧಿಸಿದ್ದಾನೆ. ಪೂರ್ವದಿಂದಲೂ ವಚನಗಳನ್ನು ಹಾಡುವ ಪರಿಪಾಠವಿದೆಯೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಪ್ರಬುದ್ಧ ಕರ್ನಾಟಕದಲ್ಲಿ ಬರೆಯುತ್ತಾರೆ.

ಸ್ವತಃ ಹರಿಪರನೇ ತನ್ನ ಶರಣರಗಳೆ ಮಹಾಕಾವ್ಯದ ಪೂರ್ವ ಪೀಠಿಕೆಯಂತಿರುವ ಲಿಂಗಾರ್ಚನೆ ರಗಳೆಯಲ್ಲಿ :

ಲಲಿತ ಬಂಗಾಳದಿಂದೊಲಿದು ನಿಮ್ಮಂ ಹಾಡಿ
ಮಲಹರಿ ವರಾಳಿಯಿಂದೊಲಿದು ನಿಮ್ಮಂ ಹಾಡಿ
ದೇಶಿ ಗುಜ್ಜರಿಗಳಿಂದೀಶ ನಿಮ್ಮಂ ಹಾಡಿ
ದೇಶಾಕ್ಷೀ ಗೌಳದಿ ಮಹೇಶ ನಿಮ್ಮಂ ಹಾಡಿ

ಎಂದು ತನ್ನ ರಗಳೆಗಳ ಸಂಗೀತ ಪೂರ್ಣತೆಯನ್ನು ತಿಳಿಸಿದ್ದಾನೆ. ಷಟ್ಪದೀ ಸಂಪ್ರದಾಯ ಸಂಸ್ಥಾಪಕನಾದ ರಾಘವಾಂಕನಂತೂ ಕನ್ನಡ ಸಂಗೀತದ ಪಡಿಯಚ್ಚಿನಲ್ಲಿ ಷಟ್ಪದಿಸಾಹಿತ್ಯದ ಎರಕವನ್ನು ಹೊಯ್ದು ಕನ್ನಡ ಸಾಹಿತ್ಯವನವನ್ನು ಷಟ್ಪದಿಯ ಝೇಂಕಾರದಿಂದ ತುಂಬಿಬಿಟ್ಟನು. ಆದರೆ ಶರಣಸಾಹಿತ್ಯಕ್ಕೆ ಸ್ವತಂತ್ರ ಸುವ್ಯವಸ್ಥಿತ ಸ್ವರೂಪವು ಬಂದದ್ದು ಕನ್ನಡಸಾಹಿತ್ಯದ ಸೀಮಾಪುರುಷರಾದ ನಿಜಗುಣ ಶಿವಯೋಗಿಗಳಿಂದ. ಅವರೇ ಈ ನವೀನ ಸಾಹಿತ್ಯ ಸಂಪ್ರದಾಯದ ದೀಕ್ಷಾಚಾರ್ಯರು. ಸಾಹಿತ್ಯದಲ್ಲಿ ಹೊಸದೊಂದು ಸಂಪ್ರದಾಯವನ್ನು ಸಂಸ್ಥಾಪಿಸಲು ಬೇಕಾಗುವ ಅದ್ಭುತ ಶಕ್ತಿ, ಅಪೂರ್ವ ಪ್ರತಿಭೆ, ಅಸಾಧಾರಣ ವ್ಯಕ್ತಿತ್ವಗಳು ಅವರಲ್ಲಿದ್ದವು. ಅಂತೆಯೇ ಈ ಸಂಪ್ರದಾಯದ ಕೊನೆಯ ಕಬ್ಬಿಗರಾದ ಸೋಮೇಕಟ್ಟಿ ಕರಿವೃಷಭೇಂದ್ರರು ನಿಜಗುಣರನ್ನು ಮನವಾರೆ ಕೀರ್ತಿಸಿದ್ದಾರೆ.

ವಾಙ್ಮಯ ವಿಸ್ತಾರ

ನಿಜಗುಣರಲ್ಲಿ ಉಗಮ ಹೊಂದಿದ ಶರಣಸಾಹಿತ್ಯವಾಹಿನಿಯು ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಘನಮಠದಾರ್ಯರು, ಬಾಲಲೀಲಾ ಮಹಾಂತ ಶಿವಯೋಗಿಗಳು, ಮೈಲಾರ ಬಸಪ್ಪನವರು, ರಥೋದ್ಧರಣೆಯ ಸಂಗನಬಸವೇಶ್ವರರು, ಏಕೋತ್ತರಶತಸ್ಥಲದ ಸಿದ್ಧಲಿಂಗೇಶ್ವರ, ಕಡಕೋಳದ ಮಡಿವಾಳಪ್ಪನವರು, ಮತುಕೂರು ನಂಜುಂಡ ಶಿವಯೋಗಿಗಳು, ಕರಿವೃಷಭೇಂದ್ರರಲ್ಲಿ ಬೆಳೆದು, ಬಲಿತು, ವಿಸ್ತಾರವಾಗಿ, ವಿಶಾಲವಾಗಿ, ಪ್ರಶಾಂತಗಂಭೀರ ಗತಿಯಲ್ಲಿ ಪ್ರವಹಿಸುವ ಪುಣ್ಯಪಾವನ ಗಂಗೆಯಾಗಿ ಪರಿಣಮಿಸಿದೆ. ಕಾಲಕ್ರಮದಲ್ಲಿ ಹೆಚ್ಚು ಹೆಚ್ಚು ಸಾಹಿತ್ಯ ಸಂಶೋಧನೆ ನಡೆದಂತೆ ಈ ಶರಣಕವಿಗಳ ಸಂಖ್ಯೆ ಇಮ್ಮಡಿಯಾಗುವದರಲ್ಲಿ ಸಂದೇಹವಿಲ್ಲ.

ವಿಚಾರ ವೈಶಾಲ್ಯ

ಶರಣರಲ್ಲಿ ಕುಲದ ಛಲವಿಲ; ಜಾತಿಯ ಸೂತಕವಿಲ್ಲ; ಪಕ್ಷ ಪಂಥಗಳ ಕೋಲಾಹಲವಿಲ್ಲ ಅವರದು ವಿಶ್ವವ್ಯಾಪಕ ದೃಷ್ಟಿ. ಹೃದಯವೈಶಾಲ್ಯ ಅವರದು. ಮುಪ್ಪಿನ ಷಡಕ್ಷರಿಯ ಹಾಡನ್ನು ಕೇಳಿ!

ಅವರವರ ದರುಶನಕೆ । ಅವರವರ ವೇಷದಲಿ ।
ಅವರವರಿಗೆಲ್ಲ ಗುರುವು ನೀನೊಬ್ಬನೆ ॥
ಅವರವರ ಭಾವಕ್ಕೆ । ಅವರವರ ಭಕ್ತಿಗೆ ।
ಅವರವರಿಗೆಲ್ಲ ದೇವ ನೀನೊಬ್ಬನೆ ॥
ಹೋರಾಟವಿಕ್ಕಿಸಲು । ಬೇರಾದೆಯಲ್ಲದೆ ।
ಬೇರುಂಟೆ ಜಗದೊಳಗೆ ಎಲೆ ದೇವನೆ! ॥

ಎಂಥ ಉನ್ನತ ವಿಚಾರ, ಉದಾತ್ತ ಭಾವ, ವಿಶಾಲ ಹೃದಯ! ಇದೇ ಅರ್ಥದ ಮಹಾಂತ ಶಿವಯೋಗಿಗಳ ಗೀತೆಯನ್ನು ಆಲಿಸಿ!

ರಾಗ : ದ್ವಿಜಾವಂತಿ

ಅವರೆವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ ! ॥
ಇರದೊಂದು ಕನ್ನಡಿಯ ನೂರಾರು ಜನ ಪಿಡಿಯೆ ।
ಸರಳವಾಗಿ ಅವರವರ ರೂಪು ಕಾಣುವಂತೆ ॥
ಹರಿಯ ಭಕ್ತರಿಗೆ ಹರಿಹರನ ಭಕ್ತರಿಗೆ ಹರ ।
ನರರೇನು ಭಾವಿಸುವರದರಂತೆ ತೋರುವನು! ॥

ಇದೇ ಸಂದರ್ಭದಲ್ಲಿ ಸಪ್ಪಣ್ಣಾರ್ಯರ ಅಮೃತವಾಣಿಯನ್ನು ಲಾಲಿಸಿ!

ರಾಗ : ಸಾರಂಗ

ಆ ದೇವನ ಪದ ಪದ್ಮವನಾವಗಮಭಿವಂದಿಸುವೆ ।
ಮೂದೇವರ ನಾಮಕ್ರಿಯೆ ರೂಪಗಳಳಿದುಳಿದ ॥

ಇಂಥ ಆದಿ ಅನಾದಿ ಇಲ್ಲದ, ಸುರಾಳ ನಿರಾಳವಿಲ್ಲದ, ಶೂನ್ಯ ನಿಶ್ಶೂನ್ಯವಿಲ್ಲದ, ನಾಮರೂಪಕ್ರಿಯೆಗಳಿಲ್ಲದ, ವಿಶ್ವಾತ್ಮನನ್ನು ಸರ್ವಾಂತರ್ಯಾಮಿ, ಸರ್ವೇಶನನ್ನು ಅನನ್ಯಭಾವದಿಂದ ಶರಣುಹೊಕ್ಕ ಶಿವಶರಣರಲ್ಲಿ ಜಾತಿಭಾವದ ಸಂಕುಚಿತ ವಿಚಾರಗಳಿಗೆ ಆಸ್ಪದವಿಲ್ಲ. ಇಷ್ಟೇ ಅಲ್ಲ. ಬೆಳಗಿನೊಳಗಣ ಮಹಾಬೆಳಗಾದ ಪರಮಾತ್ಮನ ಪ್ರಕಾಸವನ್ನರಿಯುವದು ಕುಲದ ಛಲ ನಿರ್ನಾಮವಾದಲ್ಲದೆ ಅಸಂಭವ ಅಶಕ್ಯವೆಂದೇ ಅವರು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಇದೋ ಕೇಳಿ!

ಕುಲದ ಛಲ ಹಿಡಿದಿರುವ ಕಲಕುಮನದವರಲ್ಲಿ
ತಿಳಿವೆಳಕ ಶಿವಚಂದ್ರ ಕಾಣ್ಬ ಪರಿಯೆಂತು?
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ
ಸಲೆ ಮಹಂತ ಲಿಂಗ ಚಿತ್ಸೂರ್ಯ ಕಾಣುವನು! ॥

ಜಾತಿ ಜಾತಿಗಳ ದ್ವಂದ್ವ ಹೋರಾಟ ನಡೆದು, ಪಂಥಪಂಥಗಳ ಘರ್ಷಣದಿಂದ ಹುಟ್ಟಿರುವ ದಾವಾನಲವು ಜನಾಂಗವನ್ನೇ ಭಸ್ಮಿತವನ್ನಾಗಿ ಮಾಡುತ್ತಿರುವ ನೈತಿಕ ದಿವಾಳಿಯಲ್ಲಿ ಸದ್ಗುಣ ಸದಾಚಾರಗಳು ಮಂಜಿನಂತೆ ಮಾಯವಾಗಿ ವಿಶ್ವದಲ್ಲಿ ರಾಕ್ಷಸೀ ಲಾಲಸೆಯ ಮೂಲಕ ಅಶಾಂತಿಪರ್ವವೂ ನೆಲೆಗೊಂಡ ಈ ಕಾಲದಲ್ಲಿ, ಆಧ್ಯಾತ್ಮಿಕ ಅನುಭಾವ ಪರಿಮಳವನ್ನು ಹೊರಸೂಸುವ, ಬುದ್ಧಿ ಹೃದಯಗಳಿಗೆ ಬೆಳಕು ಶಾಂತಿಗಳನ್ನೀಯುವ, ಜಾತಿ ವೈಷಮ್ಯವನ್ನು ಹೊಡೆದೊಡಿಸುವ ಶಾಂತಿಪ್ರದ ಶರಣಸಾಹಿತ್ಯದ ಪ್ರಸಾರ ವ್ಯಾಸಂಗಗಳು ಅದೆಷ್ಟು ಹಿತಕರ, ಪ್ರಯೋಜನಕಾರಿಯೆಂಬುದನ್ನು ಸುಜ್ಞರು ವಿಚಾರಿಸಲಿ.

ಮುಪ್ಪಿನ ಷಡಕ್ಷರಿಯ ಮೂರ್ತಿ ಸ್ವರೂಪ

ಸಮಗ್ರವಾದ ಸಾದ್ಯಂತವಾದ ಜೀವನ ಚರಿತ್ರೆ ದೊರೆಯದಿದ್ದರೂ ಇವರ ಭಕ್ತಿಪರ, ವೈರಾಗ್ಯ ಬೋಧಕ ಹಾಡುಗಳಲ್ಲಿ ಇವರ ನಿರ್ಮಲ ವ್ಯಕ್ತಿತ್ವವು ಸ್ಫುಟವಾಗಿ ರೂಪುಗೊಂಡಿದೆ. ಕೀರ್ತನ ಕೇಸರಿ ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳು ಇವರನ್ನು ನಿಜಗುಣರ ಸಮಕಾಲೀನರೆಂದೂ, ಶಂಭುಲಿಂಗನ ಬೆಟ್ಟದಲ್ಲಿಯೇ ಇವರ ಗವಿಯಿದೆ ಎಂದೂ ಶಿವಾನುಭವವನ್ನು ಬರೆದಿದ್ದಾರೆ. ಇವರ ಮೊದಲನೆ ಹಾಡಿನಲ್ಲಿ ಯರಗಂಬಳಿಯ ಸಿದ್ಧಲಿಂಗರು ಇವರಿಗೆ ಶಿವತತ್ವಾನುಭವವನ್ನು ಅರುಹಿದ ಗುರುಗಳೆಂದು ತಿಳಿಯುತ್ತದೆ. ಇದಕ್ಕಿಂತ ಹೆಚ್ಚಿಗೆ ಇವರ ಜೀವನ ಸಂಗತಿ ಯಾವದೂ ತಿಳಿದಿಲ್ಲ.

ಆದರೆ ಇವರ ನಿಜವಾದ ಉಜ್ವಲವಾದ ಉನ್ನತವಾದ ವ್ಯಕ್ತಿತ್ವವು ಒಡಮೂಡಿರುವದು ಇವರ ಹಾಡುಗಳಲ್ಲಿ, ಧರೆಯ ಸುಖದ ಭೋಗವೇನಗೆ, ಹರಿದು ಹೋಗಲಿ, ಒಡೆದ ಗಡಿಗೆ, ಹರಕು ಜೋಳಿಗೆ, ಎಡದ ಕೈಯೋಳ್ ಮುರಿದ ಕೋಲು ಇಷ್ಟೇ ಸಾಕು. ಊರನೆಲ್ಲ ತಿರಿದು ತಂದರು ಒಡಲಿಗಾಗದಿರಲಿ; ದಾರಿಯಲ್ಲಿ ಅರ್ಧ ಚೆಲ್ಲಿಹೋಗಲಿ; ಮತ್ತೆ ತಿರಿಯಲು ಹೋದರೆ ಯಾರೂ ಇಲ್ಲವೆನ್ನಲಿ; ಇಷ್ಟಾಗದ ಹೊರ್ತು ಮಾರಹರನ ನೆನೆವ ಮನವಾಗದು.

ಕಾಡಲೇಕೆ ನರರುಗಳನು? ಬೇಡಿ ಬಳಲಲೇಕೆ? ರೂಢಿಗೀಶನೆಮಗೆ ದೈವವಾಗಿ ಇರುತಿರೆ ಯಾರ ಹಂಗೇನು? ಮೃಡನ ಪೂಜೆ ಮಾಡುವದಕೆ ಮಡುವಿನಗ್ಗವಣಿಗಳುಂಟು. ಒಡಲಿಗನ್ನ ದುಡಿದರುಂಟು. ಬುದ್ಧಿಯನ್ನು ಹೇಳುವುದಕೆ ಆದ್ಯರುಗಳ ವಚನವುಂಟು. ಉದ್ಧರಿಸುವೊಡೆ ಶಿವನ ಮಂತ್ರವುಂಟು. ಇನ್ನೇನು ಬೇಕು? ಎನಗೆ ಭೋಗ ಭಾಗ್ಯ ಬೇಡ; ಎನಗೆ ಜಪವು ತಪವು ಬೇಡ; ಎನಗೆ ನಿಮ್ಮ ತೊತ್ತು ಸೇವೆ ನಿತ್ಯವಾಗಲಿ ಇದಿಷ್ಟೇ ಕೋರಿಕೆ, ಬಯಕೆ, ಹಂಬಲ, ಕುಟ್ಟುತ್ತ ಬೀಸುತ್ತ ನೆಟ್ಟನೇ ನನ್ನ ಒಡಹುಟ್ಟಿದವರನು. ಹಾಡುವದೇ ದಿನದ ಕಜ್ಜ. ಬಂದವರ, ಬರುವವರ, ನಿಂದವರ, ನೆರೆದವರ ಕುಂದದಲೆ ತಮ್ಮವರನು ಕೇಳುವದೆ ನಿತ್ಯದ ಹೊರೆ! ತನ್ನ ಕಾಯವನ್ನೇ ಶಿವನ ಉನ್ನತಾಲಯ ಮಾಡಿ ತನ್ನ ಸರ್ವಾಂಗಗಳನ್ನೂ ಮನಪ್ರಾಣಗಳನ್ನೂ ಚನ್ನಷಡಕ್ಷರಿಗೆ ಸಮರ್ಪಿಸಿ, ಭಾವಲಿಂಗಪೂಜಾ ನಿರತನಾದ ಸರ್ವಸಂಗವಿದೂರ ವೈರಾಗ್ಯಮೂರ್ತಿ ಮುಪ್ಪಿನ ಷಡಕ್ಷರಿ. ಈ ಭಾವಲಿಂಗಾರ್ಚನೆಯ ಪೂಜಾದ್ರವ್ಯಗಳಾದರೂ ಎಂತಹವು:

> ಎನ್ನ ಸಮತೆಯ ಜಲವು । ಎನ್ನ ಸದ್ಗುಣ ಗಂಧ ।
> ಎನ್ನ ನಿತ್ಯತ್ವವೇ ಅಕ್ಷತೆಗಳು ॥
> ಎನ್ನ ಜ್ಞಾನವೇ ಪುಷ್ಪ । ಎನ್ನ ಭಕ್ತಿಯೇ ಬೋನ ।
> ಎನ್ನ ಮನವೇ ನಿಮಗೆ ಪೂಜಾರಿಯು ॥

ತನ್ನನ್ನು ಶರಣರ ಶಿಶುವೆಂದು ಭಾವಿಸಿ, ಅಕ್ಕ ನಾಗಮ್ಮ ಸತ್ಯ ಚಂಗಳೇ ಚೆಲ್ವೆ । ಅಕ್ಕರೆಯ ಮಹಾದೇವಿ ಸುಗ್ಗವ್ವೆಯ । ಚಿಕ್ಕ ಕೊಡಗೂಸಿನವರಕ್ಕರೆಯ ತೊತ್ತಿನ । ಮಕ್ಕಳೆಂದು ತಿಳಿದು ಅವರ ಎತ್ತಾಗಿ, ಅವರ ತೊತ್ತಾಗಿ, ಅವರ ಪಶುವಾಗಿ ಸುಖದಿಂದಿದ್ದು, ಅವರುಂಡು ಮಿಕ್ಕುದನು, ಅವರುಟ್ಟು ಬಿಟ್ಟುದನು. ಅವರುಗಿದ ತಂಬುಲವ ಸವಿದು, ಅವರಂಗಳವ ಗುಡಿಸಿ ಅವರ ಬಾಗಿಲ ಕಾಯ್ದು, ಅವರ ಕೀಳಿಲಿಸೇರಿಕೊಂಡಿರ್ಪ ವರವನ್ನೇ ಕೋರುವ ಶರಣಸೇವಾಭಕ್ತಿಯ ಪರಾಕಾಷ್ಠತೆ, ಪರಿಪಕ್ವತೆ, ಪರವಶತೆ ಎಷ್ಟು! ಪಾವಿತ್ರ್ಯವೆಷ್ಟು! ಪರಿಪೂರ್ಣತೆ ಎಷ್ಟು!

ಬಸವಣ್ಣನವರಂತೆ ಭಕ್ತಿಯಿಲ್ಲದ ಬಡವ ನಾನೆಂದು ತಿಳಿದು, ಎಲ್ಲರಲಿ ಒಂದೊಂದ ಬೇಡಿಕೊಂಡು, ನಡೆವ ನುಡಿವ ಕೊಡುವ ಉಂಬ ಉಡುವ ತೊಡುವ ಪ್ರಾಣ ಬಿಡುವ ಸಮಯದಲ್ಲಿ ಶಿವನ ನೆನೆವ ಮನವನೆ ಬಯಸಿ; ತೊಗಲ ಚೀಲ ಶುಕ್ಲದೊರತೆ, ಕರುಳ ಜಾಳಿಗೆ, ಅಘದ ಬೀಡು, ಮುಕುತಿಗೇಡು, ಜಗದಿ ಜನಿಸಿ ಕೆಡುವ ತನುವ ರಗಟೆಗಿಂತ ಕಡೆಯೆಂದು ಕಂಡು; ಹಿರಿಯರಿವರು ಕಿರಿಯರಿವರು, ಅರಿಗಳಿವರು, ಮಿತ್ರರಿವರು, ಅರಸರಿವರು, ತಿರುಕರಿವರು ಎಂಬ ಹಿರಿದು ಕಿರಿದಿನ ಭಾವವನ್ನುಳಿದು; ಇದುವೆ ಸುಖವು, ಇದುವೆ ದುಃಖ, ಇದುವೆ ಮೃದುವು, ಇದುವೆ ಕಠಿಣ, ಇದುವೆ ಶೀತ, ಇದುವೆ ಉಷ್ಣವೆಂಬ ದ್ವಂದ್ವಗಳನ್ನು ಮೀರಿ ದ್ವಂದ್ವಾತೀತನಾಗಿ; ಕರಣ ಹರಣವೆಲ್ಲ ಲಿಂಗಕಿರಣವಾಗಿ ಹೊರಗೆ ಮರೆದು; ಬಂದಡರಿಯದೆ, ಬೈದಡರಿಯದೆ, ನಿಂದಡರಿಯದೆ, ನೆರೆದಡರಿಯದೆ, ಕೊಂದಡರಿಯದೆ, ನಿಂತೊಡೆಲ್ಲಿಯು, ಕೂತೊಡೆಲ್ಲಿಯು, ಭ್ರಾಂತನಂದದಿ ಕಲ್ಲುಮರನಾಗಿಂತು ಪರವಶದಂಗಭಾವವನ್ನು ತಳೆದು ಕಾಡುವ ಮಾಯೆ ಓಡಿಸಿ, ಭವದ ವಿಭಾಡಿಸಿ, ಕಾಲನನೇಡಿಸಿ, ಕಾಮನನೋಡಿಸಿ, ಮರವೆಯ ಕಾಡಿಗೆ ವಹ್ನಿಯ ಪರಿವೇಷ್ಟಿಸಿ, ನೋಡುತ ಲಿಂಗವ, ಮೂಡುತ ಗದ್ಗದ, ಪಾಡುತ ಸುಖಜಲವಾಡುತ ನೇತ್ರದಿ–ಎಲ್ಲಿ ಮೆಚ್ಚು, ಎಲ್ಲಿ ಮೋಹ, ಎಲ್ಲಿ ಪ್ರೀತಿ, ಎಲ್ಲಿ ಪ್ರೇಮ, ಅಲ್ಲಿ ಅವರ ವಿಕಳತೆಯಲಿ ಸಾವ ತೆರದಲಿ–ಇಲ್ಲಿ ಹಿಂದು ಮುಂದ ಮರೆದು, ಅಲ್ಲಿ ಷಡಕ್ಷರಿಯ ಲಿಂಗದಲ್ಲಿ ಪ್ರಾಣಬಿಡುವ ಹಿರಿಯ ಹಂಬಲ, ಮನದ ಉದ್ವೇಗ ಬಗೆಯ ಬೇಗೆ, ಬಯಕೆಯ ಕಿಚ್ಚು ಮುಪ್ಪಿನಾರ್ಯರದು!

"ಎನ್ನ ಕಂದಿಸುತ್ತ ಬಹಳ ಎನ್ನ ಬಾಧಿಸುತ್ತ ಬಿಡದೆ ಎನ್ನನೊಂದು ನೆವಗಳಿಂದ ಕಾಡಿದವರಿಗೆ ಎನ್ನ ಕೊಂದಡವರಿಗೆಲ್ಲ ಎನ್ನ ಪೂಜೆಫಲಗಳೆಲ್ಲ ಉನ್ನತದೊಳವರಿಗಾಗಿ ಸುಖದಿ ಬಾಳಲಿ" ಎಂದು ಅಖಿಲ ಮಾನವ ಕೋಟಿಯ ಕಲ್ಯಾಣವನ್ನೇ ಕೋರಿ, ವಿಶ್ವಜೀವಿಗಳಿಗೆಲ್ಲ ಮಂಗಲವನ್ನೇ ಚಿಂತಿಸಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸಿ; ಮುನ್ನ ತಾನು ಯಾರು ಎಂದು ತನ್ನ ನಿಜವನರಿತು, ಚೆನ್ನ ಷಡಕ್ಷರಿಯಲಿಂಗ ತಾನೆಯಾಗಿ, ಸರ್ವಜಗವದೆಲ್ಲ ತನ್ನ ನಿಲುವೆಯಾಗಿ; ಎನ್ನ ಮನ ಪ್ರಾಣಗಳು ಹೊನ್ನು ಹಾವುಗೆಯಾಗಿ ನಿನ್ನ ಚರಣಕೆ ಯೋಗ್ಯ ಮೆಟ್ಟಾಗಲಿ ಎಂದು ಹಾರೈಸಿ ಹಂಬಲಿಸಿ, ಶಿವನ ನಿಜವನರಿತು ಭವದ ಕಡೆಯ ಕಂಡು ಕಾಲ ಕಾಮರನ್ನು ಗೆದ್ದು ಸರ್ವಾರ್ಪಣಯೋಗಿ ಷಡಕ್ಷರಿ!

ಇವರ ಹಾಡುಗಳನ್ನು ಪುನಃ ಪುನಃ ಓದಿದಂತೆ ಇವರ ಪಾವನಮೂರ್ತಿಸ್ವರೂಪದ ಮೆರಗು, ಉಜ್ವಲತೆ, ತೇಜಸ್ಸು, ಕಾಂತಿಪ್ರಭೆಗಳು ಹೆಚ್ಚು ಹೆಚ್ಚಾಗುತ್ತವೆ; ನವೋನವ ನಿತ್ಯನೂತವಾಗುತ್ತವೆ! ಇವರ ಅಪೂರ್ವ ಸುಂದರ ಅತೀವ ಮನೋಹರ ಸತಿಪತಿಭಾವದ ಹಾಡುಗಳನ್ನೋದಿದಾಗ ನಿಜಗುಣರಂತೆ "ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ!" ಎಂದೆನ್ನಬೇಕಾಗುತ್ತದೆ. ಅಷ್ಟು ಪಾರವಶ್ಯಪೂರ್ಣ, ಭಾವನಿರ್ಭರವಾಗಿವೆ ಆ ಹಾಡುಗಳು.

ಶೈಲಿಯ ಸೊಬಗು

ಯೋಗಿ ನಿಜಾನಂದದೊಳು ನುಡಿಸುವ ವೀಣೆ! ರಾಗರಸದ ತರಂಗಿಣಿ ನೋಡು ರಮಣಿ! ಎಂದು ಶಿವಯೋಗಿಚಕ್ರೇಶ್ವರ ನಿಜಗುಣರ ಗೀತೆ. ಮುಪ್ಪಿನ ಷಡಕ್ಷರಿ ದೇವರ ಹಾಡುಗಳೆಲ್ಲ ಅವರ ಸಹಜಾನಂದ ಸ್ಥಿತಿಯಲ್ಲಿ, ಅಂತರಂಗದ ಆವಿಷ್ಕರಣದ ಉತ್ಕಟೇಚ್ಛೆಯ ವಿಕಳತೆಯಲ್ಲಿ; ಕಾಯ ಮನ ಪ್ರಾಣಗಳ ಪರಿಶುದ್ಧಿ ಪಾವಿತ್ರ್ಯದ ಪ್ರಬಲ ಆಕಾಂಕ್ಷೆಯ ತಳಮಳದಲ್ಲಿ, ಮುಗ್ಧ ಮಧುರ

ಭಕ್ತಿಯ ತಾದಾತ್ಮ್ಯ ತನ್ಮಯತೆಗಳಲ್ಲಿ ವೀರವಿರತಿಯ ನಿತ್ಯತೃಪ್ತತೆಯಲ್ಲಿ ಅವರ ದೇಹವೀಣೆಯಿಂದ ಹೊರಬಿದ್ದ ಮಧುರ ಮಂಜುಳ ಆಲಾಪಗಳು; ಇಂಚರಗಳು! ತಾದಾತ್ಮ್ಯ, ತನ್ಮಯತೆ, ಪರವಶತೆ, ವಿಕಳತೆ, ಮುಗ್ಧತ್ವ, ಸಮರಸಭಾವ, ಅನನ್ಯಶರಣತೆ, ವೈರಾಗ್ಯದ ಉಜ್ವಲತೆ, ಭಕ್ತಿಯ ಆವೇಶ, ಸಲುಗೆ ಇವೇ ಮುಪ್ಪಿನಾರ್ಯರ ಹಾಡುಗಳ ಹೆಗ್ಗುರುತು; ವೈಶಿಷ್ಟ್ಯ! ಇವರ ಜೀವನದಂತೆ ಇವರ ಶೈಲಿಯೂ ಸರಳ, ಸುಂದರ, ಸುಮನೋಹರ!

ಕಾವ್ಯದ ಕಮನೀಯತೆ

ಮುಪ್ಪಿನಾರ್ಯರ ಹಾಡುಗಳಲ್ಲಿ ಭಾವವೆಲ್ಲ ಅನುಭಾವ, ರಸವೆಲ್ಲ ಸಮರಸ, ರುಚಿಯೆಲ್ಲ ಶುಚಿ! ಅಧ್ಯಾತ್ಮಜೀವಿಯ ಅಂತರಂಗದ ಆಕಾಂಕ್ಷೆಗಳೇ ಹಾಡಿನ ಹೊನಲಾಗಿ ಹರಿದಿರುವ ಮೂಲಕ ಸಾಯುಜ್ಯೋನ್ಮುಖರತಿಯ ಮನೋಹರತ್ವವೂ, ಅಪರೋಕ್ಷಜ್ಞಾನದ ಬೆಳಕೂ, ಸರ್ವಾರ್ಪಣ ಭಾವದ ಸೌಂದರ್ಯವೂ, ವೀರವಿರತಿಯ ಗಾಂಭೀರ್ಯವೂ, ಮಧುರ ಭಕ್ತಿಯ ಮನೋಜ್ಞತೆಯೂ ಹಾಡುಗಳ ತುಂಬೆಲ್ಲ ಸಾಂದ್ರವಾಗಿ ಹರಡಿಕೊಂಡಿವೆ. ಕವಿವರ್ಯ ಬೇಂದ್ರೆಯವರು ತಮ್ಮ ನಮಗೆ ಬೇಕಾದ ಕಾವ್ಯವೆಂಬ ಲೇಖನಗಳಲ್ಲಿ ಇವರ ಎಲೆ ಲಿಂಗವೇ! ಎಂಬ ಹಾಡನ್ನು ಉದಾಹರಿಸಿ, ಹೀಗೆ ಹಾಡಬಲ್ಲ ಸರ್ವ ಸಮರ್ಪಣದ ಸೇವಾಭಕ್ತಿಯ ಕವಿಗಳೆಮಗೆ ಬೇಕೆಂದು ಬರೆದಿದ್ದಾರೆ. ತಮ್ಮ ರೇಡಿಯೋ ಭಾಷಣದಲ್ಲಿ ಇವರ ಕವನಗಳನ್ನು ವೆಗ್ಗಳವಾಗಿ ಉದಾಹರಿಸಿ ಇವರ ಹಾಡುಗಳ ಬಗ್ಗೆ ಇದ್ದ ತಮ್ಮ ಆದರ ಗೌರವಗಳನ್ನು ವ್ಯಕ್ತಪಡಿಸಿದ್ದಾರೆ.

ಭಾವದ ಬೆಡಗು

ತಮ್ಮ ಆಧ್ಯಾತ್ಮಿಕ ಪ್ರಗತಿಯನ್ನು, ಆಂತರಿಕ ಜೀವನದ ವಿಕಾಸವನ್ನು ಚಿತ್ರಿಸುವಾಗ ಮುಪ್ಪಿನಾರ್ಯರು ತಮ್ಮ ಹಾಡುಗಳಲ್ಲಿ ಅನೇಕ ಅಪೂರ್ವವಾದ, ಹಿಂದೆ ಯಾರೂ ಕಂಡರಿಯದ, ನವೀನ ಭಾವಗಳನ್ನು ಹೆಣೆದಿದ್ದಾರೆ.

ಮುನ್ನ ನಮ್ಮ ಶರಣರುಗಳು ನಿನ್ನ ಕಾಡಿದುದಕ್ಕೆ ಈಗ
ಎನ್ನ ಮೇಲೆ ಹಗೆಯ ಮಗುಚುತಿಹೆಯೋ? ಕಾಣೆನು
ಪರಮ ಮುಗಿದೇವ ತನ್ನ ಹೊರೆಯ ಹೊರಿಸಲಾಗಿ ತಲೆಯು
ಉರಿದುದಕ್ಕೆ ಎನ್ನ ಕಾಡಿದಪಿರೊ? ಕಾಣೆನು
ಹಿಂದುಳಿಯಿತಮವಾಸ್ಯೆ ಮುಂದೆ ಹುಣ್ಣಿಮೆ ಬಂತು
ಎಂದಿಗೆ ಎನ್ನವನು ಕರೆಯಬಹರೋ
ಎನ್ನನೊಲ್ಲದಿದ್ದೊಡೆ ಏನು ಶಿವ ಶಿವಾ
ಎನ್ನ ನಿನ್ನ ಕೂಡಿಸಿದ್ದೇನು
ಎನ್ನ ಬಿಡುವೆನೆಂದೊಡೆ ನೀನು ಶಿವ ಶಿವಾ
ನಿನ್ನ ಬಿಡೆನು ಗುರುವಿನಾಜ್ಞೆಗೆ
ಇಂತಪ್ಪನವರ ಬಂಡ ನಿಂತು ಭವದೊಳು ಬಂದ
ನಂತೆಯೆಂದರೆ ನಿಮಗೆ ಕೊರತೆಯಯ್ಯ

ಮುಂತಾದ ನುಡಿಗಳಲ್ಲಿ ಅಡಗಿರುವ ಭಾವಸೌಂದರ್ಯವು ಅಪೂರ್ವವಿದೆ, ಅವರ್ಣನೀಯವಿದೆ; ಅನ್ಯಾದೃಶವಿದೆ!

ವಚನಶಾಸ್ತ್ರದ ವರ್ಚಸ್ಸು

ಬಸವಣ್ಣನವರಿಂದೀಚೆಗೆ ವೀರಶೈವ ಸಾಹಿತ್ಯದ ಮೇಲೆ ವಚನಶಾಸ್ತ್ರದ ಪ್ರಭಾವವು ವೆಗ್ಗಳವಾಗಿ ಬಿದ್ದಿದೆ. ಹರಿಹರ ಪದ್ಮರಸನು ರಗಳೆಗಳನ್ನೇ ಬರೆಯಲಿ, ರಾಘವಾಂಕ ಚಾಮರಸರು ಷಟ್ಪದಿಗಳನ್ನೇ ರಚಿಸಲಿ, ಮಗ್ಗೆಯ ಮಾಯಿದೇವರು ಶತಕಗಳನ್ನೇ ಸೃಜಿಸಲಿ, ಸರ್ವಜ್ಞನು ತ್ರಿಪದಿಗಳನ್ನೇ ಉಸಿರಲಿ, ಶರಣರು ಹಾಡುಗಳನ್ನೇ ಹಾಡಲಿ, ಎಲ್ಲರೂ ವಚನಶಾಸ್ತ್ರದ ಉದಾರ ಉದಾತ್ತ ತತ್ವಗಳನ್ನೇ ಪ್ರತಿಪಾದಿಸಿ ಪಸರಿಸಿದ್ದಾರೆ. ಪ್ರಸ್ತುತ ಗ್ರಂಥದಲ್ಲಿ ಪ್ರತಿಹಾಡಿನ ಕೆಳಗೆ ಅದೇ ಭಾವವನ್ನು ಸೂಚಿಸುವ ವಚನವನ್ನು ಜೋಡಿಸಿದೆ. ಸ್ವತಃ ಮುಪ್ಪಿನಾರ್ಯರೇ ಬುದ್ಧಿಯನ್ನು ಹೇಳುವುದಕ್ಕೆ ಆದ್ಯರುಗಳ ವಚನವುಂಟು ಎಂದು ಹಿಗ್ಗಿನಿಂದ ಹೇಳಿಕೊಂಡಿದ್ದಾರೆ. ಅವರೇ

ಹಿಂದಣ ವಾಸನೆಯನು ಪರಿಹರಿಸುವ
ಮುಂದಣ ಸದ್ಗತಿಯನು ತೋರುವ ಘನ
ಸಂದ ಪುರಾತರ ವಚನಗಳಿರುತಿರೆ ಏತರ ಭಯವೆಮಗೆ?

ಎಂದು ಹೆಮ್ಮೆಯಿಂದ ಧೈರ್ಯವಾಗಿ ವಚನಗಳ ಶ್ರೇಷ್ಠತ್ವವನ್ನು ಹಾಡಿ, ಹೊಗಳಿ ಹರಡಿದ್ದಾರೆ.

ಅಣ್ಣನವರ ಆದರ್ಶ

ಸಾಹಿತ್ಯವೇ ಜೀವನವಾದ, ಶಾಶ್ವತಸೇವೆಯೇ ಜೀವನಾದರ್ಶವಾದ ಶ್ರೀ ಮಂಜಪ್ಪಣ್ಣನವರು ಇದುವರೆಗೆ ಶಿಶುಸಾಹಿತ್ಯದಿಂದ ಗಂಭೀರ ಸಾಹಿತ್ಯದವರೆಗೆ ವಿವಿಧ ವಿಷಯಗಳನ್ನು ಕುರಿತು ೫೦ಕ್ಕೆ ಮೇಲ್ಪಟ್ಟು ಕಿರಿಹಿರಿ ಹೊತ್ತಿಗೆಗಳನ್ನು ಬರೆದು, ಕನ್ನಡ ಸಾರಸ್ವತ ಪ್ರಪಂಚಕ್ಕೆ ಮಹೋಪಕಾರ ಮಾಡಿದ್ದಾರೆ. ಬಸವಾದಿ ಪ್ರಮಥರ ತತ್ವಪ್ರಸಾರ ಕಾರ್ಯದಲ್ಲಿ ಇವರು ಮಾಡುತ್ತಿರುವ ಸೇವೆ ಅದ್ಭುತವಾದುದು. ಹಿಂದು ಧರ್ಮರಕ್ಷಣೆಗಾಗಿ ಇವರು ಕನ್ನಡ ನಾಡಿನಲ್ಲೆಲ್ಲ ಗುಡುಗಾಡುತ್ತಿದ್ದಾರೆ. ಚಿಕ್ಕದಾದರೂ ಚೊಕ್ಕ ಚಿನ್ನದಂತಿರುವ ಸುಬೋಧ ಸಾರವನ್ನು ಸುಂದರವಾಗಿ ಅಚ್ಚು ಹಾಕಿಸಿ ಕನ್ನಡ ಜನತೆಗೆ ನೀಡಿದ್ದಾರೆ. ವಚನಶಾಸ್ತ್ರವು ರಾ. ಸಾ. ಹಳಕಟ್ಟಿಯವರಿಂದ ಬೆಳಕಿಗೆ ಬಂದಂತೆ ಶಿವಶರಣರ ಹಾಡುಗಬ್ಬಗಳು ಅಣ್ಣನವರಿಂದ ಬೈಲಿಗೆ ಬರಲಿ! ಅಣ್ಣನವರು ದೀರ್ಘಾಯುಗಳಾಗಲಿ! ಅವರಿಂದ ಇಂಥ ಕೃತಿರತ್ನಗಳು ಹೆಚ್ಚು ಹೆಚ್ಚಾಗಿ ಹೊರಬೀಳಲಿ!

ಕನ್ನಡ ಕಂದ

ಕಾವ್ಯಾನಂದ

❖❖

॥ಓಂ॥

ಶ್ರೀ ಮುಪ್ಪಿನ ಷಡಕ್ಷರಿಗಳ ಸುಬೋಧಸಾರ

ನೀನೇ ಅಕಳಂಕ ಗುರು

ರಾಗ : ಸಾರಂಗ   ತಾಳ : ಝಂಪೆ

ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವೂ ಪೇಳುತಿರಲರಿದೆನು ॥ಪ॥

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ
ವರ ಷಡಕ್ಷರಿಯ ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ೧

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ೨

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವಷಡಕ್ಷರಿ ಲಿಂಗವೆ ೩

ಇಬ್ಬರು, ಮೂವರು, ದೇವರೆಂದು ಉಬ್ಬುಬ್ಬಿ ಮಾತನಾಡಬೇಡ, ದೇವನೊಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ, ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ.

–ಬಸವಣ್ಣನವರು

❖❖

ಎನ್ನ ಕರೆಯ ಬನ್ನಿ

ರಾಗ : ಸಾಳಂಗ

ತಾಳ : ಝಂಪೆ

ಹೆಮ್ಮಗಳು ನಾ ನಿಮ್ಮ
ನಮ್ಮಿಕೊಂಡಿರುವೆನ್ನೈ
ಗಮ್ಮನೇ ಎನ್ನವನು ಕರೆಯ ಬನ್ನಿ ॥ಪ॥

ಸುವ್ವಿ ಚೆನ್ನಣ್ಣನಿಗೆ
ಸುವ್ವಿ ಮಡಿವಾಳನಿಗೆ
ಸುವ್ವಿ ನಮ್ಮಪ್ಪ ಬಸವಯ್ಯನಡಿಗೆ
ಸುವ್ವಿ ಅಜಗಣ್ಣನಿಗೆ
ಸುವ್ವಿ ಸತ್ಯಣ್ಣನಿಗೆ
ಸುವ್ವಿ ನಮ್ಮಯ್ಯ ಪ್ರಭುರಾಯನಡಿಗೆ ೧

ಸುವ್ವಿ ಹರಳಯ್ಯನಿಗೆ
ಸುವ್ವಿ ಧೂಳಯ್ಯನಿಗೆ
ಸುವ್ವಿ ನಮ್ಮಯ್ಯ ಶ್ವಪಚಯ್ಯನಡಿಗೆ
ಸುವ್ವಿ ಭೀಮಯ್ಯನಿಗೆ
ಸುವ್ವಿ ಕಕ್ಕಯ್ಯನಿಗೆ
ಸುವ್ವಿ ನಮ್ಮಯ್ಯ ಚೆನ್ನಯ್ಯನಡಿಗೆ ೨

ನಮ್ಮವರ ಪಾಡುವೆನು
ನಮ್ಮವರ ಪೊಗಳುವೆನು
ನಮ್ಮವರನಾವಗಂ ಹರಸುತಿಹೆನು
ನಮ್ಮವರು ಬರುವುದನು
ಉಮ್ಮಳಿಸಿ ನೋಡುವೆನು
ಹಮ್ಮಿಸುವೆ ಮನದೊಳಗೆ ಬಾರದಿರಲು ೩

ಕುಟ್ಟುತ್ತ ಬೀಸುತ್ತ
ನೆಟ್ಟನೇ ನಮ್ಮ ಒಡ
ಹುಟ್ಟಿದ ಪುರಾತನರ ಹಾಡುತಿಹೆನು
ಕಷ್ಟಘನಮರ್ತ್ಯದ
ಬಟ್ಟೆಯನು ಒಲ್ಲೆ ಕೃಪೆ
ಹುಟ್ಟದೇ ನಮ್ಮವರು ಕರೆಯರಯ್ಯ ೪

ನೀರ ಹೊಳೆಯಲಿ ನಿಂದು
ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ
ಆರೈದು ಮತ್ತೊಮ್ಮೆ
ದೂರ ದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ ೫

ಬಂದವರ ಬರುವವರ
ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು
ಹಿಂದಾದ ದುಃಖದಲಿ
ನೊಂದನ್ನೈ ನಮ್ಮವರು
ಎಂದಿಗೇ ಎನ್ನವನು ಕರೆಯಬಹರೋ ೬

ಪದುಳವೇ ನಮ್ಮವರ
ಪದಪದ್ಮ ಎನ್ನುವೆನು
ಪದಪಿಂದ ಕರೆದೊಯ್ಯಲೊಲ್ಲರೇಕೆ
ಉದಯಾಸ್ತಮಾನದಲಿ
ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ ೭

ಅಳಲುವೆನು ಮನದೊಳಗೆ
ಬಳಲುವೆನು ಬಾರದಿರೆ
ಕಳೆಯೇರುವೆನು ಒಮ್ಮೆ ನೆನೆದು ನೆನೆದು
ಮಲಹರನ ಶರಣರಾ
ಬಲವ ನೋಡುವೆನೊಮ್ಮೆ
ಸಲೆಯೆನ್ನ ಕನಸಿಂಗೆ ಬಾರರೆನುತ ೮

ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನು ಕರೆಯಬಹರೋ
ನೊಂದು ಸುಯ್ಗರೆಯುವೆನು
ಬೆಂದು ಬೆಂಡಾಗುವೆನು
ಚಂದವೇ ತಮಗೆನ್ನ ನೋಡದಿಹುದು ೯

ತರಗೆಲೆಯು ಗಿರುಕೆನಲು
ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ ಸುಯ್ಗರೆವೆನು
ಪರರ ಶಿಶುವೆಂದೆನುತ
ಶರಣರೂ ಎನ್ನುವರು
ಮರೆದರೋ ಎಂದೆನುತ ಹೆದರುತಿಹೆನು ೧೦

ಶರಣರೊಳು ಸುಖ ದುಃಖ
ದಿರವ ಹೇಳುವೆ ನಾನು
ಪರರೆನ್ನ ಚಿಂತೆಯನ್ನರಿಯರಾಗಿ
ಅರಸು ಷಡಕ್ಷರಿಯ
ವರನೆನ್ನ ಕಾಡದಿರೆ
ಶರಣರಿಗೆ ಪೇಳಿ ನಾ ಕೇಳ್ವೆನಯ್ಯಾ ೧೧

ಗಿಳಿಯ ಪಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ, ಬರವ ಹಾರುತ್ತಿದ್ದೆನೆಲಗವ್ವ! ತರಗೆಲೆ ಗಿರಿಕೆಂದಡೆ ಹೊರಗನಾಲಿಸುವೆ. ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವ, ಕೂಡಲಸಂಗನ ಶರಣರು ಬಂದು ಬಾಗಿಲ ಮುಂದೆ ನಿಂದು ಶಿವಾ ಎಂದಡೆ ಸಂತೋಷಬಟ್ಟೆನೆಲಗವ್ವ.

–ಬಸವಣ್ಣನವರು

❖❖

ನಿಮ್ಮನು ನೆನೆವ ಮನವ ಬಯಸುವೆನು

ರಾಗ : ಸಾವೇರಿ　　　　ತಾಳ : ಝಂಪೆ

ಎನಗೆ ನಿಮ್ಮನೆ ನೆನೆವ
ಮನವನೇ ಬಯಸುವೆನು
ಘನವಾಗಿ ಇದರಿಂದ ಮೇಲರಿಯೆನು ॥ಪ॥

ನಿಮ್ಮ ನೆನೆವುದೆ ಹರುಷ
ನಿಮ್ಮ ನೆನೆವುದೆ ಪರುಷ
ನಿಮ್ಮ ನೆನೆವುದೆ ಕಾಮಧೇನುವೆನಗೆ
ನಿಮ್ಮ ನೆನೆವುದೆ ಗತಿಯು
ನಿಮ್ಮ ನೆನೆವುದೆ ಮತಿಯು
ನಿಮ್ಮ ನೆನೆವುದೆ ಇಹದ ಪರದ ಸುಖವು ೧

ನಿಮ್ಮ ನೆನೆವುದೆ ತಪವು
ನಿಮ್ಮ ನೆನೆವುದೆ ಜಪವು
ನಿಮ್ಮ ನೆನೆವುದೆ ಸಕಲ ಪರಮ ತತ್ವ
ನಿಮ್ಮ ನೆನೆವುದೆ ನಿತ್ಯ
ನಿಮ್ಮ ನೆನೆವುದೆ ಸತ್ಯ
ನಿಮ್ಮ ನೆನೆವುದೆ ವ್ಯಕ್ತ ಕೈಲಾಸವು ೨

ತನು ದಂಡೆನಯ ಮಾಡಿ
ಜಿನುಗಲೇತಕೆ ನಾನು
ಘನಗಿರಿಯ ಮೇಲೆ ತಪವಿರಲೇತಕೆ
ಮನಸಿಜಾರಿಯೆ ನಿನ್ನ
ನೆನಹು ಮನದೊಳು ನೆಲಿಸೆ
ಘನಪರಮ ಕೈಲಾಸ ತನ್ನೊಳಿಹುದು ೩

ಹಲವು ತೀರ್ಥವು ಕ್ಷೇತ್ರ
ಹಲವು ಗಿರಿಗಹ್ವರವು
ತೊಳಲಿ ಬಳಲುತ್ತಿರುವುದೇಕೆ ದೇವ
ಮಲಹರನ ನೆನಹು ತಾ

ನೆಲಸಿರಲು ಮನದೊಳಗೆ
ಹಲವನರಸುವದೇನು ತಾನೆ ಶಿವನು ೪

ಸುರಲೋಕವೇನೆನಗೆ
ನರಲೋಕವೇನೆನಗೆ
ಉರಗಮಯ ಲೋಕವು ತಾನಾದಡೇನು
ಗುರು ಷಡಕ್ಷರಿ ವರನ
ಪರಮ ಮಂತ್ರದ ನೆನಹು
ದೊರೆಕೊಳಲು ಶಿವಲೋಕ ತಾನಿರ್ಪುದು ೫

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ, ಅಂಬುಜಕ್ಕೆ ಭಾನುವಿನ ಉದಯದ ಚಿಂತೆ, ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ, ಎನಗೆ ಎಮ್ಮ ಕೂಡಲಸಂಗಮದೇವರ ನೆನೆವ ಚಿಂತೆ

–ಬಸವಣ್ಣನವರು

❖❖

ಎನ್ನ ಕರದೊಳಗಿರ್ದು ಏಕೆ ನುಡಿಯೇ

ರಾಗ : ಮುಖಾರಿ **ತಾಳ : ಝಂಪೆ**

ಎನ್ನ ಕರದೊಳಗಿರ್ದು
ಎನ್ನೊಳೇತಕೆ ನುಡಿಯೆ
ಎನ್ನ ಭವಭವದಲ್ಲಿ ಬಿಡದಾಳ್ದನೆ ॥ಪ॥

ಎನ್ನ ಚಿಂತಾಮಣಿಯೆ
ಎನ್ನ ಪರುಷದ ಕಣಿಯೆ
ಎನ್ನ ಬೇಡಿದುದೀವ ಸುರಭೂಜವೆ
ಎನ್ನ ಸಂಜೀವನವೆ
ಎನ್ನ ಪರಮಾಯುವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ೧

ಎನ್ನ ಗತಿಮತಿಯು ನೀ
ಎನ್ನ ಚೈತನ್ಯವೇ
ಎನ್ನನಗಲದೆ ಕೂಡಿ ಬಿಡದಾಳ್ದನೇ

ಎನ್ನ ಇಹಪರ ಸುಖವೆ
ಎನ್ನ ಮುಕ್ತಿಯ ಸಿರಿಯೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ೨

ಎನ್ನ ಭಾಗ್ಯದ ವಧುವೆ
ಎನ್ನ ಭಕ್ತಿಯ ನಿಧಿಯೆ
ಎನ್ನ ಮನವೆಂಬ ವನಿತೆಯ ತಿಲಕವೆ
ಎನ್ನ ಹೃದಯಾಲಯದ
ಚಿನ್ಮಯದ ಮೂರ್ತಿಯೇ
ಎನ್ನ ಕರದೊಳಗಿರ್ದು ಏಕೆ ನುಡಿಯೆ ೩

ಎನ್ನ ಮಾತೆಯು ನೀನೆ
ಎನ್ನ ತಾತನು ನೀನೆ
ಎನ್ನ ಬಂಧುವು ಬಳಗ ಸುಖನು ನೀನೆ
ಎನ್ನ ಪತಿಯೂ ನೀನೆ
ಎನ್ನ ಹಿತನು ನೀನೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ೪

ಎನ್ನ ಕುಲಗುರುವೆ ನೀ
ಎನ್ನ ವಿದ್ಯಾಗುರುವೆ
ಎನ್ನ ಭವ ಭವದಲ್ಲಿ ಬಿಡದ ಗುರುವೆ
ಎನ್ನ ದೀಕ್ಷಾ ಗುರುವೆ
ಎನ್ನ ಮೋಕ್ಷಾ ಗುರುವೆ
ಎನ್ನ ಕರದೊಳಿಗಿರ್ದು ಏಕೆ ನುಡಿಯೆ ೫

ಎನ್ನ ಮನವನಚೈತ್ರ
ಎನ್ನ ಘನಸುಖಪಾತ್ರ
ಎನ್ನ ಭವವೆಂಬ ವಾರುಧಿಗೆ ಭೈತ್ರ
ಎನ್ನ ಜ್ಞಾನದ ನೇತ್ರ
ಎನ್ನ ಪುಣ್ಯದ ಗಾತ್ರ
ಎನ್ನ ಕರದೊಳಗಿರ್ದು ಏಕೆ ನುಡಿಯೆ ೬

ಎನ್ನನಿಲ್ಲಿಗೆ ತಂದು
ಭಿನ್ನವನು ಮಾಡಿದ್ಯೆ

ಅನ್ಯವೇ ನಾ ನಿನಗೆ ಹೇಳು ಗುರುವೇ
ಎನ್ನೊಡನೆ ನುಡಿಯದಿರೆ
ನಿನ್ನನಾ ಭವಭವದಿ
ಬೆನ್ನ ಬಿಡುವೆನೆ ಷಡಕ್ಷರಿ ಲಿಂಗವೇ ೭

ನೀನು ದಂಡುಮಂಡಲಕ್ಕೆ ಹೋದೆನೆಂದೊಡೆ ನಾನು ಸುಮ್ಮನಿಹೆನು, ನೀನು ಎನ್ನ ಕೈಯೊಳಗಿರ್ದು ಎನ್ನ ಮನದೊಳಗಿರ್ದು ನುಡಿಯದಿರ್ದಡಾನು ಎಂತು ಸೈರಿಸುವೆನಯ್ಯ? ನೇಹವೆಂಬ ಕುಂಟಣಿ ಚೆನ್ನಮಲ್ಲಿಕಾರ್ಜುನನೊಲಿಸದಿದ್ದರೆ ಇನ್ನೇವೆ ಸಖಿಯೇ.–**ಅಕ್ಕಮಹಾದೇವಿ**

❖❖

ಎಲೆ ಆತ್ಮನೆ

ರಾಗ : ಭಾಗ್ಯಶ್ರೀ **ತಾಳ : ಝಂಪೆ**

ತನುವಿಡಿದ ದುಷ್ಕೃತವ
ನೆನಿತೆನಲು ಪೇಳುವೆನು
ಮನವೊಲಿದು ಕೇಳು ನೀನೆಲೆಯಾತ್ಮನೆ ॥ಪ॥

ಅನ್ನ ಉದಕದ ಚಿಂತೆ
ಎಣ್ಣೆ ನೀರಿನ ಚಿಂತೆ
ಬಣ್ಣ ಬಳಿದಾಭರಣ ತೊಡುವ ಚಿಂತೆ
ಮಣ್ಣು ಮನೆಗಳ ಚಿಂತೆ
ಹೊನ್ನು ಹೆಣ್ಣಿನ ಚಿಂತೆ
ಇನ್ನು ಪುತ್ರರ ಬೇಡಿ ಬಳಲ್ವ ಚಿಂತೆ ೧

ಅರಸುಗಳ ಭಯವಿದಕೆ
ಚರಿಪ ಚೋರರ ಭಯವು
ಮರಳಿ ಅಗ್ನಿಯ ಭಯವು ನೀರ ಭಯವು
ಉರಗ ವ್ಯಾಘ್ರನ ಭಯವು
ಅರಿ ರೋಗಗಳ ಭಯವು
ಕರಕಷ್ಟ ತನುವಿದಕೆ ಭಯವು ನೋಡಾ ೨

ಶೀತೋಷ್ಣಗಳ ಭೀತಿ
ಭೂತಪ್ರೇತದ ಭೀತಿ
ಓತು ನಡಿಯಲು ಮುಳ್ಳು ನಡುವ ಭೀತಿ
ಮಾತು ಮಾರನ ಭೀತಿ
ರಾತ್ರಿ ಹಗಲಿನ ಭೀತಿ
ಈ ತನುವ ಹಿಡಿದಿನಿತು ಭೀತಿ ನೋಡಾ ೩

ಆಗಲದಕೇನೆನಲು
ಸಾಗಿಸಲು ನಿನಗಿವನು
ಆಗಬಹುದೆ ಧರೆ ಗಗನವುಳ್ಳತನಕ
ಆಗ ಹುಟ್ಟಿದ ಬಳಿಕ
ಬೇಗ ಸಾವೀ ತನುವ
ಹಾಗೆ ಮನವೇ ನೀನು ನೆಂಬಬಹುದೆ ೪

ಇಂತಪ್ಪ ತನುವಿನ
ಚಿಂತೆಯಳಿದು ಲಿಂಗ
ಭ್ರಾಂತಿಯೊಳಗಿರು ನಿನಗೆ ಸುಖ ತಪ್ಪದು
ಮುಂತೆ ನಿನ್ನುವನು ತ-
ನ್ನಂತೆ ಮಾಡುವನೊಲಿದು
ಕಂತುಹರ ಶಿವ ಷಡಕ್ಷರಿ ಲಿಂಗವು ೫

ಬಡತನಕ್ಕೆ ಉಂಬುವ ಚಿಂತೆ, ಉಣಲಾರದೆ ಇಡುವ ಚಿಂತೆ, ಇಡಲಾದರೆ ಹೆಂಡರ ಚಿಂತೆ, ಹೆಂಡರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬುದಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ. ಇಂತೀ ಹಲವು ಚಿಂತೆಯಲ್ಲಿಪ್ಪವನ ಕಂಡೆನು. ಶಿವಚಿಂತೆಯಲ್ಲಿದ್ದವರ ಒಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.–**ಅಂಬಿಗರ ಚೌಡಯ್ಯ.**

❖❖

ಎನ್ನ ಬರಿಸದಿರು

ರಾಗ : ಕಾಂಬೋದಿ ತಾಳ : ಝಂಪೆ

ಧರೆಯತ್ತಲೆನ್ನನ್ನು
ಬರಿದಿರು ಸದ್ಗುರುವೆ
ಧರೆಯ ಪಾಪದೊಳು ನಾ ಜನಿಸಲಾರೆ ॥ಪ॥

ಹುಸಿ ಕಳವು ಡಂಭಕವು
ನುಸುಳು ಆರಡಿ ತಳ್ಳಿ
ಹಿಸುಣ ಹೀನದಯದ ಶಬ್ದಗಾರ
ಕಿಸುಕುಳವು ಕೊರಚಾಟ
ವಿಷಮ ವಿಗಡವು ಕರುಬು
ಹೊಸ ಹುರುಡು ಜಾರರಾ ಜನ್ಮಾಲಯ ೧

ನಿರುದಯವು ನಿಷ್ಠುರವು
ದುರುಳತ್ವ ಘಾಳಕವು
ಪರಬಂಧಕವು ಡಂಭವಪವಾದವು
ನೆರೆಚೆಂಡಿತನ ಪೊಲಬು
ಪರಧನದ ವಂಚನೆಯು
ಪರರ ಕೆಡಿಸುವ ಸಿದ್ಧಿಗಳು ಮಂತ್ರದ ೨

ಹರನರ್ಚಕರು ಅಲ್ಲ
ಪರನಿಂದಕರು ಬಹಳ
ಗುರುಭಕ್ತರಲ್ಲ ಗರುವಿಗಳು ಬಹಳ
ಹರಸ್ತುತಿಯ ಬಿಟ್ಟು ತಾ
ನರಸ್ತುತಿಯ ಲಾಲಿಪರು
ನಿರಯದಾಲಯವಾಗಿ ತೋರುತಿಹರು ೩

ಪತಿವ್ರತೆಯರಿಲ್ಲ ಪರ
ಸತಿ ಮುಖಿಯರಿರುತಿಹರು
ಜಿತಕಾಮರಿಲ್ಲ ಅತಿಕಾಮರಿಹರು

ವ್ರತ ನೇಮಗಳು ಇಲ್ಲ
ಕೃತಕಿಗಳು ಘನವಯ್ಯಾ
ಕ್ಷಿತಿಯು ಅವಗುಣಿಗಳಿಗೆ ತವರುಮನೆಯು ೪

ಇಲ್ಲವೆನಬ್ಬಾರದೆಲೆ
ಇಲ್ಲುಂಟು ಧರ್ಮಿಗಳು
ಕಲ್ಲೊಳಗೆ ಅಡಿಗಿರ್ಪ ಪರುಷದಂತೆ
ಖಿಲ್ಲಮಾನವ ನಿನಗೆ
ಒಳ್ಳಿದರು ಕಾಣಿಸರು
ಒಲ್ಲೆ ಮರ್ತ್ಯರ ಷಡಕ್ಷರಿ ಲಿಂಗವೆ ೫

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟರೆ, ನಿಮ್ಮ ನಗುವರಯ್ಯ, ಶಿವಬಟ್ಟೆಯಲೆನ್ನನು ಇರಿಸಯ್ಯ ಹರನೆ ಹೊಲಬುಗೆಟ್ಟೆನು. ಬಟ್ಟೆಯ ತೋರಯ್ಯ. ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯ, ಕೂಡಲಸಂಗಮದೇವಯ್ಯ ಎನ್ನ ಕಾಡಿಹನಯ್ಯ. –ಬಸವಣ್ಣನವರು

❖❖

ಕೇಳಕ್ಕ

ರಾಗ : ಮಲಹರಿ

ನಮ್ಮ ಮನೆಯ ಕೇಳಕ್ಕ
ಬ್ರಹ್ಮ ಬಂದೆಡೆಗೊಂಡು
ನಮ್ಮನೆಯ ಸುತಬಂಧುಗಳ ಕೊಂದಿತು. ॥ಪ॥

ಏಳು ಮಕ್ಕಳ ಕೊಂದು
ಏಳು ತೊತ್ತಿರ ಕೊಂದು
ಮೇಲ್ಯೆವರಣ್ಣಗಳ ಕೊಂದಿತಕ್ಕ
ಕಾಳಿನೊಳಗಿರುತಿರ್ಪ
ಜಾಳಿಗೆಲ್ಲವ ತಿಂತು
ಬಾಳಲಿಸದು ಮನೆಯನೆಲ್ಲರಂತೆ ೧

ಮೂರು ಕರುಗಳ ಕೊಂದು
ಮೂರು ಪಶುಗಳ ಕೊಂದು
ಮೂರೈದು ಕೋಣಗಳ ಕೊಂದಿತಕ್ಕ
ಮೂರು ಸೊಸೆಯರ ಕೊಂದು
ಮೂರಳಿಯರನು ಕೊಂದು
ಕೇರಿಕೇರಿಗಳಲ್ಲಿ ಹರಿಯುತಿದಕೊ ೨

ಜಡೆಗಳನು ಕೆದರಿ ತಾ
ಹಿಡಿದು ಶೂಲದಿ ಪೆಣನ
ಬಿಡದೆ ಮೈಯೊಳು ಹಾವ ತೊಡರಿಸಿಹುದು
ಕಡಿದ ತಲೆ ಕರದೊಳಗೆ
ಮಡಿದ ತಲೆ ಕೊರದೊಳಗೆ
ಬಿಡದೆನ್ನನಂಜಿಸುತ ಬರುತಲಿದಕೊ ೩

ಇರುಳು ಸುಳಿಯಲಿಕಂಜಿ
ಪುರ ಮೂರು ಹಾಳಾಗಿ
ನೆರೆದ ಜನರುಗಳೆಲ್ಲ ಓಡಿತಕ್ಕ
ಪುರಪುರದ ಮಧ್ಯದಲಿ
ಉರಿವುತ್ತ ತಿರುಗುತಿದೆ
ಇರುಳು ನಾ ಕಣ್ಮುಚ್ಚಲಮ್ಮೆನವ್ವ ೪

ಇನ್ನೆನನೆನ್ನುವೆನು
ಬೆನ್ನ ಬಿಡದಕ್ಕಯ್ಯ
ತನ್ನನಗಲುವಳೆಂದು ಹಿಂದು ಮುಂದು
ಎನ್ನ ಕಾದಿರುತಿಹುದು
ತನ್ನ ಹೆಸರೇನೆನಲು
ಚೆನ್ನಿಗ ಷಡಕ್ಷರಿಯ ಲಿಂಗವಂತೆ ೫

❖❖

ಮಾಯೇ ನೀನತಿ ಚೆಲುವೆ

ರಾಗ : ಕಾನಡಾ ತಾಳ : ಝುಂಪೆ

ಮಾಯೆ ನೀನತಿ ಚೆಲುವೆ
ಕಾಯ ಮುನ್ನವೆ ಚೆಲುವು
ಹೇಯವಾಯಿತು ಒಳಗನರಿತ ಬಳಿಕ ॥ಪ॥

ನಿನ್ನ ಮುಖ ಚಂದ್ರನೊಲು
ನಿನ್ನಕ್ಷಿ ಕಮಲದಳ
ನಿನ್ನ ಕುಚ ಪೊಂಗಳಸದಂತೆ ಮಾಯೆ
ನಿನ್ನಂಗ ಕನಕಲತೆ
ನಿನ್ನ ಧರ ಬಿಂಬಫಲ
ನಿನ್ನನೀಕ್ಷಿಸಿ ಸೋಲದವರಾರೆಲೆ ೧

ನಿನ್ನ ಮೃದು ವಚನಕಂ
ನಿನ್ನ ದೈನ್ಯೋಕ್ತಿಗಂ
ನಿನ್ನ ಕಡೆಗಣ್ಣೋಟದಾ ಭಾವಕೆ
ನಿನ್ನ ನಸು ಮುನಿಸಿಗಂ
ನಿನ್ನ ಚಾತುರ್ಯಕಂ
ನಿನ್ನ ಬೆಳುನಗೆಗೆ ಸೋಲದವರಾರು ೨

ಅಣ್ಣ ತಮ್ಮನು ತಂದೆ
ಚೆನ್ನ ಪುತ್ರನು ಅಳಿಯ
ಇನ್ನುಳ್ಳ ಪುರುಷರಾದವರೆಲ್ಲರ
ನಿನ್ನ ಮೋಹವು ಎಂಬ
ಉನ್ನತದ ಪಾಶದಲಿ
ತಿಣ್ಣನೇ ಬಿಗಿದಿರ್ಪೆ ನುಸುಳ್ವರಾರು ೩

ನಿನ್ನೊಳಗೆ ಕಾಲನಿಹ
ನಿನ್ನೊಳಗೆ ಕಾಮನಿಹ
ನಿನ್ನೊಳಗೆ ನೇಣು ಕತ್ತರಿಗಳಿಹವು
ನಿನ್ನೊಳಗೆ ವಿಷವಿಹುದು

ನಿನ್ನೊಳಗೆ ನರಕಗಳು
ಇನ್ನು ನಿನ್ನನ್ನು ಗೆಲುವರಾರು ಮಾಯೆ ೪

ಕಾಮಕಾಲಗಳಿಂ ನಿ-
ರ್ನಾಮ ಮಾಡುವ ಮಾಯೆ
ಭೀಮನೆನಿಸುವ ಷಡಕ್ಷರಿ ಲಿಂಗವ
ನಾ ಮರೆಯ ಹೊಕ್ಕೆನೆಲೆ
ಛೀ ಮಾರಿ ಹೋಗುತ್ತ
ನೀ ಮುನ್ನ ದುಶ್ಚರಿತೆಯೊಳಗರಿದೆನು ೫

ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯ, ಕಂಗಳಲೊಬ್ಬನ ಕರೆವಳು. ಮನದಲೊಬ್ಬನ ನೆನೆವಳು, ಕೂಡಲಸಂಗಮದೇವ ಕೇಳಯ್ಯ ಮಾನಿಸಗಳ್ಳಿಯ ನಂಬದಿರಯ್ಯ.

–ಬಸವಣ್ಣನವರು

❖❖

ಇನ್ನೆನಗೆ ಭಯವುಂಟೆ

ರಾಗ : ಕಲ್ಯಾಣಿ **ತಾಳ : ಝಂಪೆ**

ಎನ್ನ ಕಾಯವು ನಿನಗೆ
ಉನ್ನತಾಲಯವಾಯಿ
ತಿನ್ನೆನಗೆ ಭಯವುಂಟೆ ಎಲೆ ಲಿಂಗವೇ ॥ಪ॥

ಎನ್ನ ಕಾಲುಗಳೆರಡು
ಉನ್ನತದ ಕಂಭವೈ
ಎನ್ನ ಒಡಲೇ ನಿಮಗೆ ದೇವಾಲಯ
ಎನ್ನ ತೋಳುಗಳೆರಡು
ಉನ್ನತದ ಮದನ ಕೈ
ಎನ್ನ ಶಿರ ಸೌವರ್ಣ ಕಲಶವಯ್ಯ ೧

ಎನ್ನ ಕಿವಿ ಕೀರ್ತಿಮುಖ
ಎನ್ನ ನಾಲಿಗೆ ಘಂಟೆ
ಎನ್ನ ನಯನಗಳೆರಡು ಜ್ಯೋತಿ ನಿಮಗೆ
ಎನ್ನ ಮುಖವೇ ದ್ವಾರ
ಎನ್ನ ದಂತವೇ ಅದಕೆ
ಮಿನ್ನುತಿಹ ಮೌಕ್ತಿಕದ ಸೂಸಕಗಳು ೨

ಎನ್ನಧರ ಜವಳಿಗದ
ಎನ್ನ ನಾಸಾಪುಟವು
ನನ್ನಿಯಿಂ ಸೌರಭ್ಯರಸಘಟಿತವು
ಚನ್ನಾಗಿ ಬೀಸುವ
ಹೊನ್ನ ಜಾಳೇಂದ್ರವೈ
ಇನ್ನುಳ್ಳ ಉಪಕರಣವೆಂತೆಂದೆನೆ ೩

ಎನ್ನ ಸಮತೆಯ ಜಲವು
ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ
ಎನ್ನ ಭಕ್ತಿಯೇ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು ೪

ಇಂತಪ್ಪ ಪೂಜೆಯನು
ಸಂತಸದಿ ಕೈಕೊಳುತ
ಕಂತುಹರ ಶಿವಷಡಕ್ಷರಿ ಲಿಂಗವು
ಮುಂತೆ ಎನ್ನೊಳಗೆ ನಿ-
ಶ್ಚಿಂತನಾಗಿರುತಿರಲು
ಚಿಂತೆಯುಂಟೇ ಹಲವು ಭವಭೀತಿಯ ೫

ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆ ಬಡವನಯ್ಯ ಎನ್ನ ಕಾಲೇ ಕಂಭ. ದೇಹವೆ ದೇಗುಲ, ಶಿರವೇ ಹೊನ್ನಗಳಸವಯ್ಯ. ಕೂಡಲಸಂಗಮದೇವ ಕೇಳಯ್ಯಾ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ. –ಬಸವಣ್ಣನವರು

❖❖

ಲಿಂಗವೆ

ರಾಗ : ನಾಟಿ ತಾಳ : ಝಂಪೆ

ಘನಮಹಿಮ ಲಿಂಗವೆ
ಅನುಪ್ರಾಣಿ ಎನ್ನ ಕರ –
ವನಜಕ್ಕೆ ಬಂದು ಚುಳುಕಾದಿರಲ್ಲ ॥ಪ॥

ತರಣಿಕೋಟಿಯ ಪ್ರಭೆಯ
ಕಿರಿದೆನಿಪ ಬೆಳಗಿನಾ
ವರ ಹೇಮಶೈಲಾಗ್ರದೊಳಗೊಪ್ಪುವ
ಹರಗಣಂಗಳ ಸುಖವ
ನೆರೆಯುಳಿದು ಎನ್ನಕರ
ಸರಸಿಜಕೆ ಬಂದು ಚುಳುಕಾದಿರಲ್ಲ ೧

ಹರಿಯಜರ ತಿಂಥಿಣಿಯು
ಸುರರುಗಳ ಮೊತ್ತವಾ
ವರ ಮುನೀಶ್ವರರುಗಳ ಸಂತಾನದಾ
ಹರುಷದಾನಂದದೊಳು
ನೆರೆಯುಳಿದು ಎನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ ೨

ಹರಿಗೆ ನಿಲುಕದ ಚರಣ
ಸರಸಿಜಭವನೊಮ್ಮೆ
ಅರಸಿಕಾಣದ ನಿಮ್ಮ ಶ್ರೀ ಮುಕುಟವು
ಪರಮವಾಚಾತೀತ
ಕಿರಿದಾಗಿಯೆನ್ನ ಕರ
ಸರಸಿಜಕೆ ಬಂದು ಚುಳುಕಾದಿರಲ್ಲ ೩

ಮಡದಿ ಗಿರಿಜಾತೆಯನು
ತೊಡೆಯ ಮೇಲಿಂದಿಳುಹಿ
ಒಡನೆ ಗುಹ ಗಣ ರಾಯ ವೀರೇಶರೆನಿಪ
ಕಡುಮೋಹದತಿ ಸುತರ

ಬಿಡುತೆನ್ನ ಕರದೊಳಗೆ
ಒಡೆಯರೊಡೆಯನೆ ಬಂದು ಚುಳುಕಾದಿರಲ್ಲ ೪

ಎನ್ನಲ್ಲಿಯುಪಚಾರ-
ವಿನ್ನೇನು ನಿಮಗುಂಟು
ಸನ್ನುತದ ಶಿವಷಡಕ್ಷರಿ ಲಿಂಗವೆ
ಎನ್ನ ಮನ ಪ್ರಾಣಗಳು
ಹೊನ್ನು, ಹಾವಿಗೆಯಾಗಿ
ನಿನ್ನ ಚರಣಕೆ ಯೋಗ್ಯ ಮೆಟ್ಟಾಗಲಿ ೫

ಜಗದಗಲ, ಮುಗಿಲಗಲ, ಮಿಗಯಗಲ, ನಿಮ್ಮಗಲ ಪಾತಾಳದಿಂದಿತ್ತಿತ್ತ ನಿಮ್ಮ ಶ್ರೀ ಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ ಅಗಮ್ಯ ಅಪ್ರಮಾಣ, ಅಗೋಚರ, ಅಪ್ರತಿಮ ಲಿಂಗವೆ ಕೂಡಲಸಂಗಮದೇವಯ್ಯ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ – **ಬಸವಣ್ಣನವರು.**

❖❖

ಉಳುಹಿರಯ್ಯ

ರಾಗ : ಮಾಲಕಂಸ **ತಾಳ : ಝಂಪೆ**

ಭವಕಾಟಕಾರದಲೆ
ಶಿವಶರಣರ ಮನೆಯ
ತವೆ ದ್ವಾರದೊಳು ಬಿದ್ದೆನುಳುಹಿರಯ್ಯ ॥ಪ॥

ಹೇಸಿ ಮಾನವ ನಾನು
ಭಾಷೆವಂತನಲ್ಲ
ಈಶನೊಳು ಸಲುಗೆಯೆನಗೆಂತಪ್ಪುದೋ
ಘಾಸಿಯಾದೆನು ಭವದಿ
ಓಸರಿಸದೆ ಎನ್ನ
ಈಶನಂಘ್ರಿಗೆ ಒಲಿದು ಸಲಿಸಿರಯ್ಯ ೧

ಉದ್ಧರಿಸುವರ ಕಾಣೆ
ಇದ್ದೆಸೆಯ ಕೆಡಿಸಿದೆನು

ಹೊದ್ದುವೆನು ಇನ್ನಾವ ದೆಸೆಯ ನಾನು
ಬಿದ್ದೆ ನಿಮ್ಮಂಗಳದಿ
ಉದ್ಧರಿಸಿಯಲ್ಲದೊಡೆ
ಒದ್ದು ಕಡೆಗೆನ್ನನ್ನು ನೂಕಿರಯ್ಯ ೨

ನೀತಿಯರಿಯದೆ ನಾನು
ಪಾತಕದ ನಡೆಯಲ್ಲಿ
ಭೂತಳದೊಳಂ ನಡೆದೆ ಗತಿಯಾವುದು
ಓತು ಕರುಣಿಸಿ ನೀವು
ಪಾತಕಾಭ್ರಕೆ ಜಂಝು
ವಾತವೆಂಬುದು ಕೇಳಿ ಬಂದೆ ನಾನು ೩

ತಪ್ಪ ನೋಡದೆ ಎನ್ನ
ಒಪ್ಪವಿಟ್ಟು ನಡಿಸಿ
ತಿಪ್ಪೆಯನು ಬಗೆದಲ್ಲಿ ಏನಿಪ್ಪುದು
ಸರ್ಪಧರ ನಿಮಗಂಜಿ
ಇಪ್ಪೆನಾಗಿಯೂ ನಿಮಗೆ
ಅಪ್ಪದಪ್ಪದದೊಂದು ಉಂಟೆ ಹೇಳಿ ೪

ಎಲ್ಲ ಪುರಾತನರು
ಎಲ್ಲಿ ನೆನೆದಲ್ಲಿ ಎ–
ನ್ನಲ್ಲಿ ಇಪ್ಪುದ ನಾನು ಬಲ್ಲೆನಾಗಿ
ಇಲ್ಲಿ ನತನಾಗಿ ನಾ–
ನಿಲ್ಲಿ ಕೃಪೆಯನು ಪಡೆದೆ
ಸಲ್ಲಲಿತ ಶಿವ ಷಡಕ್ಷರಿ ಲಿಂಗವೆ ೫

ಆಸತ್ತು ನೆಲಸಿಹೆನೆಂದರೆ ಮಾಣದು, ಬೇಸತ್ತು ಬೆಂಬಿದ್ದೆನೆಂದರೆ ಮಾಣದು, ಏವೆನೇವೆನೆಂದರೆ ಮಾಣದು, ಕಾಯದ ಕರ್ಮದ ಫಲಭೋಗವು. ಕೂಡಲಸಂಗನ ಶರಣರು ಬಂದು ಹೋ ಹೋ ಅಂಜದಿರೆಂದಡಾನು ಬದುಕುವೆನು. **– ಬಸವಣ್ಣನವರು**

❖❖

ಸರ್ವಾಂಗವನು ಸಲಿಸುವೆನು

ರಾಗ : ಮಾಳವಗೌಳ **ತಾಳ : ಝಂಪೆ**

ಎನ್ನ ಸರ್ವಾಂಗವನು
ನಿನ್ನ ಪರಿಣಾಮಕ್ಕೆ
ಚೆನ್ನಾಗಿ ಸಲಿಸುವೆನು ಎಲೆ ಲಿಂಗವೆ ॥ಪ॥

ಎನ್ನ ಹೃದಯವು ನಿಮಗೆ
ಉನ್ನತದ ಮನೆಯಯ್ಯ
ಎನ್ನ ಮುಖ ಮಖಶಾಲೆ ನಿಮಗಪ್ಪುದು
ಎನ್ನ ನವ ಚಕ್ರಗಳು
ಬಿನ್ನಣದ ನವನೆಲೆಯು
ಹೊನ್ನ ಉಪ್ಪರಿಗೆಯಾಗಿಪ್ಪುದಯ್ಯ ೧

ಎನ್ನ ಹೃತ್ಕಮಲವದು
ರನ್ನ ಖಚಿತಗಳಪ್ಪ
ನಿನ್ನ ಶಯನಕೆ ಮಂಚಮಾಗಿರ್ಪುದು
ಎನ್ನ ಜ್ಞಾನವು ನಿಮಗೆ
ಉನ್ನತದ ತಲೆಗಿಂಬು
ಎನ್ನಯಾಚಾರವೇ ಚರಣ ಭಟನು ೨

ಎನ್ನ ಶ್ರೋತ್ರವು ನಿಮ್ಮ
ಸನ್ನುತದ ನುಡಿಗಳನು
ಭಿನ್ನವಿಲ್ಲದೆ ಕೇಳ್ವ ದಾಸಿ ನಿಮಗೆ
ಎನ್ನ ತ್ವಕ್ಕದು ಚಲುವ
ನಿನ್ನ ಚರಣವ ತೊಳೆವ
ಮನ್ನಣೆಯ ತೊತ್ತಾಗಿ ಇರ್ಪುದಯ್ಯ ೩

ಎನ್ನ ನಯನವು ನಿಮಗೆ
ರನ್ನವೆಳಗಿನ ಜ್ಯೋತಿ
ಎನ್ನ ಘ್ರಾಣವು ನಿಮಗೆ ಗಂಧಭರಣಿ
ಎನ್ನ ಜಿಹ್ವೆಯು ನಿಮಗೆ

ಮನ್ನಣೆಯ ತಾಂಬೂಲ
ಹೊನ್ನ ಪಡಿಗಮದಾಗಿ ಮರೆದಿರ್ಪುದು ೪

ಎನ್ನ ಕೈಗಳೆರಡು
ನಿನ್ನ ಪಾದವನೊಲಿದು
ಚೆನ್ನಾಗಿ ತೊಳೆದಿರ್ಪ ಹೆಂಗಳಯ್ಯ
ಎನ್ನ ಕಾಲುಗಳೆರಡು
ನಿನ್ನ ಮಜ್ಜನಗಳಿಗೆ
ಪನ್ನೀರುಗಳ ತರುವ ತೊತ್ತಿರಯ್ಯ ೫

ಎನ್ನ ಪ್ರಾಣವು ಇದುವೆ
ನಿನ್ನ ರತಿಸುಖಗಳಿಗೆ
ಭಿನ್ನವಿಲ್ಲದೆಯಪ್ಪ ಸತಿಯು ಬಳಿಕ
ಎನ್ನ ಮನವದು ಬಿಡದೆ
ಎನ್ನ ನಿನ್ನನು ತಂದು
ಚೆನ್ನಾಗಿ ಒಂದುಗೂಡಿಪ ಕೆಳದಿಯು ೬

ಇಂತು ಸರ್ವಾಂಗವನು
ಮುಂತೆನ್ನ ಪ್ರಾಣವನು
ಸಂತತಂ ಲಿಂಗ ತಾ ಕೈಕೊಳುತಿರೆ
ಭ್ರಾಂತಿ ಭ್ರಮೆಯಳಿಯಿತ್ತು
ಚಿಂತೆಯಿನ್ನೇಕಯ್ಯ
ಕಂಡು ಹರ ಶಿವ ಷಡಕ್ಷರಿ ಲಿಂಗವೆ ೭

ಅಂಗೈಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿವರಿಯುತ್ತ ಸುರಿವುತ್ತ ಎಂದಿಪ್ಪೆನೋ ನೋಟವೇ ಪ್ರಾಣವಾಗಿ ಎಂದಿಪ್ಪೆನೋ! ಕೂಟವೇ ಪ್ರಾಣವಾಗಿ ಎಂದಿಪ್ಪೆನೋ! ಎನ್ನ ಅಂಗವಿಕಾರ ಸಂಗವಳಿದು ಕೂಡಲಸಂಗಯ್ಯ ಲಿಂಗ ಲಿಂಗವೆನ್ನುತ್ತ. – **ಬಸವಣ್ಣನವರು**

❖❖

ಶಿವನೊಳಗೆ ಮೋಹವಿರೆ ತಾನೆ ಶಿವನು

ರಾಗ : ಮುಖಾರಿ ತಾಳ : ಝಂಪೆ

ಶಿವನೊಳಗೆ ವಿಶ್ವಾಸ
ಶಿವನೊಳಗೆ ನಂಬಿಗೆಯು
ಶಿವನೊಳಗೆ ಮೋಹವಿರೆ ತಾನೆ ಶಿವನು ॥ಪ॥

ಕುರಿಯ ಹಿಕ್ಕೆಯ ತಂದು
ಹರನೆಂದು ಭಾವಿಸುತ
ಕುರಿಯ ಹಾಲನೆ ಕರೆದು ತಂದೆರೆಯುತ
ಇರುತಿರಲು ತಂದೆ ತಾ
ಪರಿತಂದು ಕೆಡಿಸಲು
ಶಿರವರಿವ ವಿಶ್ವಾಸವನು ನೋಡಿರೆ ೧

ಭೂಮಿಯೊಳಗಭಿಮಾನ
ಕಾಮಿನಿಯರಿಂದೆಂದು
ಸೋಮಧರ ಚರರೂಪಿನಿಂದ ಬಂದು
ಕಾಮಿನಿಯ ಬೇಡಿತ್ತ
ಭೂಮೀಶ ಬಲ್ಲಾಳ
ನಾ ಮಹಾ ವಿಶ್ವಾಸವನು ನೋಡಿರೆ ೨

ಏಣಾಂಕಧರನಿರವು
ಊನವಾಗಲು ಕಂಡು
ಕ್ಷೋಣೀಶ ತನ್ನ ಕರಯುಗವ ಕಡಿದು
ಕ್ಷೋಣಿಯೊಳು ನುತಿವೆತ್ತು
ಜಾಣ ಕರಗಳ ಪಡೆದ
ಬಾಣನೆಂಬನ ನಂಬುಗೆಯ ನೋಡಿರೆ ೩

ಹಾಲು ಪಾಯಸ ತನ್ನ
ನಾಲಿಗೆಗೆ ಸವಿಸವಿದು
ಬಾಲೆ ತಾನುಂಬುವದನುಳಿದು ಬಳಿಕ
ಲೀಲೆಯಿಂದಲಿ ತಾನು

ಶೂಲಗುಣಿಸಿದಳೊಮ್ಮೆ
ಚೋಳಿಯಕ್ಕನ ಮೋಹವನು ನೋಡಿರೆ ೪

ಇಂತಪ್ಪ ವಿಶ್ವಾಸ
ಇಂತಪ್ಪ ನಂಬುಗೆಯು
ಇಂತಪ್ಪ ಮೋಹ ತನಗಿಲ್ಲದನಕ
ಸಂತತದಿ ಲಿಂಗವನು
ಮುಂತೆ ಪೂಜಿಸುತಿರಲು
ಎಂತೊಲಿವನಯ್ಯ ಷಡಕ್ಷರಿ ಲಿಂಗವು ೫

ನಂಬರು ನೆಚ್ಚರು ಬರಿದೆ ಕರೆವರಯ್ಯ, ನಂಬಿ ಕರೆದರೆ ಓ ಎನ್ನನೆ ಶಿವನು? ನಂಬದೆ ನಚ್ಚದೆ ಬರಿದೆ ಕರೆವರ ಕೊಂಬು ಮೆಟ್ಟ ಕೂಗೆಂದ ಕೂಡಲಸಂಗಮದೇವ-ಬಸವಣ್ಣನವರು.

❖❖

ವರವ ಬೇಡುವೆನೊಂದ

ರಾಗ : ಮಲಹರಿ **ತಾಳ : ಝಂಪೆ**

ಹರನೆ ನಾ ನಿಮ್ಮಲ್ಲಿ
ವರವ ಬೇಡುವೆನೊಂದ
ಶರಣರಿಗೆ ಭೃತ್ಯನಾಗಿರಿಸೆನ್ನನು ॥ಪ॥

ಅವರಲ್ಲಿ ಶಿವನಿಹನು
ಶಿವನಿರ್ದೊಡಲ್ಲಿ ತಾ
ತವೆ ಸಕಲ ಶರಣಗಣ ಮೆರೆದಿಪ್ಪುದು
ಅವರ ಅಂಗಳ ನಿತ್ಯ
ಶಿವಲೋಕವಾಗಿಹುದು
ಅವರ ಘನಕಿನ್ನೇನ ಸರಿಯ ಕಾಣೆ ೧

ಅವರ ಕಿಂಕರನಾಗಿ
ಅವರ ಪಾದವ ತೊಳೆದು
ಅವರ ಪಡಿಗವ ಬೆಳಗಿ ತೊಳೆದು ತಂದು

ಅವರ ಹಾವುಗೆವಿಡಿದು
ಅವರಡಿಗಳನು ಒರೆಸಿ
ಅವರಿಚ್ಛೆಯೊಳಗಿರ್ಪ ವರವ ಶಿವನೆ ೨

ಅವರುಂಡು ಮಿಕ್ಕುದನು
ಅವರುಟ್ಟು ಬಿಟ್ಟುದನು
ಅವರುಗಿದ ತಾಂಬುಲವ ಸವಿದು ನಾನು
ಅವರಂಗಳವ ಗುಡಿಸಿ
ಅವರ ಬಾಗಿಲ ಕಾಯ್ದು
ಅವರ ಕೀಳಲಿ ಸೇರಿಕೊಂಡಿರ್ಪುದ ೩

ಅವರ ಎತ್ತಾಗಿ ನಾ-
ನವರ ತೊತ್ತಾಗಿ ನಾ-
ನವರ ಪಶುವಾಗಿ ನಾ ಸುಖದಿರ್ಪುದ
ಅವರ ಬಾಗಿಲೊಳಿರ್ಪ
ತವೆ ಸೊಣಗ ನಾನಾಗಿ
ಅವರ ಚರಣದ ಧೂಳಿ ತೊಡೆದಿರ್ಪುದ ೪

ಶಿವ ನಿಮ್ಮ ಘನದಿಂದ
ಅವರ ಘನವತ್ಯಧಿಕ
ಅವರಂಗಳ ದ್ವಿತಿಯ ಕೈಲಾಸವು
ಅವರ ನಾ ಭವಭವದಿ
ತವೆ ಬಿಡದೆ ಇರ್ಪುದನು
ಶಿವ ಷಡಕ್ಷರಿ ವರನೆ ಪಾಲಿಸೆನಗೆ ೫

ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ. ಕೀಳಿಂಗಲ್ಲದೆ ಹಯನ ಕರೆವುದೆ? ಮೇಲಾಗಿ ನರಕದಲೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವ.

–ಬಸವಣ್ಣನವರು.

❖❖

ಎಲ್ಲರಲಿ ಒಂದೊಂದ ಬೇಡಿಕೊಂಬೆ

ರಾಗ : ಮಧುಮಾಧವಿ

ಎಲ್ಲ ಶರಣರ ನೆನೆದು
ಇಲ್ಲಿ ನಾ ನತನಾಗಿ
ಎಲ್ಲರನು ಒಂದೊಂದು ಬೇಡಿಕೊಂಬೆ ॥ಪ॥

ಭಕ್ತಿಯಿಲ್ಲದ ಧರ್ಮ
ವ್ಯರ್ಥವಾಗುವದೆಂದು
ಭಕ್ತಿತ್ರಯವ ಕಲಿಸಿ ಮುಕ್ತನೆನಿಸಿ
ಮುಕ್ತಿ ಪದವಿಗೆ ಸಂದ
ಕರ್ತೃ ಬಸವೇಶನತಿ
ಭಕ್ತಿ ಭಿಕ್ಷೆಯ ನೀಡಿ ಸಲಹೆನ್ನನು ೧

ಶಿವನೊಳಗೆ ಪ್ರಾಣವನು
ತವೆ ಬೆರಸಿ ಹೊರಗಳಿದು
ಶಿವಬೆಳಗಿನೊಳು ಪರಮ ತಪವನೈದಿ
ಶಿವನು ತಾನಾಗಿರ್ದ
ಶಿವಸಿದ್ಧರಾಮಯ್ಯ
ಶಿವಯೋಗ ಭಿಕ್ಷೆಯನು ನೀಡು ಎನಗೆ ೨

ಉರ್ವಿಪತಿಯಂ ಬಿಟ್ಟು
ನಿರ್ವಾಣಯುತೆಯಾಗಿ
ಸರ್ವ ಕರಣೇಂದ್ರಿಯಗುಣಗಳಳಿದು
ಪರ್ವತೇಶನ ಬೆರೆದ
ಸರ್ವಸುಖಿ ಮಹದೇವಿ
ನಿರ್ವಾಣ ಭಿಕ್ಷವನು ನೀಡು ಎನಗೆ ೩

ಇಂಬರಿದು ಶಿವನೊಳಗೆ
ಸಂಭ್ರಮದ ನುಡಿಗಲಿತು
ಕುಂಭಿನಿಯ ಜನರೊಳಗೆ ನುಡಿಗಳರಿತು
ಗಂಭೀರನಾಗಿ ಸ್ವ–

ಯಂಭುವಹ ಅಜಗಣ್ಣ
ಗಂಭೀರ ಭಿಕ್ಷುವನು ನೀಡು ಎನಗೆ ೪

ನಮ್ಮ ಶರಣರು ಬಹಳ
ಧರ್ಮಿಗಳು ನಿರ್ಮಳರು
ಒಮ್ಮೆಯಂ ಭಿಕ್ಷುವನು ಇಲ್ಲೆನ್ನರು
ನಮ್ಮ ಸಂರಕ್ಷಿಸುವ
ಧರ್ಮ ಭಿಕ್ಷವನುಂಡು
ನೆಮ್ಮುವೆನು ಶಿವಷಡಕ್ಷರಿ ಲಿಂಗವ ೫

ಭಕ್ತಿಯಿಲ್ಲದ ಬಡವ ನಾನಯ್ಯ, ಕಕ್ಕಯ್ಯನ ಮನೆಯಲ್ಲು ಬೇಡಿದೆ, ದಾಸಯ್ಯನ ಮನೆಯಲ್ಲು ಬೇಡಿದೆ, ಚನ್ನಯ್ಯನ ಮನೆಯಲ್ಲು ಬೇಡಿದೆ. ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವ.–ಬಸವಣ್ಣನವರು

❖❖

ಮುಂದೆ ಏನಪ್ಪುದೋ

ರಾಗ : ಕನ್ನಡ **ತಾಳ : ಝಂಪೆ**

ತನುವಿನಾ ಗುಣವು ನಿ–
ಮ್ಮನು ನೆನೆಯಲೀಯದಲೆ
ಘನಮಹಿಮನೇ ಮುಂದೆ ಏನಪ್ಪುದೋ ॥ಪ॥

ಅರಣ್ಯದೊಳಗಿಹೆನೆ
ಧೀರತನವೆನಗಿಲ್ಲ
ಊರೊಳಗಿಹೆನೆ ವಾಗ್ವಿಷಯ ಘನವು
ಮಾರಾರಿ ನೀ ಬೇರೆ
ಸೇರೆ ನಾನೆಂದೊಡಂ
ಯಾರು ನಾ ಮುಂದಕ್ಕೆ ಏನಪ್ಪೆನೋ ೧

ಇರುಳು ನಾ ನೆನೆವೆನೆ
ಇರುಳು ನಿದ್ರೆಯ ಜಡವು

ಇರದೆನಗೆ ಹಗಲು ವ್ಯಾಪಾರ ಹಸಿವು
ತೊರೆಯಲಾರೆನು ಅಶನ
ತರುಬಲಾರೆನು ನಿದ್ರೆ
ಮರಳಿ ನಾಮುಂದೆ ಇನ್ನೇನಪ್ಪೆನೋ ೨

ಘನವ ನಾ ನೆನೆವೆನೆ
ಮನ ಹಲವು ನೆನೆವುತಿದೆ
ಮನವ ಹಿಡಿತರುವನಕ ನಿಮಗೆ ಮುನಿಸು
ಮನಭೋಗ ಬಯಸುವದು
ತನು ಸೊಬಗಿಗೆಳಸುವದು
ಘನಮಹಿಮ ನಾ ಮುಂದೆ ಏನಪ್ಪೆನೋ ೩

ಅಂಗವನು ವೇಷದಲಿ
ಶೃಂಗರಿಸಿ ಫಲವೇನು
ಲಿಂಗದಲಿ ಮನ ಪ್ರಾಣ ಬೆರೆಯದನಕ
ಅಂಗಜಾರಿಯೆ ಎನ್ನ
ಸಂಗವನು ನೀನೊಲ್ಲೆ
ಲಿಂಗವೇ ನಾ ಮುಂದೆ ಏನಪ್ಪೆನೋ ೪

ಮನವು ಬೇರೆನ್ನುವನು
ಜಿನುಗಿ ಕಾಡುತ್ತಲಿದೆ
ನೆನಹಿಂಗೆ ಬಾರದಿರೆ ನೀನೆನ್ನುವ
ಅನವರತ ಕಾಡುವಿಯೊ
ಅನುಪ್ರಾಣಿ ನೀ ಕರುಣ -
ವನು ಮಾಡು ಷಡಕ್ಷರಿ ಲಿಂಗವೆ ೫

ಕಾಯವಿಕಾರ ಕಾಡಿಹುದಯ್ಯ, ಮನವಿಕಾರ ಕೂಡಿಹುದಯ್ಯ, ಇಂದ್ರಿಯ ವಿಕಾರ ಸುಳಿವುದಯ್ಯ, ಸುಳುವಿನೊಳಗೆ ಸುಳಿವುತ್ತಲಿದ್ದೇನೆ. ಸಿಲುಕಿಸದಿರಯ್ಯ. ಅನ್ಯ ಚಿತ್ತವಿರಿಸದಿರಯ್ಯ. ನಿಮ್ಮ ಚಿತ್ತವಿರಿಸಯ್ಯ, ಅನುಪಮ ಸುಖಸಾರಾಯ ಶರಣರಲ್ಲಿ ಕೂಡಲಸಂಗಮದೇವಯ್ಯ ಇದನೇ ಬೇಡುವೆನಯ್ಯಾ.

-ಬಸವಣ್ಣನವರು

❖❖

ಮಗಳೆ ಎನ್ನಯ ಮಾತು ಕೇಳು

ರಾಗ : ಅಹರಿ **ತಾಳ : ಝಂಪೆ**

ಮಗಳೆ ಎನ್ನಯ ಮಾತು
ಮಿಗೆ ಕೇಳು ನಿನ್ನಾಳ್ದ ಪ
ನ್ನಗರಾಜ ವಿಷವ ತಾಳ್ದನು ಕೊರಳೊಳು ॥ಪ॥

ಎಲ್ಲರಂತವನಲ್ಲ
ಬಲ್ಲಿದನು ನಿನ್ನ ಮನ–
ದೊಲ್ಲಭನು ಅಂಗವಿದ್ಯೆಗಳೆಲ್ಲವ
ಸಲ್ಲಿಸುತ್ತೊಳಗೊಳಗೆ
ಮೆಲ್ಲಗೆಡೆಯಾಡುತಿರು
ನಿಲ್ಲದಿರು ಹೊರಗೆ ರಚ್ಚೆಯ ಬಳಸದೆ ೧

ಇನನುದಯ ಕಾಲಕ್ಕೆ
ಮನೆಯ ಕಸವನು ತೆಗೆದು
ಅಣಿಮಾಡು ಕರಣ ತಂಡುಲವ ತಳಿಸು
ಮನೆಯೊಳಗೆ ಕತ್ತಲೆಯ
ಎನಿತನೆಸಗಲು ಬೇಡ
ಮುನಿದಡವ ರಕ್ಕಸನು ನಿನ್ನಾಳ್ದನು ೨

ನೀ ಮುಗ್ಧೆ ನಿನ್ನಾಳ್ದ
ಕಾಮಾರಿ ಆತ್ಮಗಿಳಿ –
ರಾಮವನು ಓದಿಸೌ ಹೊರಗಾಡದೆ
ನಾ ಮುನ್ನಲಂಜುವೆನು
ನೀ ಮಗಳೆ ನಿಜ ಹೇಳು
ಸೋಮಧರ ಕೋಪಿಸಿದಡೆಲ್ಲಡಗುವೆ ೩

ಕಾಲಪಿಡಿವೊಡೆ ಅವಗೆ
ಕಾಲಿಲ್ಲ ಮೇಲ್ವಾಯ್ದು
ಬಾಲೆ ನೀ ಹಿಡಿವೊಡವಗೊಡಲು ಇಲ್ಲ
ಎಳ್ಳನಿತು ಬೇಸರವ

ತಾಳುವವನಲ್ಲ ಕಟು
ಶೂಲಿ ಮುನಿದಡೆ ತಿಳುಪಲರಿಯೆ ಮಗಳೆ ೪

ಮತಿ ಮಸುಳದಿರು ಮಗಳೆ
ಪತಿ ಕೋಪಿಸುವನು ಪತಿ-
ವ್ರತೆಯರೊಳು ಗೆಳೆತನವ ಮಾಡು ನೀನು
ಪತಿ ಕಾಮಜಿತ ನೀನು
ಅತಿಕಾಮಿಯಾತನನು
ಸತಿ ಕೇಳು ನೀನಿಂತು ಅಗಲಬೇಡ ೫

ಕಡುತವಕಿ ನಿನ್ನ ಪತಿ
ಬಿಡು ಬೇಸರಾಡದಿರು
ಒಡಗೂಡು ದಿವರಾತ್ರಿಗಳು ಎನ್ನದೆ
ತಡಮಾಡದಿರು ಮಗಳೆ
ಒಡನೆ ಮುನಿದರೆ ಬಳಿಕ
ಮಡದಿ ನೀನೆಂತವನ ತಿಳುಪಿ ನೆರೆವೆ ೬

ಮನೆಯೊಳಗೆ ಹಚ್ಚಿಯುರಿ
ಯನೆ ಪಟುವನೆ ಮಾಡು
ಅನಿತರೊಳಗಾಗಿ ನಿನ್ನಾಳ್ದಗೊಲಿದು
ಮನ ಶುದ್ಧದಲಿ ಮಾಡು
ಘನಭಕ್ತಿ ಬೋನವನು
ಇನಿಯನಿಂಗೆಡೆಮಾಡು ಅದಕೊಲಿವನು ೭

ಮೂರು ಕೋಣೆಗಳೊಳಗೆ
ಮೂರು ಜ್ಯೋತಿಯ ಬೆಳಗು
ಆರೈದು ಮಧ್ಯ ಕೋಣೆಯ ಮನೆಯೊಳು
ಮುರಾರಿಯನು ನೀನ
ಪಾರ ಸುಖದೊಳು ಹೊಂದಿ
ನಾರಿ ನೀನಿರು ಇಹವ ಪರವರಿಯದೆ ೮

ಇಂತು ಪತಿಯೊಳಗೊಂದಿ
ಸಂತತಂ ಇರುತಿರಲು

ಕಂತುಹರ ಶಿವ ಷಡಕ್ಷರಿ ಲಿಂಗವು
ಮುಂತೆ ನಿನ್ನವನು ತ-
ನ್ನಂತೆ ಮಾಡುವನೊಲಿದು
ಕಾಂತೆ ನೀ ನಂಬಿ ನಚ್ಚಿರು ಬೆದರದೆ ೯

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವ! ಅಂಗವಿದ್ಯೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ. ಕೈಯ ತೊಳೆದಲ್ಲದೆ ಮುಟ್ಟಲೀಯ. ಕಾಲ ತೊಳೆದಲ್ಲದೆ ಹೊಂದಲೀಯ, ಇಂತೀ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವ. **– ಬಸವಣ್ಣನವರು**

❖❖

ನಮಗೆ ಸರಿಯದಾರು

ರಾಗ : ದ್ವಿಜಾವಂತಿ

ಶಿವಶರಣರು ಮನೆಯ
ತವೆ ಸೇವೆಯನು ಮಾಡಿ
ಭವವ ಗೆದ್ದೆನು ಎನಗೆ ಸರಿಯದಾರು ॥ಪ॥

ಬಸವೇಶ್ವರನು ಚನ್ನ-
ಬಸವೇಶ್ವರನು ಕರುಣಿ
ದಸರಯ್ಯ ಮೋಳಿಗೆಯ ಮಾರಯ್ಯನ
ಮಸಣಯ್ಯಗಳ ಮನೆಯ
ಕಸವ ಗುಡಿಸುವ ಮಹಾ
ಹೊಸ ಸೇವಕರು ನಮಗೆ ಸರಿಯದಾರು ೧

ಚನ್ನಯ್ಯನಗ್ಗವಣಿಯ
ಹೊನ್ನಯ್ಯಗಾಣದಾ
ಕನ್ನಯ್ಯ ಧೂಳಿದೇವರು ಬೇಡರ
ಕಣ್ಣಯ್ಯಗಳ ಮನೆಯ
ಉನ್ನತದ ಸೇವಕರು
ಇನ್ನು ಧರೆಯೊಳು ನಮಗೆ ಸರಿಯದಾರು ೨

ಹರಳಯ್ಯ ಮಧುವಯ್ಯ
ಬಳ್ಳೇಶ ಮಲ್ಲಯ್ಯ
ಗೊಲ್ಲಾಳದೇವ ಹಾವಿನ ಹಾಳಿನ
ಕಲ್ಲಯ್ಯಗಳ ಮನೆಯ
ಹುಲ್ಲು ಸೊಪ್ಪನೆ ತರುವ
ಬಲ್ಲಿದರು ನಮಗಿನ್ನು ಸರಿಯದಾರು ೩

ಬಾವೂರು ಬೊಮ್ಮಯ್ಯ
ದೇವರ ದಾಸಯ್ಯ ಜಗ
ದೇವ ಮಲ್ಲಯ್ಯ ಬೊಮ್ಮಣ್ಣನ
ಆವಾವ ಜಗದೊಳಗೆ
ಆ ವಂದ್ಯರಾ ಮನೆಯ
ಸೇವಕರು ನಮಗಿಂದು ಸರಿಯದಾರು ೪

ಚಿಕ್ಕಯ್ಯ ಡೋಹರ
ಕಕ್ಕಯ್ಯ ಸೊಡ್ಡಳಾ-
ಯ್ದಕ್ಕಿಯಾ ಮಾರಯ್ಯ ರಾಮಯ್ಯನು
ಚಕ್ಕುಲಿಗೆ ನಾಗಯ್ಯ
ಅಕ್ಕರಿನ ತೊತ್ತಿನಾ-
ಮಕ್ಕಳಪ್ಪೆವು ನಮಗೆ ಸರಿಯದಾರು ೫

ಹಾದರದ ಬೊಮ್ಮಯ್ಯ
ಮಾದರ ಧೂಳಯ್ಯ
ಮೇದಾರ ಕೇತಯ್ಯ ವಹಿಲಯ್ಯನ
ಆದಯ್ಯಗಳ ಮನೆಯ
ಕಾದುಕೊಂಡಿರುವಂಥ
ಆದಿಕರು ನಮಗಿನ್ನು ಸರಿಯದಾರು ೬

ಸಾಮವೇದಿಯ ಸಿದ್ಧ-
ರಾಮಯ್ಯ ಮಯದುನ
ರಾಮಯ್ಯ ಏಕಾಂತ ರಾಮಯ್ಯನ
ಭೀಮಯ್ಯಗಳ ಮನೆಯ

ಆ ಮಹಾಸೇವಕರು
ಆ ಮಹಿಯೊಳೆಮಗಿನ್ನು ಸರಿಯದಾರು ೭

ಮೊರನದಾ ವೇಮ್ಮಯ್ಯ
ಮೊರಟಧಾ ಬಂಕಯ್ಯ
ತಿರುನೀಲಕಂಠಯ್ಯನಣುಮೂರ್ತಿಯು
ಗುರು ಮಲ್ಲಿಕಾರ್ಜುನರ
ವರಪಂಡಿತರ ಮನೆಯ
ತುರುಗಾಹಿಗರು ನಮಗೆ ಸರಿಯದಾರು ೮

ಬಂಕಯ್ಯ ಶಿವರಾತ್ರಿ
ಸಂಕಯ್ಯ ಹೊಡೆಹುಲ್ಲ
ಬಂಕಯ್ಯ ಮರುಳು ವೇಷದೊಳೊಪ್ಪುವ
ಶಂಕರೇಶ್ವರನವರ
ಕಿಂಕರರ ಕಿಂಕರರ
ಲೆಂಕರಪ್ಪೆವು ನಮಗೆ ಸರಿಯದಾರು ೯

ಕುಂಬಾರ ಗುಂಡಯ್ಯ
ಅಂಬಿಗರ ಚೌಡಯ್ಯ
ಕೆಂಬಾವಿ ಭೋಗಯ್ಯ ಶ್ವಪಚಯ್ಯನ
ಮುಂಬಾಗಿಲನು ಕಾಯ್ವ
ನಂಬಿಗೆಯ ಸೇವಕರು
ಕುಂಭಿನಿಯೊಳೆಮಗಿನ್ನು ಸರಿಯದಾರು ೧೦

ಮಳೆಯರಾಜನು ಚೋಳ
ವಲಘಾಂಡ ನೈನಾರು
ಕಲಿನಾಥನಾ ಚಾರಮ ನಂಬಿಯ
ಕಳೆವೆತ್ತ ಚಂಗಳೆಯ
ಒಳಬಾಗಿಲನು ಕಾಯ್ವ
ಸಲುವೆಗಾಳರು ನಮಗೆ ಸರಿಯದಾರು ೧೧

ಸಿರಿಯಾಳ ಕಲಿಯರು
ಗುರುಭಕ್ತ ನವನಂದಿ

ಅರಿಯಮನುವಾಳು ನಮಿತಾಂಡಾರ್ಯರ
ಮೆರೆಮಿಂಡದೇವರ
ಚರಣ ರಕ್ಷೆಯ ಪಡಿದು
ವರವ ಪಡೆವರು ನಮಗೆ ಸರಿಯದಾರು ೧೨

ಚೋಳಕ್ಕ ದುಗ್ಗಳೆಯು
ನೀಲಲೋಚನೆ ಚಲ್ವ
ಸೂಳೆ ನಂಬಿಯು ಕಮಳೆ ಸೋಮವ್ವೆಯ
ಕಾಳು ಜೈನನ ಬಿಟ್ಟ
ಲೋಲ ವೈಜವ್ವೆಯ
ಆಳುಗಳು ನಮಗಿನ್ನು ಸರಿಯದಾರು ೧೩

ಅಕ್ಕ ನಾಗಮ್ಮ ಸ–
ತ್ಯಕ್ಕ ಚಂಗಳೆ ಚಲ್ವೆ
ಅಕ್ಕರೆಯ ಮಹಾದೇವಿ ಸುಗ್ಗವ್ವೆಯ
ಚಿಕ್ಕ ಕೊಡಗೂಸಿನವ–
ರಕ್ಕರಿನ ತೊತ್ತಿನ
ಮಕ್ಕಳಪ್ಪೆವು ನಮಗೆ ಸರಿಯದಾರು ೧೪

ಇಂತಪ್ಪನವರ ಬಂಟ
ನಿಂತು ಭವದಲಿ ಬಂದ
ನಂತೆಯೆಂದರೆ ನಿಮಗೆ ಕೊರತೆಯಯ್ಯ
ಮುಂತೆ ನಮ್ಮವನೆಂದು
ಸಂತೋಷದಿಂದಪ್ಪು
ಕಂತುಹರ ಶಿವಷಡಕ್ಷರಿ ಲಿಂಗವೆ ೧೫

ಅಯ್ಯಾ ನಿಮ್ಮ ವಂಶಾವಳಿಯಲೊಬ್ಬ ತೊತ್ತಿನ ಮಗ ಹುಟ್ಟಿದಾತನ ತೊತ್ತಿನ ಮಗ ನಾನಯ್ಯ! ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯ. ಕೂಡಲಸಂಗಮದೇವ ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲವಯ್ಯ. **–ಬಸವಣ್ಣನವರು**

❖❖

ಹೆದರಿ ನುಡಿಯಲಮ್ಮೆನು

ರಾಗ : ಸುರುಟಿ ತಾಳ : ಝಂಪೆ

ಮುದದಿ ಶರಣರುಗಳ ನುಡಿಗೆ
ಇದಿರ ನುಡಿಯ ನುಡಿಯದವರು
ಪದುಳದಿಂದ ನುಡಿದ ಮಾಳ್ಕೆಯಿಂದ ನುಡಿವೆನು ॥ಪ॥

ಕಡಿದ ಕೊನರು ಚಿಗುರಿತೆನಲು
ಕಡಿದ ಕೊನರು ಚಿಗುರಿತೆಂಬೆ
ಮಡಿದ ಮನುಷನೆದ್ದನನೆಲು ಎದ್ದನೆಂಬೆನು
ಕಡಿದ ಶಿರವು ಹತ್ತಿತೆನಲು
ಕಡಿದ ಶಿರವು ಹತ್ತಿತೆಂಬೆ
ಬಿಡದೆ ಬರಡು ಕರೆಯಿತೆನಲು ಕರೆಯಿತೆಂಬೆನು ೧

ಉರಗ ನೇವುಳಾಯಿತೆನಲು
ಉರಗ ನೇವುಳಾಯಿತೆಂಬೆ
ಗರಳ ಮಧುರವಪ್ಪುದೆನಲು ಅಪ್ಪುದೆಂಬೆನು
ಬರೆದ ಚಿತ್ರ ನುಡಿಯಿತೆನಲು
ಬರೆದ ಚಿತ್ರ ನುಡಿಯಿತೆಂಬೆ
ಉರಿದ ವೃಕ್ಷ ಚಿಗುರಿತೆನಲು ಚಿಗುರಿತೆಂಬೆನು ೨

ಇಟ್ಟಿ ಹಣ್ಣು ಮಧುರವೆನಲು
ಇಟ್ಟಿ ಹಣ್ಣು ಮಧುರವೆಂಬೆ
ಸುಟ್ಟ ಬೀಜ ಬೆಳೆಯಿತೆನಲು ಬೆಳೆಯಿತೆಂಬೆನು
ನೆಟ್ಟ ಪ್ರತಿಮೆ ನಡೆಯಿತೆನಲು
ನೆಟ್ಟ ಪ್ರತಿಮೆ ನಡೆಯಿತೆಂಬೆ
ಹೊಟ್ಟೆ ಶಿಶುವು ನುಡಿಯೆತೆನಲು ನುಡಿಯೆತೆಂಬೆನು ೩

ಜಡಜಸಖನ ತಡೆದರೆನಲು
ಜಡಜಸಖನ ತಡೆದರೆಂಬೆ
ಕಡಿದ ಹಸ್ತ ಚಿಗುರಿತೆನಲು ಚಿಗುರಿತೆಂಬೆನು
ಮಡಿಯದವನು ಮಡಿದನೆನಲು

ಮಡಿಯದವನು ಮಡಿದನೆಂಬೆ
ಕಡಿದ ಮರವು ನಡೆಯಿತೆನಲು ನಡೆಯಿತೆಂಬೆನು ೪

ಒಡನೆ ದಿಡವ ನುಡಿಯುತಿರಲಿ
ಬಿಡದೆ ಸಟೆಯ ನುಡಿವುತಿರಲಿ
ಕಡಿಯಲವರು ಅಲ್ಲ ಅಹುದು ಎನ್ನಲೆಮ್ಮನು
ಮೃಡ ಷಡಕ್ಷರಾಂಗ ಬಂದು
ಕೆಡಹಿ ನಾಲಿಗೆಯನು ಹಿಡಿದು
ಬಿಡದೆ ಕೀಳ್ವನೆಂದು ಹೆದರಿ ನುಡಿಯಲಮ್ಮೆನು ೫

ಒಡೆಯರಾಡುವ ಮಾತ ಕಡೆ ಪರ್ಯಂತ ಕೇಳಿ, ಇದಿರುವೋಗಿ ಕಿಂಕರನಾಗಿ ನಡಗುತ್ತ ಬಿನ್ನಹವ ಮಾಡುವ ಸದ್ಭಕ್ತನ ತೋರಯ್ಯ, ಒಡೆಯರಾಡುವ ಮಾತ ಕಂಡು ಕರೆವಲ್ಲಿ ಕೆಡೆಮೆಟ್ಟಿ ಬಾಯಿ ಘನವೆಂದು ಆಡುವವನ ತೋರದಿರಯ್ಯ. ಅವನ ಸಂಗದಲಿ ಇರಿಸದಿರಯ್ಯ. ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯ. ಕೂಡಲಸಂಗದೇವಯ್ಯ ನಿಮ್ಮ ಬೇಡುವದೊಂದೇ ವರವ.

–ಬಸವಣ್ಣನವರು

❖❖

ವಿಕಸವಾಗಲಿ

ರಾಗ : ವಸಂತ **ತಾಳ : ರೂಪಕ**

ಇಂದ್ರಿಯಗಳಿಚ್ಚೆಗಳಿಗೆ
ಮುಂದುವರಿದು ಮನವು ಕೆಟ್ಟು
ಇಂದುಧರನ ಕಡೆಗೆ ಮುಖವದಾಗಲೀಯದು ॥ಪ॥

ಪಿಕನ ಚೆಲ್ವಗಾನ ಧ್ವನಿಯ
ಶುಕನ ಶಿಶುವಿನಂತೆ ನುಡಿವ
ಸಖಿಯರುಗಳ ನುಡಿಗೆ ಕಿವಿಯು ಕಿವುಡು ಬೀಳಲೈ
ಸಕಲ ಶಿವನ ಶಾಸ್ತ್ರಗಳನು
ಪ್ರಕಟವಾಗಿ ಕೇಳಿ ಕೇಳಿ
ಸುಖಿಸುವದಕೆ ಎನ್ನ ಶ್ರೋತ್ರ ವಿಕಸವಾಗಲೈ ೧

ಹೊನ್ನಿನಲಗಿನಂತೆ ಹೊಳೆವ
ಕನ್ನೆಯರುಗಳಂಗ ಸೋಂಕ
ಲೆನ್ನ ತನುವು ಕಲ್ಲು ಮರನ ಭಾವವಾಗಲ್ಯೆ
ಚೆನ್ನ ಶಿವನ ಚರಣ ಧೂಳಿ–
ಯನ್ನು ಪೂಸಿ ಹೊರಳುವದಕ
ಎನ್ನ ತನುವು ಉಬ್ಬಿ ಕೊಬ್ಬಿ ವಿಕಸವಾಗಲ್ಯೆ ೨

ತೊಳಪಗಣ್ಣ ಕಳಶಕುಚದ
ಎಳೆಯ ಪೆಣ್ಣ ನೋಡುವುದಕೆ
ಹೊಳೆವ ನಯನವೆರಡು ಎನಗೆ ಕುರುಡು ಬೀಳಲ್ಯೆ
ಎಳೆಯ ಚಂದ್ರಧರನ ಚಲುವ–
ನಲಸದೊಲಿದು ನೋಡುವುದಕ
ಕಳೆಗಳಾಗಿಯೆನ್ನ ನಯನ ವಿಕಸವಾಗಲ್ಯೆ ೩

ಅಂಬುಜಾಕ್ಷಿಯರುಗಳಧರ
ಚುಂಬನಕ್ಕೆ ಎನ್ನ ಜಿಹ್ವೆ
ಹಂಬಲಿಸಿದ ಹಾಗೆ ಸೀಳಿ ಪುಗಳವೇಳಲ್ಯೆ
ನಂಬಿ ಶಿವನ ಶರಣರುಗಳ
ತಂಬುಲವನು ಸವಿವುದಕ್ಕೆ
ಅಂಬುರುಹದ ತೆರದಿ ಜಿಹ್ವೆ ವಿಕಸವಾಗಲ್ಯೆ ೪

ಅಂಗನೆಯರು ತೊಡೆದು ಸೂಡಿ
ದಂಗಪುಷ್ಪ ವಾಸಿಸುವೊಡೆ
ಹಿಂಗದೆನ್ನ ನಾಸಪುಟಕೆ ನೆಗಡಿಯಾಗಲಿ
ಮಂಗಳಾತ್ಮ ಷಡಕ್ಷರಿಯ
ಲಿಂಗದಂಘ್ರಿಗಿತಳಾ ಕುಸುಮ
ಹಾಂಗೆ ವಾಸಿಸುವರೆ ಘ್ರಾಣ ವಿಕಸವಾಗಲ್ಯೆ ೫

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವ – **ಬಸವಣ್ಣನವರು**

❖❖

ಭಜತಿಯರರೆ ವಿಷ್ಣುವಾಯು

ರಾಗ : ಆನಂದ ಭೈರವಿ **ತಾಳ : ರೂಪಕ**

ಭಜತಿಯರರೆ ವಿಷ್ಣುವಾಯು
ಅಬ್ಜಜಾತ ಚಂದ್ರ ಸೂರ್ಯ
ಮಝರೆ ಭಾಪು ತಾಳ ಭಜತಿ ನಾಟ್ಯಲೀಲನಂ ॥ಪ॥

ಧಿಮಿಕು ಧಿಂಧಿ ಧಿಮಿಕು ಧಿಮ್ಮಿ
ಧಿಮಿಕು ನಂದಿ ಕಾಯರುಗಳ
ಯಮಕ ಚಮಕ ಮೃದಂಗ ಭಜತಿ ನಾಟ್ಯಲೀಲನಂ
ಅಮಲ ವೀಣೆ ಸುಸ್ವರದಲಿ
ಗಮಪ ಧನಿಸ ರಿಸರಿ ಸರಿಸ
ಗಮಪ ಭಜತಿ ತುಂಬುರದಿ ನಾಟ್ಯಲೀಲನಂ ೧

ಚರಣಹತಿಗೆ ಧರಣಿ ಜಲವು
ಶರಧಿ ಸಹಿತ ಅಷ್ಟಗಜವು
ಜರಿಯ ಶೇಷ ಸಹಸ್ರ ಶಿರಸವದಾಗಿ ಬಿದ್ದಿರೆ
ಕರವ ಬಿದಿರೆ ಶೈಲಮಟ್ಟೆ
ಉರುಳುತಿರಲು ದೆಸೆಗೆ ಕುಸುಮ
ವರುಷದಂತೆಯುರುಳಿ ಭಗಣ ನಷ್ಟವಾದವು ೨

ಸುರರು ಭಾಪು ಧಿರುರೆ ಎನಲು
ಹರಿಸುರೇಂದ್ರ ಜೀಯಮೆನಲು
ಹರಸಿ ಮುನಿಗಳಕ್ಷತೆಗಳ ಸೂಸಿಯಿರುತಿರೆ
ಇರದೆಯೆನ್ನ ಹೃದಯ ಕಮಲ
ಪರಮ ಪೀಠದಲ್ಲಿ ಷಡ-
ಕ್ಷರಿಯ ವರನು ಒಪ್ಪಿ ಸೊಗಸಿ ರಾಜಿಸಿರ್ದನು ೩

ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸು ಕೂಡಲಸಂಗಮದೇವ. **–ಬಸವಣ್ಣನವರು**

❖❖

ಮನದ ಬಲುಮೆ ಎಂದಿಗಪ್ಪುದೋ

ರಾಗ : ಮಧ್ಯಮಾವತಿ

ಎಡರು ಕಂಟಕಗಳು ಬಂದು
ತೊಡರಿ ಕಾಡುವಲ್ಲಿ ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ॥ಪ॥

ಹಸಿವು ತೃಷೆಗಳಡಸಿ ತನುವ
ಹೊಸೆದು ಹುಸಿಯ ಮಾಡುತಿರಲು
ಬಿಸಿಲು ಕಾದು ಬೆಂಕಿಹತ್ತಿ ನೆತ್ತಿಯಡರಲು
ಕುಸಿದು ಕುಗ್ಗಿ ಧರೆಗೆ ಬಿದ್ದು
ಅಸುವನಳಿವ ಸಮಯದಲ್ಲಿ
ಸಸಿನೆ ಬಿಡದೆ ಶಿವನ ನೆನೆವುದೆಂದಿಗಪ್ಪುದೋ ೧

ಶಿರವು ಹರಿದು ತುಂಡುಮಾಗಿ
ಧರೆಗೆ ಉರುಳಿ ಬಿದ್ದಬಳಿಕ
ಗುರುವೆ ಹರ ನಮಶಿವಾಯ ಎನಲಿ ನಾಲಿಗೆ
ಮರುಳಿಯಾಚೆ ಕಡೆಯ ಮುಂಡು
ಹೊರಳಿ ಶಿವನ ಕಡೆಗೆ ಮುಗುಚಿ
ಕರವ ಮುಗಿವ ಮನದ ಬಲುಮೆಯೆಂದಿಗಪ್ಪುದೋ ೨

ಅಡವಿಯೊಳಗೆ ಸೊಕ್ಕಿದಾನೆ
ತೊಡರಿ ಬಂದು ಅಡ್ಡಗಟ್ಟಿ
ಕೆಡಹಿ ಕಾಲಿನಿಂದ ಮೆಟ್ಟಿ ಸುಂಡಿಲಿಂದಲಿ
ಹಿಡಿದು ಸೀಳಿ ಹೋಳನೆರಡ
ತೊಡಹಿ ಬೀಸುತಿರಲು ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ೩

ಓತು ನಿದ್ದೆಗೈಯುತಿರಲು
ಭೀತಿ ಹಿಡಿಸಿ ಸ್ವಪ್ನದಲ್ಲಿ
ಭೂತಬೇತಗಳಂಗಳೈದಿ ಭೀಷ್ಮರೂಪಿನಿಂ

ಘಾತಿಸುತ್ತಿರಲು ಮನವು
ಯಾತಕಂಜದಂತೆ ಭೂತ
ನಾಥನಡಿಯ ನೆನೆವ ಬಲುಮೆಯೆಂದಿಗಪ್ಪುದೋ ೪

ಅಡವಿಯಲ್ಲಿ ಬರುವ ಪಥದಿ
ಸುಡುತ ಬಂದು ಕಾಡ ಬೇಗೆ
ಅಡರಿ ತನುವನೆಲ್ಲ ಮುಸುಕಿ ಹೋಗುವಾಗಲು
ಕೆಡೆದು ಉರುಳಿ ತನುವು ಪ್ರಾಣ
ಬಿಡುವ ಸಮಯದಲ್ಲಿ ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ೫

ಜ್ವರಗಳಡಸಿ ತನುವ ಸುಟ್ಟು
ಕರಿಯ ಮುರಿಯ ಮಾಡುತಿರಲು
ಬಿರಿದು ತನುವು ಬಾಹು ಭಗದಳಂಗಳಿಂದಲಿ
ಚರಿಸದಂತೆ ಏಳದಂತೆ
ಉರುಳದಂತೆ ಮಾಡುವಾಗ
ಹರನ ನೆನೆವ ಮನದ ಬಲುಮೆಯೆಂದಿಗಪ್ಪುದೋ ೬

ನಡೆವ ನುಡಿವ ಕೊಡುವ ಉಂಬ
ಉಡುವ ತೊಡುವ ನಿದ್ರೆ ಪ್ರಾಣ
ಬಿಡುವ ಸಮಯದಲ್ಲಿ ಶಿವನ ನೆನೆವ ಮನವನು
ಮೃಡಷಡಕ್ಷರಾಂಕ ನಿಮ್ಮ
ಬಿಡದೆ ಬೇಡುತಿಹೆನು ನಾನು
ಕೆಡುವ ಸಕಲವಾದ ಪದಗಳನ್ನು ಒಲ್ಲೆನು ೭

ಎನಿಸೆನಿಸೆಂದರೆ ನಾ ಧೃತಿಗೆಡೆನಯ್ಯ, ಎಲುದೋರಿದರೆ, ನರಹರಿದರೆ, ಕರುಳು ಕುಪ್ಪಳಿಸಿದರೆ, ನಾ ಧೃತಿಗೆಡೆನಯ್ಯ, ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದರೆ, ನಾಲಿಗೆ ಕೂಡಲಸಂಗ ಶರಣೆನುತಿದ್ದಿತಯ್ಯ.

–ಬಸವಣ್ಣನವರು

❖❖

ಮನವನಿಡಲಿಕಾಗದು

ರಾಗ : ಭೈರವಿ **ತಾಳ : ರೂಪಕ**

ತಪವ ವಿದ್ಯೆ ಸಾಸಯೋಗ
ಜಪವ ವ್ರತವ ನಡಿಸಬಹುದು
ಗುಪಿತ ಲಿಂಗದಲ್ಲಿ ಮನವನಿಡಲಿಕಾಗದು ॥ಪ॥

ಶೈಲತಟಗಳಲ್ಲಿ ಪರ್ಣ–
ಶಾಲೆಯನ್ನು ಕಟ್ಟಿ ಕಂದ–
ಮೂಲ ಫಲವ ಸವಿದು ತಪವ ಮಾಡಿ ವಿದ್ಯದ
ಜಾಲವನ್ನು ಕಲಿತು ಇಂದ್ರ–
ಜಾಲಗಳನು ತೋರಬಹುದು
ಮೇಲೆ ಲಿಂಗದಲ್ಲಿ ಮನವನಿಡಲಕಾಗದು ೧

ದೂರದೃಷ್ಟಿ ದೂರಶ್ರವಣ
ಮಾರಣಾದಿ ಮಂತ್ರ ತಂತ್ರ
ಏರಿ ಗಗನದಲ್ಲಿ ಚರಿಸೆ ತನ್ನ ಆಲಿಗೆ
ತೋರುವದನು ಪಡೆಯಬಹುದು
ಮಾರಿ ಯಕ್ಷಿಣಿಯರ ರಚಿಸಿ
ಸೇರಿ ಲಿಂಗದಲ್ಲಿ ಮನವನಿಡಲಿಕಾಗದು ೨

ಹುಲಿಯ ಕೂಡ ಸೆಣಸಬಹುದು
ಮಲೆತ ಗಜದ ಇದಿರಿನಲ್ಲಿ
ಚಲಿಸದಂತೆ ನಿಂದು ಕಾದಬಹುದು ಸಿಂಹದ
ಅಲಗ ಬಹುದು ಮೀಸೆಯನ್ನು
ಉಳಿದ ಸಾಸವಂತದಿರಲಿ
ಒಲಿದು ಲಿಂಗದಲ್ಲಿ ಮನವನಿಡಲಿಕಾಗದು ೩

ಕುಂಭಕಾದಿ ಯೋಗದಿಂದ
ಕುಂಭಿಣಿಯನು ಸಹಜ ಬಿಟ್ಟು
ಅಂಬರವನು ಏರಬಹುದು ಆದಿಯಿಲ್ಲದೆ
ಸಂಭ್ರಮದಲಿ ನಿತ್ಯಕೋಟಿ

ತುಂಬ ಜಪವ ನಡಿಸಬಹುದು
ನಂಬಿ ಲಿಂಗದಲ್ಲಿ ಮನವನಿಡಲಿಕಾಗದು ೪

ಅನ್ಯವಾಕ್ಯವನ್ಯ ಜಪವ-
ನನ್ಯದೈವಗಳನು ಬಿಟ್ಟು
ಉನ್ನತದಲಿ ನಡಿಸಬಹುದು ಸಕಲ ವ್ರತವನು
ಚನ್ನ ಷಡಕ್ಷರಾಂಕ ಲಿಂಗ
ತನ್ನ ತಾನೆ ಒಲಿಯದನಕ
ಇನ್ನು ಲಿಂಗದಲ್ಲಿ ಮನವನಿಡಲಿಕಾಗದು ೫

ಏನಾದರೆಯು ಸಾಧಿಸಬಹುದು. ಮತ್ತೇನಾದರೆಯೂ ಸಾಧಿಸಬಹುದು. ತಾನಾರೆಂಬುದ ಸಾಧಿಸಲಾಗದು ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ. **-ಬಸವಣ್ಣನವರು**

❖❖

ಕಿವಿಯನೊಡ್ಡಿ ಕೇಳಲಾಗದು

ರಾಗ : ಧನ್ಯಾಸಿ

ಅಂದಿನವರಿಗಿಂದಿನವರು
ಹೊಂದಿ ಹೋಲಲರಿಯರೆಂಬ
ಕುಂದುನುಡಿಯ ಕಿವಿಯನೊಡ್ಡಿ ಕೇಳಲಾಗದು ॥ಪ॥

ಕಡಿದ ಶಿರವ ಪಡೆದರವರು
ಮಡಿದ ನರನ ಪಡೆದರವರು
ಜಡಜಸಖನ ತಡೆದರವರು ಇಂದಿನವರುವೆ
ಕಡಿದ ಶಿರವ ಜಡಜಸಖನ
ಪಡೆಯ ತಡೆಯಲಾರರೆಂಬ
ಜಡರ ನುಡಿಯ ಕಿವಿಯನೊಡ್ಡಿ ಕೇಳಲಾರದು ೧

ಸುಟ್ಟ ಬೀಜ ಬೆಳೆದರವರು
ಕೆಟ್ಟ ಕಣ್ಣ ಪಡೆದರವರು
ನೆಟ್ಟ ಕೊರಡ ಚಿಗಿತರವರು ಇಂದಿನವರುವೆ

ಸುಟ್ಟ ಕೆಟ್ಟ ನೆಟ್ಟ ಕೊರಡು
ದೃಷ್ಟವಾಗದಿವರಿಗೆಂಬ
ಭ್ರಷ್ಟನುಡಿಯ ಕಿವಿಯನೊಡ್ಡಿ ಕೇಳಲಾಗದು ೨

ತನುವ ಕೊಟ್ಟರಂದಿನವರು
ಧನವ ಕೊಟ್ಟರಂದಿನವರು
ವನಿತೆಯರನು ಕೊಟ್ಟರಂದು ಇಂದಿನವರುವೆ
ತನುವ ಧನವ ವನಿತೆಯರನು
ಇನಿತನೀಯಲಾರರೆಂಬ
ಬಿನುಗು ನುಡಿಯ ಕಿವಿಯನೊಡ್ಡಿ ಕೇಳಲಾಗದು ೩

ತಲೆಯ ಕೊಟ್ಟರಂದಿನವರು
ಹೊಳೆಯ ತಡೆದರಂದಿನವರು
ಚಲುವ ಮಗಳ ಮುಡಿಯ ಕೊಟ್ಟರಿಂದನವರುವೆ
ತಲೆಯ ಹೊಳೆಯ ಮಗಳ ಮುಡಿಯ
ಒಲಿದು ತೋರಿ ಕೊಡರು ಎಂಬ
ಹೊಲೆಯ ನುಡಿಯ ಕಿವಿಯನೊಡ್ಡಿ ಕೇಳಲಾಗದು ೪

ಅಂದಿಗೊಬ್ಬ ಶಿವನು ಮೇಣು
ಇಂದಿಗೊಬ್ಬ ಶಿವನದುಂಟು
ಎಂದು ನುಡಿದ ಪಾತಕರ್ಗೆ ನರಕ ತಪ್ಪದು
ಅಂದಿನವರು ಇಂದಿನವರು
ಎಂದು ನುಡಿಯ ಬೇಡ ನಿನಗೆ
ತಂದೆ ಷಡಕ್ಷರಿಯ ಲಿಂಗ ಕುಂದದೊಲಿವನು ೫

ಅಂದಿನವರು ಇಂದಿನವರೆಂಬ ಸಂದೇಹಿಗಳಿಗೆ ಸಂದೇಹ ಮುಂದುಗೂಡಿಪ್ಪುದು ನೋಡಾ! ಅದೊಂದು ಪರಿ ಇದೊಂದು ಪರಿಯೇ ಗುರು ಲಿಂಗ ಜಂಗಮ? ಅದೊಂದು ಪರಿ ಇದೊಂದು ಪರಿಯೇ ಪಾದೋದಕ ಪ್ರಸಾದ? ಅದೊಂದು ಪರಿ ಇಂದೊಂದು ಪರಿಯೆ ಶರಣಲಿಂಗಸಂಬಂಧ? ಅದೊಂದು ಪರಿ ಇದೊಂದು ಪರಿಯೆ ಅರಿವು ಆಚರಣೆ? ಅದೊಂದು ಪರಿ ಇದೊಂದು ಪರಿಯೇ ಸ್ಥಳ ಕುಳಂಗಳು? ಅದೊಂದು ಪರಿ ಇದೊಂದು ಪರಿಯೆ ಸೌರಾಷ್ಟ್ರ ಸೋಮೇಶ್ವರ ಲಿಂಗವು?–**ಆದಯ್ಯನವರು**

❖❖

ನಿಮ್ಮ ನಿಜಪದ

ರಾಗ : ಜಂಝೂಟಿ

ಲೋಕದವರ ಭಕ್ತಿಯುಕ್ತಿ
ಸಾಕು ಸೊಗಸದೆನಗೆ ನಿನಗೆ
ಏಕವಾಹ ಪರಿಯ ಮನವ ಬಯಸುತಿರ್ಪೆನು ॥ಪ॥

ಎನ್ನ ಒಡೆಯ ಎನ್ನ ದೇವ
ಎನ್ನ ಕರ್ತ ಬಂದನೆಂದು
ಉನ್ನತಾಸನವನು ಇಕ್ಕಿ ಕೈಯ ಮುಗಿವರು
ಹೊನ್ನು ಹೆಣ್ಣು ಹಿಡಿದ ಮೇಲೆ
ಚುನ್ನವಾಡುತಿಹರು ಅವರ
ಭಿನ್ನ ಭಕ್ತಿ ಸಾಕು ಸೊಗಸುದೋರದೆನ್ನೊಳು ೧

ಲೀಲೆಯಿಂದ ಮನೆಗೆ ಕರೆದು
ಹಾಲು ತುಪ್ಪಗಳನು ನೀಡಿ
ವೀಳೆಯವನು ಕೊಡುವ ಭಕ್ತಿಯಿಂದಲಿರ್ಪರು
ಮೇಲೆ ವನಿತೆ ಧನವು ಭೂಮಿ
ಮಾಲೆಯೊಳಗೆ ಸಿಲ್ಕಿ ನಲಿದು
ಲೋಲವಾಡುವವರ ಭಕ್ತಿ ಸಾಕು ಸೊಗಸದು ೨

ಇಚ್ಚೆಯಿಲ್ಲದಿರಲು ಅವರು
ಮೆಚ್ಚಿ ಪೂಜೆ ಮಾಡುತಿಹರು
ನಿಚ್ಚ ನಿಚ್ಚ ಕಂಡು ತಮ್ಮ ದುರ್ಗುಣಂಗಳ
ಬಿಚ್ಚೆ ಎತ್ತಿ ನುಡಿಯೆ ಮೋರೆ
ಕಿಚ್ಚಿನಂತೆ ಮಾಡುತಿಹರು
ಹುಚ್ಚರುಗಳ ಭಕ್ತಿ ಸಾಕು ಎನಗೆ ಸೊಗಸದು ೩

ಒಳ್ಳಿತಾಗಿ ಓದಿ ಹಾಡಿ
ಲಲ್ಲೆ ನುಡಿಯ ನುಡಿಯಲವರ
ಎಲ್ಲಿ ಗಮನಿಸಬೇಡಿ ನೀವು ನಮ್ಮ ಮನೆಯೊಳು
ಇಲ್ಲ ಕ್ಷಮಿಸಿ ಎಂದು ಬಳಿಕ

ಎಳ್ಳಿನನಿತು ವಿಗಡ ತೋರ್ವ
ಹೊಳ್ಳುಗಳು ಅವರ ಭಕ್ತಿ ಸಾಕು ಸೊಗಸದು ೪

ಮರ್ತ್ಯರುಗಳು ಮಾಳ್ಪಭಕ್ತಿ
ವ್ಯಕ್ತವಾಗಿ ತೋರದೆನಗೆ
ನಿತ್ಯವಾಗಿ ತೋರುತಿಹುದು ನಿಮ್ಮ ನಿಜಪದ
ನಿತ್ಯ ನಿಮ್ಮ ಚರಣಯುಗವ
ಚಿತ್ತ ಮೆಚ್ಚಿ ಅಗಲದಂತೆ
ಕರ್ತೃ ಶಿವಷಡಕ್ಷರಾಂಕ ಮಾಡು ಎನ್ನದು ೫

❖❖

ಭೋಗ ಹರಿದು ಹೋಗಲಿ

ರಾಗ : ಸುರುಟಿ **ತಾಳ : ರೂಪಕ**

ಧರೆಯ ಸುಖದ ಭೋಗವೆನಗೆ
ಹರಿದು ಹೋಗಲಯ್ಯ ನಿಮ್ಮ
ಚರಣಕಮಲದಲ್ಲಿ ಮನವು ಮಗ್ನವಾಗಲಿ ॥ಪ॥

ಒಡೆದ ಗಡಿಗೆ ಹರಿದ ಜೋಳಿ-
ಗೆಡದ ಕೈಯ್ಯ ಮುರಿದ ಕೋಲು
ಹಿಡಿದು ಊರನೆಲ್ಲ ತಿರಿದು ತಂದು ನೋಡಲು
ಒಡಲಿಗಾಗದಂತೆ ಮಾಡು
ಮೊಡವಿಯೊಳಗೆ ಸುಖವ ಮೆಚ್ಚಿ
ಒಡೆಯ ನಿಮ್ಮ ಮರೆದು ಭವಕೆ ಬೀಳಲಾರೆನು ೧

ಊರನೆಲ್ಲ ತಿರಿದು ಒಡಲ
ಪೂರನುಂಬೆನನಲು ಮಧ್ಯ
ದಾರಿಯಲ್ಲಿ ತಿರಿದುದೆಲ್ಲ ಚೆಲ್ಲಿ ಹೋಗಲಿ
ಮೀರಿಯಾಚೆ ಪುರವ ತಿರಿಯೆ
ಯಾರು ಇಲ್ಲ ಎನಲಿ ಎನಗೆ
ಮಾರಹರನ ನೆನೆವುಂದಿಂತುಟಾಗದು ೨

ಹಳೆಯ ಅರಿವೆ ರಗಟೆಗಳನು
ಬಲಿದು ಗಂಟನಿಕ್ಕಿ ಹೊದೆಯೆ
ಚಳಿಯದಾಗಲೊಂದು ಕಡೆಗೆ ಸಾಲದಂದದಿ
ಕಳೆಯುತಿರಲು ಅದರೊಳರ್ಧ
ಇಲಿಗಳೆಳೆದು ಒಯ್ಯುತಿರಲಿ
ಒಲಿದು ನಿಮ್ಮ ಚರಣ ನೆನೆವುದಿಂತುಟಾಗದು ೩

ಒಡೆಯರುಗಳ ಮಠಕೆ ಬರಲು
ಜಡಿದು ಜರಿದು ನೂಕಲೆನ್ನ
ಒಡನೆಯೋರ್ವರುಗಳ ಕೀಳಿನಲ್ಲಿ ಸೇರಲು
ಕಡೆಗೆ ಅಟ್ಟಲವರು ಹಾಳು
ಗುಡಿಗೆ ಬರಲು ಸೋರುತಿರಲು
ಒಡೆಯ ನಿಮ್ಮ ನೆನೆವುದಿಂತುಟಲ್ಲದಾಗದು ೪

ಅಂಗದೊಳು ನಿಲ್ಲಲಿಕ್ಕೆ
ಹಿಂಗಿದವನು ಕಳ್ಳನೆಂದು
ಹಿಂಗಿ ಹೋಗೊಳಕಡೆಗೆಂದು ನುಡಿಯಲೆಲ್ಲರು
ಹೀಂಗೆಯಾಗದನಕ ಜನರ
ಸಂಗಬಿಡದು ಷಡಕ್ಷರಿಯ
ಲಿಂಗದಂಘ್ರಿ ನೆನೆವುದಿಂತುಟಲ್ಲದಾಗದು ೫

ಆಶೆಯೆಂಬ ಪಾಶದಲ್ಲಿ ಭವಬಂಧನಾಗಿರ್ದೆನಯ್ಯ! ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯ! ಕರುಣಾಕರ ಅಭಯಾಕಾರ ವರದಾನಿ ಕರುಣಿಸಯ್ಯ! ಸಂಸಾರ ಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು ಭಕ್ತ ಜನಮನೋವಲ್ಲಭ ಕೂಡಲಸಂಗಮದೇವ.– ಬಸವಣ್ಣನವರು

❖❖

ಭಕ್ತ ಹೃದಯವಾಸ

ರಾಗ : ಪೂರ್ವಿ ತಾಳ : ರೂಪಕ

ಪುಣ್ಯತೀರ್ಥ ಪುಣ್ಯಕ್ಷೇತ್ರ
ಪುಣ್ಯಶೈಲದಲ್ಲಿ ಮೂರು–
ಕಣ್ಣನಿಲ್ಲ ಭಕ್ತರುಗಳ ಹೃದಯವಾಸನು ॥ಪ॥

ತೀರ್ಥಪಕ್ಷಿ ಕೃಷ್ಣವೇಣಿ
ತೀರ್ಥಗಮ್ಯ ತುಂಗಭದ್ರೆ
ತೀರ್ಥಕೋಟಿ, ಭಾಗೀರಥಿಯ ಭೀಮರಥಿಗಳು
ತೀರ್ಥಗೋಪ ಯಮುನೆ ಮೊದಲು
ತೀರ್ಥಗಳನು ತಿರುಗುತಿರಲು
ತೀರ್ಥಗಳಲ್ಲಿಲ್ಲ ಭಕ್ತರಲ್ಲಿಯಿಪ್ಪನು ೧

ಕಾಶಿ ನೀಲಕಂಠ ಸುರಾ–
ಮೇಶ ಕಾಂಚಿ ಗೋವುಕರ್ಣ
ಈಶ ನದಿಗಳಿಪ್ಪ ಗುಹೆಯು ಹಿಮದ ಕೇದಾರ
ದೇಶಗಳನು ತಿರುಗಿ ಅವನ
ವಾಸವನ್ನು ಅರಿಯರವರು
ಈಶನಿಹನು ಭಕ್ತರುಗಳ ಹೃದಯವಾಸದಿ ೨

ಅನಿಲನೀಲಕಾರ್ತಿಕಾದ್ರಿ
ಘನಸುರತ್ನ ಶೈಲವಾದಿ
ಇನಿತನೆಲ್ಲ ತಿರುಗುತಿಹರು ಶಿವನನರಸುತೆ
ಇನಿತು ಸಾಧಕರುಗಳೆಲ್ಲ
ಘನಷಡಕ್ಷರಾಂಕನಿರ್ಪ
ಅನುವನರಿಯರವರು ಭಕ್ತರಲ್ಲಿಯೆಂಬುದ ೩

ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ. ತ್ರೇತಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನ. ದ್ವಾಪರಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ. ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ. ಇಂತೀ ನಾಲ್ಕು ಸ್ಥಾನವ ಮೆಟ್ಟದೆ ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವ.–ಬಸವಣ್ಣನವರು

❖❖

ಏನನೋದಿ ಏನು ಫಲ

ರಾಗ : ಕೇದಾರಗೌಳ ತಾಳ : ರೂಪಕ

ಎನಿಸನೋದಿ ಫಲವದೇನು
ಎನಿಸ ಕೇಳಿ ಫಲವದೇನು
ಮನಸು ತನ್ನ ದುರ್ಗುಣಗಳ ಬಿಡದು ಶಿವ ಶಿವ ॥ಪ॥

ಇಂದುಧರನ ಚರಣದಲ್ಲಿ
ಹೊಂದು ಸುಖದೊಳಿರದು ಮನವು
ಕುಂದದನ್ಯ ವಿಷಯದತ್ತ ಹರಿವುದೆಂತೆನೆ
ಒಂದು ಶುನಿಯ ಹಿಡಿದು ತಂದು
ಅಂದಣವನು ಏರಿಸಿರಲು
ಮುಂದೆ ಅಡಗ ಕಂಡು ನೆನೆದ ಮಾಳ್ಕೆಯಾಯಿತು ೧

ಸೊಗಸಿ ಶಿವನ ಮಂತ್ರವನ್ನು
ನೆಗಳುವದಕೆಯೆನ್ನ ಜಿಹ್ವೆ
ಸೊಗಡಿಸುವದು ಕೀಳು ನುಡಿಯೆ ಒಲಿವುದೆಂತೆನೆ
ಹಗಲು ಇರುಳು ತನ್ನ ಬಾಯಿ
ಸಿಗುವುದರಿಯದಂತೆ ನಾಯಿ
ಜಗುಳುವುದಕೆಯಲಸದಂತೆ ಜಿಹ್ವೆಯಲಸದು ೨

ಮಂಗಳಾತ್ಮ ಷಡಕ್ಷರಿಯ
ಲಿಂಗದಡಿಯ ಪೂಜಿಸುವಡೆ
ಕೊಂಗಿ ಮನವು ಸ್ವಸ್ಥಿರವನು ಐದದೆಂತೆನೆ
ಹಿಂಗದೊಲಿದು ಘನಸುಗಂಧ
ಸಂಗಡಿಸುತ ತೊಡೆಯೆ ಹಂದಿ
ಹಾಂಗೆಯಿರದೆ ಗಂಜಳಕ್ಕೆ ಓಡುವಂದದಿ ೩

ಓದಿದರೇನು ಕೇಳಿದರೇನು ಶಿವಪಥವನರಿಯದನ್ನಕ್ಕ? ಓದಿತ್ತು ಕಾಣಿರೋ ಶುಕನು ಶಿವಜ್ಞಾನವನರಿಯದನ್ನಕ್ಕ, ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು. ಕೂಡಲಸಂಗಮದೇವ.

–ಬಸವಣ್ಣನವರು

❖❖

ಎನಗೆ ದೊಡ್ಡಿತೆ

ರಾಗ : ಮಂಗಳಕಾರಿ

ಧರೆಯೊಳಾನು ತನುವ ಧರಿಸಿ
ಗಿರಿಯು ಶರಧಿ ಸರಸಿಜಾಂಡ-
ವರಿಯೆ ದೊಡ್ಡಿತಾದವೈಸೆ ಎನಗೆ ದೊಡ್ಡಿತೆ ॥ಪ॥

ಮೊಟ್ಟೆಯನ್ನು ಹೊತ್ತ ನರನು
ತಿಟ್ಟನಿಳಿಯಲಾರದಂತೆ
ಸೃಷ್ಟಿಯೊಳಗೆಯುದಿಸಿ ನಾನು ಕಷ್ಟತನುವನು
ತೊಟ್ಟದೆಸೆಗಳಿಂದ ಧರೆಯು
ಘಟ್ಟ ಬೆಟ್ಟಗಿರಿಗಳೆಲ್ಲ
ಶ್ರೇಷ್ಠವಾದವೈಸೆ ಮಳಲುಗುಪ್ಪೆಯೆನಗಿವು ೧

ಕೊಳದೊಳಗೆ ಸಿಲುಕಿದವನು
ಕಾಲ ನೆಗಹಿ ನೆಗೆವುದಕ್ಕೆ
ಮೇಲಕ್ಕೆದಂತೆ ತನುವನಾಂತಕರಾರಣ
ಏಳು ವಾರಿಧಿಗಳು ತನಗೆ
ಕಾಲಿನಲ್ಲಿ ಮಳಲೊಳೆಳೆದು
ಕಾಲುವೆಗಳ ಹಾಗೆ ಎನಗೆ ದೊಡ್ಡತಪ್ಪುದೆ ೨

ಕೀರ ಪಂಜರದೊಲು ಸಿಲುಕಿ
ಹಾರಲಾರದಂತೆ ಎನಗೆ
ವಾರಿಜೋದ್ಭವಾಂಡವೆಲ್ಲ ದೊಡ್ಡಿತಪ್ಪುದೆ
ಮಾರವೈರಿ ಷಡಕ್ಷರಿಯು
ಮೀರಿ ಎನಗೆ ಮುನಿದು ದೊಡ್ಡ
ಘೋರತನುವ ತೊಡಿಸಿ ತಾನು ಕೊಟ್ಟ ಕಾರಣ ೩

ಅಕಟಕಟ, ಶಿವ ನಿನಗಿಂತು ಕರುಣವಿಲ್ಲ, ಅಕಟಕಟ, ಶಿವ ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸದೆ ಇಹಲೋಕ ದುಃಖಿಯ ಪರಲೋಕ ದೂರನ? ಏಕೆ ಹುಟ್ಟಿಸಿದೆ ಕೂಡಲಸಂಗಮದೇವ ಕೇಳಯ್ಯ, ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೆ? **–ಬಸವಣ್ಣನವರು**

❖❖

ನಿಮ್ಮನರಿಯದೆ

ರಾಗ : ವಸಂತ

ಹಲವು ವಿದ್ಯೆ ಹಲವು ಶಾಸ್ತ್ರ
ಹಲವು ಮಂತ್ರಗಳನೆ ಕಲಿತು
ಹಲವು ಭವಕೆ ಬಂದರೈಸೆ ನಿಮ್ಮನರಿಯದೆ ॥ಪ॥

ಸುರಪಧನುಸು ಇಂದ್ರಜಾಲ
ತುರಗಯಾಗ ಯಕ್ಷವೈಸೆ
ಕೊರಳು ಬೆರಳು ಅಗ್ನಿ ಉದಕ ಸ್ತಂಭವೆಲ್ಲವ
ಅರಿವುತಿರ್ಪೆ ಮರುಳೆ ನೀನು
ಗಿರಿಯನಗುಳಿ ಇಲಿಯ ಹಿಡಿದ
ಪರಿಗಳೈಸೆ ಏನು ಸುಖವು ಹೇಳು ಪಾತಕ ೧

ಛಂದ ಗಣಿತ ಧಾತುಕೋಶ
ಮುಂದೆ ಪಂಚಕಾವ್ಯ ಮಾಘ-
ವೊಂದು ಉಳಿಯದಂತೆ ಕಲಿಯುತಿರ್ಪೆಯದರಿನಿಂ
ಒಂದು ಕಾಳು ನೆಲ್ಲಿಗಾಗಿ
ಮಂದರಾದ್ರಿಯನಿತ ಜೋಳ
ತಂದು ತೂರುತಿರ್ಪ ನರನ ಮಾಳ್ಕೆ ಪಾತಕ ೨

ಧರೆಯೊಳಖಿಳ ಮಂತ್ರಗಳನು
ಬರೆದು ಕಲಿಯುತಿರ್ಪ ನೀನು
ಹಿರಿಯ ಗುಡಿಯ ಕೆಡಹಿ ಮೊಳೆಯ ಪಡೆದ ಮಾಳ್ಕೆಯಿಂ
ಅರಿದು ಷಡಕ್ಷರಿಯ ವರನ
ಪರಮ ಮಂತ್ರವನ್ನು ಜಪಿಸೆ
ಹರುಷ ನಿಧಿಯ ಪಡೆದ ಮಾಳ್ಕೆ ಕೇಳು ಮಾನವ ೩

ಆಡಿದರೇನು, ಹಾಡಿದರೇನು, ಓದಿದರೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಣಿ? ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ. – **ಬಸವಣ್ಣನವರು**

❖❖

ಧರೆಯ ಭೋಗವಸ್ಥಿರ

ಭೋಗ ಷಟ್ಪದಿ

ಧರೆಯ ಭೋಗದಸ್ಥಿರವನು
ಅರಿವ ಹಾಗೆ ಪೇಳ್ವೆ ಕೇಳು
ಅರಿದು ತಿಳಿದು ಮರೆದು ಶಿವನ ಭಜಿಸು ಸಂತತ ॥ಪ॥

ಪುರದೊಳೋರ್ವ ವಿದ್ಯೆಧರನು
ಹಿರಿದು ದಿವಸ ದೊರೆಯು ಕಾದು
ಹೊರಡದಿರಲು ಒಂದು ತಂತ್ರ ನೆನೆದನೆಂತೆನೆ
ಸುರರ ಚರನು ಹೊರಗೆ ಬಂದು
ಪುರದ ಬಾಗಿಲೊಳಗೆ ನಿಂದು
ದೊರೆಯ ಬರಲು ಹೇಳಿರೆಂದು ವನಕೆ ಬಂದನು ೧

ಓಡಿ ಹೋಗಿ ದೊರೆಗೆ ಹೇಳಿ
ನೋಡಿ ಬನ್ನಿರೆನುತ ಕಳುಹೆ
ನೋಡಿ ಬಂದು ಜೀಯ ದಿಟವು ಎನುತ ಹೇಳಲು
ಗಾಡನೆದ್ದು ಗಜದ ಶಿರದಿ
ರೂಢನಾಗಿ ಸೇನೆ ಸಹಿತ
ಓಡಿ ಬರಲು ವನದ ಮಧ್ಯದೊಳಗೆ ಸಂದಣಿ ೨

ಅನಿತರಿಂದ ಮುಂದರೆ ಬರಲು
ಕನಕಮಯದ ಬಾಗಿಲಲ್ಲಿ
ಮಿನುಗುತಿರ್ಪ ಮೇಲುಕೋಟೆ ರತ್ನ ಕಲಶವು.
ಅನಿತರಿಂದ ಮುಂದೆ ಬರಲು
ಕನಕಪೀಠದಲ್ಲಿ ಇಂದ್ರ–
ನನುಪಮದ ಸುವೋಲಗವನು ನೃಪತಿ ಕಂಡನು ೩

ಆವದಾವ ಕಡೆಗೆ ನೋಡೆ
ತೀವಿದಾನೆ ಕುದುರೆ ಮಂದಿ
ಭಾವಿಸಲ್ಕೆ ಅರಿದು ಕನಕ ರಥಗಳಿರ್ಪವು

ದೇವ ಕನ್ನೆಯರುಗಳಖಿಳ
ತೀವಿಯಿರಲು ಓಲಗದೊಳು
ಭೂಮಿಯಾಣ್ಮ ಕಂಡು ತಲೆಯ ತೂಗುತಿರ್ದನು ೪

ತಳಿತ ಸತ್ತಿಗೆಗಳು ಕೋಟಿ
ಬಳಸಿಯಲ್ಲಿಯೊಪ್ಪುತಿಹವು
ಮಿಳಿತ ಚಾಮರಗಳು ಕೋಟಿ ಢಾಳಿಸುತ್ತಿರೆ
ಬಳಸಿ ಸುರರು ಯಕ್ಷರುಗಳು
ಕುಳಿತು ಇರಲು ಓಲಗದೊಳು
ಒಳಗೆಯೊಳಗೆ ನೃಪತಿ ಹೆದರಿ ಕೈಯ ಮುಗಿದನು ೫

ಕೈಯ ಮುಗಿದ ಕುಳ್ಳಿರಿಸುತ
ಜೀಯ ಇದುವೆ ವಿದ್ಯೆಯೆನಲು
ಒಯ್ಯನೆಲ್ಲ ಬಯಲು ಮಾಡಿ ಹೋಗಲಾ ನೃಪಂ
ಮೈಯ ಮರೆದು ಬೆರಗುವಟ್ಟು
ಜೀಯ ಇದುವೆ ಚೋದ್ಯವೆನಲು
ಕೈಯ್ಯನೆತ್ತಿ ವಿದ್ಯೆಧರನು ಪೊಗಳೆ ಕಂಡನು ೬

ಸಾಂಗವಾಗಿ ಧರೆಯ ಭೋಗ
ಕಂಗಳಿಂಗೆ ತೋರುತಿಹುದು
ಹಿಂಗಿ ಹೋಗುದನಿತು ಬೇಗ ಇದರ ತೆರನೊಲು
ಮಂಗಳಾತ್ಮ ಷಡಕ್ಷರಿಯ
ಲಿಂಗದಡಿಯ ಭಜಿಸು ನಿನಗೆ
ಅಂಗವಹುದು ನಿತ್ಯ ಪದವು ನಂಬು ಮಾನವ ೭

ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ, ಇದನಚ್ಚಿ ಕೆಡಬೇಡ ಸಿರಿ ಎಂಬುದು; ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

–ಬಸವಣ್ಣನವರು

❖❖

ಎಂದಿಗಪ್ಪುದೋ

ರಾಗ : ಧನ್ಯಾಸಿ **ತಾಳ : ರೂಪಕ**

ನಿನ್ನ ರೂಪಿನವರು ಬಂದು
ಎನ್ನ ಬಿಡದೆ ನೋಯಿಸಲವರ
ನಿನ್ನ ಹಾಗೆ ಕಾಂಬ ಭಕ್ತಿ ಎಂದಿಗಪ್ಪುದೋ ॥ಪ॥

ಬಂದಬಳಿಯ ಹೋದಬಳಿಯ
ನಿಂದಬಳಿಯ ನೆರೆದಬಳಿಯ
ಚೆಂದಗೆಡಿಸಿ ನುಡಿಯುತಿರಲು ಚರನದೊರ್ವನು
ಇಂದುಧರನು ಮನವ ನೋಡ
ಲೆಂದು ಬೈದನೆಂದು ನಂಬಿ
ಕುಂದದಿರ್ಪ ಭಕ್ತಿಯೆನಗೆ ಎಂದಿಗಪ್ಪುದೋ ೧

ಇಂದುಧರನ ರೂಪಿನಿಂದ
ಬಂದು ಚರಣರಕ್ಷೆವೆರಸಿ
ನೊಂದಿತೆಂದು ಅಳುಕದೆನ್ನ ಕೆಡಹಿ ತುಳಿದೊಡೆ
ಕುಂದದವರು ಶಿವಸ್ವರೂಪ
ರೆಂದು ಭಾವಿಸುತ್ತ ಮನವು
ಚಂದವಳಿಯದಿರ್ಪ ಭಕ್ತಿಯೆಂದಿಗಪ್ಪುದೋ ೨

ಮಾರಹರನ ರೂಪಿನಿಂದ
ಚೋರರುಗಳು ಬಂದು ಕಟ್ಟಿ
ದಾರಿಯಲ್ಲಿ ಸುಲಿದುಕೊಳಲು ಇರ್ದುದೆಲ್ಲವ
ಮಾರವೈರಿ ತಾನೆ ಬಂದು
ಸೂರೆಗೊಂಡು ಹೋದನೆಂಬ
ಸಾರಮನದ ಭಕ್ತಿಯೆನಗೆ ಎಂದಿಗಪ್ಪುದೋ ೩

ಹರನ ರೂಪನಿಂದ ಹಗೆಯು
ತರುಬಿ ಬಂದು ಎನ್ನ ಹಿಡಿದು
ಇರಿದು ಬಿಡದೆ ಕೆಡಹಿ ಕಡಿದು ಕೊಚ್ಚುತಿರ್ದೊಡೆ

ಅರಿದು ಅವರ ಕಂಡ ಬಳಿಕ
ಗುರು ಸ್ವರೂಪರೆಂದು ನಂಬಿ
ಅರಿಗಳೆನ್ನದಿರ್ಪ ಭಕ್ತಿಯೆಂದಿಗಪ್ಪುದೋ ೪

ಚರನು ಓರ್ವ ಬಂದು ಎನ್ನ
ಶಿರದಲಿಡಲು ಪಾದವನ್ನು
ವರಷಡಕ್ಷರಾಂಕ ತಾನೆ ಬಂದು ಕರುಣಾದಿ
ಚರಣಯುಗವನಿಟ್ಟನೆನ್ನ
ಶಿರದ ಮೇಲೆ ಎನುತ ನಂಬಿ
ಹರುಷಗೊಳುವ ಭಕ್ತಿಯೆನಗದೆಂದಿಗಪ್ಪುದೋ ೫

ಸಂಗ ಸಹಿತ ಶರಣರು ಬಂದರೆ ನಂಬುವದೆನ್ನ ಮನವು; ನಚ್ಚುವದೆನ್ನ ಮನವು, ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು? ಅಂಗ ಲಿಂಗಸಹಿತವಾಗಿ ಬಂದರೆ ಸಂಗ ನೀನೆಂದು ಮತ್ತೆ ಮನದಲ್ಲಿ ಸಂದೇಹ ಹೊಳೆದರೆ ಬೆಂದೆನಲ್ಲಾ ನಾನು ಕೂಡಲಸಂಗಮದೇವ.

--ಬಸವಣ್ಣನವರು

❖❖

ಸಿರಿಯು ಕನಸಿನಂತೆ

ಭೋಗ ಷಟ್ಪದಿ

ಧರೆಯ ಭೋಗವನ್ನು ಮೆಚ್ಚಿ
ಹರನ ಮರೆದು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ ॥ಪ॥

ತಿರುಕನೋರ್ವನೂರ ಮುಂದೆ
ಮುರುಕ ಧರ್ಮಶಾಲೆಯಲ್ಲಿ –
ಯೊರಗಿರುತ್ತಲೊಂದು ಕನಸ ಕಂಡನೆಂತೆನೆ
ಪುರದ ರಾಜ ಸತ್ತನವಗೆ
ವರ ಕುಮಾರರಿಲ್ಲದಿರಲು
ಕರಿಯ ಕೈಗೆ ಕುಸುಮ ಮಾಲೆಯಿತ್ತು ಪುರದೊಳು ೧

ಬಿಡಲು ಯಾರ ಕೊರಳಿನಲ್ಲಿ
ತೊಡರಿಸುವದೋ ಅವರ ಪಟ್ಟ-
ಕೊಡೆಯರನ್ನು ಮಾಳ್ಪೆವೆಂದು ಬಿಡಲು ಅಲ್ಲಿಯೆ
ಒಡನೆ ತನ್ನ ಕೊರಳಿನಲ್ಲಿ
ತೊಡರಿಸಲ್ಕೆ ಕಂಡು ತಿರುಕ
ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು ೨

ಪಟ್ಟಕಟ್ಟಿಯವಗೆ ನೃಪರು
ಕೊಟ್ಟರಖಿಳ ಕನ್ನೆಯರನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೆ
ಹೆಟ್ಟುಗೆಯರ ಕೂಡಿ ರತಿಯು
ಹುಟ್ಟಿ ಸುಖದೊಳಿರುತಲವಗೆ
ಹುಟ್ಟಿ ಹೆಣ್ಣು ಗಂಡು ಮಕ್ಕಳಾದವಾಗಲೆ ೩

ಓಲಗದಲ್ಲಿ ಇರುತ ತೊಡೆಯ
ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ ಚಾತುರಂಗ ಬಲವ ನೋಡುತ
ಲೋಲನಾಗಿಯಿರುತ ನೆನೆದ
ಕೇಳು ಮಂತ್ರಿ ಮಕ್ಕಳಿಂಗೆ
ಬಾಲೆಯರನು ನೋಡಿ ಮದುವೆ ವಾಡಬೇಕೆಲ್ಲೈ ೪

ನೋಡಿ ಬನ್ನಿರೆನಲು ಜೀಯ
ನೋಡಿ ಬಂದೆವೆನಲು ಬೇಗ
ಮಾಡು ಲಗ್ನ ಮಂಟಪದೊಳು ಸಕಲ ಕಾರ್ಯವ
ಗಾಢವಾದ ಸಂಭ್ರಮಗಳ
ಮಾಡುತಿರ್ದ ಮದುವೆಗಳನು
ಕೂಡಿದಖಿಳ ರಾಯರುಗಳು ಮೆಚ್ಚುವಂದದಿ ೫

ಧನದ ಮದವು ರಾಜ್ಯ ಮದವು
ವನಿತೆ ಮದವು ಸುತರ ಮದವು
ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು
ಅನಿತರೊಳಗೆ ನೃಪರ ದಂಡು
ಮನೆಯ ಮುತ್ತಿದಂತೆಯಾಗೆ
ಕನಸು ಕಾಣುತೆದ್ದು ಹೆದರಿ ಕಣ್ಣ ತೆರೆದನು ೬

ಮೆರೆಯುತಿರ್ದ ಭಾಗ್ಯವೆಲ್ಲ
ಹರಿದು ಹೋಯಿತೆಂದು ತಿರುಕ
ಮರಳಿ ನಾಚುತಿರ್ದ ಮರುಳನಂತೆಯಾಗದೆ
ಸಿರಿಯು ಕನಸಿನಂತೆಯೆಂದು
ಅರಿದು ಷಡಕ್ಷರಿಯ ಲಿಂಗ
ಹರುಷದಿಂದ ಭಜಿಸು ನಿತ್ಯ ಸುಖವು ತಪ್ಪದು ೭

❖❖

ಕಾಯಮೋಹವನ್ನು ಮರೆ

ರಾಗ : ಜಂಝೂಟಿ

ಕಾಯ ಮಾಯ ಜಾಯವೆಂದು
ಕಾಯ ಮೋಹವನ್ನು ಮರೆದು
ಮಾಯವೈರಿ ಶಿವನ ನೆನೆವದೆಂದಿಗಪ್ಪುದೋ ॥ಪ॥

ಜಡವು ನಿದ್ರೆ ಆಕಳಿಕೆಯು
ಬಿಡದೆ ಹಸಿವು ತೃಷೆಯು ವ್ಯಸನ
ಒಡನೆ ಇದಕೆ ಸುಖವು ದುಃಖ ತಾಗುತಿರ್ಪುದು
ಒಡಲ ಮೆಚ್ಚಿ ಶಿವನ ಸುಖವ
ಕೆಡಿಸಿಕೊಂಬ ತನುವನಿದನು
ಒಡಕು ಓಡಿನಂತೆ ಕಾಂಬುದೆಂದಿಗಪ್ಪುದೊ ೧

ಹಗಲು ಇರುಳು ಓಗರವನು
ಮಿಗಿಲು ತುಂಬಿ ಸುರಿವುತಿಹುದು
ತೊಗಲಚೀಲ ಶುಕ್ಲದೊರತೆ ಕರುಳಜಾಳಿಗೆ
ಅಘದ ಬೀಡು ಮುಕುತಿಗೇಡು
ಜಗದಿ ಜನಿಸಿ ಕೆಡುವ ತನುವ
ರಗಟೆಗಿಂತ ಕಡೆಯ ಕಾಂಬುದೆಂದಿಗಪ್ಪುದೊ ೨

ಬಿರಿತ ಕಿವಿಗಳಲ್ಲಿ ಗುಗ್ಗೆ
ಪೊರತೆ ಕಣ್ಣಿನಲ್ಲಿ ಜೋರ

ಬರಿಯ ಶ್ಲೇಷ್ಮವುಗಳು ಬಾಯ ಗೊಣ್ಣೆ ಮೂಗಿನ
ಸುರಿವ ತನುವ ಮೆಚ್ಚಿ ಶಿವನ
ಮರೆದು ಕೆಡುವ ಶರೀರವಿದನು
ಕೆರವಿಗಿಂತ ಕಡೆಯ ಕಾಂಬುದೆಂದಿಗಪ್ಪುದೊ ೩

ಚಳಿಯ ತಾಳಲಾರದೊಮ್ಮೆ
ಝಳವ ತಾಳಲಾರದೊಮ್ಮೆ
ಬಲಿದು ರಕ್ಷಣೆಯನು ಮಾಡಲೇನ ಕೊಡುವದು
ಗಳಸಿ ಪಾಪವನ್ನು ಯಮನ
ಬಳಿಗೆ ಒಯ್ವ ತನುವ ನಾಯ
ಹಳಗಿಗಿಂದ ಕಡೆಯ ಕಾಂಬುದೆಂದಿಗಪ್ಪುದೊ ೪

ಅಂಗವಿರಲಿ ಇರ್ದೊಡೇನು
ಅಂಗದಿಚ್ಚೆಗಾದರೊಲಿದು
ಮಂಗಳಾತ್ಮ ಷಡಕ್ಷರಿಯ ಲಿಂಗ ನೆನೆವನು
ಹಿಂಗದಂತೆ ಹೃದಯದಲ್ಲಿ
ಸಂಗಿಸುತ್ತಲಿರಲು ಭವದ
ಭಂಗವಳಿದು ನಿತ್ಯಪದಕೆ ಕರ್ತನಪ್ಪನು ೫

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯವ ನಿಶ್ಚಯಿಸದೆ. –ಬಸವಣ್ಣನವರು

❖❖

ಕೋಪವೆನಗೆ ಲೋಪವಾಗದು

ರಾಗ : ಮಂಗಳಕಾರಿ

ಚಂದ್ರಧರನಿಗೊಲಿಯದಿರ್ಪ
ಇಂದ್ರಿಯಂಗಳ ಜಯಿಸದನಕ
ಸಾಂದ್ರವಾದ ಕೋಪವೆನಗೆ ಲೋಪವಾಗದು ||ಪ||

ದುಷ್ಟ ನುಡಿಯ ಬಿಡದೆ ಒಲಿದು
ಮುಟ್ಟಿ ಕೇಳ್ವ ಹಾಗೆ ಶಿವನ
ಶ್ರೇಷ್ಠವಾದ ಶಾಸ್ತ್ರ ಕೇಳದಿರ್ಪ ಕಿವಿಯೊಳು
ಇಟ್ಟು ಮೊಳೆಯ ಕೊಡತಿಯಿಂದ
ತಟ್ಟಿ ಆದೆ ಈಚೆಗಾಗು
ವಷ್ಟು ಬಡಿಯದನಕ ಎನ್ನ ಸಿಟ್ಟು ಹೋಗದು ೧

ಮೆಚ್ಚಿ ಶಿವನ ಸೋಂಕಿ ಸೊಕ್ಕಿ
ಹೆಚ್ಚಿ ಪುಳಕವೇರದೊಲಿದು
ನಿಚ್ಚಲನ್ಯ ಸೋಂಕುಗಳಿಗೆ ಎಳೆವ ತ್ವಕ್ಕನು
ಕೊಚ್ಚಿ ಕೊಚ್ಚಿ ಕಡಿದು ಕಡಿದು
ನುಚ್ಚು ನುರಿಯ ಮಾಡದನಕ
ಕೆಚ್ಚುಗೊಂಡ ಕೋಪದುರಿಯ ಕಿಚ್ಚು ಪೋಗದು ೨

ಬಿಡದೆ ಲಿಂಗವನ್ನು ನೋಡ
ಲೊಡನೆಯಶ್ರುಜಲಗಳುಕ್ಕಿ
ಕಡೆಗೆ ಪರಿಯದನ್ಯರೂಪನೋಳ್ಪ ನಯನಕೆ
ಒಡೆಯ! ಹೆಟ್ಟಿ ಮಳಲತಂದು
ಕೆಡಹಿ ಹೊಯ್ದು ದಸಿಗಳಲ್ಲಿ
ಜಡಿಯದನಕ ಎನ್ನ ಕೋಪವಡಗಿ ಪೋಗದು! ೩

ಶೂಲಧರನ ಹಾಡಿ ಹಾಡಿ
ಲೀಲೆಮಿಕ್ಕು ಹೊಗಳದನ್ಯ
ಕಾಳುನುಡಿಯ ಹಗಲು ಇರುಳು ನುಡಿವ ಜಿಹ್ವೆಯ
ಸೀಳಿ ಸೀಳಿ ಹೋಳು ಮಾಡಿ
ಮೇಲೆ ಸುಣ್ಣ ನೀರನೆರೆದು
ಮಾಲೆಗಟ್ಟದನಕ ಮನದ ಜ್ವಾಲೆ ಹೋಗದು ೪

ಲಿಂಗಕೀಯದಿರುವ ಅರಳ
ಭೃಂಗದಂತೆ ಅರಿವ ಮೂಗ
ಹಾಂಗೆ ಸೀಳದನಕ ಕೋಪ ಹರಿದು ಹೋಗದು
ಮಂಗಳಾತ್ಮ ಷಡಕ್ಷರಿಯ
ಲಿಂಗನಡಿಗೆ ಒಲಿಯದಿಂದ್ರಿ-
ಯಂಗಗಳಿಯದನಕ ಸುಖವು ಸಾಂಗಮಾಗದು ೫

ಅರ್ಥವಡಗದು. ಕ್ರೋಧ ತೊಲಗದು. ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ ನೀನೆತ್ತಲೊ ಶಿವನೆತ್ತಲೊ ಹೋಗತ್ತ ಮರುಳೇ! ಭವರೋಗವೆಂಬ ತಿಮಿರ ತಿಳಿಯದನ್ನಕ್ಕ ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೇ! – **ಬಸವಣ್ಣನವರು**

❖❖

ಎನಗೆ ಭೋಗ ಭಾಗ್ಯ ಬೇಡ

ರಾಗ : ಸುರಟಿ **ತಾಳ : ರೂಪಕ**

ಎನಗೆ ಭೋಗ ಭಾಗ್ಯ ಬೇಡ
ಎನಗೆ ಜಪವು ತಪವು ಬೇಡ
ಎನಗೆ ನಿಮ್ಮ ತೊತ್ತು ಸೇವೆ ನಿತ್ಯವಾಗಲೈ ॥ಪ॥

ಎನ್ನ ಕಂದಿಸುತ್ತ ಬಹಳ
ಎನ್ನ ಬಾಧಿಸುತ್ತ ಬಿಡದೆ
ಎನ್ನನೊಂದು ನೆವಗಳಿಂದ ಕಾಡಿದವರಿಗೆ
ಎನ್ನ ಕೊಂದಡವರಿಗೆಲ್ಲ
ಎನ್ನ ಪೂಜೆ ಫಲಗಳೆಲ್ಲ
ಉನ್ನತದೊಳಗವರಿಗಾಗಿ ಸುಖದಿ ಬಾಳಲಿ ೧

ಹಿಂದೆಯೆನ್ನ ಬೈದವರಿಗೆ
ಮುಂದೆಯೆನ್ನ ಬೈದವರಿಗೆ
ಕುಂದದೆಲ್ಲ ಜನರ ನಡುವೆ ಬೈದಡವರಿಗೆ
ಇಂದುಧರನ ಕರುಣದಿಂದೆ
ಅಂದಣವನು ಏರುವಂತೆ
ಕುಂದದೊಲಿದು ಅವರಿಗೆಲ್ಲ ಭೋಗವಾಗಲಿ ೨

ಹಿಂಗದೆನ್ನ ನಿಂದಿಸಿದ ಜ-
ನಂಗಳೆಲ್ಲ ಸುಖದೊಳಿರುವ
ಹಾಂಗೆ ಶಿವನು ಅವರಿಗೆಲ್ಲ ಭಾಗ್ಯವೀಯಲಿ
ಮಂಗಳಾತ್ಮ ಷಡಕ್ಷರಿಯ
ಲಿಂಗ ನಿನ್ನ ತೊತ್ತು ಸೇವೆ
ಸಾಂಗಮಾಗಿಯೆನಗೆ ಬಿಡದೆ ನಿತ್ಯವಾಗಲಿ ೩

ಆಯತ ಸ್ವಾಯತ ಸನ್ನಿಹಿತದನುಭಾವವ ನಾನೆತ್ತ ಬಲ್ಲೆನು? ಲಿಂಗ ಜಂಗಮಕ್ಕೆ ಮಾಡಿ ನೀಡುವ ಅಚ್ಚ ಶರಣರ ಮನೆಯಲ್ಲಿ ಭೃತ್ಯನಾಗಿರ್ಪೆನಯ್ಯ. ಇದುಕಾರಣ ಕೂಡಲಸಂಗನ ಶರಣರಲ್ಲದೆ ಅನ್ಯವರಿಯೆನಾಗಿ. –ಬಸವಣ್ಣನವರು

❖❖

ಡಿಂಭದೊಳಗೆ ಒಂದು ಪ್ರಾಣ

ರಾಗ : ಜಂಗಲ್

ಡಿಂಭದೊಳಗೆ ಒಂದು ಪ್ರಾಣ
ಕಂಭ ಸೂತ್ರ ಬೊಂಬೆಯಂತೆ
ಎಂದಿಗಾದರೊಂದು ದಿನವು ಸಾವು ತಪ್ಪದು ॥ಪ॥

ಹುಟ್ಟುತೇನು ತರಲು ಇಲ್ಲ
ಹೋಗುತೇನು ಒಯ್ಯಲಿಲ್ಲ
ಸುಟ್ಟ ಸುಣ್ಣದರಳಿನಂತೆ ಆಯಿತು ದೇಹ
ಹೊಟ್ಟೆ ಬಹಳ ಕೆಟ್ಟದೆಂದು
ಎಷ್ಟು ಕಷ್ಟ ಪಟ್ಟೆ ಪ್ರಾಣ
ಬಿಟ್ಟು ಹೋಗುವಾಗ ಒಂದು ಬಟ್ಟೆಯಿಲ್ಲವು ೧

ಹೊನ್ನು ಹೆಣ್ಣು ಮಣ್ಣು ಮೂರು
ತನ್ನೊಳಿರ್ದು ಉಣ್ಣಲಿಲ್ಲ
ಅಣ್ಣ ತಮ್ಮ ತಾಯಿ ತಂದೆ ಬಗೆಯಲಿಲ್ಲವು
ಅನ್ನ ವಸ್ತ್ರಭೋಗಿಯಾಗಿ
ತನ್ನ ಸುಖವನರಿಯಲಿಲ್ಲ
ಮಣ್ಣು ಪಾಲದಾದ ಮೇಲೆ ಯಾರಿಗಾಯಿತು ೨

ಹತ್ತು ಎಂಟು ಲಕ್ಷಗಳಿಸಿ
ಮತ್ತೆ ಸಾಲವದೆಂದು ಪರರ
ಸೊತ್ತಿಗಾಗಿ ಆಶೆ ಮಾಡಿ ನ್ಯಾಯ ಮಾಡುವ
ಬಿತ್ತಿ ಬೆಳೆದು ಉಂಡೆನೆಂಬ
ವ್ಯರ್ಥ ಚಿಂತೆ ಮಾಡದಿರೆಲೊ
ಸತ್ತು ಹೋದ ಮೇಲೆ ನಿನ್ನ ಅರ್ಥದಾರಿಗೆ ೩

ಬೆಳ್ಳಿ ಬಂಗಾರಿಟ್ಟುಕೊಂಡು
ಒಳ್ಳೆ ವಸ್ತ್ರ ತೊಟ್ಟುಕೊಂಡು
ಒಳ್ಳೆ ಚಲುವ ಬೊಂಬೆಯಂತೆ ಆಡಿ ಹೋದೆಲೊ
ಹಳ್ಳ ಹರಿದ್ಧ ಮೇಲೆ ನೀರ
ಗುಳ್ಳಿಯುರುಳಿ ಹೋದ ತೆರದಿ
ಸುಳ್ಳುರೂಪು ಸಂಸ್ಕೃತಿಯನು ನೋಡಿರಕ್ಕಟ ೪

ಸತ್ಯನೆನಿಸಿಕೊಂಡು ಜನರ
ತಥ್ಯ ವಾಕ್ಯದಲ್ಲಿ ನೀನು
ಮುಕ್ತಿಯಾದ ಮೇಲೆ ನಿನಗೆ ಸ್ತೋತ್ರ ಮಾಳ್ಪರು
ನಿತ್ಯ ಷಡಕ್ಷರಿಯ ಲಿಂಗ
ತೊತ್ತು ಆಗಿ ಭಜಿಸು ನಿನಗೆ
ಉತ್ತಮತ್ವ ಪದವಿ ದೊರಕಿ ಸುಖಿಪೆ ಸಂತತಂ ೫

ನಾಳೆ ಬಪ್ಪುದು, ನಮಗಿಂದೇ ಬರಲಿ, ಇಂದೆ ಬಪ್ಪುದು ನಮಗೀಗಲೇ ಬರಲಿ, ಇದಕಾರಂಜುವರು? ಇದಕಾರಳಕುವರು? ಜಾತಸ್ಯ ಮರಣಂ ಧ್ರುವಂ ಎಂದುದಾಗಿ ನಮ್ಮ ಕೂಡಲಸಂಗಮದೇವ ಬರೆದ ಬರಹ ತಪ್ಪಿಸುವರೆ ಹರಿ ಬ್ರಹ್ಮಾದಿಗಳವಲ್ಲ. **–ಬಸವಣ್ಣನವರು**

❖❖

ಹಿರಿದು ಕಿರಿದು ಇಲ್ಲ

ರಾಗ : ಮಧ್ಯಮಾವತಿ

ಲಿಂಗದಲ್ಲಿ ಮನವ ಬೆರಸಿ–
ದಂಗೆ ಕಿರಿದು ಹಿರಿದುಯಿಲ್ಲ
ಅಂಗ ಗುಣವನಳಿದು ನಿಜವನರಿದ ಕಾರಣ ॥ಪ॥

ಅಂಬಲಿಯದು ಅಮೃತದನ್ನ
ಕಂಬಳಿಗಳು ಕನಕ ದುಪಟಿ
ಅಂಬುಧಿಗಳು ಕಾಲುವೆಗಳು ಸಮವದಾತಗೆ
ನಂಬಿ ಲಿಂಗದಲ್ಲಿ ಮನವು
ತುಂಬಿ ಹೊರಗೆ ಮರೆದನಾಗಿ
ಕುಂಭಿಣಿಯೊಳು ಹಿರಿದು ಕಿರಿದು ತೋರದಾತಗೆ ೧

ಕನಕದುಪ್ಪರಿಗೆಯು ತಿಪ್ಪೆ
ಕನಕಶೈಲ ಹುಲ್ಲಮರಡಿ
ಮಿನಗುತಿಪ್ಪ ರನ್ನಕಲ್ಲು ಸಮವದಾತಗೆ
ಘನಕೆ ಘನವದಾದ ಲಿಂಗ
ಮನವ ನುಂಗಿಕೊಂಡಿತಾಗಿ
ಇನಿತು ಹಿರಿದು ಕಿರಿದು ಕಾಣಬಾರದಾತಗೆ ೨

ಅರಳಮಂಚ ಮುಳ್ಳಹಾಸು
ವರ ಸುಗಂಧ ಪುಡಿಯು ಧೂಳಿ
ಹಿರಿಯ ಕನಕದುಡಿಯದಾರ ನೂಲು ಸಮವದು
ಪರಕೆ ಪರವದಾದ ಲಿಂಗ
ಶರಧಿಯಲ್ಲಿ ಮುಳುಗಿ ಬಳಿಕ
ಹೊರಗೆ ಮರೆದನಾಗಿ ಹಿರಿದು ಕಿರಿದು ತೋರದು ೩

ಹಿರಿಯರಿವರು ಕಿರಿಯವರಿವರು
ಅರಿಗಳಿವರು ಮಿತ್ರರಿವರು
ಅರಸರಿವರು ತಿರುಕರಿವರು ಎಂದು ತೋರದು
ಕರಣ ಹರಣವೆಲ್ಲ ಲಿಂಗ-
ಕಿರಣವಾಗಿ ಹೊರಗೆ ಮರೆದು
ಇರುವ ಶರಣ ಹಿರಿದು ಕಿರಿದು ಕಾಣಬಾರದು ೪

ಇದುವೆ ಸುಖವು ಇದುವೆ ದುಃಖ
ವಿದುವೆ ಮೃದುವು ಇದುವೆ ಕಠಿಣ
ವಿದುವೆ ಶೀಲವಿದುವೆ ಉಷ್ಣವೆಂದು ತೋರದು
ಮುದದಿ ಷಡಕ್ಷರಿಯ ಲಿಂಗ
ಒದಗಿ ತಾನೆಯಾದನಾಗಿ
ಇದಿರಿನಲ್ಲಿ ಹಿರಿದು ಕಿರಿದು ಕಾಣಬಾರದು ೫

❖❖

ನಾನು ಒಲಿದು ಫಲವದೇನು

ರಾಗ : ಪೂರ್ವಿ

ನಾನು ಒಲಿದು ಫಲವದೇನು
ನೀನು ಒಲಿಯದನಕ ಶಿವನೆ
ಏನು ಮಾಡಿ ಫಲವದೇನು ಬಯಲ ಭ್ರಮೆಯದು ॥ಪ॥

ಜಪವ ಮಾಡಿ ಫಲವದೇನು
ತಪವ ಮಾಡಿ ಫಲವದೇನು
ಅಪರಿಮಿತ ಶಾಸ್ತ್ರಪಠಿಸಿ ಫಲವದೇನಲ್ಲೈ
ತ್ರಿಪುರವೈರಿ ತನ್ನ ತಾನೆ
ಸುಪಥದೋರಿ ಒಲಿಯದನಕ
ಉಪಮೆಯಿಂದ ಮಾಡೆ ತುದಿಗೆ ಕೆಟ್ಟು ಪೋಪುದು ೧

ಹೆಣ್ಣ ಬಿಟ್ಟು ಫಲವದೇನು
ಹೊನ್ನ ಬಿಟ್ಟು ಫಲವದೇನು
ಮಣ್ಣನುಳಿದು ಬಡವನಾಗಿ ಫಲವದೇನಲ್ಲೈ
ಪನ್ನಗೇಂದ್ರಭರಣನೊಲಿದು
ತನ್ನ ಸುಪಥ ತೋರದನಕ
ಅನ್ಯರುಗಳ ನೋಡಿ ಮಾಡೆ ಕೆಟ್ಟು ಪೋಪುದು ೨

ಗಿರಿಗಳಲ್ಲಿ ಗವಿಗಳಲ್ಲಿ
ತರುಗಳಲ್ಲಿ ಸೇರಿ ತನುವ
ಮರೆದು ಅಸ್ಥಿ ಮಾತ್ರವಿರಲು ಫಲವದೇನದು
ಹರನು ತನ್ನ ತಾನೆ ಒಲಿದು
ಪರಮಸುಖವ ತೋರದನಕ
ಪರರ ನೋಡಿ ಮಾಡೆ ಕಡೆಗೆ ಕೆಟ್ಟು ಪೋಪುದೈ ೩

ಕೋಡುಗಲ್ಲ ತುದಿಯ ಮೇಲೆ
ನೀಡಿ ಕಾಲ ಗಗನಕಾಗಿ
ಕೂಡೆ ಉಗ್ರ ತಪವ ಮಾಡಿ ಫಲವದೇನಲ್ಲೈ

ರೂಢಿಗೀಶ ಕರುಣ ಹುಟ್ಟಿ
ನೋಡಿ ಒಲಿಯದನಕ ಪರರ
ನೋಡಿ ಮಾಡಲೆಲ್ಲ ಕಡೆಗೆ ಕೆಟ್ಟು ಪೋಪುದು ೪

ಮುನ್ನಮಾಡಿದವರ ಕಂಡು
ಇನ್ನು ನೋಡಿ ಮಾಡಿ ಬಹಳ
ಬನ್ನಬಡುತ ಇರಲು ಕಡೆಗೆ ಕೆಟ್ಟು ಪೋಪುದೈ
ತನ್ನ ತಾನೆ ಪಕ್ವವಾಗಿ
ತನ್ನ ತಾನೆ ಪಥಕೆ ಬರಲು
ಚನ್ನ ಷಡಕ್ಷರಿಯಲಿಂಗ ತಾನೆ ಒಲಿವನು ೫

ನಾ ನಿಮ್ಮ ನೆನೆವೆನು. ನೀವೆನ್ನರಿಯಿರಿ, ನಾ ನಿಮ್ಮನೊಲ್ಲೈಸುವೆನು. ನೀವೆನ್ನ ಕಾಣಿರಿ. ನಾನೆಂತು ಬುದುಕುವೆನೆಂತು ಜೀವಿಸುವೆನಯ್ಯ? ಕೂಡಲಸಂಗಮದೇವ ಎನಗೆ ನೀವೆ ಪ್ರಾಣ ಗತಿ ಮತಿ ನೋಡಯ್ಯ. –ಬಸವಣ್ಣನವರು

❖❖

ಪನ್ನಗೇಂದ್ರಾಭರಣ

ರಾಗ : ವಸಂತ **ತಾಳ : ರೂಪಕ**

ಪನ್ನಗೇಂದ್ರಾಭರಣ ಕೇಳು
ನಿನ್ನ ವಿಕಳವಸ್ಥೆಯಲ್ಲಿ
ಎನ್ನ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ ॥ಪ॥

ಎರಳೆ ಶಿಶುವು ತಾಯ ತಪ್ಪಿ
ಅರಸಿಯರಸಿ ತೊಳಲಿ ಬಳಲಿ
ಇರದೆ ತಾಯ ವಿಕಳದಲ್ಲಿ ಸಾಯುವಂದದಿ
ಹರನ ಮೆಚ್ಚಿ ಮರಳುಗೊಂಡು
ಇರುಳು ಹಗಲು ನೆನೆದು ನೆನೆದು
ಹರಣ ಬಿಡುವ ಹಾಗೆ ಎನಗೆ ಎಂದಿಗಪ್ಪುದೋ ೧

ದಶದವಸ್ಥೆಯುಳ್ಳ ಕಾಂತೆ
ಒಸೆದು ಪುರುಷ ಬಾರದಿರಲು
ಸಸಿನೆ ಯಮನ ವಿಕಳತೆಯಲ್ಲಿ ಸಾವ ತೆರದೊಳು
ಶಶಿಯ ಧರಿಸಿದವಗೆ ಸೋತು
ಹಸಿವನರತು ವಿಕಳತೆಯಲಿ
ಅಸುವ ಬಿಡುವ ಹಾಗೆ ಎನಗೆ ಎಂದಿಗಪ್ಪುದೋ ೨

ಧನವ ಬಹಳ ಗಳಿಸಿದವನು
ತನುವ ಬಿಡುವ ಕಾಲದಲ್ಲಿ
ಧನದ ವಿಕಳತೆಯಲಿ ಪ್ರಾಣ ಬಿಡುವ ತೆರನೊಳು
ಮನಸಿಜಾರಿಯನ್ನು ಮೆಚ್ಚಿ
ನೆನೆದು ನೆನೆದು ವಿಕಳತೆಯಲಿ
ತನುವ ಬಿಡುವ ಹಾಗೆ ನನಗೆ ಎಂದಿಗಪ್ಪುದೋ ೩

ಬಂಧು ವರ್ಗವುಳ್ಳ ನರನು
ಸಂದು ಹೋಹ ಕಾಲದಲ್ಲಿ
ಕುಂದದವರ ವಿಕಳತೆಯಲಿ ಸಾವ ತೆರನೊಳು
ಇಂದುಧರನ ನೆನೆದು ನೆನೆದು
ಕುಂದಿ ಕುಸಿದು ವಿಕಳತೆಯಲಿ
ಹಿಂದೆ ಮರೆದು ತನುವ ಬಿಡುವುದೆಂದಿಗಪ್ಪುದೋ ೪

ಎಲ್ಲಿ ಮೆಚ್ಚು ಎಲ್ಲಿ ಮೋಹ
ಎಲ್ಲಿ ಪ್ರೀತಿ ಎಲ್ಲಿ ಪ್ರೇಮ
ಅಲ್ಲಿ ಅವರ ವಿಕಳತೆಯಿರಲಿ ಸಾವ ತೆರನೊಳು
ಇಲ್ಲಿ ಹಿಂದು ಮುಂದು ಮರೆದು
ಅಲ್ಲಿ ಷಡಕ್ಷರಿಯ ಲಿಂಗ
ದಲ್ಲಿ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ ೫

ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು ಕಂಡೆಯಾ ಲಿಂಗವೇ, ಪರಮ ಸುಖವ ಕೊಡು ಕಂಡೆಯಾ ಲಿಂಗವೇ, ಕೂಡಲಸಂಗಮದೇವಯ್ಯ ಇದೇ ವರವ ನಿಮ್ಮಲ್ಲಿ ಬೇಡುವೆ. –**ಬಸವಣ್ಣನವರು.**

❖❖

ನಿನ್ನ ನೀನೆ ತಿಳಿದು ನೋಡು

ಏಕೆ ಬಯಲು ಭ್ರಾಂತು ನಿನಗೆ
ಸಾಕು ಪರರ ತಿಳುಹದಿರು ವಿ-
ವೇಕಿಯಾಗಿ ನಿನ್ನ ನೀನೆ ತಿಳಿದು ನೋಡೆಲೈ ॥ಪ॥

ತನ್ನ ತಾನೆ ಪಕ್ವಮಾದ
ಹಣ್ಣು ತೊಟ್ಟು ಕಳಚಿ ಬಿದ್ದು
ಮುನ್ನಿನಂತೆ ಹೋಗಿ ತೊಟ್ಟು ಹತ್ತ ಬಲ್ಲುದೇ
ಬನ್ನ ಬಡುವ ಜನ್ಮ ತೀರಿ
ತನ್ನ ನಿಜವನರಿದ ಮೇಲೆ
ಮುನ್ನಿನಂತೆ ಲೋಕದವರ ಕೂಡಬಲ್ಲನೇ ೧

ಹಸಿಯ ಕಾಯ ಕೊಯ್ದು ತಂದು
ಬಿಸಿಯ ತೋರಿ ಮುಸುಕಿ ಇಡಲು
ನಸಿದು ಕೆಡುವದಲ್ಲದದುವೆ ಪಕ್ವವಪ್ಪುದೇ
ಒಸೆದು ತಂದು ಆತ್ಮನನ್ನು
ಸಸಿನೆ ಇಟ್ಟು ಬೋಧಿಸಿದಡೆ
ಅಸಮಜ್ಞಾನಿಯಾಗಿ ಶರಣರೊಳಗೆ ಬೆರೆವನೇ ೨

ಸತ್ಯ ಜ್ಞಾನ ಮೌನ ತಪವು
ನಿತ್ಯ ಕ್ಷಮೆಯು ದಮೆಯು ಶಾಂತಿ
ಉತ್ತಮತ್ವವಿರಲು ಪಕ್ವವೆಂದು ತಿಳಿವುದು
ಒತ್ತಿ ನೋಡಲವರ ಮನವ
ಮತ್ತೆ ಬೈಯ್ದು ಹೊಯ್ದು ನೋಡೆ
ಚಿತ್ತದಲ್ಲಿ ಸ್ವಸ್ಥವಾಗಿ ಕಲಕದಿರ್ಪುದು ೩

ಹುಸಿಯು ಹುಳುಕು ಡಂಭಕತ್ವ
ಕೊಸರು ಕೋಪ ನೀಚ ಹೃದಯ
ನುಸುಳು ವಿಷಯ ವಿರಲ ಪಕ್ವವೆಂದು ಅರಿವುದು
ಸಸಿನೆ ಅವನ ಕೆಣಕಿ ನೋಡಿ
ಕಿಸುಕುಳತ್ವ ತೋರುತಿಹುದು
ಒಸೆದು ಅವರ ತಿಳಿಯೆ ಸ್ವಸ್ಥ ಶರಣರಪ್ಪರೇ ೪

ಇವರ ಭೇದವಳಿಯದನಕ
ಅವರ ತಿಳುಹಿ ಫಲವದೇನು
ಭವಕೆ ಹೋಗಲವರು ತನಗೆ ಕೊರತೆಯಪ್ಪುದೇ
ಭವದ ಕಡೆಯ ಕಂಡ ಬಳಿಕ
ಶಿವನ ನಿಜವು ತಾನೆಯಹುದು
ಶಿವಷಡಕ್ಷರಾಂಕ ನಿಮ್ಮ ಶರಣರಪ್ಪರು ೫

ಪರರ ಚಿಂತೆ ನಮಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೇ? ಕೂಡಲಸಂಗಮದೇವ ಒಲಿವನೊ ಒಲಿಯನೊ ಎಂಬ ಚಿಂತೆ ಹಾಸಲುಂಟು ಹೊದಿಯಲುಂಟು. –ಬಸವಣ್ಣನವರು

❖❖

ನಿಮ್ಮ ಹಾಗೆ ಕಾಂಬೆನಯ್ಯ

ದೇವ ನಿಮ್ಮ ರೂಪಿನವರು
ಆವ ಪರಿಯ ನಟಿಸುತಿರಲು
ದೇವ ನಿಮ್ಮ ಹಾಗೆ ಕಾಂಬೆನನ್ಯಗಾಣೆನು ॥ಪ॥

ಚರನದೊರ್ವ ಪರರ ಸತಿಯ
ಕರೆದು ತಂದು ತನ್ನ ಮುಂದೆ
ನೆರೆಯುತಿರಲು ಜರಿದು ಅವರನನ್ಯಭಾವದಿ
ಮರಳಿ ಕಂಡೆನಾದಡೆನ್ನ
ಕೊರೆದು ಮೂಗನಿಟ್ಟಿಗೆಯಲಿ
ಒರಸಿ ಕನ್ನಡಿಯನು ತೋರಿ ನಗಿಸು ಜಗದಲಿ ೧

ಅಳುಕದೋರ್ವ ಚರನು ಕನ್ನ-
ಗಳವು ತಂದು ಎನ್ನ ಮುಂದೆ
ಇಳುಹಿಕೊಂಡು ಇರಲು ಅವರನನ್ಯಭಾವದಿ
ತಿಳಿವೆನಾದೊಡೆನ್ನ ಹಿಡಿದು
ಛಳಿಲನೆನ್ನ ನಾಲಿಗೆಯನು
ಉಳಿಯದಂತೆ ಕೊರೆದು ಬಿಸುಟಿ ನಗಿಸು ಜಗದೊಳು ೨

ಹರನ ರೂಪು ಧರಿಸಿಯೋರ್ವ
ನೆರೆಯುತಿರಲು ಹೊಲತಿಯನ್ನು

ಅರಿತು ಅವರನನ್ಯಭಾವದಿಂದ ಕಂಡೊಡೆ
ಹರನೆ ನೀನೆ ಹಿಡಿದು ಎನ್ನ
ಕರಗಿ ಕಾದ ಸೀಸವನ್ನು
ಎರೆದು ಬಾಯೊಳಿರದೆ ಸುಣ್ಣಗದಡು ತುಂಬಿಸು ೩

ಕಳ್ಳರಾಗಲವರು ಬಹಳ
ಸುಳ್ಳರಾಗಲವರು ವಿಷಯ-
ದಲ್ಲಿ ಪ್ರೀತರಾಗಿ ತಿರುಗುತಿರಲಿ ಧರೆಯೊಳು
ಒಳ್ಳಿತಪ್ಪ ಶಿವನ ರೂಪ-
ದಲ್ಲಿ ಇರಲು ಅವರ ನಾನು
ಖುಲ್ಲತನದಿ ಜರಿದೆನಾದೊಡೆನ್ನ ಶಿಕ್ಷಿಸು ೪

ಒಡೆಯ ನಮಗೆ ಏಕೆ ನಾಡ
ಗೊಡವೆ ನಿಮ್ಮ ರೂಪು ಇರಲು
ಒಡೆಯನೆಂದು ನಮಿಸೆ ಶುದ್ಧ ಹಲವದೇತಕೆ
ಮೃಡ ಷಡಕ್ಷರಾಂಕ ನಿಮ್ಮ
ಬೆಡಗು ತಿಳಿಯಲರಿಯೆವಾಗಿ
ಒಡೆಯರುಗಳನಂತುಯಿಂತು ಎನ್ನಬಾರದು ೫

ಲಾಂಛನವ ಕಂಡು ನಂಬುವೆ, ಅವರಂತರಂಗವ ನೀವೇ ಬಲ್ಲಿರಿ. ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ನಮಗೇಕಯ್ಯ? ರತ್ನ ಮೌಕ್ತಿಕದಚ್ಚು ಕೂಡಲಸಂಗಮದೇವ ನಿಮ್ಮ ಶರಣರು.-ಬಸವಣ್ಣನವರು

❖❖

ನನ್ನ ಮೇಲೆ ಹಗೆಯೇಕೆ

ರಾಗ : ಆನಂದ ಭೈರವಿ **ತಾಳ : ರೂಪಕ**

ಮುನ್ನ ನಮ್ಮ ಶರಣರುಗಳು
ನಿನ್ನ ಕಾಡಿದುದಕೆ ಈಗ
ಎನ್ನ ಮೇಲೆ ಹಗೆಯ ಮಗುಚುತಿಹೆಯೊ ಕಾಣೆನು ॥ಪ॥

ಶರಣ ನಂಬಿಯಣ್ಣ ಹಿಂದೆ
ತಿರುಗಿಸಿದನು ಹಡಪ ಹಿಡಿಸಿ
ಬೆರೆಸಿ ಕೊಲ್ಲ ಬಂದ ಕಲಿಯ ಕಾಯನೆನುತಲಿ
ಪರಮ ಅಮುಗಿದೇವ ತನ್ನ
ಹೊರೆಯ ಹೊರಿಸಲಾಗಿ ತಲೆಯು
ಉರಿದುದಕ್ಕೆ ಎನ್ನ ಕಾಡುತಿಹೆಯೋ ಕಾಣೆನು ೧

ಚೋಳಿಯಕ್ಕ ಉಂಡು ಬಿಟ್ಟ
ಹಾಲ ಹುಗ್ಗಿಯನ್ನು ಮರೆಸಿ
ಹೇಳದಾಕೆ ತನಗೆ ಕೊಟ್ಟಳೆಂಬ ಸಿಟ್ಟಿಗೆ
ಚೋಳರಾಯ ತನ್ನ ಕೆರೆಗೆ
ಬಾಳವಾಗಿ ಮಣ್ಣ ಹೊರಸಿ
ಆಳುಗೊಳಲು ಎನ್ನ ಕಾಡುತಿಹೆಯೊ ಕಾಣೆನು ೨

ಸತ್ತಿಯಕ್ಕ ಹುಟ್ಟಿನಿಂದ
ಒತ್ತಿ ತನ್ನ ತಿವಿದಳೆಂದು
ಮಿಥ್ಯತನವ ಮಡಗಿಕೊಂಡು ಮತ್ತದಲ್ಲದೆ
ನಿತ್ಯ ಸೌಖ್ಯ ಕೊಂಡ ನಿಮ್ಮ
ನೆತ್ತಿಯನ್ನು ಕುಟ್ಟಿದವರ
ಭೃತ್ಯನಿವನು ಎಂದು ಕಾಡುತಿಹೆಯೊ ಕಾಣೆನು ೩

ಶಂಭು ನೀವು ಉಣ್ಣದಿರಲು
ನಂಬಿಯಕ್ಕ ಕೊಲ್ಲ ಬಂದ–
ಳೆಂಬ ಸಿಟ್ಟು ಮಡಗಿಕೊಂಡು ಮತ್ತದಲ್ಲದೆ
ಕುಂಭಿಣಿಯೊಳು ಬಾಣ ಬೈದ
ನಂಬಿದವನು ನಾನು ಅವರ–
ನೆಂಬ ಸಿಟ್ಟಿನಿಂದ ಕಾಡುತಿಹೆಯೋ ಕಾಣೆನು ೪

ಅಲ್ಲದಿರ್ದೊಡೆನ್ನನೇಕೆ
ಇಲ್ಲಿ ಕಾಡಿದಪಿರಿ ನೀವು
ಎಲ್ಲರಲ್ಲಿ ಕರುಣಿಯೆಂಬರಯ್ಯ ನಿಮ್ಮನು
ಪುಲ್ಲವಿಶಿಖಮಯನಿಗೆನ್ನ–

ನಿಲ್ಲಿ ಕೊಡದೆ ನಿಮ್ಮ ಚರಣ-
ದಲ್ಲಿಯೆನ್ನನಿರಿಸು ಷಡಕ್ಷರಿಯ ಲಿಂಗವೆ ೫

❖❖

ಮನವನಾಳ್ವರಾರ ಕಾಣೆನು

ಹುಲಿಯ ಕರಡಿ ಕರಿಯ ಫಣಿಯ
ಬಲುಹಿನಿಂದಲಾಳ್ವರುಂಟು
ಚಲಿಸದಂತೆ ಮನವನಾಳ್ವರಾರ ಕಾಣೆನು ॥ಪ॥

ಮೊರೆದು ಗರ್ಜಿಸುತ್ತ ಬರುವ
ಹಿರಿಯ ಹುಲಿಯ ಹಿಡಿದು ತಂದು
ಇರದೆ ತಮ್ಮ ಇಚ್ಚೆಯಲ್ಲಿ ಆಳುತಿರ್ಪರು
ಚರಿಸುತಿರ್ಪ ಕಿರಿಯ ಮನವ
ಪರಮ ಲಿಂಗದಲ್ಲಿ ಇರಿಸಿ
ಹರಿಯದಂತೆ ಆಳ್ವ ಹಿರಿಯರುಗಳ ಕಾಣೆನು ೧

ಕರಿಯ ಹಿಡಿದು ನಿಲಿಸಬಹುದು
ಕರಡಿಯನ್ನು ಕಟ್ಟಬಹುದು
ಮೊರೆವ ಫಣಿಯ ಹೆಡೆಯ ಕೈಯೊಳಿರಿಸಬಹುದಲ್ಲೆ
ಕಿರಿಯ ಮನವ ಹಿಡಿದು ತಂದು
ಇರಿಸಿ ಲಿಂಗದಲ್ಲಿ ನೆರೆವ
ಹಿರಿಯರುಗಳ ಕಾಣೆ ಬರಿಯ ಬಲ್ಮೆ ನುಡಿವರು ೨

ಹರಿ ಸುರೇಂದ್ರ ದಿವಿಜರುಗಳ
ಪರಮಯೋಗಿ ಮನು ಮುನಿಗಳ
ಮರವೆಯೆಂಬ ಕೂಪದಲ್ಲಿ ಇಕ್ಕಿ ತುಳಿವುದು
ಹಿರಿಯ ಧ್ಯಾನಿ ಮೌನಿಯೆಂಬ
ಹಿರಿಯರುಗಳನೆಲ್ಲರನ್ನು
ಅರಿವು ಮರವೆಯಲ್ಲಿ ಇಕ್ಕಿ ನುಸುಳಿ ಪೋಪುದು ೩

ಜಪದ ಬಲುಮೆಯಲ್ಲಿ ಇರದು
ತಪದ ಉಗ್ರಕಂಜಿ ನಿಲದು
ಅಪರಿಮಿತದ ಶಾಸ್ತ್ರಪಾಠಕರಿಗೆ ಸಿಲುಕದು
ಚಪಲತನದಿ ಹಿಡಿವೆನೆನಲು
ಉಪಕಾರಿಯಾಗಿ ನಿಲುಕದಿಹುದು
ಕುಪಿತ ಮನವ ಹಿಡಿವ ಪರಿಗಳಾವುವೆಂದೊಡೆ ೪

ಮುನ್ನ ತಾನು ಯಾರು ಎಂದು
ತನ್ನ ನಿಜವನರಿದ ಬಳಿಕ
ಚನ್ನ ಷಡಕ್ಷರಿಯ ಲಿಂಗ ತಾನೆಯಾಗಿಹ
ಇನ್ನು ಸರ್ವ ಜಗವದೆಲ್ಲ
ತನ್ನ ನಿಲುವೆಯಾಗಿ ತಾಗಿ
ಅನ್ಯವಿಲ್ಲವಾಗಿ ಮನವು ತಾನೆ ನಿಲುವುದು ೫

❖❖

ಏನು ಮಾಡಲಯ್ಯ

ರಾಗ : ಮಧ್ಯಮಾವತಿ **ತಾಳ : ರೂಪಕ**

ಏನು ಮಾಡಲಯ್ಯ ಎನ್ನ
ಹೀನ ಮನದ ಬಯಕೆಗಳನು
ಜ್ಞಾನಖಡ್ಗದಿಂದ ಕಡಿವರಾರ ಕಾಣೆನು ॥ಪ॥

ಹಿಡಿವುದದನೆ ಹಿಡಿಯದಯ್ಯ
ಹಿಡಿಯದದನೆ ಹಿಡಿವುದಯ್ಯ
ಕೆಡುವ ನಡೆಯ ನಡೆಸಿಯೆನ್ನ ಭವಕೆ ಬರಿಸಿತು
ಬಡವ ನಾನು ಕಾಡುತಿಹುದು
ಹಿಡಿಯುವವರ ನಾನು ಕಾಣೆ
ಕಡಿದು ಕಡಿದು ಹಾಕುವವರನಾರ ಕಾಣೆನು ೧

ನಾನು ನಿಮ್ಮ ನೆನೆವೆನೆನಲು
ತಾನು ನಿಮ್ಮ ನೆನೆಯದಯ್ಯ

ಶ್ವಾನನಂತೆ ಹಲವು ಕಡೆಗೆ ಹರಿಯುತಿರ್ಪುದು
ಧ್ಯಾನ ಮೌನ ಜಪದೊಳಿರದು
ನಾನು ಇರದ ಸಂಗದಿಂದ
ಜ್ಞಾನಹೀನವಾಗಿ ಹೋದೆನಕ್ಕಟಕ್ಕಟ ೨

ಅಂಗಗುಣದ ನಡೆಗಳೆನಲು
ಹಿಂಗಿಸುತ್ತ ಬರುತಲಿಹುದು
ಲಿಂಗನೆನಹು ಎನಲು ಎಲ್ಲೋ ನುಸುಳಿ ಪೋಪುದು
ಮಂತಳಾತ್ಮ ಷಡಕ್ಷರಿಯ
ಲಿಂಗ ನಿಮ್ಮ ನೆನೆಯದಿರ್ಪ
ಕೊಂಗು ಮನವ ಶಿಕ್ಷಿಸೆನ್ನ ಅಳಲು ಪೋಗಲಿ ೩

ವಿಕಳನಾದೆನು ಪಂಚೇಂದ್ರಿಯದ ಧಾತುವಿನಿಂದ, ಮತಿಗೆಟ್ಟೆನು ಮನದ ವಿಕಾರದಿಂದ, ಧೃತಿಗೆಟ್ಟೆನು ಕಾಯ ವಿಕಾರದಿಂದ, ಶರಣು ಹೊಕ್ಕೆನು ಕೂಡಲಸಂಗಮದೇವಯ್ಯ– **ಬಸವಣ್ಣನವರು**

❖❖

ಕಾಡಲೇಕೆ ನರರುಗಳನು

ರಾಗ : ಪೂರ್ವಿ **ತಾಳ ರೂಪಕ**

ಕಾಡಲೇಕೆ ನರರುಗಳನು
ಬೇಡಿ ಬಳಲಲೇಕೆ ಮನವೆ
ರೂಢಿಗೀಶನೆಮಗೆ ದೈವವಾಗೆ ಇರುತಿರೆ ॥ಪ॥

ಮೃಡನ ಪೂಜೆ ಮಾಡುವುದಕೆ
ಮಡುವಿನಗ್ಗವಣಿಗಳುಂಟು
ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟೆಲೈ
ಒಡಲಿಗನ್ನ ದುಡಿದರುಂಟು
ಗುಡಿಗಳುಂಟು ಶಯನಕೆನಗೆ
ಒಡೆಯರುಗಳು ಬಿಸುಟಿದರುವೆ ಶೀತಕುಂಟೆಲೈ ೧

ಬುದ್ಧಿಯನ್ನು ಹೇಳುವುದಕೆ
ಆದ್ಯರುಗಳ ವಚನವುಂಟು

ಉದ್ಧರಿಸುವಡೆಮಗೆ ಶಿವನ ಮಂತ್ರವುಂಟೆಲ್ಲೈ
ಅರ್ಧನಾರಿಯೆಂಬ ದೈವ
ಇದ್ದಬಳಿಕ ಕರದೊಳೆಮಗೆ
ಹೊದ್ದಲೇಕೆ ನರರ ಆಶೆ ಮಾಡೆನಕ್ಕಟ ೨

ಮಿಗಿಲು ಮನೆಗಳೇತಕೆನಗೆ
ಅಗಲಲೇಕನುಭಾವಿಗಳನು
ಜಗದೊಳೆಮಗೆ ಹಲವು ಕೋಟಲೆಗಳು ಏತಕೈ
ಸೊಗಸು ಷಡಕ್ಷರಿಯಲಿಂಗ
ಅಗಲದೆಮ್ಮ ಕರದೊಳಿರಲು
ಬೆಡಗು ಕೊಳ್ಳಲೇಕೆ ಮನವೆ ನರರ ಮಾಳ್ಕೆಯಿಂ ೩

ಸುರರ ಬೇಡಿದರಿಲ್ಲ, ನರರ ಬೇಡಿದರಿಲ್ಲ, ಬರಿದೆ ಧೃತಿಗೆಡಬೇಡ ಮನವೆ, ಆರನಾದಡೆಯೂ ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೆ. ಕೂಡಲಸಂಗಮದೇವನಲ್ಲದೆ ಆರ ಬೇಡಿದರಿಲ್ಲ ಮನವೆ. – **ಬಸವಣ್ಣನವರು.**

❖❖

ವಿರತಿ ಸುಲಭವಲ್ಲವಯ್ಯಾ

ವಿರತಿ ವಿರತಿ ಎಂಬರಯ್ಯ
ವಿರತಿ ಸುಲಭವಲ್ಲವಯ್ಯ
ವಿರತಿ ತನುವಿನಾಶೆಯಳಿದೊಡಾತ ವಿರತನು ॥ಪ॥

ಅನ್ನವನ್ನು ಉಳಿದ ತನುವ
ಸಣ್ಣಿಸಿರಲು ಬಹುದು ವಸ್ತ್ರ–
ವನ್ನು ಬಿಟ್ಟು ದಿಗಂಬರದೊಳಾಡಬಹುದೆಲ್ಲೈ
ಎಣ್ಣೆನೀರನುಳಿದು ಜಡೆಗ–
ಳನ್ನು ಮಾಡಿಕೊಳಲು ಬಹುದು
ತನ್ನ ದೇಹ ಭಾವವಳಿದೊಡಾತ ವಿರತನು ೧

ತನ್ನ ನಿಜವ ತಿಳಿದು ನೋಡಿ
ತನ್ನ ತನುವಿದಲ್ಲ ಕೃತಕ–
ವನ್ನು ಹಿಡಿದು ಆಡಬಾರದೆಂದು ತಿಳಿವುತ

ಅನ್ಯರುಗಳ ಒಡವೆಯಂತೆ
ತನ್ನ ತನುವಿನಲ್ಲಿ ಮೋಹ-
ವನ್ನು ಉಳಿದು ಆಡಬಲ್ಲಡಾತ ವಿರತನು ೨

ಕರಿಯು ಕರಡಿ ವ್ಯಾಘ್ರ ಸಿಂಹ
ಉರಗ ಸಿಡಿಲು ಚೋರರಿಂದ
ಮರಣಭೀತಿ ಇಲ್ಲದಿರ್ದೊಡಾತ ಜಗದೊಳು
ಪರಮ ಷಡಕ್ಷರಿಯ ಲಿಂಗ-
ವರಿದು ಚರಿಸುತಿರ್ಪನಾಗಿ
ನಿರುತ ಲೋಕಭರಿತಚರಿತ ವಿರತನಾತನು ೩

❖❖

ನೀನು ರಕ್ಷಿಸಭವ

ದೇವ ನೀನು ರಕ್ಷಿಸಲ್ಪ-
ಜೀವಿ ನಾನು ಕರುಣಿ ನೀನು
ಸಾವು ಹುಟ್ಟುಗಳಿಗೆ ಬೆದರಿ ಹೆದರುತ್ತೈದೆನೆ ॥ಪ॥

ಎಡಹಿ ಬೀಳ ಬಲ್ಲೆ ನಾನು
ಒಡನೆ ಹೇಳಲರಿಯೆನಯ್ಯ
ನುಡಿಯಬಲ್ಲೆನಯ್ಯ ಮಿಗಿಲು ನಡೆಯಲಾರೆನು
ನುಡಿದ ಹಾಗೆ ನಡೆಯದವರ
ಒಡೆಯ ನೀನು ಒಲ್ಲೆಯವರ
ನಡೆಗಳಿಲ್ಲದಧಮ ನಾನು ರಕ್ಷಿಸೆನ್ನನು ೧

ಭಕ್ತಿಯೆನಗೆ ಇಲ್ಲವಯ್ಯ
ನಿತ್ಯ ಜ್ಞಾನವಿಲ್ಲವೆನಗೆ
ಮತ್ತೆ ವಿರತಿಯೆನಗೆ ಮೊದಲೆ ತಾನೆ ಇಲ್ಲವು
ಕರ್ತು ನೀನೆ ಒಲಿದು ನಿಮ್ಮ
ಚಿತ್ರದಲ್ಲಿ ಕರುಣ ಹುಟ್ಟಿ
ಎತ್ತಿ ರಕ್ಷಿಸೆನ್ನನಲ್ಲದಿರಲು ಕೆಡುವೆನು ೨

ನರಶರೀರವೆಂಬ ದೊಡ್ಡ
ಹಿರಿಯ ಕೊಳದೊಳಗೆ ಸಿಕ್ಕಿ
ಕರಗಿ ಕೊರಗಿ ಮರುಗಿ ಅಳಲಿ ಬಳಲುತ್ತೈದೆನೆ
ಮರುಕವೇಕೆ ಇಲ್ಲವಯ್ಯಾ
ಕರುಣಿಯೆಂಬರಯ್ಯಾ ನಿಮ್ಮ
ಕೊರತೆ ನಿಮಗೆ ಬಾರದಂತೆ ರಕ್ಷಿಸೆನ್ನನು ೩

ಧೀರನಲ್ಲವಯ್ಯ ನಾನು
ವೀರನಲ್ಲವಯ್ಯ ನಾನು
ಘೋರ ತನುವ ತೊಡಿಸಿ ಎನ್ನನಿಲ್ಲಿ ಬಿಟ್ಟಿರಿ
ಮಾರಹರನೆ ನಿನ್ನನುಳಿದು
ದೂರ ಕೇಳ್ವರಾರು ಎನ್ನ
ಮಾರವೈರಿ ಸಲಹು ಕರಣಶರಧಿಚಂದ್ರಮ ೪

ಕರುಣಿ ನೀನೇ ಬಲ್ಲೆ ನಾನು
ಹರಗಣೆನಲು ಕರುಣಿಸಿದಿರಿ
ಇರದೆ ಅಹರ ಪ್ರಹರವೆನಲು ಒಡವೆ ಒಲಿದಿರಿ
ಸರಿದ ಕುಸುಮ ಹರನಿಗೆನಲು
ಕರುಣಿಸಿದಿರಿ ಬಿಡದೆ ಎನ್ನ
ಕರುಣಿಸಯ್ಯ ಪರಮ ಷಡಕ್ಷರಿಯ ಲಿಂಗವೆ ೫

❖❖

ಎಂದಿಗಪ್ಪುದೋ

ರಾಗ : ಭೈರವಿ **ತಾಳ : ರೂಪಕ**

ಲಿಂಗವಂಗದಲ್ಲಿ ಇರಲು
ಲಿಂಗವೆಂದು ಕಾಂಬ ಮನವ
ಲಿಂಗ ನೀನೇ ಕೊಟ್ಟು ಸಲಹು ಬಯಕೆಯೆನಗಿದು ॥ಪ॥

ಅಂದಣವನ್ನೇರಿ ಭಕುತ-
ಗೊಂದಣದಿಂದ ನುತಿಸಿಕೊಳುತ
ಚಂದದಿಂದ ಬರಲು ಆಚೆಯಲ್ಲಿಯೋರ್ವರು

ಕುಂದಿ ಕುಸಿದು ವೃದ್ಧರಾಗಿ
ಚಂದವಳಿದು ಬಳಲುವವರ
ಇಂದುಧರನ ಸಮವು ಕಾಣ್ಬುದೆಂದಿಗಪ್ಪುದೋ ೧

ಯತಿಗಳೆನಿಸಿಕೊಂಡು ಕಾಮ-
ಜಿತರು ಎನಿಸಿಕೊಂಡು ಜ್ಞಾನ-
ಮತಿಗಳೆನಿಸಿಕೊಂಡು ಬರಲು ಆಚೆಯೊರ್ವರು
ಸತಿಯ ಕೂಡಿಕೊಂಡು ಬರುತ
ನುತ ಸುಲಿಂಗ ಕೊರಳೊಳಿರಲು
ಶಿತಸುಕಂಠನೆಂದು ಕಾಂಬುದೆಂದಿಗಪ್ಪುದೊ ೨

ವಸ್ತ್ರಭೂಷಣವನು ಹೊದೆದು
ಪುಸ್ತಕವನು ಹಿಡಿದುಕೊಂಡು
ಅರ್ತಿಯಿಂದ ಬರಲು ಆಚೆಯಲ್ಲಿಯೊರ್ವರು
ಹಸ್ತಪಾದ ಮುಡುಬರಾಗಿ
ಹಸ್ತದಲ್ಲಿ ಲಿಂಗವಿರಲು
ವಸ್ತುವೆಂಬ ಕಾಂಬ ಮನವು ಎಂದಿಗಪ್ಪುದೊ ೩

ಕಾವಿಯಂಬರವನು ಹೊದೆದು
ಸಾವಿರಕ್ಷಮಾಲೆ ಕೊರಳ
ತೀವಿ ಧರಿಸಿ ಬರಲು ಆಚೆಯಲ್ಲಿಯೊರ್ವರು
ಸೇವಕತ್ವದಿಂದ ಧನವ
ಕಾವುತಿರಲು ಲಿಂಗವಿರಲು
ದೇವನೆಂದು ಕಾಂಬ ಮನವದೆಂದಿಗಪ್ಪುದೊ ೪

ಸ್ಪಷ್ಟವಾಗಿ ನುಡಿದು ಶಾಸ್ತ್ರ-
ಶ್ರೇಷ್ಠರೆನಿಸಿಕೊಂಡು ಭಕುತಿ-
ನಿಷ್ಠೆವಂತರಾಗಲಾಚೆಯಲ್ಲಿಯೋರ್ವರು
ಕುಷ್ಠರಾಗಿ ಹಸ್ತಪಾದ-
ನಷ್ಟರಾಗಿಯಿರಲು ಅವರು
ಸೃಷ್ಟಿಗೀಶನೆಂದು ಕಾಂಬುದೆಂದಿಗಪ್ಪುದೊ ೫

ಕುರಿಯ ಕಾಯುತಿರಲಿ ಅವರು
ತುರುವ ಕಾಯುತಿರಲಿ ಅವರು
ಕೆರವು ಹೊಲಿಯುತಿರಲಿ ಅವರು ಲಿಂಗವಂಗದಿ
ಧರಿಸಿ ಭಸಿತವಕ್ಷಮಾಲೆ
ಇರಲು ಶಿವನು ಸಮವದೆಂದು
ಅರಿದು ಶರಣು ಮಾಡುತಿರ್ಪುದೆಂದಿಗಪ್ಪುದೊ ೬

ಅಷ್ಟಷಷ್ಠಿ ತೀರ್ಥಗಳನು
ಮೆಟ್ಟಬಂದ ಮಹಿಮೆಯನ್ನು
ದೃಷ್ಟಗೊಳಿಸಿ ಮೆರೆ[illegible]ಲಾಚೆಯಲ್ಲಿಯೋರ್ವರು
ಕಟ್ಟಿಗೆಯನು ಹೊತ್ತುಕೊಂಡು
ಕಷ್ಟಪಡುತ ಬರಲು ಅವರ
ಶ್ರೇಷ್ಠರಿವರು ಎಂದು ಕಾಂಬುದೆಂದಿಗಪ್ಪುದೊ ೭

ಮಲಿನ ಕಾಯರಾಗಿ ಬಹಳ
ಮಲಿನ ಕಪಡವನ್ನು ಹೊದೆದು
ಹೊಲೆಯರಂಗಳದಲಿ ಮನೆಯ ಕಟ್ಟಿಕೊಂಡಿರೆ
ಚಲುವಲಿಂಗವಂಗದಲ್ಲಿ
ನಲಸಿ ಇರಲು ಅವರ ಶಿವನ
ಕುಲವಿದೆಂದು ನಮಿಸುತಿರ್ಪುದೆಂದಿಗಪ್ಪುದೊ ೮

ಕಾಕರಾಗಲವರು ವಿಷಯ
ನೀಕರಾಗಲವರು ಬಹಳ
ಪೋಕರಾಗಲವರ ಅಂಗದಲ್ಲಿ ಲಿಂಗವು
ಸೋಂಕಿ ಸೊಗಸುತಿರಲು ಅವರ–
ನೇಕನಾಥನೆಂದು ಕಾಂಬ
ಏಕಚಿತ್ತವೆನಗೆ ಬಿಡದೆಯೆಂದಿಗಪ್ಪುದೊ ೯

ಹಗೆಗಳಣ್ಣ ತಮ್ಮ ಹಿತವ
ಬಗೆವ ತೊತ್ತು ಮಿತ್ರ ಬಂಟ
ಅಗಲದಿರ್ಪ ಸತಿ ಸುಪುತ್ರ ಮಾತೆ ಪಿತರೊಳು
ಸೊಗಸಿ ಬೆಳಗುತಿರಲು ಲಿಂಗ
ಅಗಲದವರ ಅಂಗದಲ್ಲಿ
ನಗಜೆಪತಿಯ ಸಮವ ಕಾಂಬುದೆಂದಿಗಪ್ಪುದೊ ೧೦

ವೇಸಿಯರನು ಕೂಡಿಕೊಂಡು
ಓಸರಿಸದೆ ಅವರ ಹೆಗಲ
ವಾಸದಲ್ಲಿ ತೋಳನಿಡಿದುಕೊಂಡು ಬರುತಿರೆ
ಈಶ ಲಾಂಛನಗಳು ಇರಲು
ಶ್ರೀ ಷಡಕ್ಷರಾಂಕನೆಂದು
ಓಸರಿಸದೆ ನಮಿಸುತಿರ್ಪುದೆಂದಿಗಪ್ಪುದೊ ೧೧

ಕಳ್ಳ ಬಂದಿಕಾರ ಹಾವಡಿಗ ಹಾದರೀಗ ಬಂಟನೋಲೆಯಕಾರನೆಂದನಾದರೆ ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿರ್ದರೆ ಅದೇ ದ್ರೋಹ. ನಡೆ ನುಡಿ ಹುಸಿಯುಂಟಾದರೆ ಕೂಡಲಸಂಗನ ತೋರಿದ ಚೆನ್ನಬಸವಣ್ಣನಾಣೆ. –ಬಸವಣ್ಣನವರು

❖❖

ನಿತ್ಯ ಸುಖಿಯಾಗು

ಭಾಮಿನಿಷಟ್ಪದಿ

ಎಲ್ಲ ವರಗಳ ಕೊಡುವ ದೇವನು
ಇಲ್ಲಿ ಕರಪೀಠದೊಳು ಬಂದಿರೆ
ಖುಲ್ಲ ಮನವೇ ನಿತ್ಯ ಪದವಿಯ ಪಡೆದು ಸುಖಿಯಾಗು ॥ಪ॥

ಸೂಳೆ ನಂಬಿಗೆ ಹೊನ್ನ ಮಳೆಯನು
ಚೋಳರಾಯಗೆ ಕನಕ ವೃಷ್ಟಿಯ
ಹೇಳಲಾಕ್ಷಣ ಕರೆಸಿದಾತನು ಹಸ್ತದೊಳಗಿರಲು
ಖೂಳ ಮನವೇ ನಿತ್ಯ ಪೂಜಿಸಿ
ಕಾಲಕಾಮರ ಗೆಲಿದು ಶಿವಗಣ
ಮೇಳದೊಳಗಿರ್ಪ ಪದವಿಯ ಪಡೆದು ಸುಖಿಯಾಗು ೧

ನಂದಿಯುಂಡಿಗೆ ಹೊನ್ನ ಪಡಿಯಂ
ಒಂದನುಳಿಯದೆ ನಂಬಿಯಣ್ಣಗೆ
ತಂದು ಕೊಡುವಾ ದೇವ ನಿನ್ನಯ ಹಸ್ತದೊಳಗಿರಲು
ಬೆಂದ ಮನವೇ ಬೇಡಿಕೊಂಬೆನು
ಕುಂದದಿಳೆಯೊಳು ಭಜಿಸಿ ಸುಖರಸ
ಸಿಂಧುತೆರೆಯೊಳಗಾಳುತಿರು ನೀ ನಿತ್ಯ ಸುಖಿಯಾಗು ೨

ಬಾಣ ಮಯೂರರಿಗೆ ಇಷ್ಟವ
ನೂನಯಾಗದ ಹಾಂಗೆ ಕೊಟ್ಟಿಹ
ಜಾಣ ಬಂದುರೆ ಒಲಿದು ನಿನ್ನಯ ಹಸ್ತದೊಳಗಿರಲು
ಹೀನ ಮಾನವೇ ನಿತ್ಯ ಪೂಜಿಸು
ಏನುವನು ಪಡಿಯದಲೆ ಭಕ್ತಿ-
ಜ್ಞಾನ ವೈರಾಗ್ಯವನು ಪಡೆಯುತೆ ನಿತ್ಯ ಸುಖಿಯಾಗು ೩

ಕಾಳಿದಾಸಂಗೊಲಿದ ಮಗಳಿಗೆ
ಲೋಲಲೋಲಚನಗಳನು ಕೊಟ್ಟಾ
ಭಾಳನೇತ್ರನು ಬಂದು ನಿನ್ನಯ ಹಸ್ತದೊಳಗಿರಲು
ಮೇಲಗತಿ ಮತಿಯನ್ನು ಬಯಸುತ
ಲೀಲೆಯಿಂದಲಿ ನಿತ್ಯ ಪೂಜಿಸು
ನಾಳೆಗಿಂದಿಗೆಯೆನ್ನದೇ ನೀ ನಿತ್ಯ ಸುಖಿಯಾಗು ೪

ದಾಸಿಮಯ್ಯನಿಗೊಲಿದು ತವನಿಧಿ
ಏಸು ಕಾಲಕೆ ಸವೆಯದಂದದಿ
ದೇಶವರಿಯಲು ಕೊಟ್ಟ ದೇವನು ಹಸ್ತದೊಳಗಿರಲು
ಘಾಸಿಯಾಗದೆ ಯಮನದೂತರ
ಪಾಶಕಾಗದೆ ನಿತ್ಯ ಪೂಜಿಸು
ಮೋಸ ಹೋಗದೆ ಈಶಪದವಿಯ ಪಡೆದು ಸುಖಿಯಾಗು ೫

ಸಿಂಧು ಬಲ್ಲಾಳನಿಗೆ ಕರುಣಿಸಿ
ಕುಂದದಿಳೆಯೊಳು ಲಿಂಗ ಪದವಿಯ
ಚಂದದಿಂದಲಿ ಕೊಟ್ಟ ದೇವನು ಹಸ್ತದೊಳಗಿರಲು
ಮಂದಮತಿಯಲಿ ಕೆಡುವ ಮನವೇ
ಹೊಂದಿಯಡಿಗಳ ನುತಿಸಿ ಪೂಜಿಸಿ
ಮುಂದೆ ಸದ್ಗತಿ ಪಡೆದು ಶಿವನೊಳು ನಿತ್ಯ ಸುಖಿಯಾಗು ೬

ಮಲ್ಲಿಕಾರ್ಜುನ ಪಂಡಿತರಿಗಾ
ಖುಲ್ಲ ಜೈನನು ಕಣ್ಣು ಕೀಳಿಸೆ
ಒಳ್ಳಿತಾಗಿಯೆ ಕಣ್ಣ ಕೊಟ್ಟುವ ಹಸ್ತದೊಳಗಿರಲು
ಖುಲ್ಲ ಮನವೇ ನಿತ್ಯ ಪೂಜಿಸಿ
ಒಳ್ಳಿತೆನಿಸುವ ಮಾರ್ಗದಿಂದಲಿ
ಎಲ್ಲರಹುದೆನೆ ನಡೆದು ಶಿವನೊಳು ನಿತ್ಯ ಸುಖಿಯಾಗು ೭

ಲೋಲ ಶಂಕರದಾಸಿಮಯ್ಯಗೆ
ಕಾಳ ದೈವವ ಸುಡಲಿಗೋಸುಗ
ಭಾಳನೇತ್ರವ ಕೊಟ್ಟು ದೇವನು ಹಸ್ತದೊಳಗಿರಲು
ಕೋಳು ಹೋಗದೆ ನಿತ್ಯ ಪೂಜಿಸಿ
ಲೀಲೆಯಿಂದಲಿ ಹಾಡಿ ಹೊಗಳನು-
ಕೂಲವಾಗಿರು ಶರಣರಿಗೆ ಶಿವನೊಳಗೆ ಸುಖಿಯಾಗು ೮

ಭೂಮಿಯೊಳಗಾ ಮಲುಹಣಯ್ಯಗೆ
ಕಾಮಿತಾರ್ಥವನಿತ್ತ ದೇವನು
ಪ್ರೇಮದಿಂದಲಿ ಬಂದು ನಿನ್ನಯ ಹಸ್ತದೊಳಗಿರಲು
ಸೋಮಧರನೊಳು ಬೆರೆಸಬಲ್ಲೊಡೆ
ಕಾಮಕ್ರೋಧಗಳಳಿದು ಪೂಜಿಸು
ಆ ಮಹಾ ಶಿವಶರಣರೊಳು ನೀ ನಿತ್ಯ ಸುಖಿಯಾಗು ೯

ಧರೆಯೊಳೆಲ್ಲರು ಅರಿಯೆ ಬಾಣಾ-
ಸುರಗೆ ಸಾಸಿರ ತೋಳ ಕೊಟ್ಟವ
ಕರುಣದಿಂದಲಿ ಬಂದು ನಿನ್ನಯ ಹಸ್ತದೊಳಗಿರಲು
ಮರೆಯದೆಲ್ಲಾ ವಿಧದ ಪೂಜೆಯ
ಹರುಷದಿಂದಲಿ ಮಾಡಿ ಸುಖರಸ-
ಶರಧಿತೆರೆಯೊಳಗಾಳುತಿರು ನೀ ನಿತ್ಯ ಸುಖಿಯಾಗು ೧೦

ಎಲ್ಲ ಮುನಿಗಳು ಎಲ್ಲ ಮನುಗಳು
ಎಲ್ಲ ಸಿದ್ಧರು ಎಲ್ಲ ಸಾಧ್ಯರು
ಇಲ್ಲಿ ಪಡೆದರು ನಿನ್ನ ಹಸ್ತದ ಲಿಂಗವನು ಭಜಿಸಿ
ಅಲ್ಲಿಗಲ್ಲಿಗೆ ಹರಿವ ಬುದ್ಧಿಯ
ಸಲ್ಲವಿಡು ನೀ ನಿತ್ಯ ಪೂಜಿಸು
ಇಲ್ಲಿರುವ ಷಡಕ್ಷರಿಯ ವರನಲ್ಲಿ ಸುಖಿಯಾಗು ೧೧

❖❖

ಎಂದಿಗಾದಪುದೊ

ಅಂಗಜಾರಿಗೆ ಮೆಚ್ಚಿ ಮರುಳಾ-
ಗಂಗಭಾವ್ಞವ ತೊರೆದು ಕೃತ್ಯವ
ಹಿಂಗಿ ಹೊರಗನು ಮರೆವ ಸುಖವದು ಎಂದಿಗಾದಪುದೊ ॥ಪ॥

ಎಳೆಯ ಚಂದ್ರನ ಧರಿಸಿದಾತಗೆ
ಒಲಿದ ಫಣಿಕುಂಡಲದ ಗರುವಗೆ
ಪುಲಿಯ ಚರ್ಮವನುಟ್ಟು ಗಜಚರ್ಮವನು ಹೊದ್ದವಗೆ
ಹೊಳೆವ ಕೆಂಜೆಡೆ ಮುಗುಳು ನಗೆಗಳ
ಚಲುವ ಶಿವನಿಗೆ ಮೆಚ್ಚಿ ಮರುಳಾ-
ಗಳಿದು ತನುಗುಣವರಿಯದಿರ್ಪುದು ಎಂದಿಗಾದಪುದೋ ೧

ಭಸಿತ ಕಾಂತಿಯ ಕಾಯದಾತಗೆ
ಮಿಸುಪ ಫಣಿಕಂಕಣದ ನೀರಗೆ
ಹಸಿಯ ಶಿರಮಾಲೆಗಳ ಕೊರಳೊಳು ಧರಿಸಿದಾತನಿಗೆ
ನಿಶಿತ ಶೂಲದಿ ಹೆಣನ ಪಿಡಿದಿಹ
ಅಸಮ ನೇತ್ರಗೆ ಮೆಚ್ಚಿ ಮರುಳಾ-
ಗಸನವುದಕವ ತೊರೆವುದದು ತಾನೆಂದಿಗಾದಪುದೋ ೨

ಕೊರಳಗರಳದ ರೇಖೆಯಾತಗೆ
ಮರುಳುಗಳ ಕೂಡಾಡುವಾತಗೆ
ಹರಿ ಸುರೇಂದ್ರರ ಹೆಣ್ಣತೊತ್ತಿರ ಮಾಡಿಕೊಂಡವಗೆ
ಸರಸಿಜಾಸನಶಿರವ ಕರದೊಳು
ಧರಿಸಿದಾತಗೆ ಮೆಚ್ಚಿ ಮರುಳಾ-
ಗಿರುಳು ಹಗಲೆಂದರಿಯದಿಹ ಸುಖವೆಂದಿಗಾದಪುದೋ ೩

ತನ್ನ ಮೋಹದಿ ನೆನೆವ ಭಕುತರ
ಮುನ್ನ ತಾನೇಮೋಹಿಪವನಿಗೆ
ತನ್ನನೊಲಿಸುವ ಶರಣರಿಗೆ ತಾ ಮುನ್ನನೊಲಿವವಗೆ
ಹೊನ್ನು ಹಾವಿಗೆ ಮೆಟ್ಟಿ ಸುಳಿವಗೆ
ಎನ್ನ ಮನ ತಾ ಮೆಚ್ಚಿ ಮರುಳಾ-
ದಿನ್ನು ಹೊರಬಳಕೆಗಳ ಮರೆವುದು ಎಂದಿಗಾದಪುದೋ ೪

ಬೆರಳನಾದರು ಕೊಟ್ಟು ಆತಗೆ
ಕರುಳನಾದರು ಕೊಟ್ಟು ಆತಗೆ
ಇರದೆ ತನು ಮನ ಧನವನೆಲ್ಲವ ಸೂರೆಗೊಟ್ಟವಗೆ
ಗರುವನಾತನ ಇಚ್ಛೆಯೊಳು ನಾ-
ನಿರುತ ವರಿಸಿಯೆ ಮೆಚ್ಚಿ ಮರುಳಾ-
ಗಿರುತ ಜಡನಿದ್ರೆಗಳ ಮರೆವುದು ಎಂದಿಗಾದಪುದೋ ೫

ಚಂದ್ರ ಕೋಟಿಯ ಪ್ರಭೆಗಳೊಬ್ಬುಳಿ
ಸಾಂದ್ರಮಾಗಿಯೆ ಪುರುಷ ಕೃತಿಯಿಂ
ಚೆಂದವಡೆದಿಹ ಚಲುವ ದೇವಗೆ ಮೆಚ್ಚಿ ಮರುಳಾಗಿ
ಬಂದಡರಿಯದೆ ಬೈದಡರಿಯದೆ
ನಿಂದಡರಿಯದೆ ನೆರೆದಡರಿಯದೆ
ಕೊಂದಡರಿಯದೆ ಹೊರಗೆ ಮರೆವುದು ಎಂದಿಗಾದಪುದೋ ೬

ಕಂತು ಕೋಟಿಯ ರೂಪಪಾದದೊ
ಳಾಂತ ಚಲುವಿನ ಶಿವಷಡಕ್ಷರ
ಕಾಂತನಿಗೆ ನಾ ಸಿಕ್ಕಿ ಹೊರಗನು ಮರೆದು ಮರುಳಾಗಿ
ನಿಂತೊಡೆಲ್ಲಿಯು ಕೂತೊಡೆಲ್ಲಿಯು
ಭ್ರಾಂತನಂದದಿ ಕಲ್ಲು ಮರನಾ-
ಗಿಂತು ಪರವಶದಂಗಭಾವವು ಎಂದಿಗಾದಪುದೋ ೭

❖❖

ಎಂದಿಗೊಲಿದಪನೋ

ಹಾಡಿದವರಿಗೆ ಬೈದಡವರಿಗೆ
ಕಾಡಿದವರಿಗೆ ಕೊಂದಡವರಿಗೆ
ಬೇಡಿದಷ್ಟವ ಕೊಡುವ ದಯನಿಧಿ ಎಂದಿಗೊಲಿದಪನೋ ॥ಪ॥

ಕಲ್ಲಿಲಿಟ್ಟಂಥವರಿಗೊಲಿದನು
ಬಿಲ್ಲಿನಲಿ ಹೊಯ್ದವರಿಗೊಲಿದನು
ಮಲ್ಲಶರನ ವಿಕಾರಿಯೆನಿಸಿದ ಶ್ವೇತನಿಗೆ ಒಲಿದ
ಸಲ್ಲದುದನೇ ನುಡಿದು ನಗಿಸಿದ-
ಗಲ್ಲಿಯಾಕ್ಷಣ ಒಲಿದ ದೇವನು
ಒಳ್ಳಿದನು ಇಂತಪ್ಪ ದಯನಿಧಿ ಎಂದಿಗೊಲಿದಪನೋ ೧

ಮರೆದು ಈಶನ ನೆನೆದರಾದಡೆ
ಸುರರ ಪದವಿಗಳಾಗುತಿರ್ಪವು
ಅರಿದು ಈಶನ ನೆನೆದರಾದಡೆ ತನ್ನ ಪದವೀವ
ದುರುಳನಾದೆನು ಮೊದಲೇ ಭಜಿಸದೆ
ಮರುಳನಾದೆನು ಘನವನರಿಯದೆ
ಹರಹರಾ ಇಂತಪ್ಪ ದಯನಿಧಿ ಎಂದಿಗೊಲಿದಪನೋ ೨

ಬಿದಿರಿದುದಕಕೆ ಹರಿದ ಎಸಳಿಗೆ
ಪದಪಿನಿಂದಲಿ ಇಂದ್ರಪದವಿಯ-
ನೊದಗಿಸಿಯೆ ತಾನವರಿಗಿತ್ತನು ಮುಗ್ಧೆಯನ್ನಾಳ್ದ
ಪದುಳದಿಂ ಪೂಜಿಸದೆ ಕೆಟ್ಟೆನು
ಮುದದಿ ಮುನ್ನವೆ ಹೊಗಳದಾದೆನು
ಸದಮಲಾತ್ಮಕನಾದ ದಯನಿಧಿ ಎಂದಿಗೊಲಿದಪನೋ ೩

ಸಟೆಗಳಿಂದಲಿ ಪೂಜಿಸಲು ತಾ
ದಿಟಗಳಿಂದಲಿ ಪೂಜಿಸಲು ತಾ-
ನಟಮಟ ವ್ಯಾಪಾರದಿಂದಲಿ ಪೂಜಿಸಲು ಬಳಿಕ
ಕುಟಿಲದಿಂದಲಿ ಪೂಜಿಸಿದೊಡಂ
ನಿಟಿಲನೇತ್ರನು ತನ್ನ ಪದವಿಯ
ಘಟಿಸಿ ಕೊಡುವಿಂತಿಪ್ಪ ದಯನಿಧಿ ಎಂದಿಗೊಲಿದಪನೋ ೪

ದುರುಳನಾದೆನು ಮೊದಲೆ ಭಜಿಸದೆ
ಮರುಳನಾದೆನು ಘನವನರಿಯದೆ
ಹರಹರಾ ಇಂತಪ್ಪ ಹರನೇ ನಿಮ್ಮನೊಲಿಸಿ ಹರ
ಚರಣರಕ್ಷೆಗೆ ಸರಿಯನಾಹೆನೆ
ಬಿರುದು ನಿಂದೆನಗಿಲ್ಲ ಕೊರತೆಯು
ಬಿರುದಿನ ಷಡಕ್ಷರಿಯ ಲಿಂಗವೆ ಒಲಿದು ಕೃಪೆಯಾಗು ೫

ನರ ಕೂರಂಬಿನಲ್ಲೆಚ್ಚವಂಗೊಲಿದೆಯಯ್ಯ! ಅರಳಂಬಿನಲ್ಲೆಚ್ಚ ಕಾಮನನುರುಹಿದೆ! ಇರುಳು ಹಗಲೆನ್ನದೆ ಪ್ರಾಣಘಾತವ ಮಾಡಿದ ಬೇಡನ ಕೈಲಾಸಕ್ಕೊಯ್ದೆಯಯ್ಯ! ಎನ್ನನೇತಕ್ಕೊಲ್ಲೆ ಕೂಡಲಸಂಗಮದೇವಾ! -ಬಸವಣ್ಣನವರು

❖❖

ಲಿಂಗವು ಇರಲು ಶಿವ

ಆವ ಪರಿಯಲಿ ತಿಳಿಯಬಾರದು
ದೇವ ನಿಮ್ಮಯ ಶರಣರಿರವನು
ಭಾವದೊಳು ನಾ ತಿಳಿವೆ ಲಿಂಗವು ಇರಲು ಶಿವನೆಂದು ॥ಪ॥

ಧಾರುಣಿಯೊಳಾ ಉದ್ಭಟಯ್ಯನು
ಚೇರಮಾಂಕನು ಚೋಳರಾಯನು
ಮಾರವೈರಿಯ ಬೆರಸಲಿಲ್ಲವೆ ಅವರ ಪರಿಯಂತೆ
ಧಾರುಣಿಯ ಪಾಲಿಸುತ ಗುಪ್ತ ಉ-
ದಾರ ಭಕ್ತಿಯ ಮಾಡುತಿಹರೋ
ಆರು ಬಲ್ಲರು ನಿಮ್ಮ ಶರಣರ ತಿಳಿಯಲೆಂತಹುದೋ ೧

ಬಸವರಾಜನು ಚೊಕ್ಕನೈನಾ-
ರಸಮಕೇಶಿಯರಾಜರಿವರುಗ-
ಳೊಸೆದು ಶಿವನೊಳು ಬೆರೆದರಲ್ಲದೆ ಅವರ ಪರಿಯಂತೆ
ವಸುಧೆಯೊಳು ಮಂತ್ರಪ್ರಭಾವದಿ
ಎಸೆವ ಶಿವನೊಳು ಗುಪ್ತ ಭಕ್ತಿಯ
ಬೆಸಗೆಯೊಳಗಿರುತಿಹರು ಶರಣರ ತಿಳಿಯಲೆಂತಹುದೋ ೨

ಧಾರುಣಿಯೊಳಾ ಮಲುಹಣಯ್ಯನು-
ದಾರ ಸೌಂದರ ಪುಂಡ ಜಂಗಮ
ವಾರವಧುಗಳ ಬೆರಸಲಿಲ್ಲವೆ ಅವರ ಪರಿಯಂತೆ
ಆರು ಬಲ್ಲರು ವಿಟರ ತೆರದಿಂ
ಮಾರವೈರಿಯ ಗುಪ್ತ ಭಕ್ತಿಯ-
ನಾರ ಪರಿಯಲಿ ಮಾಡುತಿಹರೋ ತಿಳಿಯಲೆಂತಹುದೋ ೩

ಮೇದಿನಿಯೊಳಾ ಮಲ್ಲಶೆಟ್ಟಿಯು
ಆದಿಮಯ್ಯನು ಶಂಕರೇಶನು
ಸಾಧಿಸುತ್ತಲೆ ವ್ಯವಹರಂಗಳಲಿರ್ದರವರಂತೆ
ಆದಿವಿಡಿದೊಂದುದ್ಯಮಂಗಳ
ಲಾದಿ ಲಿಂಗದ ಗುಪ್ತ ಭಕ್ತಿಯ
ವೇದಿಸಿಹರೋ ನಿಮ್ಮ ಶರಣರು ತಿಳಿಯಲೆಂತಹುದೋ ೪

ಪೊಡವಿಯೊಳಗೆಲ್ಲರರಿವ ತೆರದಿಂ
ಮಡಿವಳನು ಯಂಕಾಳಿಗಳು ಪುಲಿ–
ಯುಡುಪರೆಂಬರು ದುಪಟಿ ತೊಳೆವುತಲಿರ್ದರವರಂತೆ
ಮಡಿಯ ಮಾಡುತ ಭಕ್ತವಸ್ತ್ರವು
ಅಡಗಿ ಶಿವನ್ನೊಳು ಗುಪ್ತ ಭಕ್ತಿಯ
ನಡೆಸುತಿಹರೋ ನಿಮ್ಮ ಶರಣರು ತಿಳಿಯಲೆಂತಹುದೋ ೫

ಧಾರುಣಿಯೊಳಾ ಅಮುಗಿದೇವನು–
ದಾರ ಜೇಡರ ದಾಸನತಿ ಸಂ–
ಸಾರದೊಳಗಿರುತಿರ್ದುದಿಲ್ಲವೆ ಅವರ ಪರಿಯಂತೆ
ಆರು ಬಲ್ಲರು ಶರಣನು ಸಂ–
ಸಾರವನು ಮರೆಗೊಂಡು ಗುಪ್ತದಿ
ಮಾರವೈರಿಯ ಬೆರಸುತಿಹರೋ ತಿಳಿಯಲೆಂತಹುದೋ ೬

ಇಲ್ಲಿ ಚನ್ನಯ್ಯಗಳು ಲದ್ದೆಯ
ಹುಲ್ಲು ಸೋಮಯ್ಯಗಳು ಬಡತನ–
ದಲ್ಲಿ ಶಿವನೊಳು ಬೆರಸಲಿಲ್ಲವೆ ಅವರ ಪರಿಯಂತೆ
ಹುಲ್ಲು ಮಾರುತ ಬಡವರಂದದಿ
ಖುಲ್ಲ ಮಾನವರರಿಯದಾ ಶಿವ
ನಲ್ಲಿ ಗುಪ್ತದಿ ಬೆರಸುತಿಹರೋ ತಿಳಿಯಲೆಂತಹುದೋ ೭

ಕುರಿಯ ಕಾಯುತ ಗೊಲ್ಲಳಯ್ಯನು
ತರುವ ಕಾಯುವ ಚಂಡಿದೇವನು
ಪರಮ ತಿರುಮೂಲಯ್ಯಗಳು ಇರುತಿರ್ದರವರಂತೆ
ಕುರಿಯ ತುರುವಂ ಕಾಯ್ದು ಗುಪ್ತದಿ
ಹರನ ಭಕ್ತಿಯ ಮಾಡುತಿಹರೋ
ಶರಣರಿರವನು ನರರ ಭಾವದಿ ತಿಳಿಯಲೆಂತಹುದೋ ೮

ಉದಿಸಿ ಧರೆಯೊಳು ಹಲವು ಪರಿಯಲಿ
ಹುದುಗಿ ಲಿಂಗದಿ ಗುಪ್ತ ಭಕ್ತಿಯ
ಪದುಳದಿಂದಲಿ ಮಾಡುತಿಹರೋ ತಿಳಿಯಲೆಂತಹುದು
ಅದರ ದೆಸೆಯಿಂದರಿಯಬಾರದು

ಸದಮಲಾತ್ಮಕ ಲಿಂಗವಂತರ
ಮುದದಿ ಶಿವಷಡಕ್ಷರಿಯ ವರ ನೀನೆಂಬೆನದರಿಂದ ೬

❖❖

ಕರುಣಿ ಎಂತಹನು

ಕರುಣವಾರಿಧಿ ಶಿವನು ಎನುತಲಿ
ಅರಿದ ಮರುಳರು ಕವಿಗಳೆಂಬರು
ಬರಿಯ ತರಕಟ ಕಾಡುವಾತನು ಕರುಣಿ ಎಂತಹನು ॥ಪ॥

ಆದಿಯ್ಯೆಯನು ಜೈನರುಗಳಾ
ವಾದಕೋಸುಗ ಕರೆಯ ಬರುತಿರೆ
ಹಾದಿಯೊಳಗಂ ಕಾಡಿದಾತನು ಅಂತುಮಲ್ಲದಲೆ
ಮಾದಿರಾಜನ ಅರಸಿ ಬರುತಿರೆ
ಭೇದಿಸದೆಯುರೆ ಕಾಡಿದಾತನು
ಮಾಧವೋದ್ಭವವೈರಿಯೀತನು ಕರುಣಿ ಎಂತಹನು ೧

ಭೂಮಿಯೊಳಗತಿ ಚೋದ್ಯ ಮೈದುನ
ರಾಮ ತಂದೆಯ ಕರೆಯ ಬರುತಿರೆ
ಆ ಮಹಾತ್ಮನ ಕಾಡಿದಾತನು ಅಂತುಮಲ್ಲದಲೆ
ಪ್ರೇಮ ತನ್ನೊಳಗಿರ್ದ ನೃಪಸತಿ
ಕಾಮದೇವನ ಬಳಿಯ ನಂಬಿಯ
ನಾಮವನು ನೆನೆವುತಲಿ ಕಾಡಿದ ಕರುಣಿ ಎಂತಹನು ೨

ಕ್ಷಿತಿಗೆ ಮೆರೆವಾ ಕಾಂಚಿಪುರದಲಿ
ಪತಿವ್ರತಾಮಣಿ ಚಂಗಳವ್ವನ
ಸುತನ ಕೊಲಿಸಿದ ಮರುಕವಿಲ್ಲದೆ ಅಂತುಮಲ್ಲದಲೆ
ಸುತನನೊರ್ವನ ಪಿಡಿದು ಬಡತನ
ಯುತದಿ ಬಾಳುವ ನಂಬಿಯಕ್ಕನ
ಕೃತಕದಿಂದಲಿ ಮಗನ ಕೊಲಿಸಿದ ಕರುಣಿ ಎಂತಹನು ೩

ಕೋಳೂರೊಳಗೆಲ್ಲವರ ತೆರದಿಂ
ಹಾಲ ಸವಿಸಲು ತಂದು ಮುಗ್ಧಾ

ಬಾಲೆಯನು ತರಕಟವ ಕಾಡಿದನಂತುಮಲ್ಲದಲೆ
ನೀಲಕಂಠಯ್ಯಗಳು ಆಣೆಗೆ
ಬಾಲೆಯೊಳು ಮಾತಾಡದಿರುತಿರೆ
ಬಾಳವಾಗಿಯ್ಯೆ ಕಾಡಿದಾತನು ಕರುಣಿ ಎಂತಹನು ೪

ಮಡದಿ ಪುರುಷರು ನುಡಿಯದಿರ್ದೊಡೆ
ಜಡಿದು ಜರಿದರೆ ಕೋಪಮಪ್ಪುದೆ
ಕಡೆಗೆ ಪುರುಷರಿಗದರ ಹೋಲುವೆಯಂತೆ ನಾನಿನ್ನ
ಬಿಡದೆ ಬಣ್ಣಿಸಿ ಪಾಡುತಿರೆ ಎ–
ನ್ನೊಡನೆ ನುಡಿಯದೆಯಿರಲು ಜರಿದೆನು
ಮೃಡ ಷಡಕ್ಷರವರನೆ ಕೋಪವು ಬೇಡಯೆನ್ನೊಡನೆ ೫

ದೇವನೊಳ್ಳಿದನೆಂದು ಮುಯ್ಯಾನಲು ಬೇಡ. ತರಕಟ ಕಾಡಿಹನೊಳ್ಳಿದನೆ? ಅಳಿಸುವ ನಗಿಸುವನೊಳ್ಳಿದನೆ? ಬೆಚ್ಚದೆ ಬೆದರದೆ ತೊತ್ತುತನವ ಮಾಡಲು ತನ್ನನೀವ ಕೂಡಲಸಂಗಮದೇವ.

– **ಬಸವಣ್ಣನವರು**

❖❖

ನರರಿಗೆಂತಹುದು

ಒಲಿದ ಲಲನೆಯನಗಲುವದು ತಾ
ಒಲಿದು ಲಿಂಗದಿ ಮನವನಿಟ್ಟರೆ
ಚಲಿಸದು ಶಿವನಂಶಕಲ್ಲದೆ ನರರಿಗೆಂತಹುದು ॥ಪ॥

ಮುನಿದ ನಲ್ಲಗೆ ಲಲ್ಲೆಗರದತಿ
ವಿನಯದಿಂದಲಿ ತೋರಿ ಕುಚವನು
ಇನಿಯನೆದೆಯೊಳು ಸಾರ್ಚಿಯಧರವ ಜಿಹ್ವೆಯೊಳಗಿರಿಸಿ
ಮುನಿಸು ತಿಳಿಯದಡೆನ್ನ ಕೊಲ್ಲೆಂ–
ದೆನುತ ಮುದ್ದಿಸಿ ದೈನ್ಯಗರೆವಳ
ಮನದಿ ನೆನೆಯದೆ ಇರ್ಪುದದು ತಾ ನರರಿಗೆಂತಹುದು ೧

ಒಲಿದ ಪುರುಷನ ವಿನಯದಿಂದಲಿ
ಎಳೆದು ಮಂಚದ ಮೇಲೆ ಮಲಗಿಸಿ
ಬಲಹಿನಿಂ ತಾಂಬೂಲ ಗುಟುಕನು ಕೊಟ್ಟು ಬಿಗಿದಪ್ಪಿ

ನಲಿದು ಅಧರವ ಸವಿದು ಸೊಗಸಿಂ
ತಳಪುಗಂಗಳ ಮುಚ್ಚಿ ತೆರೆವಳ
ನುಳಿವುದುದು ಶಿವನಂಶಕಲ್ಲದೆ ನರರಿಗೆಂತಹುದು ೨

ಕುರುಳು ಕುಣಿವುತ ಮುತ್ತಿನೋಲೆಯ
ಮಿರುಗು ಹೊಳೆವುತ ಕೊರಳ ಮುತ್ತಿನ
ಸರವು ಕಲಕುತ ತೊಟ್ಟ ಕುಚಯುಗವದರುತಿರೆ ಬಳಿಕ
ಸೆರಗಿನಿಂದಲಿ ಬೆಮತ ನಲ್ಲನ
ಒರಸಿ ಮುಖವನು ಮರಳಿ ನೆರೆವಳ
ತೊರೆವುದದು ಶಿವನಂಶಕಲ್ಲದೆ ನರರಿಗೆಂತಹುದು ೩

ಸುರತದಂತ್ಯದಿ ಬಳಲಿದಾತನ
ನೊರಗಿಸುತ ಕುಚಯುಗದ ಮಧ್ಯದಿ
ಪರವಶದಿ ಮರೆದಿರುವ ಚಲುವೆಯ ಸೊಗಸನಗಲುವರೆ
ಪರಕೆ ಪರತರ ಶಿವಷಡಕ್ಷರ
ಪರಮಲಿಂಗದಿ ಮನವು ಸಿಲ್ಕಿರೆ
ಹೊರಗೆ ಮರೆದಿಹ ಶರಣಗಲ್ಲದೆ ನರರಿಗೆಂತಹುದು ೪

ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯ, ಕಂಗಳಲೊಬ್ಬನ ಕರೆವಳು, ಮನದಲೊಬ್ಬನ ನೆನೆವಳು. ಕೂಡಲಸಂಗಮದೇವಯ್ಯ ಕೇಳಯ್ಯ ಮಾನಿಸಗಳ್ಳಿಯ ನಂಬದಿರಯ್ಯ

–ಬಸವಣ್ಣನವರು

❖❖

ಎಂದಿಗಹುದೊ

ಎಂದಿಗಹುದೋ ನಿಮ್ಮ ನೆನೆವುದು
ಎಂದಿಗಹುದೋ ನಿಮ್ಮ ನಿಜವದು
ಎಂದಿಗಹುದೋ ನಿಮ್ಮ ಪೂಜೆಯ ಮಾಡುವಾ ಸುಖವು ॥ಪ॥

ಕಂಡ ಬಳಿಯಲಿ ನದಿಯು ಕೊಳಗಳು
ಕಂಡ ಬಳಿಯಲಿ ಪತ್ರ ಪುಷ್ಪವು
ಕಂಡ ಬಳಿಯಲಿ ನಿಮ್ಮ ಪೂಜೆಯ ಮಾಡಲೊಲ್ಲದೆಯೆ
ಕಂಡ ಕಂಡೂರುಗಳ ತಿರುಗುತ

ಕಂಡ ಕಂಡರ ಮನೆಗೆ ಹೊಕ್ಕರೆ
ತುಂಡುಮೂಳನು ಆಗಿ ಸುಮ್ಮನೆ ಕೆಟ್ಟೆನಕಟಕಟ ೧

ಶೂಲಪಾಣಿಯ ಚರಣಯುಗವನು
ಲೀಲೆಯಿಂದಲಿ ನೆನೆದು ನೆನೆದೂ
ಕಾಲ ಕರ್ಮಂಗಳನು ಗೆಲ್ಲುತ ಮುಕ್ತಿ ಪಡೆಯದೆಯೆ
ಹೇಲನರಸುತ ತಿರುಗುತಿರ್ಪಾ
ಮೂಳ ಹಂದಿಯ ತೆರದಿ ತ್ರೈವಿಧ
ಹೇಳನದ ಹುಚ್ಚಿಂದ ನಿಮ್ಮನು ಮರೆತೆನಕಟಕಟ ೨

ಎಳೆಯ ಚಂದಿರಧರನಿಗೊಲಿದು
ಎಳಸದನ್ಯನ ಸುಖವನಂಗವು
ಕಳೆಗಳರಿಯುತ ನಿತ್ಯ ಸುಖವನು ಪಡೆಯಲೊಲ್ಲದಲೆ
ಎಲವು ನರಗಳ ತೊಗಲು ಪೊದೆದಿಹ
ಹಳೆಯ ತೊಗಲನು ಪೊತ್ತು ನಾ ನೆರೆ
ಹೊಲೆಯನಂತಿರೆ ಮರೆದು ನಿನ್ನನು ಕೆಟ್ಟೆನಕಟಕಟ ೩

ಸತ್ಯಗುರುಗಳ ಕೂಡಲಾಡುತ
ನಿತ್ಯ ಶಿವನನು ಭಜಿಸಿ ನುತಿಸುತ
ಮರ್ತ್ಯದಾರ್ತಿಯು ಬಾರದಂತದು ಮಾಡಿಕೊಳ್ಳದಲೆ
ವ್ಯರ್ಥವಾಗಿಯೇ ಕೆಡುವ ಹೆಣ್ಣಲಿ
ಚಿತ್ತ ಕೆಡಿಸುತಲಧರ ಕಚ್ಚುವ
ಕತ್ತೆ ಹೊಲೆಯನದಾಗಿ ನಿಮ್ಮನು ಮರೆದೆನಕಟಕಟ ೪

ಸೃಷ್ಟಿಯೊಳಗೇ ಉದಿಸಿ ನಾನತಿ
ಶ್ರೇಷ್ಠನಲ್ಲವು ಹಿರಿಯರೊಳಗೂ
ನಿಷ್ಠೆಯಿಲ್ಲವು ಲಿಂಗದಲ್ಲಿಯು ಬ್ರಹ್ಮ ನಾನಲ್ಲ
ಕಷ್ಟತನವನು ಮರೆಸಿ ನಿಮ್ಮಯ
ನಿಷ್ಠೆ ನಿಜವೊಲಿದಿತ್ತು ಕರುಣೆಯ
ದೃಷ್ಟಿಯಲಿ ನೋಡೈ ಷಡಕ್ಷರಿ ಲಿಂಗವೇ ಎನ್ನ ೫

ಎಂದೋ ಸಂಸಾರ ದಂದುಗ ಹಿಂಗುವದು? ಎಂದೋ ಮನದಲ್ಲಿ ಪರಿಣಾಮ ವಹುದೆನಗೆಂದೋ? ಎಂದೋ ಕೂಡಲಸಂಗಮದೇವ ಇನ್ನೆಂದೋ ಪರಮ ಸಂತೋಷದಲ್ಲಿ ಹುದೆನಗೆಂದೋ? – **ಬಸವಣ್ಣನವರು**

❖❖

ಒಡಲು ಹಿಡಿದ ಜಡನು ನಾನು

ಒಡಲು ಹಿಡಿದಿಹ ಜಡನು ನಾನೈ
ಒಡಲು ಇಲ್ಲದ ಅಜಡ ನೀನೈ
ಒಡೆಯ ನೀನೇ ಒಲಿಸದನಕಾ ಒಲಿಸಲಾಪುವೆನೇ ॥ಪ॥

ಹೆಳವ ಮರದಾ ತುದಿಯೊಳಿರ್ದಾ
ಫಲವ ಬಯಸಿಯೇ ಬಳಲುವಂದದಿ
ಚಲುವ ಹೆಣ್ಣನು ಅಧಮ ಬಯಸುತ ಬಳುವಂದದಲಿ
ಎಳೆಯ ಚಂದಿರಧರನ ಸುಖವನು
ಎಳಸಲಹುದೇ ಎನಗೆ ಶಿವನೀ
ನೊಲಿದ ನಿಮ್ಮಯ ಕರಣವೆನ್ನೊಳಗಾಗದಿರದನಕ ೧

ದಾಸಿಯರಸನ ಬಯಸಿ ಶರಗನು
ಓಸರಿಸುವಂದದಲಿ ಮುಂದದು
ಘೋಷ ಗಂಟೆಯು ಜಾವವನು ತಾ ಬಯಸುವಂದದಲಿ
ಈಶ ನಿಮ್ಮಯ ನಿತ್ಯ ಸುಖವನು
ಹೇಸಿ ಮನುಜನು ತನಗೆ ಬಹು ದಿನ
ಆಸರಿಸದೇ ನಿನ್ನ ನೀನೇ ಒಲಿಯದಿರದನಕ ೨

ಒಡೆದು ಹೋದಾ ಪ್ರತುಮೆ ಚಲುವಾ
ಗುಡಿಯ ಬಯಸುವ ತೆರದಿ ಬಹುತರ
ಬಡವನಾ ಧನ ಬರಿದೆ ಬಯಸಿಯೆ ಬಳಲುವಂದದಲಿ
ಒಡೆಯ ನಿಮ್ಮಯ ನಿತ್ಯ ಸುಖವನು
ಬಡವನಾ ನೆರೆ ಬಯಸಬಹುದೇ
ಬಿಡದೆ ನೀನೆ ಕರುಣಿಯೆನ್ನೊಳಗಾಗದಿರದನಕ ೩

ಬಾಳದೊತ್ತದು ಕನಕ ಚಿತ್ರದ
ಶಾಲೆಗಳ ತಾ ಬಯಸುವಂದದಿ
ಆಳು ಅಂದಣವನ್ನು ಏರಲು ಬಯಸುವಂದದಲಿ
ಶೂಲಧರ ನಾ ನಿಮ್ಮ ಸುಖವನು
ಕಾಲ ಬಡವನು ಬಯಸಬಹುದೇ
ಲೀಲೆಯಿಂದಲೆ ನಿನ್ನ ನೀನೇ ಒಲಿಯದಿರದನಕ ೪

ಒಡಲನಿತ್ತೂ ಸುತರನಿತ್ತೂ
ಮಡದಿ ಧನವನು ಧರಣಿಯಿತ್ತು
ಪಡೆದರ್ಡೈಸೇ ಶಿವನ ಸುಖವನು ಬರಿದೆ ಬಪ್ಪುದೆ ತಾ
ಒಡೆಯನಹ ಷಡಕ್ಷರಿಯ ಲಿಂಗವು
ಬಡವನಿವನೂ ಎಂದು ಬಿಡದೇ
ಒಡನೆ ಕರುಣೆಯದಾಗದನಕಾ ಎನ್ನೊಳಪ್ಪುವುದೋ ೫

ಲೇಸ ಕಂಡು ಮನ ಬಯಸಿ ಬಯಸಿ ಆಸೆ ಮಾಡಿದಡಿಲ್ಲ ಕಂಡಯ್ಯ, ತಾಳ ಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯ. ಕೂಡಲಸಂಗಮದೇವ ಕೇಳಯ್ಯ ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯ. –ಬಸವಣ್ಣನವರು

❖❖

ಎಂದಿಗೆ ದೊರಕುವದು

ರಾಗ : ಗುಂಡಕ್ರಿ

ಎಂದಿಗೆ ದೊರಕುವದನವರತಭವನಾ–
ನಂದದಿ ಪೂಜಿಪ ಪರಸೌಖ್ಯವು ತಾ
ಸಂದು ಸುಖಾರ್ಣವತೆರೆಯೊಳಗಿಪ್ಪುದು ಎಂದಿಗೆ ದೊರಕುವುದು ॥ಪ॥

ಕಾಡುವ ಮಾಯೆಯ ಜಾಡಿಸ ಭವವ ವಿ–
ಭಾಡಿಸಿ ಕಾಲನನೇಡಿಸಿ ಕಾಮನ–
ನೋಡಿಸಿ ಮರವೆಯ ಕಾಡಿಗೆ ವಹ್ನಿಯ ಪರಿವೇಷ್ಟಿಸಿ ಬಳಿಕ
ನೋಡುತ ಲಿಂಗವ ಮೂಡುತ ಗದ್ಗದ
ಪಾಡುತ ಸುಖಜಲವಾಡುತ ನೇತ್ರದಿ
ಬೇಡುತ ಭಕ್ತಿಯ ಕೂಡುವ ಶಿವಸುಖವೆಂದಿಗೆ ದೊರಕುವದು ೧

ಕೆರೆ ತೊರೆ ಮಡು ಡೋಣಿ ಪರವಾ ನಿರ್ಝರ
ಗಿರಿ ಗುಹೆ ವನಲತೆ ಪರ್ಬಿದ ಕಾನನ
ಸುರರುಹ ಕೊಳದೊಳು ಧುಮುಕುವ ನದಿತಟದೊಳು ಶಶಿ ಶಿಲೆಯೊಳಗೆ
ಅರೆಯೊಳು ಪುಳಿನ ಸ್ಥಳದೊಳು ನಿರ್ಮಳ
ಪರಮ ಸುಖಸ್ಥಳದೊಳು ಘನಲಿಂಗಕೆ
ಹರುಷದಿ ಪೂಜೆಯ ಮಾಡುವ ಶಿವಸುಖವೆಂದಿಗೆ ದೊರಕುವದು ೨

ಶಶಿಕಾಂತದ ಶಿಲೆಯಿಂದಲಿ ರಚಿಸಿದ
ಮಿಸುಪಾ ಕೊಳದೊಳು ಚಂದ್ರನ ಕಿರಣದ
ಪಸರದ ಜಲದೊಳು ಕುಂಕುಮ ಚಂದನ ಕರ್ಪುರಮಂ ಕದಡಿ
ಬಿಸರುಹದಳದಿಂದರ್ಘ್ಯಮ ನೀಡುವ
ಬಿಸರುಹಗಳೊಳುಂ ಮೂರ್ತವ ಮಾಡಿಸಿ
ಶಶಿಕಳೆಧರನಂ ಪೂಜಿಪ ಶಿವಸುಖವೆಂದಿಗೆ ದೊರಕುವದು. ೩

ಒಪ್ಪುವ ಲಿಂಗದ ಮೊಗದೊಳು ಮೊಗಮಿ–
ಟ್ಟೊಪ್ಪುತ ಗಲ್ಲದೆ ಬೆಮರುವ ಜಲದಿಂ–
ದೊಪ್ಪನೆ ನೆನೆವುತ ನಟ್ಟಾಲಿಗಳಂ ಚಲಿಸದೆ ದೃಢದಿಂದ
ಒಪ್ಪುವ ನಿಟ್ಟಿರೋ ಲಿಂಗವನಾವಗ
ತಪ್ಪದೆ ಚಿತ್ರಿಸಿ ಬರೆದರೋಯೆಂಬು–
ತಿಪ್ಪಾ ಪರವಶನಂದದ ನಿಜಸುಖವೆಂದಿಗೆ ದೊರಕುವದು ೪

ಕಮಲಪರಾಗದ ಪೀಠವನಿಕ್ಕಿಸಿ
ಕಮಲದ ಸತ್ತಿಗೆಗಳ ಬಳಸುತ ತ–
ತ್ಕಮಲದ ಪತ್ರದ ಬೀಸಣಿಗೆಗಳನು ಬೀಸುತ ಹರುಷದಲಿ
ಕಮಲದ ಕರ್ಣಿಕ ದರ್ಪಣದಿಂದಲಿ
ಕುಮುದದ ಘಂಟೆಯ ನುಡಿಸುತ ಪೂಜಿಪ
ವಿಮಲ ಷಡಕ್ಷರಿ ಲಿಂಗದ ನಿಜಸುಖವೆಂದಿಗೆ ದೊರಕುವದು ೫

ಅಂಗೈಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿ ವರಿಯುತ್ತ ಸುರಿವುತ್ತ ಎಂದಿಪ್ಪೆನೋ! ನೋಟವೇ ಪ್ರಾಣವಾಗಿ ಎಂದಿಪ್ಪೆನೊ! ಕೂಟವೇ ಪ್ರಾಣವಾಗಿ ಎಂದಿಪ್ಪೆನೋ! ಎನ್ನ ಅಂಗ ವಿಕಾರದ ಸಂಗವಳಿದು ಕೂಡಲಸಂಗಯ್ಯ ಲಿಂಗ ಲಿಂಗವೆನ್ನುತ್ತ! – **ಬಸವಣ್ಣನವರು**

❖❖

ಏತರ ಭಯವೆಮಗೆ

ರಾಗ : ಘೂರ್ಜರಿ

ಕಂಗೆಡಲೇತಕೆ ಕಳವಳಿಸಿಯೆ ನಾ–
ನಂಗಜ ಮಾಯೆಯ ಮನದಬ್ಬರಕಂ
ಲಿಂಗದ ಸೂತ್ರವ ಕರದಲಿ ಪಿಡಿದಿರಲೇತರ ಭಯವೆಮಗೆ ॥ಪ॥

ಅಂಧಕನಿಗೆ ಸತ್ಪಥವನು ತೋರುವ
ಚಂದದಿ ಮೂಕಗೆ ಮಾತುಂ ಜೀವಿತ–
ಸಿಂಧುವಿನೊಳಗಣ ಹೊಳ್ಳನು ತಪ್ಪಿಸಿ ಪಥವನು ತೋರ್ಪಂತೆ
ಹಿಂದಣ ವಾಸನೆಯನು ಪರಿಹರಿಸುವ
ಮುಂದಣ ಸದ್ಗತಿಯನು ತೋರುವ ಘನ
ಸಂದಪುರಾತರ ವಚನಗಳಿರುತಿರೆ ಏತರ ಭಯವೆಮಗೆ ೧

ವರಸಂಜೀವನದೌಷಧವಿರುತಿರೆ
ಮರಣದ ಭೀತಿಗೆ ಅಂಜಲದೇತಕೆ
ವರುಷದ ಖಣಿ ತಾ ಮನೆಯೊಳಗಿರುತಿರೆ ಬಡತನಕಂಜುವರೇ
ಶರಣರ ನಿಧಿಯೆಂದೆನಿಸುವ ಪಂಚಾ–
ಕ್ಷರಿ ಜಿಹ್ವಾಗ್ರದ ಕೊನೆಯೊಳಗಿರುತಿರೆ
ದುರಿತಕ್ಕಂಜುವರೇ ಬಡ ಮನವೇ ನಂಬಿರು ಭಯಬೇಡ ೨

ಅಮೃತಾಂಬುಧಿಯಿರೆ ಹಸಿವಿನ ಭಯವೇ
ದ್ಯುಮಣಿಯು ತಾನಿರೆ ತಿಮಿರದ ಭಯವೇ
ಹಿಮಭಯವೇತಕೆ ತಾನಗ್ನಿಯ ಸನ್ನಿಧಿಯಲಿ ಮೂರ್ತವ ಮಾಡಿ
ಕ್ರಮಗೆಡಲೇತಕೆ ಚಿದ್ಘನ ಮೂರುತಿ
ಅಮಲ ನಿರಾಮಯ ನಿರ್ಗುಣ ನಿಷ್ಕಲ
ಅಮಮ ಷಡಕ್ಷರಿ ಲಿಂಗವು ಇರುತಿರಲೇತರ ಭಯ ನಮಗೆ ೩

ಸ್ವಯಂ ಲಿಂಗಾನುಭಾವ ತನಗೆ ದೊರಕೊಂಡ ಬಳಿಕ ದೇವಲೋಕವೆಂಬುದೇನೋ ಮರ್ತ್ಯಲೋಕವೆಂಬುದೇನೋ? ಆವುದರಲ್ಲಿಯೂ ಭೇದವೇನಯ್ಯ? ಕೂಡಲಸಂಗಮದೇವ ಬಳಿಕ ಆಲಸ್ಯ ಉಂಟೆ?–**ಬಸವಣ್ಣನವರು**

❖❖

ಶಿವಯೋಗದೊಳೆಂದಿಹೆನೋ

ರಾಗ : ಮಾಳವ ಗೌಳ

ಶಿವಲಿಂಗವ ಹೃತ್ಪಿಂಡದ ಮಧ್ಯದಿ
ತವೆ ಜಾನಿಸುತ ಪರವಶಾನಂದದಿ
ಭವಗಿರಿ ಪವಿಯೆಂದೆನಿಸುವ ಘನ ಶಿವಯೋಗದೊಳೆಂದಿಹೆನೋ ॥ಪ॥

ಪದಕಂ ಭಾವದ ಗುಡಿ ತೋರಣದಿಂ
ಮದಗಜ ಜಯದಿಂದೆಸೆವನಲತ್ವದಿ
ಮುದವೆಡೆಗೊಂಡಿಹ ಕರಚರಣ ಚತುಷ್ಟಯ ಮಂತ್ರದಿ ಕೂಡಿ
ಒದಗಿಸಿ ಬಹುಮುಖ ಚರಣ ಪದಾತಿಯ
ಪದುಳದಿ ಮಧ್ಯದ ತನುವಿನ ರಥದಿಂ
ಸದಮಳ ಲಿಂಗವ ಹರುಷದಿ ನಾನಿದಿರ್ಗೊಂಬುತಲೆಂದಿಹೆನೋ ೧

ಚಿನ್ನದ ನೆಲೆಯೊಳು ಬೆಳ್ಳಿಯ ಮೊರಡಿ ಸು
ರನ್ನದ ಗಿರಿಗಳಪ್ಪೆಜ್ಜೆಯ ಕೋಡುಗ-
ಳುನ್ನತ ನೀಲದ ಗುಂಡು ಪ್ರವಾಳದ ಲತೆ ವೈಡೂರ್ಯಗಳ
ಸನ್ನುತವೆಸೆವಾ ಹಸುರು ಮುತ್ತು ನಲ
ವಿನ್ನಿಸು ವಜ್ರದ ಅರಗಿಂದೊಪ್ಪುವ
ಹೃನ್ಮಂಡಲಚಿದ್ಭೂಮಿಯ ಮಧ್ಯದಿ ಲಿಂಗದೊಳೆಂದಿಹೆನೋ ೨

ಭೋಂಕನೇ ತೋರುವ ವಿದ್ಯುಲ್ಲತೆಯ ಶ
ಶಾಂಕನ ಭಾಸ್ಕರ ಶತಕೋಟಿಪ್ರಭೆ
ಧಿಂಕಿಡುತಂ ತಾ ಬೆಳಗುವ ಬ್ರಹ್ಮಸುರೇಂದ್ರರ ಮಧ್ಯದಲಿ
ಶಂಖದ ಘಂಟೆಯ ಜಾಗಟೆ ವಾಸುಕಿ
ಕಿಂಕಿಣಿ ಕಿನ್ನರಿ ವೀಣೆಯ ತೆರದಿಂ
ಝೇಂಕಾರಿಪ ಓಂಕಾರದ ಪ್ರಣವ ಸುನಾದದೊಳೆಂದಿಹೆನೋ ೩

ಕುಟಿಲದ ಮಾಯೆಯ ಹರಿಸಿ ತಮಸ್ಸಿನ
ಪಟಲಕೆ ಜ್ಞಾನದ ಜ್ಯೋತಿಯ ಬೆಳಗಿಸಿ
ಪಟುಗೊಳಿಸುತ ಮನಮಾರುತರಂ ತಾನೇಕವ ಮಾಡುತಲಿ
ಪುಟನೆಗೆದೂರ್ಧ್ವವನಡರಿಸಿಯಾತ್ಮನ

ನಿಟಿಲದ ಮಧ್ಯದ ತೇಜೋರಾಶಿಯ
ಮಠದೊಳು ಚಿನ್ಮಯಲಿಂಗದ ಸಮರಸಮೇಳದೊಳೆಂದಿಹೆನೋ ೪

ಕರುಣದ ಕಳ್ಕಳವಿಲ್ಲದ ಸುರರುಗ-
ಳರುವಿಗೆ ನಿಲುಕದ ಕಾರ್ತಿಕರುಗಳ
ಬರಿ ಕೋಟಲೆಗಳ ಹೋರಟೆಗೈದವ ಮುನಿಗಳ ಭಾವಕ್ಕೆ
ಅರಿಸದ ಶಾಸ್ತ್ರಕೆ ನಿಲುಕದ ವೇದಕೆ
ಕುರುಪಿಡಲರಿಯದೆ ಚರಿತನನಘಹರ
ಪರಮ ಷಡಕ್ಷರಿ ಲಿಂಗದ ನಿಜಸುಖಧ್ಯಾನದೊಳೆಂದಿಹೆನೋ ೫

❖❖

ಧ್ಯಾನದೊಳೆಂದಿಹೆನೋ

ರಾಗ : ಲಲಿತ

ತಾನೆಂದರಿಯದೆ ಇದಿರೆಂದರಿಯದೆ
ಏನೂ ಇಲ್ಲದೆ ಇರುತಿಹ ಶಿವ ತಾ-
ನಾನಂದದಿ ವರಮೂರುತಿಯಾದನ ಧ್ಯಾನದೊಳೆಂದಿಹೆನೋ ॥ಪ॥

ಘನಮಹಿಮನ ನೆನೆದಾಕ್ಷಣ ಮಾತ್ರದಿ
ಜನಿಯಿಸಿ ಗತಿಸುತಿರುವ ಬ್ರಹ್ಮಾಂಡಂ
ವನಜೋದ್ಭವ ವನಜಾಕ್ಷರು ಜನಿಸಲು ಕರೆದವರೊಲುವಿನಲಿ
ವನಜೋದ್ಭವ ನೀ ಸೃಜಿಯಿಸು ಲೋಕವ
ವನಜಾಕ್ಷನೇ ನೀ ರಕ್ಷಿಸು ಎನುತಲಿ
ಅನುವಿತ್ತವರಿಂ ವಂದಿಸಿಕೊಂಬನ ಧ್ಯಾನದೊಳೆಂದಿಹೆನೋ ೧

ತಪ್ತಸುಕಾಂಚನ ಪ್ರಭೆಗಳ ನೆಲದೊಳು
ದೀಪ್ತಿಸುತಿಹ ರತ್ನಂಗಳ ಕಂಬದಿ
ಒಪ್ಪುವದೊಂದೀ ವಜ್ರದ ತೊಲೆ ಲೋವೆಗಳಿಂದ ಚಲುವಾಗಿ
ತಪ್ಪದೆ ಬೆಳಗುವ ಓಲಗಶಾಲೆಯೊ-
ಳಿಪ್ಪಾ ಶಿವಗಣ ಚಕ್ರದ ಮಧ್ಯದಿ
ಸರ್ಪಾಭರಣವ ಧರಿಸಿದ ಚಲುವನ ಧ್ಯಾನದೊಳೆಂದಿಹೆನೋ ೨

ಜಗದಗಲದ ಶಶಿಕಾಂತದ ವೇದಿಕೆ
ಮುಗಿಲುದ್ದದ ಮಾಣಿಕ್ಯ ಕಂಬದಿ
ಬಿಗಿದಿಹ ನೀಲದ ತೊಲೆಗಳು ಒಪ್ಪುವ ಮಣಿಮಂಟಪದೊಳಗೆ
ಹಗಲಿರುಳೆನ್ನದೆ ತುಂಬಿಹ ಮುನಿಗಳು
ಉಘೆಯುಘೆ ಜಯ ಜಯ ಘೋಷದ ಮಧ್ಯದಿ
ಸೊಗಸುತ್ತಿರುತಿಹನಗಜೆಯ ರಮಣನ ಧ್ಯಾನದೊಳೆಂದಿಹೆನೋ ೩

ಹರಿಯಜ ಸುರದೇವೇಂದ್ರರ ಯಕ್ಷರ
ಗರುಡೋರಗ ಸುರಗಂಧರ್ವಾಸುರ
ವರ ಕಿನ್ನರ ಕಿಂಪುರುಷರ ಸಿದ್ಧರ ಸಾಧ್ಯರ ಯೋಗಿಗಳ
ಸುರುಚಿರ ವರಮಣಿಮುಕುಟದ ಬೆಳಗಿಂ
ತೆರಹಿಲ್ಲದ ಕಲಕಲರವದೋಲಗ-
ದಿರುವಿನ ಮಧ್ಯದೊಳೊಪ್ಪುವ ಪರಶಿವಧ್ಯಾನದೊಳೆಂದಿಹೆನೋ ೪

ಝಗಝಗಿಸುವ ಶಶಿಸೂರ್ಯರ ಬೆಳಗಿಂ
ಮಿಗೆ ದೇವರ್ಕಳ ಮುಕುಟದ ಬೆಳಗಿಂ
ಸೊಗಸೊಗಸುತಲಿಹ ರತ್ನದ ಓಲಗಶಾಲೆಯ ತೇಜದೊಳು
ಗಗನದ ಕಕುಭಂಗಳನುರೆ ತೀವಿದ
ಹಗಲಿರುಳೆನ್ನದೆ ಓಲಗದೊಳಗಿಹ
ನಗೆಮೊಗದಾ ಸುಷಡಕ್ಷರಲಿಂಗದ ಧ್ಯಾನದೊಳೆಂದಿಹೆನೋ ೫

❖❖

ಎನ್ನಪರಾಧವ ನೋಡದೆ ರಕ್ಷಿಸು

ರಾಗ : ದೇಶಾಕ್ಷಿ

ಎನ್ನಪರಾಧವ ನೋಡದೆ ರಕ್ಷಿಸು
ಪನ್ನಗಧರ ವರಮೂರ್ತಿ ಕೃಪಾಕರ
ಚನ್ನ ಷಡಕ್ಷರಿಲಿಂಗವೆ ಎನಗೊಲಿದೊಮ್ಮೆಗೆ ಕೃಪೆಯಾಗು ॥ಪ॥

ಖುಲ್ಲನು ಕ್ಷುದ್ರನು ಪರರಭಿಮಾನಕೆ
ಭುಲ್ಲವಿಸುವಖಿಲ ಕಪಟಾತ್ಮಕ ಬಹು
ಸುಳ್ಳನು ಕಳ್ಳರ ಮೇಳಾಪನು ಮನ ತಲ್ಲಣಿಸದೆ ಪಾಪ-

ವೆಲ್ಲನು ಮಾಡುವ ದುರ್ಜನ ದುರ್ಮುಖ-
ನಿಲ್ಲದೆ ಸತ್ಪುರುಷರ ನಿಂದಿಸುತಿಹ
ಖಲ್ಲಾತ್ಮಕನವಗುಣಗಳ ನೋಡದೆ ಒಮ್ಮಿಗೆ ಕೃಪೆಯಾಗು ೧

ಕನ್ಯಾರ್ಥವ ಪತಿಕರಿಸುವ ಭೂಮಿಯ
ಮನ್ನಣೆಯಳಿದಿಹ ದಾಸಿಯ ದುಷ್ಕಲ
ವೆನ್ನದೆ ವರ್ತಿಪ ಶಿಶ್ನಪರಾಯಣ ಕಾಮುಕನಜ್ಞಾನಿ
ಸನ್ನುತ ಗುರು ಚರ ವಾಕ್ಯವ ಮೀರಿಯೆ
ಭಿನ್ನವ ಮಾಡಿ ಶಿವಾಗಮ ಶಾಸ್ತ್ರಗ-
ಳೆನ್ನದೆ ಮುಂದಣ ಸದ್ಗತಿಯರಿಯೆನು ಒಮ್ಮಿಗೆ ಕೃಪೆಯಾಗು ೨

ಈಕ್ಷಿಸಲೊಲ್ಲದೆ ಲಿಂಗವ ವನಿತಾ
ವಕ್ಷೋಜಾನನ ಕಟಿ ಪೊರೆವಾರವ-
ನೀಕ್ಷಿಪಪೇಕ್ಷಾ ತಾಮಸದಿಂದತಿ ಮತಿ ಮಸಳಿಸಿತಡಗಿ
ಲಕ್ಷಿಸಲೊಲ್ಲದೆ ಹಿರಿಯರ ವಚನವ
ಭಕ್ಷಣೆಗೋಸುಗ ಡಂಭಕ ರೂಪನು
ಮೋಕ್ಷವನರಿಯದ ಗುಪ್ತದ್ರೋಹಿಗೆ ಒಮ್ಮಿಗೆ ಕೃಪೆಯಾಗು ೩

ಖೂಳನು ಪಾಪಿಷ್ಠನು ದುಷ್ಟರ ಭವಿ-
ಮೇಳನು ಹಿಂಸೆಗೆ ಹೆದರದೆ ಹಿರಿಯರ
ಝೂಳಿಸಿ ನುಡಿದಪಕೀರ್ತಿಯ ಒಡಲಿನ ಕಾಕು ವಿಚಾರನಿಗೆ
ಥಾಳಕತನದಲಿ ವಾಗ್ಜಾಲದೊಳತಿ
ಕಾಲನ ಬಾಧೆಗೆ ಬಿದ್ದು ಪುನರ್ಭವ-
ಮಾಲೆಯ ಕೊರಳಿಗೆ ತೊಡರಿಸಿಕೊಂಬನಿಗೊಮ್ಮಿಗೆ ಕೃಪೆಯಾಗು ೪

ಹೀನನು ಬಹುಮುಖ ಶಾಸ್ತ್ರ ಕಲಿತನು
ಜ್ಞಾನವ ಮಾನಿಗಳನು ಧಿಕ್ಕರಿಸುವ
ನಾನಾ ಕೃತ್ಯವನೆಸಗಿ ಗುರೂನ್ನತನಾಗದೆ ಭವಭವದ
ಕಾನನದೊಳು ಕಣ್ಗಾಣದೆ ತಿರುಗುವ
ವಾನರನಂತೆ ಪರಂತೆ ಪರಾಪರಮುಕ್ತಿಯ-
ನೇನೆಂದರಿಯದ ಬಹುಮುಖ ಜಡನಿಗೆ ಒಮ್ಮಿಗೆ ಕೃಪೆಯಾಗು ೫

ಸುರಪಶುವಿಗೆ ಗೊಡ್ಡಾವಿನ ಸಂಗವೆ
ಸುರತರುವಿದ್ದಂತೆಲುವದ ಮರನಂ

ವರಚಿಂತಾಮಣಿಯಿರುತಿರೆ ಗಾಜಿನ ಚಟಿಕೆಯ ಹಿಡಿವಂತೆ
ಹರಮಂತ್ರದ ಪಂಚಾಕ್ಷರಿಯಿರುತಿರೆ
ಪರಿಪರಿ ಕೃತಕದ ಮಂತ್ರವ ಬಯಸುತ
ನರರುಗಳಂದದಿ ನಿರಯಕೆ ಬೀಳ್ವನಿಗೊಮ್ಮಿಗೆ ಕೃಪೆಯಾಗು ೬

ಅವಗುಣಗಳನಿನ್ನಾರಿಗೆ ಹೇಳಲಿ
ತವೆ ಗುರು ವಾಕ್ಯವ ಮೀರಿದ ಕಾರಣ
ಶಿವನೊಲಿಯನು ಶಿವನೊಲಿಯದಿರಲು ಶಿವಶರಣರು ಒಲಿಯರಲಾ
ಭವ ಹೀಗಾದರೆಯೆಂದಿಗೆ ಬಿಡುವದು
ತವೆಯಾನಂದದಯಾಂಬುಧಿ ಭವಗಿರಿ-
ಪವಿಯೇ ರಕ್ಷಿಸು ಕೊರತೆಯದಾರಿಗೆ ಒಮ್ಮಿಗೆ ಕೃಪೆಯಾಗು ೭

ಹರ್ಷವರ್ಧನ ಮಹಾರಾಜನ ಕಾಲವು ಎಂದರೆ ಆರನೆಯ ಶತಮಾನವು ಭಾರತೀಯರ ಐತಿಹಾಸಿಕ ಯುಗದಲ್ಲಿ ಅತ್ಯಂತ ಅಭಿವೃದ್ಧಿಯ ಕಾಲವಾಗಿದ್ದಿತೆಂದು ಎಲ್ಲರೂ ಒಪ್ಪುತ್ತಿದ್ದಾರಷ್ಟೆ. ಆ ಕಾಲದಲ್ಲಿ ಮಗಧದೇಶದೊಳಗೆ ನಾಲಂದ ಎಂಬಲ್ಲಿ ಶ್ರೇಷ್ಠತರವಾದ ಒಂದು ವಿಶ್ವವಿದ್ಯಾಲಯವಿದ್ದಿತು. ಅದರಲ್ಲಿ ೧೦೦ ಜನ ಅಧ್ಯಾಪಕರು ಒಕ್ಕಲುತನ, ಹಳ್ಳಿಯ ಕೈಗಾರಿಕೆ, ವಿಜ್ಞಾನ, ತರ್ಕ, ಸಾಹಿತ್ಯ, ಆಯುರ್ವೇದ, ವೇದಾಂತ ಮೊದಲಾದ ಐಹಿಕ ಮತ್ತು ಪಾರಲೌಕಿಕ ಈ ಉಭಯ ವಿಷಯಗಳನ್ನು ಕಲಿಸುತ್ತಿದ್ದರು. ಇತ್ಸಿಂಗ್‌ನೆಂಬ ಚೀನದೇಶದ ಒಬ್ಬ ಯಾತ್ರಿಕನು ಈ ವಿದ್ಯಾಲಯದಲ್ಲಿ ಹತ್ತು ವರುಷ ಅಭ್ಯಾಸ ಮಾಡಿದ್ದನು. ಇದರ ಮೇಲಿಂದ ಈ ವಿದ್ಯಾಲಯಕ್ಕೆ ಪರದೇಶಗಳ ಪಂಡಿತರು ಕೂಡಾ ಅಧ್ಯಯನಕ್ಕೋಸ್ಕರ ಬರುತ್ತಿದ್ದರೆಂದು ವ್ಯಕ್ತವಾಗುತ್ತದೆ.

ಇದೇ ಕಾಲದಲ್ಲಿ ತಕ್ಷಶಿಲೆಯ ವಿದ್ಯಾಪೀಠವು ಬಹು ಪ್ರಸಿದ್ಧವಾಗಿಯೇ ಇದ್ದಿತು. ಇಲ್ಲಿ ನಾನಾ ಶಾಸ್ತ್ರಗಳನ್ನು ಕಲಿಸುತ್ತಿದ್ದುದಲ್ಲದೆ, ತಾವು ಗೃಹಸ್ಥಾಶ್ರಮವನ್ನು ಸ್ವೀಕರಿಸಿದನಂತರ ತಮ್ಮ ಜೀವಿತದಲ್ಲಿ ತಾವು ಕಲಿತ ಕಲೆಗಳು ಹೇಗೆ ಆಚರಣೆಯಲ್ಲಿ ತರಲ್ಪಡಬೇಕೆಂಬ ಶಿಕ್ಷಣವು ಕೂಡಾ ಕೊಡಲ್ಪಡುತ್ತಿದ್ದಿತು. ಬ್ರಹ್ಮಚಾರಿಗಳ ವಿದ್ಯಾಭ್ಯಾಸವು ಪೂರೈಸಿದನಂತರ ಐತಿಹಾಸಿಕ ಮತ್ತು ಔದ್ಯೋಗಿಕ ಪ್ರಸಿದ್ಧ ಸ್ಥಳಗಳನ್ನು ಪ್ರತ್ಯಕ್ಷ ನೋಡುವುದಕ್ಕೋಸ್ಕರ ಅವರು ದೇಶಪರ್ಯಟನ ಮಾಡಬೇಕಾದ ವ್ಯವಸ್ಥೆಯು ಕೂಡಾ ಈ ವಿದ್ಯಾಪೀಠದಲ್ಲಿದ್ದಿತು.

ಬಿಹಾರದೇಶದ ವಿಕ್ರಮಶೀಲ ಮಹಾವಿದ್ಯಾಲಯವು ಏಳನೆಯ ಶತಮಾನದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದ್ದಿತು. ಇದಕ್ಕೆ ಸಂಬಂಧಿಸಿ ಆರು ಕಲಾಶಾಲೆಗಳಿದ್ದವು. ಪರದೇಶಗಳ ವಿದ್ಯಾರ್ಥಿಗಳು ಕೂಡಾ ಇಲ್ಲಿಗೆ ವಿದ್ಯಾಭ್ಯಾಸಕ್ಕೋಸ್ಕರ ಬರುತ್ತಿದ್ದರು. ಯಾವ ಚಕ್ರವರ್ತಿಯ ಪ್ರಭುತ್ವವನ್ನು ಭರತಖಂಡದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬಹುದಾಗಿದೆಯೋ, ಅಂಥ ಹರ್ಷವರ್ಧನನ ಕಾಲದಲ್ಲಿ ಕೇವಲ ಉತ್ತರದೇಶಗಳಲ್ಲಿಯೇ ಇಂಥ ಗುರುಕುಲಗಳಿದ್ದವೆಂದು ತಿಳಿಯಬಾರದು. ಅಂಥ ಮಹಾ ಪರಾಕ್ರಮಶಾಲಿಯಾದ ಹರ್ಷವರ್ಧನನನ್ನು ನರ್ಮದೆಯಿಂದ ಅತ್ತಲಾಗಿಯೇ ಅಟ್ಟಿಬಿಟ್ಟ ಕರ್ನಾಟಕದ ಅದ್ವಿತೀಯ ಚಕ್ರವರ್ತಿಯಾದ ಚಾಲುಕ್ಯ ಎರಡನೆಯ ಪುಲಕೇಶಿಯ ಕೀರ್ತಿಧ್ವಜವು ಕೇವಲ ಭರತಖಂಡದಲ್ಲಿಯೇ ಅಲ್ಲ; ಇರಾಣ ಮೊದಲಾದ ಪರದೇಶಗಳಲ್ಲಿಯೂ ಪ್ರಕಾಶಿಸುತ್ತಿರುವಾಗ ಕರ್ನಾಟಕದ ಅನೇಕ ಪವಿತ್ರಸ್ಥಾನಗಳಲ್ಲಿ ಶ್ರೇಷ್ಠತರವಾದ ಗುರುಕುಲಗಳು ಶೋಭಿಸುತ್ತಿದ್ದುವು. ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಐಹೊಳೆಯಲ್ಲಿ ಚಾಲಕ್ಯರ ಕಾಲಕ್ಕೆ ಮಲಾಪಹಾರಿ ತೀರದಲ್ಲಿ ಶ್ರೇಷ್ಠವಾದ ವಿಶ್ವವಿದ್ಯಾಲಯವಿದ್ದಿತೆಂತಲೂ ಅದರಲ್ಲಿ ಐದುನೂರು ಜನ ಅಧ್ಯಾಪಕರಿದ್ದರೆಂತಲೂ ಇತ್ತಲಾಗಿ ದೊರೆತ ಶಿಲಾಲಿಪಿಯಿಂದ ಗೊತ್ತಾಗಿದೆ. ಎಂದ ಮೇಲೆ ಭಾರತೀಯ ವಿಜಯಧ್ವಜವು ಮೆರೆಯುತ್ತಿದ್ದಾಗಲೆಲ್ಲಾ ಅನೇಕ ನದಿ ತಟಾಕಗಳಲ್ಲಿ ಘನವಾದ ಗುರುಕುಲಗಳು ಶೋಭಿಸುತ್ತಿದ್ದವೆಂದು ವ್ಯಕ್ತವಾಗುವುದಿಲ್ಲವೆ?

ಈಗಿನ ನಮ್ಮ ಧಾರ್ಮಿಕ ರಾಜಕೀಯ, ಸಾಮಾಜಿಕ ಮೊದಲಾದ ದೀನಾವಸ್ಥೆಗಳು ನಿವಾರಣೆಯಾಗಬೇಕಾದರೆ ಪ್ರಾಚೀನ ಕಾಲದಂತೆಯೇ ಅಸಾಧಾರಣವಾದ ಬುದ್ಧಿ ಮತ್ತು ಪವಿತ್ರಾಚರಣೆಗಳುಳ್ಳ ಕೆಚ್ಚೆದೆಯ ಭಾರತೀಯ ತರುಣರು ತಂಡೋಪತಂಡವಾಗಿ ಗುರುಕುಲಗಳಿಂದ ಹೊರಡಬೇಕು. ಏಕೆಂದರೆ ಆರ್ಯತೇಜವನ್ನು ಹೊರಗೆ ತರುವ ಧೀರರು ಇವರೇ ಸರಿ. ಆದಕಾರಣ ಭಾರತೀಯ ವಿದ್ವಾಂಸರು ರಮಣೀಯವಾದ ಏಕಾಂತ ಸ್ಥಳಗಳನ್ನಾಶ್ರಯಿಸಲಿ; ಪವಿತ್ರಾಚರಣೆ, ಬುದ್ಧಿಬಲ ಮತ್ತು ದೇಹಶಕ್ತಿಗಳಿಗಿಂತ ತಮ್ಮ ಮಕ್ಕಳು ಶೋಭಿಸುತ್ತ ಭಾರತೀಯ ಕೀರ್ತಿಧ್ವಜವನ್ನು ಮೆರೆಯಿಸ ಬೇಕೆಂದಪೇಕ್ಷಿಸುವ ತಾಯಿತಂದೆಗಳು ತಮ್ಮ ಬಾಲಕರನ್ನು ಅಂಥ ಗುರುಗಳಲ್ಲಿಡಲು ಸಿದ್ಧರಾಗಲಿ. ಧನಿಕರು ತಮ್ಮ ಸಂಪತ್ತನ್ನು ಅಂಥ ಬಾಲಕರ ವಿದ್ಯಾಧ್ಯಯನದ ಪವಿತ್ರ ಕಾರ್ಯಕ್ಕೆ ಸೂರೆಗೊಡಲಿ. ಈ ಪ್ರಕಾರ ವಿದ್ಯೆ, ಇಚ್ಛೆ ಸಂಪತ್ತುಗಳು ಈ ಮಾತೃಭೂಮಿಯ ನಾನಾ ಪವಿತ್ರ ಮತ್ತು ರಮ್ಯ ಪ್ರದೇಶಗಳಲಿ ಏಕೀಭವಿಸಿ, ದಿವ್ಯತರವಾದ ಗುರುಕುಲಗಳು ಉದಯವಾಗಲಿ, ಅರುಣೋದಯದ ಪೂರ್ವದಲ್ಲಿ ಪಕ್ಷಿಗಳು ಆ ಸೂರ್ಯಪ್ರಕಾಶವನ್ನು ಎದುರುನೋಡಲು ಹೇಗೆ ಸಂತೋಷದಿಂದ ಧ್ವನಿಮಾಡುತ್ತಿರುತ್ತವೆಯೋ ಹಾಗೆಯೇ, ಉದಯೋನ್ಮುಖವಾಗಿರುವ ಆರ್ಯತೇಜವನ್ನು ನೋಡಿ ಆನಂದದಿಂದ ಗುರುಕುಲ, ವಿದ್ಯಾಲಯ, ಆಶ್ರಮ, ಯೋಗಮಂದಿರಗಳೆಂಬ ಆರ್ಯಸಂಸ್ಕೃತಿಯ ಜೀರ್ಣೋದ್ಧಾರದ ನಾನಾ ಮಂಜುಳ ಶಬ್ದಗಳು ಸರ್ವತೋಮುಖವಾಗಲಿ.

❖❖

ವೇದಗಳ ಸಂದೇಶ

ಶ್ರೀ ಬ್ಯಾಳಿ ಕಲ್ಯಾಣಪ್ಪನವರು, ಬಿ.ಎ. ಮುಖ್ಯೋಪಾಧ್ಯಾಯ

(ಕಳೆದ ಮಾರ್ಚ ತಿಂಗಳ ಮೊದಲನೆಯ ವಾರದಲ್ಲಿ ಹರಿದ್ವಾರದಲ್ಲಿ ಕೂಡಿದ ಸರಸ್ವತಿ ಸಮ್ಮೇಲನದ ಅಧ್ಯಕ್ಷರಾಗಿ ಡಾಕ್ಟರ್ ಅವಿನಾಶಚಂದ್ರದಾಸ, ಎಂ.ಎ. ಇವರು ಮಾಡಿದ ವ್ಯಾಖ್ಯಾನವು)

ನಾವು ಇದರಡಿಯಲ್ಲಿ ಕೆಲವು ವೇದಗಳ ಮಹತ್ವವಾದ ಸಂದೇಶಗಳನ್ನು ಕುರಿತು ವಿಚಾರಿಸೋಣ:

ಮೊದಲನೆಯ ಮಹತ್ವದ ಸಂದೇಶ : ಆರ್ಯರ ಸಂಸ್ಕೃತಿಯು ಪ್ರಥಮತಃ ಪಂಜಾಬದಲ್ಲಿ ಪ್ರಕಮವಾಯಿತು. ಮತ್ತು ಅದು ನಮಗೆ ಗೊತ್ತಿದ್ದ ಎಲ್ಲ ಸಂಸ್ಕೃತಿಗಳಿಗಿಂತಲೂ ಹೆಚ್ಚು ಪುರಾತನದ್ದಾಗಿರುತ್ತದೆ. ಈ ಪುರಾತನಭೂಮಿಯು ಆರ್ಯರ ತೌರಮನೆಯಾಗಿತ್ತು. ಇಲ್ಲಿಯೇ ನಮ್ಮ ಪೂರ್ವಜರು ವಾಸಿಸುತ್ತಿದ್ದರು. ಇಲ್ಲಿಯೇ ಇದ್ದುಕೊಂಡು ಅಸಂಖ್ಯ ವರ್ಷಗಳ ವರೆಗೆ ಸಂಸ್ಕೃತಿಯ ತಳಹದಿಯನ್ನು ಕಟ್ಟಲಿಕ್ಕೆ ಪ್ರಾರಂಭಿಸಿದರು. ಅವರ ಸುಧಾರಣೆಯು ಉದಾರವಾದದ್ದೂ ಸರ್ವಸಮ್ಮತವಾದದ್ದೂ ಆಗಿ, ಇಡೀ ಮಾನವಪ್ರಾಣಿಯ ಹಿತಕ್ಕೋಸ್ಕರ ಅವಶ್ಯವಾಗಿರುವ ಎಲ್ಲ ಸೌಕರ್ಯಗಳಿಂದ ತುಂಬಿ ತುಳುಕುತ್ತಿದ್ದಿತು.

ಎರಡನೆಯ ಮಹತ್ವದ ಸಂದೇಶ : ನಮ್ಮ ಪೂರ್ವಜರು ಐಕಮತ್ಯದಿಂದಿರುತ್ತಿದ್ದರು. ಈಗಿನಂತೆ ಆಗಿನ ಕಾಲದಲ್ಲಿ ಜಾತಿ ಧರ್ಮಗಳು ಅವುಗಳಲ್ಲಿ ಅನೇಕ ಭೇದಗಳೂ ಇದ್ದಿಲ್ಲ. ಮಿಶ್ರವಿವಾಹ ಮತ್ತು ಸಹಭೋಜನಗಳ ಬಗ್ಗೆ ಯಾವತರದ ಪ್ರತಿಬಂಧವೂ ಇದ್ದಿಲ್ಲ. ಋಗ್ವೇದದ ೧೦ನೆಯ ಮಂಡಲದ ಒಂದು ಮಂತ್ರದಲ್ಲಿ ಚಾತುರ್ವರ್ಣಗಳು ಸ್ಪಷ್ಟವಾಗಿ ಹೇಳಲ್ಪಟ್ಟಿವೆ. ಪಂಡಿತರು ಈ ಮಂತ್ರವು ಇತ್ತೀಚೆಗೆ ಸೇರಿಸಲ್ಪಟ್ಟಿರುವದೆಂದು ಅಭಿಪ್ರಾಯಪಡುತ್ತಾರೆ. ಆದರೆ ಅವರ ಅಭಿಪ್ರಾಯವು ಸಮಂಜಸವಾದುದಾಗಿ ತೋರುವುದಿಲ್ಲ. ಆ ಮಂತ್ರದ ಮೇಲಿಂದ ನಮಗೆ ಕಂಡುಬರುವದೇನೆಂದರೆ –ಆರ್ಯ ಜನಾಂಗದಲ್ಲಿ ಕಾಲಾನುರೋಧದಿಂದ ಜನರ ಗುಣಕರ್ಮಗಳಿಗನುಸರಿಸಿ ಚಾತುರ್ವರ್ಣಾಶ್ರಮವು ಉಂಟಾಗಿದೆ. ಆದರೆ ವರ್ಣಾಶ್ರಮ ನಿಯಮಗಳು ಈಗಿನಂತೆ ಕಠಿಣವಾಗಿಯೂ ಬಿಗಿಯಾಗಿಯೂ ಇದ್ದವೆಂದು ಹೇಳಲಿಕ್ಕೆ ಯಾವ ಪ್ರಮಾಣಗಳೂ ಕಂಡುಬರುವುದಿಲ್ಲ. ಯಾವುದಾದರೊಂದು ವಿಶಿಷ್ಟವರ್ಗದ, ಇಲ್ಲವೆ ಜಾತಿಯ ಮನುಷ್ಯನು ಮತ್ತೊಂದು ಜಾತಿಯಲ್ಲಿ ಪ್ರವೇಶಿಸಲಿಕ್ಕೆ ನಿರ್ಬಂಧವೂ ಇದ್ದಿದ್ದಿಲ್ಲ. ಈ ವರ್ಣಗಳು ಕೇವಲ ಒಂದೊಂದು

ವರ್ಗಗಳಾಗಿದ್ದವೇ ವಿನಾ, ಮಿಶ್ರವಿವಾಹ ಸಹಭೋಜನಗಳಿಗೆ ಯಾವ ತರಹದ ಅಡ್ಡಿಯಾಗಿದ್ದಂತೆಯೂ ಕಂಡುಬರುವುದಿಲ್ಲ. ಆ ಕಾಲದಲ್ಲಿ ಋಷಿಯ ಮಗನು ವೈದ್ಯನಾಗುತ್ತಿದ್ದನು; ಋಷಿಯ ಪುತ್ರಿಯು ಧಾನ್ಯ ಬೀಸುವ ಕೆಲಸ ಮಾಡುತ್ತಿದ್ದಳು. ಕವಸನೆಂಬ ದಾಸೀಪುತ್ರನು ವಶಿಷ್ಠಋಷಿಯ ಬಹು ಆದರಕ್ಕೆ ಪಾತ್ರನಾಗಿದ್ದನು.

ಮೂರನೆಯ ಮಹತ್ವದ ಸಂದೇಶ : ಸ್ತ್ರೀಯರನ್ನು ಪುರುಷರಿಗೆ ಸಮಾನರೆಂದು ಭಾವಿಸುತ್ತಿದ್ದರು. ಅವರಿಗೆ ಸಮಾನವಾದ ಹಕ್ಕುಗಳೂ, ಸ್ವಾತಂತ್ರ್ಯವೂ ಇರುತ್ತಿದ್ದವು. ವೇದಕಾಲದ ಸ್ತ್ರಿಯರ ಸ್ಥಿತಿ ಗತಿಯು ಒಳ್ಳೇ ಉಚ್ಚತರದಿದ್ದಿತು. ಸ್ತ್ರೀಯಳಿಗೆ ಬಾಲ್ಯವಿವಾಹವನ್ನೆಂದಿಗೂ ಮಾಡುತ್ತಿದ್ದಿಲ್ಲ. ತಂದೆಯ ಮನೆಯಲ್ಲಿಯೇ ಆಕೆಯು ತಾರುಣ್ಯ ಪ್ರಾಪ್ತವಾಗುವ ವರೆಗೂ ಉಂಡುಟ್ಟು ಸುಖದಿಂದ ಬೆಳೆಯುತ್ತಿದ್ದಳು. ಕಡೆಗೆ ಅವಳು ತನಗೆ ಯೋಗ್ಯವಾದ ವರನನ್ನು ತಾನೇ ಆರಿಸಿಕೊಳ್ಳುತ್ತಿದ್ದಳು. ಅವಳು ತನ್ನ ಮನೆಗೆ ತಾನೇ ಯಜಮಾನಿಯಾಗಿ ಮನೆಗೆಲಸಮಾಡುವ ಆಳುಹೋಳುಗಳ ಮೇಲೆ ಸಂಪೂರ್ಣವಾದ ಅಧಿಕಾರ ನಡೆಯಿಸುತ್ತಿದ್ದಳು. ತನ್ನ ಪತಿಯ ಸಂಗಡ ತಾನೂ ಅಗ್ನಿಪೂಜೆ, ದೇವಪೂಜೆಗಳನ್ನು ಮಾಡುತ್ತಿದ್ದಳು. ಪತಿಯಿಂದಲೂ ಮಕ್ಕಳಿಂದಲೂ, ಬಂಧುಬಳಗದವರಿಂದಲೂ ಅವಳಿಗೆ ವಿಶೇಷ ಮನ್ನಣೆಯು ಆದರವೂ ದೊರೆಯುತ್ತಿದ್ದಿತು. ಸ್ತ್ರೀಯರಿಗೆ ಯೋಗಿನಿಯರಾಗಲಿಕ್ಕೆ ಸಹ ಬರುತ್ತಿತ್ತು. ಘೋಸಾ, ಲೋಪಾಮುದ್ರಾ, ಮತ್ತು ವಿಶ್ವವಾರಾ ಎಂಬ ಋಷಿಪತ್ನಿಯರು ವೇದಸೂಕ್ತಗಳನ್ನು ರಚಿಸಿದ್ದಾರೆ. ಯಜ್ಞಗಳಲ್ಲಿ ಹೋತೃವು ಮಾಡತಕ್ಕ ವಿಧಾನಗಳನ್ನು ಅವರು ನೆರವೇರಿಸುವವರಾಗಿದ್ದರು.

ನಾಲ್ಕನೆಯ ಮಹತ್ವದ ಸಂದೇಶ : ನಮ್ಮ ಪೂರ್ವಜರಿಗೆ ಮನೆತನದ ಸುವ್ಯವಸ್ಥೆಯ ಸಂಬಂಧವಾಗಿ ಹೆಚ್ಚು ಜ್ಞಾನವಿರುತ್ತಿದ್ದಿತು. ನಿರಂಕುಶ ಪ್ರಭುತ್ವವಾಗಲಿ, ಧನಿಕ ಪ್ರಭುತ್ವವಾಗಲಿ, ಪುರೋಹಿತರ ತಂತ್ರಗಳಾಗಲಿ ಈ ತರಹದ ಯಾವ ಅಧಿಕಾರಗಳೂ ಅವರನ್ನು ತೊಂದರೆಪಡಿಸಲಿಲ್ಲ. ಇವುಗಳಿಂದ ಅವರು ದೂರವಾಗಿದ್ದರು. ಅವರು ತಮ್ಮ ಸ್ವಂತ ಮಂತ್ರಿಮಂಡಲವನ್ನು ಸ್ಥಾಪಿಸಿ, ತಮ್ಮ ರಾಜನನ್ನು ತಾವೆ ಆರಿಸಿಕೊಳ್ಳುತ್ತಿದ್ದರು ಮತ್ತು ರಾಜ್ಯ ಪೋಷಣೆಗಾಗಿ ಆತ್ಮ ಸಂತೋಷದಿಂದ ರಾಜನೂ ಆಸ್ಥಾನದ ಪ್ರಜೆಗಳೂ ಕೂಡಿಕೊಂಡು ರಾಜ್ಯ ಕಾರಭಾರ ನಡೆಯಿಸುತ್ತಿದ್ದರು. ಸರಕಾರವು ಒಂದು ವೇಳೆ ತನ್ನ ಕರ್ತವ್ಯಗಳನ್ನು ಸರಿಯಾಗಿ ಜರುಗಿಸದಿದ್ದರೆ ಕಂದಾಯ ಕೊಡುವದನ್ನು ನಿಲ್ಲಿಸುತ್ತಿದ್ದರು. ರಾಜನು ಬಲಾತ್ಕಾರಿಯೂ ಕ್ರೂರನೂ ಇದ್ದರೆ ಅವನನ್ನು ಕೂಡಾ ಸಿಂಹಾಸನದಿಂದ ತಳ್ಳಿಬಿಡುತ್ತಿದ್ದರು. ಋಗ್ವೇದದಲ್ಲಿ 'ವಿಜ್ಞೋನ ರಾಜಾನಂ ವೃಣನ' ಅಂದರೆ ರಾಜನನ್ನು ಆರಿಸುವ ಪ್ರಜೆಗಳಂತೆ ಎಂಬರ್ಥದ ಮಂತ್ರವಿರುವುದು. ಮತ್ತೊಂದು ಸೂಕ್ತದಲ್ಲಿ ರಾಜನು ಸಿಂಹಾಸನದ ಮೇಲೆ ಭದ್ರವಾಗಿರಬೇಕಾದರೆ, ಆತನು ಪ್ರಜೆಗಳ ಸದಿಚ್ಛೆಗೆ ಪಾತ್ರನಾಗಿರಬೇಕೆಂದು ಹೇಳಿದೆ.

ಐದನಯೆ ಮಹತ್ವದ ಸಂದೇಶ : ವೇದಕಾಲದ ನಮ್ಮ ಪೂರ್ವಜರಂತೆ ನಾವಾದರೂ ಭರತಭೂಮಿಯ ಬೆಳವಣಿಗೆಯನ್ನು ಹೆಚ್ಚಿಸಿ, ಮಾನವ ಪ್ರಾಣಿಗಳನ್ನು ಎತ್ತಿ ಹಿಡಿದು, ಬೌದ್ಧ ಧರ್ಮೋಪದೇಶಕರು, ಭರತಖಂಡದ ಹೊರಗೆಲ್ಲ ಸಂಚರಿಸಿ ತಮ್ಮ ಮತವನ್ನು ಪ್ರಸಾರಮಾಡಿದ ಹಾಗೆ, ಈ ಜಗತ್ತಿನ ತುಂಬ ಆರ್ಯಸಂಸ್ಕೃತಿಯನ್ನು ಹೆಚ್ಚಿಸುವುದು ಶಕ್ಯವಿದೆ. ಋಗ್ವೇದ ಕಾಲದ 'ಪಣಿಗಳು', 'ವಣಿಜರು' ಅಥವಾ ವ್ಯಾಪಾರಿಗಳು ಆಗಿನ ಕಾಲಕ್ಕೆ ಗೊತ್ತಿದ್ದ ಭೂಪ್ರದೇಶದಲ್ಲೆಲ್ಲ ತಮ್ಮ ವ್ಯಾಪಾರೀ ಹಡಗುಗಳೊಂದಿಗೆ ಜಲಪರ್ಯಟಣ ಮಾಡುತ್ತಿದ್ದರು. ಮತ್ತು ದೂರ ದೂರ ದೇಶಗಳಿಂದ

ಹೇರಳವಾದ ದ್ರವ್ಯವನ್ನು ಆರ್ಯಾವರ್ತಕ್ಕೆ ತರುತ್ತಿದ್ದರು. ಇದಲ್ಲದೆ ಅವರು ತಮ್ಮ ಆರ್ಯಸಂಸ್ಕೃತಿಯನ್ನು ದಕ್ಷಿಣ ಹಿಂದೂಸ್ಥಾನ, ಮೆಸೊಪೊಟೇಮಿಯಾ, ಫಿನೀಶಿಯಾ, ಇಜಿಪ್ತ ಮುಂತಾದ ದೇಶಗಳಲ್ಲಿ ಪಸರಿಸಿದ್ದರು. ಪ್ರೊ. ನಿಲ್ಸನ್ನನೆಂಬುವನು ಪುರಾತನಕಾಲದ ಆರ್ಯರ ಸುಧಾರಣೆಯ ಅವಶೇಷಗಳು ಬಹು ದೂರದ ನಾರ್ವೇ ದೇಶದಲ್ಲಿ ಈಗಲೂ ಕಂಡುಬರುತ್ತವೆಂತಲೂ, ಆ ಅವಶೇಷಗಳು ಹಿಂದೂ ವ್ಯಾಪಾರಿಗಳನ್ನು ಹೋಲುತ್ತಿರುತ್ತವೆಂತಲೂ ವಿವರಿಸಿರುವನು.

ಆರನೆಯ ಮಹತ್ವದ ಸಂದೇಶ : ನಾನು ನಮ್ಮ ಭೂಮಿಯನ್ನು ಸಂಪತ್ತಿನ ಆಗರವೆಂದು ತಿಳಿಯತಕ್ಕದ್ದು. ಆದ್ದರಿಂದ ನಾವು ಕೃಷಿಕರ್ಮವನ್ನು ಅತ್ಯವಶ್ಯವಾಗಿ ಅಂಗೀಕರಿಸತಕ್ಕದ್ದು ಮತ್ತು ಅದನ್ನು ಪೋಷಿಸತಕ್ಕದ್ದು. ಕೃಷಿಕರ್ಮವನ್ನು ಆಧುನಿಕ ಶಾಸ್ತ್ರೀಯ ಪದ್ಧತಿಗನುಸರಿಸಿ ಮಾಡಿದರೆ ಹೆಚ್ಚು ಹಿತವಾಗುವುದು. ಇದಲ್ಲದೆ ನಮ್ಮ ಅರಿವೆ, ಅಂಚಡಿ ಮೊದಲ್ಗೊಂಡು ಅವಶ್ಯಕವಾದ ಎಲ್ಲ ಸಾಮಾನುಗಳನ್ನು ನಾವೇ ಮಾಡಿಕೊಳ್ಳತಕ್ಕದ್ದು. ವೇದಕಾಲದ ಆರ್ಯರು ಪ್ರಾಮುಖ್ಯವಾಗಿ ಕೃಷಿಕರ್ಮಿಗಳಾಗಿದ್ದರು. ಅವರ ಬಳಿಯಲ್ಲಿ ದನಗಳು ಹಿಂಡುಗಟ್ಟೆ ಇರುತ್ತಿದ್ದವು. ತಮಗೆ ಬೇಕಾದ ಪ್ರತಿಯೊಂದು ಸಾಮಾನುಗಳನ್ನು ಅವರು ಸ್ವತಃ ಮಾಡಿಕೊಳ್ಳುತ್ತಿದ್ದರು.

ಏಳನೆಯ ಮಹತ್ವದ ಸಂದೇಶ : ನಾವು ಸ್ವತಃ ಯಾರೆಂಬುದನ್ನು ಕಂಡುಕೊಂಡು, ಆ ಪರಬ್ರಹ್ಮವಸ್ತುವು ನಮ್ಮ ಆತ್ಮಗಳಲ್ಲಿರುವುದನ್ನು ಅರಿತುಕೊಳ್ಳಬೇಕು. ಆ ಪರಬ್ರಹ್ಮದ ಮುಖಾಂತರವಾಗಿ ಮಾನವ ಪ್ರಾಣಿಗಳ ಐಕ್ಯತೆಯನ್ನು ತಿಳಕೊಳ್ಳಬೇಕು. ಮತ್ತು ನಾವು ಅಂಧಶ್ರದ್ಧೆಗಳ ಬಂಧನಗಳಿಂದ ಮುಕ್ತರಾಗಿರಬೇಕು. ಯಾಕೆಂದರೆ, ಅಂಧಶ್ರದ್ಧೆಗಳು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಪ್ರತಿಬಂಧಿಸುತ್ತವೆ. ಮತ್ತು ಮನುಷ್ಯತ್ವದ ಅತ್ಯಂತ ಉನ್ನತವಾದ ವಿಚಾರಗಳಿಗನುಸಾರವಾಗಿ ಕಾಲಕಳೆಯಬೇಕೆಂದರೆ ಅವು ವಿಘ್ನಕಾರಿಗಳಾಗುವವು. ದೇವರು ಪ್ರತಿಯೊಂದು ವಸ್ತುವಿನಲ್ಲಿರುತ್ತಾನೆಂಬುದನ್ನೂ, ಪ್ರತಿಯೊಂದು ವಸ್ತುವು ದೇವರಲ್ಲಿ ಅಡಕವಾಗಿರುತ್ತದೆಂಬುದನ್ನೂ ತಿಳಿದುಕೊಳ್ಳತಕ್ಕದ್ದು. ಅದರ ಒಡಲಲ್ಲಿ ಜಾತಿ, ಮತ, ಪಂಗಡ ಮೊದಲಾದ ಭೇದಗಳಿಲ್ಲದೆ, ಭೂತದಯೆಯಿಂದ ಕೂಡಿಕೊಂಡಿರಬೇಕು. ಇದಲ್ಲದೆ ಯಾವುದೇ ಆಕಾರದ ಅಥವಾ ರೂಪದ ಜೀವಿಯೂ ಕೂಡಾ ಆ ಪ್ರೇಮದಲ್ಲಿಯೇ ಕೂಡಿಹೋಗಬೇಕು. ನಮ್ಮ ಮನಸ್ಸು ಆತ್ಮವೂ ಸಕಲ ಜೀವಿಗಳನ್ನು ವಿಶ್ವವ್ಯಾಪಕವಾದ ಹಿತಚಿಂತನೆಯಿಂದಲೂ, ಅಂತಃಕರಣದಿಂದಲೂ ಕಾಣುವಂತೆ ಅವುಗಳನ್ನು ಪರಿಶುದ್ಧಗೊಳಿಸಬೇಕು. ಮಹಾತ್ಮನಾದ ಗೌತಮ ಬುದ್ಧನು ಯಾವ ಅಂತಃಕರಣ ಪ್ರವೃತ್ತಿಯನ್ನು ಕಳಕಳಿಯಿಂದ ಮನುಷ್ಯ ಪ್ರಾಣಿಗಳಿಗೆ ಉಪದೇಶಮಾಡಿದನೋ ಮತ್ತು ಯಾವ ದಯಾ-ದಾಕ್ಷಿಣ್ಯಗಳು ನಮ್ಮ ಪುರಾತನ ಋಷಿಗಳ ಹಾಗೂ ಸನ್ಯಾಸಿಗಳ ಹೃದಯದಲ್ಲಿ ನಲಿದಾಡುತ್ತಿದ್ದವೋ, ಈಗಲೂ ನಲಿದಾಡುತ್ತಿರುವವೋ, ಅಂಥ ಪವಿತ್ರಾಂತಃಕರಣವು ನಮ್ಮಲ್ಲಿ ನೆಲೆಗೊಳ್ಳಬೇಕು. ಇದೇ ವೇದಗಳ ಅತ್ಯಂತ ಶ್ರೇಷ್ಠವಾದ ಸಂದೇಶವು. ಈಗ ಜಗತ್ತು ಇಂತಹ ಸಂದೇಶವನ್ನೇ ಅಂಗೀಕರಿಸಬೇಕೆಂದು ಹಾತೊರೆಯುತ್ತಲಿದೆ. ಅದನ್ನು ಪ್ರಸಾರಗೊಳಿಸುವುದು ನಮ್ಮೆಲ್ಲರ ಮೇಲೆ ಅದೆ. ಹಾಗೆ ಮಾಡುವದರಿಂದ ಮಾನವ ಪ್ರಾಣಿಗಳಲ್ಲಿ ಸುಖಶಾಂತತೆಗಳು ನೆಲೆಸುವವು. ಸಧ್ಯಕ್ಕೆ ಜನರು ಸ್ವಾರ್ಥಪರಾಯಣರಾಗಿ ಪಾಶವೀಶಕ್ತಿಯ ರಕ್ಕಸರಂತೆ ಒಬ್ಬರಿಗೊಬ್ಬರ ಗಂಟಲಗಳನ್ನು ಹಿಸುಗುತ್ತಿರುವರು, ಪರಸ್ಪರ ಹೋರಾಡುತ್ತಿರುವರು. ಬಲಾತ್ಕಾರ ಮಾಡುತ್ತಿರುವರು: ಪರಸ್ಪರರನ್ನು ನಿರ್ಮೂಲ ಮಾಡಲೆಳಸುತ್ತಿರುವರು.

❖❖

ಮಹತ್ವದ ಎರಡು ಸಂಸ್ಥೆಗಳು

ಶ್ರೀ ಹರ್ಡೇಕರ ಮಂಜಪ್ಪನವರು

ಈ ನಮ್ಮ ಭರತಖಂಡವು ಸಕಲ ವಿಷಯಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಬೇಕೆಂದು ಕಳೆದ ಅರ್ಧಶತಮಾನದಿಂದೀಚೆಗೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಔದ್ಯೋಗಿಕ ಮೊದಲಾದ ವಿಷಯಗಳಲ್ಲಿ ಅನೇಕ ಸಂಸ್ಥೆಗಳು ಏರ್ಪಟ್ಟಿವೆ. ಆ ಎಲ್ಲ ಸಂಸ್ಥೆಗಳೂ ತಮ್ಮ ತಮ್ಮ ಉದ್ದೇಶಗಳನ್ನು ಸಾಧಿಸಲು ಶಕ್ತ್ಯಾನುಸಾರ ಪ್ರಯತ್ನಮಾಡುತ್ತಲೇ ಬಂದಿವೆ. ಇವುಗಳಲ್ಲಿ ಎರಡು ಧಾರ್ಮಿಕ ಸಂಸ್ಥೆಗಳು ಎಷ್ಟೋ ಮಹತ್ವದವುಗಳಾಗಿರುವುದರಿಂದ ಅವುಗಳನ್ನು ಕುರಿತು ಈ ಲೇಖನದಲ್ಲಿ ವಿವರಿಸಿದ್ದಾಗಿದೆ.

ಶ್ರೀ ರಾಮಕೃಷ್ಣ ಮಿಷನ್

ಭಾರತೀಯರಿಗೆ ಧರ್ಮವೇ ಪ್ರಾಣವಾಗಿದೆ. ಏಕೆಂದರೆ ಸಹಸ್ರಾವಧಿ ವರುಷಗಳಿಂದ ಭಾರತೀಯ ಮೇಧಾವಿಗಳೆಲ್ಲಾ ಆಗಾಗ್ಗೆ ಧಾರ್ಮಿಕ ಕ್ರಾಂತಿಗಳನ್ನೇ ಮಾಡುತ್ತ ಜನಸಾಮಾನ್ಯರ ರಕ್ತನಾಳಗಳಲ್ಲಿ ಕೂಡಾ ಧಾರ್ಮಿಕ ಆಚಾರ ವಿಚಾರಗಳ ಕಲ್ಪನೆಗಳನ್ನೇ ಸೇರಿಸುತ್ತ ಬಂದಿದ್ದಾರೆ. ಎಂತಹ ಪ್ರಬಲವಾದ ಜನಾಂಗವು ಎಷ್ಟುಕಾಲ ಭಾರತೀಯರಲ್ಲಿ ಅಡಗಿರುವ ಅದ್ವಿತೀಯವಾದ ಧಾರ್ಮಿಕತೇಜವು, ಕೊನೆಗೆ ಯಾವುದಾದರೊಂದು ಮಹಾವ್ಯಕ್ತಿಯಲ್ಲಿ ಪ್ರಕಟವಾಗಿ ಪ್ರಪಂಚನ್ನೇ ತನ್ನ ಕಡೆಗೆ ತಿರುಗಿಸದೆ ಬಿಡುವುದಿಲ್ಲ.

ಪಾಶ್ಚಾತ್ಯ ಶಿಕ್ಷಣವು ಈ ದೇಶದಲ್ಲಿ ಪ್ರಾರಂಭವಾದೊಡನೆ ಅದರಿಂದ ಪ್ರಾಪ್ತವಾದ ವಿಚಾರ ಸ್ವಾತಂತ್ರ್ಯ ಮತ್ತು ಚಿಕಿತ್ಸಾ ಬುದ್ಧಿಗಳು ಧಾರ್ಮಿಕ ವಿಷಯದಲ್ಲಿಯೂ ಪ್ರವೇಶಿಸಿ, ಅನೇಕ ಬುದ್ಧಿಶಾಲಿಗಳನ್ನು ಕೂಡಾ ಧರ್ಮಲಂಡರನ್ನಾಗಿ ಮಾಡಿದವು. ಪಾಶ್ಚಾತ್ಯ ಶಿಕ್ಷಣದ ಪ್ರಸಾರದಿಂದಲೂ, ಆದಿಭೌತಿಕ, ಸುಧಾರಣೆಯ ಅತ್ಯಂತ ಆಶ್ಚರ್ಯಕರವಾದ ಸಂಗತಿಗಳಿಂದಲೂ ಭಾರತೀಯ ಬುದ್ಧಿಶಾಲಿಗಳ ಲಕ್ಷ್ಯವು ೧೯ನೆಯ ಶತಮಾನದ ಮಧ್ಯದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ವಿಶೇಷ ತಿರುಗಿತು. ಒಂದು ರಾಷ್ಟ್ರದ ಜೀವನವು ಮುಖ್ಯವಾಗಿ ಆ ರಾಷ್ಟ್ರದ ಬುದ್ಧಿಶಾಲಿಗಳ ಮತ್ತು ಶೂರರ ಮೇಲೆಯೇ ಅವಲಂಬಿಸಿರುತ್ತದಷ್ಟೇ. ಆದುರಿಂದ ಭಾರತೀಯ ಸಂಸ್ಕೃತಿಗೆ ಇದೊಂದು ನೂತನ ವಿಪತ್ತೆ ಪ್ರಾಪ್ತವಾಯಿತೆಂದು ತೋರಿತು. ಅಂತಹ ಸಮಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರೆಂಬ

ಮಹಾಜ್ಞಾನಿಗಳು ಬಂಗಾಲದಲ್ಲಿ ಬಹು ಪ್ರಸಿದ್ಧರಾಗಿ, ತಮ್ಮ ಅದ್ವಿತೀಯವಾದ ಆತ್ಮಬಲದಿಂದ ಅನೇಕ ಆಧುನಿಕ ಸುಶಿಕ್ಷಿತರನ್ನು ಕೂಡಾ ಆಧ್ಯಾತ್ಮಿಕ ವಿಷಯದ ಕಡೆಗೆ ತಿರುಗಿಸಿದರು.

ಶ್ರೀ ಪರಮಹಂಸರ ಕೃಪೆಗೆ ಪಾತ್ರರಾದ ಪುಣ್ಯಾತ್ಮರಲ್ಲಿ ಶ್ರೀಸ್ವಾಮಿ ವಿವೇಕಾನಂದರೂ ಒಬ್ಬರು. ಇಷ್ಟೇ ಅಲ್ಲ, ಇವರೇ ಪ್ರಮುಖರು. ಇವರ ಅವತಾರ ಕೃತ್ಯವು ಕೇವಲ ತಮ್ಮ ಆತ್ಮೋನ್ನತಿಗಾಗಿಯೇ ಇರದೆ, ಪಾಶ್ಚಾತ್ಯ ಶಿಕ್ಷಣದಿಂದ ಜಡವಾದಿಗಳಾಗುತ್ತಿದ್ದ ಅಸಂಖ್ಯ ಆಧುನಿಕ ಸುಶಿಕ್ಷತರಲ್ಲಿ ಧರ್ಮಜ್ಯೋತಿಯನ್ನುಂಟುಮಾಡುವುದೂ ಆಗಿದ್ದಿತು. ಇಷ್ಟೇ ಅಲ್ಲ; ಇದಕ್ಕಿಂತಲೂ ಶ್ರೇಷ್ಠತರವಾದ ಭಾರತೀಯ ಧರ್ಮಧ್ವಜವನ್ನು ಆದಿಭೌತಿಕ ಸುಧಾರಣೆಯ ಜನ್ಮಸ್ಥಾನವಾದ ಪಶ್ಚಿಮ ಗೋಲಾರ್ಧದಲ್ಲಿ ಆತ್ಮಬಲದಿಂದ ಸ್ಥಾಪಿಸಿ, ಪ್ರಪಂಚವೇ ಅದರ ದಿವ್ಯತೇಜದ ಕಡೆಗೆ ತಿರುಗುವಂತೆ ಮಾಡವುದಾಗಿದ್ದಿತು. ಈ ಪರಮಪವಿತ್ರವಾದ ಅಸಾಧಾರಣ ಕಾರ್ಯವು ಕ್ರಿ. ಶ. ೧೮೯೩ನೆಯ ಸಪ್ಟಂಬರ್ ೧೧ನೆಯ ತಾರೀಖಿನ ಸುಮೂಹೂರ್ತದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಎಂಬ ಮಹಾವ್ಯಕ್ತಿಯಿಂದ ಅಮೇರಿಕೆಯ ನ್ಯೂಯಾರ್ಕ ಪಟ್ಟಣದಲ್ಲಿ ಸಂಭವಿಸಿತು. ಬೌದ್ಧ ಧರ್ಮಿಗಳ ನಂತರ ಕಳೆದ ಸಾವಿರಾರು ವರುಷಗಳಿಂದೀಚೆಗೆ ಧರ್ಮಪ್ರಸಾರಕ್ಕೋಸ್ಕರ ಪರದೇಶಗಳಿಗೆ ಶ್ರೀ ಸ್ವಾಮಿ ವಿವೇಕಾನಂದರ ವಿನಾ ಯಾರೂ ಹೋಗಿರಲಿಲ್ಲ.

ಶ್ರೀ ಸ್ವಾಮಿಗಳವರು ತಮ್ಮಲ್ಲಿದ್ದ ಆಗಾಧವಾದ ಆತ್ಮಜ್ಞಾನದಿಂದ ಅಮೇರಿಕೆಯಲ್ಲಿ ದಿಗ್ವಿಜಯವನ್ನು ಹೊಂದಿ, ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸಿ ಜಗದ್ಗುರುಗಳಾಗಿ, ಈ ಮಾತೃಭೂಮಿಗೆ ಕ್ರಿ. ಶ. ೧೮೯೭ನೆಯ ಜನವರಿ ೧೫ನೆಯ ತಾರೀಖಿನ ದಿವಸ ಆಗಮಿಸಿದರು. ಆ ದಿವಸ ಕೊಲಂಬೋ ಪಟ್ಟಣದಲ್ಲಿ ಭಾರತೀಯ ಪ್ರಮುಖರು ಶ್ರೀ ಸ್ವಾಮಿಗಳವರಿಗೆ ಸಮರ್ಪಿಸಿದ ವಿಜ್ಞಾಪನಾ ಪತ್ರಿಕೆಯಲ್ಲಿ ಹೇಳಿರುವುದೇನೆಂದರೆ "ಯಾವ ಪುಣ್ಯಾತ್ಮರ ಪಾದಧೂಳಿನಿಂದ ಈ ಆರ್ಯಭೂಮಿಯು ಪವಿತ್ರವಾಗಿದೆಯೋ, ಮತ್ತು ಈ ಭಾರತಭೂಮಿಯು ಕಳೆದ ಅನೇಕ ಶತಮಾನಗಳಿಂದ ಕಾಲಚಕ್ರದಲ್ಲಿ ಸಿಲುಕಿ ನರಳುತ್ತಿದ್ದರೂ, ಕೊನೆಗೆ ತನ್ನ ಜ್ಞಾನಜ್ಯೋತಿಯನ್ನು ಪ್ರದೀಪ್ತಗೊಳಿಸಲು ಯಾವ ಮಹಾನುಭಾವರ ಆಶೀರ್ವಾದವೇ ಕಾರಣವಾಗಿದೆಯೋ, ಅಂತಹ ಅತಿ ಪ್ರಾಚೀನಕಾಲದ ಮಹಾತ್ಮರು ಶೋಧಿಸಿ ಸಂಗ್ರಹಿಸಿಟ್ಟ ಈ ವಿಶ್ವವ್ಯಾಪಿ ವೈದಿಕಧರ್ಮತತ್ವಗಳ ಪರಿಚಯವನ್ನು ತಾವು ಪ್ರಪಂಚಕ್ಕೇನೆ ಉಂಟುಮಾಡಿಕೊಟ್ಟಿರುವಿರಿ. ಪಾಶ್ಚಾತ್ಯ ಸಂಸ್ಕೃತಿಯ ಥಳಥಳಿಸುವ ಪ್ರಕಾಶದಿಂದ ಅಂಧರಾದಂಥ ನಮ್ಮಲ್ಲಿಯ ಅನೇಕ ಜನಗಳಿಗೆ ನಮ್ಮ ಪೂರ್ವಜರು ಗಳಿಸಿಟ್ಟ ದ್ರವ್ಯದ (ಆರ್ಯಸಂಸ್ಕೃತಿಯ) ಮಹತ್ವವನ್ನೂ ತಿಳಿಸಿಕೊಟ್ಟಿರುವಿರಿ."

ಇದಕ್ಕೆ ಉತ್ತರವಾಗಿ ಶ್ರೀಸ್ವಾಮಿಗಳವರು–"ಧರ್ಮವೇ ಭಾರತೀಯರನ್ನುದ್ಧರಿಸುವ ಮಹಾ ಮಂತ್ರವಾಗಿದೆ. ನಾವೊಂದು ರಾಷ್ಟ್ರದವರಾಗಿ ಈ ಜಗತ್ತಿನಲ್ಲಿ ಜೀವಿಸಬೇಕಾಗಿದ್ದರೆ ನಮ್ಮ ಎಲ್ಲಾ ಪ್ರಯತ್ನಗಳಿಗೂ ಧರ್ಮವೇ ಮೂಲವಾಗಿರಬೇಕು. ನೀವು ನನಗೆ ಮಾಡಿದ ಮನ್ನಣೆಯು ಈ ಒಂದು ವ್ಯಕ್ತಿಗೆ ಮಾಡಲ್ಪಟ್ಟ ಗೌರವವೆಂದು ನಾನು ತಿಳಿಯುವುದಿಲ್ಲ. ಈ ಮರ್ಯಾದೆಯನ್ನು ತಾವು ಧರ್ಮತತ್ವಕ್ಕೇನೇ ಕೊಟ್ಟಿರುವಿರೆಂದು ಭಾವಿಸುತ್ತೇನೆ." ಎಂಬುದಾಗಿ ಹೇಳಿದರು. ಈ ಸಂಭಾಷಣೆಗಳ ಮೇಲಿಂದ ಆಗಿನ ಭಾರತೀಯ ಪ್ರಮುಖರ ವಿಚಾರದೃಷ್ಟಿಯೂ ಶ್ರೀ ಸ್ವಾಮಿಗಳವರ ಕಾರ್ಯಗೌರವವೂ ಸ್ಪಷ್ಟವಾಗುವುದಿಲ್ಲವೇ?

ಶ್ರೀ ಸ್ವಾಮಿಗಳವರು, ಧರ್ಮಜಾಗ್ರತೆಯ ತಮ್ಮ ಕಾರ್ಯವನ್ನು ಸುಸಂಘಟಿತ ರೂಪದಲ್ಲಿ ಮಾಡುವುದಕ್ಕೋಸ್ಕರ ಕ್ರಿ. ಶ. ೧೮೯೭ನೆಯ ಸಂವತ್ಸರದಲ್ಲಿ ಶ್ರೀ ರಾಮಕೃಷ್ಣ ಮಿಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು ಕಳೆದ ಮೂವತ್ತು ವರುಷಗಳಲ್ಲಿ ಮಾಡಿದ ಮಹತ್ಕಾರ್ಯಗಳನ್ನು ನೋಡಿದರೆ ಶ್ರೀ ಸ್ವಾಮಿಗಳವರು ಭಾರತೀಯರ ಸುಕೃತ ವಿಶೇಷದಿಂದ ಈವರೆಗೂ ಇದ್ದಿದ್ದರೆ ಎಂತಹ ಅದ್ಭುತವಾದ ಕಾರ್ಯವಾಗುತ್ತಿದ್ದಿತೆಂಬುದು ಸ್ಪಷ್ಟವಾಗುತ್ತದೆ. ವೇದಾಂತ ಅಥವಾ ಭಾರತೀಯ ತತ್ವಜ್ಞಾನವನ್ನು ಜಗತ್ತಿನಲ್ಲಿ ಪ್ರಸಾರಗೊಳಿಸಿ, ಆ ಮೂಲಕ ಧಾರ್ಮಿಕ ವಿಚಾರಕ್ರಾಂತಿಯನ್ನುಂಟುಮಾಡುವದೇ ಶ್ರೀರಾಮಕೃಷ್ಣ ಮಿಷನ್ನಿನ ಮುಖ್ಯೋದ್ದೇಶವಾಗಿದೆ. ಈ ತನ್ನ ಉದ್ದೇಶವನ್ನು ಸಾಧಿಸಲು ಸ್ವಾರ್ಥತ್ಯಾಗಿಗಳೂ, ಜನಹಿತಾರ್ಥವಾಗಿ ಅವಿಶ್ರಾಂತ ಶ್ರಮವಹಿಸುವ ಬುದ್ಧಿಶಾಲಿಗಳೂ ಮತ್ತು ಪವಿತ್ರಾತ್ಮರೂ ಆದಂಥ ಸಹಸ್ರಾವಧಿ ಸನ್ಯಾಸಿಗಳು ಬೇಕೆಂದು ಅಲ್ಲಲ್ಲಿ ಮಠ ಮತ್ತು ಆಶ್ರಮಗಳನ್ನು ಸ್ಥಾಪಿಸಿ, ಅನೇಕ ವೈದಿಕ ಬ್ರಹ್ಮಚಾರಿಗಳಿಗೆ ಶ್ರೇಷ್ಠತರವಾದ ಶಿಕ್ಷಣವನ್ನು ಕೊಡುತ್ತಿದ್ದರು.

ಈ ಸಂಸ್ಥೆಗಳಲ್ಲಿ ಶಿಕ್ಷಣಹೊಂದಿದ ಅನೇಕ ಪ್ರಸಿದ್ಧ ಸನ್ಯಾಸಿಗಳು ಈ ನಮ್ಮ ಭರತಖಂಡದ ನಾನಾ ಭಾಗದಲ್ಲಿ ತಮ್ಮ ಸಂಘದ ಅನೇಕ ಶಾಖೋಪಶಾಖೆಗಳನ್ನು ಸ್ಥಾಪಿಸಿ, ವಿಶೇಷವಾಗಿ ಆಧುನಿಕ ಸುಶಿಕ್ಷಿತರನ್ನು ಆಧ್ಯಾತ್ಮಿಕ ವಿಷಯದ ಕಡೆಗೆ ತಿರುಗಿಸುತ್ತಿರುವರಲ್ಲದೆ, ಅಮೇರಿಕಾ ಮೊದಲಾದ ಜಗತ್ತಿನ ಬೇರೆ ಖಂಡಗಳಲ್ಲಿಯೂ ವೇದಾಂತ ಧರ್ಮಪ್ರಸಾರಕ ಸಂಘಗಳನ್ನು ಏರ್ಪಡಿಸಿ, ಸಹಸ್ರಾವಧಿ ಪಾಶ್ಚಾತ್ಯ ಪಂಡಿತರನ್ನು ಈ ವೈದಿಕ ತತ್ವಜ್ಞಾನ ಕಡೆಗೆ ಎಳೆದಿದ್ದಾರೆ. ಅಮೇರಿಕೆಯಲ್ಲಿ ಇಂತಹ ನಾಲ್ಕು ಪ್ರಮುಖ ಸಂಘಗಳು ಏರ್ಪಟ್ಟು ಅವುಗಳ ಮೂಲಕ The Message of the East ಎಂಬ ಮಾಸಪತ್ರಿಕೆಯು ಪ್ರಕಟವಾಗುತ್ತಲಿದೆ.

ಅನಾಥರಿಗೆ ಅನ್ನ ಬಟ್ಟೆಗಳನ್ನು ಕೊಟ್ಟು ರಕ್ಷಿಸುವುದೂ ರೋಗಿಗಳಿಗೆ ಔಷಧೋಪಚಾರಗಳನ್ನು ಮಾಡುವುದೂ ಪ್ಲೇಗು ಮೊದಲಾದ ಸಾಂಕ್ರಾಮಿಕ ರೋಗಗಳು ಪ್ರಸಾರವಾದಲ್ಲಿ ಹೋಗಿ ಬಡಜನರ ನಾನಾ ಕಷ್ಟನಷ್ಟಗಳನ್ನು ನಿವಾರಣೆಮಾಡುವುದೂ ಈ ರಾಮಕೃಷ್ಣ ಮಿಷನ್ನಿನ್ ಉದ್ದೇಶವಾಗಿರುವುದರಿಂದ, ಈ ದೇಶದ ಅನೇಕ ಭಾಗಗಳಲ್ಲಿ ಈ ಜನೋಪಕಾರದ ಕಾರ್ಯಗಳು ನಡೆಯುತ್ತಲಿವೆ.

ಇವುಗಳ ವಿನಾ ಶಿಕ್ಷಣಪ್ರಸಾರಮಾಡುವುದೂ ಈ ಸಂಸ್ಥೆಯ ಮುಖ್ಯೋದ್ದೇಶವಾಗಿದೆ. ಈ ವಿಷಯವಾಗಿ ಪ್ರಿನ್ಸಿಪಾಲ ಕಾಮಾಖ್ಯನಾಥ ಮಿತ್ರ, ಎಂ.ಎ. ಇವರು ಈ ಸಂಸ್ಥೆಯ ಪ್ರಬುದ್ಧಭಾರತ ಪತ್ರಿಕೆಯಲ್ಲಿ ಬರೆದಿರುವುದೇನೆಂದರೆ ಈಗ ಈ ದೇಶದ ಸಾಮಾನ್ಯವಾದ ಎಲ್ಲಾ ವಿದ್ಯಾಲಯಗಳಲ್ಲಿ ದೊರೆಯುತ್ತಿರುವಂತೆ ಶಿಕ್ಷಣವನ್ನು ಕೊಡುವುದು ಈ ಸಂಸ್ಥೆಯ ಉದ್ದೇಶವಲ್ಲ. ರಾಮಕೃಷ್ಣ ಮಿಷನ್ನಿನಿಂದ ದೊರೆಯುವ ಶಿಕ್ಷಣದಲ್ಲಿ ಧಾರ್ಮಿಕ ಮತ್ತು ನೈತಿಕ ವಿಷಯಗಳೇ ಮುಖ್ಯಾಂಗಗಳಾಗಿವೆ. ಇಲ್ಲಿಯ ವಿದ್ಯಾರ್ಥಿಗಳು ಯಾವಾಗಲೂ ತಮ್ಮ ಗುರುಗಳ ಸಹವಾಸದಲ್ಲಿಯೇ ಇದ್ದು ವಿದ್ಯಾರ್ಜನೆ ಮಾಡುತ್ತಿರುತ್ತಾರೆ. ಮತ್ತು ಅವರಿಗೆ ಶಾರೀರಿಕ ಶಿಕ್ಷಣವು ಕೊಡಲ್ಪಡುವುದಲ್ಲದೆ, ವಿದ್ಯಾಲಯದ ಶಿಕ್ಷಣವನ್ನು ಪೂರೈಸಿಕೊಂಡು ಹೋದೊಡನೆ ತಮ್ಮ ಜೀವನವನ್ನು ಸ್ವತಂತ್ರವಾಗಿ ಸಾಗಿಸಿಕೊಳ್ಳಲು ಸಮರ್ಥರಾಗುವಂತೆ ಒಕ್ಕಲುತನ, ಕೈಗಾರಿಕೆ, ಮೊದಲಾದ ಔದ್ಯೋಗಿಕ ಶಿಕ್ಷಣಗಳೂ ಕೊಡಲ್ಪಡುವವು.

ಈ ಉದ್ದೇಶವನ್ನು ಕೊನೆಗಾಣಿಸಲು ಈ ದೇಶದಲ್ಲಿ ಬಾಲಕರ ೧೨ ಮತ್ತು ಬಾಲಕಿಯರ ೩ ವಿದ್ಯಾಲಯಗಳು, ಕೆಲವು ರಾತ್ರಿಯ ಪಾಠಶಾಲೆಗಳು ಸಂಸ್ಥೆಯಿಂದ ನಡೆಯಿಸಲ್ಪಡುತ್ತಲಿವೆ. ಇವುಗಳಲ್ಲಿ ಮದ್ರಾಸಿನಲ್ಲಿರುವ ವಿದ್ಯಾಲಯವೇ ದೊಡ್ಡದು. ಇದಕ್ಕೆ ಲಕ್ಷಾಂತರ ರೂಪಾಯಿಗಳು ವೆಚ್ಚವಾಗಿವೆ. ಈಗ ಅಲ್ಲಿ ೧೨೨ ವಿದ್ಯಾರ್ಥಿಗಳಿದ್ದಾರೆ. ಇದಕ್ಕೆ ೪೫ ಸಹಸ್ರ ರೂ. ಗಳ ವಾರ್ಷಿಕ ವೆಚ್ಚವಿದೆ. ಧರ್ಮಜಾಗ್ರತೆಗೋಸ್ಕರ ಈ ಪ್ರಕಾರ ಅನೇಕ ಮಹತ್ವ ಕಾರ್ಯಗಳನ್ನು ಈ ಸಂಘದವರು ಮಾಡುತ್ತ ಈ ದೇಶದಲ್ಲಿ ಆರ್ಯಸಂಸ್ಕೃತಿಯ ಜೀರ್ಣೋದ್ಧಾರ ಮಾಡುತ್ತಿರುವವರಲ್ಲದೆ ಪರದೇಶಗಳಲ್ಲಿ ಇದರ ಶ್ರೇಷ್ಠತ್ವವನ್ನು ಪ್ರಸಾರಗೊಳಿಸುತ್ತಿದ್ದಾರೆ. ಇದೇ ಈ ಸಂಘದಿಂದಾಗುತ್ತಿರುವ ಅದ್ವಿತೀಯ ಮತ್ತು ಅಭೂತಪೂರ್ವವಾದ ಕಾರ್ಯವು.

ಗುರುಕುಲ ವಿಶ್ವವಿದ್ಯಾಲಯ

ಶ್ರೀ ರಾಮಕೃಷ್ಣ ಪರಮಹಂಸರ ಪ್ರಭಾವದಿಂದ ಶ್ರೀ ವಿವೇಕಾನಂದರವರು ಧಾರ್ಮಿಕ ದಿಗ್ವಿಜಯವನ್ನು ಹೊಂದಿ ಬಂಗಾಲ ಮತ್ತು ಮದ್ರಾಸ್ ಪ್ರಾಂತಗಳ ಅನೇಕ ಸುಶಿಕ್ಷಿತ ಸ್ವಾರ್ಥತ್ಯಾಗಿಗಳು ರಾಮಕೃಷ್ಣ ಮಿಷನ್ ಮೂಲಕ ಲೋಕೋದ್ಧಾರದ ಪವಿತ್ರಕಾರ್ಯದಲ್ಲಿ ಆಸಕ್ತರಾಗುವಂತೆ ಮಾಡಿದರಷ್ಟೆ ಇದೇ ಪ್ರಕಾರ ವೇದವಿದ್ಯಾವಿಶಾರದರೂ, ಘನವಿದ್ವಾಂಸರೂ, ಮಹಾತಪಸ್ವಿಗಳು ಆದ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರು ಪಂಜಾಬ ಪ್ರಾಂತ್ಯದ ಅನೇಕ ಸುಶಿಕ್ಷಿತರನ್ನು ವೇದವಿದ್ಯೆ ಕಡೆಗೆ ತಿರುಗಿಸಿ, ಪ್ರಾಚೀನ ಋಷಿಕುಲದ ಶ್ರೇಷ್ಠಪದ್ಧತಿಗಳನ್ನು ಪುನರುಜ್ಜೀವನಗೊಳಿಸಿದರು. ಶ್ರೀ ರಾಮಕೃಷ್ಣಪರಮ ಹಂಸರ ಶಿಷ್ಯವೃಂದರದಲ್ಲಿ ಶ್ರೀ ವಿವೇಕಾನಂದರು ಹೇಗೆ ಅಗ್ರಗಣ್ಯರಾಗಿ ಅವರ ಅವತಾರ ಕೃತ್ಯವನ್ನು ಮುಂದುವರಿಸಿದರೋ ಹಾಗೆಯೇ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಶಿಷ್ಯಸಮೂಹದಲ್ಲಿ ಮುನಸಿ ರಾಮಜಿ ಮಹಾತ್ಮಾ (ಶ್ರೀ ಸ್ವಾಮಿ ಶ್ರದ್ಧಾನಂದಜಿ) ಯವರು ಪ್ರಮುಖರಾಗಿ ಗುರುಗಳ ಉದ್ದೇಶವನ್ನು ಕೊನೆಗಾಣಿಸಿದರು.

ಭಿನ್ನ ಭಿನ್ನ ಧರ್ಮದವರಲ್ಲಿ ಪರಸ್ಪರ ಪ್ರೇಮಾದರಗಳುಂಟಾಗುವಂತೆ ಸರ್ವಧರ್ಮಗಳಲ್ಲಿಯೂ ಏಕತ್ವವನ್ನು ತೋರಿಸಿಕೊಟ್ಟು ಅವುಗಳಲ್ಲೆಲ್ಲಾ ಭಾರತೀಯರ ವೇದಾಂತ ಅಥವಾ ಅದ್ವೈತ ತತ್ವವೇ ಶ್ರೇಷ್ಠತರವಾದುದೆಂಬುದನ್ನು ಸಿದ್ಧಾಂತಗೊಳಿಸುವುದು ಶ್ರೀ ಸ್ವಾಮಿ ವಿವೇಕಾನಂದರ ಉದ್ದೇಶವಾಗಿದ್ದಿತು. ಆದುದರಿಂದ ಇವರು ಪರದೇಶಗಳು ತಮ್ಮ ಕಾರ್ಯಕ್ಷೇತ್ರಗಳೆಂದು ಗೊತ್ತುಮಾಡಿ, ಅನೇಕ ಆಧುನಿಕ ರೀತಿಗಳನ್ನನುಸರಿಸಿ ಕಾರ್ಯಮಾಡುವ ಪದ್ಧತಿಯನ್ನುಂಟುಮಾಡಿದರು. ಶ್ರೀ ಸ್ವಾಮಿದಯಾನಂದ ಸರಸ್ವತಿಗಳಾದರೋ ಶುದ್ಧ ವೈದಿಕರು ಪ್ರಾಚೀನ ಋಷಿಪದ್ಧತಿಯ ವಿನಾ ಅನ್ಯರೀತಿಗಳು ಇವರಿಗೆ ತಿಲಾಂಶವಾದರೂ ಮಾನ್ಯವಿರಲಿಲ್ಲ. ವೈದಿಕಧರ್ಮದ ವಿನಾ ಅನ್ಯಧರ್ಮಗಳೆಲ್ಲ ಧರ್ಮಗಳೇ ಅಲ್ಲವೆಂಬುದು ಅವರ ಸಿದ್ಧಾಂತವಾಗಿದ್ದಿತು. ಆದಕಾರಣ ಅವರ ಶಿಷ್ಯಕೋಟಿಯಲ್ಲಿ ಕೂಡ ಕೇವಲ ವೈದಿಕ ಪದ್ಧತಿಗಳೇ ನೆಲೆಸಿರುವುದು ಸ್ವಾಭಾವಿಕವಾಗಿದೆ. ಗುಣಕರ್ಮಸ್ವಭಾವಗಳಿಗನುಗುಣವಾದ ವರ್ಣಾಶ್ರಮ ಧರ್ಮಗಳು ಪ್ರಾಚೀನ ಕಾಲದಂತೆ ಪುನಃ ಭಾರತೀಯರ ಆಚರಣೆಯಲ್ಲಿ ಬರದ ವಿನಾ ಭಾರತೀಯರು ಯಾವ ವಿಷಯದಲ್ಲಿಯೂ ಅಭಿವೃದ್ಧಿಯನ್ನು ಹೊಂದುವುದು ಸಾಧ್ಯವೇ ಇಲ್ಲವೆಂಬುದು ಮಹರ್ಷಿ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರ ಅಭಿಪ್ರಾಯವಾಗಿದ್ದಿತು. ಆದುದರಿಂದ ಆರ್ಯಸಮಾಜವು ಪ್ರಾಚೀನ ವೈದಿಕ ಪದ್ಧತಿಯನ್ನನುಸರಿಸಿಯೇ ತನ್ನ ಕಾರ್ಯವನ್ನು ಮಾಡುತ್ತಲಿದೆ.

ವೈದಿಕ ಧರ್ಮದಲ್ಲಿ ವೇದವಿದ್ಯೆಗೇನೆ ಅಗ್ರಸ್ಥಾನವು. ಆ ವೈದಿಕ ವಿದ್ಯೆಯಾದರೋ ಪ್ರಾಚೀನಪದ್ಧತಿಯಂತೆ ಗುರುಕುಲಗಳಲ್ಲಿಯೇ ದೊರೆಯುವುದು ವಿಹಿತವಷ್ಟೆ ಆದಕಾರಣ ವೈದಿಕಧರ್ಮದ ಜೀರ್ಣೋದ್ಧಾರಕ್ಕೂ ಅದರ ಪ್ರಸಾರಕ್ಕೂ ಆರಂಭದಲ್ಲಿ ಗುರುಕುಲಸ್ಥಾಪನೆಯೇ ಅಗತ್ಯವಾದುದೆಂದು ತಾ॥ ೨೬-೧೧-೧೮೯೮ನೆಯ ದಿವಸ ಪಂಜಾಬ ಆರ್ಯಪ್ರತಿನಿಧಿ ಸಭೆಯವರು ನಿರ್ಧರಿಸಿದರು. ಈ ಮಹತ್ಕಾರ್ಯವನ್ನು ಮಹಾತ್ಮ ಮುನಿಸಿರಾಮಜಿ (ಧರ್ಮವೀರ ಸ್ವಾಮಿ ಶ್ರದ್ಧಾನಂದ) ರವರು ಕೈಕೊಂಡು ತಾ॥ ೨-೩-೧೯೦೨ನೆಯ ದಿವಸ ಹರಿದ್ವಾರದ ಹತ್ತಿರ ಅತ್ಯಂತ ರಮಣೀಯವಾದ ಸೃಷ್ಟಿ ಸೌಂದರ್ಯವುಳ್ಳ ಗಂಗಾತೀರದಲ್ಲಿ ಗುರುಕುಲವನ್ನು ಸ್ಥಾಪಿಸಿದರು. ಆ ದಿವಸವು ಆರ್ಯ ಸಂಸ್ಕೃತಿಯ ಪುನರುದ್ಧಾರದ ಸುದಿನವು. ಪ್ರಾಚೀನ ಋಷಿಕುಲದ ಜ್ಞಾನರವಿಯ ಉದಯದ ಮಂಗಲಕಾಲವು; ಸಹಸ್ರಾವಧಿ ವರುಷಗಳಿಂದ ಲುಪ್ತವಾಗಿದ್ದ ಭಾರತೀಯ ಬ್ರಹ್ಮಚರ್ಯಾಶ್ರಮ ಜ್ಯೋತಿಯ ಪ್ರಕಟವಾದ ಶುಭಮುಹೂರ್ತವು. ಆದುದರಿಂದ ಶ್ರೀ ಶ್ರದ್ಧಾನಂದರವರು ಆರಂಭದಲ್ಲಿ ನಾಲ್ಕಾರು ಬ್ರಹ್ಮಚಾರಿಗಳನ್ನು ಮಾತ್ರ ಕರೆದುಕೊಂಡು ಬಂದು, ಈ ಗುರುಕುಲವನ್ನು ಸ್ಥಾಪಿಸಿದರು. ಈ ೨೫ ವರುಷಗಳಲ್ಲಿಯೇ ಅದು ಅಭಿವೃದ್ಧಿಯನ್ನು ಹೊಂದಿ, ಭರತಖಂಡದ ಎಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲಿ ಬಹು ಮೆಚ್ಚಿನ ಸ್ಥಾನವನ್ನು ಹೊಂದಿದೆ.

ಈ ಹರಿದ್ವಾರ ಗುರುಕುಲದಲ್ಲಿ ಈಗ ೩೨೬ ಬ್ರಹ್ಮಚಾರಿಗಳು ವಿದ್ಯಾಧ್ಯಯನಮಾಡುತ್ತಿದ್ದಾರೆ. ಇದರ ಶಾಖಾ ಗುರುಕುಲಗಳು ೭ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟು ಅವುಗಳಲ್ಲಿ ೪೫೦ ಬ್ರಹ್ಮಚಾರಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹರಿದ್ವಾರದೊಂದೇ ಗುರುಕುಲದ ವಾರ್ಷಿಕ ವೆಚ್ಚವು ಸಾಧಾರಣ ಎರಡು ಲಕ್ಷ ರೂಪಾಯಿಗಳಿವೆ. ಇದರ ಮೇಲಿಂದ ಈ ಗುರುಕುಲದ ಮಹತ್ವವು ಮತ್ತು ಲೋಕಪ್ರಿಯತೆಯು ಸ್ಪಷ್ಟವಾಗುತ್ತದೆ. ಕಳೆದ ಮಾರ್ಚ ತಿಂಗಳಲ್ಲಿ ಮಹಾತ್ಮಗಾಂಧಿಯವರ ಅಧ್ಯಕ್ಷತೆಯಲ್ಲಿ ಈ ಗುರುಕುಲದ ೨೫ನೆಯ ವರ್ಷದ ವರ್ಧಂತ್ಯುತ್ಸವವು ಜರುಗಿತು. ಈ ಮಹತ್ಕಾರ್ಯಕ್ಕೆ ಸಾಧಾರಣ ೨೫ ಸಹಸ್ರ ಜನರು ಕೂಡಿದ್ದರು. ಆ ಕಾಲಕ್ಕೆ ಗುರುಕುಲದ ಸಹಾಯಾರ್ಥವಾಗಿ ೨ ಲಕ್ಷ ೭೦ಸಹಸ್ರ ರೂ. ಗಳು ಕೂಡಿದವು. ಇದರಿಂದ ಉಕ್ತಭಾಗದ ವಿಶೇಷವಾಗಿ ಪಂಜಾಬ ಪ್ರಾಂತದ ವೈದಿಕಧರ್ಮಾನುಯಾಯಿಗಳಿಗೆ ಈ ಸಂಸ್ಥೆಯು ಎಷ್ಟು ಪವಿತ್ರತರವಾದುದಾಗಿ ತೋರುತ್ತದೆಂತಲೂ, ಇದಕ್ಕೆ ದ್ರವ್ಯವನ್ನು ಹೇಗೆ ಸೂರೆಮಾಡಲು ಸಿದ್ಧರಾಗಿದ್ದಾರೆಂತಲೂ, ಸ್ಪಷ್ಟವಾಗುವುದಿಲ್ಲವೇ?

ಸೃಷ್ಟಿಸೌಂದರ್ಯವುಳ್ಳ ನಿರ್ಜನವಾದ ಪ್ರದೇಶದಲ್ಲಿ ಸ್ಥಾಪಿಸಲ್ಪಡುವ ಈ ಗುರುಕುಲಗಳಿಗೆ ಆ ಭಾಗದ ಜನರು ತಮ್ಮ ಮಕ್ಕಳು ೮ ನೆಯ ವರ್ಷದವರಾದೊಡನೆ ಅವರನ್ನು ಕಳುಹಿಸುತ್ತಾರೆ. ಆ ವಿದ್ಯಾರ್ಥಿಗಳು ೨೫ ವರುಷದವರಾಗುವ ವರೆಗೆ ಬ್ರಹ್ಮಚರ್ಯವ್ರತದಿಂದ ಗುರುಗಳ ಸನ್ನಿಧಿಯಲ್ಲಿಯೇ ವಾಸವಾಗಿದ್ದು ವೇದವೇದಾಂಗಗಳಾದ ಭಾರತೀಯ ಪ್ರಾಚೀನ ವಿದ್ಯೆಗಳನ್ನೂ ಇಂಗ್ಲೀಷ್, ಇತಿಹಾಸ, ತುಲನಾತ್ಮಕವಾದ ಧರ್ಮಶಾಸ್ತ್ರ ಅರ್ಥಶಾಸ್ತ್ರ ಮೊದಲಾದ ಆಧುನಿಕ ವಿದ್ಯೆಗಳನ್ನು ಅವರವರ ಇಚ್ಛಾನುಸಾರ ಕಲಿಯುತ್ತಾರೆ. ಪಾಲಕರು ವಿದ್ಯಾರ್ಥಿಯ ವೆಚ್ಚಕ್ಕಾಗಿ ತಿಂಗಳಿಗೆ ೧೫ ರೂ. ಗಳಿಂದ ೨೫ ರೂ. ಗಳ ವರೆಗೆ ಆಯಾಯ ತರಗತಿಗಳಿಗನುಸರಿಸಿ ಹಣವನ್ನು ಕೊಡಬೇಕಾಗುವುದು. ವಿದ್ಯಾಭ್ಯಾಸವು ಉಚಿತವಾಗಿಯೇ ಕೊಡಲ್ಪಡುತ್ತದೆ. ನೂರಾರು ವಿದ್ಯಾರ್ಥಿಗಳು ಈ

ಗುರುಕುಲಗಳಲ್ಲಿಯೇ ೧೫-೧೬ ವರುಷ ವಾಸವಾಗಿದ್ದು ಧೃಢಕಾಯರೂ ಬುದ್ಧಿಶಾಲಿಗಳೂ ಪವಿತ್ರಾಚರಣೆಯವರೂ ಆಗುತ್ತಿರುವುದನ್ನು ನೋಡಿದರೆ ಇದೇ ನಿಜವಾದ ಶಿಕ್ಷಣವೆಂಬುದು ಸ್ಪಷ್ಟವಾಗುತ್ತದೆ. ಈಗ ಪಟ್ಟಣಗಳಲ್ಲಿ ನಾನಾ ದುರಭ್ಯಾಸಗಳಿಗೆ ಸಿಲುಕಿ ಬೆಂದು ಬೆಂಡಾಗಿ ಬಹು ಶೋಚನೀಯ ಸ್ಥಿತಿಯನ್ನು ಹೊಂದುತ್ತಿರುವ ಸಹಸ್ರಾವಧಿ ಭಾರತೀಯ ತರುಣರಿಗೆ ಪ್ರಾಚೀನ ಪದ್ಧತಿಯ ಇಂತಹ ಶಿಕ್ಷಣವು ಅವಶ್ಯಕವಲ್ಲವೆ? ಸ್ವಾವಲಂಬನೆಯಿಂದ ಜೀವನವನ್ನಾದರೂ ನಡೆಯಿಸಿಕೊಳ್ಳಲು ಸಾಮರ್ಥ್ಯ ಉಂಟಾಗದೆ ಇರತಕ್ಕ ನಿಸ್ಸಾರವಾದ ಈಗಿನ ಶಿಕ್ಷಣದಿಂದ ಭಾರತೀಯ ತುರಣರ ಬುದ್ಧಿ, ಶಕ್ತಿ, ಸಾಹಸಗಳೂ ವ್ಯರ್ಥವಾಗುತ್ತಿರುವುದನ್ನು ನಿಲ್ಲಿಸಲು ಇಂತಹ ಗುರುಕುಲಗಳು ಎಲ್ಲೆಲ್ಲಿಯೂ ಸ್ಥಾಪಿಸಲ್ಪಡುವುದು ಅವಶ್ಯಕವಲ್ಲವೇ? ಈಗಿನ ಬಾಲಕರೇ ರಾಷ್ಟ್ರದ ಮುಂದಿನ ಜನಾಂಗವಾಗಿರುವುದರಿಂದ ಇವರನ್ನು ಶಾರೀರಿಕ, ಬೌದ್ಧಿಕ, ನೈತಿಕ ಮತ್ತು ಧಾರ್ಮಿಕ ಮೊದಲಾದ ಸರ್ವ ವಿಷಯಗಳಲ್ಲಿಯೂ ಸುಸ್ಥಿತಿಯಲ್ಲಿಡುವುದು ರಾಷ್ಟ್ರಹಿತೈಷಿಗಳ ಪ್ರಥಮಕರ್ತವ್ಯವಾಗಿಲ್ಲವೇ? ಅಂತಹ ದಿನವು ಎಂದು ಪ್ರಾಪ್ತವಾಗುವುದೋ ಅಂದೇ ಭಾರತೀಯರ ಭಾಗ್ಯೋದಯವಾಯಿತೆಂದು ತಿಳಿಯಬೇಕು

ಶ್ರೀ ರಾಮಕೃಷ್ಣ ಮಿಷನ್ನಿನವರು ಅದ್ವೈತ ತತ್ವವನ್ನು ಪ್ರಸಾರ ಮಾಡುತ್ತಿದ್ದಾರೆ. ಶ್ರೀಸ್ವಾಮಿ ದಯಾನಂದ ಸರಸ್ವತಿಗಳವರ ಆರ್ಯ ಸಮಾಜದವರಾದರೋ ದ್ವೈತಮತವನ್ನು ಪ್ರಚಾರಗೊಳಿಸುತ್ತಿದ್ದಾರೆ. ಈ ಪ್ರಕಾರ ಪರಸ್ಪರ ಭಿನ್ನವಾಗಿರತಕ್ಕ ಉಭಯ ಸಂಸ್ಥೆಗಳ ಮತತತ್ವಗಳು ಸರ್ವಸಮ್ಮತವಾದವುಗಳಾಗಿರದಿದ್ದರೂ ಇವುಗಳಿಂದ ಆರ್ಯಸಂಸ್ಕೃತಿಯ ಜೀರ್ಣೋದ್ಧಾರ ವಾಗುತ್ತಲಿದೆಯೆಂಬ ವಿಷಯದಲ್ಲಿಯೂ ಪಾಶ್ಚಾತ್ಯ ಸಂಸ್ಕೃತಿಯ ಈಗಿನ ಅನೇಕ ದೋಷಗಳು ಭಾರತೀಯರಲ್ಲಿ ಪ್ರಸಾರವಾಗಲೂ ಬಲವಾದ ಪ್ರತಿಬಂಧವುಂಟಾಗಿದೆಯೆಂಬ ವಿಷಯದಲ್ಲಿಯೂ ಮಾತ್ರ ಭಿನ್ನಾಭಿಪ್ರಾಯವಿರುವುದು ಶಕ್ಯವೇ ಇಲ್ಲ. ಕರ್ನಾಟಕದವರಾದ ನಾವು ಈ ಉಭಯ ಸಂಸ್ಥೆಗಳಿಂದಲೂ ಅನೇಕ ಸಂಗತಿಗಳನ್ನು ಕಲಿತುಕೊಂಡು ಆರ್ಯಸಂಸ್ಕೃತಿಯ ಜೀರ್ಣೋದ್ಧಾರಕ್ಕೋಸ್ಕರ ಈಗಲಾದರು ಪ್ರಯತ್ನಿಸುವುದು ಅವಶ್ಯಕವಾಗಿಲ್ಲವೆ?

❖❖

ಪ್ರಾಮಾಣಿಕತನದಿಂದಾಗುವ ಲಾಭಗಳು

ಶ್ರೀ ಕರಿಬಸವಯ್ಯನವರು ಪುರಾಣಿಕ, ಸಹಾಯೋಪಾಧ್ಯಾಯ

ಪ್ರಾಮಾಣಿಕತನವು ಮಿತವ್ಯಯ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಮನುಷ್ಯನೊಡನೆ ವ್ಯವಹಾರವು ಬಹು ತೀವ್ರವಾಗಿಯೂ, ಸಮಾಧಾನಕರವಾಗಿಯೂ, ಲಾಭದಾಯಕವಾದುದಾಗಿಯೂ ಸಾಗುವುದರಿಂದ, ಬುದ್ಧಿವಂತನಾದ ಮನುಷ್ಯನು ಕವಡಗಂಟಕ ವ್ಯವಹಾರದಲ್ಲಿ ಸುಮ್ಮನೆ ತನ್ನ ಕಾಲವನ್ನು ವ್ಯರ್ಥವಾಗಿ ಕಳೆಯಲಾರನು.

ಜಗತ್ತಿನ ಎಲ್ಲ ವ್ಯವಹಾರಗಳಲ್ಲಿ ಅಪ್ರಮಾಣಿಕತನವು ಪೂರ್ಣವಾಗಿ ತೆಗೆದುಹಾಕಲ್ಪಟ್ಟರೆ ಎಷ್ಟೋ ಉಳಿತಾಯವಾಗುವುದು.

ವ್ಯವಹಾರದಲ್ಲಿ ಮಾಡತಕ್ಕ ಅಲ್ಪ ಮೋಸಗಳನ್ನು ಕಂಡುಹಿಡಿಯುವುದಕ್ಕಾಗಿ ಮತ್ತು ಇಂಥ ಮೋಸದ ಬಲೆಯೊಳಗೆ ಸಿಲುಕದೆ ಇರುವುದಕ್ಕಾಗಿ ಹೆಚ್ಚು ವೆಚ್ಚದ ವ್ಯಾಪಾರ ಪದ್ಧತಿಯು ಬಳಕೆಯಲ್ಲಿ ಬಂದಿರುವುದರಿಂದ ಪ್ರಾಮಾಣಿಕ ಜನರು ನಿರರ್ಥಕವಾಗಿ ಹೆಚ್ಚು ಹಣವನ್ನು ತೆರಬೇಕಾಗುತ್ತದೆ. ಈ ಪ್ರಕಾರ ಹೆಚ್ಚು ಹಣವನ್ನು ವೆಚ್ಚಮಾಡಿದರು ಕೂಡ ಅವರು ಮೋಸ ಹೋಗುವದೇನು ತಪ್ಪುವುದಿಲ್ಲ.

ಪ್ರಮಾಣಿಕತನವು ಬಹಳ ಶ್ರಮವನ್ನು ಉಳಿಸುತ್ತದೆ. ಇಪ್ಪತ್ತು ಜನ ಪ್ರಾಮಾಣಿಕರ ಹಾಗೂ ಮಿತವ್ಯಯಿ ಸದ್ಗೃಹಸ್ಥರೊಡನೆ ವ್ಯವಹಾರ ಮಾಡುವದು ಐದಾರೇ ಠಕ್ಕ ಗಿರಾಕಿಗಳೊಡನೆ ವ್ಯವಹಾರ ಮಾಡುವುದಕ್ಕಿಂತ ಹೆಚ್ಚು ಸುಲಭವಾದದ್ದೂ ಮತ್ತು ಸ್ವಲ್ಪ ವೇಳೆಯಲ್ಲಿ ಮುಗಿಯುವಂಥಾದ್ದೂ ಆಗಿರುತ್ತದೆಂಬುದನ್ನು ಪ್ರತಿಯೊಬ್ಬ ವರ್ತಕನು ಬಲ್ಲನು.

ಕೆಲಕೆಲವು ದೇಶಗಳಲ್ಲಿ ಕಳ್ಳತನವು ಅತಿಶಯ ಪ್ರಚಾರದಲ್ಲಿರುವುದರಿಂದ ಒಕ್ಕಲಿಗರು ರಾತ್ರಿ ತಮ್ಮ ಹೊಲಗಳನ್ನು ಕಾಯಲಿಕ್ಕೆ ಬಂದೂಕನ್ನು ಬಾರುಮಾಡಿಕೊಂಡು ಹೋಗುವ ಪ್ರಸಂಗಗಳು ಬರುತ್ತವೆ. ಇದೆಂಥ ಅನವಶ್ಯಕವಾದ ಉದ್ಯೋಗ ನೋಡಿರಿ! ನಗರರಕ್ಷಣೆಗಾಗಿ ಸಾಕಷ್ಟು ಪೋಲಿಸಿನವರು ಇರುತ್ತಿದ್ದರೂ, ಧನವಂತರು ತಮ್ಮ ಮನೆ ಕಾಯಲಿಕ್ಕೆ ಶಸ್ತ್ರಧರಿಸಿದ ಜನಗಳನ್ನಿಡಬೇಕಾಗುವುದು.

ಮಿತವ್ಯಯದೃಷ್ಟಿಯಿಂದ ಚೆನ್ನಾಗಿ ಪರಿಶೀಲಿಸಿನೋಡಿದರೆ ಮೋಸಗಾರಿಕೆಯನ್ನು ನಿಲ್ಲಿಸತಕ್ಕ ಪ್ರತಿಯೊಂದು ಉಪಾಯವೂ, ಧನ, ವೇಳೆ ಮತ್ತು ಶಕ್ತಿಗಳನ್ನು ವ್ಯರ್ಥವಾಗಿ ಕಳೆಯತಕ್ಕ ಸಾಧನವೆಂದು ಹೇಳಲಿಕ್ಕೆ ಯಾವ ಅಡ್ಡಿಯೂ ತೋರುವುದಿಲ್ಲ. ಆದುದರಿಂದ ಜಗತ್ತಿನ ಎಲ್ಲ ಜನರೂ ಪ್ರಾಮಾಣಿಕರಾದರೆ ಮೇಲೆ ಹೇಳಿದ ಧನ, ವೇಳೆ ಮತ್ತು ಶಕ್ತಿಗಳ ಉಳಿತಾಯವಾಗುವದಲ್ಲದೆ, ಸಾವಿರಾರು ಜನ ಕಳ್ಳಕಾಕರು ಸಹ ಬೇರೆ ಆದಾಯದ ಹೊರೆಗಳನ್ನು ಕೈಕೊಳ್ಳುವುದರಿಂದ ಅತಿಶಯ ಲಾಭವಾಗುವದರಲ್ಲಿ ಸಂದೇಹವಿಲ್ಲ.

ಮನುಷ್ಯನಲ್ಲಿರತಕ್ಕ ಸದ್ಗುಣಗಳಲ್ಲಿ ಪ್ರಾಮಾಣಿಕತನವು ಅತಿಶಯ ಮಹತ್ವದ್ದಾಗಿದೆ. ಚಿಕ್ಕತನದಲ್ಲಿಯೇ ಈ ಸದ್ಗುಣವನ್ನು ಕಲಿಯಲಿಕ್ಕೆ ನಾವು ಎಳ್ಳಷ್ಟೂ ಹಿಂಜರಿಯತಕ್ಕದ್ದಲ್ಲ. ಮನೆಯಲ್ಲಿಯು ಮತ್ತು ಶಾಲೆಯಲ್ಲಿಯೂ ಈ ಗುಣವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಎಂದೂ ಮರೆಯಬಾರದು. ಉದ್ಯೋಗಶೀಲರು ಯಾವಾಗಲೂ ಎಷ್ಟು ಜಾಗರೂಕತೆಯಿಂದ ವರ್ತಿಸಿದರೂ ಮೇಲಿಂದಮೇಲೆ ಈ ಮೋಸಗಾರರ ಬಲೆಗೆ ಬೀಳುವುದು ಮತ್ತು ನಾನಾತರದ ಕಷ್ಟಕ್ಕೀಡಾಗುವುದು ತಪ್ಪುವುದಿಲ್ಲ. ಆದುದರಿಂದಲೇ ವ್ಯವಹಾರದಲ್ಲಿ ಪ್ರಾಮಾಣಿಕತನಕ್ಕೆ ಇಷ್ಟು ಬೆಲೆ ಬಂದಿರುತ್ತದೆ.

ಗೊಬ್ಬರದ ಉದ್ಯೋಗ

ದನಗಳ ಸಗಣಿ ಮತ್ತು ಮೂತ್ರಗಳನ್ನು ಗೊಬ್ಬರಕ್ಕಾಗಿ ಉಪಯೋಗಿಸುವುದು ನಮ್ಮ ದೇಶದಲ್ಲಿ ಬಹಳ ಕಡಿಮೆ. ಸಗಣಿಯನ್ನು ಕುಳ್ಳು ಬಡಿದು ಒಣಗಿಸಿ ಉರುವಲಕ್ಕಾಗಿಯೇ ಬಹು ಜನರು ಉಪಯೋಗಿಸುತ್ತಾರೆ. ಜನರಿಗೆ ಸಗಣಿಯ ಗೊಬ್ಬರದ ಮಹತ್ವವೇ ಗೊತ್ತಿರುವುದಿಲ್ಲ. ಕುಳ್ಳಿನ ಬೂದಿಯೇ ಎಷ್ಟೋ ಕಸುವುಳ್ಳ ಗೊಬ್ಬರವಾಗಿರುವುದರಿಂದ ಸಗಣಿಯು ಎಷ್ಟು ಮಹತ್ವದ್ದಿರುವುದೆಂಬುದು ತಾನೇ ತಿಳಿಯುತ್ತದೆ. ಇದು ಭತ್ತ, ಗೋದಿ, ಜೋಳ ಮೊದಲಾದ ಏಕದಳ ಧಾನ್ಯಗಳಿಗೂ ಉತ್ತಮವಾದ ಗೊಬ್ಬರವಾಗಿರುತ್ತದೆ. ಇದನ್ನು ಕೆಲವು ತಿಂಗಳವರೆಗೆ ಕೂಡಿ ಹಾಕುತ್ತ ಆಮೇಲೆ ತಿಂಗಳೊಪ್ಪತ್ತು ಬಿಟ್ಟು ನಂತರ ಹೊಲಗಳಿಗೆ ಉಪಯೋಗಿಸಬೇಕು. ಹಾಗೆಯೇ ಉಪಯೋಗಿಸುವದರಿಂದ ಉಷ್ಣತೆಯಿಂದ ಬೆಳೆಗಳು ಒಣಗಿಹೋಗುವ ಸಂಭವವುಂಟು.

ಸಗಣಿಯ ಗೊಬ್ಬರದ ಉಪಯೋಗವು ಅಲ್ಪಸ್ವಲ್ಪಾದರೂ ರೂಢಿಯಲ್ಲಿದೆ. ಆದರೆ ದನಗಳ ಮೂತ್ರದ ಗೊಬ್ಬರವಂತೂ ನಮ್ಮ ಜನರಿಗೆ ಗೊತ್ತೇ ಇಲ್ಲ. ಗೋ ಮೂತ್ರವನ್ನು ಕೆಮ್ಮು ಮೊದಲಾದ ರೋಗಗಳಿಗೆ ಮಾತ್ರ ಉಪಯೋಗಿಸುತ್ತಾರೆ. ಮೂತ್ರವನ್ನು ಗೊಬ್ಬರಕ್ಕಾಗಿ ಹೇಗೆ ಉಪಯೋಗಿಸಬೇಕೆಂಬುದನ್ನು ಮಿ॥ ನೀಲಾನಂದ ಚ್ಯಾಟರ್ಜಿಯವರು ಬಂಗಾಲದಲ್ಲಿಯ ಲಿಲೋಹ (Lilooah)ಫಾರ್ಮಿನಲ್ಲಿ ಪ್ರಯೋಗಮಾಡಿ ನೋಡಿದ ತಮ್ಮ ಅನುಭವವನ್ನು ಈ ಕೆಳಗೆ ಬರೆದಂತೆ ವಿವರಿಸಿದ್ದಾರೆ. ದನಗಳ ಕೊಟ್ಟಿಗೆಯ ಸಮೀಪದಲ್ಲಿಯೇ ದನಗಳ ಮೂತ್ರ ಮತ್ತು ಕೊಟ್ಟಿಗೆಯನ್ನು ತೊಳೆದ ನೀರು ಕೂಡಿಬೀಳುವ ತಗ್ಗಿನ ಹತ್ತಿರದಲ್ಲಿ ಕಾಯಿಪಲ್ಯಗಳ ಸಸಿಗಳನ್ನು ಹಚ್ಚಿದ್ದೆವು. ಆ ತಗ್ಗಿನ ಸುತ್ತಲಿದ್ದ ಸಸಿಗಳು ದೂರದಲ್ಲಿಯ ಸಸಿಗಳಷ್ಟು ಚೆನ್ನಾಗಿ ಬೆಳೆದಿದ್ದಿಲ್ಲ, ಎಷ್ಟೋ ದಿವಸಗಳ ವರೆಗೆ ಅದರ ಕಾರಣವನ್ನು ಶೋಧಿಸುತ್ತಿರಲಾಗಿ, ಮಧ್ಯದಲ್ಲಿದ್ದ ತಗ್ಗಿನೊಳಗಿನ ಮೂತ್ರದಿಂದಲೇ ಸಸಿಗಳ ಬೆಳವಣಿಗೆಗೆ ಪ್ರತಿಬಂಧವಾಗಿದೆಯೆಂದು ಕಂಡುಬಂತು. ಅಂದಿನಿಂದ ದನಗಳ ಮೂತ್ರದಿಂದ ಬೆಳೆಯುವ ಸಸಿಗಳ ಮೇಲೆ ಪ್ರಯೋಗಗಳನ್ನು ಮಾಡಲಾರಂಭಿಸಿದೆನು. ಮೊಟ್ಟಮೊದಲು ಮೂತ್ರವನ್ನು

ಸರಿ ಅರ್ಧ ನೀರಿನಲ್ಲಿ ಬೆರಸಿ ಸಸಿಗಳ ಮೇಲೆ ಸಿಂಪಡಿಸಿ ನೋಡಿದೆನು, ಎರಡಷ್ಟು ಮೂರುಪಟ್ಟು ಹಾಗೂ ನಾಲ್ಕು ಪಟ್ಟು ನೀರನ್ನು ಕೂಡಿಸಿದ ಹಾಗೆ ಹೆಚ್ಚು ಹೆಚ್ಚು ಸಮಾಧಾನಕಾರವಾದ ಫಲವು ಕಂಡುಬರಹತ್ತಿತು. ೮-೧೦ ಪಟ್ಟು ನೀರು ಕೂಡಿಸಿದ್ದರಿಂದ ಗೊಬ್ಬರದ ಮೇಲಿಂದ ದನದ ಮೂತ್ರದಲ್ಲಿ ಆದಷ್ಟು ನೀರು ಬೆರಸಿದರೆ ಕಾಯಿಪಲ್ಯಗಳ ಸಸಿಗಳಿಗೆ ತಕ್ಕಂಥ ಗೊಬ್ಬರವಾಗುವದೆಂದು ಗೊತ್ತಾಯಿತು. ಆದರೂ ಅದರಲ್ಲಿ ಸ್ವಲ್ಪಸ್ವಲ್ಪ ದೋಷಗಳಿದ್ದವು. ಪ್ರಯೋಗಮಾಡುವದನ್ನು ಅಷ್ಟಕ್ಕೆ ಬಿಟ್ಟಿರಲಿಲ್ಲ. ಕಡೆಗೆ ಇಂಥ ನೀರು ಬೆರೆತ ಮೂತ್ರದಲ್ಲಿ ಸ್ವಲ್ಪ ಮಣ್ಣನ್ನು ಹಾಕಿ ಮಂದವಾಗುವಂತೆ ಮಾಡಿ ಒಂದೆರಡು ದಿನಗಳ ವರೆಗೆ (ಬಹಳ ದಿನಗಳ ವರೆಗೆ ಇಡಬಾರದು) ಇಟ್ಟರೆ ಉತ್ತಮವಾದ ಗೊಬ್ಬರವಾಗುವದೆಂದು ಸಿದ್ಧವಾಯಿತು.

ಮೇಲೆ ಹೇಳಿದ ಗೊಬ್ಬರವನ್ನು ದನಗಳ ಮೂತ್ರದಲ್ಲಿ ಆದಷ್ಟು ನೀರನ್ನು ಕೂಡಿಸಿ ಜೇನು ತುಪ್ಪದಂತೆ ಮಂದವಾಗುವವರೆಗೆ ಅದರಲ್ಲಿ ಹುಡಿಮಣ್ಣನ್ನು ಬೆರೆಸಿ, ಮರುದಿವಸ ಮುಂಜಾನೆ ಅದನ್ನು ಸಸಿಗಳ ಮೇಲೆ ಸಿಂಪಡಿಸಬೇಕು, ಸಸಿಗಳು ಭರದಿಂದ ಬೆಳೆಯಹತ್ತುವ ವರೆಗೆ ಅವಕ್ಕೆ ದಿನಾಲು ಸಾಯಂಕಾಲದಲ್ಲಿ ನೀರು ಹಾಕುವ ಕಾಲಕ್ಕೆ ಈ ಗೊಬ್ಬರವನ್ನು ಸಿಂಪಡಿಸುತ್ತಿರಬೇಕು. ಸಸಿಗಳು ಸ್ವಲ್ಪ ಬೆಳೆದು ದೊಡ್ಡವಾದನಂತರ ಸಾಯಂಕಾಲ ಒಂದೇ ಹೊತ್ತು ಉಪಯೋಗಿಸಬೇಕು. ಮುಂದೆ ಕೆಲವು ದಿವಸಗಳಾದನಂತರ ಹಾಕುತ್ತಹೋಗಬೇಕು. ಸ್ವಲ್ಪೇ ದಿನಗಳ ಅನುಭವದಿಂದ ಬೇರೆ ಬೇರೆ ಸ್ಥಳದಲ್ಲಿ ಇದನ್ನು ಯಾವ ರೀತಿಯಿಂದ ಉಪಯೋಗಿಸಬೇಕೆಂದು ತಾನೇ ಗೊತ್ತಾಗುವುದು.

(Industry ಮಾಸಪತ್ರಿಯೆ ಆಧಾರದಿಂದ ಬರೆದದ್ದು)

❖❖

ಜಾಗ್ರತೆ ಮಲಗುವದು ಮತ್ತು ಜಾಗ್ರತೆ ಏಳುವದು

ಶ್ರೀ ಶಿವಬಸವದೇವರು ವಿದ್ಯಾರ್ಥಿ, ವೀರಶೈವ ವಿದ್ಯಾಲಯ

(ಶ್ರೀಮತ್ ಸ್ವಾಮಿ ಶಿವಾನಂದರವರು ರಚಿಸಿದ 'ಬ್ರಹ್ಮಚರ್ಯ ಜೀವನ ಮತ್ತು ವೀರ್ಯನಾಶವೇ ಮೃತ್ಯು' ಎಂಬ ಮರಾಠಿ ಪುಸ್ತಕದ ೧೨ನೆಯ ನಿಯಮದ ಭಾಷಾಂತರವು)

ನಿದ್ರಾಯತ್ತಂ ಸುಖಂ ದುಃಖಂ ಪುಷ್ಟಿಃ ಕಾರ್ಶ್ಯಂ ಬಲಾಬಲೇ।
ವೃಷತಾಕ್ಲೀಬತಾ ಜ್ಞಾನಂ ಅಜ್ಞಾನಂ ಜೀವಿತಂ ತಥಾ॥

ಸುಖ, ದುಃಖ, ಪುಷ್ಠತ್ವ, ಕೃಶತ್ವ, ಶಕ್ತಿ, ಅಶಕ್ತಿ, ವೀರ್ಯವರ್ಧನ, ವೀರ್ಯನಾಶನ, ಜ್ಞಾನ, ಅಜ್ಞಾನ, ಜೀವಿಸುವುದು, ಮರಣಹೊಂದುವದು ಇವೆಲ್ಲವೂ ನಿದ್ರೆಯನ್ನೇ ಅವಲಂಬಿಸಿಕೊಂಡಿರುತ್ತವೆ. ಅಲ್ಲದ ವೇಳೆಯಲ್ಲಿ ಮಲಗುವದು, ಯೋಗ್ಯವೇಳೆಯಲ್ಲಿ ಮಲಗದೆ ಇರುವುದು, ಇವುಗಳೆಲ್ಲವು ಸುಖಾಂಯುಷ್ಯಗಳನ್ನು ನಾಶಪಡಿಸತಕ್ಕ ಸಾಧನಗಳಾಗಿವೆ. ಆದಕಾರಣ ಸುಖ, ದೀರ್ಘಾಯುರಾರೋಗ್ಯಗಳನ್ನು ಬಯಸತಕ್ಕವರು ಮೇಲೆ ಹೇಳಿದ ವಿಷಯದ ಕಡೆಗೆ ಅವಶ್ಯವಾಗಿ ಲಕ್ಷ್ಯಕೊಟ್ಟು ನಿಯಮಿತವಾಗಿ ನಿದ್ರೆ ಮಾಡಬೇಕು.

ಜಾಗ್ರತಾವಸ್ಥೆಯಲ್ಲಿ ಮನುಷ್ಯನು ಯಾವ ಯಾವ ವಿಚಾರಗಳನ್ನು ಮಾಡುತ್ತಾನೆಯೋ ಅವುಗಳನ್ನೇ ರಾತ್ರಿಯಲ್ಲಿಯೂ ಕೂಡ ಸ್ವಪ್ನ ಮುಖಾಂತರ ಅನುಭವಿಸುತ್ತಾನೆ. ಆದಕಾರಣ ಸ್ವಪ್ನದಲ್ಲಿ ಬರುವ ಕುಕಲ್ಪ ವಿಕಲ್ಪನೆಗಳನ್ನು ಕಿತ್ತುಹಾಕಬೇಕೆಂದಿಚ್ಛಿಸುವವರು ಹಗಲಿನಲ್ಲಿಯೇ ಸದಾ ಪವಿತ್ರಕಾರ್ಯ ಚಿಂತನೆಮಾಡಿ ಪವಿತ್ರದೃಷ್ಟಿಯನ್ನಿಡಬೇಕು. ಸುರ್ಯೋದಯದನಂತರ ಎದ್ದಂಥ ಮನುಷ್ಯರು ಬ್ರಹ್ಮಚರ್ಯದಿಂದಿದ್ದದ್ದು ಮತ್ತು ಭಾಗ್ಯವಾನರಾದದ್ದು ಎಂದೂ ಕೇಳಿಲ್ಲ. ಬ್ರಹ್ಮಚರ್ಯದ ರಕ್ಷಣೆಗಾಗಿ ರಾತ್ರೆಯ ೧೦ ಘಂಟೆಯೊಳಗಾಗಿಯೇ ಮಲಗಿ, ೪ ಗಂಟೆಯೊಳಗಾಗಿಯೇ ಏಳಬೇಕು. ಯಾಕೆಂದರೆ ಸ್ವಪ್ನದೋಷವು ಮುಖ್ಯವಾಗಿ ರಾತ್ರೆಯ ಕಡೆಯ ಯಾಮದಲ್ಲಿಯೇ ಆಗುತ್ತಿರುತ್ತದೆ. (ಬ್ರಾಹ್ಮೇ ಮೂಹುರ್ತೆ ಬುದ್ದೇತ್ ಧರ್ಮಾರ್ಥೌಚಾನುಚಿಂತಯೇತ್) ಬ್ರಾಹ್ಮೀ ಮುಹೂರ್ತಕ್ಕೆ (೩ ರಿಂದ ೪ ಒಳಗಾಗಿ) ಎದ್ದು ತಮ್ಮ ತಮ್ಮ ಇಷ್ಟದೇವತೆಯನ್ನು ಸ್ಮರಿಸಬೇಕು ಮತ್ತು ಪವಿತ್ರಮೂರ್ತಿಯ ದರ್ಶನಹೊಂದಬೇಕು. ಹಾಗೆ ಮಾಡಿದರೆ ಇಡೀ ದಿವಸವೂ ಆನಂದದಲ್ಲಿಯೇ ಹೋಗುತ್ತದೆ.

ಈಶ್ವರನ ಧ್ಯಾನದಿಂದ ಮನುಷ್ಯನು ಕೂಡ ಈಶ್ವರ ಸ್ವರೂಪವನ್ನು ಹೊಂದುತ್ತಾನೆ. ಪ್ರಾತಃಕಾಲಕ್ಕೆ ಅಮೃತವೇಳೆ ಎಂದೆನ್ನುತ್ತಾರೆ. ಈ ವೇಳೆಯಲ್ಲಿ ಮನುಷ್ಯನು ನಿದ್ರೆಯಿಂದ ಎಚ್ಚೆತ್ತರೆ ಅನೇಕ ರೋಗಗಳು ತಮ್ಮಷ್ಟಕ್ಕೆ ತಾವೇ ಪಲಾಯನಮಾಡುತ್ತವೆ. ಮತ್ತು ಮನಸ್ಸು ಕೂಡ ಶಾಂತಿ ಸಮಾಧಾನಗಳನ್ನು ಹೊಂದುತ್ತದೆ (ನನಿಶಾಂತೇ ಪುನಃ ಸ್ವಪೇತ್). ಎಂದರೆ ಒಮ್ಮೆ ಬ್ರಾಹ್ಮೀ ಮುಹೂರ್ತದಲ್ಲಿ ಎಚ್ಚೆತ್ತ ಬಳಿಕ ಪುನಃ ನಿದ್ರೆಹೋಗಬಾರದು. ಅದರಲ್ಲಿ ದೋಷವಿದೆ. ಒಂದು ವೇಳೆ ಮಧ್ಯರಾತ್ರಿಯಲ್ಲಿ ಎಚ್ಚೆತ್ತರೆ ಮೊದಲು ಹೇಳಿದಂತೆ ಇಷ್ಟದೇವತೆಯನ್ನು ಧ್ಯಾನಿಸಿ, ಪುನಃ ಮಲಗಿ ಬ್ರಾಹ್ಮೀ ಮುಹೂರ್ತದಲ್ಲಿ ಏಳಬೇಕು.

ಸಿನಿಮಾ, ನಾಚ, ನಾಟಕ ಮೊದಲಾದವುಗಳನ್ನು ನೋಡಿಕೊಂಡು ತಡವಾಗಿ ಮಲಗಿ ತಡವಾಗಿ ಏಳತಕ್ಕಂಥವರು ಕಲ್ಪನೆಯಲ್ಲಿಯೂ ಕೂಡ ಬ್ರಹ್ಮಚರ್ಯವನ್ನು ಮತ್ತು ಸಂಪತ್ತನ್ನು ಹೊಂದುವದು ಅಶಕ್ಯವು. ಈ ಜಗತ್ತಿನಲ್ಲಿ ಆಗಿಹೋದ ಮಹಾ ಮಹಾ ಪುರುಷರು, ಮಹಾ ಮಹಾ ಋಷಿವರ್ಯರು ಬ್ರಾಹ್ಮೀ ಮುಹೂರ್ತದಲ್ಲಿಯೇ ಏಳುತ್ತಿದ್ದರು. ಮತ್ತು ಸ್ವಲ್ಪ ನಿದ್ರೆಯನ್ನು ಮಾಡುತ್ತಿದ್ದರು. ಶ್ರೀ ಶಿವಾಜೀ, ನೆಪೋಲಿಯನ್ ಮೊದಲಾದ ಅನೇಕ ವೀರಪುರುಷರು ಮೂರು ತಾಸು ನಿದ್ರೆಮಾಡುತ್ತಿದ್ದರು. ಅತಿ ನಿದ್ರೆ ಮಾಡತಕ್ಕವರು ಎಂದಿಗೂ ಮಹಾಪುರುಷರು, ಬ್ರಹ್ಮಚಾರಿಗಳು ಆಗುವುದು ಶಕ್ಯವಲ್ಲ, ಅತಿ ನಿದ್ರೆ ಮಾಡುವುದು ದರಿದ್ರದ ಮತ್ತು ರೋಗಗಳ ಲಕ್ಷಣವು (He who sleeps his fortune sleeps) ಯಾವಾತನೂ ಬಹು ನಿದ್ರೆಯನ್ನು ಮಾಡುತ್ತಾನೆಯೋ ಆತನ ದೈವವು ಕೂಡ ಖಂಡಿತವಾಗಿ ಮಲಗುತ್ತದೆ. ಆದ್ದರಿಂದ "ಬುಧಃ ಸ್ವಪ್ನಂ ಮಿತಂ ಚರೇತ್" ಜಾಣನು ನಿದ್ರೆಯನ್ನು ಮಿತವಾಗಿಯೂ ನಿಯಮಿತ ಕಾಲಕ್ಕನುಸಾರವಾಗಿಯೂ ಮಾಡತಕ್ಕದ್ದು.

❖❖

ವೀರಶೈವ ವಿದ್ಯಾಲಯದ ಗುರುತು

ಶ್ರೀ ಹರ್ಡೇಕರ ಮಂಜಪ್ಪನವರು



ಮೇಲ್ಭಾಗದಲ್ಲಿ ಷಟ್ಕೋನಗಳ ಚಿಹ್ನೆಯು ಈ ವೀರಶೈವ ವಿದ್ಯಾಲಯದ ಗುರುತೆಂದು ಗೊತ್ತುಮಾಡಿರುವುದರಿಂದ, ಇದರಲ್ಲಿ ಗರ್ಭಿತವಾದ ಅರ್ಥವಿಶೇಷವನ್ನು ಸ್ವಲ್ಪವಾದರೂ ಸ್ಪಷ್ಟೀಕರಿಸುವುದು ವಿಹಿತವಾಗಿದೆಯಷ್ಟೆ. ಈ ಷಟ್ಕೋನವು ವೀರಶೈವತತ್ವವನ್ನು ವ್ಯಕ್ತಗೊಳಿಸುತ್ತದೆ. ಹೇಗೆಂದರೆ, ವೀರಶೈವ ಮತ–ತತ್ವಗಳು ಮುಖ್ಯವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಎಂಬ ಈ ಷಟ್ಸ್ಥಳಗಳಲ್ಲಿಯೇ ಅಡಕವಾಗಿದೆ. ಆದಕಾರಣ, ಈ ಷಟ್ಸ್ಥಳಗಳ ಜ್ಞಾನವೇ ವೀರಶೈವ ತತ್ವಜ್ಞಾನವೆಂದು ಧಾರಾಳವಾಗಿ ಹೇಳಬಹುದು. ಮೇಲಣ ಷಟ್ಕೋನವಾದರೋ, ಭಕ್ತಾದಿ ಆರು ಸ್ಥಳಗಳನ್ನೂ ನಕಾರಾದಿ ಪ್ರಣವಗಳನ್ನೂ ಕ್ರಮವಾಗಿ ತೋರಿಸುತ್ತಿರುವುದರಿಂದ, ಶಿರೋಭಾಗದಲ್ಲಿರುವ ಓಂಕಾರಸ್ಥಾನವೇ ಐಕ್ಯಸ್ಥಾನವಾಗಿ ಪರಿಣಮಿಸಿದೆ.

ಈ ಪ್ರಕಾರ ವೀರಶೈವ ಮತ–ತತ್ವಗಳಿಗನುಗುಣವಾಗಿಯೇ ಈ ಗುರುತು ಏರ್ಪಟ್ಟಿರುವುದರಿಂದ, ವೀರಶೈವರು ಇಷ್ಟಲಿಂಗ ಪೂಜೆಯ ಕಾಲದಲ್ಲಿ, ಮೊದಲು ತಮ್ಮ ಎಡ ಹಸ್ತದಲ್ಲಿ ಈ ಚಿಹ್ನೆಯನ್ನೂ, ಆಯಾ ಸ್ಥಾನಗಳಲ್ಲಿ ಪ್ರಣವಗಳನ್ನೂ ಭಸ್ಮದಿಂದ ಬರೆದು? ಅದರ ಮಧ್ಯದಲ್ಲಿ ಲಿಂಗಮೂರ್ತಿಯನ್ನಿಟ್ಟು ಪೂಜಿಸುವ ನಿಯಮ ಉಂಟಾಗಿದೆ. ಆದಪ್ರಯುಕ್ತ ಈ ಷಟ್ಕೋನವು ವೀರಶೈವತತ್ವ ದ್ಯೋತಕವಾಗಿರುವುದು ಸಹಜವಾದುದಷ್ಟೆ? ಇನ್ನು ಇದರ ಮಧ್ಯದಲ್ಲಿರುವ **'ವಿದ್ಯಯಾಮೃತಮಶ್ನುತೇ'** ಎಂಬ ಈಶಾವಾಸ್ಯೋಪನಿಷತ್ತಿನ ವಾಕ್ಯವಾದರೋ, ವಿದ್ಯೆಯಿಂದ ಅಮೃತತ್ವವು ಎಂದರೆ, ಮೋಕ್ಷವು ಪ್ರಾಪ್ತವಾಗುತ್ತದೆಂದು ಸೂಚಿಸುತ್ತದೆ. ಅರ್ಥಾತ್ ಯಾವ ತಿಳುವಳಿಕೆಯಿಂದ ಇಹ–ಪರಗಳ ಸುಖ–ಶಾಂತಿಗಳು ಪ್ರಾಪ್ತವಾಗುತ್ತವೆಯೋ, ಅದಕ್ಕೇನೇ ವಿದ್ಯೆಯೆಂದು ಹೇಳಬೇಕೇ ವಿನಾ ಅನ್ಯ ತಿಳುವಳಿಕೆಯು ವಿದ್ಯೆಯಲ್ಲ. ಈ ವಿದ್ಯಾಲಯದಲ್ಲಾದರೋ ಇಂಥ ಇಹ–ಪರ ಸುಖ–ಶಾಂತಿಗಳಿಗೆ ಸಾಧನವಾಗುವಂತಹ

ವಿದ್ಯೆಯನ್ನು ಕಲಿಸುವುದೇ ಮುಖ್ಯ ಧ್ಯೇಯವಾಗಿರುವುದರಿಂದ, ಮೇಲಣ ಗುರುತು ವೀರಶೈವ-ವಿದ್ಯಾಲಯದ ಅರ್ಥಗರ್ಭಿತವಾದುದೆಂದು ಹೇಳಲು ಅಡ್ಡಿಯಿಲ್ಲವಷ್ಟೇ.

ನಿಜವಾಗಿ ನೋಡಿದರೆ ಈ ವಿಷಯವು ಇಷ್ಟಕ್ಕೆ ಸಂಪೂರ್ಣವಾಯಿತು. ಆದರೆ ಈ ಷಟ್ಕೋನದ ಚರಿತ್ರೆಯು ಅತಿ ವಿಸ್ತಾರವಾದುದಾಗಿಯು, ಬಹು ಮಹತ್ವದ್ದಾಗಿಯೂ ಇರುವಂತೆ ತೋರುವುದರಿಂದ, ಐತಿಹಾಸಿಕ ಆಧಾರಗಳ ಪರಿಶೋಧಕರ ಮುಂದೆ ಇವರ ಸಂಬಂಧವಾಗಿ ಈ ವರೆಗೆ ಗೊತ್ತಾದ ಸಂಗತಿಗಳನ್ನು ಇದೇ ಸಮಯದಲ್ಲಿಡುವುದು ವಿಹಿತವೆಂದು ಈ ಲೇಖನವನ್ನು ಮುಂದುವರಿಸಬೇಕಾಯಿತು.

ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಪ್ರಸಾರವಾಗಿರುವ 'ಥಿಯಾಸಫಿ' ಸಂಘದಿಂದ 'ಥೀಯಾಸಫಿಸ್ಟ್' ಎಂಬುದೊಂದು ಶ್ರೇಷ್ಠವಾದ ಮಾಸಪತ್ರಿಕೆಯು ಮದ್ರಾಸಿನಿಂದ ಪ್ರಕಟವಾಗುತ್ತಾ ಇದೆ. ಆ ಪತ್ರಿಕೆಯಲ್ಲಿ ಶ್ರೀಯುತ ಸಿ. ಜಿನರಾಜ ದಾಸ ಎಂಬ ಪ್ರಸಿದ್ಧ ವಿದ್ವಾಂಸರು ಮತ ಮತ್ತು ತತ್ವಜ್ಞಾನಗಳ ತುಲನಾತ್ಮಕವಾದ ಒಂದು ಲೇಖನವನ್ನು ಕಳೆದ ಜನವರಿ ತಿಂಗಳಿಂದಲೂ ಬರೆಯುತ್ತಲಿದ್ದಾರೆ. ಆ ಲೇಖನದ ಶೀರೋಭಾಗದಲ್ಲಿ ಬೌದ್ಧ, ಕ್ರೈಸ್ತ, ಮುಸಲ್ಮಾನ ಮೊದಲಾದ ಜಗತ್ತಿನ ಎಲ್ಲಾ ಪ್ರಸಿದ್ಧ ಧರ್ಮಗಳ ಗುರುತುಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಷಟ್ಕೋನವೂ ಒಂದಾಗಿದೆ. ಇದು ಯಾವಧರ್ಮದ ಗುರುತೆಂಬುದನ್ನು ತಿಳುಹಿಸಬೇಕಾಗಿ ಆ ಲೇಖಕರನ್ನು ಕೇಳಲು, ಅವರು ಯಹುದಿ ಧರ್ಮದವರಲ್ಲಿ ಸಾಲೋಮನ್ನನೆಂಬ ರಾಜನು ಆಗಿಹೋದನೆಂತಲೂ, ಆತನು ಇದನ್ನು ತನ್ನ ಮುದ್ರೆಯನ್ನಾಗಿ ಮಾಡಿಕೊಂಡಿದ್ದನೆಂತಲೂ, ಅಂದಿನಿಂದ ಯಹುದಿ ಧರ್ಮದವರು ಇದನ್ನೇ ತಮ್ಮ ಧರ್ಮದ ಗುರುತನ್ನಾಗಿ ಮಾಡಿಕೊಂಡರೆಂತಲೂ ತಿಳಿಸಿದ್ದಾರೆ. ಇದರ ಮೇಲಿಂದ ಈ ಷಟ್ಕೋನವು ವೀರಶೈವ ಮತ್ತು ಯಹುದಿ ಈ ಉಭಯ ಧರ್ಮದವರಲ್ಲಿ ಇದರ ಕಲ್ಪನೆಯುಂಟಾಗಿರಬಹುದೋ, ಅಥವಾ ಒಂದು ಧರ್ಮದವರು ಇನ್ನೊಂದು ಧರ್ಮದವನ್ನು ನೋಡಿ ಈ ಗುರುತನ್ನು ತಮ್ಮ ಮುದ್ರೆಯನ್ನಾಗಿ ಮಾಡಿಕೊಂಡಿರಬಹುದೋ, ಎಂಬ ಸಂಶಯವುಂಟಾಗುವುದು ಸ್ವಾಭಾವಿಕವಷ್ಟೆ. ಸ್ವತಂತ್ರವಾಗಿಯೇ ಈ ಷಟ್ಕೋನದ ಕಲ್ಪನೆಯು ಉಭಯ ಧರ್ಮದವರಲ್ಲಿಯೂ ಉಂಟಾಯಿತೆಂದು ಭಾವಿಸಿದರೆ, ಈ ಸಂಬಂಧವಾಗಿ ವಿಚಾರಮಾಡುವ ಅಗತ್ಯವೇ ಉಳಿಯುವುದಿಲ್ಲ. ಆದರೆ ಒಂದು ಧರ್ಮದವರನ್ನು ನೋಡಿಯೇ ಇನ್ನೊಂದು ಧರ್ಮದವರು ಇದನ್ನು ತಮ್ಮ ಗುರುತಾಗಿ ಮಾಡಿಕೊಂಡಿರಬೇಕೆಂದು ಯೋಚಿಸುವ ಪಕ್ಷದಲ್ಲಿ, ಯಾರು ಯಾರಿಂದ ಇದನ್ನು ತೆಗೆದುಕೊಂಡಿರಬಹುದೆಂಬುದನ್ನು ಆಲೊಚಿಸಲು ಅವಕಾಶವುಂಟಾಗುತ್ತದೆ. ಆದಕಾರಣ ಚರಿತ್ರೆಯ ವಿಷಯವಾಗಿ ಸ್ವಲ್ಪ ಯೋಚಿಸೋಣ.

ಭಾರತೀಯರು ಪ್ರಾಚೀನ ಕಾಲದಲ್ಲಿ ಧರ್ಮಪ್ರಸಾರಕ್ಕೋಸ್ಕರ ಪರದೇಶಗಳಿಗೆ ಹೋಗುತ್ತಿದ್ದರು. ಪರದೇಶಗಳ ವ್ಯಾಪಾರಿಗಳಾದರೋ ಭರತಖಂಡದ ನಾನಾ ಪದಾರ್ಥಗಳನ್ನು ತೆಗೆದುಕೊಂಡು ಹೋಗಲು ಆಗಾಗ್ಗೆ ಈ ದೇಶಕ್ಕೆ ಬರುತ್ತಿದ್ದರು. ಈ ಪ್ರಕಾರ ಭಾರತೀಯರಿಗೂ, ಪರದೇಶದವರಿಗೂ ಬಹು ಕಾಲದಿಂದಲೂ ಪರಿಚಯವು ಇದ್ದೇ ಇತ್ತೆಂದು ತೋರುತ್ತದೆ. ಹಿಂದುಸ್ಥಾನದ ಒಬ್ಬ ಸನ್ಯಾಸಿಯು ಕೆಂಪುಸಮುದ್ರದ ದಂಡೆಗೂ ಅಲೆಗ್ಝಾಂಡ್ರಿಯಾದ ನೆರೆಯ ಪ್ರದೇಶಕ್ಕೂ ಪ್ರತಿವರುಷ ಬರುತ್ತಿದ್ದನೆಂದು ಗ್ರೀಸ್ ದೇಶದ ಪ್ರಸಿದ್ಧ ಗ್ರಂಥಕಾರನಾದ ಪ್ಲೂಟಾರ್ಕನು (ಕ್ರಿ. ಶ. ೧೦೦) Moral' s theosophical Eassays ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ಬರೆದಿದ್ದಾನೆ. ಕೀರ್ತಿಶೇಷರಾದ

ಬಾಲ ಗಂಗಾಧರ ತಿಲಕರವರು ತಮ್ಮ ಅದ್ವಿತೀಯವಾದ ಗೀತಾರಹಸ್ಯ ಗ್ರಂಥದಲ್ಲಿ ಅಶೋಕನು (ಕ್ರಿ. ಶ. ಪೂರ್ವ ೨೭೦) ಯಹುದಿ ಜನರ ರಾಜನಾಗಿದ್ದ ಗ್ರೀಸ್ ದೇಶದ ಅಂಟಿಓಕಸನ ಸಂಗಡ ಒಪ್ಪಂದಮಾಡಿಕೊಂಡದ್ದನ್ನು ಆ ಕಾಲದಲ್ಲಿ ಬುದ್ಧ ಬಿಕ್ಷುಗಳು ತುರ್ಕಸ್ಥಾನದಲ್ಲೆಲ್ಲಾ ಧರ್ಮಪ್ರಸಾರ ಕ್ಕೋಸ್ಕರ ಸಂಚರಿಸುತ್ತಿದ್ದರೆಂಬುದನ್ನು, ಯಹುದಿ ಧರ್ಮದಲ್ಲಿ ಸನ್ಯಾಸಪರ ಏಶೀಪಂಥವುಂಟಾಗಲು ಬೌದ್ಧಧರ್ಮದವ್ರ ಬೋಧವೇ ಮುಖ್ಯ ಕಾರಣವಾಯಿತೆಂಬುದನ್ನು ಪ್ರಬಲಾಧಾರಗಳಿಂದ ಧೃಢೀಕರಿಸಿದ್ದಾರೆ. ಈ ಬೌದ್ಧಧರ್ಮದವರಿಗಿಂತ ಪೂರ್ವದಲ್ಲಿ ವೈದಿಕರು ತಮ್ಮ ಧರ್ಮಪ್ರಸಾರಕ್ಕೋಸ್ಕರ ಅನ್ಯದೇಶಗಳಿಗೆ, ಅದರಲ್ಲಿ ಮುಖ್ಯವಾಗಿ ಯಹುದಿ ಧರ್ಮದವರ ದೇಶಗಳಿಗೆ ಹೋಗುತ್ತಿದ್ದರೋ ಇಲ್ಲವೋ ಎಂಬುದನ್ನು ನೋಡೋಣ.

ಈ ಷಟ್ಕೋನವು ಯಾವ ರಾಜನ ಮುದ್ರೆಯಾಯಿತೋ ಆ ಸಾಲೋಮನ್ನ ಎಂಬ ಯಹುದಿ ಜನರ ಪ್ರಸಿದ್ಧರಾಜನ ವಿಷಯವು ಬೈಬಲ್ ಗ್ರಂಥದ ಹಳೆಯ ಒಡಂಬಡಿಕೆಯಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಈತನು ಡೇವಿಡ್ ಎಂಬ ಸುಪ್ರಸಿದ್ಧ ರಾಜನ ಮಗನು, ತನ್ನ ತಂದೆಗಿಂತಲೂ ಮಹಾ ಪರಾಕ್ರಮಶಾಲಿಯಾಗಿ ವ್ಯಾಪಾರದ ಮುಖ್ಯೋದ್ದೇಶದಿಂದ ರಾಜ್ಯವನ್ನು ವಿಸ್ತಾರಗೊಳಿಸಿದನು. ಸಾಲೋಮನ್ನರು ಶೂರನಾಗಿದ್ದಂತೆಯೇ ಬಹು ನೀತಿಪರನೂ, ಧಾರ್ಮಿಕ ಮಹಾಪುರುಷನೂ ಆಗಿದ್ದನು. ಈತನು ನೀತಿಪರವಾದ ಮತ್ತು ಧರ್ಮಸಂಬಂಧವಾದ ೩ ಸಾವಿರ ವಚನಗಳನ್ನೂ ೧೦೦೫ ಪದ್ಯಗಳನ್ನೂ ಹೇಳಿದ್ದಾನೆ. ಇದರ ಮೇಲಿಂದ ಈತನು ಧಾರ್ಮಿಕ ವಿಷಯದಲ್ಲಿ ಎಷ್ಟು ಲಕ್ಷಿಸಿದ್ದಾನೆಂಬುದು ಸ್ಪಷ್ಟವಾಗುತ್ತದೆ.

ಸಾಲೋಮನ್ನನು ಕ್ರೈಸ್ತಪೂರ್ವ ೧೦೧೬ ರಿಂದ ೯೭೮ ವರೆಗೆ ಜೇರುಸಲೇಮ ಪಟ್ಟಣದಲ್ಲಿ ೪೦ ವರುಷ ಪ್ರಭುತ್ವವನ್ನು ಮಾಡಿದನು. ಎಂದರೆ ಇಂದಿಗೆ ೨೯೦೦ ವರ್ಷಗಳ ಪೂರ್ವದಲ್ಲಿ ಸಾಲೋಮನ್ನನು ಆಳುತ್ತಿರುವಾಗ ಆತನ ಪಟ್ಟಣಕ್ಕೆ ಈ ದೇಶದ ಅನೇಕ ಪದಾರ್ಥಗಳು ಹೋಗುತ್ತಿದ್ದವೆಂದು ತೋರುತ್ತದೆ. ಈ ವಿಷಯವಾಗಿ ಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀಯುತ ಸರದೇಸಾಯಿಯವರು ಹೇಳುವುದೇನೆಂದರೆ-ಸಾಲೋಮನ್ನನು ತನ್ನ ಸಿಂಹಾಸನಕ್ಕೆ ಹಚ್ಚಿಸಿದ ಆನೆಯ ದಂತ, ರತ್ನ ಮೊದಲಾದ ಪದಾರ್ಥಗಳು ಮತ್ತು ಆತನ ಉದ್ಯಾನದಲ್ಲಿದ್ದ ಮಂಗ, ನವಿಲು, ಮೊದಲಾದ ಪ್ರಾಣಿಗಳು ಹಿಂದೂಸ್ಥಾನದಿಂದಲೇ ಹೋಗಿದ್ದವು. ಇದರ ಮೇಲಿಂದ ಸಾಲೋಮನ್ನನಿಗೆ ಭಾರತೀಯರ ವಿಷಯವು ತಿಳಿದಿರುವ ಸಂಭವವಿದೆಯೆಂದು ಊಹಿಸಬಹುದಾಗಿದೆ. ಏಶಿಯಾಖಂಡದ ಈಗಿನ ತುರ್ಕಿಸ್ಥಾನಕ್ಕೆ ಎಂದರೆ ಆ ಕಾಲದ ಯಹುದಿ ಜನರ ಪರಿಚಯದ ಪ್ರದೇಶಕ್ಕೆ ವೈದಿಕಧರ್ಮದವರು ಧರ್ಮಪ್ರಸಾರಕ್ಕೆ ಹೋಗುತ್ತಿದ್ದರೆಂಬ ವಿಷಯದಲ್ಲಿ ಅನೇಕ ಐತಿಹಾಸಿಕ ಆಧಾರಗಳು ಇತ್ತೀಚೆಗೆ ದೊರೆತಿವೆ. ಭೂಕಂಪನದಿಂದ ಭೂಗತವಾದ ನಿನವೇ ಪಟ್ಟಣದಲ್ಲಿ ನಂದಿಯ ಮೂರ್ತಿಯೂ, ಭಾರತೀಯ ಶಿಲ್ಪಿಗರ ಅನೇಕ ಪೌರಾಣಿಕ ಚಿತ್ರಗಳೂ ದೊರೆತಿವೆ. ಇವುಗಳ ಮೇಲಿಂದ ಪ್ರಾಚೀನ ವೈದಿಕರು ಸ್ವಧರ್ಮ ಪ್ರಸಾರಕ್ಕೋಸ್ಕರ ಅನ್ಯ ದೇಶಗಳಿಗೆ ಹೋಗುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಇಷ್ಟೇ ಅಲ್ಲ, ಅಲ್ಲಿಯ ಜನರಿಗೆ ತಮ್ಮ ಧರ್ಮದೀಕ್ಷೆಯನ್ನು ಕೊಟ್ಟು ಅವರು ತಮ್ಮಂತೆಯೇ ಆಚರಿಸುವಂತೆಯೂ ವ್ಯವಸ್ಥೆಯನ್ನು ಮಾಡಿಕೊಡುತ್ತಿದ್ದರೆಂತಲೂ ತೋರುತ್ತದೆ. ಆದಕಾರಣ ಪ್ರಾಚೀನ ವೀರಶೈವರು ಯಹುದಿ ಜನರಿಗೆ ತಮ್ಮ ಧರ್ಮವನ್ನು ಬೋಧಿಸಲು ಹಿಂದಕ್ಕೆ ಹೋಗಿರಬಹುದೆಂತಲೂ, ಸಾಲೋಮನ್ನರು ವೀರಶೈವರ ಗುರುತಾದ ಈ

ಷಟ್ಕೋನವನ್ನು ನೋಡಿ, ಇದರಲ್ಲಿರುವ ವೈದಿಕ ಧರ್ಮಸಂಬಂಧವಾದ ಪ್ರಣವಗಳನ್ನು ಮಾತ್ರ ಬಿಟ್ಟು ಕೇವಲ ಷಟ್ಕೋನವನ್ನೇ ತನ್ನ ಮುದ್ರೆಯನ್ನಾಗಿ ಮಾಡಿಕೊಂಡಿರಬಹುದೆಂತಲೂ ಊಹಿಸಬಹುದಾಗಿದೆ.

ಇನ್ನು ಯಹುದಿ ಜನರಿಂದಲೇ ವೀರಶೈವರು ಈ ಗುರುತನ್ನೇಕೆ ತೆಗೆದುಕೊಂಡಿರಲಿಕ್ಕಿಲ್ಲವೆಂಬ ಸಂಶಯವುಂಟಾಗಬಹುದಲ್ಲವೇ? ಆದರೆ ಅದು ಸಮಂಜಸವಾದುದಲ್ಲ. ಏಕೆಂದರೆ, ಅತಿ ಪ್ರಾಚೀನಕಾಲದಿಂದಲೂ ಧಾರ್ಮಿಕ ವಿಷಯದಲ್ಲಿ ಭಾರತೀಯರೇ ಜಗತ್ತಿಗೆ ಗುರುಸ್ಥಾನದಲ್ಲಿದ್ದಾರೆ. ಭಾರತೀಯರ ಧಾರ್ಮಿಕ ಕಲ್ಪನೆಗಳೇ ಜಗತ್ತಿನ ನಾನಾ ಭಾಗಗಳಲ್ಲಿ ಪ್ರಸಾರವಾದ ಅನಂತ ದೃಷ್ಟಾಂತಗಳು ದೊರೆಯುತ್ತಲಿವೆಯೇ ವಿನಾ, ಭಾರತೀಯರು ಪರದೇಶದವರ ಧಾರ್ಮಿಕತತ್ವಗಳನ್ನು ತೆಗೆದುಕೊಂಡ ಒಂದು ದೃಷ್ಟಾಂತವಾದರೂ ಈ ವರೆಗೆ ದೊರೆತಿಲ್ಲ. ಇಷ್ಟೆ ಅಲ್ಲ; ಪ್ರಾಚೀನ ಕಾಲದ ಭಾರತೀಯರು ಶೌರ್ಯ, ಕಲಾ-ಕೌಶಲ್ಯ, ಐಶ್ವರ್ಯ ಮೊದಲಾದ ಐಹಿಕ-ಸುಖೋಪಭೋಗದ ಸಾಧನೆಗಳಲ್ಲಿ ಅದ್ವಿತೀಯವಾಗಿ ತಮ್ಮ ಸಂಸ್ಕೃತಿ, ಸುಧಾರಣೆ ಮತ್ತು ಘನತೆಗಳನ್ನು ಇಡೀ ಪ್ರಪಂಚದ ಮೇಲೆ ಸ್ಥಾಪಿಸುವವರಾಗಿದ್ದುದರಿಂದ, ಇವರ ಶ್ರೇಷ್ಠತ್ವವು ಎಲ್ಲಾ ದೇಶದವರಿಗೂ ಮಾನ್ಯವಿದ್ದಿತು. ಆದಕಾರಣ ಈಗಿನ ಭಾರತೀಯರು ಹೇಗೆ ಪಾಶ್ಚಾತ್ಯರ ಘನತೆಗೆ ಬೆರಗಾಗಿ, ಅವರ ಪದ್ಧತಿಗಳನ್ನನುಸರಿಸುವುದೇ ಶ್ರೇಯಸ್ಕರವೆಂದು ತಿಳಿಯುತ್ತಿದ್ದಾರೆಯೋ ಹಾಗೆಯೇ ಪ್ರಾಚೀನ ಭಾರತೀಯರ ಆಚಾರ-ವಿಚಾರಗಳೇ ಆಗಿನ ಅನ್ಯದೇಶಿಯವರಿಗೆ ಮೇಲ್ಪಂಕ್ತಿಯಾಗಿ ತೋರುತ್ತಿದ್ದವೆಂದು ತಿಳಿಯುವುದು ಸಮಂಜಸವೇ ವಿನಾ ಆಗಿನ ಭಾರತೀಯರಿಗೆ ಅನಾಗರಿಕರಂತೆ ತೋರುತ್ತಿದ್ದ ಯಹುದಿ ಜನರ ಕಲ್ಪನೆಗಳನ್ನು ಇವರು ಅನುಸರಿಸಿದರೆಂದು ಭಾವಿಸುವುದು ಅಸಮಂಜಸವೇ ಸರಿ.

ವೈದಿಕರಿಗೂ ಬೌದ್ಧರಿಗೂ ಪೂಜ್ಯವಾಗಿದ್ದ ಸ್ವಸ್ತಿಕ ಚಿಹ್ನೆಯೇ ಕ್ರೈಸ್ತರಿಗೆ ಕ್ರಾಸದ ಚಿಹ್ನೆಯಾಯಿತೆಂದು ಶಾಸ್ತ್ರಶೋಧಕರು ಈಗ ಹೇಗೆ ಗೊತ್ತು ಹಚ್ಚಿದ್ದಾರೆಯೋ ಹಾಗೆಯೇ, ಕಾಲಾಂತರದಲ್ಲಿ ದೊರೆಯುವ ಐತಿಹಾಸಿಕ ಆಧಾರಗಳ ಮೇಲಿಂದ ವೀರಶೈವದ ಷಟ್ಕೋನವೇ ಸಾಲೋಮನ್ನನ ಮುದ್ರೆಯಾಯಿತೆಂದು ದೃಢಪಟ್ಟಿದೆ. ಅದು ಕೇವಲ ವೀರಶೈವರಿಗೇ ಅಲ್ಲ; ಭಾರತೀಯರೆಲ್ಲರಿಗೂ ಬಹು ಭೂಷಣ ಮತ್ತು ಅಭಿಮಾನಾಸ್ಪದವಾದ ಸಂಗತಿಯಾಗಲಿಕ್ಕಿಲ್ಲವೇ?

❖❖

ಶಿವಶರಣರ ಸಂವಾದ

ಪ್ರಸ್ತಾವನೆ

೧ನೆಯ ಗೆಳೆಯ : ಇದೇನು ಗೆಳೆಯರೇ, ಬಹು ಅವಸರದಿಂದ ಹೋಗುತ್ತಿರುವಿರಿ!

೨ನೆಯ ಗೆಳೆಯ : ಕೆಲಸವಿದೆಯಪ್ಪಾ! ಹಾಯಸ್ಕೂಲ್ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳು ವಿರಾಮಕಾಲಗಳಲ್ಲಿ ನಾಟಕಗಳನ್ನು ಇಲ್ಲವೆ ಅವುಗಳೊಳಗಿನ ಉತ್ತಮವಾದ ದೃಶ್ಯಗಳನ್ನು ಕಲಿತುಕೊಂಡು ಸಮ್ಮೇಲನ ಮೊದಲಾದವುಗಳಲ್ಲಿ ತಾವು ಕಲಿತಂಥವುಗಳನ್ನು ಮಾಡಿತೋರಿಸಿ ವಿನೋಪಡುವದುಂಟಷ್ಟೇ. ಅವರಂತೆಯೇ ವೀರಶೈವ ವಿದ್ಯಾಲಯದವರಾದ ನಾವು, ಈ ದಿವಸ ನಮ್ಮ ಶಿವಶರಣರ ಚರಿತ್ರೆಯನ್ನು ವಾದರೂಪದಲ್ಲಿ ಮಾಡಿತೋರಿಸಿ ನಾವೂ ವಿನೋದಪಡುವದಲ್ಲದೆ, ಕೇಳತಕ್ಕಂಥವರಿಗೆ ಸಂತೋಷ ಸದುಪದೇಶಗಳು ಪ್ರಾಪ್ತವಾಗುವಂತೆ ಮಾಡಬೇಕೆಂದು ಯೋಚಿಸಿದ್ದೇವೆ.

೧ನೆಯ ಗೆಳೆಯ : ಹಾಗಾದರೆ ಈ ದಿವಸ ಯಾವ ಶಿವಶರಣರ ಚರಿತ್ರೆಯು ನಡೆಯುವದು? ನನಗೆ ಸ್ವಲ್ಪ ಹೇಳಿರಿ; ನಾನೂ ಬರುತ್ತೇನೆ.

೩ನೆಯ ಗೆಳೆಯ : ಇದೇ ನಮ್ಮ ವಿದ್ಯಾಲಯದ ಸಮೀಪದಲ್ಲಿದ್ದ ಚಿಮ್ಮಲಿಗಿ ಗ್ರಾಮದಲ್ಲಿ ಹಿಂದಕ್ಕೆ ನುಲಿಯಚಂದಯ್ಯನವರೆಂಬ ಮಹಾಶಿವಶರಣರಿದ್ದರು. ಈಗ ನದಿಯಲ್ಲಿ ಮುಳುಗಿದ್ದ ಚಂದಾಲಿಂಗನ ಗುಡಿಯ ಹತ್ತಿರ ಒಂದು ಗುಡಿಸಲನ್ನು ಕಟ್ಟಿಕೊಂಡು ಇರುತ್ತಿದ್ದರು. ಅವರು ದಿನಾಲು ನಸುಕಿನಲ್ಲೆದ್ದು ತಮ್ಮ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಶಿವನಾಮ ಸ್ಮರಣೆಯಿಂದ ಮೆದೆಯ ಹುಲ್ಲನ್ನು ಕೊಯ್ದು ತಂದು, ಅದರಿಂದ ಕಣ್ಣಿ ಹಗ್ಗಗಳನ್ನು ಮಾಡಿ, ಶಿವಭಕ್ತರಿಗೆ ಒಂದೇ ಹಾಗಕ್ಕೆ ಅಂದರೆ ೧ ಆ. ೨ ಪೈಸೆಗೆ ಮಾರಿ, ಬಂದ ಹಣದಲ್ಲಿ ಅಕ್ಕಿ, ಬೇಳೆ ಮೊದಲಾದ ಸಾಮಾನುಗಳನ್ನು ಕೊಂಡು ತಂದು, ಅಡಿಗೆ ಮಾಡಿ ಜಂಗಮಕ್ಕೆ ಸಮರ್ಪಿಸಿ ಮಿಕ್ಕ ಪ್ರಸಾದವನ್ನು ತಾವು ಸೇವಿಸಿ, ಉಳಿದ ಕಾಲವನ್ನು ಶಿವಾನುಭವ ಚಿಂತನೆಯಲ್ಲಿ ಕಳೆಯುತ್ತಿದ್ದರು. ಹೀಗಿರುವಾಗ ಬಸವಣ್ಣನವರ ಮಹಿಮೆಯನ್ನು ಕೇಳಿ ಕಲ್ಯಾಣಕ್ಕೆ ಹೋಗಿ ತಮ್ಮ ಕಾಯಕದಿಂದಲೇ ದಾಸೋಹ ನಡೆಸುತ್ತ ಶಿವಾನುಭವಗೋಷ್ಠಿಯಲ್ಲಿ

ನಿರತರಾಗಿದ್ದರು. ಇವರು ಜಂಗಮ ದಾಸೋಹವನ್ನು ಮುಖ್ಯವಾಗಿಟ್ಟು ಕೊಂಡಿದ್ದರು. ಎಂದಿನಂತೆ ಇವರು ಮೆದೆಯ ಹುಲ್ಲನ್ನು ಕೊಯ್ಯಲಿಕ್ಕೆ ಹಳ್ಳಕ್ಕೆ ಹೋದಾಗ ಇವರ ಲಿಂಗವು ಜಾರಿ ಮಡುವಿನೊಳಗೆ ಬಿತ್ತು. ಇದನ್ನು ಅವರು ಲಕ್ಷ್ಯಮಾಡದೆ ಜಂಗಮದಾಸೋಹಕ್ಕೆ ತಡವಾದೀತೆಂದು ಹುಲ್ಲು ಹೊರೆಯನ್ನು ಹೊತ್ತುಕೊಂಡು ಹಾಗೇ ಹಾದೀ ಹಿಡಿಯಲು, ಲಿಂಗಮೂರ್ತಿಯು ಗಾಬರಿಗೊಂಡು ಜಂಗಮರೂಪಿನಿಂದ ಹೊರಗೆ ಬಂದು ಸಮೀಪದಲ್ಲಿಯೇ ಶಿವಶರಣರ ಅರಿವೆಗಳನ್ನು ತೊಳೆಯುತ್ತಿದ್ದ ಮಡಿವಾಳ ಮಾಚಯ್ಯನವರ ಕಡೆಗೆ ದೂರ ಹೇಳಲಿಕ್ಕೆ ಬಂದರು. ಅನಂತರ ನಡೆದ ಪ್ರಸಂಗಗಳನ್ನು ಅವರವರೇ ಮಾಡಿ ತೋರಿಸುತ್ತಾರೆ. ಹೋಗೋಣ ಬನ್ನಿರಿ (ಹೋಗುತ್ತಾರೆ).

೧ನೆಯ ಪ್ರವೇಶ

ಶ್ರೀ ಮಡಿವಾಳ ಮಾಚಯ್ಯನವರು : ಲಿಂಗಮೂರ್ತಿಯೇ, ಇದೇನು! ಈ ರೂಪದಲ್ಲಿ ಇತ್ತ ದಯಮಾಡಿಸೋಣವಾಯಿತು?

ರೂಪದಲ್ಲಿದ್ದ ಲಿಂಗಮೂರ್ತಿಯು : ಮಾಚಯ್ಯಾ, ಏನು ಹೇಳಲಿ? ನುಲಿಯ ಚಂದಯ್ಯನು ಮಹಾ ಜಂಗಮ ದಾಸೋಹಿಯಾಗಿದ್ದಾನಷ್ಟೇ. ಆತನಲ್ಲಿ ಲಿಂಗಪ್ರೇಮವು ಎಷ್ಟಿದೆ ಎಂಬುದನ್ನು ನೋಡುವುದಕ್ಕೋಸ್ಕರ ಆತನು ತನ್ನ ಕಣ್ಣಿಯ ಕಾಯಕಕ್ಕಾಗಿ ಮೆದೆಯ ಹುಲ್ಲನ್ನು ಕೊಯ್ಯುತ್ತಿರುವಾಗ ಆ ಹಳ್ಳದ ಮಡುವಿನಲ್ಲಿ ನಾನು ಮುಳುಗಿದೆನು. ಆಗ ಚಂದಯ್ಯನು ನನ್ನನ್ನು ಕರೆಯಬಾರದೇ? ಅದು ಹಾಗಿರಲಿ, ನಾನಾಗಿಯೇ ಈ ರೂಪದಿಂದ ಮೇಲಕ್ಕೆ ಬಂದು ನನ್ನನ್ನು ಕರೆದುಕೋ ಎಂದರೆ, ಕರೆದುಕೊಳ್ಳದೆ ನನ್ನನ್ನು ಬಿಟ್ಟೇ ಜಂಗಮದಾಸೋಹಕ್ಕೆ ಹೋಗುತ್ತಿರುವನಲ್ಲಾ! ನೀನಾದರೂ ಬಂದು ಆತನಿಗೆ ಬುದ್ಧೀ ಹೇಳಬಾರದೇ ಮಾಚಯ್ಯ?

ಮಾಚಯ್ಯ : ಇದೇನು ವಿಪರೀತ! ಲಿಂಗವನ್ನು ಬಿಟ್ಟು ಜಂಗಮದಾಸೋಹವುಂಟೇ? ಚಂದ್ರಯ್ಯನವರ ಇಂಗಿತವೇನೆಂಬುದನ್ನು ತಿಳಿದುಕೊಳ್ಳುವಾ, ಲಿಂಗಮೂರ್ತಿಯೇ, ದಯಮಾಡಿಸಿ,

(ಚಂದಯ್ಯನವರ ಬಳಿಗೆ ಹೋಗುವರು)

ಮಾಚಯ್ಯ : ಚಂದ್ರಯ್ಯನವರೇ ಇದೇನು? ಲಿಂಗಮೂರ್ತಿಯು ತಾನಾಗಿಯೇ ಬರುತ್ತಿರುವಾಗ ಬೇಡವೆಂಬುದೇಕೆ? ಬಂದಿಹೆನೆಂಬ ಸುಖವ ನೆರೆ ಹಿಂಗಿದವರುಂಟೆ? ಕಂಡ ನಿಧಾನವ ನಡೆ ಎಂದವರುಂಟೆ? ಸುಖಕ್ಕೆ ಸುಖ ಒದಗಿದೊಡೆ ಒಲ್ಲೆವೆಂಬವರುಂಟೆ? ಕಲಿದೇವಯ್ಯ ಬಂದಿಹೆನೆಂದೊಡೆ ಬೇಡವೆನಲೇಕೆ? ಚಂದಯ್ಯ ಲಿಂಗಮೂರ್ತಿಯನ್ನು ಕರೆದುಕೊಳ್ಳಿರಿ.

ನುಲಿಯ ಚಂದಯ್ಯನವರು : ಓಹೋ! ಮಾಚಯ್ಯನವರೇ, ಲಿಂಗಹೋಯಿತ್ತೆಂಬ ಸಂದೇಹ ಎನಗುಂಟಾದೊಡೆ ಅಂತ ಉಳಿಯಬಲ್ಲುದೇ? ಆತ್ಮಹೋದಲ್ಲಿ ಘಟವೆಷ್ಟು ದಿನ ಉಳಿವುದು? ಜಂಗಮವುಳ್ಳನ್ನಕ್ಕರ ಚಂದೇಶ್ವರಲಿಂಗಕ್ಕೆ ಸಂದಿಲ್ಲ ಕಾಣಾ. ಜಂಗಮದಲ್ಲಿ ಲಿಂಗ ಬೆರೆತಿದೆ. ಜಂಗಮದಾಸೋಹದಿಂದ ಲಿಂಗಪೂಜೆಯು ತಾನಾಗಿಯೇ ಆದಂತಾಗುವುದು. ಮತ್ತೆ ಲಿಂಗವನ್ನುಧರಿಸಿ, ಪೂಜಿಸಲೇಕೆ, ಮಾಚಯ್ಯನವರೇ?

ಮಾಚಯ್ಯ : ಇದೇನು ಚಂದಯ್ಯನವರೇ? ಜಂಗಮಸೇವೆ ಲಿಂಗಸಹಿತವಾಗಿರಬೇಕು. ಲಿಂಗವೆಂಬುದು ಜಂಗಮದಂಗ, ಅಂಗವಿಲ್ಲದೆ ಪ್ರಾಣವುಂಟೇ? ಹಣ್ಣಿಲ್ಲದೆ ರುಚಿ ಬಯಸುವಂತೆ ನಿಮ್ಮ ಕಾಯಕದ ಕ್ರಿಯೆಯೆಲ್ಲವು. ಆದಕಾರಣ ನಿಮ್ಮ ಜಂಗಮದಾಸೋಹವು ಫಲಕಾರಿಯಾಗಬೇಕಾದರೆ ಈ ಲಿಂಗಮೂರ್ತಿಯು ಬೇಕೇಬೇಕು.

ಚಂದಯ್ಯ : ಮಾಚಯ್ಯನವರೇ, ನೀವು ಹೇಳಿದಂತೆಯೇ ಆಗಲಿ, ಜಂಗಮದಾಸೋಹಕ್ಕೆ ಬೇಕಾಗಿರುವ ಕಣ್ಣಿಯ ಕಾಯಕವನ್ನು ಲಿಂಗಮೂರ್ತಿಯು ಮಾಡಲು ಸಿದ್ಧವಿದ್ದರೆ ನನ್ನ ಸಂಗಡ ಬರಲಿ,

ಲಿಂಗಮೂರ್ತಿ : ಯಾಕಾಗಲೊಲ್ಲದು, ಬರುತ್ತೇನೆ.

೨ನೆಯ ಪ್ರವೇಶ

ಲಿಂಗಮೂರ್ತಿ : ಚಂದಯ್ಯಾ! ನೀನು ಕೊಟ್ಟ ಕಣ್ಣಿಯನ್ನು ಕೆಲವರು ಅರ್ಧ ಹಾಗಕ್ಕೆ ಕೇಳಿದರು; ನಾನು ಕೊಡದೆ ಈ ಕಲ್ಯಾಣಪಟ್ಟಣದ ಎಲ್ಲ ಮಾರ್ಗಗಳಲ್ಲಿ ಸಂಚರಿಸಲು ಕಡೆಗೆ ಬಸವಣ್ಣನು ಆ ಕಣ್ಣಿಯನ್ನು ತೆಗೆದುಕೊಂಡು–ಇಗೋ! ಒಂದುಸಾವಿರ ಹೊನ್ನನ್ನು ಕೊಟ್ಟಿದ್ದಾನೆ. ತೆಗೆದುಕೋ!

ಚಂದಯ್ಯನವರು : ಲಿಂಗಮೂರ್ತಿಯೇ, ಇದೇನು? ಈ ಹಣವನ್ನು ಕಳವುಮಾಡಿ ತಂದೆಯೋ? ಛೇ! ಛೇ! ಜಂಗಮದಾಸೋಹಕ್ಕೆ ಇಂಥ ಹಣವು ಸಲ್ಲದು. ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ಸ್ವಚ್ಛಂದವಾಗಿರಬೇಕು. ನಿಯಮದ ಕೂಲಿ ಎಂದಿನ ನಿತ್ಯ ನಿಯಮದಲ್ಲಿ ಸಂದಿರಬೇಕು. ನಿಯಮದ ಕೂಲಿಯ ಬಿಟ್ಟು ಹೇಮದ ಆಶೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯಾ. ಅನ್ಯರಿಗೆ ಕೈಯೊಡ್ಡದೆ ನನ್ನ ಕೈಕೂಲಿಯಿಂದ ಕಾಯಕವನ್ನು ಮಾಡಿ, ಒಂದೇ ಹಾಗವನ್ನು ಗಳಿಸಿ, ಅದರಿಂದಲೇ, ಜಂಗಮದಾಸೋಹವನ್ನು ಮಾಡುವೆನಲ್ಲದೆ, ಈ ಪರಿ ಹಣವ ಗಳಿಸಿ, ದಾಸೋಹವ ಮಾಡುವೆನೇ? ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡಕಂಡವರ ಬೇಡಿ ತಂದು,

ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟ ಲಿಂಗ ನೈವೇದ್ಯಕ್ಕೆ ಸಲ್ಲದು ತನುಕರಗಿ, ಮನಬಳಲಿ, ಬಂದ ತೆರದನುವರಿತು, ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ಮಾಡುವ ದಾಸೋಹವೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತವಲ್ಲದೆ, ರುಚಿ ದುರಾಶೆಯಿಂದ ಬಂದುದು ಅನರ್ಪಿತ, ಇದುಕಾರಣ ಸತ್ಯ-ಶುದ್ಧಕಾಯಕದ ಸತ್ಯದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು. ಲಿಂಗಮೂರ್ತಿಯೇ ಮೊದಲು ಗುರುವಿನಾಜ್ಞೆಯ ಮೀರಿ ನನ್ನನ್ನು ಬಿಟ್ಟುಹೋದದ್ದೊಂದು ತಪ್ಪು ಆ ತಪ್ಪಿಗಾಗಿ ಒಡೆಯರ ಸೇವೆಮಾಡಲಿಕ್ಕೆ ಬಂದು ಈ ಪಾಪದ ರಾಶಿಯನ್ನು ಹೊತ್ತುಕೊಂಡು ಬರಬಹುದೇ? ಹೊಣೆಗಾರರಾದ ಮಾಚಯ್ಯನವರ ಬಳಿಗೆ ಬನ್ನಿ.

(ಮಾಚಯ್ಯನವರ ಬಳಿಗೆ ಹೋಗುವರು)

ಚಂದಯ್ಯ : ಮಾಚಯ್ಯನವರೇ, ಕಣ್ಣಿಯನ್ನು ಒಂದು ಹಾಗಕ್ಕೆ ಮಾರಿಕೊಂಡು ಬರಬೇಕೆಂದು ಈ ಲಿಂಗಮೂರ್ತಿಯನ್ನು ಕಳುಹಿಸಿದರೆ, ಇಗೋ! ಸಾವಿರ ಹೊನ್ನನ್ನು ತರಬಹುದೇ? ಶಿವಶರಣರಿಗೆ ಇಂದಿನದು ನಾಳೆಗೆ ತಂಗುಳಲ್ಲವೆ? ಇಂದು ಕೊಟ್ಟ ಶಿವನು ನಾಳೆಗೆ ಇರುವುದಿಲ್ಲವೆ? ಹಣದಾಸೆಗೆ ಕೈಯೊಡ್ಡಿ ಈ ಪರಿ ತೆಗೆದುಕೊಂಡು ಬರಬಹುದೇ? ಶಿವಶರಣರಿಗೆ ಇಂಥ ಹಣವು ಹೆಣಕ್ಕೆ ಸಮಾನವಾದುದಲ್ಲವೆ? ಛೇ! ಛೇ! ಈ ಹಣವು ಬೇಡ; ಇದನ್ನು ತೆಗೆದುಕೊಂಡು ಬಂದ ಲಿಂಗಮೂರ್ತಿಯೂ ಬೇಡ.

ಮಾಚಯ್ಯ : ಚಂದಯ್ಯನವರೇ, ಕೋಪಿಸಬೇಡಿರಿ, ಕಾಯಕದಲ್ಲಿ ನಿಂದ ಶರಣಂಗೆ ಸೇವೆಯವರ ತಪ್ಪು ಹಿಡಿದಿಹೆನೆಂದರೆ ಕಾಯಕವೆಂತೂ ನಡೆವುದಯ್ಯ? ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛನಕ್ಕೆ ಮುನಿಯಬಹುದೆ? ಮುಗ್ಗರಿಸಿದ ತುರಗದ ಕಾಲು ಕತ್ತರಿಸಿದವರುಂಟೇ? ಕಚ್ಚಿದ ತಿಗುಣೆಗಾಗಿ ಮನೆ ಸುಟ್ಟವರುಂಟೆ? ಲಿಂಗಮೂರ್ತಿಯು ಇದೊಂದು ಸಾರೆ ಮಾಡಿದ ತಪ್ಪನ್ನು ಮನ್ನಿಸಿ ಕರೆದುಕೊಳ್ಳಿರಿ.

ಚಂದಯ್ಯ : ಛೇ! ಛೇ! ಅದೆಂದಿಗೂ ಆಗದು ಮಾಚಯ್ಯನವರೇ, ನುಡಿದ ಮಾತಿಂಗೆ ತಡಬಡ ಬಂದಲ್ಲಿ ನುಡಿದ ಭಾಷೆಗೆ ಭಂಗ ನೋಡಾ, ನಡೆನುಡಿ ಶುದ್ಧವಿಲ್ಲದಿದ್ದರೆ ಚಂದೇಶ್ವರಲಿಂಗವಾಗದರೂ ತಪ್ಪನೊಳಕೊಳ್ಳ ಕಾಣಾ ಮಾಚಯ್ಯನವರೇ, ಈ ಪರಿ ನಡೆನುಡಿ ಶುದ್ಧವಿಲ್ಲದವರನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಮಾಚಯ್ಯ : ಚಂದಯ್ಯನವರೇ ಗುರುಪೂಜೆಯನರಿದೆನೆಂದು ಲಿಂಗಪೂಜೆಯ ಬಿಡಲಾಗದು. ಲಿಂಗಪೂಜೆಯನರಿದೆನೆಂದು ಜಂಗಮಪೂಜೆಯ ಮರೆಯಲಾಗದು. ಜಂಗಮ ಪೂಜೆಯನರಿದಿಹೆನೆಂದು ಶರಣರ ಸಂಗವ ಮರೆಯಲಾಗದು, ಇದು ಕಾರಣ

ಶರಣ ಸಮ್ಯಜ್ಞಾನದಲಲ್ಲದೆ ಕಲಿದೇವಯ್ಯನ ಕಾಣಬಾರದು. ಆದಕಾರಣ ಶಿವಾನುಭವ ಮಂಟಪಕ್ಕೆ ಹೋಗಿ, ಶಿವಶರಣರಲ್ಲಿ ಈ ಸಂಗತಿಯನ್ನು ಬಿನ್ನೈಸಿಕೊಳ್ಳೋಣ ಬನ್ನಿ (ಹೋಗುವರು).

೩ನೆಯ ಪ್ರವೇಶ

(ಶಿವಾನುಭವ ಮಂಟಪ)

ಮಾಚಯ್ಯ : ಶಿವಶರಣವೃಂದವೇ, ಚಂದಯ್ಯನವರು ತಮಗೆ ಲಿಂಗಮೂರ್ತಿಯೇ ಬೇಡವೆಂದು ನಿರಾಕರಿಸಿ, ಜಂಗಮದಾಸೋಹದಲ್ಲಿಯೇ ಲಿಂಗಪೂಜೆಯು ಪೂರೈಸುತ್ತದೆ ಎಂದು ಪ್ರತಿಪಾದಿಸುತ್ತಿರುವರಲ್ಲ. ಈ ವಿಷಯದಲ್ಲಿ ಅಪ್ಪಣೆಯಾಗಬೇಕು.

ಪ್ರಭುದೇವರು : ಮಾಚಯ್ಯನವರೇ, ಇದು ಸಲ್ಲದಮಾತು, ಪರುಷವಾದರು ಒಂದರಲ್ಲಿರಿಸಬೇಕು, ರತ್ನವು ವಿಶೇಷವಾದರೂ ಕುಂದಣದಲ್ಲಿ ಬಂಧಿಸಿ ಸಂದಿರಬೇಕು. ಲಿಂಗವ ಹಿಡಿದಲ್ಲಿ ಪೂಜಿಸುವ ಅಂಗವಿರಬೇಕು. ಇದುಕಾರಣ ಗುಹೇಶ್ವರಲಿಂಗನವರಿದು ಮರೆಯಲಿಲ್ಲ ಕಾಣಾ ಚಂದಯ್ಯ, ಲಿಂಗವನ್ನು ಬಿಟ್ಟು ಜಂಗಮದಾಸೋಹ ಮಾಡುವದೆಂತು? ಫಲವಾದರೂ ಬರುವದೇ?

ಚಂದ್ರಯ್ಯ : ಗುರುಸೇವೆಯ ಮಾಡಿದರೆ ಇಹದಲ್ಲಿ ಸುಖ, ಲಿಂಗಸೇವೆಯ ಮಾಡಿದರೆ ಪರದಲ್ಲಿ ಸುಖ. ಜಂಗಮ ಸೇವೆಯಮಾಡಿದರೆ ಇಹಪರವೆಂಬುಭಯ ನಾಸ್ತಿ. ಇದು ಚಂದೇಶ್ವರಲಿಂಗದ ಭಾವ ಕಾಣಾ ಪ್ರಭುವೇ, ಜಂಗಮದಾಸೋಹ ಒಂದರಿಂದಲೇ ಇಹ-ಪರಗಳ ಫಲಪ್ರದಗಳು ಬಯಲಾಗುವವು. ಆದಕಾರಣ ಲಿಂಗಪೂಜೆಯು ನನಗೇಕಯ್ಯ, ಪ್ರಭುವೇ?

ಪ್ರಭುದೇವರು : ಕಣ್ಣು ಕಂಡಲ್ಲದೆ ಮನ ನೆನೆಯದು; ಆ ಮನ ನೆನೆದಲ್ಲಿ ಕಾಲು ನಡೆವುದು, ಕಾಲು ನಡೆದಲ್ಲದೆ ಕಾರ್ಯವಾಗದು. ಕಾಲೆಂದರೆ ನೀವು ಚರಿಸುವ ವರ್ತನೆ, ಆ ವರ್ತನಾಚಾರವೆಲ್ಲವೂ ಲಿಂಗವು, ಇದುಕಾರಣ ಲಿಂಗವ ಹಿಂಗಿದ ಮಾಟ ಮೀಸಲಿಲ್ಲದ ಮನೆದೇವರ ಹಬ್ಬದಂತೆ. ಆದಕಾರಣ ಜಂಗಮದಾಸೋಹಕ್ಕಾದರು ಲಿಂಗವು ಇದ್ದೇ ಇರಬೇಕು. ಅಲ್ಲವೇ, ಬಸವಣ್ಣನವರೇ?

ಬಸವಣ್ಣನವರು : ಲಿಂಗಜಂಗಮದ ಭೇದವನು ನಾನೆಂತು ಬಲ್ಲೆನಯ್ಯಾ? ಚನ್ನಬಸವಣ್ಣ ಬಲ್ಲ, ನಾನು ಆತನಿರಿಸಿದಂತೆ ಇರ್ಪೆನಯ್ಯ, ಇದು ಕಾರಣ ಕೂಡಲಸಂಗಮದೇವರಲ್ಲಿ ಚಂದಯ್ಯಂಗೆ ಶರಣೆಂದು ಶುದ್ಧನಯ್ಯಾ ಪ್ರಭುವೇ!

ಚನ್ನಬಸವಣ್ಣನವರು : ಏನು ಪ್ರಭುವೇ, ಚಂದಯ್ಯನವರ ನುಡಿಯು ವಿಪರೀತವಾಯಿತಲ್ಲ, ಅಂಗದ ಮೇಲೆ ಲಿಂಗವಿಲ್ಲದಿರ್ದೊಡೆ ಆ ಜಂಗಮಸೇವೆಯ ಕೈಕೊಳ್ಳ, ಅದುಕಾರಣ

ಒಂದು ಬಿಟ್ಟು ನಿಂದೊಡೆ ಅಂಗವಿಲ್ಲದ ಆತ್ಮನಂತೆ, ಶಕ್ತಿಯಿಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ, ಒಂದಂಗ ಶೂನ್ಯವಾಗಿ ಭಕ್ತಿಯುಂಟೇ? ಅವಯವ ಹೀನನು ರಾಯಪಟ್ಟಕ್ಕೆ ಸಲ್ಲುವನೇ? ಲಿಂಗಹೀನನು ಭಕ್ತಿ-ಆಚಾರಕ್ಕೆ ಸಲ್ಲುವನೇ? ಅದು ದೇವತ್ವಕ್ಕೆ ಸಲ್ಲದು. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ತ್ರಿವಿಧ ಸಮ್ಮತವೇ ಚರಸೇವೆಯಯ್ಯಾ! ಚಂದಯ್ಯನವರೆ, ನೀವು ಇಷ್ಟಲಿಂಗವನ್ನು ಧರಿಸಿ ಪೂಜಿಸಲೇಬೇಕು, ಚಂದಯ್ಯನವರೇ, ಮಣ್ಣಿಲ್ಲದ ಮರನುಂಟೇ? ಮರನಿಲ್ಲದ ಹಣ್ಣುಂಟೇ? ಹಣ್ಣಿಲ್ಲದ ಸ್ವಾದವುಂಟೇ? ಹೀಗಿರುವದೇ ಕ್ರಿಯೆಯು, ಅಂಗವೇ ಮಣ್ಣು, ಲಿಂಗವೇ ಮರವು, ಫಲವೇ ಜಂಗಮ, ರುಚಿಯೇ ಪ್ರಸಾದ, ಇದುಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಸಾಕಾರ ಲಿಂಗವೇ ಜಂಗಮದಂಗವಯ್ಯಾ, ಲಿಂಗವನ್ನು ಧರಿಸಿ ಪೂಜಿಸಿಯೇ ಜಂಗಮದಾಸೊಹವನ್ನು ಮಾಡುವುದು ಶಿವಾಚಾರವು, ಲಿಂಗವನ್ನು ನಿರಾಕರಿಸುವದೇ ಅನಾಚಾರವು. ಅದನ್ನು ಶಿವಶರಣರು ಮೆಚ್ಚರು, ಚಂದಯ್ಯನವರೇ!

ಚಂದಯ್ಯ : ಶರಣ ಸಮೂಹವೇ, ನಾನು ಅಪರಾಧಿಯು, ಲಿಂಗಮೂರ್ತಿಯೇ, ನನ್ನ ತಪ್ಪನ್ನು ಕ್ಷಮಿಸಿರಿ, ತಮ್ಮ ಕೃಪೆಯಿಂದ ಲಿಂಗಧಾರಣ ಮತ್ತು ಪೂಜೆಗಳ ಮಹತ್ವವು ನನಗೆ ವೇದ್ಯವಾಯಿತು. ನಾನೆಂದಿಗೂ ನಿಮ್ಮನ್ನು ಬಿಟ್ಟಗಲುವದಿಲ್ಲ; ದಯಮಾಡಿಸಿ.

❖❖

ವೀರಶೈವ ವಿದ್ಯಾಲಯ, ಆಲಮಟ್ಟಿ

ಉದ್ದೇಶ

೧. ವೀರಶೈವ ಬಾಲಕರಿಗೆ ಆರಂಭದಲ್ಲಿಯೇ ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳು ದೊರೆತು ಅವರ ಆತ್ಮೀಯ, ಮಾನಸಿಕ ಮತ್ತು ಶಾರೀರಿಕ ಬಲಗಳು ಹೆಚ್ಚಿ ಚಾರಿತ್ರ್ಯವು ಪವಿತ್ರತರವಾದುದಾಗುವಂತೆ ಮಾಡುವದು.

೨. ವಿದ್ಯಾರ್ಥಿಗಳು ಕನ್ನಡ, ಇಂಗ್ಲೀಷ್, ಮರಾಠಿ ಭಾಷೆಗಳನ್ನರಿತುಕೊಂಡು ಸುಸಂಸ್ಕೃತರಾಗಿ ಒಕ್ಕಲುತನ, ವ್ಯಾಪಾರ, ಕೈಗಾರಿಕೆಗಳಿಂದ ಸ್ವತಂತ್ರ ಜೀವನವನ್ನು ನಡೆಯಿಸಿಕೊಳ್ಳಲು ಸಮರ್ಥರಾಗುವಂತೆ ಮಾಡುವದು.

೩. ಬುದ್ಧಿಶಾಲಿಗಳು ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಉಚ್ಚತರದ ಶಿಕ್ಷಣವನ್ನು ಹೊಂದಿ, ಎಲ್ಲಾ ಧರ್ಮಗಳನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನಮಾಡಿ, ಜನರಲ್ಲಿ ಸ್ವಧರ್ಮಾಭಿಮಾನವನ್ನೂ, ಪರಧರ್ಮ ಸಹಿಷ್ಣುತೆಯನ್ನೂ ಉಂಟುಮಾಡಲು ಧರ್ಮೋಪದೇಶಕರಾಗುವಂತೆ ಮಾಡುವದು.

೪. ಈ ಧಾರ್ಮಿಕ, ನೈತಿಕ, ಶಾರೀರಿಕ, ಬೌದ್ಧಿಕ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಆರ್ಯ ಸಂಸ್ಕೃತಿಗನುಸರಿಸಿ ಪ್ರಾಚೀನಕಾಲದ ಗುರುಕುಲಗಳಲ್ಲಿ ದೊರೆಯುತ್ತಿದ್ದಂತೆ ಕೊಡುವುದು.

೫. ಈ ವಿದ್ಯಾಲಯದಲ್ಲಿ ಕಲಿಯದೆ ಇರತಕ್ಕ ವೀರಶೈವ ತರುಣರಲ್ಲಿ ಶಕ್ಯವಿದ್ದಷ್ಟು ಜನರನ್ನು ವಿದ್ಯಾಲಯಕ್ಕೆ ಬರಮಾಡಿಕೊಂಡು, ಸಾಧ್ಯವಿದ್ದಷ್ಟು ದಿವಸ ಇಟ್ಟುಕೊಂಡು, ಅವರಿಗೆ ಆತ್ಮೋನ್ನತಿಯ ಮತ್ತು ಸಮಾಜ ಸೇವೆಯ ಶಿಕ್ಷಣಕೊಡುವುದು ಮತ್ತು ಗೋಶಾಲೆಯನ್ನೇರ್ಪಡಿಸುವುದು.

೬. ವೀರಶೈವ ವಿದ್ವಾಂಸರಿಗೆ ಬೇರೆ ಬೇರೆ ವಿಷಯಗಳ ಸ್ವಂತ ಅಧ್ಯಯನ ಮತ್ತು ಪರಿಶೋಧನೆಗಳಿಗೆ ಅವಕಾಶವಾಗುವಂತೆ ಗ್ರಂಥಭಂಡಾರವನ್ನು ಏರ್ಪಡಿಸುವುದು.

೭. ಗ್ರಾಮಾಂತರಗಳಿಗೆ ಉಪದೇಶಕರನ್ನು ಕಳುಹಿಸಿ, ಪುರಾಣ, ಪ್ರವಚನ, ಭಾಷಣಾದಿಗಳ ಮೂಲಕ ಜನರಲ್ಲಿ ಧಾರ್ಮಿಕ, ನೈತಿಕ, ಶೈಕ್ಷಣಿಕ, ಶಾರೀರಿಕ ಮತ್ತು ಸಾಂಪತ್ತಿಕ ಜ್ಞಾನವನ್ನುಂಟುಮಾಡುವುದು.

೮. ಈ ಎಲ್ಲ ವಿಷಯಗಳ ಸಂಬಂಧವಾಗಿ ಸಮಾಜದಲ್ಲಿ ಜಾಗ್ರತೆಯನ್ನುಂಟುಮಾಡಲು ಆಗಾಗ್ಗೆ ಲೇಖಗಳನ್ನು ಪ್ರಕಟಗೊಳಿಸುವುದು.

ನಿಯಮ

೨. ವಿದ್ಯಾಲಯದ ಸಂಘಟನೆ :

ವಿದ್ಯಾಲಯದ ಉದ್ದೇಶವನ್ನು ಕೊನೆಗಾಣಿಸಲು ಒಂದು ಅಧಿಕಾರಿ ಮಂಡಲವು ಇರಬೇಕಾದುದು ಅವಶ್ಯಕವಷ್ಟೇ. ಈ ಕೆಳಗಿನ ನಾಲ್ಕು ವರ್ಗಗಳ ಸದಸ್ಯರೇ ಈ ಅಧಿಕಾರಿ ಮಂಡಲದಲ್ಲಿರತಕ್ಕದ್ದು.

೧. ವಿದ್ಯಾಲಯದಲ್ಲಿ ವಾಸವಾಗಿದ್ದು ತಮ್ಮ ಬುದ್ಧಿಶಕ್ತಿಯಿಂದ ಮೂರು ವರುಷಗಳಿಗಿಂತ ಕಡಿಮೆ ಇಲ್ಲದಷ್ಟು ಕಾಲ ಉಚಿತವಾಗಿ ಶಿಕ್ಷಣ ಕೊಡುವವರು ಅಥವಾ ಶಿಕ್ಷಣಕ್ಕೆ ಸಹಾಯಮಾಡತಕ್ಕವರು ಮತ್ತು ವರುಷಕ್ಕೆ ಒಂದು ನೂರು(೧೦೦) ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ಸ್ವಂತಕೊಡತಕ್ಕವರು ಅಥವಾ ಕೊಡಿಸಿಕೊಡತಕ್ಕವರು ಇಲ್ಲವೆ ಒಂದೇ ಸಾರೆಗೆ ಒಂದು ಸಾವಿರಿ (೧೦೦೦) ಕ್ಕಿಂತ ಹೆಚ್ಚಿಗೆ ಹಣವನ್ನು ಸ್ವಂತ ಅಥವಾ ಕೂಡಿಸಿಕೊಡುವವರು-**ಸಂರಕ್ಷಕರು**.

೨. ವರುಷಕ್ಕೆ ೫೦ ರೂ. ಗಳಿಂದ ಮೇಲ್ಪಟ್ಟು ಧನಸಹಾಯವನ್ನು ಮಾಡತಕ್ಕವರು ಅಥವಾ ಒಂದೇ ಸಾರೆಗೆ ೫೦೦ ರೂ. ಗಳಿಗಿಂತ ಹೆಚ್ಚಿಗೆ ಹಣವನ್ನು ಕೊಡುವವರು-**ಆಶ್ರಯದಾತರು**.

೩. ವರುಷಕ್ಕೆ ೨೫ ರೂ. ಮೇಲ್ಪಟ್ಟು ಹಣವನ್ನು ಕೊಡತಕ್ಕವರು ಅಥವಾ ಒಂದೇ ಸಾರಿಗೆ ೩೦೦ ರೂ.ಗಳಿಗಿಂತ ಹೆಚ್ಚಿಗೆ ಹಣವನ್ನು ಕೊಡುವವರು-**ಸಹಾಯಕರು**.

೪. ಒಂದೇ ಸಾರೆಗೆ ಒಂದು ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಧನಸಹಾಯ ಮಾಡುವವರು, ವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾಲಯಕ್ಕೆ ತಮ್ಮ ಹುಡುಗರನ್ನು ಕಲಿಯಲಿಕ್ಕೆ ಕಳುಹಿಸುವವರು-**ಪ್ರೋತ್ಸಾಹಕರು**.

ಈ ನಾಲ್ಕು ವರ್ಗಗಳ ಸದಸ್ಯರಲ್ಲದೆ ವಿದ್ಯಾಲಯದ ಹಿತಕ್ಕಾಗಿ, ಧನ, ಧಾನ್ಯ, ಪುಸ್ತಕಾದಿಗಳನ್ನು ತಮ್ಮ ಇಷ್ಟಾನುಸಾರ ಕೊಡತಕ್ಕವರು-ಹಿತಚಿಂತಕರು. ಇವರು ವಿದ್ಯಾಲಯಕ್ಕೆ ಸಹಾಯಮಾಡಿದ ಸಂಗತಿಯು ವಿದ್ಯಾಲಯದ ವಾರ್ಷಿಕ ವರದಿಯಲ್ಲಿ ಪ್ರಕಟವಾಗುವದೇ ವಿನಾ, ಇವರಿಗೆ ವಿದ್ಯಾಲಯದ ಅಧಿಕಾರಿಮಂಡಲದಲ್ಲಿ ಸೇರಿ ಮತಕೊಡಲು ಅವಕಾಶವಿಲ್ಲ.

ವೀರಶೈವ ವಿದ್ಯಾಲಯದ ಅಧಿಕಾರ ಮಂಡಲ

ಅಧಿಪತಿಗಳು

ಶ್ರೀಮನ್ನಿರಂಜನ ಬಂಥನಾಳ ಶ್ರಿ ಸಂಗನಬಸವ ಸ್ವಾಮಿಗಳು,

ಉಪಾಧಿಪತಿಗಳು

ರಾವಸಾಹೇಬ ಫ. ಗು. ಹಳಕಟ್ಟಿ, ಬಿ.ಎ.,ಎಲ್.ಎಲ್.ಬಿ. ವಿಜಾಪುರ,

ಸಹಾಯಾಧಿಪತಿಗಳು

ಶ್ರೀಯುತ ಹರ್ಡೇಕರ್ ಮಂಜಪ್ಪನವರು

ಕೋಶಾಧಿಪತಿ

ಶ್ರೀಯುತ ಮೋಟಗಿ ಸಂಗಣ್ಣನವರು, ಮುದ್ದೇಬಿಹಾಳ,

ಪತ್ರವ್ಯವಹಾರಮಾಡತಕ್ಕ ವಿಳಾಸ: ಸಹಾಯಾಧಿಪತಿ, ವೀರಶೈವ ವಿದ್ಯಾಲಯ

ಆಲಮಟ್ಟಿ, ಪೋಸ್ಟ್- ಚಿಮ್ಮಲಗಿ, ಜಿಲ್ಲಾ: ವಿಜಾಪುರ

❖❖

॥ ಓಂ ॥

ವೀರಶೈವ ವಿದ್ಯಾಲಯ, ಆಲಮಟ್ಟಿ

॥ವಿದ್ಯಯಾಮೃತಮಶ್ನುತೇ॥

ಮಹಾಶಯರೇ,

ಈ ಕಾಲದಲ್ಲಿ ಯಾವ ಉದ್ಯೋಗವನ್ನು ತೃಪ್ತಿಕರವಾಗಿ ಮಾಡಬೇಕಾದರೂ, ಇಂಗ್ಲೀಷ್, ಭಾಷಾಜ್ಞಾನವು ಬೇಕೇಬೇಕಾಗಿದೆ. ಇಂಗ್ಲೀಷ್ ಕಲಿಸಬೇಕೆಂದು ಇಂಗ್ಲೀಷ್ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿದರೆ, ಅಲ್ಲಿ ದೊರೆಯುವ ಶಿಕ್ಷಣದಿಂದ ಒಕ್ಕಲುತನ, ವ್ಯಾಪಾರ ಮತ್ತು ಧರ್ಮಗಳ ಜ್ಞಾನವಾಗುವದಿಲ್ಲ. ನಮ್ಮ ಸಮಾಜದ ೧೦೦ ವಿದ್ಯಾರ್ಥಿಗಳು ಇಂಗ್ಲೀಷ್ ಮೊದಲನೆಯ ತರಗತಿಯಲ್ಲಿದ್ದರೆ ಅವರಲ್ಲಿ ೧೫ ವಿದ್ಯಾರ್ಥಿಗಳು ಮಾತ್ರ ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಕಾಲೇಜುಗಳಿಗೆ ಹೋಗುತ್ತಾರೆ. ಇನ್ನುಳಿದ ೮೫ ವಿದ್ಯಾರ್ಥಿಗಳು ಬೌದ್ಧಿಕ ಮತ್ತು ಸಾಂಪತ್ತಿಕ ಅಸಮರ್ಥತೆಗಳಿಂದ ಮಧ್ಯದಲ್ಲಿಯೇ ಬಿಟ್ಟುಬಿಡುತ್ತಾರೆ. ಇವರು ಇಂಗ್ಲೀಷ್ ಭಾಷೆಯಲ್ಲಿಯು ಬಲ್ಲಿದರಾಗುವದಿಲ್ಲ; ಇತ್ತ ಒಕ್ಕಲುತನ, ವ್ಯಾಪಾರಾದಿ ಉದ್ಯೋಗಗಳಿಗೂ ಸಮರ್ಥರಾಗುವುದಿಲ್ಲ. ಆದಕಾರಣ ಈ ಶೋಚನೀಯ ಸ್ಥಿತಿಯು ನಿವಾರಣೆಯಾಗಬೇಕಾದರೆ ಇಂಗ್ಲೀಷ್ ಮತ್ತು ಔದ್ಯೋಗಿಕ ಜೀವನಪ್ರಾಯವಾದ ಇಂಥ ಶಿಕ್ಷಣವಾದರೋ, ಪ್ರಾಚೀನ ಕಾಲದ ಗುರುಕುಲಗಳಲ್ಲಿ ದೊರೆಯುತ್ತಿದ್ದಂತೆ ಏಕಾಂತ ಸ್ಥಳದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳೊಂದಿಗೆ ದೊರೆಯಬೇಕು. ಮತ್ತು ಈ ಶಿಕ್ಷಣವು ಪೂರೈಸಿದೊಡನೆ ಆಯಾಯ ವೃತ್ತಿ ಯವರು ತಮ್ಮ ತಮ್ಮ ಕಾರ್ಯಗಳನ್ನು ನಡೆಯಿಸಲು ಸಮರ್ಥರಾಗಬೇಕು.

ಶಿಕ್ಷಣದ ಸಾಮಾನ್ಯ ಸ್ವರೂಪ

೧. ಕನ್ನಡ ನಾಲ್ಕನೆಯ ತರಗತಿಯಲ್ಲಿ ಉತ್ತೀರ್ಣವಾದ ಅಥವಾ ಅಷ್ಟು ವಿದ್ಯಾಭ್ಯಾಸದ ವಿದ್ಯಾರ್ಥಿಗಳನ್ನೇ ಈ ವಿದ್ಯಾಲದಯಲ್ಲಿ ಸೇರಿಸಿಕೊಳ್ಳಲ್ಪಡುವುದು.

೨. **ಕೃಷಿ ವರ್ಗ** : ಮೊದಲನೆಯ ಮೂರು ವರುಷ ಇಂಗ್ಲೀಷ್ ಮೂರನೆಯ ತರಗತಿಯ ಶಿಕ್ಷಣ ಮತ್ತು ಕನ್ನಡ ಮುಲಕಿ ಪರೀಕ್ಷೆಯಷ್ಟು ಕನ್ನಡ ಭಾಷಾಜ್ಞಾನ, ಒಕ್ಕಲುತನದ ಪುಸ್ತಕಜ್ಞಾನ ದೊರೆಯುವುದು. ಆ ನಂತರ ಮೂರು ವರುಷಗಳಲ್ಲಿ ಇಂಗ್ಲೀಷ್ ಮೆಟ್ರಿಕ್ಯುಲೇಷನಿನಷ್ಟು ಇಂಗ್ಲೀಷ್ ಭಾಷಾಜ್ಞಾನ, ಮರಾಠಿ ಓದುಬರಹಗಳ ಜ್ಞಾನ, ಒಕ್ಕಲುತನದ ಸ್ವಂತಕೃತಿಯಿಂದ ದೊರೆಯುವ ಜ್ಞಾನ ಪ್ರಾಪ್ತವಾಗುವದಲ್ಲದೆ, ಗೌಡರಿಗೆ (ಪಾಟೀಲರಿಗೆ) ಗೊತ್ತಿರಬೇಕಾದ ಕಾಯಿದೆಗಳ ಸಾಮಾನ್ಯಜ್ಞಾನವೂ ಲಭಿಸುವುದು.

೩. **ವಾಣಿಜ್ಯ ವರ್ಗ** : ಮೊದಲನೆಯ ಮೂರು ವರುಷಗಳಲ್ಲಿ ಕೃಷಿವರ್ಗದವರಿಗೆ ದೊರೆಯುವಷ್ಟೇ ಭಾಷಾಜ್ಞಾನ ದೊರೆಯುವುದಲ್ಲದೆ, ವ್ಯಾಪಾರ ಸಂಬಂಧವಾದ ತೂಕ, ಅಳತೆ ಮೊದಲಾದವುಗಳ ಜ್ಞಾನವೂ, ಅನಂತರ ಮೂರು ವರುಷಗಳಲ್ಲಿ ಕೃಷಿವರ್ಗದವರಷ್ಟೇ ಭಾಷಾಜ್ಞಾನ ದೊರೆಯುವುದಲ್ಲದೆ, ವ್ಯಾಪಾರ ಸಂಬಂಧವಾದ ಎಲ್ಲಾ ಸಂಗತಿಗಳೂ ಪೋಷ್ಟ, ರೇಲ್ವೆ, ಟೆಲಿಗ್ರಾಫ್‌ಗಳ ಸಾಮಾನ್ಯ ಜ್ಞಾನವೂ ಪ್ರಾಪ್ತವಾಗುವುದು. ಕೃಷಿ ಮತ್ತು ಈ ವಾಣಿಜ್ಯ ವರ್ಗದವರಿಗೆ ಬಡ್ಡಿ ವ್ಯವಹಾರದ ಸಂಬಂಧವಾದ ಕಾಗದ ಪತ್ರಗಳ ಕಾಯಿದೆ ಜ್ಞಾನವೂ ದೊರೆಯುವುದು.

೪. **ಉಪದೇಶಕ ವರ್ಗ** : ಈ ವರ್ಗದವರಿಗೆ ಮೊದಲನೆಯ ಮೂರು ವರುಷಗಳಲ್ಲಿ ಮೇಲಣ ಉಭಯವರ್ಗದವರಷ್ಟೇ ಇಂಗ್ಲೀಷ್ ಕನ್ನಡ ಭಾಷೆಗಳ ಜ್ಞಾನವೂ ದೊರೆಯುವದಲ್ಲದೆ, ಸಂಸ್ಕೃತ ವಿದ್ಯಾಭ್ಯಾಸವು ಪ್ರಾರಂಭಿಸಲ್ಪಡುವುದು. ಮುಂದಣ ಮೂರು ವರುಷಗಳಲ್ಲಿ ಮೇಲಣ ವರ್ಗಗಳಷ್ಟೇ ಇಂಗ್ಲೀಷ್ ಭಾಷಾಜ್ಞಾನವಾಗುವದಲ್ಲದೆ ಪಂಚಕಾವ್ಯಗಳ ಸಂಸ್ಕೃತಜ್ಞಾನವೂ ಕನ್ನಡ ಸಾಹಿತ್ಯಜ್ಞಾನವೂ ವೀರಶೈವಮತದ ಮುಖ್ಯತತ್ವಗಳ ಧಾರ್ಮಿಕಜ್ಞಾನವೂ ದೊರೆಯುವುದು. ಈ ವರ್ಗದವರು ಉಚ್ಚ ಶಿಕ್ಷಣವನ್ನೂ, ಸ್ವಮತ ಮತ್ತು ಅನ್ಯಧರ್ಮಗಳ ತುಲನಾತ್ಮಕವಾದ ಜ್ಞಾನವನ್ನೂ ಹೊಂದತಕ್ಕದ್ದು.

❖❖

॥ಓಂ॥

॥ವಿದ್ಯಯಾಮೃತಮಶ್ನುತೇ॥

ಶಿಕ್ಷಣ

ॐ

विद्यामृतमश्नुते

ಸಂಪಾದಕರು

ಹರ್ಡೇಕರ ಮಂಜಪ್ಪ

ವೀರಶೈವ ವಿದ್ಯಾಲಯ, ಆಲಮಟ್ಟಿ
ಈ ಸಂಸ್ಥೆಯಿಂದ ಪ್ರಕಟವಾಯಿತು
ವಿಜಾಪುರ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

ಶಾ. ಶ. ೧೮೫೦ ಕ್ರಯ ೪ ಆಣೆ ಕ್ರಿ.ಶ. ೧೯೨೮

*

ಪೀಠಿಕೆ

ಪ್ರಾಚೀನ ಭಾರತೀಯರ ಗುರುಕುಲ ಪದ್ಧತಿಯನ್ನೇ ಮೇಲ್ಪಂಕ್ತಿಯಾಗಿಟ್ಟುಕೊಂಡು ಆಧುನಿಕ ಶಿಕ್ಷಣದಲ್ಲಿರುವ ಉತ್ತಮ ರೀತಿಗಳನ್ನನುಸರಿಸಿ ನಡೆಯುವ ಉದ್ದೇಶದಿಂದ ಸ್ಥಾಪಿತವಾದ ಕರ್ನಾಟಕದಲ್ಲಿಯ ಈ ನೂತನ ವಿದ್ಯಾಲಯದ ಪ್ರಥಮ ವಾರ್ಷಿಕ ವರದಿಯನ್ನು ಪರಮಾತ್ಮನ ಕೃಪೆಯಿಂದ ಇಷ್ಟು ತೃಪ್ತಿಕರವಾಗಿ ಈ ರೂಪದಲ್ಲಿ ವಾಚಕರ ಮುಂದಿಡುವ ಸುಪ್ರಸಂಗವು ಬಂದುದಕ್ಕೋಸ್ಕರ ಅತ್ಯಂತ ಸಂತೋಷವಾಗುತ್ತದೆ.

ಈ ವಿದ್ಯಾಲಯಕ್ಕೆ ಕೃಷ್ಣಾತೀರದಲ್ಲಿಯ ಬಹು ಅನುಕೂಲದ ಮತ್ತು ರಮ್ಯವಾದ ಈ ಸ್ಥಳ ಮಠ ತೋಟಗಳನ್ನು ಕೊಟ್ಟಿರುವ ಆಲಮಟ್ಟಿ ಶ್ರೀಯುತ ಪಾಟೀಲ ನೂರೊಂದಯ್ಯನವರಿಗೂ ಮತ್ತು ಈ ವಿದ್ಯಾಲಯದ ನೆರೆಯಲ್ಲಿಯೇ ಇರತಕ್ಕ ತಮ್ಮ ಭೂಮಿಯಲ್ಲಿಯ ಸಾಧಾರಣ ೫ ಎಕರೆ ಸ್ಥಳವನ್ನು ಕೊಟ್ಟ ವಿಜಾಪುರದ ಶ್ರೀಯುತ ಗುಡಗುಂಟಿ ರಾಚಯ್ಯನವರಿಗೂ ಈ ಪವಿತ್ರಕಾರ್ಯಕ್ಕೆ ಉದಾರ ಬುದ್ಧಿಯಿಂದ ಸಹಾಯ ಮಾಡಿದುದಕ್ಕೋಸ್ಕರ ಈ ಸಂಸ್ಥೆಯವರು ಅತ್ಯಂತ ಕೃತಜ್ಞರಾಗಿದ್ದಾರೆ.

ಈ ನೂತನ ವಿದ್ಯಾಲಯದಲ್ಲಿ ಶಿಕ್ಷಣದ ಪ್ರಯೋಜವನ್ನು ನೋಡದೆಯೇ ಮೊದಲೇ ತಮ್ಮ ಬಾಲಕರನ್ನು ಬಹು ಧೈರ್ಯದಿಂದ ಕಳುಹಿಸಿದ ವಿದ್ಯಾಭಿಮಾನಿಗಳಾದ ಎಲ್ಲ ವಿದ್ಯಾರ್ಥಿಗಳ ಪಾಲಕರನ್ನೂ ಸಂಸ್ಥೆಯವರು ಮನಃಪೂರ್ವಕ ಅಭಿನಂದಿಸುತ್ತಾರೆ.

ಜನರ ಧಾರ್ಮಿಕ, ನೈತಿಕ, ಮತ್ತು ಸಾಂಪತ್ತಿಕ ಸ್ಥಿತಿಗಳು ಅಭಿವೃದ್ಧಿಯನ್ನು ಹೊಂದಲು ಸಾಧನವಾದ ಈ ಶಿಕ್ಷಣ ಪ್ರಸಾರದ ಕಾರ್ಯಕ್ಕೆ ಧನಸಹಾಯ ಮಾಡಿದ ಎಲ್ಲ ಮಹಾಶಯರಿಗೂ ಸಂಸ್ಥೆಯವರು ತುಂಬಾ ಕೃತಜ್ಞರಾಗಿದ್ದಾರೆ.

ಈ ಮೊದಲನೆಯ ವರ್ಷದ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಂಡ ಬಾಗಲಕೋಟಿಯ ಶ್ರೀಯುತ ಮಹಾಂತಪ್ಪನವರು ಕಲಬುರ್ಗಿ ಬಿ.ಎ., ಎಲ್.ಎಲ್.ಬಿ. ಇವರು, ಮತ್ತು ಈ ಪ್ರಥಮ ವಾರ್ಷಿಕ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ ಹಾವೇರಿಯ ಶ್ರೀಯುತ ಶಿವಮೂರ್ತಿ ಸ್ವಾಮಿ ಹಿರೇಮಠ ಬಿ.ಎ., ಎಲ್.ಎಲ್.ಬಿ. ಇವರು ಈ ಸಾಮಾಜಿಕ ಕಾರ್ಯದ

ಶ್ರಮವನ್ನು ವಹಿಸಿ ಬಹು ತೃಪ್ತಿಕರವಾಗಿ ಮಾಡಿದುದರಿಂದ ಈ ಉಭಯ ವಿದ್ವಾಂಸರನ್ನೂ ಸಂಸ್ಥೆಯವರು ಮನಃಪೂರ್ವಕ ಅಭಿನಂದಿಸುತ್ತಾರೆ.

ಪರಮಾತ್ಮನ ಕೃಪೆಯಿಂದ ಎರಡನೆಯ ವರ್ಷದ ವರದಿಯನ್ನು ಸಕಲ ವಿಷಯಗಳಲ್ಲಿಯೂ ಇದಕ್ಕಿಂತ ಉತ್ತಮ ಸ್ಥಿತಿಯಲ್ಲಿ ವಾಚಕರ ಮುಂದಿಡುವ ಸುಸಮಯವು ಪ್ರಾಪ್ತವಾಗಲಿ.

ಹರ್ಡೇಕರ ಮಂಜಪ್ಪ
ಸಹಾಯಾಧಿಪತಿ
ವೀರಶೈವ ವಿದ್ಯಾಲಯ

ಶಾ.ಶ. ೧೮೫೦
ಅಧಿಕ ಶ್ರಾವಣ ಶು. ೧೨
ತಾ॥ ೨೯-೭-೧೯೨೮
ಆಲಮಟ್ಟಿ

॥ಓಂ॥

ಶಿಕ್ಷಣ

---

*

ಜ್ಞಾನಮಾತೆ!

[ಶ್ರೀ ಬ್ಯಾಳಿ ಕಲ್ಯಾಣಪ್ಪನವರು ಬಿ.ಎ., ಮುಖ್ಯೋಪಾಧ್ಯಾಯ]

ಯಾರ ಸುತೆ ನೀ ಜ್ಞಾನ ಮಾತೆಯೆ
ಯಾರ ಸೊಸೆ ನೀನಾರ ಮಡದಿಯು
ಯಾರ ಸೋದರಿಯೆಂದು ಜನಿಸಿದೆ ಎಷ್ಟು ವಯ ನಿನಗೆ
ಮಾರಹರ ಹರಿ ಬ್ರಹ್ಮದೇವರ
ಗೌರಿ ಲಕ್ಷ್ಮೀ ಭಾರತೀಯರಿಂ
ಮೀರಿ ಮರೆಯುವಿಯಲ್ಲೆ ಪರಸ್ತುವಿನ ವರ ಜ್ಯೋತಿ ॥೧॥

ಹರಿಯ ಶೀತಲದಮೃತವಾಹವೋ
ತರಣಿ ಕಿರಣದ ದಿವ್ಯತೇಜವೋ
ಸ್ಫುರಿತ ವಹ್ನಿಯ ಕಿಡಿಯ ರಾಶಿಯೊ ಸುರಮಣಿಯ ಸಿರಿಯೋ
ಪರಿವುದೆನೆ ಭೂಶಿರದ ಮೇಲ್ ತಾ
ಮೆರೆಯುವದು ತವ ನಿಚ್ಚ ಶಾಂತಿಯು
ಸುರನರೂರಗ ಯಕ್ಷಕಿನ್ನರನ್ನು ಚಮಕಿಸುತ ॥೨॥

ಜ್ಞಾನಮಾತೆಯೆ ನಿನ್ನ ಒಡಲೋಳ್
ಭಾನುತೇಜದ ಮನುಜ ಮಣಿಗಳ್
ಸಾನುರಾಗದಿ ಜನಿಸಿ ಜಗಮಂ ಬೆಳಗುವವು ನೋಡಾ
ಮಾನವರು ಬಹು ಸಂಭ್ರಮದಿ ತಾವ್
ಧ್ಯಾನದಿಂದ ತವ ಕರುಣೆಯಿಂ ಮೇಣ್
ಹೀನ ಜಂತುಗಳಿಂದ ಮಿಗಿಲೆಂದೆನಿಸಿ ಮೆರೆಯುವರು ॥೩॥

ನಿನ್ನೊಳಿಂ ಶ್ರುತಯಶರು ಕವಿಗಳ್
ನಿನ್ನೊಳಿಂ ಪಾವನರು ಋಷಿಗಳ್
ನಿನ್ನೊಳಿಂ ಪಂಡಿತರು ತತ್ವಜ್ಞಾನ ಶಾಸ್ತ್ರಜ್ಞರು
ನಿನ್ನೊಳಿಂ ಪರತರರು ಯೋಗಿಗ-
ಳಿನ್ನು ನಾನೇಂ ಬಣ್ಣಿಸಲಿ ಮಿಗೆ
ನಿನ್ನೊಳಿಂದಧಿಕತರ ಪಾವಿತ್ರ್ಯಮಯರಿನ್ನುಂಟೇ ॥೪॥

ತಿಂಗಳನ ತಂಗದಿರದ ತಂಪಿನ
ಮಂಗಳದ ವರ ಹಸ್ತದಿಂ ನೀಂ
ಮಂಗಳಾತ್ಮಳೆ ಸಿಂಗರಿಸು ನೀನೆನ್ನ ಮಸ್ತಕವ
ಸಿಂಗದ ಸಿರಿ ಮಂಗಳದ ಝುರಿ
ಇಂಗಿಸೌ ನಿನ್ನಂತರಂಗದ
ಇಂಗಡಲಿನೊಳಗೆನ್ನ ನೀಂ ಮಮತೆಯೊಳು ಸೌಭಾಗ್ಯೆ ॥೫॥

ಸುಧೆಯು ನಿನ್ನೊಳಗುಂಟು ಮಾತೆಯೆ
ಕ್ಷುಧೆ ಪಿಪಾಸದಿ ಬಳಲುವೆಂ ನಾಂ
ಸದಯದಿಂ ನೀ ನೀಡೆನಗೆ ಸಾನಂದ ತನಿರಸವ
ಹೃದಯ ಕರುಣಾರಸವು ನನ್ನೀ
ಮಧುರತರ ಪೀಯೂಷಪಾನದಿ
ಪದುಳಮಂ ಸಲೆ ಪೆರ್ಚಿಸುತೆ ಪೊರಮಡಲಿ ಭರದಿಂದ ॥೬॥

ಕವಿತೆಗಾಯನ ಶಿಲ್ಪ ಚಿತ್ರಂ
ವಿವಿಧ ಲಲಿತಕಲಾ ಸಮೃದ್ಧಿಯು
ಕವಿದು ಬಿಟ್ಟಿಹುದಲ್ಲೆ ನಿನ್ನಂ ಲೀಲೆಯೊಳ್ ಜಗದಿ
ಭುವನವಿದ್ದು ತವ ಮಹಿಮೆಯಿಂದೇ
ಕವಿಗೆ ಕೈಲಾಸವಿದು ತಾನೆನೆ
ನವನವೀನ ವಿಚಿತ್ರರೂಪದಿ ಶೋಭಿಪುದು ಸೊಗಸಿಂ ॥೭॥

ಕೆಲರು ನಿದ್ರಿಸುತಿಹರು ಗಾಢದಿ
ಕೆಲರು ತೂಕಡಿಸುವರು ಭ್ರಮೆಯಿಂ
ಕೆಲರು ಚಟಪಡಿಸುತ್ತೆ ತಲೆಯಂ ಕೆರೆದುಕೊಳ್ಳುವರು
ಹಲರು ನಿನ್ನಿಂ ದೂರ ಪೋಪರ್
ಹಲರು ನಿನ್ನ ಹಸಾದವಿಲ್ಲದೆ
ಬಲು ಪ್ರಯಾಸದ ಪರರ ಬಲೆಯೊಳ್ ಶಿಲ್ಕಿ ಪಾಳ್ಪೋಪರ್ ॥೮॥

ಮಲಗಿದವರನ್ನೆಬ್ಬಿಸೌ ನೀಂ
ಹಲಬುವವರಂ ರಕ್ಷಿಸೌ ಸಲೆ
ಇಳೆಯ ಸುಖದುಃಖಂಗಳಂ ಸಮನಾಗಿ ನೀನಿರಿಸೌ
ಬಲು ಪ್ರಯಾಸದಿ ಬಳಲುವವರಂ
ನಲುವಿನಿಂ ನೀ ಶಾಂತಿಗೊಳಿಸೌ
ಒಲುಮೆಯಿಂ ತವಭಜಿಪರಂ ಭವ ಬಂಧದಿಂ ಕಾಯೌ ॥೯॥

ಮಾತೆ ನಿನ್ನ ಕೃಪಾಕಟಾಕ್ಷೆಯ
ಪ್ರೀತಿಯಿಂ ಪೂಜ್ಯರೊಳು ನೀಡೌ
ಆತುರದಿ ಧಾವಿಸಲಿಯವರೆಡೆ ಬ್ರಹ್ಮಚಾರಿಗಳು
ಪೂತ ಗುರುಕುಲ ರಮ್ಯವನದೊಳ್
ಗೀತೆಯಂ ಪಾಡುತಲಿ ನಿನ್ನಯ
ನೀತಿ ಧರ್ಮ ಕಲಾಭಿವೃದ್ಧಿಯ ಪಡೆದು ಜೀವಿಸಲಿ ॥೧೦॥

ಭರತಖಂಡದೊಳೆಸೆವ ಕನ್ನಡಿ-
ಗರ ಸಿರಿಯು ಸ್ವಾತಂತ್ರ್ಯ ವಿದ್ಯೆಯು
ಭರದಿ ನಿನ್ನಯ ಸುದಯದಿಂ ಪೆರ್ಚಿಸಲಿ ಭೂತಲದೊಳ್
ಕರುಣಾಸಾಗರೆಯೆಂದು ನಿನ್ನಂ
ಮೊರೆಯ ಹೊಕ್ಕಿಹ ಮಕ್ಕಳಂ ನೀ
ಕರುಣೆಯಿಂ ಪರಿಪಾಲಿಸೆಂದಾಂ ಪದಕೆ ಪೊಡಮಡುವೆಂ ॥೧೧॥

ಗುರುಕುಲದ ಪ್ರಾಮುಖ್ಯತೆ

(ಶ್ರೀ ಟಿ. ಎಲ್. ವಾಸ್ವಾನಿಯವರು ತಾ. ೮-೪-೧೯೨೮ನೆಯ ದಿವಸ ಹರಿದ್ವಾರ ಗುರುಕುಲದಲ್ಲಿ ಮಾಡಿದ ವ್ಯಾಖ್ಯಾನದ ಮುಖ್ಯಾಂಶ)

[ಅನುವಾದಕ - ಶ್ರೀ ಬ್ಯಾಳಿ ಕಲ್ಯಾಣಪ್ಪನವರು ಬಿ.ಎ]

ಸದ್ಯದ ಸ್ಥಿತಿಯಲ್ಲಿ ಗುರುಕುಲ ಶಿಕ್ಷಣದ ವಿಚಾರವು ಮೊದಲು ದಯಾನಂದ ಋಷಿಗಳ ಮನಸ್ಸಿನಲ್ಲಿ ಹೊಳೆಯಿತು. ಪ್ರಾಚೀನ ಭರತಖಂಡದ ಶಿಖರಪ್ರಾಯವಾದ ಊರ್ಜಿತಾವಸ್ಥೆಯು ಪುನಃ ಪ್ರಾಪ್ತವಾಗಬೇಕಾದರೆ ಈಗಿನ ಶಿಕ್ಷಣದಲ್ಲಿ ಗುರುಕುಲತತ್ವಗಳನ್ನೇ ಸೇರಿಸಬೇಕೆಂದು ಅವರು ಯಾವಾಗಲೂ ಚಿಂತಿಸುತ್ತಿದ್ದರು. ಅವರ ಈ ವಿಚಾರವನ್ನು ಸ್ವಾಮಿ ಶ್ರದ್ಧಾನಂದರವರು ಆಚರಣೆಯಲ್ಲಿ ತರುವದಕ್ಕಾಗಿ ಹರಿದ್ವಾರದಲ್ಲೊಂದು ಗುರುಕುಲವನ್ನು ಸ್ಥಾಪಿಸಿದರು.

ಈ ದೇಶದಲ್ಲಿ ಈಗ ಪ್ರಚಲಿತವಾಗಿರುವ ಶಿಕ್ಷಣವು ಸರ್ವಸ್ವವನ್ನು ನಾಶಮಾಡುವಂತಹದಿರುತ್ತದೆ. ಅದರಲ್ಲಿ ಬೇರೂರಿದ ದುಷ್ಟ ಅನುಕರಣವೇ ಅಧೋಗತಿಗೆ ಕಾರಣವಾಗಿದೆ. ಭರತಖಂಡವು ಬಹು ನಿರ್ವಿಣ್ಣಾವಸ್ಥೆಯಲ್ಲಿದ್ದಾಗಲೇ ಅದಕ್ಕೆ ಸದ್ಯದ ಶಿಕ್ಷಣ ಪದ್ಧತಿಯ ಗಾಳಿಯು ಸೋಂಕಿತು. ಬ್ರಿಟಿಷ್ ಆಡಳಿತಕ್ಕೆ ಅನುಕೂಲವಾಗಬೇಕೆಂದು ಸಣ್ಣ ಪುಟ್ಟ ಕೆಲಸಗಾರರನ್ನು ಉಂಟುಮಾಡಬೇಕೆಂಬ ಮುಖ್ಯ ಉದ್ದೇಶದಿಂದಲೇ ಇಂಗ್ಲಿಷ್ ಸರಕಾರದವರು ಈ ತರದ ಶಿಕ್ಷಣವನ್ನು ನೆಲೆಗೊಳಿಸಿದರು.

ಈ ಗುರುಕುಲವು ಪ್ರಾಚೀನ ಭರತಖಂಡದ ಚಿರಸ್ಮರಣೀಯವಾದ ಸಂಸ್ಕೃತಿಯ ದ್ಯೋತಕವಾಗಿದೆ. ನವೀನ ಭರತಖಂಡದ ಉತ್ಕ್ರಾಂತಿ ಚಿಹ್ನವು ಇಲ್ಲಿ ತಲೆದೋರುತ್ತದೆ. ಭರತಖಂಡದ ಪುರಾತನ ಆಚಾರ ವಿಚಾರಗಳೇ ರಾಷ್ಟ್ರದ ಆಧಾರ ಸ್ತಂಭಗಳಾದ್ದರಿಂದ ಅವುಗಳನ್ನು ಪ್ರಸಾರಗೊಳಿಸುವುದೇ ಗುರುಕುಲದ ಮುಖ್ಯ ಧ್ಯೇಯವಾಗಿದೆ.

ಗುರುಕುಲ ವಿಶ್ವವಿದ್ಯಾಲಯದಲ್ಲಿ ತೋರುವ ಕೆಲವು ಸಂಗತಿಗಳು ಭರತ ಭೂಮಿಗೂ, ಇಡೀ ಜಗತ್ತಿಗೂ ಬಹು ಅಮೂಲ್ಯವಾದ ಉದಾಹರಣೆಗಳಾಗಿವೆ. ಪ್ರಾಚೀನ ಆರ್ಯಸಂಸ್ಕೃತಿಯ ಅಧ್ಯಯನವನ್ನು ಪುನಃ ಉಪಕ್ರಮಿಸಬೇಕೆಂದೇ ಗುರುಕುಲವು ಸಾರುತ್ತದೆ. ಕೆಲವರಿಗೆ ಪಾಶ್ಚಾತ್ಯ ಸುಧಾರಣೆಯು ತೃಪ್ತಿಕರವಾಗಿ ಕಾಣುವದಿಲ್ಲ. **ರೋಮೆನ್ ರೋಲಾಂಡರವರು** ನಮ್ಮಂಥ ಕೆಲವರಿಗೆ

ಯೂರೋಪದ ಸುಧಾರಣೆಯು ಸಾಕಷ್ಟಿರುವದೆಂದೆನಿಸುವದಿಲ್ಲ ಎಂದು ಹೇಳಿದ್ದಾರೆ. ಕೀಸರಲಿಂಗ ದೊರೆಗಳು ಯೂರೋಪವು ನನ್ನನ್ನು ಇದಕ್ಕಿಂತ ಹೆಚ್ಚಿನ ಸ್ಥಿತಿಯನ್ನು ಸೇರಲು ಪ್ರೇರೇಪಿಸದು ಎಂದು ಉಲ್ಲೇಖಿಸಿದ್ದಾರೆ. ಸದ್ಯದ ಶಿಕ್ಷಣದಲ್ಲಿ ಸ್ವಂತ ಅನುಭವದ ಕಡೆಗೆ ವಿಶೇಷ ಗಮನ ಕೊಡದೆ ವಾಙ್ಮಯ, ಇತಿಹಾಸ, ಅರ್ಥಶಾಸ್ತ್ರ, ರಾಜನೀತಿ ಮೊದಲಾದವುಗಳನ್ನು ವಿದ್ಯಾರ್ಥಿಗಳ ಹೃದಯದಲ್ಲಿ ಬಿಂಬಿಸಹೋಗುತ್ತಾರೆ. ಸ್ವಾನುಭವವು ಶಿಕ್ಷಣದ ಜೀವನವೆಂಬುದನ್ನು ಮರೆಯುತ್ತಾರೆ. ಈ ಗುರುಕುಲ ಶಿಕ್ಷಣವು ಭರತಖಂಡದ ಅನುಭವ, ವಿಚಾರ, ಸಂಪ್ರದಾಯಗಳನ್ನೇ ವಿಶೇಷವಾಗಿ ಅವಲಂಬಿಸಿದೆ. ಸದ್ಯದ ಶಿಕ್ಷಣವು ಇವುಗಳಿಂದ ವಿದ್ಯಾರ್ಥಿಗಳನ್ನು ದೂರೇ ಇರಿಸಿ ಬಿಟ್ಟಿರುವದು. ಪ್ರಾಚೀನ ಕಾಲದಂತೆ ಪ್ರಸಿದ್ಧ ರಾಷ್ಟ್ರಪುರುಷರ ಹಾಗೂ ಋಷಿಗಳೊಡನೆ ವಿದ್ಯಾರ್ಥಿಗಳು ಬೆರೆತುಹೋಗಬೇಕು.

ಗುರುಕುಲ ಶಿಕ್ಷಣವು ಉದಾತ್ತ ಧ್ಯೇಯವನ್ನವಲಂಬಿಸಿದೆ. ಗುರುಕುಲದಲ್ಲಿ ಸ್ವಾತಂತ್ರ್ಯ ಸುವ್ಯವಸ್ಥೆಗಳು ಅಂದ ಚಂದವಾಗಿ ಕೂಡಿಕೊಂಡಿವೆ. ಗುರುಕುಲದ ಗುರುಗಳು ವಿದ್ಯಾರ್ಥಿಗಳಿಗೆ ಸಹಾನುಭೂತಿ, ವಿಶ್ವಾಗಳನ್ನು ತೋರಿಸುತ್ತಾರೆ. ಆದರೆ ಸದ್ಯದ ಶಿಕ್ಷಣದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕ್ರಮ ಪದ್ಧತಿಗಳು ನೆಲೆಗೊಳ್ಳಬೇಕೆಂದು ಅವರಿಗೆ ಸಹಾನುಭೂತಿಯನ್ನು ತೋರಿಸುವದಿಲ್ಲ. ಹಾಗೂ ಅವರ ಮೇಲೆ ವಿಶ್ವಾಸವಿಡುವದಿಲ್ಲ. ಅದರಿಂದಲೇ ಶಿಕ್ಷಣವು ಕೇವಲ ಯಂತ್ರವಾಗಿದೆ. ಶಾಲೆಗಳೆಲ್ಲ ಕಾರಾಗೃಹಗಳಾಗಿವೆ. ಗುರುಕುಲದಲ್ಲಿ ವಿದ್ಯಾರ್ಥಿಗಳು ಗುರುವಿನ ಕುಟುಂಬಿಗಳಾಗಿದ್ದಾರೆ. ಶಿಕ್ಷಣವೆಂದರೆ ಸಹವಾಸವು. (Eduction is Fellowship)ಗುರುಕುಲವು ಈ ಮಾತಿನ ಸತ್ಯತೆಯನ್ನು ತೋರಿಸಿಕೊಡುತ್ತದೆ. ಶಿಷ್ಯನನ್ನು ತನ್ನ ಉದರದಲ್ಲಿಟ್ಟುಕೊಳ್ಳುವವನೇ ಗುರುವೆಂದು ವೇದದಲ್ಲಿ ಹೇಳಿದೆ. ಶಿಕ್ಷಕನೆಂದರೆ ಬೇದರಿಕೆಯಿಂದ ಕೆಲಸ ಮಾಡಿಸಿಕೊಳ್ಳುವವನಲ್ಲ. ಆದರೆ ಮಾತಾ ಪಿತೃಗಳಂತೆ ಪ್ರೇಮದಿಂದಲೂ, ಜಾಣತನದಿಂದಲೂ, ತನ್ನ ಶಿಷ್ಯನನ್ನು ರಕ್ಷಿಸುತ್ತ ಹಾದಿ ತೋರಿಸಿಕೊಂಡು ಹೋಗುವವನು. ಶಿಕ್ಷಕನೆಂದರೆ ಕೇವಲ ಪಾಠ ಹೇಳುವವನಲ್ಲ. ಅವನು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕನು. ಗುರುಕುಲವು ವಿದ್ಯಾರ್ಥಿಯ ಶಾರೀರಿಕ, ಬೌದ್ಧಿಕ, ನೈತಿಕ, ನೈಸರ್ಗಿಕ ಹಾಗೂ ಆಧ್ಯಾತ್ಮಿಕೋನ್ನತಿಗಳ ಕಡೆಗೆ ವಿಶೇಷ ಲಕ್ಷಕೊಟ್ಟಿರುತ್ತದೆ. ಶಾಲೆ, ಮತ್ತು ಮನೆಗಳನ್ನು ಒಂದೇ ಕಡೆಗೆ ಕೂಡಿ ನಡೆಸಿದ ಆಶ್ಚರ್ಯಕರವಾದ ಪ್ರಯತ್ನವು ಇಲ್ಲಿ ಕಂಗೊಳಿಸುತ್ತದೆ.

ಗುರುಕುಲವು ಬ್ರಹ್ಮಚರ್ಯ ಮಹತ್ವವನ್ನು ಬಹು ಸ್ಪಷ್ಟವಾಗಿವ್ಯಕ್ತಗೊಳಿಸುತ್ತದೆ. ಬ್ರಹ್ಮಚರ್ಹವು ಭಾರತೀಯ ಸುಧಾರಣೆಯ ಜೀವಾಳವು. ಜಗತ್ತಿನಲ್ಲಿ ಈಗ ಹೆಸರಾದ ಸುಧಾರಣೆಗಳು ಸಾಂಪತ್ತಿಕ ಸುಖೋಪಭೋಗಗಳನ್ನು ಹೊಂದಲೆಳಸುತ್ತವೆ. ಆರ್ಯ ಸಂಸ್ಕೃತಿಯು ಬ್ರಹ್ಮಚರ್ಯವೇ ಸುಧಾರಣೆಯ ಮೂಲಾಧಾರವೆಂದು ದೃಢವಾಗಿ ನಂಬಿದೆ. ಡಾಕ್ಟರರ ಎಲ್ಲ ಔಷಧಿಗಳಿಗಿಂತಲೂ ಬ್ರಹ್ಮಚರ್ಯವೇ ಆರೋಗ್ಯಕ್ಕೆ ಹೆಚ್ಚು ಅನುಕೂಲವುಳ್ಳದ್ದು. ಪವಿತ್ರತೆಯು ಪುರುಷತ್ವದ ತಳಹದಿಯು. ಬ್ರಹ್ಮಚರ್ಯವು ಹಿಂದು ಸಮಾಜ ಮತ್ತು ಹಿಂದು ಸುಧಾರಣೆಗಳ ನೆಲೆಗಟ್ಟು. ಸ್ವತಂತ್ರತೆಯನ್ನಿಚ್ಛಿಸುವ ರಾಷ್ಟ್ರವು ಬಲಿಷ್ಠವಾದ ರಾಷ್ಟ್ರವಾಗಬೇಕು. ನಮ್ಮ ದುರ್ದೈವದಿಂದ ಸದ್ಯದ ಶಿಕ್ಷಣದಲ್ಲಿ ಬ್ರಹ್ಮಚರ್ಯಕ್ಕೆ ತಿಲಮಾತ್ರವಾದರೂ ಮಹತ್ವವನ್ನು ಕೊಟ್ಟಿರುವದಿಲ್ಲ. ನಮ್ಮ ಸ್ಕೂಲು ಕಾಲೇಜುಗಳು ಬಹಳ ಬುದ್ಧಿವಂತರನ್ನು ಹೊರಡಿಸುತ್ತಿರುವದೇನೋ ನಿಜ. ಆದರೆ ಈಗ ಭರತಖಂಡಕ್ಕೆ ಸದಾವೃತ್ತಿಯ ಬಲಶಾಲಿಗಳು ದೇಶಸೇವೆಯನ್ನು ಮಾಡುವುದಕ್ಕೂ ಅದರ ಉದಾತ್ತ ತತ್ವಗಳನ್ನು ಪರಿಪಾಲಿಸಲಿಕ್ಕೂ ಸಿದ್ಧರಾಗುವದು ಬೇಕಾಗಿದೆ. ಪಾಶ್ಚಾತ್ಯರ ನಡೆನುಡಿಗಳನ್ನೂ ಅವರ ಸಂಸ್ಕೃತಿಯನ್ನೂ

ಅನುಕರಣಮಾಡುವದು ಹಿಂದುಸ್ಥಾನದ ಗುರಿಯಲ್ಲ. ಆದರೆ ಸಹಸ್ರಾರು ಬ್ರಹ್ಮಚಾರಿಗಳು ಅನೇಕ ಸ್ಥಳಗಳಲ್ಲಿ ಸಂಚರಿಸಿ ಕೋಟ್ಯವಧಿ ಜನಗಳಿಗೆ ಋಷಿಗಳ ಸಂದೇಶವನ್ನು ಸಾರುವ ಮಾರ್ಗವನ್ನೇ ಹಿಂದುಸ್ಥಾನವು ನಿರೀಕ್ಷಿಸುತ್ತಿದೆ.

ಈ ಗುರುಕುಲವು ಸ್ವಾನುಭಾವದ ಸ್ವಾಭಿಮಾನಗಳಿಂದ ಪ್ರೇರಿತವಾಗಿದೆ. ಸದ್ಯದ ಶಿಕ್ಷಣದ ದುಷ್ಟ ಅನುಕರಣದಿಂದ ನಮ್ಮ ತಲೆಯು ಕೆಟ್ಟು ಹೋಗಿದೆ. ಅನುಕರಣಮಾಡುವದೆಲ್ಲ ಹೇಡಿತನದ ಲಕ್ಷಣವೇ! ಶಕ್ತಿಯೇ ಜೀವನಾಧಾರವು. ಸ್ವಾನುಭವವೇ ಶಕ್ತಿಯ ರಹಸ್ಯವು. ಅಂಥ ಶಕ್ತಿಯು ನಮ್ಮಲ್ಲಿ ಉತ್ಪನ್ನವಾಗಬೇಕಾದರೆ ನಮ್ಮ ಉಪಜೀವನದಲ್ಲಿ ಸಾದಾತನವು ಬೇಕು. ಸಾದಾತನದಲ್ಲಿಯೇ ಸುಧಾರಣೆಯ ನಿಜವಾದ ಸತ್ವವಿರುತ್ತದೆ. ಈಗ ಜನರು ಜಾಣತನಕ್ಕೆ ಹೆಚ್ಚು ಮಹತ್ವಕೊಡುತ್ತಿದ್ದಾರೆ. ಬುದ್ಧಿವಂತರು ಬೇಕಾದಷ್ಟು ಜನರಿರುವರು. ಬುದ್ಧಿವಂತರೇನೂ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನೊದಗಿಸಿಕೊಂಡರು. ಸದ್ಯದ ಶಿಕ್ಷಣವು ಯಶಸ್ವಿಯಾಗದ್ದಕ್ಕೆ ಅದು ಆತ್ಮನ ಅಂತರಂಗದ ಮಹತ್ವವನ್ನು ವಿಕಾಸಗೊಳಿಸದಿದ್ದುದೇ ಮುಖ್ಯ ಕಾರಣವು ಯಾವ ಸ್ಕೂಲ ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳು ಆತ್ಮವನ್ನು ವಿಕಾಸಗೊಳಿಸಲೆತ್ನಿಸಿರುವವು? ರಾಥೇನಾ ಎಂಬ ಜರ್ಮನ್ ಮುತ್ಸದ್ದಿಗಳು ಆತ್ಮವನ್ನು ಸುಸಂಸ್ಕೃತಗೊಳಿಸು ಎಂದು ಪ್ರಾಚೀನ ಋಷಿಗಳ ಬೋಧೆಯನ್ನೇ ತಮ್ಮ ಭಾಷೆಯಿಂದ ಹೇಳಿದ್ದಾರೆ.

ಇಂಗ್ಲಂಡದ ಮಾಧ್ಯಮಿಕ ಶಾಲೆಗಳಲ್ಲಿ ಸಭ್ಯತನದ ನಡೆನುಡಿಗಳಿಗೆ ಹೆಚ್ಚು ಮಹತ್ವಕೊಡುತ್ತಾರೆ. ಫ್ರಾನ್ಸದಲ್ಲಿ ತಾರ್ಕಿಕ, ಚರ್ಚಾತ್ಮಕ, ಮತ್ತು ಕ್ರಮಬದ್ಧವಾದ ಮನಸ್ಸಿಗೆ ಮರ್ಯಾದೆ ಹೆಚ್ಚು; ರೋಮದಲ್ಲಿ ಸಮಾಜ ರಚನೆಗೆ ಶಾಸನಗಳ ಪರಿಪಾಲನೆಯೇ ಯೋಗ್ಯವಾದದ್ದೆಂಬ ಗ್ರಹಿಕೆ ಬಹಳ. ಪ್ರೊ. ವಾರ್ಡ ಎಂಬುವವರು ನೈತಿಕ ಸಾಮರ್ಥ್ಯ ಹಾಗೂ ನೈತಿಕ ಯೋಗ್ಯತೆಗಳ ಕಡೆಗೆ ಹೆಚ್ಚು ಗಮನ ಕೊಟ್ಟು ಶಿಕ್ಷಣವೆಂದರೆ ಸ್ವಭಾವದ ತಿದ್ದುಪಡಿ ಎಂದು ಹೇಳಿದ್ದಾರೆ. ಹಿಂದುಸ್ಥಾನದ ಆಧುನಿಕ ವಿಶ್ವವಿದ್ಯಾಲಯಗಳು ವರುವರುಷ ಕಲಾಬ್ರಹ್ಮಚಾರಿ(Bachelors of Arts)ಗಳನ್ನನೇಕರನ್ನು ಹೊರಪಡಿಸುತ್ತವೆ. ಆದರೆ ಅವರು ಬ್ರಹ್ಮಚಾರಿಗಳೂ ಅಲ್ಲ. ಕಲಾನಿಪುಣರೂ ಅಲ್ಲ. ಭರತಖಂಡಕ್ಕೆ ಇಂಥ ಪದವೀಧರರು ಬೇಡ. ಭಾರತೀಯ ಪುರುಷರು ಭಾರತೀಯ ವೀರರು ಎಂಬ ಪದವಿಗಳನ್ನು ಈಗಿನ ತರುಣರು ಹೊಂದಬೇಕಾಗಿದೆ.

ಎಲ್ಲ ಸ್ಕೂಲು ಕಾಲೇಜುಗಳೂ ಪವಿತ್ರಮಯವಾದ ಜ್ಞಾನ ಪ್ರವಾಹಗಳಾಗಬೇಕು. ಹೃದಯವನ್ನು ಪವಿತ್ರಗೊಳಿಸುವವರೇ ಗುರುಗಳಾಬೇಕು. ಸಾಂಪತ್ತಿಕ ಬುದ್ಧಿಯೂ, ಅಧಿಕಾರ ಪೂಜ್ಯತೆಯೂ, ಮಹತ್ವಾಕಾಂಕ್ಷೆಯೂ, ಪಾಂಡಿತ್ಯವೂ, ಹಿಂದುಸ್ಥಾನಕ್ಕೆ ಬೇಕಾಗಿಲ್ಲ. ಹಿಂದುಸ್ಥಾನವು ತಪಸ್ಸಿನ ಪವಿತ್ರ ಶಕ್ತಿಯಿಂದಲೇ ಪುನೀತವಾಗುವದು. ಶಿಕ್ಷಣವು ಪವಿತ್ರಾಂತಃಕರುಣಿಗಳಿಂದ ಉಪಕ್ರಮವಾಗಬೇಕು. ಶಿಕ್ಷಕರು ಬೌದ್ಧಿಕ ಹಾಗೂ ಆಧ್ಯಾತ್ಮಿಕ ಈ ಉಭಯ ವಿಚಾರಗಳಲ್ಲಿ ಪ್ರವೀಣರಿರಬೇಕು. ಆಚಾರ್ಯರೆಂದರೆ ಪದವೀಧರರನ್ನು ಹೊರಡಿಸುವ ಯಂತ್ರಗಳಾಗಿರದೆ ಜ್ಞಾನಪ್ರಸಾದವನ್ನು ನೀಡುವ ಶುದ್ಧಾತ್ಮರಾಗಿರಬೇಕು.

ನಮ್ಮ ಜೀವನಕ್ರಮದಲ್ಲಿ ಪವಿತ್ರವಾಗಿಡತಕ್ಕ ಕೇಂದ್ರ ಸ್ಥಾನಗಳು ನಾಲ್ಕು ಇರುತ್ತವೆ. ಅವು ಯಾವವೆಂದರೆ (೧) ಶಾರೀರಿಕ (೨) ಬೌದ್ಧಿಕ (೩) ಭಾವನಾತ್ಮಕ (೪) ವ್ಯವಹಾರಿಕ. ಇವುಗಳಲ್ಲಿ

ಸುಧಾರಣೆಯ ರಹಸ್ಯವು ಅಡಕವಾಗಿದೆ. ಆದರೆ ಈಗಿನ ಸುಧಾರಣೆಯಲ್ಲಿ ಬುದ್ಧಿವಂತಿಕೆಯು ಸ್ವಾರ್ಥ ಸಾಧಿಸುವದರಲ್ಲಿಯೇ ವೆಚ್ಚವಾಗುತ್ತದೆ. ಶಾಸ್ತ್ರ ಶೋಧಗಳು ಮಾನವ ಜಾತಿಯ ಪ್ರಗತಿಗನುಕೂಲವಾಗಿರದೆ ಅದರ ವಿನಾಶಕ್ಕೆ ಕಾರಣೀಭೂತವಾಗಿವೆ. ಸ್ವಲ್ಪೇ ನಿಮಿಷಗಳಲ್ಲಿ ಅಸಂಖ್ಯ ಸೈನ್ಯವನ್ನು ನಾಶಮಾಡುವದಕ್ಕೋಸ್ಕರ ಅಂಥ ಗ್ಯಾಸುಗಳು ಶೋಧವಾಗಿವೆ. ಪ್ರಾಚೀನಕಾಲದಲ್ಲಿ ಆಶ್ರಮ ಗುರುಕುಲಗಳು ವಿದ್ಯಾರ್ಥಿಗಳ ವಿಶಾಲವಾದ ಪ್ರೇಮದೃಷ್ಟಿಯನ್ನು ವಿಶ್ವದ ಕಡೆಗೆ ಹೊರಳಿಸಿ ಅವರನ್ನು ಸತ್ಯವಾದಿಗಳನ್ನಾಗಿ ಮಾಡುತ್ತಿದ್ದವು. ಶಾರೀರಿಕ ಹಾಗೂ ಭಾವನಾತ್ಮಕ ರೀತಿಗಳಿಂದ ಪವಿತ್ರವಾಗಬೇಕಾದರೆ ಬ್ರಹ್ಮಚರ್ಯವು ಬೇಕು. ವಿದ್ಯಾರ್ಥಿಗಳಲ್ಲಿ ಹೆದರಿಕೆಯನ್ನುಂಟುಮಾಡಬಾರದೆಂದು ಮನು ಶಿಕ್ಷಕರಿಗೆ ಬೋಧಿಸಿದ್ದಾನೆ. ಅಂಜಿಕೆಯಿಂದ ರಕ್ತಾಭಿಸರಣವು ಕುಂಠಿತವಾಗುತ್ತದೆ. ಮತ್ತು ರಕ್ತವು ವಿಷಮಯವಾಗುತ್ತದೆ. ಉಲ್ಹಾಸವೃತ್ತಿಯಿಂದಿರುವುದೇ ಬ್ರಹ್ಮಚರ್ಯವು. ವೀರ್ಯರಕ್ಷಣೆಯೇ ಜೀವನ ರಹಸ್ಯವು. ಬ್ರಹ್ಮಚರ್ಯವು ಕ್ಷೇತ್ರಗಳಲ್ಲಿ ಶ್ರೇಷ್ಠವಾದ ಕ್ಷೇತ್ರವು. ಗುರುಕುಲವಿದ್ಯಾರ್ಥಿಯು ಗಟ್ಟಿತನದ ಜಟ್ಟಿಯಾಗಿದ್ಧಾನೆ. ಹಿಂದು ಸಮಾಜವು ಈಗ ಕೋಮಲತನವೆಂಬ ಪಾಪದಿಂದ ಬಳಲಿ ಬೆಂಡಾಗಿದೆ. ಪ್ರಾಚೀನ ಹಿಂದೂಸ್ಥಾನದಲ್ಲಿ ಬ್ರಹ್ಮಚರ್ಯವೇ ಸಮಾಜದ ನೆಲೆಗಟ್ಟಾಗಿತ್ತು. ಬಾಲ್ಯವಿವಾಹವಂತೂ ಗೊತ್ತೇ ಇದ್ದಿಲ್ಲ. ಬ್ರಹ್ಮಚಾರಿಯ ಅನ್ನಪಾನಾದಿಗಳು ಉಡುಗೆತೊಡಿಗೆಗಳು ಬಹು ಸಾದಾತರದವಿರತಕ್ಕದ್ದು. ಬ್ರಹ್ಮಚರ್ಯಕ್ಕೆ ಅಪೇಯಪಾನ, ಅಭಕ್ಷ್ಯಭಕ್ಷಣಗಳು ನಿಷಿದ್ಧವಾದವುಗಳು. ಅದಕ್ಕೆ ಪ್ರಾಣಾಯಾಮ, ನದೀ ಸರೋವರಗಳಲ್ಲಿ ಸ್ನಾನ ಮಾಡೋಣ ಇವೇ ಅನುಕೂಲವಾದವುಗಳು. ಪ್ರಾಚೀನ ಗುರುಕುಲಗಳೂ ಆಶ್ರಮಗಳೂ ಬೈಲು ಪ್ರದೇಶದಲ್ಲಿ ನದೀತೀರಗಳ ಮೇಲೆ ಸ್ಥಾಪಿತವಾಗಿದ್ದವು. ಪಾಶ್ಚಾತ್ಯ ಸುಧಾರಣೆಯು ಜನದಟ್ಟಣೆಯ ನಗರಗಳಲ್ಲಿರುತ್ತದೆ. ಭರತಖಂಡದ ಸುಧಾರಣೆಯು ಸೃಷ್ಟಿಸೌಂದರ್ಯದಲ್ಲಿರುತ್ತದೆ. ನಿಸರ್ಗದೇವಿಯ ಸಂಸರ್ಗದಿಂದಲೇ ಹಿಂದಿವನರು ಶಾರೀರಿಕ ಮಾನಸಿಕ ಮತ್ತು ಆಧ್ಯಾತ್ಮಿಕೋನ್ನತಿಗಳನ್ನು ಕಂಡುಕೊಳ್ಳುತ್ತಿದ್ದರು.

ಬ್ರಹ್ಮಚಾರಿಗಳು ಆಟದ ಮಹತ್ವವನ್ನು ಮರೆಯಬಾರದು. ಆಟದಿಂದಲೇ ದೇಹಮನಸ್ಸುಗಳು ವಿಕಾಸವಾಗುತ್ತವೆ. ಶ್ರೀ ರಾಮಚಂದ್ರನು ಒಳ್ಳೇ ಕಸರತ್ತುಗಾರನಿದ್ದನು. ಬಿಲ್ಲುಗಾರಿಕೆ, ಕುಸ್ತಿ, ಓಟ, ದಾಂಡಪಟ್ಟ, ಪ್ರಾಣಾಯಾಮ, ಆಸನ ಮೊದಲಾದ ಸಾಧನಗಳಿಂದ ಶಾರೀರಿಕ ಹಾಗೂ ಮಾನಸಿಕ ಶಕ್ತಿಗಳನ್ನು ಬೆಳೆಸಲನುವಾಗುತ್ತದೆ. ಶರೀರ ರಚನೆಯೇ ರಾಷ್ಟ್ರ ರಚನೆಯು. ನಮಗೆ ವಿಜಯವು ಕೌನ್ಸಿಲ್‌ಗಳಲ್ಲಿಲ್ಲ. ಅಥವಾ ಸಭಾಗೃಹಗಳಲ್ಲಿಲ್ಲ. ಆದರೆ ಅದು ಶಕ್ತಿಯುಕ್ತವಾದ ಆಶ್ರಮಗಳಲ್ಲಿಯೂ ಅಂಗಸಾಧನೆಯ ಹಾಗೂ ತಪಶ್ಚರ್ಯದ ಶಾಲೆಗಳಲ್ಲಿಯೂ ಇದೆ. ಪ್ರಾಚೀನ ಕಾಲದಲ್ಲಿ ಬ್ರಹ್ಮಚರ್ಯವೇ ಶಿಕ್ಷಣದ ತಳಹದಿಯಾಗಿದ್ದಿತು. ಬ್ರಹ್ಮಚಾರಿಗಳು ಮತ್ತು ತಪಸ್ವಿಗಳು ಇವರೇ ಈ ಪವಿತ್ರಭೂಮಿಯ ಸಂರಕ್ಷರು.

ಅಲೆಕ್ಝಾಂಡರನನ್ನು ಹಿಂಬಾಲಿಸಿ ಬಂದ ಗ್ರೀಕರು ತಕ್ಷಶಿಲಾ ವಿಶ್ವವಿದ್ಯಾಲಯದ ಸೊಬಗಿನ ಸಾದಾತನವನ್ನೂ ಗುರುಗಳ ಉದಾತ್ತ ತತ್ವಗಳನ್ನು ನೋಡಿ ತಲೆದೂಗಿದರು. ಕಾಶಿ ನದಿಯಾಗಗಳಲ್ಲಿಯೂ, ಈ ಮಾದರಿಯ ವಿಶ್ವವಿದ್ಯಾಲಯಗಳಿದ್ದವು. ವಿದೇಹ, ಪಾಂಚಾಲ, ಮದ್ರಶೇಷ ಮೊದಾಲಾದ ರಾಜ್ಯಗಳು ಉಪನಿಷತ್ಕಾಲಗಳಲ್ಲಿ ಸಂಸ್ಕೃತಿಯ ಕೇಂದ್ರಸ್ಥಾನಗಳಾಗಿದ್ದವು, ನಾಲಂದ ವಿಶ್ವವಿದ್ಯಾಲಯವನ್ನು ಕಟ್ಟಿಸಲಿಕ್ಕೆ ೫೦೦ ಜನ ವ್ಯಾಪಾರಸ್ಥರು. ೧೦ ಲಕ್ಷ ಸುವರ್ಣ ನಾಣ್ಯಗಳನ್ನು ವೆಚ್ಚ ಮಾಡಿದರು. ಹತ್ತು ಸಾವಿರ ವಿದ್ಯಾರ್ಥಿಗಳು ಅಲ್ಲಿ ಅಧ್ಯಯನ ಮಾಡುತ್ತಿದ್ದರು.

ಗುರುಕುಲದ ಬ್ರಹ್ಮಚಾರಿಗಳು ಪುರಾತನ ಸಂಸ್ಕೃತಿಯ ಸ್ಮಾರಕದ ಸಂದೇಶವನ್ನು ಮನಃಪೂರ್ವಕವಾಗಿ ಕೋಟ್ಯವಧಿ ಜನಗಳಿಗೆ ತಿಳಿಸಬೇಕು. ರಾಮಾಯಣ ಮಹಾಭಾರತಗಳು ತಿದ್ದುಪಡಿ ಹೊಂದಿದ ಉದ್ಗ್ರಂಥಗಳಾದ್ದರಿಂದ ಅಧ್ಯಯನ ಮಾಡಬೇಕು. ವೇದಗಳು ಮಾನವ ಜಾತಿಯ ಉತ್ಕ್ರಾಂತಿಯ ಹೆಗ್ಗುರುತುಗಳಾದ್ದರಿಂದ ಅವುಗಳ ಅಭ್ಯಾಸವೂ ಅತ್ಯಾವಶ್ಯಕವು. ಬೌದ್ಧ ಹಾಗೂ ಜೈನಧರ್ಮಗಳ ವಿಚಾರಗಳು ಜಗತ್ತಿನಲ್ಲಿ ತಮ್ಮ ಕಾಂತಿಯನ್ನು ಬೆಳಗುವದರಿಂದ ಅವುಗಳನ್ನು ಅಭ್ಯಸಿಸಬೇಕು. ಆರ್ಯಸಂಸ್ಕೃತಿಯ ಕಾಲವು ಗತಿಸಿ ಹೋಗಿ ಅದರ ಅಮೌಲ್ಯ ಗ್ರಂಥಭಾಂಡಾರವು ಮೃತಪ್ರಾಯವಾಗಿದೆಯೆಂದು ಅವುಗಳ ಅಧ್ಯಯನವನ್ನು ಸರ್ವಥಾ ಬಿಡಕೂಡದು. ಅವು ಸಜೀವವಾದವುಗಳೇ, ವರ್ತಮಾನ ಭವಿಷ್ಯತ್ಕಾಲದಲ್ಲಿ ಹೊಸರಾಷ್ಟ್ರವನ್ನೂ ಹೊಸ ಸುಧಾರಣೆಯನ್ನೂ ಪುನಃ ಸ್ಥಾಪಿಸಲಿಕ್ಕೆ ಅವು ಬಹು ಮುಖ್ಯವಾದ ಸಾಧನಗಳು.

ಪ್ರಾಚೀನ ಗುರುಕುಲದಲ್ಲಿ ವಿದ್ಯಾರ್ಥಿಗಳು ೧೨ ವರ್ಷಗಳ ವರೆಗೂ ಕೆಲವರು ೩೨ ವರ್ಷಗಳ ವರೆಗೂ ಕೆಲವರು ೪೫ ವರ್ಷಗಳ ವರೆಗೂ ವಾಸಿಸುತ್ತಿದ್ದರು; ಅವರು ಭಿಕ್ಷೆಯೆತ್ತುತ್ತಿದ್ದರು. ದನಕರುಗಳನ್ನು ಕಾಯುತ್ತಿದ್ದರು. ಅರಣ್ಯದಿಂದ ಉರುವಲನ್ನು ತರುತ್ತಿದ್ದರು. ಅಗ್ನಿಹೋತ್ರಿಗಳಾಗಿ ಎಲ್ಲ ರೀತಿಯಿಂದ ಗುರುಗಳ ಸೇವೆ ಮಾಡುತ್ತಿದ್ದರು. ಶಿಷ್ಯನು ಗುರುವಿನಿಂದಗಲುವಾಗ ಗುರುಗಳವನಿಗೆ ಸತ್ಯವನ್ನು ನುಡಿ, ಧರ್ಮದಿಂದ ನಡೆ, ವೇದಾಧ್ಯಯನ ಮಾಡು, ಪ್ರಜಾತಂತುವನ್ನು ಛೇದಿಸಬೇಡ ಈ ಪ್ರಕಾರ ಉಪದೇಶ ಮಾಡುತ್ತಿದ್ದರು. ಅದನ್ನೇ ನಾನು ಗುರುಕುಲದ ಬ್ರಹ್ಮಚಾರಿಗಳಿಗೆ ಪುನಃ ಪುನಃ ಬೋಧಿಸುತ್ತಿದ್ದೇನೆ. ಸತ್ಯದಿಂದಲೇ ನವೀನ ಭಾರತದ ಭಾಗ್ಯೋದಯವಾಗುತ್ತದೆಂಬುದನ್ನು ಮರೆಯಬೇಡಿರಿ. ಸತ್ಯವೇ ನಿಮ್ಮನ್ನು ಸ್ವತಂತ್ರರನ್ನು ಮಾಡುವದು. ಗೃಹಸ್ಥಾಶ್ರಮಿಯಾದವನು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಬೇಕು. ದೇಶದ ಸಂಪತ್ತೇ ದೇಶಕ್ಕೆ ಹಿತಕರವಾಗಿಯೂ ಆಧ್ಯಾತ್ಮ ಸಾಧನೆಗೆ ಅನುಕೂಲವಾಗಿಯೂ ಇರುವದು. ಶಿಕ್ಷಣವು ಶಾಲೆಗಷ್ಟೇ ಸಂಬಂಧಿಸಿರುವದಿಲ್ಲ. ಆದರೆ ಮುಂದೆ ತನ್ನ ಜೀವಮಾನಕ್ಕೂ ಆದು ಬೇಕೇ ಬೇಕು. ಎಂದು ಪಾಶ್ಚಾತ್ಯರ ನೀತಿ ವಚನವಿರುವದು. ವ್ಯಕ್ತಿ ಸಮಾಜ ರಾಷ್ಟ್ರಗಳ ಜೀವನಕ್ಕೂ ಶಿಕ್ಷಣವು ಸಂಬಂಧಿಸಿರುವದು. ಹಿಂದುಸ್ಥಾನದ ಪ್ರತಿಯೊಂದು ಸ್ಕೂಲು ಕಾಲೇಜುಗಳ ಗುರಿಯ ಹೊಸ ರಾಷ್ಟ್ರ, ಹೊಸ ಸಂಸ್ಕೃತಿ, ಹೊಸ ಸುಧಾರಣೆಗಳ ಕಡೆಗೆ ಇರತಕ್ಕದ್ದು, ದೇಶದ ಬಗ್ಗೆ ನಿನ್ನ ಕರ್ತವ್ಯವನ್ನು ಮಾಡೆಂದರೆ ಹಳ್ಳಿಗಳನ್ನು ಕುರಿತು ನಿನ್ನ ಕರ್ತವ್ಯವನ್ನು ಮಾಡೆಂಬರ್ಥ. ಏಕೆಂದರೆ, ಹಿಂದುಸ್ಥಾನವು ಹಳ್ಳಿಗಳಲ್ಲಿದೆ. ಗುರುಕುಲ ವಿಶ್ವವಿದ್ಯಾಲಯದ ಸ್ನಾತಕರು ಆಗಾಗ್ಗೆ ಹಳ್ಳಿಗಳಲ್ಲಿ ಸಂಚರಿಸಿ ಗ್ರಾಮ ಸಂಘಗಳನ್ನೇರ್ಪಡಿಸಿ ಅವರಲ್ಲಿ ಜ್ಞಾನಪ್ರಸಾರ ಮಾಡಲೇಬೇಕು. ತೈತ್ತಿರಿಯೋಪನಿಷತ್ತಿನಲ್ಲಿ ಸಂತಾನ ಪರಂಪರೆಯನ್ನು ಛೇದಿಸಬೇಡವೆಂದು ಹೇಳಿದೆ. ಆದಕಾರಣ ಗೃಹಸ್ಥಾಶ್ರಮಿಗಳು ರಾಷ್ಟ್ರಕ್ಕೆ ಬಲಿಷ್ಠರಾದ ಪುತ್ರ ಪುತ್ರಿಯರನ್ನು ದಯಪಾಲಿಸಬೇಕು. ಇದರ ಬಗ್ಗೆ ನಾವು ನಮ್ಮ ದೇಹವನ್ನು ಹೆಚ್ಚೆಚ್ಚು ಬಲಿಸಬೇಕು. ಈಗ ಭರತಖಂಡವು ದಿನೇ ದಿನೇ ಕ್ಷೀಣಿಸುತ್ತಲಿದೆ. ಇದಕ್ಕೆ ಈಗ ನವೀನ ಚೈತನ್ಯವೂ ಬೇಕಾಗಿರುವದು. ಬಲಿಷ್ಠರಾಗಿರಿ, ಪುರುಷತ್ವ ಪಡೆಯಿರಿ. ಈ ತರದ ಶಕ್ತಿಯು ನಿಮ್ಮಲ್ಲಿ ಸ್ವಾರ್ಥತ್ಯಾಗದಿಂದುದ್ಭವಿಸುವದು. ಅಗ್ನಿಯ ಸಂದೇಶವು ಸ್ವಾರ್ಥತ್ಯಾಗವಲ್ಲದೆ ಬೇರೊಂದಿಲ್ಲ. ಆದ್ದರಿಂದ ಗುರುಕುಲ ಸ್ನಾತಕರೇ ನೀವು ಪ್ರೇಮಪೂರ್ವಕವಾಗಿ ಭರತಖಂಡದ ಸೇವೆಗಾಗಿ ನಿಮ್ಮ ಪ್ರಾಣವನ್ನು ಬಲಿ ಕೊಡಿರಿ.

❖❖

ಗೃಹಶಿಕ್ಷಣ

(ಲೇಖಕ : ಶ್ರೀ ಹರ್ಡೇಕರ ಮಂಜಪ್ಪನವರು, ಸಹಾಯಾಧಿಪತಿ)

ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗಬೇಕಾದರೆ ಶಿಕ್ಷಣವು ಅತ್ಯಾವಶ್ಯಕವಾಗಿ ಬೇಕಾಗಿದೆ. ಶಿಕ್ಷಣವೆಂದರೆ, ಮನಸ್ಸು, ಬುದ್ಧಿ ಮತ್ತು ದೇಹಗಳಿಗೆ ದೊರೆಯುವ ಸುಸಂಸ್ಕಾರವು. ಇಂಥ ಸಂಸ್ಕಾರವು ಮನುಷ್ಯನಿಗೆ ಸಕಾಲದಲ್ಲಿ ದೊರೆಯದಿದ್ದರೆ ಆತನು ಸುಖ ಶಾಂತಿಗಳನ್ನನುಭವಿಸುವುದು ಸಾಧ್ಯವೇ ಅಲ್ಲ. ಏಕೆಂದರೆ, ಮನುಷ್ಯನು ಪಶುಪಕ್ಷ್ಯಾದಿಗಳಂತೆ ಕೇವಲ ಜಾತಿ ವಿಶಿಷ್ಟವಾದ ಬುದ್ಧಿಗಳೂ ಸ್ವಭಾವಗಳಿಗನುಸರಿಸಿಯೇ ಪಡೆಯತಕ್ಕವನಲ್ಲ. ಮೀನವು ಗೀಜಗ ಪಕ್ಷಿಯಂತೆ ಗೂಡು ಕಟ್ಟುವುದನ್ನು ಕಲಿಯಲಾರದು. ಗೀಜಗ ಪಕ್ಷಿಯಾದರೋ ಮೀನಿಂತೆ ಈಜುವದನ್ನು ಕಲಿಯಲಾರದು. ಆದರೆ ಮನುಷ್ಯನು ಗೀಜಗದಂತೆ ಗೂಡುಕಟ್ಟುವುದನ್ನೂ ಮೀನಿನಂತೆ ಈಜುವುದನ್ನು ಕಲಿಯಬಲ್ಲನು. ಆಕಳು ಹುಲಿಯಂತೆ ಕ್ರೂರ ಪ್ರಾಣಿಯಾಗಲಾರದು. ಹುಲಿಯಾದರೋ ಗೋವಿನಹಾಗೆ ಸಾಧು ಜೀವಿಯಾಗಲಾರದು. ಆದರೆ ಮನುಷ್ಯನು ಮಾತ್ರ ಹುಲಿಗಿಂತ ಕ್ರೂರನಾಗಿಯೂ ಗೋವಿಗಿಂತ ಸಾಧುವಾಗಿಯೂ ಇರಬಲ್ಲನು. ಆದಕಾರಣ ಮನುಷ್ಯೇತರ ಪ್ರಾಣಿಗಳಂತೆ ಮನುಷ್ಯನ ಬುದ್ಧಿ ಗುಣ ಸಾಮರ್ಥ್ಯಗಳು ಕ್ಲುಪ್ತವಾದವುಗಳಲ್ಲ.

ಮನುಷ್ಯನು ತನ್ನಲ್ಲಿರತಕ್ಕ ಬುದ್ಧಿ ಗುಣ ಸಾಮರ್ಥ್ಯಗಳನ್ನು ಸಕಾಲದಲ್ಲಿ ಸರಿಯಾಗಿ ತಿದ್ದಿ ಹೆಚ್ಚಿಸಿಕೊಂಡು ಲೋಕಪೂಜ್ಯನಾಗಬಹುದು. ಅಥವಾ ಇವುಗಳನ್ನುಪೇಕ್ಷಿಸಿ ತಪ್ಪುದಾರಿಯಲ್ಲಿ ನಡೆದು ಕ್ರೂರ ಪಶುಗಳಿಗಿಂತಲೂ ಕ್ರೂರನಾಗಿಯೂ ಮಂದಮತಿಯು ಪ್ರಾಣಿಗಳಿಗಿಂತಲೂ ಜಡಮತಿಯಾಗಿಯೂ ಜೀವಿಸಬಹುದು. ಈ ಉಭಯಸ್ಥಿತಿಗಳಲ್ಲಿ ಯಾವುದನ್ನೂ ಹೊಂದುವುದಕ್ಕಾದರೂ ಈ ಮನುಷ್ಯ ಪ್ರಾಣಿಯು ಪಾತ್ರವಾದುದಾಗಿಯೇ ಇದೆ. ಆದಕಾರಣ ಮನುಷ್ಯನ ಮಾನಸಿಕ ಬೌದ್ಧಿಕ ಮತ್ತು ಶಾರೀರಿಕ ಉನ್ನತಿಗಳಿಗೋಸ್ಕರ ಸಕಾಲದಲ್ಲಿ ಸರಿಯಾದ ಶಿಕ್ಷಣ ದೊರೆಯುವದು ಅತ್ಯಾವಶ್ಯಕವಾಗಿಯೇ ಇದೆ.

ಈ ತ್ರಿವಿಧ ಶಿಕ್ಷಣಗಳಲ್ಲಿ ಮಾನಸಿಕ ಶಿಕ್ಷಣವೇ ಮನುಷ್ಯನಿಗೆ ಪ್ರಾಮುಖ್ಯವಾದುದಾಗಿದೆ. ಇದರ ವಿನಾ ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗುವುದಿಲ್ಲ. ಯಾವ ಶಿಕ್ಷಣದಿಂದ ಮನಸ್ಸಿಗೆ

ಪಾವಿತ್ರ್ಯತೆ ಮತ್ತು ಬಲಗಳು ಪ್ರಾಪ್ತವಾಗಿ ಅದು ಸದ್ವಿಷಯಗಳಲ್ಲಿ ಕುಸುಮಕ್ಕಿಂತಲೂ ಮೃದುವಾಗಿಯೂ ದುರ್ವಿಷಯಗಳಲ್ಲಿ ವಜ್ರಕ್ಕಿಂತಲೂ ಕಠಿಣವಾಗಿಯೂ ಪರಿಣಮಿಸುತ್ತದೆಯೋ ಅದೇ ಮಾನಸಿಕ ಶಿಕ್ಷಣವು. ಇಂಥ ಮಾನಸಿಕ ಶಿಕ್ಷಣವನ್ನು ಹೊಂದುವಾಗ ಬುದ್ಧಿಶಕ್ತಿ ಮತ್ತು ದೇಹಬಲಗಳ ಕಡೆಗೆ ಗಮನಿಸಲೇಬಾರದೆಂದು ತಿಳಿಯಕೂಡದು. ಈ ಉಭಯ ಸಾಮರ್ಥ್ಯಗಳುಂಟಾಗುವಂತಹ ಸಂಸ್ಕಾರಗಳು ಮಾನಸಿಕ ಶಿಕ್ಷಣಕ್ಕೆ ಸಂಬಂಧಪಟ್ಟವುಗಳೇ ಆಗಿವೆ. ಆ ಬೌದ್ಧಿಕ ಮತ್ತು ಶಾರೀರಿಕ ಸಾಮರ್ಥ್ಯಗಳಿಲ್ಲದಿದ್ದರೆ ಕಣ್ಣು ಕಾಲುಗಳಿಲ್ಲದ ಮನುಷ್ಯನಂತೆ ಆ ಮಾನಸಿಕ ಶಿಕ್ಷಣವು ನಿರ್ಬಲವಾದುದಾಗುವುದು. ಆದುದರಿಂದ ಮಾನಸಿಕ ಶಿಕ್ಷಣವನ್ನೇ ಮುಖ್ಯವಾಗಿಟ್ಟುಕೊಂಡು ಅದರ ಪೋಷಣಾರ್ಥವಾಗಿ ಬುದ್ಧಿ ಮತ್ತು ದೇಹಬಲಗಳನ್ನು ಹೆಚ್ಚಿಸಲು ಸಕಾಲದಲ್ಲಿ ಸರಿಯಾದ ಸಂಸ್ಕಾರಗಳನ್ನು ಮಾಡುವುದೇ ಸಾತ್ವಿಕ ಶಿಕ್ಷಣವು. ಇದೇ ಪ್ರಾಚೀನ ಭಾರತೀಯರು ಹೊಂದುತ್ತಿದ್ದ ಶಿಕ್ಷಣವಾಗಿದ್ದಿತು.

ಯಾವ ಶಿಕ್ಷಣದಲ್ಲಿ ಮನುಷ್ಯನ ಬುದ್ಧಿಗೇನೇ ಪ್ರಾಮುಖ್ಯತೆಯನ್ನು ಆತನ ಮಾನಸಿಕ ಮತ್ತು ಶಾರೀರಿಕ ಉನ್ನತಿಗಳಿಗೆ ಗೌಣತ್ವವನ್ನು ಕೊಟ್ಟಿದೆಯೋ ಅಂಥ ಶಿಕ್ಷಣಕ್ಕೆ ರಾಜಸ ಶಿಕ್ಷಣವೆನ್ನಬೇಕು. ಈ ಕಾಲದಲ್ಲಿ ಎಲ್ಲ ಭಾಗಗಳಲ್ಲಿಯೂ ಮನುಷ್ಯನ ಬುದ್ದಿಗೇನೇ ಮಹತ್ವವುಂಟಾಗಿದೆ. ಯಾರು ಬುದ್ಧಿಶಾಲಿಗಳೋ ಅವರೇ ಶ್ರೇಷ್ಠರು. ಸುಶಿಕ್ಷಿತರು. ಅವರ ಮನಸ್ಸು ಎಷ್ಟೇ ಹೀನವಾದುದಿರಲಿ, ಅವರು ಎಂಥ ದುರಾಚಾರ ದುರ್ಗುಣಗಳುಳ್ಳವರಾಗಿರಲಿ ಅವರೇ ಶ್ರೇಷ್ಠರು. ಅವರಲ್ಲಿ ಅದ್ವಿತೀಯವಾದ ಬುದ್ಧಿಸಾಮರ್ಥ್ಯವೊಂದಿದ್ದರೆ ಸಾಕೆಂದು ತಿಳಿಯುತ್ತಿರುವ ಈಗಿನ ಶಿಕ್ಷಣವು ಮನುಷ್ಯತ್ವ ಪ್ರಾಪ್ತಿಗೆ ಪ್ರಬಲವಾದ ಪ್ರತಿಬಂಧವನ್ನುಂಟುಮಾಡುತ್ತಲಿದೆ.

ಮನುಷ್ಯನ ಮಾನಸಿಕ ಮತ್ತು ಬೌದ್ಧಿಕ ಉನ್ನತಿಗಳನ್ನು ಅಪೇಕ್ಷಿಸಿ ಕೇವಲ ದೇಹಬಲವನ್ನೇ ಹೆಚ್ಚಿಸಬೇಕೆಂಬ ಕಲ್ಪನೆಯು ಇತ್ತೀಚೆಗೆ ಅನೇಕರಲ್ಲುಂಟಾದುದರಿಂದ ಅವರಿಗೆ ದೇಹಬಲವೇ ಶಿಕ್ಷಣದ ಮುಖ್ಯಾಂಗವಾಗಿ ಪರಿಣಮಿಸಿದೆ. ಯಾರಲ್ಲಿ ವಿಶೇಷವಾದ ದೇಹಸಾಮರ್ಥ್ಯವಿಲ್ಲವೋ ಅವರು ಎಷ್ಟೇ ಬುದ್ಧಿಶಾಲಿಗಳಿರಲಿ, ಅಥವಾ ಎಂಥ ಪವಿತ್ರ, ಹೃದಯದವರೇ ಇರಲಿ, ಅವರು ನಿಷ್ಪ್ರಯೋಜಕರೆಂತಲೂ ಅಂತಹವರಿಂದ ರಾಷ್ಟ್ರವು ಪಾರತಂತ್ರದಲ್ಲಿ ಸಿಲುಕಿ ನಾನಾ ದುಃಖಗಳಿಗೀಡಾಗುತ್ತದೆಂತಲೂ ಮನುಷ್ಯನ ಸಕಲ ಸುಖಗಳಿಗೂ ಆತನಲ್ಲಿರತಕ್ಕ ದೇಹಬಲವೇ ಮುಖ್ಯ ಸಾಧನವಾಗಿದೆಯೆಂತಲೂ ಈ ತಾಮಸ ಶಿಕ್ಷಣವಾದಿಗಳು ತಿಳಿದಿದ್ದಾರೆ.

ಯಾವ ಶಿಕ್ಷಣದಿಂದ ಮಾನಸಿಕ ಉನ್ನತಿಯಾಗುವದಿಲ್ಲವೋ ಅದು ರಾಕ್ಷಸಿ ಶಿಕ್ಷಣವೆಂದು ತಿಳಿಯಬೇಕು. ಅಂಥ ಶಿಕ್ಷಣವು ಯಾವ ಜನಾಂಗದಲ್ಲಿ ಪ್ರಸಾರವಾಗುವುದೋ ಆ ಜನಾಂಗದಲ್ಲಿ ಹುಲಿ ಮೊದಲಾದ ಕ್ರೂರ ಪಶುಗಳಿಗಿಂತಲೂ ಹೆಚ್ಚಾದ ಹಿಂಸೆ ದುಃಖಗಳನ್ನುಂಟುಮಾಡುವ ನರಪಶುಗಳು ಹುಟ್ಟುವುದು ಆಶ್ಚರ್ಯವಲ್ಲ. ಈಗ ನಾನಾ ಹಿಂಸೆ ಮತ್ತು ಅಶಾಂತತೆಗಳಿಂದ ಮನುಷ್ಯಜಾತಿಯು ಬಳಲುತ್ತಿರುವುದಕ್ಕೆ ಪ್ರಾಚೀನ ಭಾರತೀಯರ ಸಾತ್ವಿಕ ಶಿಕ್ಷಣವು ನಷ್ಟವಾಗಿ ರಾಜಸ ಮತ್ತು ತಾಮಸ ಶಿಕ್ಷಣಗಳು ಎಲ್ಲೆಲ್ಲಿಯೂ ವ್ಯಾಪಿಸಿರುವುದೇ ಮುಖ್ಯ ಕಾರಣವಾಗಿದೆ.

ಈ ಪ್ರಕಾರ ಶಿಕ್ಷಣದಲ್ಲಿ ಮೂರು ವಿಧಗಳಿರುವಂತೆ ಶಿಕ್ಷಣವನ್ನು ಹೊಂದುವುದಕ್ಕೂ ಗೃಹ, ಗುರುಕುಲ, ಮತ್ತು ಮಾನವ ಕುಟುಂಬಗಳೆಂಬ ಮೂರು ಶಿಕ್ಷಣಾಲಯಗಳಿವೆ. ಈ ತ್ರಿವಿಧ

ವಿದ್ಯಾಲಯಗಳಲ್ಲಿ ಯಾರ ಶಿಕ್ಷಣವು ಸಕಾಲದಲ್ಲಿ ಸರಿಯಾಗಿ ನಡೆಯುವುದಿಲ್ಲವೋ ಅವರ ಶಿಕ್ಷಣವು ಸಂಪೂರ್ಣ ಸ್ಥಿತಿಯನ್ನು ಹೊಂದುವುದು ಸಾಧ್ಯವಲ್ಲ. ಶಿಕ್ಷಣಗಳಲ್ಲಿ ಮಾನಸಿಕ ಶಿಕ್ಷಣವೇ ಹೇಗೆ ಪ್ರಾಮುಖ್ಯವಾದುದಾಗಿದೆಯೋ ಹಾಗೆಯೇ ಶಿಕ್ಷಣಾಲಯಗಳಲ್ಲಿ ಗೃಹವೇ ಮುಖ್ಯವಾದುದಾಗಿದೆ. ಎಂದರೆ ಗೃಹಶಿಕ್ಷಣವೇ ಮೊದಲನೆಯದಾಗಿದೆ.

ಶಿಕ್ಷಣವು ಮನುಷ್ಯನಿಗೆ ತೊಟ್ಟಿಲಲ್ಲಿಯೇ ಪ್ರಾರಂಭವಾಗಬೇಕೆಂದು ಕೆಲವರು ಹೇಳುತ್ತಾರೆ. ಶಿಕ್ಷಣಕ್ಕೆ ತಾಯಿಯ ತೊಡೆಯೇ ಪ್ರಥಮ ಸ್ಥಾನವೆಂದು ಮತ್ತೆ ಕೆಲವರು ಹೇಳುತ್ತಾರೆ. ಆದರೆ ಪ್ರಾಚೀನ ಭಾರತೀಯರಾದರೋ ಶಿಶುವು ಗರ್ಭದಲ್ಲಿರುವಾಗಲೇ ಅದಕ್ಕೆ ಶಿಕ್ಷಣವನ್ನು ಕೊಡಲುಪಕ್ರಮಿಸಬೇಕೆಂದು ನಿರ್ಧರಿಸಿದ್ದಾರೆ. ಆದುದರಿಂದ ಗರ್ಭವತಿಯಾದ ಸ್ತ್ರೀಯಳಿಗೆ ೮ನೆಯ ತಿಂಗಳಲ್ಲಿಯೇ ಶುಭ ಸಂಸ್ಕಾರಗಳು ಪ್ರಾರಂಭವಾಗುತ್ತವೆ. ಆಗ ಆ ತಾಯಿಗೆ ಮಾಡಲ್ಪಡುವ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕ ಸಂಸ್ಕಾರಗಳೆಲ್ಲವೂ ಗರ್ಭದಲ್ಲಿರುವ ಶಿಶುವಿನ ಮೇಲೆಯೂ ಆಗುತ್ತವೆ.

ವೀರಶೈವರಿಗಂತೂ ಈ ತತ್ವವು ಅತ್ಯಂತ ಮಹತ್ವದ್ದಾಗಿ ತೋರಿದೆ. ಆದುದರಿಂದಲೇ ಗರ್ಭದಲ್ಲಿರುವ ಶಿಶುವಿಗೇನೇ ಲಿಂಗವನ್ನು ಧರಿಸುವ ಸಂಸ್ಕಾರವು ತಾಯಿಯ ಮೇಲೆ ಮಾಡಲ್ಪಡಬೇಕೆಂದು ಈ ಮತದಲ್ಲಿ ಹೇಳಿದೆ. ಆಗ ತಾಯಿಗೆ ಲಿಂಗಸಂಬಂಧವಾಗಿ ಮಾಡುವ ಸಂಸ್ಕಾರವು ಗರ್ಭದಲ್ಲಿರುವ ಶಿಶುವಿನ ಮೇಲೆಯೂ ಆಗುವುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ, ಆಗ ತಾಯಿಯ ಮನೋಭೂವಿಕೆಯಲ್ಲೊಂಟಾಗುವ ಯೋಜನೆ ಮತ್ತು ಭಾವನೆಗಳು ಹಸಿಯ ಗೋಡೆಯಲ್ಲಿ ಹರಳು ನಾಟುವಂತೆ ಕೂಸಿನ ಅಂತಃಕರಣದಲ್ಲಿ ಮೂಡುತ್ತವೆ. ಆದುದರಿಂದಲೇ ಮದಾಲಸರಾಣಿಯು ತಾನು ಬ್ರಹ್ಮಜ್ಞಾನಿಗಳನ್ನೇ ಹೆರಬೇಕೆಂದು ಸಂಕಲ್ಪಿಸಿ ಆತ್ಮಜ್ಞಾನಿಗಳಾದ ಮೂರು ಮಕ್ಕಳನ್ನು ಹೆತ್ತು ಆ ಮೇಲೆ ತನ್ನ ಪತಿಯ ಇಚ್ಛೆಯಂತೆ ಒಬ್ಬ ಕ್ಷತ್ರಿಯ ವೀರನನ್ನೂ ಹೆರಲಿಲ್ಲವೇ? ಅಭಿಮನ್ಯು ಗರ್ಭದಲ್ಲಿರುವಾಗಲೇ ಚಕ್ರವ್ಯೂಹ ಪ್ರದೇಶದ ಜ್ಞಾನವನ್ನು ಹೊಂದಿದ್ದನೆಂಬುದರಲ್ಲಿ ನಿಶ್ಚಯವಾಗಿಯೂ ಸತ್ಯಾಂಶವಿದೆ. ಶಿವಾಜಿಯಲ್ಲಿ ಅಂಥ ಪರಾಕ್ರಮವುಂಟಾಗಲು ಗರ್ಭವತಿಯಾದ ತಾಯಿಯು ಮಹಾಭಾರತ ರಾಮಾಯಣಗಳಲ್ಲಿಯ ಕಥೆಗಳನ್ನು ಕೇಳಿದುದು ಕಾರಣವಾಯಿತೆಂತಲೂ ನೆಪೋಲಿಯನ್ನನು ಅಷ್ಟು ವೀರನಾಗಲು ಆತನ ತಾಯಿಯು ಆತನನ್ನು ಗರ್ಭದಲ್ಲಿಟ್ಟುಕೊಂಡಾಗ ರಣರಂಗದ ವೀರಧ್ವನಿಗಳನ್ನು ಆಗಾಗ್ಗೆ ಕೇಳುತ್ತಿದ್ದುದೇ ಕಾರಣವಾಯಿತೆಂತಲೂ ಹೇಳುತ್ತಿರುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ತಾಯಿಯ ಮೇಲಾಗತಕ್ಕ ಸಂಸ್ಕಾರಗಳು ಗರ್ಭದಲ್ಲಿರುವ ಶಿಶುವಿಗೂ ತಟ್ಟುತ್ತವೆಂಬ ಈ ತತ್ವವು ಆಧುನಿಕ ವಿದ್ವಾಂಸರಿಗೂ ಮಾನ್ಯವಾದುದಾಗಿದೆ. ಆದುದರಿಂದಲೇ ಅಮೇರಿಕೆಯಲ್ಲಿ ಈ ಸುಪ್ರಜಾ ನಿರ್ಮಾಣ ಶಾಸ್ತ್ರವು ಬಹು ಪ್ರಸಾರವಾಗುತ್ತಲಿದೆ. ತಮ್ಮ ಮಕ್ಕಳು ಒಳ್ಳೆಯವರು, ಬುದ್ಧಿವಂತರು ಮತ್ತು ದೃಢಕಾಯರು ಆಗಬೇಕೆಂದಪೇಕ್ಷಿಸುವ ತಾಯಿಯರು ಆ ಮಕ್ಕಳು ಗರ್ಭದಲ್ಲಿರುವಾಗಲೇ ಅವರ ಹಿತಾರ್ಥವಾಗಿ ತಾವು ಒಳ್ಳೆಯ ಆಹಾರ ವಿಹಾರ ಯೋಚನೆ ಸಂಕಲ್ಪಗಳುಳ್ಳವರಾಗಬೇಕಾದುದು ಅತ್ಯಾವಶ್ಯಕವಾಗಿದೆ.

ಗರ್ಭವತಿಯು ದುಷ್ಟ ಆಹಾರ ಯೋಚನೆ ಸಂಕಲ್ಪಗಳುಳ್ಳವನಾದರೆ ಅವಳು ಮನುಷ್ಯ ರೂಪದ ರಾಕ್ಷಸರನ್ನೇ ಹೆತ್ತ ತಾಯಿಯಾಗುವಳು. ಅಂಥ ಮಕ್ಕಳನ್ನು ಹೆರುವುದಕ್ಕಿಂತ ಬಂಜೆಯಾಗಿರುವುದು ಲೇಸು. ಏಕೆಂದರೆ ಆ ಮಕ್ಕಳಿಂದ ಲೋಕಕ್ಕೆ ಕ್ಷೇಮವಿಲ್ಲ. ತಾಯಿಗೆ ಸುಖವಿಲ್ಲ. ಆ ಮಗನಿಗೆ ದುಃಖ ತಪ್ಪುವುದಿಲ್ಲ. ಆದ ಕಾರಣ ಬಹು ನಿರ್ಲಕ್ಷಿಸಲ್ಪಟ್ಟಿರುವ ಅತ್ಯಂತ ಮಹತ್ವವಾದ ಈ ಸಂತಾನೋತ್ಪತ್ತಿಯ ಕಡೆಗೆ ಶಿಕ್ಷಣಾಭಿಮಾನಿಗಳು ಸಂಪೂರ್ಣ ಗಮನಿಸಬೇಕು.

ಮಗುವು ಈ ಪ್ರಪಂಚಕ್ಕೆ ಬಂದೊಡನೆ ಮೊದಲು ಪರಿಚಯವಾಗುವ ತಾಯಿಯೇ ಆ ಶಿಶುವಿಗೆ ಮೊದಲನೆಯ ಗುರು. ಹೊಟ್ಟೆಯಲ್ಲಿಟ್ಟುಕೊಂಡು ಜೋಪಾನ ಮಾಡಿದ್ದಕ್ಕಿಂತಲೂ ಅನಂತರ ಆ ಶಿಶುವನ್ನು ಸರಿಯಾಗಿ ಸಂರಕ್ಷಿಸುವದು ಹೆಚ್ಚು ಶ್ರಮದ ಮತ್ತು ಬಹು ಹೊಣೆಗಾರಿಕೆಯ ಕೆಲಸವಾಗಿದೆ. ಆ ಶಿಶುವು ಬೆಳೆದಂತೆ ತಾಯಿಯು ಅದರ ಆಹಾರ ವಿಹಾರ ನಡೆ ನುಡಿಗಳ ಕಡೆಗೆ ತುಂಬಾ ಲಕ್ಷಿಸಿ ತಿದ್ದಬೇಕು. ಇಷ್ಟೇ ಅಲ್ಲ; ತಾನು ಸರಿಯಾದ ನಡೆ ನುಡಿಗಳುಳ್ಳವಳಾಗಿಯೂ ಇರಬೇಕು. ಏಕೆಂದರೆ, ಆ ಕೂಸು ತಾಯಿಯ ಆಚಾರ ವಿಚಾರಗಳನ್ನೇ ಅನುಕರಿಸುತ್ತಿರುತ್ತದೆ. ಕೋಮಲವಾದ ಆ ಮಗುವಿನ ಅಂತಃಕರಣದ ಮೇಲೆ ತಾಯಿಯ ನಡೆ ನುಡಿಗಳೇ ಪ್ರತಿಬಿಂಬಿಸುತ್ತವೆ. ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಸತ್ಯಕಾಮನೆಂಬ ಬಾಲಕನು ಗೌತಮಋಷಿಯಲ್ಲಿ ಸತ್ಯವನ್ನೇ ನುಡಿಯಲು ತಾಯಿಯಾದ ಜಾಬಾಲಿಯೂ ಸತ್ಯವತಿಯಾಗಿದ್ದುದೇ ಕಾರಣವು.

ಒಂದು ಬೀಜವನ್ನು ಬಿತ್ತುವುದು ಸುಲಭ ಆದರೆ ಅದು ಸಸಿಯಾದನಂತರ ಫಲಕ್ಕೆ ಬರುವ ವರೆಗೂ ಸಕಾಲದಲ್ಲಿ ಸರಿಯಾಗಿ ನೀರು ಗೊಬ್ಬರವನ್ನು ಹಾಕಿ ಕಸಕಡ್ಡಿಗಳನ್ನು ತೆಗೆದು ಅನ್ಯಪ್ರಾಣಿಗಳ ಉಪದ್ರವವಾಗದಂತೆ ಸಂರಕ್ಷಿಸುವುದು ಮಾತ್ರ ಬಹು ಕಷ್ಟವಲ್ಲವೇ? ಹಾಗೆಯೇ ಮಕ್ಕಳನ್ನು ಹೆರುವುದು ಸುಲಭ. ಆದರೆ ಅವರು ಪ್ರೌಢರಾಗುವವರೆಗೆ ಅವರ ಆಹಾರ ವಿಹಾರ ಗುಣಕರ್ಮ ಸ್ವಭಾವ ವಿದ್ಯೆಗಳ ಕಡೆಗೆ ಸಂಪೂರ್ಣ ಲಕ್ಷಿಸಿ ಅವರು ನಿಜವಾದ ಮನುಷ್ಯರಾಗುವಂತೆ ಪ್ರಯತ್ನಿಸುವುದು ಮಾತ್ರ ತಾಯಿತಂದೆಗಳಿಗೆ ಅತ್ಯಂತ ಶ್ರಮದ ಕೆಲಸವಾಗಿದೆ.

ಅಸಂಖ್ಯ ದಂಪತಿಗಳಿಗೆ ಮಕ್ಕಳನ್ನು ಹೆರುವ ವಿಷಯದಲ್ಲಿ ತಮ್ಮ ಮೇಲಿರುವ ಹೊಣೆಗಾರಿಕೆಯ ಕಲ್ಪನೆಯೇ ಇಲ್ಲದಿರುವುದರಿಂದ ಮಾನವ ಕುಟುಂಬವು ಈ ಪ್ರಕಾರ ನಾನಾ ದುಃಖಗಳಿಗೀಡಾಗಿದೆ. ಅಸಂಖ್ಯ ತಾಯಿತಂದೆಗಳು ಮಕ್ಕಳನ್ನು ಹೆರುವ ಮುಂಚೆ ಮಕ್ಕಳು ಬೇಕೆಂಬ ವಿಷಯದಲ್ಲಿ ಎಷ್ಟು ಪ್ರೇಮಾಭಿಲಾಷೆಗಳುಳ್ಳವರಾಗಿರುತ್ತಾರೆಯೋ ಅಷ್ಟು ಆ ಮಕ್ಕಳು ಹುಟ್ಟಿದನಂತರ ಅವರ ವಿಷಯದಲ್ಲಿ ಪ್ರೇಮ ವಿಶ್ವಾಸಗಳುಳ್ಳವರಾಗಿರುವುದಿಲ್ಲ. ಒಂದೆರಡು ಮಕ್ಕಳುಗಳಿರುವ ವರೆಗೆ ದಂಪತಿಗಳು ಅವರನ್ನು ಯಾವರೀತಿಯಲ್ಲಿ ಸಂರಕ್ಷಿಸುತ್ತಾರೆಯೋ ಅದೇ ಪ್ರಕಾರ ನಾಲ್ಕಾರು ಮಕ್ಕಳಾದ ನಂತರ ಅವರನ್ನು ಪೋಷಿಸುವುದಿಲ್ಲ. ಹತ್ತೆಂಟು ಮಕ್ಕಳಾದರಂತೂ ತೀರಿತು. ತಾವು ಸಾಕಿದ ದನ ಕರು ಗಿಡ ಬಳ್ಳಿಗಳಿಗಿಂತಲೂ ಮಕ್ಕಳ ಕಡೆಗೆ ಕಡಿಮೆ ಲಕ್ಷಿಸುತ್ತಾರೆ. ಗೃಹಶಿಕ್ಷಣದಲ್ಲಿರುವ ಈ ಶೋಚನೀಯ ಸ್ಥಿತಿಯ ನಿವಾರಣೆಯಾಗುವವರೆಗೂ ಮನುಷ್ಯ ಜಾತಿಯು ನಿಜವಾದ ಸುಖಶಾಂತಿಗಳಿಂದ ಜೀವಿಸುವುದು ಸಾಧ್ಯವಲ್ಲ. ಆದುದರಿಂದಲೇ ಅಮೇರಿಕೆಯಲ್ಲಿ ಈ ಗೃಹಶಿಕ್ಷಣದ ಪ್ರಸಾರಕ್ಕೋಸ್ಕರ ಬಹು ಪ್ರಯತ್ನಿಸುತ್ತಿದ್ದಾರೆ.

ಮಕ್ಕಳ ಪೋಷಣೆಯ ವಿಷಯದಲ್ಲಿರತಕ್ಕ ಈ ತಮ್ಮ ಅತ್ಯಂತ ಮಹತ್ವವಾದ ಕರ್ತವ್ಯವನ್ನು ಅಸಂಖ್ಯ ತಾಯಿ ತಂದೆಗಳು ತೃಪ್ತಿಕರವಾಗಿ ಮಾಡುವುದು ಹಾಗಿರಲಿ ಇವರು ಮಕ್ಕಳ ಮೇಲಣ ಮೋಹದಿಂದ ಚಿಕ್ಕಂದಿನಲ್ಲಿಯೇ ಅವರ ಊಟ ಉಡಿಗೆ ನಡೆ ನುಡಿಗಳ ವಿಷಯದಲ್ಲಿ ನಾನಾ ದುರಭ್ಯಾಸಗಳನ್ನು ಕಲಿಸಿ ಅವರಿಗೆ ಜನ್ಮ ವೈರಿಗಳಾಗಿ ಪರಿಣಮಿಸುತ್ತಾರೆ. ಯಾವ ಮಕ್ಕಳ ದುರ್ದೈವದಿಂದ ಅವರಿಗೆ ಚಿಕ್ಕಂದಿನಲ್ಲಿಯೇ ಇಂಥ ಗೃಹಶಿಕ್ಷಣವು ದೊರೆಯುತ್ತದೆಯೋ ಅವರು ಮುಂದೆ ಎಂಥ ವಿದ್ಯಾಲಯದಲ್ಲಿದ್ದರೂ ಅವರ ನಡತೆಯು ಮಾತ್ರ ತಿದ್ದುಪಡೆಯಗುವುದು ಸಾಧ್ಯವಲ್ಲ.

ಆದುದರಿಂದ ತಾಯಿ ತಂದೆಗಳು ಮಕ್ಕಳಿಗೆ ಅಹಿತಕರವಾದ ಊಟ ಉಡಿಗೆ ನಡೆ ನುಡಿಗಳನ್ನು ಯಾವ ಕಾರಣದಿಂದಲೂ ಕಲಿಸದಂತೆ ಬಹು ಎಚ್ಚರಿಕೆಯುಳ್ಳವರಾಗಿರಬೇಕು. ಮಕ್ಕಳ ಮನಸ್ಸು ಪವಿತ್ರವಾಗಿರುವಂತೆ ಮೊದಲು ಪ್ರಯತ್ನಿಸಬೇಕು. ಅವರು ಸದ್ಗುಣಿಗಳೂ ಸದಾಚಾರಿಗಳೂ ಆಗವಂತೆ ಆಯಾಯ ಪ್ರಸಂಗಗಳಲ್ಲಿ ಪ್ರೇಮದಿಂದಲೇ ದೃಷ್ಟಾಂತ ಮೂಲಕ ಹಿತೋಪದೇಶಗಳನ್ನು ಮಾಡುವುದರಲ್ಲಿ ಸ್ವಲ್ಪವೂ ಉಪೇಕ್ಷಿಸಬಾರದು. ಅವರ ಒಳ್ಳೆಯ ಗುಣ ಸ್ವಭಾವುಗಳಿಗೇನೇ ಮಹತ್ವವನ್ನು ಕೊಡಬೇಕು. ಅವರ ಬುದ್ಧಿಶಕ್ತಿಯು ಯಾವ ಸದ್ವಿಷಯದಲ್ಲಿ ಹೋಗುತ್ತದೆಯೋ ಅದೇ ವಿಷಯದಲ್ಲಿ ಅವರು ಪಾರಂಗತರಾಗುವಂತೆ ಅವರ ಬುದ್ಧಿ ಸಾಮರ್ಥ್ಯವನ್ನು ವೃದ್ಧಿಗೊಳಿಸಬೇಕು. ತಾಯಿ ತಂದೆಗಳಿಗೆ ಇಷ್ಟವಿದ್ದ ವಿದ್ಯೆಯನ್ನು ಕಲಿಯುವ ಭಾರವು ಮಕ್ಕಳ ಮೇಲೆ ಬೀಳಬಾರದು. ಮಕ್ಕಳಿಗೆ ಯಾವುದರಲ್ಲಿ ಗತಿಯುಂಟೋ ಆ ವಿದ್ಯೆಯನ್ನೇ ಅವರು ಕಲಿಯಲವಕಾಶವಿರಬೇಕು. ಒಂದೇ ವಿಧವಾದ ಆಹಾರವು ಹೇಗೆ ಎಲ್ಲರಿಗೂ ಆರೋಗ್ಯಕರವಾದುದಾಗಿರುವುದು ಶಕ್ಯವಿಲ್ಲವೋ ಹಾಗೆಯೇ ಒಂದೇ ವಿಧವಾದ ವಿದ್ಯೆಯು ಎಲ್ಲರ ಬುದ್ಧಿಶಕ್ತಿಯನ್ನೂ ಬೆಳೆಯಿಸಲು ಸಾಧನವಾಗುವುದು ಸಾಧ್ಯವಿಲ್ಲ.

ಬಹು ಜನರು ತಮ್ಮ ಮಕ್ಕಳಿಗೆ ಮೋಹದಿಂದ ಅಹಿತಕರವಾದ ಅಂದರೆ-ರುಚಿಯಾಗಿ ತೋರುತ- ಆಹಾರವನ್ನು ಅಕ್ರಮವಾಗಿಯೂ ಮಿತಮೀರಿಯೂ ಕೊಟ್ಟು ಅವರ ಆರೋಗ್ಯಭಾಗ್ಯವನ್ನೇ ಹಾಳು ಮಾಡುತ್ತಾರೆ. ರುಚಿಯಾದ ಆಹಾರವನ್ನು ಹೆಚ್ಚು ಸೇವಿಸುವದರಿಂದ ಮಕ್ಕಳ ದೇಹವು ಬಲವಾಗುವುದಿಲ್ಲ. ಸೇವಿಸಿದ ಶುದ್ಧ ಆಹಾರವೆಲ್ಲಾ ಸರಿಯಾಗಿ ಜೀರ್ಣವಾದಾಗಲೇ ದೇಹ ಸಾಮರ್ಥ್ಯವುಂಟಾಗುತ್ತದೆಂಬುದನ್ನು ತಾಯಿತಂದೆಗಳು ಮುಖ್ಯವಾಗಿ ತಾಯಿಯು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು.

ಈ ಪ್ರಕಾರ ಚಿಕ್ಕಂದಿನಲ್ಲಿಯೇ ತಾಯಿ ತಂದೆಗಳಿಂದ ಮಕ್ಕಳ ಮಾನಸಿಕ ಬೌದ್ಧಿಕ ಮತ್ತು ಶಾರೀರಿಕ ಉನ್ನತಿಗಳಿಗೋಸ್ಕರ ಸರಿಯಾದ ಶಿಕ್ಷಣ ದೊರೆಯುವುದೇ ಗೃಹಶಿಕ್ಷಣವು ಮನುಷ್ಯನಿಗೆ ಮನುಷ್ಯತ್ವವನ್ನುಂಟು ಮಾಡಲು ಮೂಲ ಸಾಧನವಾದ ಈ ಗೃಹಶಿಕ್ಷಣವನ್ನು ಕೊಡುವ ತಾಯಿ ತಂದೆಗಳೇ ತೈತ್ತಿರೀಯೋಪನಿಷತ್ತಿನಲ್ಲಿ ಹೇಳಿದ ಪ್ರಕಾರ "ಮಾತೃದೇವೋಭವ ಪಿತೃದೇವೋಭವ" ಎಂಬಂತೆ ದೇವತ್ವಕ್ಕೆ ಪಾತ್ರರಾಗುವರು. ಇಲ್ಲದಿದ್ದರೆ ಮನುಸ್ಮೃತಿಯಲ್ಲಿ ಹೇಳಿರುವಂತೆ "ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ" ಆ ತಾಯಿಯೇ ಮಕ್ಕಳಿಗೆ ಶತ್ರು, ಆ ತಂದೆಯೇ ವೈರಿಯು. ಈಗಿರತಕ್ಕ ಈ ಶೋಚನೀಯ ಸ್ಥಿತಿಯು ಜಾಗ್ರತೆ ನಿವಾರಣೆಯಾಗಿ ಉಪನಿಷತ್ಕಾಲದ ಆ ಶ್ರೇಷ್ಠಾವಸ್ಥೆಯು ಗೃಹ ಶಿಕ್ಷಣಕ್ಕೆ ಪ್ರಾಪ್ತವಾಗಲಿ.

❖❖

ಶಿಲ್ಪಕಲೆ

(ಲೇಖಕ : ಶ್ರೀ ಕಾಪಸೆ ರೇವಪ್ಪನವರು, ಚಿತ್ರಕಲಾಧ್ಯಾಪಕ)

ಈ ಸೌಂದರ್ಯಮಯವಾದ ಜಗತ್ತಿನಲ್ಲಿ, ಪರಮಾತ್ಮನು ಅನಂತ ಆಟಗಳನ್ನು ಹೂಡಿ, ತರತರದ ಲೀಲೆಗಳನ್ನಾಡಹತ್ತಿದ್ದಾನೆ. ಕ್ಷಣ ಕ್ಷಣಕ್ಕೂ ಸೌಂದರ್ಯದ ತೆರೆಯನ್ನು ತೆರೆ ತೆರೆದು, ಮಾನವರಿಗೆ ಸೌಂದರ್ಯದಾನಂದವನ್ನುಣಿಸಹತ್ತಿದ್ದಾನೆ. ಪರಮಾತ್ಮನು ಅನುಕರಣವನ್ನು ತೊಟ್ಟಾಗಲೆ, ಮಾನವನಿಗೊಂದು ಕಲೆ ಹುಟ್ಟುವುದು, ಮಾನವನು ಸೌಂದರ್ಯದಾನಂದವನ್ನು ತನ್ನ ಹೃದಯದಲ್ಲಿ ಅನುಭವಿಸಿ, ಪ್ರತಿಭೆಯೊಡನೆ ಬೇರೆ ಬೇರೆ ಅವಯವಗಳಿಂದ ಹೊರಸೂಸುವಾಗ, ಕವಿಯಾಗುವನು, ಗಾಯಕನಾಗುವನು, ಶಿಲ್ಪಿಯಾಗುವನು.

ಶಿಲ್ಪಿಗಳಲ್ಲಿ ಚಿತ್ರಶಿಲ್ಪಿ, ಶಿಲಾಶಿಲ್ಪಿ, ಹಸ್ತಿದಂತಗಳ ಮೇಲೆ ಜಿನುಗಾದ ಕೆಲಸಮಾಡುವ ಶಿಲ್ಪಿ, ಕಟ್ಟಿಗೆಯಲ್ಲಿ ಕುಸುರು ಕುಸುರಾಗಿ ಕೊರೆಯುವ ಶಿಲ್ಪಿಗಳೆಂದು ಅನೇಕ ಭಾಗಗಳನ್ನು ಮಾಡಬಹುದು. ಗೋಡೆಗಳ ಮೇಲಾಗಲಿ, ಅಥವಾ ಕಾಗದದ ಮೇಲಾಗಲಿ, ಬಣ್ಣಗಳ ರೇಖೆಗಳಿಂದ ಸೌಂದರ್ಯ ಮತ್ತು ಭಾವನಾನಂದಗಳನ್ನು ಸೂರೆಮಾಡುವ ಚದುರ ಶಿಲ್ಪಿಗೆ ಚಿತ್ರಶಿಲ್ಪಿಯೆಂತಲೂ ಕಲ್ಲು ಕಲ್ಲಾದ ಕಲ್ಲನ್ನು ಬೆಣ್ಣೆಗಿಂತ ಮಿದು ಮಿದುವು ಮಾಡಿ ಭಾವ ಭಾಗಿಗಳ ತಾಳ ಮೇಳದೊಡನೆ ಸೌಂದರ್ಯದ ನೆಲಗಟ್ಟನ್ನೇ ನಿರ್ಮಿಸುವ ಶಿಲ್ಪಿ ಶಿಲಾಶಿಲ್ಪಿಯೆಂತಲೂ ಸಾಧಾರಣವಾಗಿ ಹೇಳಬಹುದು. ಹಸ್ತಿದಂತಗಳಲ್ಲಿಯೂ, ಕಟ್ಟಿಗೆಗಳಲ್ಲಿಯೂ, ಕೊರೆಯುವ ಶಿಲ್ಪಿಗಳು ಕುಸುರು ಕುಸುರಾದ ಜಿನುಗು ಕೆಲಸಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಚಿತ್ರಶಿಲ್ಪಿಯಾಗಲಿ, ಶಿಲಾಶಿಲ್ಪಿಯಾಗಲಿ, ಕವಿಯಾಗಲಿ, ಗಾಯಕನಾಗಲಿ, ಮತ್ತೆ ಬೇರಾವ ಶಿಲ್ಪಿಗಳಾದರೂ, ಇವರುಗಳ ಯೋಗ್ಯತೆಯಲ್ಲಿರುವಷ್ಟಾದರೂ ಹೆಚ್ಚು ಕಡಿಮೆಯಿಲ್ಲ, ಚಿತ್ರಶಿಲ್ಪಿಯು, ತಾನು ಕಂಡುಂಡ ಸಂತೋಷವನ್ನು ಲೋಕಕ್ಕೆ ಎಷ್ಟು ನೀಡುವನೋ ಅಷ್ಟೇ ಶಿಲಾಶಿಲ್ಪಿಯೂ, ಕವಿಯೂ, ಗಾಯಕನೂ, ನೀಡುವರು.

ನಮ್ಮ ಪೂರ್ವಜರು ಈ ಆರ್ಯಾವರ್ತದಲ್ಲಿ ನಮ್ಮ ಯೋಜನೆಗೆ ನಿಲುಕದಷ್ಟು ಕಲಾಪಥದಲ್ಲಿ ಅಡಿಯಿಟ್ಟಿದ್ದರೆಂದು ಹೇಳಬಹುದು. ಆದರೆ ಅವರನುಭವಿಸಿದ ಆನಂದವು ನಮ್ಮ ದುರ್ದೈವದಿಂದ ನಮಗೆ ದೊರೆಯದಿದ್ದುದ್ದಕ್ಕಾಗಿ, ನಾವು ದುಃಖಿಸಬೇಕಾಗಿದೆ.

ಈಗ ಎರಡು ಸಾವಿರ ವರುಷಗಳಿಂದ, ಎಂದರೆ ಬುದ್ಧನಕಾಲದಿಂದ ಈ ವರೆಗೂ, ಉಪಲಬ್ಧವಿರುವ ಚಿತ್ರಗಳಲ್ಲಿ, ಬೌದ್ಧಶಿಲ್ಪ ಮತ್ತು ಮೊಗಲಶಿಲ್ಪಗಳೆಂದು ಎರಡು ಭಾಗಗಳನ್ನು ಮಾಡಬಹುದು. ಇವುಗಳಲ್ಲಿ ಬೌದ್ಧ ಶಿಲ್ಪವು ಎಷ್ಟೊ ಕಾಲಗಳಿಂದಲೂ ಗುಪ್ತವಾಗಿ ಗುಹೆಗಳಲ್ಲಿಯೇ ವಿರಾಜಿಸುತ್ತಿದ್ದಿತು. ಆದರೆ ಮೊಗಲ ಶಿಲ್ಪಕಲೆಯು ಹಳೆ ಪುಸ್ತಕಗಳಲ್ಲಿಯೂ, ಅರಮನೆಗಳ ಭಿತ್ತಿಗಳಲ್ಲಿಯೂ ಕಂಗೊಳಿಸುತ್ತಿದ್ದಿತು.

ಬೌದ್ಧ ಮತ್ತು ಮೊಗಲ ಶಿಲ್ಪಗಳು, ಒಂದೇ ನೆಲಗಟ್ಟಿನಲ್ಲಿ ರಚಿಸಲ್ಪಟ್ಟಿವೆ. ಆದರೆ ಮೊಗಲ ಶಿಲ್ಪಿಗಳ ಚಿತ್ರರಚನಾ ಶೈಲಿಗೂ, ಬೌದ್ಧ, ಶಿಲ್ಪಿಗಳ ಚಿತ್ರರಚನಾ ಪದ್ಧತಿಗೂ, ವಿಶೇಷ ಭೇದವಿದೆ. ಮೊಗಲ ಶಿಲ್ಪಿಗಳು ಚಿತ್ರಗಳ ಭಾವಗಳನ್ನು ಸೂಕ್ಷ್ಮವಾದ ಕಾರ್ಯಗಳಲ್ಲಿ, ತಮಗೆ ಶಕ್ಯವಿದ್ದ ಮಟ್ಟಿಗೆ ಪ್ರಯತ್ನಿಸಿ ಒಡಮೂಡಿಸಿರುವರು. ಆದರೆ ಬೌದ್ಧ ಶಿಲ್ಪಿಗಳು, ಮೂರು ನಾಲ್ಕು ರೇಖೆಗಳ ಎಳತುಗಳಲ್ಲಿಯೇ ಅಲ್ಪಾಯಾಸದಿಂದ ಪರಿಪೂರ್ಣಭಾವವನ್ನು ಒಡಮೂಡಿಸಿದ್ದಾರೆ.

ಬೌದ್ಧ ಮತ್ತು ಮೊಗಲ ಶಿಲ್ಪಿಗಳ ಬಣ್ಣಗಾರಿಕೆಯು ಬಲು ಮನೋಹರವಾದದ್ದು, ಸಹಸ್ರಾರು ವರುಷಗಳಾಚೆಯಲ್ಲಿಯೇ ಅಂಕಿಸಲ್ಪಟ್ಟ ಚಿತ್ರಗಳ ಬಣ್ಣಗಳು ತಿಲಾಂಶವಾದರೂ ಪರಿವರ್ತನ ಹೊಂದದಿರುವುದನ್ನು ನೋಡಿದರೆ, ಆಶ್ಚರ್ಯವಾಗದಿರಲಾರದು, ಬೌದ್ಧಕಾಲದಿಂದ ಕೆಲವು ಶತಮಾನಗಳವರೆಗೆ ಬರೆಯಲ್ಪಟ್ಟ ಅಜಂತೆಯ ಚಿತ್ರಗಳ ಬಣ್ಣಗಳ ಹೊಳಪನ್ನು ನೋಡಿದರೆ, ಇದೇ ಈಗ ಶಿಲ್ಪಿಯೂ, ಬರೆದು ಹೋದನೋ ಏನೋ ಎಂಬುವಂತೆ ಶೋಭಿಸುತ್ತಿರುವುದು. ಬೌದ್ಧ ಶಿಲ್ಪವು ಭಾವಪರಿಪೂರ್ಣವಾದದ್ದು, ಅಲ್ಲದೇ ಶಾಂತಿಮಯವೂ ಆದದ್ದು, ಸೌಂದರ್ಯವನ್ನು ಪ್ರದರ್ಶಿಸುವಲ್ಲಿ ಬೌದ್ಧ ಶಿಲ್ಪಗಳು ಜಗತ್ತಿನ ಯಾವ ಶಿಲ್ಪಿಗಳಿಗಿಂತಲೂ ಕಡಿಮೆ ಇರಲಿಲ್ಲ.

ಅಲಂಕಾರಿಕ ಚಿತ್ರಗಳಲ್ಲಿ ಬೌದ್ಧ ಶಿಲ್ಪದ ರೀತಿ ಬೇರೆ, ಮೊಗಲ ಶಿಲ್ಪದ ಹಾದಿಯೇ ಬೇರೆ, ಶ್ರೀ ಅಸಿತಕುಮಾರ ಹಾಲದಾರವೆಂಬ ಬಂಗಾಲಿಯ ಚಿತ್ರಶಿಲ್ಪಿಗಳು “ಬೌದ್ಧ ಕಾಲದ ಅಲಂಕಾರಿಕ ಚಿತ್ರಗಳಲ್ಲಿ ಅರ್ಥಪೂರ್ಣವಿರುತ್ತದೆ. ಮೊದಲ ಶಿಲ್ಪಿಗಳ ಅಲಂಕಾರಿಕ ಚಿತ್ರಗಳಲ್ಲಾದರೋ, ಸೂಕ್ಷ್ಮತೆಯು ಬಹು ಘನತೆಯನ್ನು ಹೊಂದಿದೆ. ಬೌದ್ಧಕಾಲದ ಅಜಂತೆಯ ಗುಹೆಗಳ ಛತ್ತುಗಳಲ್ಲಿ ರಚಿಸಲ್ಪಟ್ಟ ಸುಳುವುಗಳು, ಬಹು ವಿಚಿತ್ರವಾದವುಗಳು. ಛತ್ತಿನ ನಟ್ಟುನಡುವೆ ಒಂದು ಶ್ವೇತಪದ್ಮವೂ ಅವರ ನಾಲ್ಕು ಮಗ್ಗಲಗಳಿಗೂ ಹಂಸಗಳು, ನವಿಲುಗಳು, ಇಲ್ಲದೆ ಮೃಣಾಳದಳಗಣನ್ನು ಕಿತ್ತೊಗೆಯುವ ಆನೆಗಳು, ರಚಿಸಲ್ಪಟ್ಟಿವೆ. ಅದಲ್ಲದೆ ಎಲ್ಲ ಕಡೆಗೂ ಎಲೆಬಳ್ಳಿಗಳ ಸುಳುವುಗಳನ್ನು ಸುತ್ತಿರುವರು.” ಎಂದು ಹೇಳಿದ್ದಾರೆ.

ಕಲಾಗ್ರಗಣ್ಯವಾದಂಥ ನಮ್ಮ ಭಾರತವರ್ಷದಲ್ಲಿ ಶಿಲ್ಪಿಗಳು ಭಾವಿಸಿ ಮೂಡಿಸಿದ ಚಿತ್ರಗಳ ಭಾವಗಳನ್ನು ತಿಳಿದುಕೊಳ್ಳುವಷ್ಟು ಕೂಡಾ ಶಕ್ತಿಯು ನಮಗಿಲ್ಲದೆ, ತಿಂದು ತೇಗಿ ತಿರುಗುತ್ತಿರುವುದನ್ನು ನೋಡಿ, ಪರರಾಷ್ಟ್ರದವರು ನಮಗೇನನ್ನಲಿಕ್ಕಿಲ್ಲ? ಅಂತೆಯೇ ಅಜಂತೆಯ ಚಿತ್ರಗಳನ್ನು ನೋಡಿ, M.R.S. Hervring (ಹ್ಯಾರಿಂಗ್ ಹ್ಯಾಮ್) ಎಂಬವರು “ಇಷ್ಟು ಪ್ರಾಚೀನ ಕಾಲದ ಚಿತ್ರಗಳನ್ನು, ನಿಮ್ಮ ದೇಶದಲ್ಲಿ ನೋಡಿ ನನಗೆ ನಿಜವಾಗಿಯೂ ಅತ್ಯಂತ ಆನಂದವಾಗಿದೆ. ನಮ್ಮ ದೇಶದಲ್ಲಿ ಈ ತರಹದ ಚಿತ್ರಗಳಿದ್ದಿದ್ದರೆ. ಅಂಥ ಸ್ಥಳಗಳಿಗಾಗಿಯೇ ನನ್ನ ಜೀವಿತವನ್ನು ಎಡೆಯಾಗಿಡಲು

ಶಕ್ಯವಿದ್ದಮಟ್ಟಿಗೆ ಪ್ರಯತ್ನಿಸುತ್ತಿದ್ದೆನು. ಆದರೆ ನಿಮ್ಮಲ್ಲಿ ಇಂಥ ಅಮೌಲ್ಯವಸ್ತುವಿನ ಆದರವು ಸಹ ಇಲ್ಲದಿರುವುದನ್ನು ನೋಡಿದರೆ, ಬಹು ದುಃಖವಾಗುತ್ತದೆ" ಎಂದು ಹೇಳಿರುವರು.

ನಮ್ಮ ದೇಶದಲ್ಲಿ ಚಿತ್ರಶಿಲ್ಪವು ಎಷ್ಟು ಊರ್ಜಿತಾವಸ್ಥೆಯಲ್ಲಿದ್ದಿತೋ, ಅಷ್ಟೇ ಊರ್ಜಿತಾವಸ್ಥೆಯಲ್ಲಿ ಶಿಲಾಶಿಲ್ಪವೂ ಇದ್ದಿತೆಂದು ಹೇಳಲಿಕ್ಕೆ ಗುಹೆಗಳಲ್ಲಿಯೂ, ಗುಡಿಗುಂಡಾರಗಳಲ್ಲಿಯೂ, ತೋರುವ ಗೊಂಬೆಗಳೇ ನಿದರ್ಶನವಾಗಿವೆ. ಶಿಲ್ಪಿಗಳು ತಮ್ಮ ರಕ್ತವನ್ನೇ ಕಾಸಿ, ಎರಕಹೊಯ್ದು, ನಿರ್ಮಿಸಿದ ಮೂರ್ತಿಗಳ ಭಾವ ಭಂಗಿಗಳನ್ನು ನೋಡಿದರೆ, ಶಿಲ್ಪಿಗಳ ಸಾಹಸ, ಮತ್ತು ಬುದ್ಧಿ ವೈಭವಗಳು, ವ್ಯಕ್ತವಾಗುತ್ತವೆ. ಇಂಥ ಪುಣ್ಯಶಾಲಿಗಳಾದ ಶಿಲ್ಪಿಗಳು ನಮ್ಮ ದೇಶದಲ್ಲಿ ಊರೂರಿಗೂ ಇದ್ದರೆಂದು ಹೇಳಲು ಯಾವ ಸಂದೇಹವೂ ಇಲ್ಲ. ನಮ್ಮ ಕರ್ನಾಟಕದಲ್ಲಿಯೂ, ಎಣಿಕೆಗೆ ಹತ್ತದಷ್ಟು ಗುಡಿ ಗೋಪುರಗಳನ್ನು ಕಟ್ಟಿ, ತಮ್ಮ ಜಾಣ್ಮೆಯನ್ನು ತೋರಿಸಿರುವರು. ಅಂಥಾ ಮಹಾ ಮಹಾ ಶಿಲ್ಪಿಗಳ ಚರಿತ್ರೆಗಳೂ, ಹೆಸರುಗಳೂ, ಗೊತ್ತಾಗದಿರುವುದು ನಮ್ಮ ದುರ್ದೈವವು. ನಮ್ಮ ಕರ್ನಾಟಕದಲ್ಲಿ, ಜಕಣಾಚಾರ್ಯರೆಂಬ ಪ್ರಖ್ಯಾತ ಶಿಲ್ಪಿಗಳು ಆಗಿಹೋದರು. ದಕ್ಷಿಣದಲ್ಲಿಯ ಗುಡಿಗಳನ್ನೆಲ್ಲ ಇವರೇ ಕಟ್ಟಿದವರೆಂದು ಹೇಳುತ್ತಾರೆ. ಇದರಂತೆಯೇ ೧೨ನೆಯ ಶತಮಾನದಲ್ಲಿ "ಬಿಡಿಗೋಜ, ಚಂದ್ರಾದಿತ್ಯ, ನಾಗವರ್ಮ, ಶ್ರೀಧರವೋಜಗಳೆಂಬ ಶಿಲ್ಪಿಗಳು, ಬೇಲೂರು, ಹಳೇಬೀಡ. ನರಸಿಪುರ, ಗದ್ದವನಹಳ್ಳಿ, ಗೋವಿಂದನಹಳ್ಳಿ, ಬೆಳ್ಳೂರು, ಅರಸೀಕೆರೆ, ಮೊದಲಾದ ಎಷ್ಟೋ ಊರುಗಳಲ್ಲಿಯ ಗುಡಿಗಳಲ್ಲಿ ತಮ್ಮ ಶಿಲ್ಪವಿದ್ಯೆಯನ್ನು ತೋರಿಸಿದ್ದಾರೆಂದು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ವಿವರವಾಗಿ ಬರೆದಿದೆ."

ಈ ಶಿಲ್ಪಿಗಳು ಕೊರೆದಿರುವ ಗುಡಿಗಳಲ್ಲಿಯ ಗೊಂಬೆಗಳನ್ನು ನೋಡಿದರೆ, ವಸ್ತ್ರಗಳ ಉಡುಪುಗಳುಳ್ಳ ಮೂರ್ತಿಗಳನೊಂದನ್ನೂ ನಾವು ಕಾಣಲಾರೆವು. ಹಾಗಾದರೆ ಅವುಗಳೆಲ್ಲ ನಗ್ನವಾಗಿಯೇ ಇವೆಯಂತಲ್ಲ. ವಸ್ತ್ರಹೊದೆಯುವ ಸ್ಥಳಗಳನ್ನು ಆಭರಣಗಳ ಅಲಂಕಾರದಿಂದ ಮುಚ್ಚಿಬಿಟ್ಟಿದ್ದಾರೆ. ಆಭರಣಗಳನ್ನೇ ಉಡುಪುಮಾಡಿರುವ ಈ ಮೂರ್ತಿಗಳನ್ನು ನೋಡಿದರೆ, ಆಗಿನಕಾಲದ ಜನರು ಹೀಗೆಯೇ ಇರುತ್ತಿದ್ದರೋ ಏನೋ ಎಂಬ ಶಂಕೆಯುಂಟಾಗುತ್ತದೆ. ಆದರೆ ಅದು ಹೇಗೇ ಇದ್ದರೂ, ಆ ಮೂರ್ತಿಗಳಿಂದ ನಮ್ಮಲ್ಲಿ ಹುಟ್ಟುವ ವಾತ್ಸಲ್ಯವನ್ನೂ, ಪತಿ ಪತ್ನಿಯರಲ್ಲಿರುವ ಪ್ರೇಮಭಾವವನ್ನೂ, ಅಲ್ಲದೆ ನರ್ತಕಿಯರ ನಾಟ್ಯದ, ಗೆಳೆಯರ ಗೆಳೆತನದ, ಯೋಗಿಗಳ ಶಾಂತತೆಯ, ಮುಗ್ಧತೆಯರ ಮುಗ್ಧತನದ ಭಾವಗಳನ್ನು ನೋಡಿದರೆ ಶಿಲ್ಪಿಗಳ ಸಾಮ್ರಾಜ್ಯದಲ್ಲಿ ಒಂದರಗಳಿಗೆಯಾದರೂ ನಕ್ಕು ನಲಿಯದಿರುವೆವೆ?

ಕಟ್ಟಿಗೆಯ ಮತ್ತು ಹಸ್ತಿದಂತಗಳ ಮೇಲೆ ಕೊರೆದಿರುವ ಶಿಲ್ಪಿಗಳ ಶಕ್ತಿಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ. ಇಂಥ ಶಿಲ್ಪಿಗಳ ಸೂಕ್ಷವಾದ ಕಲ್ಪನಾಸೃಷ್ಟಿಯನ್ನು ನೋಡಿ, ಪರಮಾತ್ಮನಿಗಾದರೂ ಆಶ್ಚರ್ಯವಾಗಬಹುದೋ ಏನೋ ಎಂಬ ಶಂಕೆಹುಟ್ಟುತ್ತದೆ. ಅಕ್ಕಿಯ ಕಾಳಿನ ಮೇಲೆ, ಏಳಾನೆಗಳೊಡನೆ ಅಂಬಾರಿಗಳಲ್ಲಿ ಕೂತು ಹೋರಾಟ ರಾಜಪುತ್ರನ ಮೆರವಣಿಗೆಯನ್ನೂ ನೋಡಿದರೆ, ಕಸಕಸಿಯಂಥ ಸೂಕ್ಷ್ಮವಾದ ಪದಾರ್ಥದಲ್ಲಿ, ಈ ಜಗತ್ತಿನ ಆವ ಭಾಗವವನ್ನೊಡಮೂಡಿಸಲಿಕ್ಕಿಲ್ಲ?

ಒಟ್ಟಿನಮೇಲೆ ಶಿಲ್ಪವೆಂದರೆ ಯೋಗ! ಯೋಗಿಯು ಪರಮಾತ್ಮನ ಪಾದಕಮಲಕ್ಕಾಗಿ, ಹೇಗೆ ಜಪಿಸುವನೋ, ಹಾಗೆಯೇ ಶಿಲ್ಪಿಯು ತನ್ನ ಕಲ್ಪನಾ ಸಾಮ್ರಾಜ್ಯದ ರಚನೆಗಾಗಿ ಜಪಿಸಬೇಕಾಗುವುದು.

ಅಯ್ಯೋ! ಪರಮಾತ್ಮನು ಏನೂ ಮೋಸಗಾರನಪ್ಪ! ಇಚ್ಛಾಮಯನಾದ ತಾನು, ಇಚ್ಛಿಸಿದಾಗ ಅನಂತ ಜಗತ್ತುಗಳನ್ನು ಹುಟ್ಟಿಸುವ ತನ್ನ ಕೆಸಲವನ್ನು, ಮಾನವರು ಸೆಳೆದುಕೊಂಡಾರೆಂದು, ಜೀವಕಳೆಯನ್ನು ತುಂಬುವ ಕಲೆಯೊಂದನ್ನು ಮಾತ್ರ ಕಲಿಸಲಿಲ್ಲವೆಂದು ತೋರುತ್ತದೆ. ಇರಲಿ! ಅದಾವ ದೊಡ್ಡಕೆಲಸ? ಇಂದು ನಿರ್ಜೀವವಾದ ಜಗತ್ತನ್ನು ನಿರ್ಮಿಸಲು ಶಕ್ತಿಕೊಟ್ಟ ಪರಮಾತ್ಮನು ಸಜೀವ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಕೊಡದಿರುವನೆ?

ಈ ಶಿಲ್ಪಕಲೆಯು ಆವ ಮಾನವರ ಹೃದಯದಂಗಳದಲ್ಲಿ ಮೊಳೆತಿದೆಯೋ ಅವರು ಅದನ್ನು ಸಸಿಗಿಡಗಳಾಗಿ, ಬೆಳಸಿ, ಹಣ್ಣು ಫಲಂಗಳನ್ನು ಸೇವಿಸಬೇಕು. ಏಕೆಂದರೆ ಈ ಕಲೆಯು ಪರಮಾತ್ಮನ ಕೃಪೆಯಿಂದ ಪಾತ್ರವಾದುದು. ಆದಕಾರಣ ಪರಮಾತ್ಮನನ್ನು ಸ್ಮರಿಸಿ, ಅವನ ಅನಂತ ಲೀಲೆಗಳನ್ನು, ಅವನು ದಯಪಾಲಿಸಿದ ಕಲೆಯಿಂದಲೇ ಜಗತ್ತಿಗೆ ತೋರಿಸಿ, ಧ್ಯಾನಾನಂದದಲ್ಲಿ ಆತನ ಅಡಿದಾವರೆಗಳನ್ನು ಸೇರುವುದು ನಮ್ಮ ಕರ್ತವ್ಯವಲ್ಲವೆ? ಅದಕ್ಕಾಗಿಯೇ ನಮ್ಮ ಈ ವಿದ್ಯಾಲಯದಲ್ಲಿ ಮೊಳೆತಿರುವ ಇಂಥ ಸಸಿಗಳಿಗೆ ನೀರೆರೆಯುವ ಸೊಬಗಿನ ಕೆಲಸವು ಸಾಗಿದೆ.

ಓಂ ಶಾಂತಿಃ ಶಾಂತಿಃ ಶಾಂತಿಃ

❖❖

ಕ್ರಮವೇ ಕೈಲಾಸ!

(ಲೇಖಕ : ಶ್ರೀ ಗುಣಕಿ ಶಿವಲಿಂಗಪ್ಪನವರು ಅಧ್ಯಾಪಕರು)

ಕ್ರಮತಪ್ಪಿ ನಡೆವುದರಿಂ ಕಷ್ಟಮುಂಟೇ?

–ಶ್ರೀ ನಿಜಗುಣಶಿವಯೋಗಿಗಳು

ಈ ಜಗತ್ತಿನೊಳಗಿನ ಪ್ರತಿಯೊಂದು ವಸ್ತುವನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿದರೆ, ಒಂದು ಕ್ರಮವನ್ನನುಸರಿಸಿದಾಗಲೇ ಅಭಿವೃದ್ಧಿಯನ್ನು ಹೊಂದುತ್ತಿರುವುದೂ, ಆ ಕ್ರಮ ತಪ್ಪಿದಾಗಲೇ ಅವನತ ಸ್ಥಿತಿಗೀಡಾಗುವುದೂ ಸ್ಪಷ್ಟವಾಗಿ ಕಂಡುಬರುವುದು. ಆದುದರಿಂದ ಪ್ರತಿಯೊಂದು ಜೀವಿಯು ಉನ್ನತಾವಸ್ಥೆಯನ್ನು ಹೊಂದಲು ಕ್ರಮವು ಒಂದು ಶ್ರೇಷ್ಠತರವಾದ ಸಾಧನವಾಗಿರುವದೆಂದು ವ್ಯಕ್ತವಾಗುತ್ತದೆ. ಪ್ರತಿಯೊಬ್ಬನು ತನ್ನ ಜೀವನದ ಪ್ರತಿಯೊಂದು ಕಾರ್ಯದಲ್ಲಿಯೂ ಯಾವಾಗಲೂ ಒಂದು ವ್ಯವಸ್ಥಿತ ರೀತಿಯಿಂದ ಆಚರಿಸುದವದಕ್ಕೇನೇ ಕ್ರಮವೆಂದೆನ್ನುವರು. ಕ್ರಮವು ಶಿಕ್ಷಣದಲ್ಲಿ ಒಂದಂಗವಾಗಿದೆ. ಮನುಷ್ಯನು ಹುಟ್ಟಿದಂದಿನಿಂದ ಕ್ರಮದ ಪಾಠವು ಪ್ರಾರಂಭಿಸುವುದು, ಚಿಕ್ಕಂದಿನಲ್ಲಿ ಆಹಾರ ವಿಹಾರಾದಿಗಳಲ್ಲಿ ಮಿತಿಯನ್ನಿಟ್ಟು ಅದರಂತೆ ಅವರನ್ನು ಪೋಷಿಸುವುದು ಪಾಲಕರ ಕರ್ತವ್ಯವಾಗಿದೆ. ಎಳೆಯತನದಲ್ಲಿ ಅವರನ್ನು ನಾವು ಯಾವ ತರಹದ ರೂಢಿಯಿಂದ ಬೆಳೆಸುತ್ತವೆಯೋ, ಅವರು ಅಂತಹ ತರದ ರೂಢಿಯುಳ್ಳವರಾಗುವರು. ಏಕೆಂದರೆ " Habit is the second nature' ' ಎಂಬ ಆಂಗ್ಲೋಕ್ತಿಯಂತೆ ಅವರಲ್ಲಿ ಆಚರಣೆಗಳು ಅಳವಟ್ಟು ಹುಟ್ಟುಸ್ವಭಾವಗಳಾಗಿ ಪರಿಣಮಿಸಿ ಸಹಜವಾಗಿ ಅವರು ಕ್ರಮದಿಂದ ವರ್ತಿಸುವರು. ವಿದ್ಯಾರ್ಜನೆಯ ಕಾಲದಲ್ಲಿಯೂ, ಒಂದು ವ್ಯವಸ್ಥಿತ ರೀತಿಯಿಂದ ಶಿಕ್ಷಣ ಕಾರ್ಯವನ್ನು ಸಾಗಿಸಿದರೇನೇ ಶಿಕ್ಷಣಕಾರ್ಯವು ಚೆನ್ನಾಗಿ ಪೂರೈಸುವದಲ್ಲದೆ, ಒಂದು ಕಾರ್ಯವನ್ನು ಹೇಗೆ ನಿರ್ವಹಿಸಬೇಕೆಂಬ ಜ್ಞಾನವೂ ಉಂಟಾಗುವುದು. ಸೈನ್ಯಶಾಖೆಯಲ್ಲಿ ಕ್ರಮಕ್ಕೆ ಕೊಡುತ್ತಿರುವ ಮಹತ್ವವನ್ನು ಮತ್ತು ಅದರಲ್ಲಿಯ ಸಣ್ಣ ನಿಯಮೋಲ್ಲಂಘನೆಗೂ ಹೊಂದತಕ್ಕ ಕಠಿಣತರವಾದ ಶಿಕ್ಷೆಯನ್ನು ನೋಡಿದರೆ ಅತ್ಯಾಶ್ಚರ್ಯವಾಗುವುದು. ಇಲ್ಲಿಯವರೆಗೆ ಆಗಿ ಹೋದ ಲಾರ್ಡ ಕ್ಲೈವ ಮೊದಲಾದ ಸೇನಾನಾಯಕರು ಅಪರಿಮಿತವಾದ ಸೇನಾಬಲವನ್ನು ಕ್ರಮಹೊಂದಿದ ತಮ್ಮ ಸಣ್ಣ ಸೈನ್ಯದಿಂದ ಸೋಲಿಸಿದುದು ಕಂಡು ಬರುವುದು. ಜಗತ್ತಿನೊಳಗೆ ಆಗಿ

ಹೋದ ಮಹಾ ಮಹಾ ವಿಭೂತಿಗಳ ಜೀವನ ಚರಿತ್ರೆಯನ್ನವಲೋಕಿಸಿದರೂ, ಅವರ ಪ್ರತಿಯೊಂದು ಕಾರ್ಯದಲ್ಲಿಯೂ, ಒಂದು ವ್ಯವಸ್ಥೆಯು ಕಂಡುಬರುವುದು. ಕ್ರಮ ಪದ್ಧತಿಗಳಿಂದ ಆಚರಿಸಿದ್ದುದರಿಂದಲೇ ಅವರು ಈ ವರೆಗೂ ಜಗತ್ತಿನಲ್ಲಿ ಪೂಜ್ಯರಾಗಿರುವರು.

ಜಗತ್ತಿನಲ್ಲಿ ಒಂದು ಮಹತ್ಕಾರ್ಯವು ಜರಗಬೇಕಾದರೆ, ಅದು ಕ್ರಮಬದ್ಧವಾಗಿ ಸಾಗುವದು ಅತ್ಯವಶ್ಯಕ. ಈ ವಿಷಯವಾಗಿ ಮಹಾತ್ಮಾ ಗಾಂಧಿಯವರು ಒಂದು ಖಾದೀ ಕಾರ್ಯಾಲಯದಲ್ಲಿಯ ಮುಖ್ಯಸ್ಥನಿಗೂ ಕೆಲಸಗಾರನಿಗೂ ವೇಳೆಗೆ ಸರಿಯಾಗಿ ಬರುವದರಲ್ಲಿ ಕಲಹವುಂಟಾಗಲೂ ಒಂದೂ ಕಾರ್ಯಾಲಯದಲ್ಲಿಯ ಕೆಲಸವು ಸರಿಯಾಗಿ ನಡೆಯಬೇಕಾದರೆ, ಅವರು ಕ್ರಮವನ್ನನುಸರಿಸಿಯೇ ವರ್ತಿಸಬೇಕಾದುದು ಅತ್ಯವಶ್ಯಕವೆಂಬ ವಿಷಯದಲ್ಲಿ ಕಳೆದ ಮೇ ತಿಂಗಳ ೩ನೆಯ ತಾರೀಖಿನ **"ಯಂಗ ಇಂಡಿಯಾ"** ಪತ್ರಿಕೆಯಲ್ಲಿ ಈ ಪ್ರಕಾರವಾಗಿ ಹೇಳಿದ್ದಾರೆ.

ಉಚ್ಚ ನೀಚತ್ವದ ಹುಚ್ಚು ಭಾವನೆಗಳೇ ಯಾವತ್ತು ರಾಷ್ಟ್ರೀಯ ಸಂಸ್ಥೆಗಳ ಅವ್ಯವಸ್ಥೆಗೆ ಕಾರಣೀಭೂತವಾಗಿರುತ್ತವೆ. ಅಧಿಕಾರದಲ್ಲಿಯ ತಾರತಮ್ಯತೆಯನ್ನು ತೆಗೆಯುವದೆಂದರೆ, ಸಂಪೂರ್ಣ ಅರಾಜಕತೆಗೆ ಆಸ್ಪದ ಕೊಟ್ಟಂತೆಯೇ ಸರಿಯೆಂದು ಅನೇಕರು ತಿಳಿಯುತ್ತಾರೆ. ತಾರತಮ್ಯಗಳನ್ನು ಹೋಗಲಾಡಿಸಬೇಕಾದರೆ ನಾವು ಸಂಪೂರ್ಣ ಕ್ರಮಪದ್ಧತಿಗಳನ್ನನುಸರಿಸಬೇಕು. ಎಂದರೆ ನಮಗೆ ಸಂಬಂಧಿಸಿರುವ ಸಂಸ್ಥೆಗಳ ಕಟ್ಟಳೆಗಳಿಗೆ ವಿಧೇಯರಾಗಿ ವರ್ತಿಸಬೇಕು. ಹೀಗೆ ಆಚರಿಸುವದೇ ನಮ್ಮ ಜೀವಿತವು.

ಮನುಷ್ಯನು ಸ್ವಾಭಾವಿಕವಾಗಿಯೇ ಒಂದು ಸಂಸ್ಥೆಯಂತಿದ್ದಾನೆ. ಆತನಿಗೆ ಯಾವುದು ಸಂಬಂಧಿಸಿದ್ದಾಗಿದೆಯೋ ಅದು ಆತನ ಸಂಸ್ಥೆಗೂ ಸಂಬಂಧಿಸಿದ್ದಾಗಿದೆ. ಆರೋಗ್ಯಕರವಾದ ದೇಹದಲ್ಲಿಯ ಬೇರೆ ಬೇರೆ ಅವಯವಗಳು ಒಂದಕ್ಕಿಂತ ಒಂದು ಕಡಿಮೆ ಯೋಗ್ಯತೆಯುಳ್ಳವುಗಳಾಗಿರದಿದ್ದರೂ, ಅವೆಲ್ಲವೂ ಮನಸ್ಸಿನ ಅಧೀನತೆಗೆ ಒಳಪಟ್ಟು ಹೇಗೆ ಆಚರಿಸುತ್ತವೆಯೋ, ಹಾಗೆಯೇ ಒಂದು ಸಂಸ್ಥೆಯಲ್ಲಿರುವ ಸದಸ್ಯರು ಒಬ್ಬರಕ್ಕಿಂತೊಬ್ಬರು ಕಡಿಮೆ ಯೋಗ್ಯತೆಯುಳ್ಳವರಾಗಿದ್ದರೂ, ಅವರೆಲ್ಲರೂ ಮುಖ್ಯ ಚಾಲಕನ ಆಜ್ಞೆಗೆ ವಿಧೇಯರಾಗಿ ವರ್ತಿಸಲೇಬೇಕು. ಮಾರ್ಗದರ್ಶಕನಿಲ್ಲದಿರುವ ಮತ್ತು ಆತನೊಡನೆ ಸಹಕಾರ ಮಾಡದಿರುವ ಸದಸ್ಯರಿಂದ ಕೂಡಿದ ಸಂಸ್ಥೆಯು ನಿಶ್ಚಯವಾಗಿಯೂ ಹೀನಾವಸ್ಥೆಗೀಡಾಗಿ ನಾಶವನ್ನು ಹೊಂದುತ್ತದೆ.

ಒಂದು ಕಾರ್ಯಾಲದಲ್ಲಿಯ ಕೆಲಸಗಾರರು ಕೆಲಸಕ್ಕೆ ಬರುವದರಲ್ಲಿ ಒಂದು ಸರಿಯಾದ ವೇಳೆಯನ್ನು ಗೊತ್ತುಮಾಡಿಕೊಂಡು ಅದರಂತೆ ಆಚರಿಸದಿದ್ದರೆ, ಆ ಕಾರ್ಯಾಲಯದ ಕಾರ್ಯವು ತೃಪ್ತಿಕರವಾಗುವಂತೆ ಅವರು ಕೆಲಸವನ್ನು ಮಾಡಲಾರದು. ಇಂಥ ಕಾರ್ಯಾಲಯದ ಸ್ವಯಂ ಸ್ಫೂರ್ತಿದಾಯಕವಾದ ಕ್ರಮಬದ್ಧಾದ ನಿರ್ಭಂದವು ಸರಕಾರದ ನಿಯಮಿತವಾದ ನಿರ್ಬಂಧನೆಗಳಿಗಿಂತಲೂ ಹೆಚ್ಚು ಬಿಗಿಯಾಗಿದೆಯೆಂದು ತಿಳಿಯಬೇಕು. ಇಂಥ ಕಾರ್ಯಾಲಯದ ಮುಖ್ಯಸ್ಥನಿಂದ ಯಾವಾಗಲೂ ವೇಳೆಗೆ ಸರಿಯಾಗಿ ಬರುವದಾಗದಿದ್ದರೆ, ಆತನೂ ಹೊರಗೆ ಅದೇ ಕಾರ್ಯದಲ್ಲಿಯೇ ತೊಡಿಗಿರುವದೇ ಹೆಚ್ಚು ಸಂಭವನಿಯವಾದುದಾಗಿದೆ. ಏಕೆಂದರೆ, ಆ ಸಂಸ್ಥೆಯಲ್ಲಿ ಕ್ರಮಬದ್ಧವಾದ ವೇಳೆಯನ್ನು ಗೊತ್ತುಪಡಿಸಿರುವದರಿಂದ, ಆತನಿಗೆ ವಿಶ್ರಾಂತಿ

ದೊರೆಯುವುದಿಲ್ಲ. ಆತನು ಪ್ರಾಮಾಣಿಕನೂ, ತನ್ನ ಕೆಲಸದ ಹೊಣೆಗಾರಿಕೆಯನ್ನರಿತವನೂ ಆಗಿದ್ದರೆ ಆ ಕಾರ್ಯವನ್ನು ಸುಸ್ಥಿತಿಗೆ ಮುಟ್ಟಿಸಲು ಆತನು ಅಹೋರಾತ್ರಿ ಕೆಲಸ ಮಾಡಬೇಕಾಗುವದು. ಹೊಸದಾಗಿಯೇ ಪ್ರಾರಂಭಿಸಿದ ಕಾರ್ಯವನ್ನು ಜಗತ್ತಿನಲ್ಲಿ ಅತಿ ಮಹತ್ವದ್ದನ್ನಾಗಿ ಮಾಡಬೇಕಾದರೆ, ಬುದ್ಧಿಶಾಲಿಗಳೂ, ಪ್ರಾಮಾಣಿಕರೂ, ಉದ್ಯೋಗಿಗಳೂ ಆದವರು ಒಬ್ಬರೇ ಸಾಲದು. ಇಂಥವರು ಸಾವಿರಾರು ಜನರು ಬೇಕಾಗುತ್ತಾರೆ.

ಕ್ರಮವನ್ನನುಸರಿಸಿ ನಡೆಯುವದು ಇಷ್ಟು ಮಹತ್ವದ್ದಾಗಿರುವದರಿಂದಲೇ ನಮ್ಮ ವಿದ್ಯಾಲಯದ ಕಾರ್ಯಗಳು ಕ್ಲುಪ್ತಕಾಲದಲ್ಲಿ ಕ್ರಮವಾಗಿ ನಡೆಯಲು ವಿಶೇಷ ಪ್ರಯತ್ನ ನಡೆದಿದೆ.

❖❖

ವೀರಶೈವ ವಿದ್ಯಾಲಯದ ವಾರ್ಷಿಕ ವರದಿಯು

ಈ ವಿದ್ಯಾಲಯವು ಸ್ಥಾಪನೆಯಾಗಿ ಇಂದಿಗೆ ಒಂದು ವರುಷವಾಯಿತು. ಪರಮಾತ್ಮನ ಕೃಪೆಯಿಂದ ಈ ಮೊದಲನೆಯ ವರುಷದಲ್ಲಿ ಸಕಲ ಸಂಗತಿಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಿದೆಯೆಂದು ತಿಳಿಹಿಸಲು ಅತ್ಯಂತ ಸಂತೋಷವಾಗುತ್ತದೆ.

ವಿದ್ಯಾಲಯವು ಸ್ಥಾಪಿತವಾದಾಗ ೧೦ ವಿದ್ಯಾರ್ಥಿಗಳಿದ್ದರು. ಈಗ ೩೦ ವಿದ್ಯಾರ್ಥಿಗಳಿದ್ದಾರೆ. ಇವರಲ್ಲದೆ ಈ ವರೆಗೆ ಬಂದು ಹೋದ ವಿದ್ಯಾರ್ಥಿಗಳ ಸಂಖ್ಯೆಯು ೧೮. ಈ ಬಿಟ್ಟು ಹೋದ ವಿದ್ಯಾರ್ಥಿಗಳಲ್ಲಿ ೩ ವಿದ್ಯಾರ್ಥಿಗಳನ್ನು ಮಾತ್ರ ಕಡೆಗೂ ಅವರ ನಡತೆಯು ಸುಧಾರಿಸದಿದ್ದುದರಿಂದ ತೆಗೆದು ಹಾಕಿತು. ಉಳಿದ ೧೫ ವಿದ್ಯಾರ್ಥಿಗಳು ಈ ಏಕಾಂತ ಸ್ಥಳದಲ್ಲಿ ಮಿತಾಹಾರ. ಶುದ್ಧ ನಡೆನುಡಿಗಳಿಂದ ವರ್ತಿಸಲಿಕ್ಕಾಗದೆ ಪಾಲಕರ ಇಚ್ಚೆಗೆ ವಿರೋಧವಾಗಿಯೇ ಹೋದವರಾಗಿದ್ದಾರೆ. ಇವರಲ್ಲಿ ೧೫ ವಿದ್ಯಾರ್ಥಿಗಳು ೧೫-೧೬ ವರ್ಷಗಳಿಗೆ ಮೇಲ್ಪಟ್ಟವರಾಗಿಯೇ ಇದ್ದರು.

ಈಗಿರತಕ್ಕ ವಿದ್ಯಾರ್ಥಿಗಳಲ್ಲಿ ೮ ವರುಷದಿಂದ ೧೨ ವರ್ಷದೊಳಗಿನವರು ೮ ವಿದ್ಯಾರ್ಥಿಗಳಿದ್ದಾರೆ. ಉಳಿದವರೆಲ್ಲರೂ ೧೨ ವರ್ಷದಿಂದ ೨೦ ವರ್ಷದೊಳಗಿನವರಿದ್ದಾರೆ.

ಈ ವಿದ್ಯಾಲಯದಲ್ಲಿ ಇಂಗ್ಲೀಷ್ ಅಭ್ಯಾಸದ ಮೇಲಿಂದಲೇ ತರಗತಿಗಳನ್ನು ಗೊತ್ತು ಮಾಡಿದ್ದಾಗಿದೆ. ಈಗ ೪ ತರಗತಿಗಳಿವೆ. ಈ ನಾಲ್ಕು ತರಗತಿಗಳಲ್ಲಿ ಒಟ್ಟು ೧೧ ವಿದ್ಯಾರ್ಥಿಗಳಿದ್ದಾರೆ. ಉಳಿದ ವಿದ್ಯಾರ್ಥಿಗಳು ಇಂಗ್ಲೀಷ್ ಅಭ್ಯಾಸವನ್ನು ಈಗೀಗ ಪ್ರಾರಂಭಿಸಿದವರಾಗಿದ್ದಾರೆ. ಒಬ್ಬರು ಕೇವಲ ಧರ್ಮಶಿಕ್ಷಣವನ್ನು ಹೊಂದುವವರಿದ್ದಾರೆ.

ಈ ವಿದ್ಯಾಲಯಕ್ಕೆ ಶಿಕ್ಷಣ ಹೊಂದಲು ಬಂದಿರುವ ವಿದ್ಯಾರ್ಥಿಗಳಲ್ಲಿ ೩ ವಿದ್ಯಾರ್ಥಿಗಳು ನೈಜಾಮ ಪ್ರಾಂತದವರೂ ಒಬ್ಬ ವಿದ್ಯಾರ್ಥಿಯು ಬೆಳಗಾಂ ಜಿಲ್ಲೆಯವನೂ ಒಬ್ಬನು ಮೈಸೂರ ಸೀಮೆಯವನೂ ಒಬ್ಬನು ಧಾರವಾಡ ಜಿಲ್ಲೆಯವನೂ ಉಳಿದ ೨೩, ವಿದ್ಯಾರ್ಥಿಗಳು ವಿಜಾಪುರ ಜಿಲ್ಲೆಯವರೂ ಆಗಿದ್ದಾರೆ.

ಈ ವಿದ್ಯಾಲಯದ ವಿದ್ಯಾರ್ಥಿಗಳು ಇಲ್ಲಿ ವರ್ತಿಸಬೇಕಾದ ನುಡಿಗಳನ್ನು ಕುರಿತು ಈ ವರೆಗಿನ ಅನುಭವದ ಮೇಲಿಂದ ಒಟ್ಟು ೪೪ ನಿಯಮಗಳನ್ನು ಮಾಡಿದ್ದಾಗಿದೆ.

ಶಿಕ್ಷಣದ ಪದ್ಧತಿ

(೧) ವಿದ್ಯಾಲಯದ ಯಾವ ವಿದ್ಯಾರ್ಥಿಯು ಎಂಥ ಅಪರಾಧ ಮಾಡಿದರೂ ಅಧ್ಯಾಪಕರೂ ಅವನಿಗೆ ಬೈಯದೆ ಮತ್ತು ಹೊಡೆಯದೆ ಬುದ್ಧಿವಾದವನ್ನೇ ಪುನಃ ಪುನಃ ಹೇಳಬೇಕು. ಅದರಿಂದಲೂ ಅವನು ಆ ತಪ್ಪನ್ನು ಬಿಡದಿದ್ದರೆ ವಿದ್ಯಾಲಯದ ಸಹಾಯಾಧಿಪತಿಗಳು ಆ ತಪ್ಪಿಗನುಗುಣವಾಗಿ ಉಪವಾಸ ವ್ರತವನ್ನು ಕೈಕೊಳ್ಳುವರು.

(೨) ಇದೇ ಮೇರೆಗೆ ಒಬ್ಬ ವಿದ್ಯಾರ್ಥಿಯು ಇನ್ನೊಬ್ಬ ವಿದ್ಯಾರ್ಥಿಯ ಗಡಿಯಾರದ ಸಾಮಾನವನ್ನು ಮುರಿದಾಗ ಯಾರು ಮುರಿದಿರುವರೆಂಬುದು ಗೊತ್ತಾಗದಿರಲು ಮುರಿದವರು ನಿಜಸ್ಥಿತಿಯನ್ನು ತಿಳಿಸುವವರೆಗೂ ಉಪವಾಸ ವ್ರತದಿಂದಿರುವೆವೆಂದು ಸಹಾಯಾಧಿಪತಿಗಳು ತಿಳಿಸಲು ನಾಲ್ಕು ತಾಸುಗಳಲ್ಲಿಯೇ ಅದನ್ನು ಮುರಿದ ವಿದ್ಯಾರ್ಥಿಯು ಅತಿ ದುಃಖದಿಂದ ಆದ ಸಂಗತಿಯನ್ನು ಇದ್ದಕ್ಕಿದ್ದ ಹಾಗೆ ಸಹಾಯಾಧಿಪತಿಗಳಿಗೆ ತಿಳಿಸಿದನು. ಇದರಿಂದ ನಿಜವಾದದ್ದನ್ನೇ ಹೇಳಬೇಕೆಂಬ ಪ್ರವೃತ್ತಿಯು ಕೆಲವು ವಿದ್ಯಾರ್ಥಿಗಳಲ್ಲಿ ಹೆಚ್ಚಿತು.

(೩) ಒಬ್ಬ ತುಂಟ ವಿದ್ಯಾರ್ಥಿಯು ಇನ್ನೊಬ್ಬ ವಿದ್ಯಾರ್ಥಿಗೆ ಹೊಡೆಯಲಿಕ್ಕೆ ಹೋದದ್ದರಿಂದ ಅದರ ಬಗ್ಗೆ ಸಹಾಯಾಧಿಪತಿಗಳು ಒಂದು ದಿವಸ ಉಪವಾಸ ಮಾಡಿದರು. ಇದರಿಂದ ಹೊಡೆದಾಡುವ ಮತ್ತು ಬೈದಾಡುವ ಪ್ರವೃತ್ತಿಯು ಬಹು ವಿದ್ಯಾರ್ಥಿಗಳಲ್ಲಿ ಹೋಗಿಬಿಟ್ಟಿತು.

(೪) ವಿದ್ಯಾಲಯವನ್ನು ನೋಡಲಿಕ್ಕೆ ಬಂದ ಒಬ್ಬ ಸಭ್ಯಗೃಹಸ್ಥರ ಪೌಂಟನ್ ಪೆನ್ನನ್ನು ವಿದ್ಯಾಲಯದ ಒಬ್ಬ ವಿದ್ಯಾರ್ಥಿಯು ಕದ್ದಿದ್ದನು. ಎಷ್ಟು ಹುಡುಕಿದರೂ ಅದು ದೊರೆಯದಿರಲು ಕಡೆಗೆ ಅದರ ಶೋಧದ ದೆಶೆಯಿಂದ ಸಹಾಯಾಧಿಪತಿಗಳು ಚೆನ್ನಾಗಿ ಆಲೋಚಿಸಿ ತಾವು ಮರುದಿವಸ ೬ ತಾಸು ಮೌನವ್ರತವನ್ನಾಚರಿಸಿದ ಬಳಿಕ ಉಪವಾಸವನ್ನು ಕೈಕೊಳ್ಳುವೆವೆಂದು ತಿಳಿಸಲು ಅದನ್ನು ಕದ್ದ ವಿದ್ಯಾರ್ಥಿಯು ಮುಂದೆ ೨॥ ತಾಸುಗಳಲ್ಲಿ ಅಧ್ಯಾಪಕರನ್ನು ಕರೆದುಕೊಂಡು ಹೋಗಿ ಡಬ್ಬಗಳ್ಳಿಯಲ್ಲಿ ಮುಚ್ಚಿಟ್ಟಿದ್ದ ಪೌಂಟನ್‌ಪೆನ್ನನ್ನು ತೆಗೆದುಕೊಂಡು ಬಂದು ಕೊಟ್ಟನು. ಇದರಿಂದ ಕಳ್ಳತನ ಪ್ರವೃತ್ತಿಯು ಕೆಲವು ವಿದ್ಯಾರ್ಥಿಗಳಲ್ಲಿಲ್ಲದಂತಾಯಿತು.

ಬೈದಾಡುವ ಹೊಡೆದಾಡುವ ಕದಿಯುವ ಈ ದುಷ್ಟಪದ್ಧತಿಗಳು ತುಂಟ ಹುಡುಗರಲ್ಲೇನೂ ಹೋಗದೆ ಅವರು ವಿದ್ಯಾಲಯವನ್ನೇ ಬಿಟ್ಟು ಹೋದರೂ ಉಪವಾಸ ಮಾಡಿದ್ದರ ಪ್ರಯತ್ನವೇನೂ ವ್ಯರ್ಥವಾಗದೆ ಉಳಿದ ವಿದ್ಯಾರ್ಥಿಗಳಮೇಲೆ ಬಹು ಪರಿಣಾಮಕಾರಿಯಾಯಿತು.

ಈಗ ವಿದ್ಯಾಲಯದ ೨೯ ವಿದ್ಯಾರ್ಥಿಗಳಲ್ಲಿ ೧೭ ವಿದ್ಯಾರ್ಥಿಗಳು ಮಾತ್ರ ಇಂಥ ದುರ್ಗುಣ ದುರಾಚಾರಗಳಿಗೊಳಗಾದವರಿದ್ದಾರೆಂದು ಧಾರಾಳವಾಗಿ ಹೇಳಬಹುದು. ಉಳಿದ ವಿದ್ಯಾರ್ಥಿಗಳು ಹೊಸದಾಗಿ ಬಂದವರಾದುದರಿಂದ ಅವರು ಕೂಡಾ ಇದೇ ಪದ್ಧತಿಯಿಂದ ವರ್ಷಾರು ತಿಂಗಳುಗಳಲ್ಲಿ ಸುಧಾರಿಸಬಹುದೆಂದು ತೋರುತ್ತದೆ. ಆದಕಾರಣ ವಿದ್ಯಾರ್ಥಿಗಳ ನೈತಿಕ ಸುಧಾರಣೆಗೆ ಇದೇ ಉತ್ತಮೋಪಾಯವು. ಮತ್ತು ಇದರಿಂದ ವ್ರತಸ್ಥರ ಆತ್ಮ ಬಲವೂ ಹೆಚ್ಚಿ ವಿದ್ಯಾರ್ಥಿಗಳು ಜಾಗ್ರತೆಯಾಗಿ ನೀತಿವಂತರಾಗುತ್ತಾರೆ. ಈಗ ಈ ೧೭ ವಿದ್ಯಾರ್ಥಿಗಳಲ್ಲಿ ಯಾವಾತನಾದರೂ ಯಾವುದೇ ಅಪರಾಧ ಮಾಡಿದರೂ ಅದನ್ನು ಸಹಾಯಾಧಿಪತಿಗಳೆದುರಿಗೆ ಒಪ್ಪಿಕೊಂಡು ತಾನೂ ಸ್ವತಃ ಉಪವಾಸ ಮಾಡುತ್ತೇನೆಂದು ಹೇಳುವ ರೂಢಿಯೂ ವಿದ್ಯಾರ್ಥಿಗಳಲ್ಲುಂಟಾಗಿದೆ.

ಧಾರ್ಮಿಕ ಮತ್ತು ನೈತಿಕ ಶಿಕ್ಷಣ

(೧) ವೀರಶೈವ ಧರ್ಮ ಸಂಬಂಧದ ಶಿವಶರಣರ ೭೦ ವಚನಗಳ್ನು ಅರ್ಥ ಸಹಿತವಾಗಿ ಕಲಿಸಿದ್ದಲ್ಲದೆ ಸತ್ಯ, ಅಹಿಂಸೆ, ಬ್ರಹ್ಮಚರ್ಯ ಮೊದಲಾದ ನೈತಿಕ ವಿಷಯಗಳನ್ನು ಕುರಿತು ಶಿವಶರಣರ ೩೮ ವಚನಗಳನ್ನೂ ಅರ್ಥಸಹಿತವಾಗಿ ಕಲಿಸಿದ್ದಾಗಿದೆ. ಇದಲ್ಲದೆ ೧೦ ಜನ ವಿದ್ಯಾರ್ಥಿಗಳು ತಮ್ಮ ಇಷ್ಟಾನುಸಾರ ತಾವೇ ಒಟ್ಟು ೧೮೦ ವಚನಗಳನ್ನು ಬಾಯಿಪಾಠ ಕಲಿತಿದ್ದಾರೆ. ಭಜನೆಯ ಕಾಲಕ್ಕೆ ವಿದ್ಯಾರ್ಥಿಗಳು ೧೦ ಶ್ಲೋಕಗಳನ್ನೂ ಮತ್ತು ೨೧ ಸ್ತೋತ್ರ ಪದಗಳನ್ನೂ ಹೇಳುತ್ತಿರುವುದು. ಮತ್ತು ಕೆಳಗೆ ಕಾಣಿಸಿದ ಶಿವಶರಣರ ಸಂವಾದಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿದ್ದಾಗಿದೆ.

(೧) ನುಲಿಯಚಂದಯ್ಯನವರಿಗೆ ಲಿಂಗದ ಮಹತ್ವವನ್ನು ತಿಳಿಸಿದ್ದು.

(೨) ಸಿದ್ಧರಾಮೇಶ್ವರರಿಗೆ ಲಿಂಗಧಾರಣ.

(೩) ಡಾಂಭಿಕ ಪೂಜೆಯ ನಿಷೇಧ.

(೪) ವೀರಶೈವರಲ್ಲಿ ತಾರತಮ್ಯಗಳ ನಿಷೇಧ.

ಪ್ರತಿ ದಿವಸ ಸಾಯಂಕಾಲದ ಭೋಜನವಾದನಂತರ ವಿದ್ಯಾರ್ಥಿಗಳಿಂದ ೧ ತಾಸಿನವರೆಗೆ ವಚನಗಳನ್ನು ಹೇಳಿಸುವ ಪರಿಪಾಠವಿಟ್ಟಿದ್ದರಿಂದ ಅದು ಒಳ್ಳೇ ಫಲಕಾರಿಯಾಗಿ ಪರಿಣಮಿಸಿದೆ. ಇದರಿಂದ ಚಿಕ್ಕ ವಿದ್ಯಾರ್ಥಿಗಳಿಗೆ ಸಹಜವಾಗಿಯೇ ಎಷ್ಟೋ ವಚನಗಳನ್ನು ಬಾಯಿಪಾಠ ಕಲಿಯಲನುವಾಗಿದೆ. ಆ ವೇಳೆಯಲ್ಲಿ ಆ ದಿವಸ ತಾವು ಓದಿದ ವರ್ತಮಾನಪತ್ರದೊಳಗಿನ ಮುಖ್ಯ ಮುಖ್ಯ ಸಂಗತಿಗಳನ್ನು ಕೆಲವು ವಿದ್ಯಾರ್ಥಿಗಳು ಹೇಳುವದರಿಂದ ಎಲ್ಲರಿಗೂ ದೇಶದ ಎಷ್ಟೋ ಸಮಾಚಾರಗಳು ಸುಲಭವಾಗಿ ತಿಳಿಯಲು ಅನುಕೂಲವಾಗಿದೆ. ಇದಲ್ಲದೆ ಅದೇ ಕಾಲದಲ್ಲಿ ವಿದ್ಯಾರ್ಥಿಗಳೆಲ್ಲರೂ ಬಿಂಗರಿಗಳಿಂದ ನೂಲು ತೆಗೆದು ಅದನ್ನು ತಮ್ಮ ಶಿವದಾರಕ್ಕೂ ಕೈ ಚೀಲಗಳಿಗೂ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಅನ್ಯಮತಗಳ ಜ್ಞಾನವು ವಿದ್ಯಾರ್ಥಿಗಳಿಗೆ ತಕ್ಕಮಟ್ಟಿಗಾದರೂ ಆಗಬೇಕೆಂದು ಪಕ್ಷದೊಳಗೆ ಮೂರು ಅಧ್ಯಾಯ ದಿವಸಗಳಲ್ಲಿ ಶ್ರೀ ಭಗವದ್ಗೀತೆಯ ಪ್ರವಚನವನ್ನು ಸಹಾಯಾಧಿಪತಿಗಳು ತಾ ೧೦-೯-೨೭ರಿಂದ ಪ್ರಾರಂಭಿಸಿ ಕಳೆದ ೭ ತಿಂಗಳುಗಳ ವರೆಗೂ ಸಾಗಿಸಿ ಪೂರೈಸಿದ್ದಾಯಿತು. ಗೀತಾದಲ್ಲಿ ವೀರಶೈವ ಮತವು ಹೇಗೆ ಪ್ರತಿಪಾದಿತವಾಗಿರುವುದೆಂಬುದನ್ನು ಕೆಲವೆಡೆಯಲ್ಲಿ ಉದಾಹರಣೆ ಸಹಿತವಾಗಿ ತಿಳಿಸಿದ್ದರೊಳಗಿನ ಕೆಲವನ್ನು ಇದರಡಿಯಲ್ಲಿ ಪ್ರಸ್ತಾಪಿಸಿದೆ.

ಪ್ರಸಾದದ ಬಗ್ಗೆ

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೆ ಸರ್ವ ಕಿಲ್ಮಿಷೈಃ
ಭುಜತೆ ತೆ ತ್ವಘಂ ಪಾಪಾಯೆ ಪಚಂತ್ಯಾತ್ಮಕಾರಣಾತ್ – (ಗೀತಾ ೩-೧೩)

ಲಿಂಗಕ್ಕೆ ತೋರದೆ ಅಂಗಕ್ಕೆ ಕೊಂಡರೆ
ತಿಂಗಳಲಿ ಸತ್ತ ಹಳೆನಾಯಿ ಮಾಂಸವನು
ನುಂಗಿದಂತಕ್ಕಂ ಸರ್ವಜ್ಞ

ಪರಮಾತ್ಮನು ಸಗುಣನೂ ನಿರ್ಗುಣನೂ ಇದ್ದು ಸಗುಣೋಪಾಸನೆಯನ್ನು ಬಿಟ್ಟು ಕೇವಲ ನಿರ್ಗುಣೋಪಾಸನೆ ಮಾಡಿದರೆ ದುಃಖಕ್ಕೊಳಗಾಗುವರೆಂಬುದನ್ನು ಗೀತೆಯಲ್ಲಿ ಹೇಳಿದಂತೆ ಇಷ್ಟಲಿಂಗಾನುಸಂಧಾನವಿಲ್ಲದೆ ಪ್ರಾಣಲಿಂಗಾನುಸಂಧಾನ ನೆಲೆಯು ಗೊತ್ತಾಗುವುದಿಲ್ಲ.

ಕ್ಲೇಶೋಧಿಕತರಸ್ತೇ ಷಾಮವ್ಯಕ್ತಾಸಕ್ತ ಚೇತಸಾಮ
ಅವ್ಯಕ್ತಾಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೆ–(೧೨–೫)

.... ಸ್ಥೂಲತನುವಿಗೆ ಇಷ್ಟಲಿಂಗೇ ಇಲ್ಲದಿರುವಾಗ ಸೂಕ್ಷ್ಮತನುವಿಗೆ ಪ್ರಾಣಲಿಂಗನೈದುವ ಪರಿಯಂತಯ್ಯಾ? ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು.

ಆಕಾಶಡಲ್ಲಾಡುವ ಪಟಕ್ಕಾದರೂ ಮೂಲ ಸೂತ್ರವಿರಬೇಕು. ಕಲಿಯಾದರೂ ಕೈದುವಿಲ್ಲದೆ ಆಗದು. ಅಂಗದಲ್ಲಿ ಲಿಂಗವಿಲ್ಲದಿರ್ಪ, ಲಿಂಗದಲ್ಲಿ ಬೆರೆದಿಹೆನೆಂಬ ಸಿದ್ಧರಾಮಯ್ಯನು ಹೇಳುವುದನ್ನು ನಂಬಲಿಕ್ಕಾಗುವುದೇ ಪ್ರಭುವೇ? – **ಚನ್ನಬಸವಣ್ಣ**

ವ್ಯಾಖ್ಯಾನಗಳು

ಪ್ರತಿ ಹುಣ್ಣಿವೆ ಹಾಗೂ ಅಮವಾಸ್ಯೆಯ ದಿವಸ ವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ವಾಕ್ ಕಲೆಯನ್ನು ಹಚ್ಚಿಸಿಕೊಳ್ಳಬೇಕೆಂದು ವ್ಯಾಖ್ಯಾನಮಾಡುತ್ತಿರುವರು. ಎಷ್ಟೋ ಜನ ಪರಸ್ಥಳದ ಮಹನೀಯರು ಆಗಮಿಸಿ ವಿದ್ಯಾರ್ಥಿಗಳಿಗೆ ಬೋಧಾಮೃತಪಾನ ಮಾಡಿಸಿರುವರು. ಶ್ರೀಮನ್ನಿರಂಜನ ಬಂಥನಾಳ ಮಹಾಸ್ವಾಮಿಗಳವರು ಈ ವಿದ್ಯಾಲಯಕ್ಕೆ ಒಂದು ಸಾರೆ ಆಗಮಿಸಿದಾಗ್ಗೆ ವಿದ್ಯಾರ್ಥಿಗಳು ವೀರ್ಯ ರಕ್ಷಣೆಯ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂಬುದನ್ನು, ಇನ್ನೊಂದು ಸಾರೆ ದಯಮಾಡಿಸಿದಾಗ ಪ್ರೇಮದ ಮಹತ್ವವನ್ನು ಬೋಧಿಸಿ ವಿದ್ಯಾರ್ಥಿಗಳು ಪರಸ್ಪರ ಪ್ರೇಮದಿಂದಿರಬೇಕಾದ ಅವಶ್ಯಕತೆಯನ್ನು ನಿವೇದಿಸಿದರು. ಮತ್ತು ಮನುಷ್ಯನು ಕಾಯಾ ವಾಚಾ ಮನಸ್ಸುಗಳ ತಪಸ್ಸಿನಿಂದ ಶುದ್ಧನಾಗಬೇಕೆಂಬುದನ್ನು ಶ್ರೀ ಭಗವದ್ಗೀತೆಯ ಉದಾಹರಣೆಗಳಿಂದ ಮೂರು ದಿವಸ ಪ್ರವಚನ ಮೂಲಕ ಅಪ್ಪಣೆ ಕೊಡಿಸಿದರು. ಮಮದಾಪುರ ವಿರಕ್ತಮಠದ ಶ್ರೀ ಮಹಾದೇವ ಪಂಡಿತರು ಮಾತೃದೇವೋಭವ ಪಿತೃದೇವೋಭವ ಆಚಾರ್ಯದೇವೋಭವ ಎಂಬ ಸನಾನತ ಧರ್ಮವಾಕ್ಯಗಳ ಅರ್ಥಗಳನ್ನು ಚೆನ್ನಾಗಿ ಸ್ಪಷ್ಟೀಕರಿಸಿ ಪ್ರಾಚೀನ ಗುರುಕುಲಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಬ್ರಹ್ಮಚಾರಿಗಳು ಬ್ರಹ್ಮಚರ್ಯ, ಅಹಿಂಸೆ, ಧೈರ್ಯ, ಸಾಹಸಾದಿ ಗುಣಗಳಲ್ಲಿ ಎಷ್ಟು ಬಲಶಾಲಿಗಳಾಗಿದ್ದರೆಂಬುದನ್ನು, ಈಗಿನ ಶಿಕ್ಷಣ ಸಂಸ್ಥೆಗಳಲ್ಲಿ ಇವುಗಳ ವಿಪರೀತ ಸ್ಥಿತಿಯೇ ತೋರುತ್ತಿರುವುದರಿಂದ ಇಂಥ ವಿದ್ಯಾಲಯಗಳು ಅತ್ಯಾವಶ್ಯಕವಾಗಿರುವವೆಂಬುದನ್ನು ವಿವೇಚಿಸಿದರು. ತಾಳಿಕೋಟೆಯ ವೇ॥ ವಿರೂಪಾಕ್ಷಪ್ಪ ಶಾಸ್ತ್ರಿಗಳವರು ಸತ್ಸಂಗ ಮತ್ತು ವಿದ್ಯೆ ಈ ವಿಷಯಗಳ ಮೇಲೇ ವ್ಯಾಖ್ಯಾನಮಾಡಿದರು. ಶ್ರೀಯುತ ಸಾಬೋಜಿ ಗಂಗಾಧರಪ್ಪನವರು ಅಷ್ಟಾವರಣಗಳ ವಿಷಯವಾಗಿ ಬೋಧಿಸಿದರು. ಈ ಎಲ್ಲ ಮಹಾಶಯರಿಗೆ ನಾವು ಅತ್ಯಂತ ಋಣಿಯಾಗಿದ್ದೇವೆ.

ವಿದ್ಯಾಲಯವು ಸ್ಥಾಪಿತವಾದ ಬಳಿಕ ಎರಡನೆಯ ಟರ್ಮಿನ ಆದಿಯಲ್ಲಿ ಕೂಡಿದ ಸಭೆಗೆ ಬಾಗಲಕೋಟೆಯ ಡಾ ಬಸವಪ್ಪನವರು ಅಧ್ಯಕ್ಷರಾಗಿ ಸಭಾಕಾರ್ಯವನ್ನು ಯಥಾರೀತಿಯಾಗಿ ಸಾಂಗಗೊಳಿಸಿದ್ದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಪರೀಕ್ಷೆಗಳು

ಇಲ್ಲಿ ಪ್ರತಿ ಪಕ್ಷಕ್ಕೊಂದಾವರ್ತಿ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಪರೀಕ್ಷಿಸುವ ನಿಯಮವಿದೆ. ವಿದ್ಯಾಲಯದ ಷಾಣ್ಮಾಸಿಕ ಪರೀಕ್ಷೆಗೆ ಶ್ರೀಯುತ ವೀರಭದ್ರಪ್ಪನವರು ಮಂಡಿ ಬಿ.ಎ.,ಎಲ್.ಎಲ್.ಬಿ. ವಕೀಲ ಮುದ್ದೇಬಿಹಾಳ ಇವರು ಆಗಮಿಸಿ ವಿದ್ಯಾರ್ಥಿಗಳ ಪರೀಕ್ಷೆ ತೆಗೆದುಕೊಂಡದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಪರೀಕ್ಷೆಗೆ ಕುಳಿತ ೬ ವಿದ್ಯಾರ್ಥಿಗಳಲ್ಲಿ ಇಂಗ್ಲೀಷ್ ವಿಷಯದಲ್ಲಿ ೫ ಜನರೂ ಧಾರ್ಮಿಕ ನೈತಿಕ ವಿಷಯಗಳಲ್ಲಿ ತೃಪ್ತಿಕರವಾಗಿ ಎಲ್ಲರೂ ತೇರ್ಗಡೆ ಹೊಂದಿದ್ದಾರೆ. ಶ್ರೀ ತಾಳಿಕೋಟೆ ಮರಿದೇವರು 'ಸ್ವಾವಲಂಬನ' ಈ ವಿಷಯದ ಮೇಲೆ ಅತ್ಯುತ್ತಮವಾಗಿ ಬರೆದುದರಿಂದಲೂ ಲಿಂಗಣ್ಣಾ ಪಾಟೀಲ ಈ ವಿದ್ಯಾರ್ಥಿಯು ಕನ್ನಡ ಮತ್ತು ಗಣಿತ ಈ ವಿಷಯಗಳಲ್ಲಿ ೧ನೆಯ ತರಗತಿಯಲ್ಲಿ ಬಂದದ್ದರಿಂದಲೂ ಆಸನಗಳನ್ನು ಶ್ರೀ ಆಲಮಟ್ಟಿ ಪಟ್ಟದದೇವರು ಚೆನ್ನಾಗಿ ಹಾಕಿ ತೋರಿಸಿದ್ದರಿಂದಲೂ ಇವರಿಗೆ ಪಾರಿತೋಷಕಗಳು ಕೊಡಲ್ಪಟ್ಟವು. ಪರೀಕ್ಷಕರು ವಿದ್ಯಾಲಯದ ಬಗ್ಗೆ ಕೆಳಗೆ ಕಾಣಿಸಿದ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ.

It is hoped that this Vidyalaya will prove a sure nursery for young Veershaivas to learn self-help, self-reliance and self -control, which is the crying need of rising India. ಭರತಭೂಮಿಯ ಭಾಗ್ಯೋದಯಕ್ಕೆ ಯಾವ ಸ್ವಪೋಷಣೆ ಸ್ವಾವಲಂಬನೆ ಮತ್ತು ಆತ್ಮ ಸಂಯಮನಗಳೂ ಅವಶ್ಯವಾಗಿರಬೇಕೆಂದು ಘಂಟಾಘೋಷವಾಗಿ ಹೇಳುತ್ತಿರುವುರೋ ಅಂಥವುಗಳನ್ನು ವೀರಶೈವ ಬಾಲಕರು ಕಲಿಯಲಿಕ್ಕೆ ಈ ವಿದ್ಯಾಲಯವು ನಿಸ್ಸಂದೇಹವಾಗಿ ತೌರಮನೆಯಾಗಿರುವುದೆಂದು ನಾವು ಆಶಿಸುತ್ತೇವೆ.

ಹಬ್ಬಗಳು

ನಮ್ಮ ದೇಶದಲ್ಲಿ ಪುರಾತನ ಕಾಲದಿಂದ ಪ್ರಚಲಿತವಾಗಿರುವ ನಾಗಪಂಚಮಿ, ಗಣೇಶಚತುರ್ಥಿ, ವಿಜಯಾದಶಮಿ, ಕಾಮದಹನ, ಶಿವರಾತ್ರಿ, ಮೊದಲಾದ ಮುಖ್ಯ ಹಬ್ಬಗಳ ರಹಸ್ಯವನ್ನು ನೈಸರ್ಗಿಕ, ಪೌರಾಣಿಕ, ಐತಿಹಾಸಿಕ, ಮತ್ತು ಶಾಸ್ತ್ರೀಯ ರೀತಿಯಿಂದ ಆಯಾಯ ದಿವಸಗಳಲ್ಲಿ ವಿದ್ಯಾರ್ಥಿಗಳಿಗೆ ಸಹಾಯಾಧಿಪತಿಗಳು ಪ್ರವಚನಮೂಲಕ ವಿವೇಚಿಸಿದ್ದರ ಮುಖ್ಯಾಂಶವನ್ನು ಇದರಡಿಯಲ್ಲಿ ತೋರಿಸಿದೆ.

(೧) ನಾಗಪಂಚಮಿ : ಹಾವೆಂದರೆ ಸುಷುಮ್ನಾ ನಾಡಿಯು (ಕುಂಡಲಿನಿ). ಇದಕ್ಕೆ ಸರ್ಪವೆಂತಲೂ ಅನ್ನುವರು. ಇದಕ್ಕೆ ಹಾಲೆರೆದು ಪೂಜಿಸುವದೆಂದರೆ ವೀರ್ಯವನ್ನು ಭ್ರಷ್ಟಗೊಳಿಸದೆ ಅದನ್ನು ಊರ್ಧ್ವಮುಖಮಾಡಿ ಅಮೃತವನ್ನು ಸೇವಿಸಬೇಕೆಂದರ್ಥ.

(೨) ಗಣೇಶ ಚತುರ್ಥಿ : ಆನೆ ಮತ್ತು ಮನುಷ್ಯ ಈ ಎರಡು ಪ್ರಾಣಿಗಳಿಂದ ಕೂಡಿದ ಗಣಪತಿಯ ಪೂಜೆಯು ದೇವರ ಬಗ್ಗೆ ಮನುಷ್ಯನಿಂಗುಂಟಾದ ಕಲ್ಪನೆಗಳಲ್ಲೊಂದುತ್ಕ್ರಾಂತಿಯ ಚಿಹ್ನವೆಂದು ಸಮಾಜಶಾಸ್ತ್ರಜ್ಞರು ಪ್ರತಿಪಾದಿಸುತ್ತಿದ್ದಾರೆ. ಇದು ಹೇಗೆ ಇರಲಿ, ಗಣಪತಿಯು ಓಂಕಾರದ ಚಿಹ್ನವು. ಯಾರು ಶ್ರಾವಣಮಾಸದಲ್ಲಿಯ ನಾಗಪೂಜೆಯ ರಹಸ್ಯವನ್ನು ತಿಳಿದುಕೊಂಡಿರುತ್ತಾರೆಯೋ ಅವರೇ ಭಾದ್ರಪದದಲ್ಲಿಯ ಓಂಕಾರ ಮೂರ್ತಿಯನ್ನು ಪೂಜಿಸಲು ಸಮರ್ಥರಾಗುತ್ತಾರೆ. ವಿನಾಯಕನ

ಪೂಜೆಯೆಂದರೆ ಅಹಿಂಸಾ ಪೂಜೆಯು. ಆದುದರಿಂದಲೇ ಆತನ ಬಳಿಯಲ್ಲಿ ಸರ್ಪ ಮತ್ತು ಇಲಿಗಳು ಒಂದೇ ಕಡೆಗೆ ಕೂಡಿವೆ.

(೩) ವಿಜಯದಶಮಿ : ಈ ದಿವಸ ಸಾಕ್ಷಾತ್ ಶಿವನು ಶಕ್ತಿರೂಪದಿಂದ ಅಹಿರಾವಣ ಮಹಿರಾವಣರನ್ನು ಸಂಹರಿಸಿದನೆಂತಲೂ ಶ್ರೀ ರಾಮಚಂದ್ರನು ರಾವಣನನ್ನು ಕೊಂದು ಸೀತೆಯನ್ನು ಕರೆದುಕೊಂಡು ಬಂದನೆಂತಲೂ ಪಾಂಡವರು ಶಮೀವೃಕ್ಷದಲ್ಲಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಕೌರವರನ್ನು ಜಯಿಸಿದರೆಂತಲೂ ಪುರಾಣಗಳಲ್ಲಿ ಹೇಳಿದೆ. ಯಾರು ಗಜಾನನ ಪೂಜೆಯ ರಹಸ್ಯವನ್ನು ತಿಳಿದುಕೊಂಡು ಆಚರಿಸುವರೋ ಅವರೇ ಜಯಶಾಲಿಗಳಾಗುತ್ತಾರೆಂದು ಈ ವಿಜಯಾದಶಮಿಯು ಸೂಚಿಸುತ್ತದೆ. ಮನುಷ್ಯನಲ್ಲಿರತಕ್ಕ ಕ್ರಿಯಾಶಕ್ತಿ, ಬುದ್ಧಿಶಕ್ತಿ, ಭಾವನಾಶಕ್ತಿಗಳಲ್ಲಿ ಕಡೆಯದಾದ ಭಾವನಾಶಕ್ತಿಯೇ ಜಯ ಹೊಂದುತ್ತದೆಂಬರ್ಥ.

(೪) ಮಹಾಶಿವರಾತ್ರಿ : ಮಾಘಮಾಸದ ಶಿವರಾತ್ರಿಯು ಮಹಾಶಿವರಾತ್ರಿಯೆಂದೆನಿಸುವುದು. ಇದನ್ನು ಭರತಭೂಮಿಯು ಅಖಿಲ ಶೈವರೂ ಆಚರಿಸುವರು. ಆ ದಿವಸ ಶಿವಪೂಜೆ, ಉಪವಾಸ, ಜಾಗರಣೆಗಳನ್ನು ಮಾಡುವರು. ಚತುರ್ದಶಿಯ ದಿವಸ ಉಪವಾಸ ಮಾಡುವದೆಂದರೆ ಪಂಚಜ್ಞಾನೇಂದ್ರೀಯ, ಪಂಚಕರ್ಮೇಂದ್ರಿಯ ಮತ್ತು ಅಂತಃಕರಣಚತುಷ್ಟಯ ಹೀಗೆ ಒಟ್ಟು ಚತುರ್ದಶಿಗಳನ್ನು ನಿಗ್ರಹಿಸುವದುರಿಂದ ಅಜ್ಞಾನ ವೃತ್ತಿಯಡಗಿ ಜ್ಞಾನ ಜ್ಯೋತಿಯು ಪ್ರಜ್ವಲಿಸುವದು. ಉಪವಾಸವೆಂದರೆ ನಾಲಿಗೆಯ ರುಚಿಗಾಗಿ ಸೇವಿಸದಿರುವದು. ಜಾಗರಣೆಯೆಂದರೆ ಸುವಿವೇಕದಿಂದ ವರ್ತಿಸುವುದು. ಆದ್ದರಿಂದಲೇ ಶ್ರೀ ಬಸವಣ್ಣನವರು **"ನಿಚ್ಚಲುಂ ಶಿವರಾತ್ರೆಯಂ ಅಚ್ಚಳಿಯದೆ ಮಾಳ್ಪೆನೆಂಬ ಭಾಷೆ"** ಎಂದು ಹೇಳಿರುವರು.

(೫) ಕಾಮದಹನ : ತಾರಕಾಸುರನ ವಧೆಗೆ ಪರಮಾತ್ಮನಿಂದ ಜನಿಸುವ ಕಾರ್ತಿಕೆಯನೇ ಶಕ್ತನೆಂದು ತಿಳಿದು ಆತನಲ್ಲಿ ಕಾಮವಿಕಾರವನ್ನು ಹುಟ್ಟಿಸಲಿಕ್ಕೆ ದೇವತೆಗಳು ಮನ್ಮಥನನ್ನು ಕಳುಹಲು ಇವತ್ತಿನ ದಿವಸ ಆ ಮನ್ಮಥನು ಹರನ ಅಗ್ನಿನೇತ್ರಕ್ಕೆ ಆಹುತಿಯಾದನೆಂಬುದು ಪೌರಾಣಿಕ ಕಥಾಭಿಪ್ರಾಯವು. ಮಹಾಶಿವರಾತ್ರಿಯ ರಹಸ್ಯವನ್ನು ತಿಳಿದು ಆಚರಿಸಿದವರೇ ಅಸುರೀ ಸಂಪತ್ತು ಹೊಡೆದು ಹಾಕಿ ದೈವೀಸಂಪತ್ತನ್ನು ವಶಮಾಡಿಕೊಳ್ಳುವರು. ತಮ್ಮ ಮನದ ಕಾಮವಾಸನೆಯನ್ನಳಿಯುವದೇ ಕಾಮದಹನವು. ಆದುದರಿಂದಲೇ "ಮನದ ಮನೋರಥಂ ಲಯಮನೈದಲು ಕಾಮಜಯಂ" ಎಂದು ಮಗ್ಗಿಮಾಯಿದೇವರು ಹೇಳಿರುವರು.

ಡಾಯರಿ ಪದ್ಧತಿ

ವಿದ್ಯಾರ್ಥಿಗಳ ಅಭ್ಯಾಸ ಮತ್ತು ನಡೆ ನುಡಿಗಳನ್ನು ಕುರಿತು ಅಧ್ಯಾಪಕರು ತಮಗೆ ತೋಚಿದ ಸೂಚನೆಗಳನ್ನು ಪ್ರತಿದಿವಸ ಡಾಯರಿಯಲ್ಲಿ ಬರೆದಿಟ್ಟು ಸಹಾಯಾಧಿಪತಿಗಳಿಗೆ ತೋರಿಸುವ ಪದ್ಧತಿಯಿಟ್ಟಿದ್ದರಿಂದ ಅಧ್ಯಾಪಕರು ವಿದ್ಯಾರ್ಥಿಗಳ ಆಚಾರ ವಿಚಾರಗಳಲ್ಲಿ ಕೈ ಹಾಕದೆ ಈ ಕಾರ್ಯವನ್ನೆಲ್ಲ ಸಹಾಯಾಧಿಪತಿಗಳಿಗೇನೇ ವಹಿಸಿಕೊಟ್ಟದ್ದರಿಂದ ಅದು ಫಲಕಾರಿಯೆಂದೇ ತೋರಿದೆ.

ಕೆಲವು ಪ್ರೌಢ ವಿದ್ಯಾರ್ಥಿಗಳು ತಮ್ಮ ಸ್ವಂತ ಆಚಾರ ವಿಚಾರಗಳಲ್ಲಿ ಏನಾದರೂ ವ್ಯತ್ಯಾಸಗಳು ಕಂಡರೆ ಮತ್ತು ತಾವು ಮಾಡಿದ್ದರೆ ಅವುಗಳ ನಿಜಾಂಶವನ್ನೇ ತಮ್ಮ ಡಾಯರಿಗಳಲ್ಲಿ ಪ್ರತಿನಿತ್ಯ

ಬರೆದು ಸಂಸ್ಥೆಯ ಸಹಾಯಾಧಿಪತಿಗಳಿಗೆ ತೋರಿಸಿ ಅವುಗಳ ಬಗ್ಗೆ ಅವರ ಸಲಹೆಗಳನ್ನು ಕೇಳುವ ರೂಢಿಯುಂಟಾಗಿದೆ. ಅದರಿಂದ ವಿದ್ಯಾರ್ಥಿಗಳನ್ನು ಯಾವ ರೀತಿಯಿಂದ ತಿದ್ದಬೇಕೆಂಬುದು ತಿಳಿಯಲು ಅನುವಾಗುತ್ತದೆ.

ದೇಹಾರೋಗ್ಯ

ಒಂದು ವರ್ಷದಲ್ಲಿ ೪ ವಿದ್ಯಾರ್ಥಿಗಳಿಗೆ ಜ್ವರ ಬಂದು ೨-೩ ದಿನ ಉಪಚಾರ ಹೊಂದಿದರು. ೨ ವಿದ್ಯಾರ್ಥಿಗಳನ್ನು ಹಲ್ಲುಶೂಲೆಯ ದೆಶೆಯಿಂದ ಬಾಗಲಕೋಟ ವಿಜಾಪುರಗಳಿಗೆ ಕಳುಹಿಸಬೇಕಾಯಿತು. ಒಬ್ಬ ವಿದ್ಯಾರ್ಥಿಯು ನಾರಿನ ಹುಣ್ಣಿನಿಂದ ವ್ಯಥೆಪಟ್ಟನು. ೧೫ ವರ್ಷ ವಯಸ್ಸಿನವನೊಬ್ಬ ವಿದ್ಯಾರ್ಥಿಯು ಭಯಂಕರವಾರ ಗರ್ಮಿರೋಗದವನಿದ್ದುದು ತಿಳಿದ ಕೂಡಲೆ ಡಾಕ್ಟರರು ಅವನು ಸದ್ಯದಲ್ಲಿ ಈ ವಿದ್ಯಾಲಯದ ವಿದ್ಯಾರ್ಥಿಗಳ ಮಧ್ಯದಲ್ಲಿರುವುದು ಕ್ಷೇಮಕರವಲ್ಲವೆಂದು ತಿಳಿಸಿದ್ದರಿಂದ ಆತನನ್ನು ಸ್ವಸ್ಥಳಕ್ಕೆ ಕಳುಹಿಸಿತು. ಬೇಸಿಗೆಯ ಕಾಲದ ಬಿಸಿಲ ತಾಪದಿಂದ ಒಂದು ವಾರದಲ್ಲಿಯೇ ೮-೧೦ ಜನರು ಜ್ವರ ಗ್ರಸ್ತರಾದರು. ರೋಗ ಪೀಡಿತರಾದವರ ಈ ಅಲ್ಪ ಸಂಖ್ಯೆ ಮೇಲಿಂದ ವಿದ್ಯಾರ್ಥಿಗಳ ದೇಹಾರೋಗ್ಯವು ಚೆನ್ನಾಗಿದೆಯೆಂದು ಸ್ಪಷ್ಟವಾಗುತ್ತದೆ. ಮೈಯಲ್ಲಿ ಸ್ವಲ್ಪ ಅಸ್ವಸ್ಥವೆಂದೂ ತೋರಿದ ಕೂಡಲೆ ಒಂದು ಅಥವಾ ಎರಡು ಹೊತ್ತು ಉಪವಾಸ ಮಾಡುವ ಇಲ್ಲಿಯ ಪದ್ಧತಿಯು ವಿದ್ಯಾರ್ಥಿಗಳ ದೇಹಾರೋಗ್ಯಕ್ಕೆ ಅನುಕೂಲವೆಂದು ತೋರಿದೆ, ಇದರಿಂದ ವಿದ್ಯಾರ್ಥಿಗಳ ಆರೋಗ್ಯಕ್ಕೋಸ್ಕರ ಸಹಾಯ ಮಾಡುತ್ತಿರುವ ಬಾಗಲಕೋಟೆ ಡಾ. ಬಸವಪ್ಪನವರಿಗೆ ಎಷ್ಟೋ ಶ್ರಮ ಕಡಿಮೆಯಾಗಿದೆ. ವಿದ್ಯಾಲಯದ ಸಹಾಯಾಧಿಪತಿಗಳು ಜ್ವರದಲ್ಲಿ ೭ ದಿನ ಲಂಘನ ಮಾಡಿದುದನ್ನು ನೋಡಿ ಅನೇಕ ವಿದ್ಯಾರ್ಥಿಗಳಿಗೆ ರೋಗಕ್ಕೆ ಲಂಘನವೇ ಉತ್ತಮೋಪಾಯವೆಂಬುದು ಗೊತ್ತಾಗಿದೆ.

ಮಹತ್ವದ ಸೂಟಿಗಳು

ವೀರಶೈವ ಸಮಾಜದ ವಿದ್ಯಾಭಿವೃದ್ಧಿಗಾಗಿ ತಮ್ಮ ಸರ್ವಸ್ವವನ್ನೇ ಧಾರೆಯೆರೆದಂಥ ಕೈ ವಾ. ಶ್ರೀ ಸಿರಸಂಗಿ ಲಿಂಗರಾಜರ ಪುಣ್ಯತಿಥಿ. ತಾ ೧೦-೧-೨೮ನೆಯ ದಿವಸವಿದ್ದುದರಿಂದ ಆ ದಿನವು ವಿದ್ಯಾಲಯದ ಸೂಟಿಯ ದಿನಗಳಲ್ಲಿ ಎಣಿಸಲ್ಪಟ್ಟಿದೆ. ಸಹಾಯಾಧಿಪತಿಗಳು ವಿದ್ಯಾರ್ಥಿಗಳಿಗೆ ಆ ಮಹನೀಯರ ಮಹತ್ವವನ್ನು ತಿಳುಹಿಸಿದ ಬಳಿಕ ಅವರ ಚರಿತ್ರೆಯನ್ನು ಅವತ್ತಿನ ದಿವಸವೇ ಬರೆಯಲುಪಕ್ರಮಿಸಿರುವುದಾಗಿ ತಿಳಿಸಿದರು. ಶ್ರೀ ಲಿಂಗರಾಜರ ಸಂಬಂಧವಾಗಿ ಯಾರಿಗಾದರೂ ಹಲಕೆಲವು ಸಂಗತಿಗಳು ಗೊತ್ತಿದ್ದರೆ ಅವುಗಳನ್ನು ತಿಳುಹಿಸಿದಲ್ಲಿ ಅವು ಅಭಿನಂದನ ಪೂರ್ವಕವಾಗಿ ಸ್ವೀಕರಿಸಲ್ಪಡುವುವು.

ದುಷ್ಟನಿಗ್ರಹ ಶಿಷ್ಟ ಪರಿಪಾಲಕನಾರ್ಥವಾಗಿ ಭರತಭೂಮಿಯಲ್ಲವತರಿಸಿ ಜಗತ್ ಪ್ರಖ್ಯಾತ ರಾಷ್ಟ್ರವೀರನಾದ ಶ್ರೀ ರಾಮಚಂದ್ರನ ಜನ್ಮ ದಿವಸವಾದ ರಾಮನವಮಿಯು ವಿದ್ಯಾಲಯದ ಸೂಟಿಯ ದಿನಗಳಲ್ಲಿ ಗಣಿಸಲ್ಪಟ್ಟಿದೆ. ಆ ದಿವಸ ಸಹಾಯಾಧಿಪತಿಗಳು ವಿದ್ಯಾರ್ಥಿಗಳಿಗೆ ಶ್ರೀ ರಾಮಚಂದ್ರನ ಮಹಿಮೆಯನ್ನು ಬೋಧಿಸಿದರು.

ವೀರಶೈವ ಸಮಾಜೋದ್ಧಾರಕನೂ ರಾಷ್ಟ್ರೀಯ ಮಹಾಪುರುಷನೂ ಆದ ಶ್ರೀ ಬಸವೇಶ್ವರನ ಜಯಂತಿ ದಿವಸವು ಸೂಟಿಯ ದಿವಸವಾಗಿ ಗ್ರಹಿಸಲ್ಪಟ್ಟಿದೆ. ಶ್ರೀ ಬಸವೇಶ್ವರನಲ್ಲಿರತಕ್ಕ ಸತ್ಯ, ನಿಷ್ಠೆ. ಗುಣೈಕ, ಪಕ್ಷಪಾತಿತ್ವ, ನಿರ್ದಾಕ್ಷಿಣ್ಯ, ನೈತಿಕ, ಧೈರ್ಯ ಮೊದಲಾದ ಸದ್ಗುಣಗಳನ್ನು ವಿದ್ಯಾರ್ಥಿಗಳು ಕಲಿಯಬೇಕೆಂದು ಸಹಾಯಾಧಿಪತಿಗಳು ಉಪದೇಶಿಸಿದರು.

ಇಬ್ಬರು ಶಿಕ್ಷಕರು

ಶ್ರೀಯುತ ಕರಿಬಸವಯ್ಯನವರು ಪುರಾಣಿಕ ಇವರು ಇಂಟರ್‌ಸಾಯಿನ್ಸ ಪರೀಕ್ಷೆಯ ಅಭ್ಯಾಸ ಮಾಡುವುದಕ್ಕೆಂದು ಇಲ್ಲಿ ಬಂದು ೪॥ ತಿಂಗಳುಗಳವರೆಗೆ ನಮ್ಮ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರತಿಫಲಾಪೇಕ್ಷೆಯಿಲ್ಲದೇ ಇಂಗ್ಲೀಷ್ ವಿಷಯವನ್ನು ಹೇಳಿಕೊಟ್ಟದ್ದಕ್ಕಾಗಿಯೂ ಅದೇ ಪ್ರಕಾರ ಶ್ರೀಯುತ ಬಸವನಗೌಡರು ಪಾಟೀಲ ಇವರು ೨ನೆಯ ಎಲ್. ಎಲ್. ಬಿ. ಪರೀಕ್ಷೆಯ ಅಭ್ಯಾಸವನ್ನು ಮಾಡುದಕ್ಕೋಸ್ಕರ ಬಹು ಪ್ರಶಸ್ತವಾದ ಈ ಸ್ಥಾನಕ್ಕೆ ಬಂದು ೧॥ ತಿಂಗಳುಗಳಿದ್ದು ವಿದ್ಯಾರ್ಥಿಗಳಿಗೆ ನಿರಪೇಕ್ಷ ಬುದ್ಧಿಯಿಂದ ಇಂಗ್ಲೀಷ ಕಲಿಸಿದ್ದಕ್ಕಾಗಿಯೂ ಈ ಉಭಯರನ್ನು ನಾವು ತುಂಬಾ ಅಭಿನಂದಿಸುತ್ತೇವೆ.

ಕಲ್ಯಾಣದ ಪ್ರವಾಸ

ವಿದ್ಯಾಲಯದ ನಿಯಮದಂತೆ ಈ ಮೊದಲನೆಯ ವರ್ಷ ಪ್ರವಾಸವನ್ನು ಕಲ್ಯಾಣಕ್ಕೆ ಬೆಳೆಯಿಸಿದ್ದಾಯಿತು. ೮ ವರುಷ ಮೊದಲುಗೊಂಡು ೨೦ ವರ್ಷಗಳೊಳಗಿನ ಒಟ್ಟು ೩೧ ವಿದ್ಯಾರ್ಥಿಗಳು ತಾ ೧೯-೧-೨೮ನೆಯ ದಿವಸ ಇಲ್ಲಿಂದ ಹೊರಟು ವಿಜಾಪುರಕ್ಕೆ ಹೋದರು. ಅಲ್ಲಿ ಶ್ರೀಯುತ ಜತ್ತಿ ಸಿದ್ಧಲಿಂಗಪ್ಪಣ್ಣನವರು ಎರಡು ದಿವಸ ವಿದ್ಯಾರ್ಥಿಗಳನ್ನು ತಮ್ಮಲ್ಲಿರಿಸಿಕೊಂಡು ಊಟೋಪಚಾರಗಳಿಂದ ಸತ್ಕರಿಸಿದ್ದಲ್ಲದೆ ವಿದ್ಯಾಲಯದ ಪದ್ಧತಿಯಂತೆ ಸಭೆಯನ್ನು ಕೂಡಿಸಲು ಕೂಡಾ ವ್ಯವಸ್ಥೆಯನ್ನು ಮಾಡಿದ್ದರು. ಸಭೆಗೆ ಅಲ್ಲಿಯ ರಾ. ಸಾ. ಹಳಕಟ್ಟಿಯವರೂ ಶ್ರೀಯುತ ಎಸ್. ಟಿ. ಪಾಟೀಲ, ಎ. ಸಿ. ಅಂಗಡಿ, ಚನ್ನಮಲ್ಲಪ್ಪಣ್ಣ ಕುರ್ಲೆ ಮೊದಲಾದ ಪ್ರಮುಖರು ಆಗಮಿಸಿ ವಿದ್ಯಾರ್ಥಿಗಳ ಸಂಭಾಷಣೆಯನ್ನು ಕೇಳಿ ಸಂತೋಷಿಸಿದ್ದಲ್ಲದೆ ತಕ್ಕ ಸೂಚನೆಗಳನ್ನು ಮಾಡಿದರು. ವಿದ್ಯಾರ್ಥಿಗಳು ಅಲ್ಲಿಯ ಗೋಳಗುಮ್ಮಟ ಮೊದಲಾದ ಐತಿಹಾಸಿಕ ಪ್ರಸಿದ್ಧ ಕಟ್ಟಡಗಳನ್ನು ನೋಡಿ ಅನೇಕ ಸಂಗತಿಗಳನ್ನು ತಿಳಿದುಕೊಂಡರು.

ವಿಜಾಪುರದಿಂದ ಸೊಲ್ಲಾಪುರಕ್ಕೆ ಹೋಗಲು ಅಲ್ಲಿಯ ಶ್ರೀಯುತ ಕನ್ನಾಳೆ ರೇವಣಸಿದ್ಧಪ್ಪನವರು ತಮ್ಮ ಮನೆಯಲ್ಲಿ ವಿದ್ಯಾರ್ಥಿಗಳನ್ನು ಎರಡು ದಿವಸ ಇಟ್ಟುಕೊಂಡು ಬಟ್ಟೆಯ ಗಿರಣಿ ಮೊದಲಾದ ಕಾರ್ಯಾಲಯಗಳನ್ನೂ ಶ್ರೀ ಸಿದ್ಧರಾಮೇಶ್ವರ ದೇವಾಲಯ ಮೊದಲಾದ ಪವಿತ್ರ ಸ್ಥಾನಗಳನ್ನೂ ತೋರಿಸಿದರು. ಸೋಲ್ಲಾಪುರದ ವೀರಶೈವ ತುರಣಸಂಘದವರು ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಸಭೆಗೂಡಿ ವಿದ್ಯಾಲಯದ ವಿದ್ಯಾರ್ಥಿಗಳ ವಚನ ಸಂಭಾಷಣೆಗಳು ನಡೆಯಲು ಅನುಕೂಲ ಪಡಸಿದರು. ಸಭೆಗೆ ಬ್ಯಾರಿಸ್ಟರ್ ಸರದಾರ, ಡಾಕ್ಟರ್ ದೇಶಮುಖ ಮೊದಲಾದ ಅಲ್ಲಿಯ ವೀರಶೈವ ಪ್ರಮುಖರು ಆಗಮಿಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು.

ಸೊಲ್ಲಾಪುರದಿಂದ ವಿದ್ಯಾರ್ಥಿಗಳು ಕಲಬುರ್ಗಿಗೆ ಹೋದರು. ಅಲ್ಲಿ ಪೂಜ್ಯರಾದ ಶ್ರೀ ಶರಣಬಸಪ್ಪನವರ ಸಂಸ್ಥಾನಾಧಿಪತಿಗಳು ವಿದ್ಯಾರ್ಥಿಗಳನ್ನು ತಮ್ಮಲ್ಲಿರಿಸಿಕೊಂಡು ಯೋಗ್ಯ ಅನುಕೂಲಗಳನ್ನು ಮಾಡಿಕೊಟ್ಟರು. ಕಲಬುರ್ಗಿಯಲ್ಲಿಯ ಜೈಲ್ ಮತ್ತು ಬಂದೇನವಾಜ ದರ್ಗಾ ಮೊದಲಾದ ಸ್ಥಳಗಳನ್ನು ವಿದ್ಯಾರ್ಥಿಗಳು ನೋಡಿದರು. ಶ್ರೀ ಶರಣಬಸವ ದೇವಾಲಯದಲ್ಲಿ ಕೂಡಿದ ಸಭೆಗೆ ಅಲ್ಲಿಯ ಶ್ರೀಯುತ ವಕೀಲ ಪರ್ವತರೆಡ್ಡಿಯವರು, ಶ್ರೀಯುತ ವಕೀಲ ಹನುಮಂತರಾವ ಮೊದಲಾದ ವೀರಶೈವ ಪ್ರಮುಖರು ಆಗಮಿಸಿದ್ದರು. ವಿದ್ಯಾರ್ಥಿಗಳು ಆ ಸಭೆಯಲ್ಲಿ ತಮ್ಮ ಸಂಗಡ ವಿಕ್ರಯಕ್ಕೆ ತೆಗೆದುಕೊಂಡು ಹೋದ ಪುಸ್ತಕಗಳಲ್ಲಿ ಸಾಧಾರಣ ೪೦ ರೂ. ಪುಸ್ತಕಗಳನ್ನು ಮಾರಿದರು. ಅಲ್ಲಿಯ ನಾಣ್ಯಗಳ ವಿಷಯವಾಗಿ ವಿದ್ಯಾರ್ಥಿಗಳು ಬಹು ಗೊಂದಲದಲ್ಲಿ ಬಿದ್ದು ಕಡೆಗೆ ತಮ್ಮ ನಾಣ್ಯಕ್ಕೆ ಸರಿಯಾಗಿ ಗೊತ್ತು ಮಾಡಿಕೊಂಡರು. ಕಲಬುರ್ಗಿಯಲ್ಲಿರುವ ಉಸ್ಮಾನಿಯಾ ಮೋಟರ್ ಸರ್ವಿಸ್ ಕಂಪನಿಯ ಯಜಮಾನರಾದ ಶ್ರೀಯುತ ಗದಗಿನ ಬಸವಪ್ಪನವರು ೨ ಮೋಟಾರುಗಳನ್ನು ವಿದ್ಯಾರ್ಥಿಗಳು ಕಲ್ಯಾಣಕ್ಕೆ ಹೋಗಿ ಬರಲು ಉಚಿತವಾಗಿ ಕೊಟ್ಟು ಬಹು ಸಹಾಯ ಮಾಡಿದುದರಿಂದ ಕಲ್ಯಾಣದ ಪ್ರವಾಸವು ಕಲ್ಯಾಣಪ್ರದವಾಗಲು ಬಹು ಅನುಕೂಲವಾಯಿತು.

ಕಲ್ಯಾಣದ ದಾರಿಯಲ್ಲಿ ಹುಮನಾಬಾದ ಬಸವತೀರ್ಥ ಮಾಣಿಕಪ್ರಭು ಮೋಳಗಿಮಾರಯ್ಯನವರ ಗವಿ ಮೊದಲಾದ ಮಹತ್ವದ ಸ್ಥಾನಗಳನ್ನು ನೋಡಿ ಕಲ್ಯಾಣದಲ್ಲಿಯ ಶ್ರೀ ಪ್ರಭುದೇವರಮಠದಲ್ಲಿ ಎರಡು ದಿವಸ ವಾಸವಾಗಿದ್ದು ಅಲ್ಲಿಯ ಶ್ರೀ ಅಕ್ಕನಾಗಮ್ಮನವರ ಗವಿ ಮೊದಲಾದ ಐತಿಹಾಸಿಕ ಮಹತ್ವ ಸ್ಥಾನಗಳನ್ನು ನೋಡಿಕೊಂಡು ಬರುವಾಗ ಕಮಲಾಪುರ ಮಹಗಾಂವಗಳಲ್ಲಿದ್ದು ಜಾನೇವರಿ ೩೦ನೆಯ ತಾರೀಖಿನ ಸಾಯಂಕಾಲಕ್ಕೆ ಇಲ್ಲಿಗೆ ಪರಮಾತ್ಮನ ಕೃಪೆಯಿಂದ ಕ್ಷೇಮವಾಗಿ ಬಂದದ್ದಾಯಿತು. ಕಲಬುರ್ಗಿಯಿಂದ ಕಲ್ಯಾಣಕ್ಕೆ ಹೋಗಿ ಪುನಃ ಕಲಬುರ್ಗಿಗೆ ಬರುವವರೆಗೂ ವಿದ್ಯಾರ್ಥಿಗಳ ಎಲ್ಲ ವ್ಯವಸ್ಥೆಗಳನ್ನು ಮಹಾಗಾಂವದ ಶ್ರೀಯುತ ಸಂಗಸೆಟ್ಟರೂ ಕಮಲಾಪುರದ ಶ್ರೀಯುತ ರಾಚಪ್ಪಗೌಡರೂ ಬಹು ಸಾಹಸದಿಂದಲೂ ಪ್ರೇಮದಿಂದಲೂ ಮಾಡಿದುದನ್ನು ವಿದ್ಯಾರ್ಥಿಗಳು ಆಗಾಗ್ಗೆ ಜ್ಞಾಪಿಸುತ್ತಿದ್ದಾರೆ.

ಈ ಪ್ರವಾಸದಲ್ಲಿ ವಿದ್ಯಾಲಯದ ಸಹಾಯಾಧಿಪತಿಗಳೊಂದಿಗೆ ಶ್ರೀಯುತ ಜತ್ತಿ ಸಿದ್ಧಲಿಂಗಪ್ಪನವರೂ ಪಟ್ಟಣಶೆಟ್ಟಿ ರೇವಣಸಿದ್ಧಪ್ಪನವರೂ ಅಥರ್ಗಾದ ದುಂಡಪ್ಪನವರೂ ಇದ್ದುದರಿಂದ ಪ್ರವಾಸವು ಸುಖಕರವಾಗಲು ಬಹು ಸಹಾಯವಾಯಿತು.

ಈ ಕಲ್ಯಾಣಪ್ರವಾಸದಲ್ಲಿ ವಿದ್ಯಾರ್ಥಿಗಳಿಗೆ ಸಹಾಯಮಾಡಿದ ಈ ಎಲ್ಲಾ ಮಹಾಶಯರಿಗೂ ವಿದ್ಯಾಲಯದವರು ಅತ್ಯಂತ ಕೃತಜ್ಞರಾಗಿದ್ದಾರೆ.

ಪ್ರವಾಸ ತೀರಿದ ಬಳಿಕ ಇಂಗ್ಲೀಷ ನಾಲ್ಕು ತರಗತಿಗಳ ವಿದ್ಯಾರ್ಥಿಗಳಿಗೂ ಈ ಪ್ರವಾಸವನ್ನು ಕುರಿತು ನಿಬಂಧ ಬರೆಯಲಿಕ್ಕೆ ಹೇಳಲು ಕೇವಲ ಸ್ಮರಣ ಶಕ್ತಿಯ ಮೇಲಿಂದಲೇ ಬರೆದ ನಿಬಂಧಗಳಲ್ಲಿ ಇಂಗ್ಲೀಷ ಮೊದಲನೆಯ ತರಗತಿಯ ರೂಳಿ ಪ್ರಭವಪ್ಪ ಮತ್ತು ೩ನೆಯ ತರಗತಿಯ ಮಸಳಿ ಶ್ರೀಶೈಲಪ್ಪ ಈ ಉಭಯ ವಿದ್ಯಾರ್ಥಿಗಳು ಬರೆದ ನಿಬಂಧಗಳು ಉತ್ತಮವಾದವುಗಳಿದ್ದುದರಿಂದ ಇವರಿಗೆ ಬಹುಮಾನವು ಕೊಡಲ್ಪಟ್ಟಿತು.

ಧರ್ಮೋಪದೇಶ

ಅಳ್ಳಿಗಿ ಹಿರೇಮಠದ ವೇ. ಗುರುಶಾಂತ ಶಾಸ್ತ್ರಿಗಳು ವಿದ್ಯಾಲಯದ ವತಿಯಿಂದ ಸಿಂದಗಿ ಹುನಗುಂದ ಇಂಡಿ ತಾಲೂಕಗಳೊಳಗಿನ ೫೨ ಗ್ರಾಮಗಳಲ್ಲಿ ಸಂಚರಿಸಿ ಸಾಧಾರಣ ೭೦೦೦ ಜನರಿಗೆ ಧಾರ್ಮಿಕ ಹಾಗೂ ನೈತಿಕ ವಿಷಯಗಳನ್ನು ಅವರಿಂದ ಯಾವ ಪ್ರತಿಫಲಗಳನ್ನು ಹೊಂದದರೆ ಉಪದೇಶ ಮಾಡಿದರು. ಇವರ ಸಂಚಾರ ಕಾಲದಲ್ಲಿ ಶ್ರೀ ಮಲಘಾಣದ ಘನಲಿಂಗ ಚಕ್ರವರ್ತಿಗಳು ಸಿಂದಗಿ ಕಿಣಗಿ ಬಸಲಿಂಗಪ್ಪನವರೂ ಮತ್ತು ಗುಣಾರಿ ಸಾತಪ್ಪನವರೂ ಹುನಗುಂದದ ಬಳೂಟಗಿ ಬಸವಶೆಟ್ಟೆಪ್ಪನವರೂ ಚಡಚಣದ ಎಳಮೇಲಿ ಮಲ್ಲಪ್ಪನವರೂ ಹೊರ್ತಿ ಚನ್ನಮಲ್ಲಯ್ಯನವರೂ ತಾಂಬೆಯ ಅಳಗುಂಡಗಿ ಬಸವಪ್ಪನವರೂ ಮೊದಲಾದ ಮಹಾಶಯರು ಸಹಾಯ ಮಾಡಿದ್ದಕ್ಕಾಗಿ ವಿದ್ಯಾಲಯದವರು ಅವರಿಗೆ ಅತ್ಯಂತ ಕೃತಜ್ಞರಾಗಿದ್ದಾರೆ.

ವಾರ್ಷಿಕ ಪರೀಕ್ಷೆ

ವಾರ್ಷಿಕ ಪರೀಕ್ಷೆಗೆ ಕುಳಿತ ನಾಲ್ಕೂ ತರಗತಿಗಳಲ್ಲಿಯ ಒಟ್ಟು ೧೧ ವಿದ್ಯಾರ್ಥಿಗಳೊಳಗೆ ಇಂಗ್ಲೀಷ್ ವಿಷಯದಲ್ಲಿ ೯ ಜನರು ತೇರ್ಗಡೆಹೊಂದಿ ಇವರಲ್ಲಿ ೬ ಜನರು ೨ನೆಯ ವರ್ಗದಲ್ಲಿ ತೇರ್ಗಡೆ ಹೊಂದಿದ್ದರಿಂದ ಅವರಿಗೆ ಬಹುಮಾನವು ಕೊಡಲ್ಪಟ್ಟಿತು. ಧಾರ್ಮಿಕ ಮತ್ತು ನೈತಿಕ ವಿಷಯಗಳಲ್ಲಿ ಎಲ್ಲರೂ ತೇರ್ಗಡೆ ಹೊಂದಿ ಇವರಲ್ಲಿ ನಾಲ್ಕು ಜನರು ೨ನೆಯ ವರ್ಗದಲ್ಲಿ ತೇರ್ಗಡೆಯಾದ್ದರಿಂದ ಅವರಿಗೆ ಪಾರಿತೋಷಕಗಳನ್ನು ಕೊಟ್ಟದ್ದಾಯಿತು. ಇಂಗ್ಲೀಷ ೩-೪ ತರಗತಿಗಳ ವಿದ್ಯಾರ್ಥಿಗಳು ಇಂಗ್ಲೀಷ್ ವ್ಯಾಖ್ಯಾನವನ್ನು ಉತ್ತಮವಾಗಿ ಮಾಡಿದ್ದರಿಂದ ಅವರಿಗೆ ಮೆ॥ ಶೆಟ್ಟಿ ಸಾಹೇಬರಿಂದ ಇನಾಮುಗಳು ಕೊಡಲ್ಪಟ್ಟವು. ರೂಳಿ ಪ್ರಭುವಪ್ಪನೆಂಬ ಮೊದಲನೆಯ ತರಗತಿಯ ವಿದ್ಯಾರ್ಥಿಯು ಮೋಳಿಗಿ ಮಾರಯ್ಯನವರ ಕಥೆಯನ್ನು ಬಹು ಸರಸವಾಗಿ ಹೇಳಿದ್ದರಿಂದ ಅವನ ವಾಕ್ಚಾತುರ್ಯಕ್ಕೂ ಸಮಯೋಚಿತ ಸಂಭಾಷಣೆಗೂ ಸಂತೋಷಿಸಿ, ಅಧ್ಯಕ್ಷರೂ ಲೋಕಮತದ ಸಂಪಾದಕರೂ ಆತನಿಗೆ ಪುಸ್ತಕಗಳನ್ನು ಬಹುಮಾನವಾಗಿ ಕೊಟ್ಟರು. ಐವರು ಚಿಕ್ಕ ಮಕ್ಕಳು ವಚನಗಳನ್ನು ಬಹು ಸೊಗಸಾಗಿ ಹೇಳಿದುದರಿಂದ ಅವರಿಗೆ ಚಿಕ್ಕಪುಸ್ತಕಗಳನ್ನು ಇನಾಮು ಕೊಟ್ಟರು.

ವಾರ್ಷಿಕೋತ್ಸವ

ತಾರೀಖು ೧-೫-೧೯೨೮ನೆಯ ದಿವಸ ಶ್ರೀಯುತ ಶಿವಮೂರ್ತಿ ಸ್ವಾಮಿ ಹಿರೇಮಠ ಬಿ.ಎ.,ಎಲ್.ಎಲ್.ಬಿ. ವಕೀಲ, ಹಾವೇರಿ ಇವರ ಅಧ್ಯಕ್ಷತೆಯಲ್ಲಿ ವೀರಶೈವ ವಿದ್ಯಾಲಯದ ಮೊದಲನೆಯ ವಾರ್ಷಿಕ ಸಭೆಯು ಕೂಡಿತು. ಸಭೆಗೆ ಬಾಗಲಕೋಟೆ, ವಿಜಾಪುರ, ಮುದ್ದೇಬಿಹಾಳ, ತಾಳಿಕೋಟೆ, ಅಥರಗಾ ಮೊದಲಾದ ಗ್ರಾಮಗಳಿಂದ ನೂರಾರು ಜನರು ಬಂದಿದ್ದರು. ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಈಗಿನ ಸ್ಕೂಲ ಕಾಲೇಜುಗಳು ದೊಡ್ಡ ದೊಡ್ಡ ನಗರಗಳಲ್ಲಿದ್ದುದರಿಂದ ವಿದ್ಯಾರ್ಥಿಗಳ ಮನಸ್ಸು ಅನೇಕ ಆಕರ್ಷಿಕ ವಸ್ತುಗಳ ಕಡೆಗೆಳಿಸಿ, ಅವರ ಶಾರೀರಿಕ ನೈತಿಕ ಹಾಗೂ ಧಾರ್ಮಿಕೋನ್ನತಿಗಳು ಲಯವಾಗುತ್ತವೆ. ಚಿಕ್ಕಂದಿನಲ್ಲಿಯೇ ಇಂಥ ವಿದ್ಯಾಲಯಗಳಲ್ಲಿರಿಸಿದ್ದಾದರೆ ಗುರುಕುಲದ ಬ್ರಹ್ಮಚಾರಿಗಳಂತೆ ಅವರ ಪ್ರಗತಿಯು ಎಲ್ಲ ರೀತಿಗಳಿಂದಲೂ ಆಗುತ್ತದೆನ್ನಲಿಕ್ಕೆ ಸಂದೇಹವಿಲ್ಲ. ಈಗಿನ ತರುಣರು ವಿಶೇಷತಃ ನೌಕರಿಯ ಆಶೆಯಿಂದಲೂ ಸ್ವಾರ್ಥ

ಪರಾಯಣತೆಯಿಂದಲೂ ಪಾಶ್ಚಾತ್ಯ ಶಿಕ್ಷಣ ಹೊಂದುತ್ತಿರುವರು. ಮುಂದೆ ನೌಕರಿಯ ಬಾಗಿಲುಗಳು ಬಂದಾದರೆ ಇವರನ್ನಾರೂ ಕೇಳುವುದಿಲ್ಲ. ಅಂಥ ಶಿಕ್ಷಣ ನಿಜವಾದ ಶಿಕ್ಷಣವಲ್ಲ. ಆದರೆ ಸ್ವಾವಲಂಬನೆ. ಸ್ವಪೋಷಣೆಗಳಿಗನುಕೂಲವಾಗಿ ಒಕ್ಕಲುತನ, ವ್ಯಾಪಾರ, ಕೈಗಾರಿಕೆಯ ಕಲೆಗಳನ್ನೂ, ಹಾಗೂ ಶಾರೀರಿಕ, ಧಾರ್ಮಿಕ, ನೈತಿಕ ಮತ್ತು ಬೌದ್ಧಿಕ ವಿಷಯಗಳನ್ನೂ ವಿದ್ಯಾರ್ಥಿಗಳಲ್ಲಿ ನೆಲೆಗೊಳಿಸುವುದೇ ಯೋಗ್ಯ ಶಿಕ್ಷಣ. ಈಗಿನ ಸ್ಕೂಲ ಕಾಲೇಜುಗಳಲ್ಲಿ ಎಷ್ಟೋ ಶಿಕ್ಷಕರು ಅನೇಕ ಚಟಚಾಳಿಗಳಿಗೊಳಗಾದವರಿರುವುದರಿಂದ ಅವು ಸಹಜವಾಗಿಯೇ ವಿದ್ಯಾರ್ಥಿಗಳಲ್ಲಂಟಿಕೊಳ್ಳುವವು. ಕಾರಣ ಸ್ವಾರ್ಥ ತ್ಯಾಗ ಮಾಡಿದಂಥ ನೈತಿಕ ಬಲವುಳ್ಳಂಥ ಸಜ್ಜನರ ಸಹವಾಸದಲ್ಲಿರುವುದರಿಂದಲೇ ವಿದ್ಯಾರ್ಥಿಗಳಿಗೆ ಆತ್ಮೋನ್ನತಿಯನ್ನು ಕಂಡುಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು.

❖❖

ವೀರಶೈವ ವಿದ್ಯಾಲಯದಲ್ಲಿ ಅಧ್ಯಯನ ಮಾಡತಕ್ಕ ವಿದ್ಯಾರ್ಥಿಗಳ ವಿವರ

ನಂ.	ವಿದ್ಯಾರ್ಥಿಗಳ ಹೆಸರು	ಇಂಗ್ಲೀಷ್ ತರಗತಿ	ಊರು
೧.	ಶ್ರೀ ಶಿವಬಸವದೇವರು	೪	ತಾಳಿಕೋಟೆ
೨.	ಪಾಟೀಲ ಸಂಗಯ್ಯ	೩	ಆಲಮಟ್ಟಿ
೩.	ಮಸಳಿ ಶ್ರೀಶೈಲಪ್ಪ	೩	ತಾಳಿಕೋಟೆ
೪.	ಬಣಗಾರ ಬಸಪ್ಪ	೩	ಬಾಗಲಕೋಟೆ
೫.	ನಾಯಕ ಅಮರೇಶ್ವರಪ್ಪ	೨	ಹುಕ್ಕೇರಿ
೬.	ಪಾಟೀಲ ಲಿಂಗಣ್ಣ	೨	ಬಾಗೇವಾಡಿ
೭	ಶ್ರೀ ಮಹಾಂತ ಪಟ್ಟದಸ್ವಾಮಿ	೨	ಆಲಮಟ್ಟಿ
೮.	ಬ್ಯಾಕೋಡ ಗುರುಲಿಂಗಪ್ಪ	೧	ಹೂವಿನ ಹಿಪ್ಪರಗಿ\
೯.	ರೂಳಿ ಪ್ರಭಪ್ಪ	೧	ಅಥರಗಾ
೧೦.	ಸಿಂದಗಿ ಶಿವಲಿಂಗಣ್ಣ	೧	ಅಥರಗಾ
೧೧.	ನಿಡಗುಂದಿ ಬಸವಪ್ಪ	೧	ನಿಡಗುಂದಿ
೧೨.	ಜೇವೂರ ಗುರುಮೂರ್ತಿ	೧	ಅಥರಗಾ
೧೩.	ಕಲಬುರ್ಗಿ ಹಣಮಂತಪ್ಪ	೧	ಕಲಬುರ್ಗಿ
೧೪.	ಚಿನಿವಾಲ ಅಂದಾನೆಪ್ಪ	೧	ಮುದ್ದೇಬಿಹಾಳ
೧೫.	ಸಿಂದಗಿ ಸೋಮಪ್ಪ	೧	ಹುಬ್ಬಳ್ಳಿ
೧೬.	ಇಂಗಳೇಶ್ವರ ಕಾಶೀನಾಥ	೧	ಅಥರಗಾ
೧೭.	ಇಂಗಳೇಶ್ವರ ಪ್ರಭು	೧	ಅಥರಗಾ

೧೮. ಬುರುಕುಲಿ ಮಲ್ಲಿಕಾರ್ಜುನ	೧	ಅಥರಗಾ
೧೯. ಮಡನಳ್ಳಿ ಶಿವಾನಂದ	೧	ಮಡನಳ್ಳಿ
೨೦. ಏಳೆಮ್ಮೆ ಬಸವಪ್ಪ	೧	ಬಾಗಲಕೋಟೆ
೨೧. ಬಣಗಾರ ಮಲ್ಲೇಶಪ್ಪ	೧	ಬಾಗಲಕೋಟೆ
೨೨. ಎಲೇರಿ ಶಂಭುಲಿಂಗಯ್ಯನವರು	೧	ಎಲೇರಿ
೨೩. ಎಲೇರಿ ಸಿದ್ಧರಾಮಪ್ಪ	೧	ಎಲೇರಿ
೨೪. ನಿಂಬಾಳ ಸಿದ್ದಪ್ಪ	೧	ಅಥರಗಾ
೨೫. ಶೆಟ್ಟರ ಚೆನ್ನವೀರಪ್ಪ	೧	ನಿಡಗುಂದಿ
೨೬. ಬಬಲೇಶ್ವರ ಸಿದ್ಧವೀರಪ್ಪ	೧	ಹಿಪ್ಪರಗಿ
೨೭. ಕುಡ್ಜಿ ಶಿವಪ್ಪ	೧	ಅಥರಗಾ

ಶಿವಾನುಭವ ಕಲಿಯುವ ವಿದ್ಯಾರ್ಥಿಗಳು

೧. ಶ್ರೀ ತಡವಲಗಿ ಪಟ್ಟದದೇವರು	ತಡವಲಗಾ
೨. ಶ್ರೀ ಕೊಕಟನೂರು ಮರಿದೇವರು	ಕೊಕಟನೂರ

ಹೊಸದಾಗಿ ಹೆಸರು ಹಚ್ಚಿಕೊಂಡ ವಿದ್ಯಾರ್ಥಿಗಳು

೧. ಶ್ರೀ ವಿರೂಪಾಕ್ಷ ಮರಿದೇವರು	ಅಗರಖೇಡ
೨. ಶ್ರೀ ಮಹಾಲಿಂಗಯ್ಯನವರು	ಉಕ್ಕಲಿ
೩. ಇಟ್ಟಂಗಿ ಶಂಕರೆಪ್ಪ	ಉಕ್ಕಲಿ

ವೀರಶೈವ ವಿದ್ಯಾಲಯದಲ್ಲಿ ಶಿವದೀಕ್ಷೆ ಹೊಂದಿದವರ ಹೆಸರುಗಳು

ಈ ವಿದ್ಯಾಲಯದಲ್ಲಿ ಪ್ರವೇಶಿಸುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಾಗಿರುವವರು ಶಿವದೀಕ್ಷೆಯನ್ನು ಹೊಂದಬೇಕೆಂಬ ನಿಯಮವಿರುವದರಿಂದ ಈ ವರ್ಷದಲ್ಲಿ ಶಿವದೀಕ್ಷೆಯನ್ನು ಹೊಂದಿದ ಅಧ್ಯಾಪಕರ, ವಿದ್ಯಾರ್ಥಿಗಳ ಮತ್ತು ಆ ಕಾಲಕ್ಕೆ ದೀಕ್ಷೆಗೋಸ್ಕರ ಬಂದ ಬೇರೆ ಸಭ್ಯಗೃಹಸ್ಥರ ಹೆಸರುಗಳು

೧. ಶ್ರೀಯುತ, ಹರ್ಡೇಕರ ಮಂಜಪ್ಪನವರು ಸಹಾಯಾಧಿಪತಿಗಳು ಮತ್ತು ಅಧ್ಯಾಪಕರು.

೨. ಶ್ರೀಯುತ, ಬ್ಯಾಳಿ ಕಲ್ಯಾಣಪ್ಪನವರು ಬಿ. ಎ. ಅಧ್ಯಾಪಕರು.

೩. ಶ್ರೀಯುತ, ಗುಣಕಿ ಶಿವಲಿಂಗಪ್ಪನವರು ಅಧ್ಯಾಪಕರು.

ವಿದ್ಯಾರ್ಥಿಗಳು

೪. ಮಸಳಿ ಶ್ರೀಶೈಲಪ್ಪ
೫. ಬಣಗಾರ ಬಸವಪ್ಪ
೬. ವಿರೂಪಾಕ್ಷಪ್ಪ ಬಾಪುರಿ
೭. ಶೆಟ್ಟರ ಬಸವಲಿಂಗಪ್ಪ
೮. ಹಾವೇರಿ ಬಸವರಾಜಪ್ಪ
೯. ಚಾಂದಕೋಟಿ ಬಾಳಾಸಾಹೇಬ
೧೦. ಬ್ಯಾಡಿಗಿ ಬಸವಲಿಂಗಪ್ಪ
೧೧. ಬೆಟಗೇರಿ ಶಿವಲಿಂಗಪ್ಪ
೧೨. ಜತ್ತಿ ಗಂಗಾಧರಪ್ಪ
೧೩. ಇಳಕಲ್ಲ ಮಹಾಂತಪ್ಪ
೧೪. ಗಂಜಳ ಶಿದ್ದಪ್ಪ
೧೫. ಕುಡಚಿ ಶಿವಪ್ಪ
೧೬. ಇಂಗಳೇಶ್ವರ ಪ್ರಭು
೧೭. ಗರ್ಕೂಲಿ ಮಲ್ಲಿಕಾರ್ಜುನ
೧೮. ಇಂಗಳೇಶ್ವರ ಕಾಶಿನಾಥ
೧೯. ಮಡ್ನಳ್ಳಿ ಶಿವಾನಂದ
೨೦. ಮಡ್ನಲ್ಲಿ ಶರಣಪ್ಪ
೨೧. ಏಳೆಮ್ಮ ಬಸವಣ್ಣ
೨೨. ಬಣಗಾರ ಮಲ್ಲೇಶಪ್ಪ
೨೩. ನಿಡಗುಂಡಿ ಬಸವಪ್ಪ
೨೪. ಕಲಬುರ್ಗಿ ಹನುಮಂತಪ್ಪ
೨೫, ಬ್ಯಾಕೋಡ ಗುರುಲಿಂಗಪ್ಪ
೨೬. ನಾಯಕ ಅಮರೇಶ್ವರಪ್ಪ
೨೭. ಪಾಟೀಲ ಲಿಂಗಪ್ಪ
೨೮. ಸಿಂದಗಿ ಶಿವಲಿಂಗಪ್ಪ
೨೯. ರೂಳಿ ಪ್ರಭಪ್ಪ
೩೦. ಬಳೇರಿ ಸಿದ್ಧರಾಮಪ್ಪ
೩೧. ಕಲಬುರ್ಗಿ ಶಂಕರಪ್ಪ
೩೨. ಶೆಟ್ರ ಚನ್ನವೀರಪ್ಪ
೩೩. ಸಿಂದಗಿ ಸೋಮಪ್ಪ
೩೪. ಬಬಲೇಶ್ವರ ಸಿದ್ವೀರಪ್ಪ
೩೫. ಚಿನಿವಾಲ ಅಂದಾನೆಪ್ಪ
೩೬. ಜೇವೂರು ಗುರುಮೂರ್ತಿ

ಬೇರೆ ಸಭ್ಯಗೃಹಸ್ಥರು

೩೭. ತಾಳಿಕೋಟಿ ಶಿವಪ್ಪ
೩೮. ಅಥರ್ಗಾ ರಾಮನಗೌಡರು
೩೯. ಅಥರ್ಗಾ ದುಂಡಪ್ಪನವರು
೪೦. ಸಿಂದಗಿ ಗುರುಲಿಂಗಪ್ಪನವರು
೪೧. ಪೂಜೇರಿ ಬಸವಲಿಂಗಪ್ಪನವರು
೪೨. ಅಥರ್ಗಾ ಶಿವರಾಯಗೌಡನವರು

ಅಡಗಿಯವರು

೪೩. ಧವಳಗಿ ಕರಿಬಸವಪ್ಪ
೪೪. ಬೇವಿನಹಳ್ಳಿ ಭೀಮಪ್ಪ
೪೫. ಚಿಮ್ಮಲಗಿ ಶಿವಪ್ಪ
೪೬. ಧವಳಗಿ ಲಿಂಗಪ್ಪ

ವೀರಶೈವ ವಿದ್ಯಾಲಯಕ್ಕೆ ಧನಸಹಾಯ ಮಾಡಿದ ಮಹಾಶಯರು

೧೦೩೫ ರೂ.	ಶ್ರೀಮನ್ನಿರಂಜನ ಶ್ರೀ ಬಂಥನಾಳಸ್ವಾಮಿಗಳವರು, ಮೂಲ ಫಂಡಿಗೆ
೧೦೧ ರೂ.	ಶ್ರೀಖಾಸ್ಗತ ಸ್ವಾಮಿಮಠ ತಾಳಿಕೋಟೆ, ವಾರ್ಷಿಕ ವರ್ಗಣಿ
೧೫೦ ರೂ.	ಶ್ರೀಮದ್ಘನಲಿಂಗ ಚಕ್ರವರ್ತಿ ದೇವರಹಿಪ್ಪರಗಿ ಪರದೇಶಿ ಹಿರೇಮಠದ ಶ್ರೀ ಸಿದ್ಧರಾಮ ಸ್ವಾಮಿಗಳು, ದೇಣಿಗಿ.
೫೦ ರೂ.	ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ಸಿಂದಗಿ ಹಿರೇರಂಗಮಠದ ಚೆನ್ನವೀರ ಸ್ವಾಮಿಗಳು, ವಾರ್ಷಿಕ ವರ್ಗಣಿ.

ವಾರ್ಷಿಕ ವರ್ಗಣಿ

೧೦೧ ರೂ. ಶ್ರೀ ದೊಡ್ಡಪ್ಪಣ್ಣ ನಾಗರಾಳ ಹುನಗುಂದ

೫೦ ರೂ. ಶ್ರೀ ಸಿದ್ಧಲಿಂಗಪ್ಪನವರು ಜತ್ತಿ ವಿಜಾಪುರ

೫೦ ರೂ. ಶ್ರೀ ಗುರುಬಸವಪ್ಪ ಶೀಲವಂತರ ರಬಕವಿ

೨೫ ರೂ. ಶ್ರೀ ಮಹಾತಂಪ್ಪನವರು ಸೂಡಿ ಇಳಕಲ್ಲ

೨೫ ರೂ. ಶ್ರೀ ಕರಿಬಸಪ್ಪನವರು ನಿಡಸನೂರ ಇಳಕಲ್ಲ

೨೫ ರೂ. ಶ್ರೀ ಲಕ್ಷ್ಮಣಪ್ಪ ಸಿದ್ಧಪ್ಪ ಬಣಗಾರ ಬಾಗಲಕೋಟ

೨೫ ರೂ. ಶ್ರೀ ಮಲ್ಲಿಕಾರ್ಜುನಪ್ಪ ಅಣ್ಣಾ ತಾಳಿಕೋಟೆ ವಿಜಾಪುರ

೨೫ ರೂ. ಶ್ರೀ ಅಂದಾನೆಪ್ಪ ಅಂಗಡಿ ವಕೀಲ ವಿಜಾಪುರ

೨೫ ರೂ. ಶ್ರೀ ಬಾಳಪ್ಪ ಸಂಗಪ್ಪ ಬನ್ನೂರ ವಕೀಲ ವಿಜಾಪುರ

೨೫ ರೂ. ಶ್ರೀ ಪಂಚಪ್ಪ ಉಮ್ಮರಜಿ ವಿಜಾಪುರ

೨೫ ರೂ. ಶ್ರೀ ಮುರಿಗೆಪ್ಪ ಅಣ್ಣ ಸುಗಂಧಿ ವಿಜಾಪುರ

೨೫ ರೂ. ಶ್ರೀ ರೇವಪ್ಪ ಕರಿಬಸವಪ್ಪ ಗಂಗಾಧರ ವಿಜಾಪುರ

೨೫ ರೂ. ಶ್ರೀ ಮಲ್ಲಪ್ಪ ಚಲ್ಲಾ ವಕೀಲ

೨೫ ರೂ. ಶ್ರೀ ಬಸವಲಿಂಗಪ್ಪ ಚೆನ್ನಬಸವಪ್ಪ ಅಣ್ಣ ಕಿಣಗಿ ಸಿಂದಗಿ

೨೫ ರೂ. ಶ್ರೀ ಗುರುಸಂಗಪ್ಪ ನೀಲಪ್ಪಅಣ್ಣ ಪಟ್ಟಣಶೆಟ್ಟಿ

೨೫ ರೂ. ಶ್ರೀ ಸಾತಪ್ಪ ಬಸವಪ್ಪ ಅಣ್ಣ ಗುಣಾರಿ

೨೫ ರೂ. ಶ್ರೀ ಶಿಗೊಂಡಪ್ಪ ಪಾಟೀಲ ಮಾಮಲೇದಾರ

೨೫ ರೂ. ಶ್ರೀ ವೀರೂಪಾಕ್ಷಯ್ಯನವರು ವಿಭೂತಿ ತಾಳಿಕೋಟೆ

೨೫ ರೂ. ಶ್ರೀ ಮಹಾಂತಪ್ಪನವರು ಕ್ವಾಟಿ ಇಳಕಲ್ಲ

೨೫ ರೂ. ಶ್ರೀ ರಾ. ಸಾ. ಗುರುಲಿಂಗಪ್ಪನವರು ಮೊಟಗಿ ಮುದ್ದೇಬಿಹಾಳ

೨೫ ರೂ. ಶ್ರೀ ಸಂಗಪ್ಪ ಗುರುಲಿಂಗಪ್ಪ ಮೋಟಗಿ ಮುದ್ದೇಬಿಹಾಳ

೨೫ ರೂ. ಶ್ರೀ ಮಹಾಂತಸ್ವಾಮಿ ಮಠ ವಕೀಲ ಬಾಗಲಕೋಟೆ

೨೫ ರೂ. ಶ್ರೀ ಬುಕ್ಕಸೇಲರ ಚೆನ್ನಪ್ಪನವರು ಬಾಗಲಕೋಟೆ

೨೫ ರೂ. ಶ್ರೀ ಲೋಚನಪ್ಪ ವೀರಪ್ಪ ಅಣ್ಣ ಗೂಗವಾಡ ಬಾಗಲಕೋಟೆ

೨೫ ರೂ. ಶ್ರೀ ಸೋಮಲಿಂಗಪ್ಪ ಸಿದ್ಧಪ್ಪ ಅಣ್ಣ ಶಾಬಾದಿ ಬಾಗಲಕೋಟೆ

೨೫ ರೂ. ಶ್ರೀ ಸಂಗಪ್ಪ ಬಸವಂತರಾವ ಸಾಸನೂರ ಬಾಗಲಕೋಟೆ

೨೫ ರೂ. ಶ್ರೀ ಸಂಗಪ್ಪ ಮಹಾಂತಪ್ಪ ಅಣ್ಣ ಶೆಟ್ಟರ ಬಾಗಲಕೋಟೆ

೨೫ ರೂ. ಶ್ರೀ ಬಸವಯ್ಯನವರು ದಂಡಾವತಿ ಬಾಗಲಕೋಟೆ

೨೫ ರೂ. ಶ್ರೀ ಕಂಬಾಳಯ್ಯನವರು ಕಂಬಾಳಮಠ ಹುನಗುಂದ

೨೫ ರೂ. ಶ್ರೀ ಗುಂಡಪ್ಪನವರು ಇಳಕಲ್ಲ ಬಾಗಲಕೋಟೆ

೨೫ ರೂ. ಶ್ರೀ ಬಸವಪ್ಪನವರು ಕೆಂದೂರ ಬಾಗಲಕೋಟೆ

೨೫ ರೂ. ಶ್ರೀ ಶಂಕರಪ್ಪನವರು ಸಕ್ರಿ ಇಳಕಲ್ಲ ಗೋಶಾಲೆಗೆ

೨೫ ರೂ. ಶ್ರೀ ನಾಗಪ್ಪ ಅಣ್ಣ ಕೇಶಟ್ಟಿ ಚಡಚಣ

೨೫ ರೂ. ಶ್ರೀ ಗುರುಪಾದಪ್ಪ ಜೀರಂಕಲಿಗಿ ಚಡಚಣ

೨೫ ರೂ. ಶ್ರೀ ಪರಪ್ಪ ಗುರಪ್ಪ ಚೌಧರಿ ವಕೀಲ ಬಾಗಲಕೋಟೆ

೨೫ ರೂ. ಶ್ರೀ ಸಂಗಶೆಟ್ಟರು ಪಾಟೀಲ ಮಹಗಾಂವ

೨೫ ರೂ. ಶ್ರೀ ರೇವಣಸಿದ್ದಪ್ಪ ಕನ್ನಾಳೆ ಸೋಲಾಪುರ

ದೇಣಗಿ

೧೦೧ ರೂ. ಶ್ರೀ ಚೆನ್ನಮಲ್ಲಪ್ಪ ಅಣ್ಣ ಕುರ್ಲೆ ವಿಜಾಪುರ

೧೦೧ ರೂ. ಶ್ರೀ ವೀರಪ್ಪ ಅಣ್ಣ ಹೊಸಕೋಟೆ ಹುಬ್ಬಳ್ಳಿ

೧೦೧ ರೂ. ಶ್ರೀ ವೀರಭದ್ರಪ್ಪನವರು ಹೇರಲಗಿ ವಿಜಾಪುರ

೧೦೦ ರೂ. ಶ್ರೀ ಚನ್ನಬಸವಪ್ಪಣ್ಣ ಬೆಂಡಿಗೇರಿ ಹುಬ್ಬಳ್ಳಿ

೭೬ ರೂ. ಶ್ರೀ ಸಿಂದಗಿ ಜನರಿಂದ ಸಭೆಯಲ್ಲಿ ಬಂದದ್ದು,

೨೫ ರೂ. ಶ್ರೀ ಚನ್ನಪ್ಪಣ್ಣ ಕಟಗೇರಿ ಹುಬ್ಬಳ್ಳಿ

೧೫ ರೂ. ಶ್ರೀ ಗಂಗಪ್ಪ ಜೀರಗೆ ಸೋಲಾಪುರ

೧೧ ರೂ. ಶ್ರೀ ಶರಣಯ್ಯನವರು ಚನವೀರಯ್ಯನವರು ವಿಜಾಪುರ

೧೦ ರೂ. ಶ್ರೀ ಪರಪ್ಪ ಸೋಮಪ್ಪ ವಿಜಾಪುರ

೧೧ ರೂ. ಶ್ರೀ ಮಲಕಪ್ಪ ಗಂಗಾಧರ ವಿಜಾಪುರ

೫ ರೂ. ಶ್ರೀ ಮಲಕನಗೌಡ ರುದ್ರಗೌಡ ವಿಜಾಪುರ

೫ ರೂ. ಶ್ರೀ ವಾಸು ಪಂಡಿತರಾವ ವಿಠಲರಾವ ಘಾರೆ ತಾಳಿಕೋಟೆ

೫ ರೂ. ಶ್ರೀ ಮಲ್ಲಿಕಾರ್ಜುನಪ್ಪ ಕುಸೂರ ಚಡಚಣ

೫ ರೂ. ಶ್ರೀ ಭಾರತ ಮೋಟಾರ ಸರ್ವಿಸ ಚಡಚಣ

೧೦ ರೂ. ಶ್ರೀ ಅಜಗಣ್ಣಪ್ಪಣ್ಣ ಹೇರಲಗಿ ವಿಜಾಪುರ

೧ ರೂ. ಶ್ರೀ ಪಂಪಣ್ಣ ಮ್ಯಾಗೇರಿ ಚಡಚಣ

೫ ರೂ. ಶ್ರೀ ಮಲ್ಲಪ್ಪ ಕೋರಿ ವಿಜಾಪುರ

೨೯೫೧ ರೂ. ಒಟ್ಟು

೧೦೩೫ ಮೂಲ ಫಂಡಿಗೆ

೧೧೭೯ ವಾರ್ಷಿಕ ವರ್ಗಣಿ

೭೩೭ ದೇಣಗಿ

೨೯೫೧ ಅಂತು

ಕಟ್ಟಡಗಳನ್ನು ಕಟ್ಟಿಸಲು ಧನಸಹಾಯ ಮಾಡಿದ ಮಹಾಶಯರು

---

೨೨೦ ರೂ. ಶ್ರೀ ಶಾಂತವೀರಯ್ಯನವರು ಹಿರೇಮಠ ಹುಬ್ಬಳ್ಳಿ. ಒಂದು ಕೋಣೆ

೨೨೦ ರೂ. ಶ್ರೀ ಗುರಪ್ಪಣ್ಣ ನೀಲಿ ಹುಬ್ಬಳ್ಳಿ, ಒಂದು ಕೋಣೆ

೨೨೦ ರೂ. ಶ್ರೀ ಬಸವಶೆಟ್ಟೆಪ್ಪಣ್ಣ ಹುಬ್ಬಳ್ಳಿ ಒಂದು ಕೋಣೆ

೩೦೧ ರೂ. ಶ್ರೀ ಮಧುಲಿಂಗಪ್ಪನವರು ಹರ್ಡೇಕರ ಹುಬ್ಬಳ್ಳಿ. ಒಂದು ಕೋಣೆ

೨೨೦ ರೂ. ಶ್ರೀ ಡಾಕ್ಟರ್ ಬಸವಪ್ಪನವರು ಬಾಗಲಕೋಟೆ, ಒಂದು ಕೋಣೆ

೨೨೦ ರೂ. ಶ್ರೀ ವಾಲಿ ತೋಟಪ್ಪನವರು ಮಾರ್ಕಬ್ಬಿನಹಳ್ಳಿ. ಭೋಜನಾಲಯ

೧೪೦೧ ರೂ.

ವಿ. ಸೂ. : ಶ್ರೀ ಕೈ. ಬಣಗಾರ ರಾಚಪ್ಪಅಣ್ಣಾ ಬಾಗಲಕೋಟ ಇವರ ಸ್ಮರಣಾರ್ಥಕವಾಗಿ ಶ್ರೀಯುತ ಸಕ್ರೋಜಿ ಲಿಂಗಪ್ಪನವರು ಸಾಧಾರಣ ೧೫೦೦ ರೂಪಾಯಿಗಳನ್ನು ವೆಚ್ಚಮಾಡಿ, ಧರ್ಮಶಾಲೆ, ಅಧ್ಯಾಪಕರ ವಾಸದ ಮನೆ–ಈ ಪ್ರಕಾರ ಎರಡು ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದಾರೆ.

ಶ್ರೀ ಸಿಂದಗಿ ವೀರಶೈವ ತರುಣಸಂಘದವರು ೧೭ ಖಾದೀ ಥಾಗೆಗಳನ್ನು ಕೊಟ್ಟಿದ್ದಾರೆ.

ಬೇರೆ ಸಾಮಾನುಗಳನ್ನು ಕೊಟ್ಟ ಮಹಾಶಯರು

(೧) ಶ್ರೀ ಮಹಾತಪಸ್ವಿಗಳಾದ ಶ್ರೀ ಶಿವಯೋಗಿಗಳವರ ಭಾವಚಿತ್ರವನ್ನು ವಿಜಾಪುರದ ಸಭ್ಯಗೃಹಸ್ಥರು.

(೨) ಮಹಾತ್ಮ ಗಾಂಧಿ ಮತ್ತು ಶ್ರೀ ಸ್ವಾಮಿ ವಿವೇಕಾನಂದರವರ ಭಾವಚಿತ್ರವನ್ನು ಶ್ರೀಯುತ ಜತ್ತಿ ಸಿದ್ಧಲಿಂಗಪ್ಪನವರು

(೩) ಕಿಟಸನ್ ಲೈಟ್ ಒಂದನ್ನು ಶ್ರೀಯುತ ಕುಮುಟಗಿ ಸಂಗಪ್ಪನವರು.

ವೀರಶೈವ ವಿದ್ಯಾಲಯ ಆಲಮಟ್ಟಿ ಮಿತಿ ಶಕೆ ೧೮೪೯ ವೈಶಾಖ ಶು. ೧೨ಯಿಂದ ೧೮೫೦ ವೈಶಾಖ ಶು. ೧೨ ವರೆಗಿನ ಪ್ರಥಮ ವರುಷದ ವರದಿಯು

ರೂ. ಜಮಾ.	ರೂ. ಖರ್ಚು
೧೦೩೫ 6 0 ಬಂಥನಾಳ ಶ್ರೀಗಳವರಿಂದ ಮೂಲ ಫಂಡಿಗೆ ಬಂದದ್ದು	೧೨೩೧ ಅಧ್ಯಾಪಕರ ವೇತನ
	೧೦೩ 6 // ಅಡಗಿ ಮಾಡುವವನ ಪಗಾರ
೧೧೭೯ 6 0 ವಾರ್ಷಿಕ ವರ್ಗಣಿಯಿಂದ ಬಂದದ್ದು	೨೬೦೮ 6 0 ಕಟ್ಟಡ ಖಾತೆ ಖರ್ಚು ತಪಶೀಲು
೭೩೭ 6 0 ಸಹಾಯಕರಿಂದ ಬಂದದ್ದು	ದೇಣಿಗಿಯಿಂದ ಬಂದದ್ದು ೧೪೦೧ 6 0
೩೪೩೪ 6 0 ವಿದ್ಯಾರ್ಥಿಗಳ ಕಡಿಯಿಂದ ತಮ್ಮ ಆಶನ ವಸನಾದಿಗಳಿಗಾಗಿ ಬಂದದ್ದು	೧೨೦೭ 6 0 ಖಾತೆ ಬಾಕಿ ೨೦೬೮ ಅಂತು ೨೨೯೨ 6 ಭೋಜನಾಲಯಕ್ಕ
೩೯ ॥೦॥ ಧರ್ಮಾದಾವದಿಂದ ಬಂದದ್ದು	೪೦೭ 6 0 ಗ್ರಂಥಾಲಯಕ್ಕೆ ೫೩ ॥೦॥ ಟಪಾಲ ಖಾತೆ
೧೪೦೧ 6 0 ಕಟ್ಟಡಕ್ಕಾಗಿ ಸಹಾಯಕರಿಂದ ಬಂದದ್ದು	೨೪೪ ॥/॥ ಪ್ರವಾಸ ಖಾತೆ ೫೦೪ ॥/॥ ಬಟ್ಟೆಯ ಖಾತೆ
೫೩ ॥/॥ಆರ್ಯತೇಜ ಪುಸ್ತಕಗಳನ್ನು ಮಾರಿದ್ದರಿಂದ ಬಂದದ್ದು	೧೩೯೭ ।///॥ ವಿದ್ಯಾರ್ಥಿಗಳಿಂದ ಮತ್ತು ಕಟ್ಟಡ ಸಹಾಯಕರಿಂದ ಬರತಕ್ಕದ್ದು
	೮೮೪೨ 6 /॥
೨೦೧೧॥/॥ ಕೊಡತಕ್ಕ ಬಾಕಿ	೧೦೪೯।೦। ಶಿಲ್ಕು
೯೮೯೧॥/॥।	೯೮೯೧।/॥। ಅಂತು.

ವೀರಶೈವ ವಿದ್ಯಾಲಯದ ಅಧಿಕಾರ ಮಂಡಲ

ಅಧಿಪತಿಗಳು

ಶ್ರೀ ಮನ್ನಿರಂಜನ ಬಂಥನಾಳ ಶ್ರೀ ಸಂಗನಬಸವ ಸ್ವಾಮಿಗಳು

ಉಪಾಧಿಪತಿಗಳು

ರಾ॥ ಸಾ॥ ಫ. ಗು. ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ. ವಿಜಾಪುರ

ಸಹಾಯಾಧಿಪತಿಗಳು

ಶ್ರೀಯುತ ಹರ್ಡೇಕರ ಮಂಜಪ್ಪನವರು

ಕೋಶಾಧಿಪತಿಗಳು

ಶ್ರೀಯುತ ಮೋಟಗಿ ಸಂಗಣ್ಣನವರು ಮುದ್ದೇಬಿಹಾಳ

ಪತ್ರ ವ್ಯವಹಾರ ಮಾಡತಕ್ಕ ವಿಳಾಸ

ಸಹಾಯಾಧಿಪತಿ

ವೀರಶೈವ ವಿದ್ಯಾಲಯ ಆಲಮಟ್ಟಿ
ಪೋಸ್ಟ : ಚಿಮ್ಮಲಗಿ
ಜಿಲ್ಹಾ : ವಿಜಾಪುರ.

ಶರಣ ಸಂದೇಶದ

ಪ್ರತ್ಯೇಕವಾದ

ವಾಣಿಜ್ಯ ಸಂಚಿಕೆ

ವ್ಯಾಪಾರ ಶಿಕ್ಷಕ

ಸಂಪಾದಕರು

ಹರ್ಡೇಕರ ಮಂಜಪ್ಪನವರು

ನಷ್ಟವೇ ಇಲ್ಲ ! ಅತಿಸ್ವಲ್ಪವೂ ಇಲ್ಲ !! ಅಧಿಕ ಲಾಭ !!!

ತಿರುವಾಂಕೂರು ಅಲೈಯನ್ಸ್ ಬ್ಯಾಂಕ್ ಲಿಮಿಟೆಡ್

ಬೋನಸ್ ಬಾಂಡ್‌ಗಳು

ರೂ. ೫॥ ಬೆಲೆಯುಳ್ಳ ೨೦ ವರ್ಷ ವಾಯದೆಯ ಒಂದೇ ಒಂದು ಬಾಂಡ್‌ನಿಂದ,

ರೂ. ೩೦೦೦, ೧೦೦೦, ೫೦೦, **ಇತ್ಯಾದಿ ಇನಾಮುಗಳನ್ನು ಪಡೆಯಲು**

೨೧ ಸುಸಮಯಗಳು,

ಈ ಸಮಯಗಳಲ್ಲಿ ಏನೂ ಇನಾಮ ಬಾರದಿದ್ದರೆ, ಬಾಂಡಿನ ವಾಯಿದೆ ಆದಮೇಲೆ ೭ ರೂಪಾಯಿ ವಾಪಾಸು ಬರುತ್ತದೆ. ಸತ್ತವರ ವಾರಸದಾರರಿಗೂ ಇನಾಮುಗಳು ಬಂದಿವೆ. ಜಾಗ್ರತೆಯಾಗಿ ಬಾಂಡ್‌ದಾರರಾಗಿರಿ.

ಬಾಂಡಿನ ನಿಯಮಾದಿಗಳಿಗೆ ಕೂಡಲೇ ಬರೆಯಿರಿ. ಉತ್ತರಕ್ಕಾಗಿ ೧ ಆಣೆ ಪೋಷ್ಟಸ್ಟಾಂಪ್ ಕಳಿಸುವುದಕ್ಕೆ ಮರೆಯಬಾರದು

ಮುಂಬಯಿ ಕರ್ನಾಟಕ ಜಿಲ್ಲೆಗಳ ಚೀಫ್ ಏಜಂಟ :

ಬಿ. ಎಸ್. ಕುರವತ್ತಿ, ದಾವಣಗೆರೆ.

ಬೇಕಾಗಿದೆ :

ಪ್ರತಿಯೊಂದು ಊರಿಗೆ ಸಬ್‌ಏಜಂಟರು ಬೇಕು. ಸಮರ್ಥರಾದ ಸಬ್‌ಏಜಂಟರಿಗೆ ಒಳ್ಳೆ ವರಮಾನ, ಇಂಥ ಅವಕಾಶ ದೊರೆಯಲಾರದು.

ಏಜೆನ್ಸಿ ನಿಯಮಗಳಿಗೆ ೧ । ಆಣೆ ಸ್ಟಾಂಪು ಇಟ್ಟು ಮೇಲಿನ ವಿಳಾಸಕ್ಕೆ ಬರೆಯಿರಿ.

*

ಪೀಠಿಕೆ

ಶರಣ ಸಂದೇಶ ಪತ್ರಿಕೆಯ ಈ ಎರಡನೆಯ ವರ್ಷದಲ್ಲಿ ಒಂದು ಪ್ರತ್ಯೇಕ ಸಂಚಿಕೆಯನ್ನು ಈ ಪ್ರಕಾರ ವ್ಯಾಪಾರಸಂಬಂಧವಾದ ವಿಷಯಗಳಿಂದ ಕೂಡಿದ ಪುಸ್ತಕರೂಪದಲ್ಲಿ ಪ್ರಕಟಿಸಬೇಕೆಂದು ಗೊತ್ತುಮಾಡಿದುದು ಈ ದಿವಸ ಪೂರೈಸಿದಂತಾಯಿತು.

ಈ ಪುಸ್ತಕವನ್ನು ಓದಿದರೆ ಕರ್ನಾಟಕವು ವ್ಯಾಪಾರ ಕೈಗಾರಿಕೆಗಳಲ್ಲಿ ಎಷ್ಟು ಹಿಂದುಳಿದಿದೆಯೆಂಬುದು ಸ್ಪಷ್ಟ ತೋರುವುದು. ಉತ್ತರ ದೇಶದ ಮಾರ್ವಾಡಿ, ಗುಜರಾತಿ ಮತ್ತು ಕಾತೇವಾಡಿ ವ್ಯಾಪಾರಿಗಳು ಬಟ್ಟೆ, ಅರಳೆ ಮತ್ತು ಕಿರಾಣಿ ವ್ಯಾಪಾರಗಳಿಗಾಗಿ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ಹೇಗೆ ವ್ಯಾಪಿಸಿದ್ದಾರೆಂಬುದು ಮತ್ತು ಕನ್ನಡಿಗರು ಮಾತ್ರ ಕರ್ನಾಟಕವನ್ನು ಬಿಟ್ಟು ಬೇರೆ ಭಾಗಗಳಿಗೆ ಹೇಗೆ ಹೋಗಿಲ್ಲವೆಂಬುದು ನಿಚ್ಚಳವಾಗಿ ತೋರುವಂತಿದೆ.

ಕನ್ನಡ ವ್ಯಾಪಾರಿಗಳ ಧಾರ್ಮಿಕ ಆಚಾರವಿಚಾರಗಳ ಕಲ್ಪನೆ, ಹಿಂದಿಭಾಷೆಯ ಕೊರತೆ, ಮಹತ್ವಾಕಾಂಕ್ಷೆಯ, ದೀರ್ಘಸಾಹಸಗಳ ಲೋಪ, ಕರ್ನಾಟಕಕ್ಕೆ ಬಂದರವಿಲ್ಲದಿದ್ದುದು, ಇವೇ ಈ ನಾಡಿನ ವ್ಯಾಪಾರಿಗಳ ಅಭಿವೃದ್ಧಿಗೆ ತುಂಬಾ ಕೊರತೆಯನ್ನುಂಟುಮಾಡತಕ್ಕವುಗಳಾಗಿವೆ.

ಈ ಪುಸ್ತಕದ ವಿಷಯವಾಗಿ ಬಹು ಜನರು ಬಹು ಲವಲವಿಕೆಯುಳ್ಳವರಾಗಿದ್ದುದನ್ನು ನೋಡಿದರೆ ವ್ಯಾಪಾರ ಸಂಬಂಧವಾದ ಪುಸ್ತಕಗಳ ಅವಶ್ಯಕತೆಯು ಕರ್ನಾಟಕದಲ್ಲಿ ವಿಶೇಷವಾಗಿದೆಯೆಂದು ತೋರುತ್ತದೆ. ಜನಗಳ ನೀರಿಕ್ಷಣೆಯಷ್ಟು ಇದರಲ್ಲಿ ವಿಷಯಸಂಗ್ರಹ ವಾಗಿದೆಯೆಂದು ನಮಗೆ ನಂಬಿಕೆಯಿಲ್ಲ.

ಇದು ಕರ್ನಾಟಕದಲ್ಲಿ ಹೊಸ ಪದ್ಧತಿಯೂ. ಪ್ರತಿವರ್ಷವೂ ಇದೇ ಪ್ರಕಾರ ಒಂದೊಂದು ವಿಷಯವನ್ನು ಕುರಿತು ಒಂದು ಪ್ರತ್ಯೇಕ ಸಂಚಿಕೆಯನ್ನು ಪುಸ್ತಕರೂಪದಲ್ಲಿ ಪ್ರಸಿದ್ಧಿಸಬೇಕೆಂದು ಯೋಚಿಸಿದ್ದೇವೆ. ವಾಚಕರು ಇದರ ಗುಣದೋಷಗಳನ್ನು ತಿಳಿಸಿದಲ್ಲಿ ನಮ್ಮ ಮುಂದಣ ಕಾರ್ಯಕ್ಕೆ ತುಂಬಾ ಸಹಾಯವಾಗುವುದು.

– ಸಂಪಾದಕ

❖❖

ಸುಪ್ರಸಿದ್ಧ ವ್ಯಾಪಾರಿಗಳ ಸದುಪದೇಶ

ಮಥುರಾಪಟ್ಟಣದಲ್ಲಿರುವ ಸುಖಸಂಚಾರಕ ಕಂಪನಿಯ ಯಜಮಾನರಾದ ಪಂ. ಕ್ಷೇತ್ರಪಾಲ ಶರ್ಮರವರು ಹಿಂದುಸ್ಥಾನದ ಪ್ರಸಿದ್ಧ ವ್ಯಾಪಾರಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ಮೊದಲು ಬಹು ಚಿಕ್ಕದಾದ ವ್ಯಾಪಾರವನ್ನು ಪ್ರಾರಂಭಿಸಿ ತಮ್ಮ ದೀರ್ಘ ಸಾಹಸದಿಂದ ಲಕ್ಷಾಧೀಶರಾಗಿ ಹಿಂದುಸ್ಥಾನದಲ್ಲಿ ಪ್ರಸಿದ್ಧ ವ್ಯಾಪಾರಿಗಳೆಂದು ಕೀರ್ತಿಯನ್ನು ಹೊಂದಿದ್ದಾರೆ.

ಇವರ ಸದುಪದೇಶವು ವ್ಯಾಪಾರಿಗಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡತಕ್ಕದ್ದಾಗಿರುವುದರಿಂದ ಇದರಡಿಯಲ್ಲಿ ಪ್ರಸಿದ್ಧಿಸಿದ್ದಾಗಿದೆ.

ನನ್ನ ವ್ಯಾಪಾರದ ಅನುಭವ :

೧. ಗಿರಾಕಿಗೆ ನಾವು ಮಾರಲಿಕ್ಕೆ ಕೊಡುವ ಸಾಮಾನಿನಲ್ಲಿ ನಿಜವಾದ ಗುಣವು ಅದೆಯೋ ಇಲ್ಲವೋ ನೋಡಬೇಕು. ಯಾವುದಾದರೊಂದು ಸಾಮಾನಿನಲ್ಲಿ ನಿಜವಾದ ಗುಣವು ಇರದಿದ್ದರೆ ಆ ಸಾಮಾನಿನ ವರ್ಣನೆಯನ್ನು ಗಿರಾಕಿಯ ಮುಂದೆ ಮಾಡಬಾರದು.

೨. ಸ್ವತಃ ತಾನು ಗಿರಾಕಿಯಂತೆಯೇ ತಿಳಿದುಕೊಂಡು ವ್ಯಾಪಾರ ಮಾಡಬೇಕು.

೩. ಗಿರಾಕಿಗಳ ಮೇಲೆ ಎಂದೂ ಸಿಟ್ಟಾಗಬಾರದು.

೪. ಗಿರಾಕಿಗಳು ಒಂದು ವೇಳೆ ತಪ್ಪು ತಿಳಿದುಕೊಂಡು ಸಿಟ್ಟಾದರೆ ಅವರ ತಪ್ಪನ್ನು ಶಾಂತರೀತಿಯಿಂದ ತಿಳಿಸಿಕೊಡಬೇಕು.

೫. ಗಿರಾಕಿಗಳನ್ನು ಕಾಡುಮೃಗವೆಂದು ತಿಳಿದುಕೊಳ್ಳದೇ ತನ್ನ ಮಿತ್ರರೆಂದು ತಿಳಿದುಕೊಳ್ಳಬೇಕು. ಮತ್ತು ಪ್ರಸಂಗ ಬಂದಾಗ ಅವರ ಕ್ಷುಲ್ಲಕ ಬೇಡಿಕೆಗಳನ್ನೂ ಪೂರ್ಣಮಾಡಬೇಕು.

೬. ತನ್ನ ವ್ಯವಹಾರದಿಂದ ಅವನಿಗೆ ಅಸಮಾಧಾನವಾಗುವ ಪ್ರಸಂಗವು ಬರಗೊಡಬಾರದು.

೭ ಹತೋಟಿಯ ಮತ್ತು ವಿಶ್ವಾಸದ ವ್ಯವಹಾರ ಮಾಡುವದರಿಂದ ಒಂದು ವೇಳೆ ವಿಳಂಬವಾದರೂ ವ್ಯಾಪಾರವು ಶಾಶ್ವತವಾಗಿ ಬಹು ದಿವಸ ನಡೆಯುತ್ತದೆ.

೮. ನೀವು ಯಾವುದಾದರೊಂದು ಔಷಧಿ ಇಲ್ಲವೇ ಯಾವುದೊಂದು ವಸ್ತುವನ್ನು ಸಿದ್ಧಗೊಳಿಸಿ ಅದು ಉಪಯೋಗವಿದೆಯೋ ಇಲ್ಲವೋ ಎಂಬುದನ್ನು ಮೊದಲೇ ವಿಚಾರಮಾಡಿರಿ. ಒಂದು ವೇಳೆ ನಿಮ್ಮ ವಸ್ತುವು ನಿರುಪಯೋಗವಿದ್ದದ್ದಾದರೆ ಅದರಿಂದ ಶಾಶ್ವತವಾಗಿ ಲಾಭವಾಗುವ ಆಶೆಮಾಡಬಾರದು.

೯. ಯಾವ ವಸ್ತುವು ಜನರಿಗೆ ಎಲ್ಲಕ್ಕಿಂತಲೂ ಹೆಚ್ಚು ಉಪಯೋಗವಿದೆಯೆಂದು ನಿಮಗೆ ತಿಳಿಯುತ್ತದೆಯೋ ಅದನ್ನು ಪ್ರಸಾರಮಾಡಲು ಟೊಂಕಕಟ್ಟಿ ಪ್ರಯತ್ನಮಾಡಿರಿ. ನಿಮ್ಮ ಪದಾರ್ಥವು ಚೆನ್ನಾಗಿದ್ದರೆ ಜನರು ತಾವೇ ಅದನ್ನು ಪ್ರಸಾರಗೊಳಿಸುವರು.

೧೦. ಶಕ್ಯವಿದ್ದಷ್ಟು ಉದ್ದರಿಯಿಂದ ಕೊಡಕೊಂಬುವ ವ್ಯವಹಾರವನ್ನು ಮಾಡದಿರುವದೇ ಒಳ್ಳೆದು, ಒಮ್ಮೊಮ್ಮೆ ಉದ್ದರಿ ಕೊಟ್ಟು ದ್ರವ್ಯವನ್ನು ಮತ್ತು ಗಿರಾಕಿಗಳನ್ನು ಕೂಡಿಯೇ ಕಳೆದುಕೊಳ್ಳಬೇಕಾಗುತ್ತದೆ.

೧೧. ಪ್ರಾಯಶಃ ಸರಕಾರಿ ನೌಕರರು ಉದ್ದರಿಯಾಗಿ ತೆಗೆದುಕೊಂಡು ಹಣಕೊಡದಿರುವುದೇ ಹೆಚ್ಚು ಅಂಥವರ ಸಂಗಡ ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು.

೧೨. ಶಕ್ಯವಿದ್ದಷ್ಟು ಒಂದೇ ಮಾತಿನಿಂದ ಮತ್ತು ಒಂದೇ ಧಾರಣಿಯಿಂದ ಪದಾರ್ಥಗಳನ್ನು ಮಾರುವದು ಒಳ್ಳೆಯದು. ಪ್ರಾರಂಭಕ್ಕೆ ಒಂದುವೇಳೆ ಸ್ವಲ್ಪೇ ಗಿರಾಕಿಗಳು ದೊರೆತರೂ ಈ ಸಂಗತಿಯು ಜನರಲ್ಲಿ ಪ್ರಸಿದ್ಧವಾದಮೇಲೆ ನಿಮಗೆ ಗಿರಾಕಿಗಳ ಕೊರತೆಯಾಗಲಾರದು.

೧೩. ಒಂದು ವೇಳೆ ನಿಮಗೆ ಹಾನಿಯಾದರೂ ನಿಮ್ಮ ವಿಶ್ವಾಸವನ್ನೆಂದೂ ಕಳೆದುಕೊಳ್ಳಬೇಡಿರಿ.

೧೪. ಗಿರಾಕಿಗಳನ್ನು ಮೋಸಗೊಳಿಸುವದೆಂದರೆ ತಾನು ತನ್ನನ್ನೇ ಮೋಸಗೊಳಿಸಿಕೊಂಡಂತೆಯೇ ಸರಿ.

೧೫. ಅಂಗಡಿಯನ್ನಿಟ್ಟಕೂಡಲೇ ತನ್ನ ಎಲ್ಲ ಚಿತ್ತವನ್ನು ಅದರ ಕಡೆಗೇ ಕೊಡಲು ಕಲಿಯಬೇಕು.

೧೬. ಅಂಗಡಿ ನಡೆಸುವದು ಒಂದು ಪ್ರಕಾರದ ತಂತ್ರವಿದ್ದು ಅದನ್ನು ಲಕ್ಷ್ಮೀದೇವಿಯ ಪೂಜೆಗಾಗಿ ಮಾಡಬೇಕಾಗುತ್ತದೆ. ಆದುದರಿಂದ ಅತ್ತಿತ್ತ ಚಿತ್ತಚಲಿಸದೆ ಸಂಯಮನಪೂರ್ವಕವಾಗಿ ಅಂಗಡಿಯನ್ನು ಸಾಗಿಸಬೇಕು. ಚಕ್ಕಂದವು ಮತ್ತು ವ್ಯಾಪಾರವೂ ಎರಡೂ ಭಿನ್ನಭಿನ್ನ ವಿಷಯಗಳಿರುತ್ತವೆ. ಚಕ್ಕಂದವಾಡಿದರೆ ವ್ಯಾಪಾರವು ಮಣ್ಣುಗೂಡುವದು.

೧೭. ನಮ್ಮ ಜನಗಳಿಗೆ ವ್ಯಾಪಾರವೆಂದರೇನೆಂಬುದೇ ಗೊತ್ತಿಲ್ಲ. ಮತ್ತು ಅದನ್ನು ಗೊತ್ತುಮಾಡಿಕೊಳ್ಳುವ ಲವಲವಿಕೆಯೂ ಇಲ್ಲ. ಇಂಗ್ಲೀಷ ಕಲಿತು ಸರಕಾರಿ ನೌಕರಿ ಅಥವಾ ವಕೀಲ ಇಲ್ಲವೆ ಡಾಕ್ಟರರಾದರೆ ತಮ್ಮ ಕರ್ತವ್ಯ ಪೂರೈಸಿತೆಂದು ತಿಳಿಯುತ್ತಾರೆ.

೧೮. ಸುವ್ಯವಸ್ಥೆ ಮತ್ತು ಲೆಕ್ಕಪತ್ರಗಳ ಚೊಕ್ಕಟ ಇವೇ ವ್ಯಾಪಾರದ ಪ್ರಾಣವಾಗಿದೆ.

ನೌಕರರ ವಿಷಯಕ್ಕೆ ಕೆಲವು ಸಂಗತಿಗಳು

೧. ನೌಕರರನ್ನು ಕೆಲಸಕ್ಕಿಟ್ಟುಕೊಳ್ಳುವ ಮೊದಲು ಅವನ ವಿಷಯವಾಗಿ ಪೂರ್ಣ ವಿಚಾರಮಾಡಿ ಎಲ್ಲ ಸಂಗತಿಗಳನ್ನೂ ತಿಳಿದುಕೊಳ್ಳಬೇಕು.

೨. ಒಬ್ಬನನ್ನು ಕೆಲಸಕ್ಕಿಟ್ಟುಕೊಂಡ ಮೇಲೆ ಅವನ ಮೇಲೆ ವಿಶ್ವಾಸವಿಡಿರಿ. ಒಂದು ವೇಳೆ ವಿಶ್ವಾಸವಿಲ್ಲದಿದ್ದರೆ ಅವನನ್ನು ಕೆಲಸಕ್ಕೆ ಇಟ್ಟುಕೊಳ್ಳ ಬೇಡಿರಿ.

೩. ಯಾವನಾದರೊಬ್ಬನು ಅನೇಕ ಸ್ಥಳಗಳಲ್ಲಿ ನೌಕರಿ ಮಾಡಿ ಬಂದಿದ್ದರೆ ಅಂಥವನನ್ನು ಇಟ್ಟುಕೊಳ್ಳಬೇಡಿರಿ. ಅಂಥವನು ವ್ಯಭಿಚಾರ ಸ್ತ್ರೀಯಳಂತೆ ನಿಮಗೆ ಅಹಿತಕಾರಕ ಪರಿಣಾಮವನ್ನುಂಟುಮಾಡುವನು.

೪. ಉತ್ಪನ್ನಕ್ಕಿಂತಲೂ ಹೆಚ್ಚು ವೆಚ್ಚ ಮಾಡುವ ನೌಕರರನ್ನು ಆಶ್ರಯದಲ್ಲಿಟ್ಟುಕೊಳ್ಳುವುದು ಯೋಗ್ಯವಲ್ಲ.

೫. ಯಾವನಾದರೂ ನೌಕರರು ನಿಮ್ಮಂತೆಯೇ ವ್ಯಾಪಾರ ಮಾಡುವವನ ಆಪ್ತನಾಗಲಿ ಅಥವಾ ಮಿತ್ರನಾಗಲಿ ಇಲ್ಲದಿದ್ದರೆ ಅವನಿಂದ ನಿಮಗೆ ಲಾಭವಾಗಲು ಶಕ್ಯವಿಲ್ಲ.

೬. ನೌಕರನ ಸಂಬಳವನ್ನು ನಿಯಮಿತವೇಳೆಗೆ ತಪ್ಪದೆ ಕೊಡುವ ನಿಯಮವನ್ನಿಡಿರಿ.

೭. ಅವನ ಮೇಲೆ ಕೆಲಸಮಾಡವ ವೇಳೆಯ ಮತ್ತು ಕೆಲಸದ ಜವಾಬ್ದಾರಿಯ ಬಂಧನಗಳನ್ನಿಡಿರಿ.

೮. ನೌಕರರನ್ನು ನಿಮ್ಮ ಒಂದು ಅಂಶವೆಂದೇ ತಿಳಿಯಿರಿ ಮತ್ತು ಅದಕ್ಕಾಗಿ ಅವನನ್ನು ಆನಂದದಿಂದಿಟ್ಟುಕೊಂಡು ಸಂಕಟ ಕಾಲದಲ್ಲಿ ಅವನಿಗೆ ಸರ್ವ ಪ್ರಕಾರದಿಂದ ಸಹಾಯ ಮಾಡುವದು ನಿಮ್ಮ ಕರ್ತವ್ಯವೆಂದು ತಿಳಿಯಿರಿ.

೯. ನಿಮ್ಮ ಕೆಲಸಗಳನ್ನೆಲ್ಲ ನೌಕರನ ಕಡೆಗೆ ಒಪ್ಪಿಸಿ ಅತ್ತಿತ್ತ ಚಕ್ಕಂದವಾಡಿದರೆ ಕಡೆಗೆ ಹಾನಿಯೇ ನಿಮ್ಮ ಪಾಲಿಗೆ ಬರುವದೆಂಬುದನ್ನು ನೆನಪಿನಲ್ಲಿಡಿರಿ.

೧೦. ನೌಕರರಿಗೆ ಸ್ವಾಭಾವಿಕವಾಗಿಯೇ ಕಡಿಮೆ ಕೆಲಸ ಮಾಡುವ ಇಚ್ಛೆಯಿರುತ್ತದೆ. ಹೀಗಿರುವಾಗ ಒಂದು ವೇಳೆ ಯಜಮಾನನ ದುರ್ಲಕ್ಷವಾದರಂತೂ ಅವರ ಇಚ್ಛೆಯು ನಿರಾಯಾಸವಾಗಿಯೇ ಕೊನೆಗಾಣುತ್ತದೆ.

೧೧. ಕೆಲವು ನೌಕರರು ಯಜಮಾನನಿಗೆ ಏನಾದರೊಂದು ಆಶೆ ತೋರಿಸಿ ಅವನ ಕಡೆಯಿಂದ ಏನಾದರೂ ಅನುಚಿತ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಇದಕ್ಕಾಗಿ ಯಜಮಾನನು ಅವರನ್ನು ಯಾವಾಗಲೂ ಅಳತೆಯಲ್ಲಿಟ್ಟುಕೊಳ್ಳಬೇಕು. ಮತ್ತು ಅವರ ನೌಕರಿಯು ಕುಂಠಿತವಾಗದೆ ನಡೆದಿರಬೇಕು. ಬುದ್ಧಿವಂತರಾದ ಯಜಮಾನರು ತಮ್ಮ ನೌಕರರ ಮುಂದೆಯೇ ತಾವು ನಾಚಿಕೆಗೇಡಿಗಳಾಗುವಂಥ ಕೆಲಸಗಳನ್ನೆಂದಿಗೂ ಮಾಡಬಾರದು. ಇಂಥ ಕೆಲಸಗಳು ಬಹಳ ಮಾಡಿ ಲೋಭಿಯಿಂದಲೇ ಆಗುತ್ತಿರುತ್ತವೆ.

ಕೆಲವು ನೌಕರರು ಗುಪ್ತ ಶತ್ರುವಿನ ಕೆಲಸವನ್ನು ಮಾಡುತ್ತಿರುತ್ತಾರೆ. ಇದು ನಮಗೆ ಸ್ವತಃ ಅನುಭವವಿದೆ. ನಾವು ಮುಂಬಯಿಯ ಒಂದು ದೊಡ್ಡ ಅಂಗಡಿಯಲ್ಲಿ ಒಂದು ಪದಾರ್ಥವನ್ನು ಕೊಳ್ಳುವುದಕ್ಕಾಗಿ ಮಾತನಾಡಿ ಅಲ್ಲಿಯ ಬೆಲೆಯನ್ನು ತಿಳಿದುಕೊಂಡೆವು. ಆ ಮೇಲೆ ನಾವು ಅಂಗಡಿಯ ಹೊರಗೆ ಬಂದಕೂಡಲೆ ಮಾರ್ಗದಲ್ಲಿ ಅಲ್ಲಿಯ ಒಬ್ಬ ನೌಕರನೇ ಹೊರಗೆ ಬಂದು ನೀವು ಇಲ್ಲಿ ಯಾವ ಪದಾರ್ಥ ಕೈಕೊಳ್ಳಬೇಕೆಂದು ಮಾತನಾಡಿದರೋ ಅದೇ ಪದಾರ್ಥಗಳನ್ನು ಇಂಥದೊಂದು ಅಂಗಡಿಗೆ ಹೋದರೆ ತಮಗೆ ನೂರಕ್ಕೆ ೧೫-೨೦ ರೂಪಾಯಿ ಕಡಿಮೆ ಕ್ರಯಕ್ಕೆ ದೊರಕುವದೆಂದು ಹೇಳಿದನು. ಅಲ್ಲಿಗೆ ಹೋದಮೇಲೆ ಈ ಸಂಗತಿಯು ನಿಜವಿದ್ದುದು ಕಂಡುಬಂದಿತು. ವಿಚಾರಣಾಂತ್ಯದಲ್ಲಿ ಮೊದಲನೇ ಅಂಗಡಿಯಲ್ಲಿ ನೌಕರನಾಗಿದ್ದ ವ್ಯಕ್ತಿಯು ಎರಡನೇ ಅಂಗಡಿಕಾರನ ಸಂಬಂಧಿಕನೆಂದು ನಮಗೆ ಗೊತ್ತಾಯಿತು.

ವ್ಯಾಪಾರವು ಜನರು ತಿಳಿದುಕೊಂಡಷ್ಟು ಸುಲಭವಾದುದಲ್ಲ, ಒಮ್ಮೊಮ್ಮೆ ಒಂದು ಕ್ಷುಲ್ಲಕ ತಪ್ಪಿನಿಂದ ಮಹಾ ಅನರ್ಥವನ್ನು ಹೊಂದಬೇಕಾಗುತ್ತದೆ. ಆದರೆ ಮನಸ್ಸುಗೊಟ್ಟು ಕೆಲಸ ಮಾಡುವದರಿಂದ ಮುಂದೆ ಸಾವಕಾಶವಾಗಿ ಎಲ್ಲ ತೊಂದರೆಗಳು ದೂರಾಗಿ ಉನ್ನತಿಯ ಮಾರ್ಗವು ತಾನೇ ಸುಲಭವಾಗುತ್ತದೆ.

❖❖

*

ವಿಷಯಾನುಕ್ರಮಣಿಕೆ

ವ್ಯಾಪಾರದ ಪ್ರಸಿದ್ಧ ಪಟ್ಟಣಗಳ ಪರಿಚಯ

೩೭. ಖೂಷಾಬ
೩೮. ಖೈರಾಬಾದ
೩೯. ಖಾಂಬಾತ ಬಂದರ
೪೦. ಗಯಾ
೪೧. ಗ್ವಾಲಿಯೇರ್
೪೨. ಗುಜರಾನವಾಲಾ
೪೩. ಗೋರಖಪುರ
೪೪. ಗೋಂದಲ
೪೫. ಗೋಹಟ
೪೬. ಜಬಲಪುರಿ
೪೭. ಜಲಗಾಂವ
೪೮. ಚಾಮನಗರಿ
೪೯. ಜೈಪುರ
೫೦. ಡಿಂಡಿಗಲ್ಲ
೫೧. ಡೇರಾ ಇಸ್ಮಾಯಿಲ್
೫೨. ಡಾಕ್ಕಾ
೫೩. ತಾಸಗಾಂವ
೫೪. ತ್ರಿಚನಾಪಳ್ಳಿ
೫೫. ದಿಲ್ಲಿ
೫೬. ನವಸಾರಿ
೫೭. ನವಾಲಪಿಟಿಯಾ
೫೮. ನಾಗಪೂರ
೫೯. ಪಾನಿಪತ
೬೦. ಬೆಜವಾಡ
೬೧. ಬಡೋಚ
೬೨. ಭಾವನಗರ
೬೩. ಮದ್ರಾಸ
೬೪. ಮುಂಬೈ
೬೫. ಯೆವಲಾ
೬೬. ರಂಗೂನ
೬೭. ಶ್ರೀನಗರ

ಕರ್ನಾಟಕದ ಪ್ರಸಿದ್ಧ ವ್ಯಾಪಾರ ಸ್ಥಳಗಳು

೬೮. ಅಥಣಿ
೬೯. ಅರಸಿಕೆರೆ
೭೦. ಅಕ್ಕಲಕೋಟೆ
೭೧. ಇಳಕಲ್ಲ
೭೨. ಉಡುಪಿ
೭೩. ಕಡಪ
೭೪. ಕೋಲಾರ
೭೫. ಗದಗ
೭೬. ತಾಂಡೂರು
೭೭. ತುಮಕೂರು
೭೮. ತಾಳಿಕೋಟೆ
೭೯. ದಾವಣಗೇರಿ
೮೦. ಧಾರವಾಡ
೮೧. ನಿಪ್ಪಾಣೀ
೮೨. ಬ್ಯಾಡಗಿ
೮೩. ಬಾಗಲಕೋಟೆ
೮೪. ಬಿಜಾಪೂರ
೮೫. ಬೀರೂರು
೮೬. ಬೆಳಗಾಂವ
೮೭. ಬೆಂಗಳೂರು
೮೮. ಬಳ್ಳಾರಿ
೮೯. ಮೈಸೂರು

೯೦. ಮಂಗಳೂರು ೯೧. ಸಿರಸಿ
೯೨. ಹಾವೇರಿ ೯೩. ಹುಬ್ಬಳ್ಳಿ
೯೪. ಕಲಬುರ್ಗಿ ೯೫. ರಾಯಚೂರು

ಪ್ರಸಿದ್ಧ ಸಾಮಾನುಗಳ ವ್ಯಾಪಾರಿಗಳು

೧. ಬಟ್ಟೆಯ ವ್ಯಾಪಾರಿಗಳು
೨. ಅಲ್ಯುಮನಿಯಮ್ ತಯಾರಿಸುವವರು ಮತ್ತು ವ್ಯಾಪಾರಿಗಳು
೩. ಕಲ್ಪಿತ ರೇಶ್ಮಿಯ ಬಟ್ಟೆಗಳನ್ನು ತಯಾರಿಸುವವರು
೪. ಬಿಸ್ಕಟ್ ಕಾರ್ಯಾಲಯಗಳು
೫. ಪುಸ್ತಕ ವ್ಯಾಪಾರಿಗಳು
೬. ಬೂಟು ಮೊಚದಚೆಗಳ ವ್ಯಾಪಾರಿಗಳು
೭. ಗುಂಡಿಗಳನ್ನು ತಯಾರಿಸುವವರು
೮. ಜಮಖಾನೆಯ ವ್ಯಾಪಾರಿಗಳು
೯. ಗಡಿಯಾರದ ವ್ಯಾಪಾರಿಗಳು
೧೦. ಔಷಧ ವ್ಯಾಪಾರಿಗಳು
೧೧. ಕಾಫಿ ಕಾರ್ಯಾಲಯಗಳು
೧೨. ಎಲೆಕ್ಟ್ರಿಕ್ ಸಾಮಾನುಗಳ ವ್ಯಾಪಾರಿಗಳು
೧೩. ಫೌಂಡನಪೆನ್ ವ್ಯಾಪಾರಿಗಳು
೧೪. ಕಾಜಿನ ಕಾರ್ಯಾಲಯಗಳು
೧೫. ಕಾಜಿನ ವ್ಯಾಪಾರಿಗಳು
೧೬. ಆನೆಯ ಹಲ್ಲಿನ ಸಾಮಾನುಗಳನ್ನು ತಯಾರಿಸುವವರು
೧೭. ಮುತ್ತು ರತ್ನಗಳ ವ್ಯಾಪಾರಿಗಳು
೧೮. ಖಾದಿ ವ್ಯಾಪಾರಿಗಳು
೧೯. ದೀಪದಕಡ್ಡಿಯ ಕಾರ್ಯಾಲಯಗಳು
೨೦. ಸಂಗೀತ ಉಪಕರಣಗಳ, ಪೋನೋಗಳ ವ್ಯಾಪಾರಿಗಳು
೨೧. ನಿಬ್ಬುಗಳನ್ನು ತಯಾರಿಸುವವರು
೨೨. ಕಾಗದ ವ್ಯಾಪಾರಿಗಳು
೨೩. ಕಾಗದ ಮಿಲ್ಲುಗಳು

೨೪. ಮೋಟಾರಕಾರ ಮಾರುವವರು

೨೫. ಪ್ರಿಂಟಿಂಗ್ ಮಶಿನ್ ಮಾರುವವರು

೨೬. ಚಂದನ ಎಣ್ಣೆಯನ್ನು ತಯಾರಿಸುವವರು

೨೭. ಬಟ್ಟೆ ಹೊಲೆಯುವ ಯಂತ್ರಗಳನ್ನು ಮಾರುವವರು

೨೮. ಶಾಲಿನ ವ್ಯಾಪಾರಿಗಳು

೨೯. ರೇಶಿಮೆಯ ವ್ಯಾಪಾರಿಗಳು

೩೦. ನಾಶಿಪುಡಿಯನ್ನು ತಯಾರಿಸುವವರು

೩೧. ಸಬಕಾರದ ಕಾರ್ಯಾಲಯಗಳು

೩೨. ಮೇಣಬತ್ತಿಯ ವ್ಯಾಪಾರಿಗಳು

೩೩. ಹಂಚು ಮೊದಲಾದ ಮಣ್ಣಿನ ಸಾಮಾನುಗಳ ವ್ಯಾಪಾರಿಗಳು

೩೪. ಚಹಾ ವ್ಯಾಪಾರಿಗಳು

೩೫. ಕಟ್ಟಿಗೆ ಸಾಮಾನಿನ ವ್ಯಾಪಾರಿಗಳು

೩೬. ಬಳೆಗಳ ವ್ಯಾಪಾರಿಗಳು

೩೭. ಕಲ್ಲಿದ್ದಲಿಯ ವ್ಯಾಪಾರಿಗಳು

೩೮. ಸ್ಟೇಶನರಿ ಸಾಮಾನಿನ ವ್ಯಾಪಾರಿಗಳು

೩೯. ಸಕ್ಕರೆಯ ವ್ಯಾಪಾರಿಗಳು

೪೦. ಪೋಷ್ಟಿನ ಸಂಗತಿ

೪೧. ರೇಲ್ವೆ ಸಂಗತಿ

ಸೂಚನೆ : ಕರ್ನಾಟಕದ ವಿನಾ ಬೇರೆ ಕಡೆ ಇಂಗ್ಲೀಷಿನಲ್ಲಿಯೇ ಪತ್ರವ್ಯವಹಾರ ಮಾಡಬೇಕೆಂಬುದನ್ನು ಮರೆಯಬಾರದು.

❖❖

॥ ವಂದೇ ಮಾತರಂ ॥

ವ್ಯಾಪಾರ ಶಿಕ್ಷಕ
ವ್ಯಾಪಾರದ ಪ್ರಸಿದ್ಧ ಪಟ್ಟಣಗಳ ಪರಿಚಯ

---

೧. **ಅಹಮ್ಮದಾಬಾದ : Ahmedabad (B.B & C.I.Ry)**

ಈ ಮುಂಬೈ ಇಲಾಖೆಯಲ್ಲಿ ಮುಂಬೈ ಪಟ್ಟಣದ ತರುವಾಯ ಅಹಮ್ಮದಾಬಾದಪಟ್ಟಣವೇ ಬಹು ದೊಡ್ಡದು. ಇದು ಮುಂಬೈಯಿಂದ ೩೧೦ ಮೈಲುಗಳ ದೂರದಲ್ಲಿ ಸಾಬರಮತಿ ನದಿಯ ದಂಡೆಯ ಮೇಲಿದೆ. ಇಲ್ಲಿ ಸಾಧಾರಣ ಮೂರು ಲಕ್ಷ ಜನಸಂಖ್ಯೆ ಇದೆ.

ಇಲ್ಲಿ ೬೦ ಬಟ್ಟೆಯ ಗಿರಣಿಗಳಿವೆ. ಎಣ್ಣೆ, ಸಬಕಾರ, ಕಾಗದ, ರೇಶಿಮೆ, ಬಟ್ಟೆ, ಲೋಹಗಳ ಪಾತ್ರೆ, ಕಟ್ಟಿಗೆಯ ಸಾಮಾನು, ಕಾಜೀನ ಪದಾರ್ಥಗಳನ್ನು ಮಾಡುವ ಅನೇಕ ಕಾರ್ಯಾಲಯಗಳೂ ಇವೆ.

ಬೆಳೆ ಮತ್ತು ತೂಕ – ಇಲ್ಲಿ ಗೋದಿ, ಎಳ್ಳು, ಔಡಲ, ಹೆಸರು, ಉದ್ದು, ಕಡಲೆ, ಧಾನ್ಯಗಳು ಹೆಚ್ಚಾಗಿ ಬೆಳೆಯುತ್ತವೆ. ೪೦ ರೂ. ಗಳ ತೂಕದ ಒಂದು ಶೇರು, ೪೦ ಶೇರಗಳ ೧ ಮಣ, ರೇಲ್ವೆ ಮೂಲಕ ಇಲ್ಲಿಂದ ಬರುವ ಪದಾರ್ಥಗಳಿಗೆ ನಗರ ಸುಂಕ (ಟಾವುನ್ ಡ್ಯೂಟಿ)ಬೀಳುತ್ತದೆ. ಪಟ್ಟಣದಿಂದ ಸ್ಟೇಶನ್ನಿಗೆ ಒಂದು ಚೀಲಕ್ಕೆ ೪ ಆಣೆ, ವೆಚ್ಚ ಬರುತ್ತದೆ. ನೂರಕ್ಕೆ ೧ ರೂ. ಪ್ರಕಾರ ಇಲ್ಲಿ ದಲಾಲಿಕೊಡಬೇಕಾಗುತ್ತದೆ. ರೈಲ್ವೆ ಮಾರ್ಕ್ (ಎ. ಡಿ. ಜಿ.)

ದಲ್ಲಾಲಿಗಳು – ೧ ಪರಿಭಗನಲಾಲ ಮೋಹನಲಾಲ ಕಾಲಪುರಾ ೨. ಗಾಂಧಿ ಗಣಪತ ರಾಮನಾಥಲಾಲ ನವಾಮಾಧವಪುರಾ ೩. ಚುನಿಲಾಲ ಸುಖಚಂದ ಮಾಣಿಕ್ ಚೌಕ. ೪. ಭಿಕಾಬಾಯಿ ಚುನಿಲಾಲ ಸಾರಂಗಪುರ.

೨. **ಅಕೋಲಾ: Akola (G.I.P.Ry)**

ಈ ಪಟ್ಟಣವು ವರ್‍ಹಾಡ ಜಿಲ್ಲೆಯ ಮುಖ್ಯ ವ್ಯಾಪಾರ ಸ್ಥಳವಾಗಿದೆ. ಇಲ್ಲಿ ಸಾಧಾರಣ ೨೫ ಸಾವಿರ ಜನಸಂಖ್ಯೆ ಇದೆ. ಇಲ್ಲಿ ಅನೇಕ ಜಿನಿಂಗ್ ಫ್ಯಾಕ್ಟರಿ ಪ್ರೆಸ್ಸುಗಳಿವೆ. ಇಲ್ಲಿ ಬಟ್ಟೆಯ ಎರಡು ಕಾರ್ಯಾಲಯಗಳೂ ಮತ್ತು ಎಣ್ಣೆಯ ಎರಡು ಮಿಲ್ಲುಗಳೂ ಇವೆ.

ಬೆಳೆ ಮತ್ತು ತೂಕ : ಇಲ್ಲಿ ಹತ್ತಿ, ಸಜ್ಜೆ, ಉದ್ದು, ಶೆಂಗಾ, ಔಡಲ, ಅಗಸಿ ಮೊದಲಾದವು ವಿಶೇಷವಾಗಿ ಬೆಳೆಯುತ್ತವೆ. ಧಾನ್ಯಗಳ ಬೆಲೆಯು ಅಳತಿ ಖಂಡಿಯ ಮೇಲಿದೆ ಅಳತೆಯ ಒಂದು ಖಂಡಿ ಧಾನ್ಯದ ಭಾರವು ಸುಧಾರಣ ೨೭ ಮಣ ಇರುತ್ತದೆ. ಸ್ಟೇಶನನ್ನಿನಿಂದ ಊರಿಗೆ ದಲ್ಲಾಲಿ ಸಹಿತ ಒಂದು ಚೀಲಕ್ಕೆ ಒಟ್ಟು ೧೦ ಆಣೆ ವೆಚ್ಚ ಬರುತ್ತದೆ. ರೇಲ್ವೆ ಮಾರ್ಕ್ A.K ಇದೆ.

ದಲ್ಲಾಲಿಗಳು : ೧. ಕೇಶವಲಾಲ ಸಾಲಚಂದ. ೨. ಸುಖದೇವ ಚುನಿಲಾಲ. ೩. ಸಾವತಾರಾಮರಾಮ ಪ್ರಸಾದ.

೩. **ಅನಂತಪುರ : Anamtapur (M.S.M.Ry)** ಇದು ಜಿಲ್ಲೆಯ ಮುಖ್ಯ ಸ್ಥಳವು.

ಬೆಳೆ ಮತ್ತು ತೂಕ : ಇಲ್ಲಿ ಜೋಳ, ಶೆಜ್ಜಿ, ಶೇಂಗಾ, ಔಡಲ ಮೊದಲಾದವುಗಳು ಬೆಳೆಯುತ್ತವೆ. ಧಾನ್ಯವನ್ನು ಅಳೆದುಕೊಡುವರು. ಒಂದು ಚೀಲವು ಸಾಧಾರಣ ೨೦೦ ಸೇರುಗಳನ್ನು ಹಿಡಿಯುತ್ತದೆ. ೧೦೦ಕ್ಕೆ ೧ರೂ. ಯಂತೆ ದಲ್ಲಾಲಿ ಕೊಡಬೇಕಾಗುತ್ತದೆ. ಊರಿನಿಂದ ಸ್ಟೇಶನ್ನಿಗೆ ಎರಡುವರಿ ಆಣೆ ವಚ್ಚ ಬರುತ್ತದೆ. ರೇಲ್ವೇ ಮಾರ್ಕ A.T.P.

೪. **ಅಮೃತಸರ : Amritstar (N.W.Ry)**

ಇದು ಪಂಜಾಬ ಪ್ರಾಂತದಲ್ಲಿರುವ ಪ್ರಸಿದ್ಧವ್ಯಾಪಾರ ಸ್ಥಳವಾಗಿದೆ. ಇಲ್ಲಿ ಸಾಧಾರಣ ೧ ಲಕ್ಷ ೮ ಸಾವಿರ ಜನಸಂಖ್ಯೆಯಿದೆ. ಇಲ್ಲಿ ರೇಶ್ಮಿ ಬಟ್ಟೆಗಳನ್ನೂ ಉತ್ತಮವಾದ ಉಣ್ಣಿಯ ಶಾಲುಗಳನ್ನೂ ತಯಾರಿಸುವ ಕೆಲಸವು ಅತ್ಯಧಿಕವಾಗಿ ಜರುಗುತ್ತದೆ. ಇಲ್ಲಿ ಸಿದ್ದವಾದ ಶಾಲುಗಳು ಜಗತ್ತಿನ ಎಲ್ಲ ಕಡೆಗೂ ಮಾರಲಿಕ್ಕೆ ಹೋಗುವವು. ಇದಲ್ಲದೆ ಸಬಕಾರ, ಔಷಧಿ, ಅಲ್ಯೂಮಿನಿಮ್‌ಪಾತ್ರೆ ಎಣ್ಣೆ ಇವೇ ಮೊದಲಾದವುಗಳನ್ನು ತಯಾರಿಸುವ ಅನೇಕ ಕಾರ್ಯಾಲಯಗಳೂ ಇಲ್ಲಿವೆ. ಜರತಾರಿಯು ಕೆಲಸವಾದರೂ ಇಲ್ಲಿ ಬಹಳ ನಡೆಯುತ್ತದೆ. ಇಲ್ಲಿ ಬಂಗಾರದ ದೇವಾಲಯ (ಗೋಲ್ಡನ್ ಟೆಂಪಲ್) ವೆಂಬ ಶೀಖ ಜನಗಳ ಪ್ರಸಿದ್ಧ ದೇವಾಲಯವಿದೆ. ಅಮೃತಸರವೆಂಬ ಹೆಸರಿನ ಕೆರೆಯೂ ಇಲ್ಲಿದೆ. ಇಡೀ ಪಂಜಾಬ ಪ್ರಾಂತದಲ್ಲಿಯೇ ವ್ಯಾಪಾರ್ ಮುಖ್ಯ ಕೇಂದ್ರವಾಗಿದೆ.

ಬೆಳೆ ಮತ್ತು ತೂಕ : ಇಲ್ಲಿ ಹತ್ತಿ, ಗೋದಿ, ಕಡ್ಲಿ, ಬೇಳೆ, ಅಕ್ಕಿ, ಅಕ್ರೋಡ್, ಪಿಸ್ತಾ, ದ್ರಾಕ್ಷಿ, ಬದಾಮಿ ವೊದಲಾದ ಪದಾರ್ಥಗಳು ಬೆಳೆಯುವವು. ಅಕ್ಕಿಯ ಅನೇಕ ಕಾರ್ಯಾಲಯಗಳೂ ಇಲ್ಲಿವೆ. ಅನೇಕ ಜಾತಿಯ ಅಕ್ಕಿಗಳನ್ನು ಸಿದ್ದಗೊಳಿಸುವರು.. ಬಾಸಮತಿ ಎಂಬ ಉತ್ಕೃಷ್ಟವಾದ ಅಕ್ಕಿಯೂ ಇಲ್ಲಿ ಸಿದ್ದವಾಗುತ್ತದೆ. ೮೦ ರೂ. ಗಳ

ತೂಕದ ಒಂದು ಸೇರು. ೪೦ ಸೇರುಗಳ ಒಂದು ಮಣವು, ಚಹಾ ವ್ಯಾಪಾರವಾದರೂ ಇಲ್ಲಿ ದೊಡ್ಡ ಪ್ರಮಾಣದಿಂದ ನಡೆಯುತ್ತದೆ. ರೇಲ್ವೆ ಮಾರ್ಕ್ A.S.R.

ದಲ್ಲಾಲಿಗಳು : ೧. ಆಶಾನಂದ ಆ್ಯಂಡ್ ಸನ್ಸ್ ಕಮೀಶನ್ ಏಜೆಂಟ್ ೨. ಮಥುರಲಾಲ ಶ್ರೀಪಾಲ ಆ್ಯಂಡ್ ಸನ್ಸ್ ಕಟರಾ. ೩. ಹರಿನಾಮಸಿಂಗ ರತನಸಿಂಗ ಕನಕಮಂಡಿ ೪. ರಾಧಾಕಿಶನ್ ಮಣೀರಾಮ ಥಾಬ ಬಸ್ತೀರಾಮ.

೫. **ಅಲೀಗಡ : Aligarh (O.&R.and E I Ry)**

ಇದು ಓ, ಆ್ಯಂಡ್ ಆರ್ ಮತ್ತು ಇ. ಆಯ್. ರೇಲ್ವೆಗಳ ಜಂಕ್ಷನ್ ಸ್ಟೇಶನ್ ಇರುತ್ತದೆ. ಇಲ್ಲಿ ಸಾಧಾರಣ ೬೩-೬೪ ಸಾವಿರ ಜನಸಂಖ್ಯೆ ಇರುತ್ತದೆ. ಇಲ್ಲಿ ಉತ್ತಮವಾದ ಬೆಣ್ಣೆಯನ್ನು ತಯಾರಿಸುವ ಅನೇಕ ಕಾರ್ಯಲಯ(dairy forms)ಗಳಿರುತ್ತವೆ. ಇಲ್ಲಿ ಕಬ್ಬಿಣ ಮತ್ತು ಹಿತ್ತಾಳೆಗಳಿಂದ ತರತರದ ಕೀಲಿಗಳನ್ನು ತಯಾರಿಸುವ ಕಾರ್ಯಾಲಯಗಳೂ ಇವೆ. ಇಲ್ಲಿಯ ಸಾಸಿವೆ, ತುಪ್ಪಗಳಾದರೂ ಪ್ರಸಿದ್ಧವುಂಟು.

ಬೆಳೆ ಮತ್ತು ತೂಕ : ತೊಗರಿ, ಸಜ್ಜೆ, ಕಡ್ಡಿ, ಗೋಧಿ, ಶೇಂಗಾ, ಮೆಂತೆ, ಉದ್ದು, ಎಣ್ಣೆಯ ಕಾಳುಗಳೇ ಮೊದಲಾದವುಗಳು ಬೆಳೆಯುವವು. ಒಣಗಿದ ರುಚಿಕರ ಪದಾರ್ಥಗಳನ್ನೂ ಸಿದ್ದಗೊಳಿಸುವರು. ೮೦. ರೂ. ಗಳ ತೂಕದ ಒಂದು ಸೇರು ೪೦ ಸೇರುಗಳ ಒಂದು ಮಣ. ದಲ್ಲಾಲಿಯನ್ನು ಬಿಟ್ಟರೆ ಸ್ಟೇಶನಕ್ಕೆ ಒಂದು ಚೀಲಕ್ಕೆ ನಾಲ್ಕು ಆಣೆ ವೆಚ್ಚ ಬರುತ್ತದೆ. ಇಲ್ಲಿ ಮುಸಲ್ಮಾನರ ಕಾಲೇಜು ಮತ್ತು ಯುನಿವ್ಹರ್‌ಸಿಟಿಗಳು ನೋಡತಕ್ಕವುಗಳಾಗಿವೆ. ರೇಲ್ವೆಮಾರ್ಕ್ A.L. ಸ್ಟೇಶನ್ ಹತ್ತಿರದಲ್ಲಿಯೇ ಎರಡು ಧರ್ಮಶಾಲೆಗಳಿವೆ.

ದಲ್ಲಾಲಿಗಳು : ತೋಲಾರಾಮ ಹಜಾರಿಮಲ್ಲ, ಕಿನಾರಿಗಂಜ. ೨. ಮದನಲಾಲ ರಾಮಚಂದ್ರ, ರಾಮಗಂಜ. ೩. ಗೋವಿಂದರಾಜು ಪ್ಯಾರೆಲಾಲ ಕಲ್ಯಾಣಗುಂಜ ೪. ಮೋಹನಲಾಲ ಬಾಬುರಾಮ ಇಸುಫಗಂಜ.

೬. **ಅಲಹಾಬಾದ್ : Allahabad (E.I.Ry.O & Ry B.N. W. Ry)**

ಇದು ಜಿಲ್ಲೆಯ ಮುಖ್ಯವಾದ ಸ್ಥಳವಾಗಿದೆ. ಇಲ್ಲಿ ಸಾಧಾರಣ ೧ ಲಕ್ಷ ೬೫ ಸಾವಿರ ಜನಸಂಖ್ಯೆಯಿದೆ. ಇದು ಈ. ಆಯ್. ರೇಲ್ವೆ ಜೀ. ಆಯ್. ಪಿ. ರೇಲ್ವೆ ಮತ್ತು ಬಿ. ಎನ್. ಡಬ್ಲ್ಯು, ರೇಲ್ವೆಗಳ ದೊಡ್ಡ ಜಂಕ್ಶನ್‌ವಾಗಿದೆ. ಈ ಪಟ್ಟಣವು ಗಂಗಾ ಮತ್ತು ಯಮುನಾ ನದಿಗಳ ಸಂಗಮದಲ್ಲಿರುವದರಿಂದ ಹಿಂದುಗಳು ಪವಿತ್ರಕ್ಷೇತ್ರವೆಂದು ತಿಳಿಯುತ್ತಾರೆ. ಇಲ್ಲಿ ೧೨ ವರ್ಷಗಳಿಗೊಮ್ಮೆ ಕುಂಭಮೇಳವು ಸೇರುವುದು. ಆಗ ಭರತಖಂಡದ ಎಲ್ಲ ಭಾಗಗಳಿಂದಲೂ ಅನೇಕ ಹಿಂದುಗಳು ಬರುವರು. ಇಲ್ಲಿ ಹಿಟ್ಟಿನ ಮತ್ತು ಎಣ್ಣೆಯ ಅನೇಕ ಕಾರ್ಯಾಲಯಗಳಿರುತ್ತವೆ.

ಬೆಳೆ ಮತ್ತು ತೂಕ : ಗೋಧಿ, ತೊಗರಿ, ಕಡ್ಲಿ, ಸಜ್ಜೆ, ಶೇಂಗಾ, ಉದ್ದು, ಎಳ್ಳು, ಚನ್ನಂಗಿ, ಔಡಲ, ಅಗಸಿ, ಮೊದಲಾದ ಧಾನ್ಯಗಳು ಬೆಳೆಯುತ್ತವೆ ೮೦ ರೂ. ಗಳ ತೂಕದ

ಒಂದು ಸೇರು. ೪೦ ಸೇರುಗಳ ಒಂದು ಮಣ. ಪ್ರತಿಯೊಂದು ಮಾಲಿನ ಮೇಲೆಯೂ ನೂರಕ್ಕೆ ೧೨ ಅಣೆಯಂತೆ (ತೋಲಾಯಿ) ಇರುತ್ತದೆ. ಊರಿಂದ ಸ್ಟೇಶನಕ್ಕೆ ಒಂದು ಧಾನ್ಯದ ಚೀಲಕ್ಕೆ ೩ ಅಣೆ ವೆಚ್ಚ ಬರುತ್ತದೆ. ರೇಲ್ವೆ ಮಾರ್ಕ (E.I.Ry) A.L.D.(B.N.W. Ry A. L. Y)

ದಲ್ಲಾಲಿಗಳು : ೧. ಕಸ್ತೂರಿಚಂದ ಮಣೀಲಾಲ ೨. ಪಿತಾಂಬರಲಾಲ. ಜಗನ್ನಾಥ ೩. ದ್ವಾರಕಾದಾಸ ಬಿಹಾರಿಲಾಲ ಮುಹಿಗಂಜ. ೪. ರಾಧಕಿಶನ್ ಬನೆಪ್ರಸಾದ ಮುಹೀಗಂಜ.

೭. **ಅಲಪಾಯಿ : Allppey (S.I.Ry)**

ಈ ಪಟ್ಟಣವು ತ್ರಾವಣಕೋರ ಸಂಸ್ಥಾನದಲ್ಲಿ ಮುಖ್ಯ ಬಂದರವಿದೆ. ಸುಧಾರಣ ೨೦-೨೫ ಸಾವಿರ ಜನಸಂಖ್ಯೆಯಿದೆ. ಇಲ್ಲಿಂದ ಅಮೇರಿಕಾ, ಸಿಲೋನ್, ಕಾನಡಾ ಮೊದಲಾದ ದೇಶಗಳಿಗೆ ೧೧೯ ಲಕ್ಷ ರೂ. ಗಳ ತೆಂಗಿನ ನಾರಿನಿಂದ ಸಿದ್ದಗೊಳಿಸಿದ ಸಾಮಾನುಗಳೂ, ೫೩ ಲಕ್ಷ ರೂ. ಗಳ ಮೆಣಸೂ, ೧೭ ಲಕ್ಷ ರೂ. ಗಳ ಕಚ್ಚಾ ರಬ್ಬರವೂ,(Raw rubber) ೫ ಲಕ್ಷರೂ. ಗಳ ಚಹಾವೂ ಹೋಗುತ್ತದೆ. ಈ ಪಟ್ಟಣಕ್ಕೆ ಎರನಾಕುಲಂ ಮತ್ತು ಕ್ವಿಲೋನ್‌ಬಂದರ ಸ್ಟೇಶನ್ನುಗಳು ಸಮಿಪದಲ್ಲಿವೆ. ಇಲ್ಲಿಯ ಪದಾರ್ಥಗಳಿಗೆ ಅವುಟ್‌ಏಜನ್ಸಿ ಇದೆ.

ಬೆಳೆ ಮತ್ತು ತೂಕ : ತೆಂಗು, ಕೊಬ್ಬರಿ, ಮೆಣಸು, ಶುಂಟಿ ಚಹಾ, ಕಾಫಿ ಜಾಯಪತ್ರೆ, ರಾಮಪತ್ರೆ, ಜಾಜಿಕಾಯಿ ಮೊದಲಾದವುಗಳು ಬೆಳೆಯುತ್ತವೆ. ಇದಲ್ಲದೆ ಕಟ್ಟಡದ ಕಟ್ಟಿಗೆಗಳಾದರೂ ವಿಶೇಷ ದೊರೆಯುತ್ತದೆ. ಇಲ್ಲಿ ಬಟ್ಟೆಯ ಕಾರ್ಯಾಲಯವಿದೆ. ಕೊಬ್ಬರಿಗೆ ೬೫೫ ರತ್ತಲಿನ ಖಂಡಿಯ ಮೇಲೆ ಧಾರಣೆ ಇದೆ ಮೆಣಸು ೨೮ ರತ್ತಲಿನ ಒಂದು ಮಣ. ೨೪ ಮಣದ ಖಂಡಿಯ ಮೇಲೆ ಬೇರೆ ಇದೆ. ಕೊಬ್ಬರಿಯ ಮೇಲೆ ೬ ರಂತೆ ಬಟ್ಟಾ ದೊರೆಯುತ್ತದೆ.

ದಲ್ಲಾಲಿಗಳು : ೧. ಧರಮಸಿ ವಾಘಜಿ ೨. ಲಕ್ಷ್ಮೀದಾಸ ತೇರಸಿ ೩. ರಣಛೋಡ ನಾನಜಿ ೪. ವಲ್ಲಭದಾಸ ಜಾಧವಜಿ.

೮. **ಅಜಮೀರ : Ajmer (B.B.&C.I.Ry)**

ಇದು ಮುಂಬೈಯಿಂದ ೬೧೫ ಮೈಲಿನ ಮೇಲಿರುವ ಮಾರವಾಡ ಪ್ರಾಂತದಲ್ಲಿಯ ಅಜಮೀರ ಜಿಲ್ಲೆಯ ಮುಖ್ಯಸ್ಥಳವು. ಇಲ್ಲಿ ಸುಧಾರಣವಾಗಿ ೭೫೦೦೦ ಜನರಿರುವರು. ಇಲ್ಲಿ ಬಟ್ಟೆಯ ಕೆಲಸವು ಬಹಳ ನಡೆಯುತ್ತದೆ. ಈ ಪಟ್ಟಣವು ಮುಸಲ್ಮಾನರ ಪವಿತ್ರ ಸ್ಥಳವು ಪಟ್ಟಣದ ನಾಲ್ಕು ಕಡೆಗೂ ಕೋಟೆಯಿದೆ.

ಬೆಳೆ ಮತ್ತು ತೂಕ : ಜೋಳ, ಸಜ್ಜೆ, ಗೋಧಿ, ಹತ್ತಿ, ಉದ್ದು, ಕಡ್ಲಿ, ಜೀರಗಿ ಮೊದಲಾದವುಗಳು ಬೆಳೆಯುತ್ತವೆ. ೮೦ ರೂ. ಗಳ ಭಾರಕ್ಕೆ ಒಂದು ಸೇರು. ೪೦ ಸೇರುಗಳಿಗೆ ಒಂದು ಮಣ. ರೇಲ್ವೆ ಮಾರ್ಕ್. **(A.L.L)**

ದಲ್ಲಾಲಿಗಳು : ೧. ಕೇಶವದಾಸ ಜೋಯಿತರಾಮ. ೨. ಬಾಲಚಂದ ಅಮರಚಂದ. ೩. ರಾಮನಾಥ ಶಿವಪ್ರಸಾದ ೪. ಜೇಠಮಲ್ ನಂದಿರೆಶೋರ್.

೯. **ಅಮರಾವತಿ : Amarvati (G.I.P.Ry)**

ಇದು ವರ್ಹಾಡ ಪ್ರಾಂತದಲ್ಲಿಯ ಜಿಲ್ಲೆಯ ಮುಖ್ಯಸ್ಥಳವು. ಸಾಸಿವೆಯ ವ್ಯಾಪಾರವು ಇಲ್ಲಿಯೇ ಅಧಿಕವಾಗಿ ಜರುಗುತ್ತದೆ. ಈ ಪಟ್ಟಣದ ಜನ ಸಂಖ್ಯೆಯು ೨೦೦೦೦. ಇದೆ. ಇಲ್ಲಿ ಸಾಧಾರಣ ೨೫ ಜಿನಿಂಗ್ ಫ್ಯಾಕ್ಟರಿಗಳೂ ೧೫ ಪ್ರೆಸ್ಸುಗಳೂ ಇವೆ. ಪಟ್ಟಣದ ಸಮೀಪದಲ್ಲಿಯೇ ೨೬ ಅಡಿ ಎತ್ತರವುಳ್ಳ ಗೋಡೆಯಿದೆ.

ಬೆಳೆಯು ಮತ್ತು ತೂಕ : ಇಲ್ಲಿ ತೊಗರಿ, ಸಜ್ಜೆ, ಹತ್ತಿ ಮೊದಲಾದ ಸಾಮಾನುಗಳು ಬೆಳೆಯುವವು. ೨೮ ರತ್ತಲಿನ ಒಂದು ಮಣ. ೨೮ ಮಣಗಳ ಒಂದು ಖಂಡಿಯ ಮೇಲೆ ಲೆಕ್ಕವಿದೆ. ರೇಲ್ವೆ ಮಾರ್ಕ A.M.I

ದಲ್ಲಾಲಿಗಳು : ೧. ಪನ್ನಾಲಾಲ ಶಿವನಾರಾಯಣ ೨. ದೇವಜಿ ನಾರಾಯಣ. ೩. ಹರನಾರಾಯಣ ಸೋಮೇಶ್ವರ ೪. ದೀಪಚಂದ ನಥಮಲ್.

೧೦. **ಅಹರೌರ : Ahraura (E.I.P.Ry)**

ಇದು ಸ್ಟೇಶನ್ನದಿಂದ ಸಾಧಾರಣ ೧೪-೧೫ ಮೈಲು ದೂರದಲ್ಲಿದೆ. ಸಂಯುಕ್ತ ಪ್ರಾಂತದಲ್ಲಿಯ ಮಿರ್ಜಾಪುರ ಡಿಸ್ಟ್ರಿಕ್ಟಿನಲ್ಲಿದೆ. ಇಲ್ಲಿ ಸಕ್ಕರೆಯನ್ನೂ, ಮೆರುಗೆಣ್ಣೆಯನ್ನೂ ತಯಾರಿಸುವರಲ್ಲದೆ ರೇಶಿಮೆಬಟ್ಟೆಯ ವ್ಯಾಪಾರವಾದರೂ ಚೆನ್ನಾಗಿ ನಡೆಯುತ್ತದೆ.

ಬೆಳೆ ಮತ್ತು ತೂಕ : ಇಲ್ಲಿ ಕುಸುಬಿ, ಸಜ್ಜೆ, ಗೋಧಿ ಎಳ್ಳು, ಉದ್ದು, ವಜ್ರ, ಚೆಂದನ, ನೆಲ್ಲಿಕಾಯಿ, ಸಣ್ಣ ನೆಲ್ಲಿಕಾಯಿ, (ಗೋರೋಜನ ಮುರುಡ ಶಿಂಗೀ, ಪೀತಪಾಪಡ, ಇಂದ್ರಜವ) ಮೊದಲಾದವುಗಳು ದೊರೆಯುವವು. ೯೨ ರೂ. ಗಳ ಭಾರಿನ ಒಂದು ಸೇರು ೪೦ ಸೇರುಗಳು ಒಂದು ಮಣ. ಕಟ್ಟಿಗೆಯ ಬಣ್ಣದ ಸಾಮಾನುಗಳೂ ತಯಾರಾಗುವುವು. ಬಂಗಾಲೀ ಒಂದು ಮಣಕ್ಕೆ ಸ್ಟೇಶನಕ್ಕೆ ಮುಟ್ಟಿಸುವ ವೆಚ್ಚವು ಸಾಧಾರಣ ೩. ಆಣೆ ಬರುತ್ತದೆ. ರೇಲ್ವೆ ಮಾರ್ಕ A.R.W.

ದಲ್ಲಾಲಿಗಳು : ೧: ದೇದರನಾಥ ದೇವಿಪ್ರಸಾದ ೨. ಬಂಧುಲಾಲ ಜಗನ್ನಾಥಸಿಂಹ.

೧೧. **ಅಣಕಾಪಲಿ : Anakapally (M.S.M.Ry)**

ಇಲ್ಲಿ ಬೆಲ್ಲದ ವ್ಯಾಪಾರವು ಅಧಿಕವಾಗಿ ಜರುಗುತ್ತದೆ. ಪೆನ್ಸಿಲ್‌ಗಳನ್ನು ತಯಾರಿಸುವ ಒಂದು ಕಾರ್ಯಾಲಯವೂ ಇಲ್ಲಿದೆ. ರೇಲ್ವೆ ಮಾರ್ಕ್ A.K.P.

೧೨. **ಅಹಮ್ಮದ ನಗರ :** ಈ ಪಟ್ಟಣವು ಜಿಲ್ಲೆಯ ಮುಖ್ಯ ಸ್ಥಳವು. ಇಲ್ಲಿ ಸಾಧಾರಣ ೪೦,೦೦೦ ಜನ ಸಂಖ್ಯೆ ಇದೆ. ಪಟ್ಟಣದ ಸುತ್ತಲೂ ಕೋಟೆಯಿದೆ. ಕ್ರೈಸ್ತ ಜನರ ಮಹತ್ವದ ಮಿಶನ್ ಇದೆ. ಇಲ್ಲಿ ಜಮಖಾನೆಗಳನ್ನು ತಯಾರಿಸುವ ಕಾರ್ಯಾಲಯವೂ, ನೇಯುವ

ವಿದ್ಯಾಲಯವೂ ಇವೆ. ಇಲ್ಲಿ ಸೀರಿಗಳನ್ನು ನೇಯುವದೂ ಹಿತ್ತಾಳೆಯ ಪಾತ್ರೆಗಳನ್ನು ತಯಾರಿಸುವದೂ ಮೊದಲಾದವುಗಳೇ ಅಧಿಕವಾಗಿ ನಡೆಯುತ್ತವೆ.

ಬೆಳೆ ಮತ್ತು ತೂಕ : ಜೋಳ, ಗೋಧಿ, ಸಜ್ಜಿ, ಕಾರೆಳ್ಳು, ಹತ್ತಿ, ಬೆಲ್ಲ, ಕಡ್ಲಿ. ಮೆಣಸಿನಕಾಯಿ, ಉದ್ದು ಮೊದಲಾದವುಗಳು ಬೆಳೆಯುತ್ತವೆ ರೇಲ್ವೆ ಮಾರ್ಕ. A.N.G.

ದಲ್ಲಾಲಿಗಳು : ೧. ಪೇಮರಾಜ ಪನ್ನಾಲಾಲ ೨. ಮೋತಿರಾಮ್ ರತನಚಂದ. ೩. ಹಣಮಂತರಾಮ ಕೇಶುರಾಮ. ೪. ಗಣಪತಬಾಬುಶೇಟ ೫. ದೌಲತರಾಮ ಬುಶಾಳಚಂದ.

೧೩. **ಅಝೀಮಗಂಜ : Azimgani (E.I.Ry)**

ಇಲ್ಲಿ ರೇಶಮಿ ಬಟ್ಟೆಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತದೆ. ಆನೆಯ ಹಲ್ಲಿನ ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ.

ಬೆಳೆ ಮತ್ತು ತೂಕ : ಗೋಂಜಾಳ, ಚನ್ನಂಗಿ, ಉದ್ದು, ಗೋದಿ, ಕಡ್ಲಿ, ಅಕ್ಕಿ ಮೊದಲಾದ ಧಾನ್ಯಗಳೂ ಬೆಳೆಯವುವು. ೮೨ ರೂ. ಗಳ ಭಾರದ ಒಂದು ಶೇರು ೪೦ ಶೇರುಗಳ ಒಂದು ಮಣ, ರೇಲ್ವೆ ಮಾರ್ಕ A. Z.

ದಲ್ಲಾಲಿಗಳು : ೧. ಗಣೇಶಲಾಲ ಶೇಠಮಲ್, ಹರಕಚಂದ ಬಾಲಚಂದ.

೧೪. **ಅಮರೇಲಿ : Amareli (G..I.P.Ry)**

ಇಲ್ಲಿ ಉಟ್ಟುಕೊಳ್ಳುವ ಮತ್ತು ಹೊದ್ದುಕೊಳ್ಳುವ ಉತ್ತಮವಾದ ಉಣ್ಣೆಯ ಬಟ್ಟೆಗಳು ಅಧಿಕವಾಗಿ ಸಿದ್ಧವಾಗುತ್ತವೆ. ರೇಲ್ವೇ ಮಾರ್ಕ A. E.

ದಲ್ಲಾಲಿಗಳು : ೧. ಭೀಮಜಿ ಕಾಸಮುನಿಕಂ ೨. ಹರಜೀವನ ನಾರಾಯಣ.

೧೫. **ಅಂಬಾಜಿಪೇಟೆ : Ambaji Pet (M.S.M.Ry)**

ಇದು ಕೋಕನಾಡ್ ಜಿಲ್ಲೆಯಲ್ಲಿ ಇದೆ. ರಾಜಮಹೇಂದ್ರಿ ಸ್ಟೇಶನ್ನವು ಸಮೀಪವಿರುತ್ತದೆ. ರಾಜಮಹೇಂದ್ರಿಯ ರೇಲ್ವೆ, ಮಾರ್ಕ R.D.Y.

ಬೆಳೆ ಮತ್ತು ತೂಕ : ತೆಂಗು, ಕೊಬ್ಬರಿ, ಅಡಕಿ, ಅರಿಸಿಣ ಮೊದಲಾದವುಗಳು ಇಲ್ಲಿ ಬೆಳೆಯುತ್ತವೆ ೧೦೫೦ ತೆಂಗಿನ ಮೇಲೆ ಧಾರಣಿ ಇದೆ. ಕೊಬ್ಬರಿಯನ್ನು ೨೫ ರತ್ತಲಿನ ಒಂದು ಮಣದ ಮೇಲೆ ಧಾರಣಿ ಇದೆ.

ದಲ್ಲಾಲಿಗಳು : ೧. ಜಗನ್ನಾಥ ಚುನಿಲಾಲ ೨. ಆಶಾರಾಮ ಸದಾಶಿವ ೩. ಅದೇಪ್ರಲ್ಲಿ ಶೇಷ್ಯಾ.

೧೬. **ಆಗ್ರಾ : Agar (B.B.& C.I.Ry) E.I.Ry. and G.I.P.Ry**

ಈ ಪಟ್ಟಣವು ಮುಂಬಯಿ ನಗರದಿಂದ ೭೭೫ ಮೈಲುಗಳ ದೂರದಲ್ಲಿದೆ. ಇದು ಜಿಲ್ಲೆಯ ಮುಖ್ಯ ಸ್ಥಳವು. ರಾಜಪುತಾನಾ ಸಂಸ್ಥಾನಗಳ ಗಡಿನಾಡಿನಲ್ಲಿರುವುದರಿಂದ

ಧಾನ್ಯ ಮೊದಲಾದವುಗಳ ವ್ಯಾಪಾರದ ಕೇಂದ್ರವಾಗಿದೆ. ಸಾಧಾರಣ ಇಲ್ಲಿ ಒಂದು ಲಕ್ಷ ೨೫ ಸಾವಿರ ಜನರಿದ್ದಾರೆ. ಶಹಾಜಾನ ಕಟ್ಟಿಸಿದ ಜಗತ್ಪ್ರಸಿದ್ಧವಾದ ತಾಜಮಹಾಲವೆಂಬ ರಮಣೀಯವಾದ ಕಟ್ಟಡವು ಇಲ್ಲಿಯೇ ಇದೆ.

ಬೆಳೆ ಮತ್ತು ತೂಕ : ಹತ್ತಿ, ಗೊಂಜೋಳ, ಕಡ್ಲಿ, ಬೇಳೆ, ಹೆಸರು ಎಳ್ಳು, ಔಡಲ, ಅಗಸಿ, ಮೆಂತೆ, ಗೋಧಿ, ಸಜ್ಜೆ ಮೊದಲಾದವುಗಳು ಬೆಳೆಯುವವು. ಇಲ್ಲಿ ಬಂಗಾರ, ಬೆಳ್ಳಿ ಮತ್ತು ಕಲ್ಲಿನ ಸೂಕ್ಷ್ಮವಾದ ನಕ್ಷೆಯ ಕೆಲಸವು ಇವೇ ಮೊದಲಾದವುಗಳನ್ನು ಸಿದ್ದಗೊಳಿಸುವ ಕಾರ್ಯಾಲಯಗಳು ಇವೆ. ರೇಲ್ವೆ ಮಾರ್ಕ **A. G. A.**

ದಲ್ಲಾಲಿಗಳು : ೧. ಕನ್ಯಾಲಾಲ ಮುಲಚಂದ, ಬೆಲನಗಂಜ, ೨. ಚುನಿಲಾಲ ವುಜಲಾಲ, ನಯಾಗಂಜ, ೩. ಶಾಂತಿಲಾಲ ಸಾಕರಚಂದ ರಾವ ತಪಾಡಾ ೪. ಪುರುಷೋತ್ತಮ ಮಖನಲಾಲ ಫಿಲಿಪ್‌ಗಂಜ ೫. ಕಾಂತೀಲಾಲ ತ್ರಿಭುವನದಾಸ ಕಛೇರಿ ಘಾಟ್.

೧೭. **ಉಜ್ಜಿನಿ : Ujjina (B.B.& C.I.P.Ry)**

ಬೆಳೆ ಮತ್ತು ತೂಕ : ಇಲ್ಲಿ ಗೂದಿ, ಎಳ್ಳು, ಖಸಖಸಿ, ಶೇಂಗಾ, ಮೇಂತೆ, ಮೊದಲಾದವುಗಳು ಬೆಳೆಯುತ್ತವೆ. ತೂಕ ೮೦ ತೊಲಿಯ ಶೇರು ೪೦ ಶೇರಿನ ಮಣ, ಧಾನ್ಯಗಳ ಕ್ರಯವು ೬ ಮಣಗಳಿಗೆ ಕೂಡಿರುತ್ತದೆ. ಒಂದು ಚೀಲಕ್ಕೆ ಸ್ಟೇಶನ್ನಿಗೆ ೩ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಲಿಯು ಧಾನ್ಯಾದಿಗಳಿಗಾಗಿ ನೂರಕ್ಕೆ ೧ ರೂ. ಹತ್ತಿಗೆ ನೂರಕ್ಕೆ ೮ ಆಣೆ. ಇಲ್ಲಿ ಅನೇಕ ಜಿನ್ನಿಂಗ ಫ್ಯಾಕ್ಟರಿಗಳಿವೆ. ಗಿರಣಿಗಳು ಕೂಡಾ ಇವೆ. ಇಲ್ಲಿ ಗುಲಕಂದ ಮತ್ತು ಸುಗಂಧ ತೈಲಗಳು ಸಿದ್ದವಾಗುತ್ತವೆ. ರೇಲ್ವೆ ಮಾರ್ಕ U.G.N.

ದಲ್ಲಾಲಿಗಳು : ೧. ಶಾ ಚುನಿಲಾಲ ಛಗನಲಾಲ ೨. ಗೋವರ್ಧನದಾಸ ಛೋಟಾಲಾಲ ೩. ಭಾಯಿಲಾಲ ರಾಯಚಂದ ೪. ಶ. ಚಿಮನಲಾಲ ಮಣಿಲಾಲ.

೧೮. **ಕರಾಚಿ : Karachi (N.W.Ry)**

ಇದು ಹಿಂದೂಸ್ಥಾನದಲ್ಲಿ ಒಂದು ದೊಡ್ಡ ಬಂದರವಾಗಿದೆ. ಇಲ್ಲಿ ಒಂದು ಲಕ್ಷ ಜನಸಂಖ್ಯೆಯುಂಟು, ಇಲ್ಲಿಗೆ ಸಿಂಧ, ಪಂಜಾಬ, ಮಾರವಾಡ ದೇಶಗಳಿಂದ ನಾನಾ ಪಧಾರ್ಥಗಳು ಬಂದು ಪರದೇಶಗಳಿಗೆ ಹೋಗುತ್ತವೆ. ಇಲ್ಲಿ ಎಲ್ಲ ತರದ ವ್ಯಾಪಾರವೂ ದೊಡ್ಡ ಪ್ರಮಾಣದಲ್ಲಿ ಜರುಗುತ್ತವೆ.

ಬೆಳೆ ಮತ್ತು ತೂಕ : ಮೆಣಸಿನಕಾಯಿ, ಹತ್ತಿ, ಉತ್ತತ್ತಿ, ಬತ್ತ ಮೊದಲಾದವುಗಳು ಬೆಳೆಯುತ್ತವೆ. ೯೦ ತೊಲೆಯ ಶೇರು. ೪೦ ಶೇರುಗಳ ಮಣ, ಧಾನ್ಯಗಳ ಬೆಲೆಯು ೮ ಮಣಗಳ ೧ ಖಂಡಿಗೆ ಹೇಳುವ ರೂಢಿಯಿದೆ. ಇಲ್ಲಿ ಕಾಜಿನ ಕಾರ್ಯಾಲಯಗಳಿವೆ. ನಾನಾತರದ ಕಾಜುಗಳು ಇಲ್ಲಿ ಉಂಟಾಗುತ್ತವೆ. ಸ್ಟೇಶನ್ನಿಗೆ ಒಂದು ಚೀಲಕ್ಕೆ ೨ ಆಣೆ ವೆಚ್ಚ ಬರುತ್ತದೆ.

ದಲ್ಲಾಲಿಗಳು : ೧. ದಾತಾರಾಮ ಮುನಸಿರಾಮ ಸರಾಯರೋಡ. ೨. ರಘುನಾಥದಾಸ ಕಲ್ಯಾಣದಾಸ ಸರಾಯರೋಡ ೩. ನಾರಾಯಣ ದಾಸ ಲೋಕಚಂದ.

೧೯. **ಕಾಲಿಕಟ್ : Calicut (S.I.Ry)**

ಇದು ಮಲಬಾರ ಪ್ರಾಂತದಲ್ಲಿ ಬಹುದೊಡ್ಡ ವ್ಯಾಪಾರ ಸ್ಥಳವು ಇಲ್ಲಿ ೮೨ ಸಾವಿರ ಜನಸಂಖ್ಯೆಯಿದೆ.

ಬೆಳೆ ಮತ್ತು ತೂಕ : ಶುಂಠಿ, ತೆಂಗು, ಯಾಲಕ್ಕಿ, ಅರಿಶಿನ, ಭತ್ತ ಇವು ಹೆಚ್ಚಾಗಿ ಬೆಳೆಯುತ್ತವೆ. ೨೫ ಪೌಂಡುಗಳ ಒಂದು ಮಣ ಮತ್ತು ೨೦ ಮಣಗಳ ಒಂದು ಖಂಡಿ. ದಲ್ಲಾಲಿಯು ನೂರಕ್ಕೆ ೩ ರೂ. ಗಳವರೆಗೂ ಇದೆ. ಇಲ್ಲಿ ಒಂದು ನೂಲಿನ ಗಿರಣಿಯೂ ಇದೆ. ಒಂದು ಚೀಲಕ್ಕೆ ಸ್ಟೇಶನ್ನಿಗೆ ೧ ಅಣೆ ಕೂಲಿ ಬೀಳುತ್ತದೆ. ರೇಲ್ವೆ ಮಾರ್ಕ. C.L.T.

ದಲ್ಲಾಲಿಗಳು : ಗುಜರಾತಿ ಬಜಾರ ೧. ಬಿ. ಎಸ್. ತ್ರಿಪುರಾಂತಕ ಮೊದಲಿಯರ್. ೨. ಜಿ. ಚಕ್ರಪಾಣಿ ಶೆಟ್ಟಿಯರ್ ೩. ಶೇಟ ನಾಗಜಿ ಪುರುಷೋತ್ತಮ ೪. ಅಬದುಲ್ ಕರೀಮ್ ದಾವುದ್.

೨೦. **ಕದಿರಿ : Kadiri (M.S.M.Ry)**

ಬೆಳೆ ಮತ್ತು ತೂಕ : ಇಲ್ಲಿ ಜೋಳ, ಸಜ್ಜೆ, ಶೆಂಗಾ, ಎಣ್ಣೆ, ಭತ್ತ, ಔಡಲ, ಮೆಣಶಿನಕಾಯಿ, ಕಬ್ಬು, ತಂಬಾಕು, ಇವು ಹೆಚ್ಚಾಗಿ ಬೆಳೆಯುತ್ತವೆ. ಇಲ್ಲಿ ಎರಡು ಪ್ರಕಾರದ ತೂಕಗಳಿವೆ. ೯೬೦ ರೂ. ಗಳ ತೂಕದ ಮಣ ಬೇರೆ ೧೧೫೨ ರೂ. ತೂಕಗಳ ಮಣ ಬೇರೆ.. ಶೆಂಗಾ ೧೦೦೮ ರೂ. ಗಳ ತೂಕಕ್ಕೂ ಮೆಣಶಿನಕಾಯಿ ೧೧೫೨ ರೂ. ಗಳ ತೂಕಕ್ಕೂ ಮಣವೆನ್ನುತ್ತಾರೆ.

ಇಲ್ಲಿ ಮೆಣಶಿನಕಾಯಿಯ ಸುಗ್ಗಿಯು ಕಾರ್ತಿಕದಲ್ಲಿಯು ಬೆಲ್ಲದ ಸುಗ್ಗಿಯು ಫಾಲ್ಗುಣ ಮಾಸದಲ್ಲಿಯೂ ಪ್ರಾರಂಭವಾಗುತ್ತದೆ. ರೇಲ್ವೆ ಮಾರ್ಕ K.R.Y.

ದಲ್ಲಾಲಿಗಳು : ೧. ಅಬದುಲಗನಿ ನೂರಮಹಮ್ಮದ ೨. ಎಸ್. ಕೆ. ರಾಮಶೆಟ್ಟಿ. ಸುರಾಯಿಶೆಟ್ಟಿ. ೩. ವೆಂಕಟಸುಬ್ಬಯ್ಯ ಮಟಸುಬ್ಬಯ್ಯ ಚತ್ತರಸಾಲ.

ಪತ್ರವ್ಯವಹಾರ ಮಾಡುವವರು ಜಿಲ್ಲಾ ಅನಂತಪುರನೆಂದು ಬರೆಯಬೇಕು.

೨೧. **ಕಲಕತ್ತಾ : Calcutta (E.I.E.B.Ry)**

ಇದು ಹಿಂದುಸ್ಥಾನದಲ್ಲಿ ಅತ್ಯಂತ ದೊಡ್ಡ ಪಟ್ಟಣವು. ಇಲ್ಲಿ ೧೨ ಲಕ್ಷದವರೆಗೆ ಜನವಸ್ತಿಯಿದೆ. ಇದು ಬಹುದೊಡ್ಡ ವ್ಯಾಪಾರ ಪಟ್ಟಣವು. ಜಗತ್ತಿನ ಎಲ್ಲ ದೇಶಗಳಿಂದಲೂ ನಾನಾ ತರದ ಪದಾರ್ಥಗಳು ಹಡಗಿನ ಮೂಲಕ ಇಲ್ಲಿಗೆ ಬರುತ್ತವೆ.

ಉತ್ತರ ಹಿಂದುಸ್ಥಾನದ ಬಹುಭಾಗದ ಪದಾರ್ಥಗಳೆಲ್ಲಾ ರೇಲ್ವೆ ಮಾರ್ಗದಿಂದ ಇಲ್ಲಿಗೆ ಒಂದೇ ಪರದೇಶಗಳಿಗೆ ಹೋಗುತ್ತವೆ. ಇಲ್ಲಿ ಬಟ್ಟೆಯ ಗಿರಣಿಗಳೂ ರೇಶಿಮೆ ಬಟ್ಟೆಯ ಮತ್ತು ಬೆಳ್ಳಿ ಬಂಗಾರಗಳ ಚಿತ್ರದ ಕಾರ್ಯಾಲಯಗಳೂ ನಾರಿನಿಂದ ಚೀಲವನ್ನು ಮಾಡುವ ಗಿರಣಿಗಳೂ ಇಲ್ಲಿ ವಿಶೇವಾಗಿದೆ. ಅಸಾಮ ಪ್ರಾಂತದ ಚಹಾ ಮತ್ತು ಅಕ್ಕಿಗಳೂ ಇಲ್ಲಿ ವಿಶೇಷವಾಗಿ ಬರುತ್ತವೆ.

ನಾರಿನ ಚೀಲಗಳು (ಬಂಗಾಲಿ ಚೀಲಗಳು) ಇಲ್ಲಿ ವಿಶೇಷವಾಗಿ ಆಗುವುದರಿಂದ ಚೀಲಗಳ ವ್ಯಾಪಾರವನ್ನು ಹಿಂದುಸ್ಥಾನದ ಎಲ್ಲ ಭಾಗಗಳ ವ್ಯಾಪಾರಿಗಳೂ ಇಲ್ಲೇಯೇ ಮಾಡುತ್ತಾರೆ. ೮೦ ರೂ. ಗಳ ತೂಕದ ಒಂದು ೪೦ ಶೇರುಗಳ ಒಂದು ಮಣ.

ದಲ್ಲಾಲಿಗಳು : ೧. ಮೆಸರ್ಸ ಮೇಘಜಿ ಮಾನಸಿಂಗ ಬುರಾಬಝಾರ ೨೦೭-೧ ಹಾರಿಸನ್ ರೋಡ್ ೨. ರಮಣೀಕಾಲ ಮಣೀಲಾಲ ಅಮರತಲ್‌ಲೈನ್ ನಂ. ೨೨. ೩. ಗಣೇಶದಾಸ ಪುರುಷೋತ್ತಮದಾಸ ಹಾರಿಸನ್ ರೋಡ್ ೨೦೧ ೪. ಪಂಡಿತ ಎಂಡ್ ಕಂಪನಿ ಹೇಯರ್ ಸ್ಟ್ರೀಟ ೭.

ಬಾರದಾನಿ ಚೀಲಗಳ ವ್ಯಾಪಾರಿಗಳು : ೧. ಗನಿಹಾಜಿ ಅಹಮ್ಮದ್ ಅಮತೋಲಾ ಲೈನ್ ೨೩. ೨. ಚಂಪಲಾಲ ಗುನಚಂದ ಕ್ಲೈವ್ಜ್ ಸ್ಟ್ರೀಟ್ ೨೮. ೩. ಧಾರಸಿ ನಾನಜಿ ಎಂಡ್ ಕೋ. ಕ್ಯಾನಿಂಗ್ ಸ್ಟ್ರೀಟ್ ೫೩. ೪. ಹಾಜಿಅಜಮ ಗುಲಾಮ ಹುಸೇನ ಅಮರತೋಲ್ ಲೈನ್ ೧೨.

೨೨. **ಕ್ವೇಟಾ : Quetta (N.W.Ry)**

ಇದು ಬಲುಚಿಸ್ಥಾನದಲ್ಲಿ ವ್ಯಾಪಾರಕ್ಕೆ ಬಹು ಮುಖ್ಯ ಪಟ್ಟಣವು. ಇಲ್ಲಿ ಸಾಧಾರಣ ೫೦ ಸಾವಿರ ಜನಸಂಖ್ಯೆ ಇದೆ.

ಬೆಳೆ ಮತ್ತು ತೂಕ : ಗೋದಿ, ದ್ರಾಕ್ಷಿ, ಖಿಸಮಿಸ್, ಶಹಜೀರಿಗೆ, ಬದಾಮಿ, ಜರದಾಳ, ಅಂಜೂರ, ಇಂಗು, ತಂಬಾಕು ಇವು ಹೆಚ್ಚಾಗಿ ಬೆಳೆಯುತ್ತವೆ. ಇರಾಣದೇಶದಿಂದ ಗಲೀಚಾಗಳನ್ನು ತಂದು ಇಲ್ಲಿ ವಿಶೇಷವಾಗಿ ಮಾರುತ್ತಾರೆ. ೮೦ ರೂ. ಗಳ ತೂಕದ ಒಂದು ಶೇರು. ಮತ್ತು ೪೦ ಶೇರುಗಳ ಒಂದು ಮಣ. ಪಟ್ಟಣದಿಂದ ಸ್ಟೇಶನ್ನಿಗೆ ಒಂದು ಚೀಲಕ್ಕೆ ೩ ಅಣೆ ವೆಚ್ಚ ಬರುತ್ತದೆ. ಇಲ್ಲಿ ಗುಲಾಬಿ ಹೂವುಗಳು ವಿಶೇಷವಾಗಿ ದೊರೆಯುತ್ತವೆ. ರೇಲ್ವೆ ಮಾರ್ಕ Q.T.A.

ದಲ್ಲಾಲಿಗಳು : ೧. ನಂದರಾಮ ತಾರಾಚಂದ ಶಿಕಾರಿಪುರ ಬಜಾರ ೨. ಕೇವಳಾರಾಮ ಗಂಗಾರಾಮ ಮೇವಾ ಮಾರ್ಕೇಟ್ ೩. ನಾನಕರಚಂದ ಲಜಪತರಾಯ ಶಿಕಾರಿಪುರ ಬಜಾರ ೪. ಮಹಾಲಿಂಗ ನೆಹಾಲಚಂದ ಸುರಗಂಜ.

೨೩. **ಕಾನಾನೂರು : Cannanore (S.I.Ry)**

ಇದು ಜಿಲ್ಲಾ ಸ್ಥಳವು. ವ್ಯಾಪಾರದ ಬಂದರವೂ ಆಗಿದೆ. ಸಾಧಾರಣ ೩೦ ಸಾವಿರ ಜನಸಂಖ್ಯೆ ಇದೆ.

ಬೆಳೆ ಮತ್ತು ತೂಕ : ಅಡಿಕೆ, ತೆಂಗು, ಕಾಫಿ, ಚಂದನಗಳು ವಿಶೇಷವಾಗಿ ಬೆಳೆಯುತ್ತವೆ. ಕುರ್ಚಿ,, ಮೇಜು, ಕಪಾಟು, ಮೊದಲಾದ ನಾನಾ ತರದ ಕಟ್ಟಿಗೆಯ ಸಾಮಾನುಗಳನ್ನು ಮಾಡುವ ಕಾರ್ಯಾಲಯಗಳು ಇಲ್ಲಿ ಅನೇಕವಾಗಿವೆ. ಕೈಮಗಗ್ಗಳಲ್ಲಿ ರೇಶಿಮೆ ಮತ್ತು ನೂಲಿಯ ಅನೇಕ ಬಟ್ಟೆಗಳಾಗುತ್ತವೆ.

ಅಡಿಕೆಯ ೬೦೦ ಪೌಂಡುಗಳ ಒಂದು ಖಂಡಿ. ತೆಂಗಿನಕಾಯಿ ಕೊಬ್ಬರಿಗಳು ಇಲ್ಲಿಂದ ವಿಶೇಷವಾಗಿ ಪರಸ್ಥಳಗಳಿಗೆ ಹಡಗದ ಮಾರ್ಗವಾಗಿ ಹೋಗುತ್ತವೆ. ರೇಲ್ವೆ ಮಾರ್ಕ C.A.N

ದಲ್ಲಾಲಿಗಳು : ೧. ಹಾಜಿ ಅಬ್ದುಲ್ ಚುನಭಾಯಿ ೨. ಲಾಲಜಿಶಿವಜಿ ೩. ನಥುರಾಮ ಹರೀಜಿ ೪. ನಾವಜಿ ದೇವಜಿ.

೨೪. **ಕಾನಪುರ : Cawnpore (B.B. & G.I.P.Ry)**

ಇದು ವ್ಯಾಪಾರದ ದೊಡ್ಡ ಪಟ್ಟಣವು ಸಾಧಾರಣ ೨ ಲಕ್ಷ ಜನಸಂಖ್ಯೆಯಿದೆ.

ಬೆಳೆ ಮತ್ತು ತೂಕ : ಇಲ್ಲಿ ಕಸಕಸಿ, ಔಡಲ, ಉದ್ದು, ಹೆಸರು, ಮೆಂತೆ, ಹವೀಜ, ಕಡಲಿ ವಿಶೇಷವಾಗಿ ಬೆಳೆಯುತ್ತದೆ. ೮೧. ರೂ. ೧೦ ಅಣೆ ತೂಕದ ಒಂದು ಶೇರು.

ದಲ್ಲಾಲಿಗಳು : ೧. ರಮಣಲಾಲ ಬಲದೇವದಾಸ ನಯಾಗಂಜ ೨. ಕೇದಾರನಾಥ ಮೋತಿಲಾಲ ನಯಾಗಂಜ ೩. ರಾಮನಾಥ ವೈಜನಾಥ ಕೋಲನಗಂಜ. ೪. ಶಹ ಕಿಲಾಚಂದ ದೇವಚಂದ ಕುಪರಗಂಜ.

೨೫. **ಕುರೆನೆಗಾಲಾ ಸಿಲೋನ್ : Kurnnegala** ಸಿಲೋನ

ಬೆಳೆ ಮತ್ತು ತೂಕ : ಇಲ್ಲಿ ತೆಂಗು, ಚಹಾ, ಕೋಕೋ, ಅಡಕಿ, ಮೆಣಸು, ಜೇನುತುಪ್ಪ, ಮೇಣ ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ತೂಕವು ಹಂಡ್ರೆಡ್‌ವೇಟಿನ್ ಮೇಲಿದೆ. ಸಿಲೋನ್ ಸರಕಾರದಿಂದ ಇಲ್ಲಿಯ ಸಾಮಾನುಗಳು ರೇಲ್ವೆಮಾರ್ಗವಾಗಿ ಕೊಲೋಂಬೋ ಬಂದರಕ್ಕೆ ಬಂದು ಅಲ್ಲಿಂದ ಹಿಂದುಸ್ಥಾನಕ್ಕೆ ಬರುತ್ತವೆ.

ದಲ್ಲಾಲಿಗಳು : ೧. ಅಹಮದ್ ಮೀರಾಸಾಹೇಬ ಎಂ. ಎ.

೨೬. **ಕುಂಭಕೋಣಂ : Kumbakonam (S.I.P.Ry)**

ಬೆಳೆ ಮತ್ತು ತೂಕ : ತಂಬಾಕು, ತೆಂಗು, ಮೆಣಶಿನಕಾಯಿ ಹೆಚ್ಚಾಗಿ ಬೆಳೆಯುತ್ತವೆ. ಮದ್ರಾಸದ ತೂಕವೇ ಇಲ್ಲಿ ನಡೆಯುತ್ತದೆ. ತೆಂಗಿನಕಾಯಿ ೧೦–೧೫ ಕ್ಕೆ ಒಂದು ನಗ, ಇಲ್ಲಿ ಬಂಗಾರದ ಆಭರಣಗಳನ್ನು ಬಹು ಸೊಗಸಾಗಿ ಮಾಡುತ್ತಾರೆ. ಇಲ್ಲಿ ಸಾಧಾರಣ ೬೦ ಸಾವಿರ ಜನಸಂಖ್ಯೆಯಿದೆ. ರೇಲ್ವೆ ಮಾರ್ಕ K.M.U.

ದಲ್ಲಾಲಿಗಳು : ೧. ಕೆ. ಎನ್. ಭದ್ರಸ್ವಾಮಿ, ೨. ಎಸ್. ಗೋಪಾಲಸ್ವಾಮಿ. ೩. ಎನ್. ರಂಗನಾಥ ಅಯ್ಯರ್

೨೭ **ಕೋಚೀನ : Cochin (S.I.P.Ry)**

ಬೆಳೆ ಮತ್ತು ತೂಕ : ಇದು ಪ್ರಸಿದ್ಧವಾದ ಬಂದರವು. ಇಲ್ಲಿ ೭೨ ಸಾವಿರ ಜನಸಂಖ್ಯೆಯಿದೆ. ಇಲ್ಲಿ ತೆಂಗು, ಅಡಿಕೆ, ಅರಿಶಿಣ, ಶುಂಠಿ, ಮೆಣಸು, ಚಹಾ, ಕಾಫಿ ಮೊದಲಾದವುಗಳು

ವಿಶೇಷವಾಗಿ ಬೆಳೆಯುತ್ತವೆ. ಮನೆಕಟ್ಟುವ ಕಟ್ಟಿಕೆಯ ಸಾಮಾನುಗಳು ಇಲ್ಲಿ ಹೆಚ್ಚಾಗಿ ತಯಾರಾಗುತ್ತವೆ. ಶುಂಠಿ, ಮೆಣಸು ೬೭೨ ಪೌಂಡಿನ ಖಂಡಿಯಂತೆ ಮಾರಟವಾಗುತ್ತದೆ.

ಇಲ್ಲಿ ರೇಲ್ವೆ, ಸ್ಟೇಶನ್ ಇಲ್ಲ. ಆದರೆ ಎಸ್. ಐ. ರೇಲ್ವೆಯ ಆವುಟ್ ಏಜೆನ್ಸಿ ಇದೆ. ಇಲ್ಲಿಂದ ಹಡಗದ ಮಾರ್ಗವಾಗಿಯೇ ಸಾಮಾನುಗಳು ರವಾನೆಯಾಗುತ್ತವೆ. ಹಡಗಕ್ಕೆ ಮುಟ್ಟಿಸಲು ಒಂದು ಖಂಡಿಗೆ ಸಾಧಾರಣ ೨ ರೂ. ವೆಚ್ಚ ಬರುತ್ತದೆ. ಚಹಾಸೊಪ್ಪನ್ನು ಸಿದ್ಧಗೊಳಿಸುವ ಅನೇಕ ಕಾರ್ಯಾಲಯಗಳಿವೆ. ಎಣ್ಣೆಯ ೮ ೬೫೬ ಪೌಂಡಿನ ಖಂಡಿಯಂತೆ ಮಾರಾಟವಾಗುತ್ತದೆ. ಆವುಟ್ ಏಜನ್ಸಿ ರೇಲ್ವೆ ಮಾರ್ಕ. C.O.G.

ದಲ್ಲಾಲಿಗಳು : ೧. ಭಗನಲಾಲ ಮೋತಿಲಾಲ ೨. ದೇವರಾಜ ಜೀನಾ. ೩. ಎಚ್. ನಾರಾಯಣ ಸ್ವಾಮಿ ಪಿಲೆ ೪. ತುಲಸೀದಾಸ ಹೀರಾಚಂದ.

೨೮. **ಕೋಲಂಬೋ : Colombo** ಸಿಲೋನ

ಬೆಳೆ ಮತ್ತು ತೂಕ : ಇಲ್ಲಿ ಯಾಲಕ್ಕಿ, ಲವಂಗ, ಚಹಾ, ಅಡಿಕೆ, ತೆಂಗು ಕೊಕೊ ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ತೂಕ ಹಂಡ್ರೆಟ್‌ವೇಟಿನ ಮೇಲಿದೆ. ಇಲ್ಲಿ ಚಹಾ ತುಂಬುವ ಪೆಟ್ಟಿಗೆಗಳ ಕಾರ್ಯಾಲಯವಿದೆ. ಹಡಗದ ಮಾರ್ಗವಾಗಿ ಇಲ್ಲಿಂದ ಹಿಂದುಸ್ಥಾನಕ್ಕೆ ಸಾಮಾನುಗಳು ಬರುತ್ತವೆ.

ದಲ್ಲಾಲಿಗಳು : ೧. ಶೇಟ್ ಮಹಮ್ಮದ್ ಕಾಶೀಮ್ ಮೇನ್‌ಸ್ಟ್ರೀಟ್ ೨. ಶೇಟ್ ಮಹಮ್ಮದ್‌ಹಸನ್ ೧೧೩ ಮೇನ್‌ಸ್ಟ್ರೀಟ್ ೩. ಕೆ.ಬಿ.ಆರೆ ರಾಮನಾಶೆಟ್ಟಿ ೯೭ ಪೋಥ್‌ಕ್ರಾಸ್ ಸ್ಟ್ರೀಟ್ ಪೆಟ್ಟಾಹ.

೨೯. **ಖುರಜಾ : Khurja (E.I.P.Ry)**

ಬೆಳೆ ಮತ್ತು ತೂಕ : ಇಲ್ಲಿ ಸೋಪು, ಮೆಂತೆ, ಕಡ್ಲಿ, ಮೊದಲಾದವುಗಳು ಬೆಳೆಯುವವು. ಬೆಲ್ಲ ಸಕ್ಕರೆಯು ಕೂಡಾ ಸಿದ್ಧವಾಗುವವು. ಇಲ್ಲಿಯ ತುಪ್ಪವು ಹೊರಗೆ ಬಹಳ ಹೋಗುತ್ತದೆ. ೮೦ ರೂ. ಗಳ ತೂಕದ ಒಂದು ಸೇರು, ೪೦ ಸೇರುಗಳ ಒಂದು ಮಣ, ರೇಲ್ವೆ ಮಾರ್ಕ K.R.J.

ದಲ್ಲಾಲಿಗಳು : ೧. ಲೋಕಮದಾಸ ಯಾದರಾಮ. ೨. ಮೋಹನಲಾಲ ಫತ್ತೇಚಂದ ೩. ಸುಖದೇವ ಗಂಗಾರಾಮ

೩೦. **ಕೋಂಚ್ : Kunch (G.I.P.Ry)**

ಬೆಳೆ ಮತ್ತು ತೂಕ : ಇಲ್ಲಿ ತೊಗರಿ, ಬೇಳೆ, ಶೆಜ್ಜಿ, ಜೋಳ, ಕಡ್ಲಿ, ಗೋದಿ, ಉದ್ದು, ಎಳ್ಳು ಮೊದಲಾದ ಧಾನ್ಯಗಳು ಬೆಳೆಯುವು. ಇಲ್ಲಿಯ ಕಡ್ಲಿಯು ಹೈದ್ರಾಬಾದ್, ವಿಜಾಪುರ, ಹುಬ್ಬಳ್ಳಿ ಕಲ್ಕತ್ತಾ ಮೊದಲಾದವುಗಳ ಕಡೆಗೆ ಹೇರಳವಾಗಿ ಹೋಗುತ್ತವೆ. ಪ್ರತಿಯೊಂದು ಮಾಲಿನ ಬೆಲೆಯು ತೂಕಿನ ಶೇರಿನ ಮೇಲಿದೆ. ೮೦ ತೊಲಿಯ ಒಂದು ಶೇರು. ೪೦ ಶೇರಿನ ಒಂದು ಮಣ. ರೇಲ್ವೆ ಮಾರ್ಕ K.N.H.

ದಲ್ಲಾಲಿಗಳು : ೧. ಪನ್ನಾಲಾಲ ಶ್ಯಾಮಲಾಲ ೨. ಮಂಗಳಪ್ರಸಾದ ಬ್ರಿಂದಾವನ್ ೩. ಗರಬರೀದಾಸ ಬಾಲಮುಕುಂದ ೪. ಸುರಲಾಲ ಧುಂದೀಲಾಲ ಚೌಧುರಿ.

೩೧. **ಕೋಯಿಮುತ್ತೂರ : Coimbatore (S.I.P.Ry)**

ಇದು ಮದ್ರಾಸಿನಿಂದ ೩೦೬ ಮೈಲುಗಳ ಮೇಲಿರುವ ಪ್ರಸಿದ್ಧ ವ್ಯಾಪಾರದ ಪಟ್ಟಣವು ಇಲ್ಲಿ. ಸಾದಾ ಮತ್ತು ಜರದ ಮತ್ತು ಅನೇಕ ತರದ ಉತ್ತಮ ರುಮಾಲುಗಳು ಸಿದ್ದವಾಗುವವು. ಚಹಾ ಮತ್ತು ಕಾಫಿಯ ದೊಡ್ಡ ದೊಡ್ಡ ಕಂಪನಿಗಳು ಇಲ್ಲಿವೆ.

ಬೆಳೆ ಮತ್ತು ತೂಕ : ಶೇಂಗಾ, ಶೇಂಗದಾಣೆ, ಶೇಂಗದಾಣೆಯ ಎಣ್ಣೆ, ಬೆಲ್ಲ, ತುಪ್ಪ, ಹತ್ತಿ ಮೊದಲಾದವುಗಳು, ರೇಲ್ವೆ ಮಾರ್ಕ C.B.E.

ದಲ್ಲಾಲಿಗಳು : ೧. ನಾರಾಯಣದಾಸ ಜಗಜೀವನದಾಸ ೨. ತುಲಸೀದಾಸ ಮುರಾರಜಿ ೩. ಕೆ. ಪಲಾನಿವೆಲ್ಲು ಪಿಲ್ಲಾಯಿ.

೩೨. **ಕೊಲ್ಲಾಪೂರ : Kolhapur (M.S.M.Ry)**

ಇದು ಕೊಲ್ಲಾಪುರ ಸಂಸ್ಥಾನದ ರಾಜಧಾನಿಯ ಮುಖ್ಯ ಸ್ಥಳವು ಹುಬ್ಬಳಿಯಿಂದ ೧೪೪ ಮೈಲುಗಳ ದೂರದಲ್ಲಿದೆ.

ಬೆಳೆ ಮತ್ತು ತೂಕ : ಜೋಳ, ತೊಗರಿ, ಶೆಂಗಾ, ಕಬ್ಬು, ಅರಶಿಣ, ತಂಬಾಕು, ಮೊದಲಾದವುಗಳು ಬೆಳೆಯುವವು. ೮೦ ರೂಪಾಯಿಗಳ ತೂಕದ ಒಂದು ಶೇರು. ಇಲ್ಲಿ ಒಂದು ನೂಲಿನ ಗಿರಣಿಯುಂಟು. ಉಣ್ಣೆಯ ಬಟ್ಟೆಗಳನ್ನು ನೇಯುವುದು ಎಲ್ಲ ಕಡೆಗೂ ನಡೆಯುತ್ತದೆ. ರೇಲ್ವೆ ಮಾರ್ಕ K.O.P.

ದಲ್ಲಾಲಿಗಳು : ೧. ವಿರೂಪಾಕ್ಷ ನಿಂಗಪ್ಪ ನಷ್ಟೇ. ೨. ಗುರುಮಲ್ಲಪ್ಪ ರುದ್ರಪ್ಪ ಕೊಶಿವಾಲೆ ೩. ರಾಮಪ್ರತಾಪ ಬನೆಚಂದ ೪. ಫತ್ತೇಚಂದ ಚುನಿಲಾಲ.

೩೩. **ಕೋಪರಗಾಂವ : Kopargaon (G.I.P.Ry)**

ಬೆಳೆ ಮತ್ತು ತೂಕ : ಇಲ್ಲಿ ಬೆಲ್ಲ ಹೇರಳವಾಗಿ ಸಿದ್ದವಾಗುತ್ತದೆ. ಬೆಲ್ಲದ ಧಾರಣೆಯು ೧೨೫ ಬಂಗಾಲಿ ಶೇರು ಒಂದು ಪೆಲ್ಲೆಯ ಮೇಲಿದೆ. ಇಲ್ಲಿ ಒಂದು ಸಕ್ಕರೆಯ ಕಾರ್ಯಾಲಯವಿದೆ. ರೇಲ್ವೆ ಮಾರ್ಕ K.P.J.

ದಲ್ಲಾಲಿಗಳು : ೧. ಭಗನಚಂದ್ ಮಾಚ್ಛಾಚಂದ ೨. ಚುನಿಲಾಲ ಕೇವಲರಾಮ. ೩. ನಾರಾಯಣ ರಾಮಚಂದ್ರ ಶ್ರೇಡಗೆ. ೪. ಸೋಮಚಂದ ಫತ್ತೆಚಂದ.

೩೪. **ಕೋಸಂಬಾ : Kosamba (B.B.&C.I.Ry)**

ಬೆಳೆ ಮತ್ತು ತೂಕ : ಇಲ್ಲಿ ಬೆಲ್ಲ ಬಹಳ ಸಿದ್ದವಾಗುತ್ತವೆ. ಬೆಲ್ಲವನ್ನು ಮಣ್ಣಿನ ಗಳಿಗೆಯಲ್ಲಿ ತುಂಬಿಡುತ್ತಾರೆ. ಗಳಿಗೆ ಸಹಿತ ಬೆಲ್ಲದ ತೂಕವಾಗುತ್ತದೆ. ಬೆಲ್ಲದ ಧಾರಣೆಯು ೪೨ ಶೇರುಗಳ ಒಂದು ಮಣದ ಮೇಲಿದೆ. ೪೦ ರೂ. ತೂಕದ ಶೇರು ಒಂದು ಮಣ. ರೇಲ್ವ ಮಾರ್ಕ K.S.B.

ದಲ್ಲಾಲಿಗಳು : ೧. ಶೇಟ ಉಮರಭಾಯಿ ಉಸಮಾನಭಾಯಿ.

೩೫. **ಕೋಯಲ್ಲಿ : Koyli (Baroda)(B.B&C.I.Ry)**

ಬೆಳೆ ಮತ್ತು ತೂಕ : ಇಲ್ಲಿ ತಂಬಾಕಿನ ಬೆಳೆಯು ವಿಶೇಷವಾಗಿದೆ. ಅನೇಕ ಜಾತಿ ತಂಬಾಕು ಇಲ್ಲಿ ಬೆಳೆಯಲ್ಪಟುತ್ತದೆ. ೪೦ ರೂ. ಗಳ ತೂಕಿನ ಒಂದು ಸೇರು ೪೦ ಸೇರುಗಳ ಒಂದು ಮಣ. ಇಲ್ಲಿಯ ಮಾಲು ಬಾಜಾವ ಸ್ಟೇಶನಕ್ಕೆ ಹೋಗುತ್ತದೆ. ಇಲ್ಲಿಂದ ಸ್ಟೇಶನ್ನಿಗೆ ಒಂದು ಮಣಕ್ಕೆ ಒಂದು ಆಣೆ ಬೀಳುತ್ತದೆ. ಬಾಜಾವಾ ಸ್ಟೇಶನ್ನಿನ ರೇಲ್ವೆ ಮಾರ್ಕ ಬಿ.ಜೆ.ಡಬ್ಲ್ಯು.

ದಲ್ಲಾಲಿಗಳು : ಠಕ್ಕರ್ ತ್ರಿಕಮಲಾಲ ರಣಛೋಡ.

೩೬. **ಖರಶೀಯ್ : Kharsia (B.N.P.Ry)**

ಬೆಳೆ ಮತ್ತು ತೂಕ : ಅಕ್ಕಿ, ಉದ್ದು, ಹವೀಜ ಮೊದಲಾದವುಗಳು ಬೆಳೆಯುವವು. ೮೦ ರೂ. ಗಳ ತೂಕದ ಒಂದು ಸೇರು. ೪೦ ಸೇರುಗಳ ಒಂದು ಮಣ. ಇಲ್ಲಿ ಬೀಡಿಯ ಅನೇಕ ಕಾರ್ಯಾಲಯಗಳಿದ್ದು ಹಿಂದುಸ್ಥಾನದ ಅನೇಕ ಕಡೆಗೆ ಹೋಗುತ್ತಾ ಇವೆ. ರೇಲ್ವೆ ಮಾರ್ಕ ಕೆ.ಎಚ್.ಎಸ್.

ದಲ್ಲಾಲಿಗಳು : ೧. ಖುಪಚಂದ ಅಮರಶಿಂಗ ೨. ನಾನುರಾಮ ಭಗಾವಾನದಾಸ. ೩. ರಾಧಾಕಿಶನ್ ಲಾಲಚಂದ.

೩೭. **ಖೂಶಾಬ : Khusab (N.W.P.Ry)**

ಬೆಳೆ ಮತ್ತು ತೂಕ : ಗೋದಿ, ಸಜ್ಜೆ, ತುಪ್ಪ, ಬೆಲ್ಲ, ಮೆಣಶಿನಕಾಯಿ, ಕಡ್ಲಿ ಮೊದಲಾದವುಗಳು, ೮೦ ರೂ. ಗಳ ತೂಕದ ಸೇರು. ೪೦ ಸೇರುಗಳ ಒಂದು ಮಣ.

ಇಲ್ಲಿ ಕೈಮಗ್ಗದ ಬಟ್ಟೆಯು ಬಹಳ ಚೆನ್ನಾಗಿರುತ್ತದೆ. ಇಲ್ಲಿ ಖಾದಿಯ ಬಟ್ಟೆಗಳನ್ನು ಸಿದ್ಧಗೊಳಿಸುವ ಕಾರ್ಯಾಲಯಗಳಿವೆ. ರೇಲ್ವೆ ಮಾರ್ಕ K.H.B.

ದಲ್ಲಾಲಿಗಳು : ೧. ಆತ್ಮಾರಾಮ ರಾಮಲಾಲ ೨. ದಯಾರಾಮ ದ್ವಾರಕದಾಸ ೩. ಅಮೀರಚಂದ ಪರಮಾಚಂದ.

೩೮. **ಖೈರಾಬಾದ ಪಂಜಾಬ : Khairabada (N.W.P.Ry)**

ಬೆಳೆ ಮತ್ತು ತೂಕ : ಗೋದಿ, ಕಡಲಿ, ತಂಬಾಕು, ಬೆಲ್ಲ ವಿಶೇಷ ಮಾರಾಟವಾಗುತ್ತದೆ. ೧೦೫ ತೊಲೆಯ ಶೇರು ೪೦ ಶೇರುಗಳ ಮಣ, ಸ್ಟೇಶನ್ನಿಗೆ ಒಂದು ಮಣಕ್ಕೆ ಸಾಧಾರಣ ೨ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಲಿಗಳು : ೧. ಸರನಾಮಲ ಅಮೀಚಂದ ೨. ರಾಜಸಿಂಹ ಮೋತಿಸಿಂಹ ೩. ಭಗವಾನ್‌ದಾಸ ಈಶ್ವರದಾಸ ೪. ಮೂಲಚಂದ ಲಾಲಚಂದ. ರೇಲ್ವೆ, ಮಾರ್ಕ K.B.D.

೩೯. **ಖಂಬಾತ ಬಂದರ : Cambay C.I.Ry(Ananda Cambay line)**

ಇದು ಪ್ರಸಿದ್ಧ ಬಂದರವು. ಇಲ್ಲಿ ೨೨ ಸಾವಿರ ಜನಸಂಖ್ಯೆಯಿದೆ. ಖಂಬಾರ ಸಂಸ್ಥಾನದ ರಾಜಧಾನಿಯೂ. ಇಲ್ಲಿ ವ್ಯಾಪಾರವು ವಿಶೇಷವಾಗಿ ಜರುಗುತ್ತದೆ.

ಬೆಳೆ ಮತ್ತು ತೂಕ : ಉದ್ದು, ತಂಬಾಕು, ಎಳ್ಳು, ಔಡಲ, ಗೋದಿ, ಆಲುಗಟ್ಟಿ, ತುಪ್ಪ ಇವು ವಿಶೇಷ ಉಂಟಾಗುತ್ತದೆ. ಕೈಮಗ್ಗದ ಕಾರ್ಯಾಲಯಗಳು ಬಹು ಹೆಚ್ಚು. ಕೈಮಗ್ಗದ ಬಟ್ಟೆಗಳು ಬೇರೆ ಭಾಗಗಳಿಗೂ ಇಲ್ಲಿಂದ ಹೆಚ್ಚಾಗಿ ಹೋಗುತ್ತವೆ. ಇಲ್ಲಿ ಬಟ್ಟೆಯ ಗಿರಣಿಗಳೂ ಇವೆ. ಇಲ್ಲಿ ಅನೇಕ ತರಹದ ತಂಬಾಕು ದೊರೆಯುತ್ತದೆ.

೪೦ ತೊಲೆಯ ಶೇರು, ೪೦ ಶೇರಿನ ಮಣ, ಸ್ಟೇಶನ್ನಿಗೆ ಒಂದು ಚಿಲಕ್ಕೆ ೮ ಆಣೆ ವೆಚ್ಚ ಬೀಳುತ್ತದೆ. ದಲ್ಲಾಲಿ ನೂರಕ್ಕೆ ೧ ರೂ. ರೇಲ್ವೆ ಮಾರ್ಕ C.B.V.

ದಲ್ಲಾಲಿಗಳು : ೧. ಅಮರಲಾಲ ನಾನಾಲಾಲ ೨. ಅಂಬಾಲಾಲ ಭುರಾಭಾಯಿ ೩. ಭೋಟಾಲಾಲ ಶಂಕರಲಾಲ ೪. ಭೋಟಾಲಾಲ ನೇಮಚಂದ.

೪೦. **ಗಯಾ : Gaya (E.I.Ry)**

ಇದು ಹಿಂದುಗಳ ಪವಿತ್ರ ಕ್ಷೇತ್ರವು. ಇಲ್ಲಿ ಸಕ್ಕರೆಯ ಅನೇಕ ಕಾರ್ಯಾಲಯಗಳಿವೆ. ಕಲ್ಲಿನಲ್ಲಿ ಚಿತ್ರ ಕೊರೆಯುವ ಕಾರ್ಯವು ಇಲ್ಲಿ ವಿಶೇಷವಾಗಿ ಜರುಗುತ್ತದೆ.

ಬೆಳೆ ಮತ್ತು ತೂಕ : ಗೋಧಿ, ಕಡಲಿ, ತಂಬಾಕು, ಸಕ್ಕರೆ, ಮೆಣಸಿನಕಾಯಿ, ಆಲುಗಟ್ಟಿ ಹೆಚ್ಚಾಗಿ ಉಂಟಾಗುತ್ತದೆ.

ದಲ್ಲಾಲಿಗಳು : ೧. ಶಿವಲಾಲ ಮಂಗೀಲಾಲ ೨. ಪುತನಮಲ ಠಾಕೋರಮಲ ೩. ಶಿವಚರಣ ರಘುನಾಥ ೪. ಪುರಣಮಲ ಗೋವಿಂದಪ್ರಸಾದ.

೪೧. **ಗ್ವಾಲಿಯರ್ : Gwalior (G.P.& G.L. Ry)**

ಬೆಳೆ ಮತ್ತು ತೂಕ : ಇಲ್ಲಿ ಚೀನಿ ಮಣ್ಣಿನ ಪಾತ್ರೆಗಳನ್ನು ಮಾಡುವ ಕಾರ್ಯಾಲಯಗಳಿವೆ. ಇಲ್ಲಿ ಒಂದು ಚರ್ಮದ ಕಾರ್ಯಾಲಯವಿದೆ. ಅಲ್ಲಿ ನಾನಾ ತರದ ಚರ್ಮಗಳ ವಿಧವಿಧದ ಸಾಮಾನುಗಳಾಗುತ್ತವೆ.

ಇಲ್ಲಿ ಗೋದಿ, ಕಡಲಿ, ಸಜ್ಜಿ, ಎಳ್ಳು, ಹತ್ತಿ, ಹೆಸರು ವಿಶೇಷವಾಗಿ ಬೆಳೆಯುತ್ತವೆ. ೮೦ ರೂ. ಗಳ ತೂಕದ ಶೇರು.

ದಲ್ಲಾಲಿಗಳು : ೧. ಚಿರೋಜಿಲಾಲ ಪನ್ನಾಲಾಲ ೨. ಮಾಧೋರಾಮ ಮಿಶ್ರೀಲಾಲ ೩. ಹರದತ್ತ ರಾಮದತ್ತ ೪. ಗೋಕುಲದಾಸ ಜಾನಕಿದಾಸ. ರೇಲ್ವೆ ಮಾರ್ಕ G.W.L.

೪೨. **ಗುಜರಾನವಾಲಾ ಪಂಜಾಬ : Gujarnwala (N.W.Ry)**

ಬೆಳೆ ಮತ್ತು ತೂಕ : ಇಲ್ಲಿ ಅಕ್ಕಿ ಮತ್ತು ಬೇಳೆಗಳ ವ್ಯಾಪಾರವು ವಿಶೇಷವಾಗಿ ಜರುಗುತ್ತದೆ. ಗೋದಿ, ಕಡಲಿ, ಹತ್ತಿಗಳ ಬೆಳೆಯು ಹೆಚ್ಚು. ೮೦. ರೂ. ತೂಕದ ಶೇರು ೪೦. ಶೇರಿನ ಮಣ. ಸ್ಟೇಶನ್ನಿಗೆ ಚೀಲ ಒಂದಕ್ಕೆ ಸಾಧಾರಣ ೬ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಲಿಗಳು : ೧. ಮುಲರಾಜ ದೌಲತರಾಮ ೨. ಧನಪತಮಲ ದಿವಾನಚಂದ ೩. ಹರನಾಮ ಮುನಶಿರಾಮ ಚೌಧರಿ ೪. ಗೋವಿಂದ ರಾಮಹರಿಚಂದ, ರೇಲ್ವೇ ಮಾರ್ಕ G.R.W.

೪೩. **ಗೋರಖಪುರ ಯು.ಪಿ. : Gorakhpur (B.&.N.WRy)**

ಬೆಳೆ ಮತ್ತು ತೂಕ : ಕಡಲಿ, ಕಸಕಸಿ, ಉದ್ದು, ಅಕ್ಕಿ, ಹವೀಜ ಇವು ಹೆಚ್ಚಾಗಿ ಬೆಳೆಯುತ್ತವೆ. ಬೆಲ್ಲದ ವ್ಯಾಪಾರವಂತೂ ಅತ್ಯಧಿಕ. ೧೪೫ ರೂ. ಗಳ ತೂಕದ, ಶೇರು, ೪೦ ಶೇರುಗಳ ಮಣ, ಕಟ್ಟಿಗೆಯ ಮೇಲೆ ಚಿತ್ರಗಳನ್ನು ಕೊರೆಯುವ ಕೈಗಾರಿಕೆಯು ಇಲ್ಲಿ ವಿಶೇಷವಾಗಿದೆ. ಇಲ್ಲಿ ಬೂಟುಗಳನ್ನು ಸಿದ್ದಗೊಳಿಸುವ ಒಂದು ಕಾರ್ಯಾಲಯವಿದೆ.

ದಲ್ಲಾಲಿಗಳು : ೧. ಶ್ರೀನಿವಾಸ ರಾಮೇಶ್ವರ ೨. ಮಥುರಾದಾಸ ಭಗವತಿ ಪ್ರಸಾದ ೩. ಹರದೇವದಾಸ ಮುರಲಿಧರ ೪. ಗೋರಧನ ರಾಮನಿವಾಸ. ರೇಲ್ವೆ ಮಾರ್ಕ G.K.P.

೪೪. **ಗೋಂದಲ ಕಾಠಿಯಾವಾಡ : Gondal (J.R.[G]Ry)**

ಇದು ಕಾಠೇವಾಡದ ರಾಜಧಾನಿಯ ಪಟ್ಟಣವಾಗಿದೆ. ಇಲ್ಲಿ ಆನೆಯ ದಂತಗಳಿಂದ ನಾನಾ ಚಿತ್ರ ವಿಚಿತ್ರವಸ್ತುಗಳು ಸಿದ್ಧವಾಗುತ್ತವೆ. ಇಲ್ಲಿ ಸಬಕಾರವನ್ನು ಮಾಡುವ ಕಾರ್ಯಾಲಯವೂ ಇದೆ.

ಬೆಳೆ ಮತ್ತು ತೂಕ : ಜೋಳ, ಸಜ್ಜೆ, ಗೋದಿ, ಎಳ್ಳು, ಮೆಂಥೆ, ಬೆಳ್ಳುಳ್ಳಿ, ಔಡಲ, ಮೆಣಸಿನಕಾಯಿ ಇವು ಹೆಚ್ಚಾಗಿ ಬೆಳೆಯುತ್ತವೆ.

೪೦. ರೂ. ಗಳ ತೂಕದ ಶೇರು, ೪೦ ಶೇರಿನ ಮಣ, ಒಂದು ಚೀಲಕ್ಕೆ ಸ್ಟೇಶನ್ನಿಗೆ ೩ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಲಿಗಳು : ೧. ಮಾಯಾಚಂದ ಪುರುಷೋತ್ತಮ ೨. ವೃಜಪಾಲ ಕೇಶವಜಿ ೩. ಕಾಂಜಿ ಪೋಪಟ ೪. ಸುಂದರಜಿ ರಾಮಜಿ.

೪೫. **ಗೋಹಟಿ ಅಸಾಮ ಪ್ರಾಂತ : Gauhati (A.B.&.E.B.Ry)**

ಇಲ್ಲಿ ಅಕ್ಕಿ ವ್ಯಾಪಾರವು ವಿಶೇಷವಾಗುತ್ತದೆ. ಆಲುಗಡ್ಡಿಯು ಇಲ್ಲಿಂದ ಗುಜರಾಥ ಪ್ರಾಂತಕ್ಕೆ ಹೆಚ್ಚಾಗಿ ಹೋಗುತ್ತದೆ. ರೇಶಿಮೆಯಿಂದ ನೇಯುವ ಕಾರ್ಯವು ಇಲ್ಲಿ ಹೆಚ್ಚಾಗಿ ಜರುಗುತ್ತದೆ. ಇದು ವ್ಯಾಪಾರಕ್ಕೆ ಬಹು ಪ್ರಸಿದ್ದವಾದ ಸ್ಥಳವಾಗಿದೆ.

ಬೆಳೆ ಮತ್ತು ತೂಕ : ಬತ್ತ, ಉಳ್ಳಾಗಡ್ಡಿ, ಬೆಳ್ಳುಳ್ಳಿ, ಮೆಣಸಿನಕಾಯಿ ಹೆಚ್ಚಾಗಿ ಬೆಳೆಯುತ್ತವೆ. ೮೦ ರೂ. ಗಳ ತೂಕದ ಶೇರು, ೪೦ ಶೇರುಗಳ ಮಣ. ಒಂದು ಚೀಲಕ್ಕೆ ಸ್ಟೇಶನ್ನಿಗೆ ೨ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಳಿಗಳು : ೧. ರತನಚಂದ ಸೌಭಾಗ್ಯಚಂದ ಪಾರ್ಸಿಬಜಾರ. ೨. ಕಾಲುರಾಮ ಸುಖಲಾಲ ೩. ಉದೆಚಂದ ಕಿಸನ್‌ಚಂದ, ೪. ಸಾಲಿಂಗರಾಮ ಚುನಿಲಾಲ, ರೇಲ್ವೆ ಮಾರ್ಕ G.H.

೪೬. **ಜಬಲಪುರ** Jabbalpore **ಸಿ.ಟಿ.**(G.I.P& EL & BNRy) : ಇದು ವ್ಯಾಪಾರಕ್ಕೆ ಬಹು ಪ್ರಸಿದ್ಧ ಸ್ಥಳ. ೮೪ ಸಾವಿರ ಜನಸಂಖ್ಯೆಯಿದೆ. ಇಲ್ಲಿ ಕಾಜಿನ ಕಾರ್ಯಾಲಯವುಂಟು. ಸತರಂಜಿಮಾಡುವ ಕೆಲಸವು ಇಲ್ಲಿ ಹೆಚ್ಚಾಗಿ ನಡೆಯುತ್ತದೆ. ಶಿಂಗಾಪುರದ ಹತ್ತಿರ ಕಲ್ಲಿದ್ದಲು ಗಣಿಯಿದೆ.

ಬೆಳೆ ಮತ್ತು ತೂಕ : ಗೋದಿ, ಕಡಲಿ, ಎಳ್ಳು, ಹೆಸರು, ಸಜ್ಜಿ, ಉದ್ದು, ಇವು ಇಲ್ಲಿ ವಿಶೇಷವಾಗಿ ಬೆಳೆಯುತ್ತವೆ. ೮೦ ರೂ. ಗಳ ತೂಕದ ಶೇರು, ೪೦ ಸೇರುಗಳ ಒಂದು ಮಣ.

ದಲ್ಲಾಲಿಗಳು : ೧ ಉಮರಚಂದ ಭಯಾಲಾಲ ೨. ಕಾದುಲಾಲ ಕಸ್ತುರಚಂದ ೩. ಮನುಲಾಲ ಕನ್ಯಾಲಾಲ. ೪. ಹನುಮಾನ ಪ್ರಸಾದ ದೇವಿಪ್ರಸಾದ. ರೇಲ್ವೆ ಮಾರ್ಕ J.G.P.

೪೭. **ಜಲಗಾಂವ ಪೂರ್ವ ಖಾಣದೇಶ : Jalgaon (G.I.P.Ry)**

ಇಲ್ಲಿ ಬಟ್ಟೆಯಗಿರಣಿಯಿದೆ. ಎಣ್ಣೆಯ ಕಾರ್ಯಾಲಯವೂ ಇದೆ. ಬೇಳೆಗಳನ್ನು ಮಾಡುವ ಕೆಲಸವು ಇಲ್ಲಿ ವಿಶೇಷವಾಗಿ ನಡೆಯುತ್ತದೆ.

ಬೆಳೆ ಮತ್ತು ತೂಕ : ಜೋಳ, ಸಜ್ಜೆ, ಹತ್ತಿ, ಹವೀಜ, ಉದ್ದು, ಹೆಸರು, ತೊಗರಿ, ಇವು ಹೆಚ್ಚಾಗಿ ಬೆಳೆಯುತ್ತವೆ.

ದಲ್ಲಾಲಿಗಳು : ೧. ಗೋವಿಂದರಾಜು ಸೀತಾರಾಮ ೨. ಜೈಕಿಸಾನ ರಾಮವಿಲಾಸ ೩. ಜೈತಮಲ ಕಿಸನಲಾಲ ೪. ಧನಜಿಹೀರಾಲಾಲ. ರೇಲ್ವೆ ಮಾರ್ಕ J.L.

೪೮. **ಜಾಮನಗರ ಕಾಠೇವಾಡ : Jamanagar (J.A.M.Ry)**

ಇದು ರಾಜಧಾನಿಯು. ಇಲ್ಲಿ ೨೬ ಸಾವಿರ ಜನಸಂಖ್ಯೆಯಿದೆ. ಇಲ್ಲಿ ರೇಶಿಮೆಯ ಮತ್ತು ಜರಿಯ ಕೆಲಸಗಳು ಹೆಚ್ಚಾಗಿ ನಡೆಯುತ್ತವೆ.

ಬೆಳೆ ಮತ್ತು ತೂಕ : ಜೋಳ, ಬೆಳ್ಳುಳ್ಳಿ, ಔಡಲ, ಶೇಂಗಾ, ಎಳ್ಳು, ಓಮ ಇವು ಹೆಚ್ಚಾಗಿ ಬೆಳೆಯುತ್ತವೆ. ೪೦ ರೂ. ಗಳ ತೂಕದ ಶೇರು, ೪೦ ಶೇರುಗಳ ಮಣ.

ದಲ್ಲಾಲಿಗಳು : ೧. ಅಮೃತಲಾಲ ಕರಸನಜಿ ೨. ದಲಿಚಂದ ಮಾಣಿಕ ೩. ಹಾಜಿ ಹಾಸಮ ಮಹಮ್ಮದ ೪. ಗೋವಿಂದಜಿ ಕಲ್ಯಾಣಜಿ. ರೇಲ್ವೆ ಮಾರ್ಕ J.A.M.

೪೯. **ಜೈಪುರ : Jaipur (B.&C.Ry)**

ಇದು ಮುಂಬೈಯಿಂದ ೬೯೯ ಮೈಲುಗಳ ದೂರದಲ್ಲಿದೆ. ಅಜಮೀರ ಮಾರ್ಗವಾಗಿ ಹೋಗಬೇಕು. ಇದು ದೇಶಿ ಸಂಸ್ಥಾನವು. ಈ ಹಳೆಯ ರಾಜಧಾನಿಯು ನೋಡುವಂತಿದೆ. ಇಲ್ಲಿ ಕಲ್ಲುಗಳಲ್ಲಿ ಚಿತ್ರಗಳನ್ನು ಕೊರೆಯುವ ಕೆಲಸವು ವಿಶೇಷವಾಗಿ ಜರುಗುತ್ತದೆ. ರಾಮನಿವಾಸ ಎಂಬ ಬಹು ಸುಂದರವಾದ ತೋಟವಿದೆ.

ಬೆಳೆ ಮತ್ತು ತೂಕ : ಜೀರಿಗಿ, ಸಜ್ಜೆ, ಹೆಸರು, ತೊಗರಿ, ಉದ್ದು, ಎಳ್ಳು ಇವು ವಿಶೇಷವಾಗಿ ಬೆಳೆಯುತ್ತವೆ. ೮೬ ರೂ. ಗಳ ತೂಕದ ಶೇರು ೪೦ ಶೇರುಗಳ ಮಣ. ಸ್ಟೇಶನ್ನಿಗೆ ಚೀಲಕ್ಕೆ ೪ ಆಣೆ ವೆಚ್ಚ ಬೀಳುತ್ತದೆ.

ದಲ್ಲಾಲಿಗಳು : ೧. ಅಮೃತಲಾಲ ದುರ್ಗಾಪ್ರಸಾದ ೨. ಛೋಟಾಲಾಲ ಗಣೇಶಲಾಲ ೩. ಗೋಪಿನಾಥ ಬೆಹರಿಲಾಲ ೪. ಗೋವಿಂದರಾಜು ಉದೇರಾಮ. ರೇಲ್ವೆಮಾರ್ಕ J.P.

೫೦. **ಡಿಂಡಿಗಲ್ಲ ಮಧುರಾ ಜಿಲ್ಲಾ : Dindigul (S.I.Ry)**

ಇದು ಮದ್ರಾಸದಿಂದ ೩೧೦ ಮೈಲುಗಳ ದೂರದಲ್ಲಿದೆ. ಇಲ್ಲಿ ಸಿಗರೇಟಿನ ಕಾರ್ಯಾಲಯವಿದೆ.

ಬೆಳೆ ಮತ್ತು ತೂಕ : ಬೆಲ್ಲ, ಶೇಂಗಾ, ತಂಬಾಕು, ಮೆಣಸಿನಕಾಯಿ, ಕಾಫಿ, ಚಹಾ ಇವು ಹೆಚ್ಚು ಬೆಳೆಯುತ್ತವೆ. ಮದ್ರಾಸದ ತೂಕವೇ ಇಲ್ಲಿ ನಡೆಯುತ್ತದೆ.

ದಲ್ಲಾಲಿಗಳು : ೧. ಟಿ.ಕೆ.ಗೋಪಾಲಕೃಷ್ಣ ಶೆಟ್ಟಿಯರ್ ೨. ಎನ್. ಎ. ನಾಗಪ್ಪಶೆಟ್ಟಿ, ೩. ನಾಗರೂ ಬಸಪ್ಪಶೆಟ್ಟಿ ೪. ವ್ಹಿ.ಎ.ಎಸ್. ಆರುಮಗಮ್ ರೇಲ್ವೆ ಮಾರ್ಕ D.G.

೫೧. **ಡೇರಾ ಇಸ್ಮಾಯಿಲಖಾನ : Deraismailkhan (N.W.Ry)**

ಬೆಳೆ ಮತ್ತು ತೂಕ : ಬದಾಮಿ, ಪಿಸ್ತೆ, ಅಂಜೂರು, ಜ್ಯೇಷ್ಠಮಧು, ಕಡಲಿ, ಗೋದಿ, ಶಹಜೀರಿಗಿ, ಇವು ಹೆಚ್ಚು ಬೆಳೆಯುತ್ತವೆ. ೧೦೦ರೂ. ಗಳ ತೂಕದ ಶೇರು. ೪೦ ಶೇರುಗಳ ಮಣ., ಇಲ್ಲಿ ರೇಲ್ವೆ ಸ್ಟೇಶನ್‌ಇಲ್ಲ. ಔಟೆಜನ್ಸಿ ಇದೆ. ಇಲ್ಲಿಂದ ದರಿಯಾಖಾನ್ ಎಂಬ ಸ್ಟೇಶನ್ನಿಗೆ ಸಾಮಾನು ಹೋಗುತ್ತವೆ. ಅದರ ರೇಲ್ವೆ ಮಾರ್ಕ D.J.N.

ದಲ್ಲಾಲಿಗಳು : ೧. ಈಶ್ವರದಾಸ ಛಬೀಲದಾಸ ೨. ಶೋಭರಾಮ ಜಾನಕಿರಾಮ ೩. ಶಾಂತಿಲಾಲ ಉಗಮಸಿ.

೫೨. **ಡಾಕ್ಕಾ : Dacca ಬಂಗಾಲ (E.B& A.B.Ry)**

ಇದು ವ್ಯಾಪಾರದ ಪ್ರಸಿದ್ಧ ಸ್ಥಳ ೭೫ ಸಾವಿರ ಜನಸಂಖ್ಯೆಯಿದೆ. ಮಲಮಲ ಬಹು ಉತ್ತಮ ತರದಲ್ಲಿ ನಾನಾ ರೀತಿಗಳಿಂದ ತಯಾರಾಗುತ್ತದೆ. ದೋತರಗಳು, ಬೆಳ್ಳಿ ಬಂಗಾರಗಳ ಆಭರಣಗಳ ಬಹು ಮೇಲಾದವುಗಳು ಇಲ್ಲಿ ತಯಾರಾಗುತ್ತವೆ.

ಬೆಳೆ ಮತ್ತು ತೂಕ : ಶೇಣಬು, ಭತ್ತ, ಎಳ್ಳು, ಇವು ಹೆಚ್ಚಾಗಿ ಬೆಳೆಯುತ್ತವೆ. ೮೦ ರೂ. ಗಳ ತೂಕದ ಶೇರು, ೮೦ ಶೇರಿನ ಮಣ.

ದಲ್ಲಾಲಿಗಳು : ೧. ಸನಾತನ ನಿತ್ಯಾನಂದರಾಯ ೨. ರಮೇಶಚಂದ್ರ ಬನರ್ಜಿ, ರೇಲ್ವೆ ಮಾರ್ಕ D.A.

೫೩. **ತಾಸಗಾಂವ : Tasagaon (M.S.M.Ry) ಜಿಲ್ಲಾ ಸಾತಾರಾ**

ಇದು ಹುಬ್ಬಳ್ಳಿಯಿಂದ ೨೩೫ ಮೈಲುಗಳ ದೂರದಲ್ಲಿದೆ. ಅಲ್ಲಿ ಅರಿಶಿನದ ವ್ಯಾಪಾರವು ವಿಶೇಷವಾಗಿ ಜರುಗುತ್ತದೆ. ಫಾಲ್ಗುಣದಿಂದ ಆಷಾಢದವರೆಗೆ ಹೊಸ ಮಾಲಿನ ಸುಗ್ಗಿಯು.

ಬೆಳೆ ಮತ್ತು ತೂಕ : ಜೋಳ, ಕಡಲಿ, ಹೆಸರು, ದೊಡ್ಡ ಉದ್ದು, ಅರಿಶಿನ, ಬೆಲ್ಲ ಇವುಗಳ ವ್ಯಾಪಾರ ಹೆಚ್ಚು. ಧಾನ್ಯಗಳ ೮೦ ಶೇರಿನ ಒಂದು ಚೀಲ. ಬೆಲ್ಲ ೧೬ ಬಂಗಾಲಿ ಶೇರುಗಳ ಒಂದು ಮಣ ಇಲ್ಲಿ ರೇಲ್ವೆ ಸ್ಟೇಶನ್ ಇಲ್ಲ. ಇಲ್ಲಿಂದ ಭಿಲವಡಿ ಸ್ಟೇಶನ್ನಿಗೆ ಮಾಲು ಹೋಗುತ್ತದೆ. ಭಿಲವಡಿ ಸ್ಟೇಶನ್ ಮಾರ್ಕ B.V.

ದಲ್ಲಾಲಿಗಳು ೧) ಖುಲಾಸಚಂದ, ಹೇಮಚಂದ, ೨) ಗಿರಿಧರಲಾಲ, ಹಂಸರಾಜ ೩) ಗುರುನಾಥ ದತ್ತಾತ್ರಯ ೪) ಹೀರಾಚಂದ ರಾಯಚಂದ

೫೪. **ತ್ರೀಚನಾಪಲ್ಲಿ : Trichanapalli (S.I.P.Ry)**

ಇದು ಸಾಧಾರಣ ೧ ಲಕ್ಷ ಜನಸಂಖ್ಯೆಯುಳ್ಳ ಪಟ್ಟಣ, ನೋಡತಕ್ಕಂಥ ಸ್ಥಳವು, ಇಲ್ಲಿ ಚಿರೂಟು ಶಿಗಾರೇಟ್‌ಗಳ ಕಾರ್ಯಾಲಯಗಳು ಹೆಚ್ಚು.

ಬೆಳೆಗಳು : ಹವೀಜ, ತೆಂಗು, ಎಳ್ಳು, ಇವು ವಿಶೇಷವಾಗಿ ಬೆಳೆಯುತ್ತದೆ. ರೇಲ್ವೆಮಾರ್ಕ T.P.

ದಲ್ಲಾಲಿಗಳು : ೧. ಯು. ಕೆ. ಕೃಷ್ಣಸ್ವಾಮಿಶೆಟ್ಟಿ ಕ್ಲಾಕ್ ಟವರ್ ೨. ಕೆ. ನಾರಾಯಣ ಸ್ವಾಮಿ ಕುನಾರ ೩. ಎಂ. ಕೆ. ಪಿರಿಯಾಸ್ವಾಮಿಶೆಟ್ಟಿ ಎಂಡ್ ಸನ್ಸ್ ೪. ಎಂ. ಕೆ. ಎಂ. ಖಾದರ ಇಬ್ರಾಹಿಮ್.

೫೫. **ದಿಲ್ಲಿ : Delhi (B.B.& C.F.P.Ry)**

ಇದು ಹಿಂದುಸ್ಥಾನದ ರಾಜಧಾನಿಯು. ಇಲ್ಲಿ ಆರು ರೇಲ್ವೆಗಳು ಬಂದು ಕೂಡಿವೆ. ಉತ್ತರ ಹಿಂದುಸ್ಥಾನದಲ್ಲಿ ಇದು ಪ್ರಸಿದ್ಧ ವ್ಯಾಪಾರ ಸ್ಥಳವು. ಇಲ್ಲಿ ಮೂರು ಲಕ್ಷ ಜನಗಳು ವಾಸವಾಗಿದ್ದಾರೆ. ಪ್ರಾಚೀನ ಕಟ್ಟಡಗಳು ನೋಡತಕ್ಕಂಥವುಗಳಿವೆ. ಸಬಕಾರ ಮತ್ತು ಬಿಸ್ಕಟಗಳ ಕಾರ್ಯಾಲಯಗಳು ಇಲ್ಲಿ ಹೆಚ್ಚು, ಕಬ್ಬಿಣದ ನಾನಾ ಪದಾರ್ಥಗಳೂ ಇಲ್ಲಿ ಹೆಚ್ಚಾಗಿ ತಯಾರಾಗುತ್ತವೆ. ಇದು ಮುಂಬೈಯಿಂದ ೮೬೮ ಮೈಲುಗಳ ದೂರದಲ್ಲಿದೆ.

ಬೆಳೆ ಮತ್ತು ತೂಕ : ಗೋದಿ, ಸಜ್ಜೆ, ಹೆಸರು, ಉದ್ದು ಹೆಚ್ಚಾಗಿ ಬೆಳೆಯುತ್ತವೆ. ೮೦ ರೂ. ಗಳ ತೂಕದ ಶೇರು, ರೇಲ್ವೆ ಮಾರ್ಕ B.B.C.I. Ry.ರೇಲ್ವೆ ಗೆ D.V.L.

ದಲ್ಲಾಲಿಗಳು : ೧. ಭಕ್ಷಿರಾಮ ಜಮನಾದಾಸ ೨. ಬಿಹಾರಿಲಾಲ ಘಾಸಿರಾಮ ೩. ಭಗವಾನದಾಸ ಫತ್ರೆಭಂದ ೪. ಭಗವಾಜಿ ಭಾನಜಿ.

೫೬. **ನವಸಾರಿ : Navasari (B.B.& C.I.Ry)**

ಇದು ಗುಜರಾತದಲ್ಲಿ ಪ್ರಸಿದ್ಧ ವ್ಯಾಪಾರ ಸ್ಥಳವು. ಮುಂಬೈಯಿಂದ ೧೪೯ ಮೈಲು ದೂರದಲ್ಲಿದೆ. ಇಲ್ಲಿ ರೇಶಿಮೆಯ ಕೆಲಸವೂ ಹೆಚ್ಚಾಗಿ ನಡೆಯುತ್ತದೆ. ಮಾವಿನ ಹಣ್ಣುಗಳು ಇಲ್ಲಿ ಹೆಚ್ಚು, ಕಬ್ಬಂತೂ ವಿಶೇಷ ಬೆಳೆಯಲ್ಪಡುವುದರಿಂದ ಬೆಲ್ಲದ ವ್ಯಾಪಾರವು ಬಹು ಹೆಚ್ಚಾಗಿ ನಡೆಯುತ್ತದೆ. ಇಲ್ಲಿ ಬೆಲ್ಲವನ್ನು ಕೊಡದಲ್ಲಿ ತುಂಬುತ್ತಾರೆ.

ಬೆಳೆ ಮತ್ತು ತೂಕ : ಜೋಳ, ಗೋದಿ, ಸಜ್ಜೆ, ಅರಿಶಿನ, ಉದ್ದು, ಕಡಲಿ, ಹೆಚ್ಚಾಗಿ ಬೆಳೆಯುತ್ತವೆ. ೪೦ ರೂ. ಗಳ ತೂಕದ ಶೇರು. ೪೦ ಶೇರುಗಳ ಮಣ.

ದಲ್ಲಾಲಿಗಳು : ೧. ಆತ್ಮಾರಾಮ ಮಕನ ೨. ದುಲಭಾಯಿ ನಾರಾಯಣ. ೩. ಡಾಯಾಭಾಯಿ ದಯಾರಾಮ ೪. ಫಕೀರಚಂದ ಹರಜೀವನ ರೇಲ್ವೆ ಮಾರ್ಕ N.V.S.

೫೭. **ನವಾಲಪಿಟಿಯಾ ಸಿಲೋನ್ : Navalapitiya (Ceylon)**

ಬೆಳೆ ಮತ್ತು ತೂಕ : ಅಡಿಕೆಯ ಬೆಳೆ ವಿಶೇಷ. ತೆಂಗು, ಚಹಾಗಳ ಬೆಳೆಯೂ ಅತ್ಯಧಿಕ. ಇಲ್ಲಿಯ ತೂಕಕ್ಕೆ ಕುಂತು ಎಂದು ಹೇಳುತ್ತಾರೆ. ಇಲ್ಲಿಂದ ಇಲ್ಲಿಯ ಮಾಲು ಸರಕಾರಿ ರೇಲ್ವೆ ಮೂಲಕ ಕೋಲೋಂಬೋ ಎಂಬಲ್ಲಿಗೆ ಬರುತ್ತದೆ. ಅಲ್ಲಿಂದ ಹಡಗಿನ ಮೂಲಕ ಹಿಂದುಸ್ಥಾನಕ್ಕೆ ಬರುತ್ತದೆ. ಇಲ್ಲಿ ೨ ಆಣೆ ೪ ಆಣೆ ೮ ಆಣೆ ನಡೆಯುವುದಿಲ್ಲ. ರೂಪಾಯಿ ಮತ್ತು ದುಡ್ಡುಗಳು ಮಾತ್ರ ನಡೆಯುತ್ತವೆ.

ದಲ್ಲಾಲಿಗಳು : ೧. ಅಬದುಲ್ ಹುಶೇನ ಇಸುಫ ಅಲ್ಲಿ, ಗಂಫುಲಾರೋಡ ೧೭.

೫೮. **ನಾಗಪುರ : Nagapur (B.N.Ry & G.I.P.Ry)**

ಇದು ಮಧ್ಯಪ್ರಾಂತದಲ್ಲಿ ಬಹು ಪ್ರಸಿದ್ದ ವ್ಯಾಪಾರ ಸ್ಥಳವು. ಇಲ್ಲಿ ಸಾಧಾರಣ ೧ ಲಕ್ಷ ಜನ ಸಂಖ್ಯೆಯಿದೆ. ಇಲ್ಲಿಯ ಅನೇಕ ಕಟ್ಟಡಗಳು ನೋಡತಕ್ಕವುಗಳಾಗಿವೆ.

ಬೆಳೆ ಮತ್ತು ತೂಕ : ಗೋದಿ, ಕಡಲಿ, ಜೋಳ, ಎಳ್ಳು, ಹತ್ತಿ, ಹೆಸರು ಇವು ಹೆಚ್ಚಾಗಿ ಬೆಳೆಯುತ್ತವೆ, ಸ್ಟೇಶನ್ನಿಗೆ ಚೀಲಕ್ಕೆ ಮೂರು ಆಣೆ ಕೂಲಿ ಬೀಳುತ್ತದೆ.

ದಲ್ಲಾಲಿಗಳು : ೧. ಭೀಮಾಜಿ ಮೋತಿಚಂದ ೨. ಜನಮದಾಸ ಪೋತದಾರ ೩. ಬಾಳಾಜಿ ವಿನಾಯಕ ೪. ಮೋತಿಲಾಲ ಟಿಕಾರಿ.

೫೯. **ಪಾನಿಪತ (Panipat) EIRly ಜಿಲ್ಲಾ ಕರನಾಲ :**

ಬೆಳೆ ಮತ್ತು ತೂಕ : ಇದು ಐತಿಹಾಸಿಕ ಪ್ರಸಿದ್ಧ ಸ್ಥಳವು. ಇಲ್ಲಿ ೨೮ ಸಾವಿರ ಜನಸಂಖ್ಯೆಯಿದೆ. ಇಲ್ಲಿ ಹವೀಜ, ಜೀರಿಗೆ, ಬೆಲ್ಲ, ತಂಬಾಕು, ಮೆಣಸಿನಕಾಯಿ, ಇವುಗಳ ವ್ಯಾಪಾರವು ಹೆಚ್ಚಾಗಿ ಜರುಗುತ್ತದೆ. ೮೦ ರೂ. ತೂಕದ ಶೇರು. ೫೦ ಶೇರುಗಳ ಮಣ.

ಇಲ್ಲಿ ಹಿತ್ತಾಳಿ, ತಾಮ್ರಗಳ ಪಾತ್ರೆಗಳನ್ನು ಹೆಚ್ಚಾಗಿ ಮಾಡುತ್ತಾರೆ. ಪಾಟಿ, ಪೆನ್‌ಸಿಲ್‌ಗಳ ಕಾರ್ಯಾಲಯವಿದೆ.

ದಲ್ಲಾಲಿಗಳು : ೧. ಕಾಲುರಾಮ ವಸಂತಿಲಾಲ ೨. ಗಣೇಶದಾಸ ಶ್ರೀರಾಮ ೩. ಬಾಲ್ಕೃಷ್ಣ ಧನರಾಜ ರೇಲ್ವೆ ಮಾರ್ಕ P.N.P.

೬೦. **ಬೆಜವಾಡ : Bezwada (N.G.S.Ry. M.S.M.Ry)**

ಇದು ವಾಡಿಯಿಂದ ೩೩೮ ಮೈಲುಗಳ ಮತ್ತು ಸಿಕಂದರಬಾದಿನಿಂದ ೨೧೭ ಮೈಲುಗಳ ಅಂತರದಲ್ಲಿದೆ. ಇಲ್ಲಿ ಖಾದಿ ಬಟ್ಟೆಯು ವಿಶೇಷವಾಗಿ ಸಿದ್ಧವಾಗಿ ಬೇರೆ ಬೇರೆ ಭಾಗಗಳಿಗೆ ಹೋಗುತ್ತಾ ಇದೆ. ಇಲ್ಲಿ ಸಾಧಾರಣ ೨೫ ಸಾವಿರ ಜನಸಂಖ್ಯೆಯಿದ್ದು ವ್ಯಾಪಾರದ ಕೇಂದ್ರವಾಗಿದೆ.

ಬೆಳೆ ಮತ್ತು ತೂಕ : ಅಕ್ಕಿಯು ಮುಖ್ಯ ಬೆಳೆಯಾಗಿದೆ. ಇದಲ್ಲದೆ ಜೋಳ, ಶೆಜ್ಜೆ, ಹೆಸರು, ಔಡಲ ಹವೀಜ, ಅರಿಷಿಣ ಮೊದಲಾದವುಗಳನ್ನು ಬೆಳೆಯುತ್ತಾರೆ.

ಅಕ್ಕಿಯ ಧಾರಣೆಯು ೨೪೮ ರತ್ತಲಿನ ಒಂದು ಚೀಲಿನ ಮೇಲಿದೆ. ಒಂದು ಚೀಲಿಗೆ ಸ್ಟೇಶನ್‌ತಲ್ಪುವ ವೆಚ್ಚವು ಸಾಧಾರನ ೪ ಆಣೆ ಬೀಳುತ್ತದೆ. ರೇಲ್ವೆ ಮಾರ್ಕ B.A.Z.

ದಲ್ಲಾಲಿಗಳು : ೧. ಲಕ್ಷ್ಮಣ ದುಡಪೆ ಚುಂಡೂರ ನಾಗಭೂಷಣ ೨. ಗಣಪತ ದೇವರಾಜ ೩. ಶಂಕರಪ್ಪ ಸಕ್ರಿ. ೪. ಗಣೇಶರಾಮ ಗಂಗಾಬಿಶನ್ ೫. ಭಾಗೀರಥ ಮೋಹನಲಾಲ.

೬೧. **ಬಡೋಚ್ : BRICH (B.B.& Ry. C.I.Ry)**

ಇದು ಮುಂಬೈಯಿಂದ ೨೪೦ ಮೈಲುಗಳ ದೂರದಲ್ಲಿರುವ ಬಂದರವಾಗಿದೆ. ಇಲ್ಲಿ ಸಾಧಾರಣ ೪೫ ಸಾವಿರ ಜನಸಂಖ್ಯಾಯಿದೆ. ಇಲ್ಲಿ ಹತ್ತಿಯು ವಿಶೇಷವಾಗಿ ಬೆಳೆಯುತ್ತದೆ.

ಬೆಳೆ ಮತ್ತು ತೂಕ : ತೆಂಗಿನಕಾಯಿಯ ವ್ಯಾಪಾರವಾದರೂ ಇಲ್ಲಿ ಹೆಚ್ಚಾಗಿ ಜರುಗುತ್ತದೆ. ೪೦ ರೂ. ಗಳ ತೂಕಿನ ಒಂದು ಶೇರು. ೪೦ ಶೇರುಗಳ ಒಂದು ಮಣ. ಒಂದು ಚೀಲಕ್ಕೆ ಸ್ಟೇಶನ್ನಿಗೆ ಮುಟ್ಟಿಸುವ ವೆಚ್ಚವು ಸಾಧಾರಣ ೩ ಆಣೆ ಬರುತ್ತದೆ. ದಲ್ಲಾಲಿ ೧೦೦ ಕ್ಕೆ ೧ ರೂ. ರೇಲ್ವೆ ಮಾರ್ಕ್ B.H.

ದಲ್ಲಾಲಿಗಳು : ೧. ಈಶ್ವರಭಾಯಿ ಮಕನದಾಸ ೨. ಚುನಾಲಾಲ ಭಗವಾನ್ ೩. ಕಾಲಿದಾಸ ಗುಲಾಬಚಂದ. ೪. ತ್ರಿಭುವನದಾಸ ದ್ವಾರಕದಾಸ.

೬೨. **ಭಾವನವಗರ : Bhavanagr (B.S.Ry)**

ಇದು ಕಾಠೇವಾಡದಲ್ಲಿಯ ರಾಜಧಾನಿಯ ಸ್ಥಳವಾಗಿದೆ. ಇಲ್ಲಿ ಸಾಧಾರಣ ೬೦ ಸಾವಿರ ಜನಸಂಖ್ಯೆಯಿದೆ. ಇದು ಬಂದರವಿದ್ದು ವ್ಯಾಪಾರದ ಕೇಂದ್ರವಾಗಿದೆ.

ಬೆಳೆ ಮತ್ತು ತೂಕ : ಅಕ್ಕಿ, ಜೋಳ, ಶೆಜ್ಜಿ, ಗೋಧಿ, ಔಡಲ ಮೊದಲಾದವುಗಳು, ಇಲ್ಲಿ ದೇಶಿ ಸಕ್ಕರೆಯು ಸಿದ್ದವಾಗುತ್ತದೆ. ೪೦ ರೂ. ಗಳ ತೂಕದ ಒಂದು ಶೇರು. ೪೦ ಶೇರುಗಳ ಒಂದು ಮಣ. ಇಲ್ಲಿ ಸಕ್ಕರೆಯ ವ್ಯಾಪಾರವು ವಿಶೇಷವಾಗಿ ಜರುಗುತ್ತದೆ.

ದಲ್ಲಾಲಿಗಳು : ೧. ಕಲ್ಯಾಣ ದೇವಜಿ, ೨. ನರೋತ್ತಮ ಲವಜೀಭಾಯಿ ೩. ಹರಜೀವನ ಛಗನಲಾಲ.

೬೩. **ಮದ್ರಾಸ್ : Madras (M.S.M. & S.I.Ry)**

ಇದು ಇಲಾಖೆಯ ಮುಖ್ಯಸ್ಥಳವೂ ಬಂದರುವೂ ಆಗಿದೆ. ಇಲ್ಲಿ ಸಾಧಾರಣ ೫ ಲಕ್ಷ ೨೫ ಸಾವರಿ ಜನಸಂಖ್ಯೆಯಿದೆ. ಇದು ಮುಂಬೈಯಿಂದ ೭೯೪ ಮೈಲು ಮತ್ತು ಕಲಕತ್ತದಿಂದ ೧೦೩೨ ಮೈಲುಗಳ ಅಂತರದಲ್ಲಿದೆ.

ಬೆಳೆ ಮತ್ತು ತೂಕ : ಇಲ್ಲಿಂದ ಚಹಾ, ತಂಬಾಕು ಮತ್ತು ಅಕ್ಕಿ ಇವು ಹೇರಳವಾಗಿ ಬೇರೆ ಭಾಗಗಳಿಗೆ ಹೋಗುತ್ತವೆ. ೧೩೬ ರತ್ತಲಿನ ಒಂದು ಚೀಲದ ಮೇಲೆ ಧಾನ್ಯದ ಬೆಲೆಯಿದೆ. ಇಲ್ಲಿ ವ್ಯಾಪಾರವು ಬಹು ದೊಡ್ಡ ಪ್ರಮಾಣದಿಂದ ಜರುಗುತ್ತದೆ. ರಾಣೀ ಬಾಗ್, ಹಾಯಕೋರ್ಟ ಮೊದಲಾದ ನೋಡತಕ್ಕಂತಹ ಕಟ್ಟಡಗಳು ಇಲ್ಲಿವೆ. ೧೦೦ ಕ್ಕೆ ೧॥ ರೂ. ದಲ್ಲಾಲಿ ಇದೆ ರೇಲ್ವೆ ಮಾರ್ಕ M.A.S.

ದಲ್ಲಾಲಿಗಳು : ಸಂತರಾಮ ಸಂಕರ ೧೧೪, ಸಾವಕಾರ ಪೇಟೆ ೧. ಹರಚಂದ ರೂಪಚಂದ ಅಂಡರಸನ್ ಸ್ಟ್ರೀಟ್ ೩. ನಾಥಾಭಾಯಿ ಸಾವಕಾರಪೇಟೆ.

೬೪. **ಮುಂಬಯಿ : Mombay(G.I.P.Ry and & B.B.Ry. C.I.Ry)**

ಇದು ಭರತಖಂಡದಲ್ಲಿಯ ವ್ಯಾಪಾರದ ಮಿಗಿಲಾದ ಪಟ್ಟಣವು. ಇದು ರಾಯಚೂರಿನಿಂದ ೪೪೩ ಮೈಲುಗಳ ಮತ್ತು ಬೆಂಗಳೂರಿನಿಂದ ೭೪೪ ಮೈಲುಗಳ ದೂರದಲ್ಲಿದೆ. ಇಲ್ಲಿ ಸಾಧಾರಣ ಹನ್ನೆರಡು ಲಕ್ಷ ಜನಸಂಖ್ಯೆಯಿದೆ. ಜಗತ್ತಿನ ಸರ್ವ ಭಾಗಗಳ ಪದಾರ್ಥಗಳೂ ಇಲ್ಲಿಗೆ ಬಂದು ಹಿಂದುಸ್ಥಾನದ ಬಹುಭಾಗಗಳಿಗೆ ಹೋಗುತ್ತವೆ. ಇಲ್ಲಿ ಸಬಕಾರದ, ಕಬ್ಬಿಣದ ಸಿಗರೇಟಿನ, ಮತ್ತು ಅಲ್ಯುಮಿನಿಯಂ ಧಾತುಮಿನ ಅನೇಕ ಕಾರ್ಯಾಲಯಗಳಿವೆ. ಗವ್ಹರ್ನಮೆಂಟ್. ಹೌಸ್, ವ್ಹಿಕ್ಟೋರಿಯಾ ಗಾರ್ಡನ್, ಮ್ಯುಜಿಮ್ ಮೊದಲಾದವುಗಳು ನೋಡತಕ್ಕಂಥವುಗಳಾಗಿವೆ. ಇಲ್ಲಿ ಸಾಧಾರಣವಾಗಿ ೨೮ ರೂ. ಗಳ ತೂಕಿನ ಒಂದು ಶೇರು ಎಣಿಸಲ್ಪಡುತ್ತವೆ. ಬೋರಿಬಂದರಿನ ರೇಲ್ವೆ ಮಾರ್ಕ B.B.

ದಲ್ಲಾಲಿಗಳು : ೧. ಬಸಪ್ರಭಪ್ಪ. ಘಟಿನಟ್ಟಿ, ಪ್ರಿನ್ಸೆಸ್ ಸ್ಟ್ರೀಟ್ ನಂ ೨. ೨. ಶಂಕ್ರಪ್ಪ ಸಕ್ರಿ ಮತ್ತು ಮುಚಕಂಡೆಪ್ಪ ಕುಪಸ್ತ, ಕಾಲ್ಬಾದೇವಿ ರೋಡ್ ನಂ.೨. ೩. ಖೂಪಚಂದ ಫತ್ತೇಚಂದ ಸರಾಫ್ ಬಜಾರ. ೪. ಮುರಿಗೆಪ್ಪ ರುದ್ರಪ್ಪ ಗೂಗವಾಡ ಕಾಲ್ಬಾದೇವಿರೋಡ್ ನಂ. ೨.

೬೫. ಎವಲಾ : **Yeola (G.I.P. Ry)**

ಇದು ನಾಶಿಕ ಜಿಲ್ಲೆಯ ವ್ಯಾಪಾರದ ಮುಖ್ಯ ಪಟ್ಟಣವಾಗಿದೆ. ಇಲಿ ರೇಶಿಮೆಯ ನೂಲಿನ ಮತ್ತು ಜರದ ಕೆಲಸಗಳು ವಿಶೇಷವಾಗಿ ಜರುಗುತ್ತವೆ. ಅನೇಕ ತರದ ರೇಶ್ಮಿ ಸೀರೆ, ಪಿತಾಂಬಥಗಳು, ಪಗಡಿಗಳು, ಸಿದ್ದವಾಗುತ್ತವೆ. ಇದು ರೇಶ್ಮಿ ಮತ್ತು ಜರದ ಕೆಲಸದ ಬಗ್ಗೆ ಪ್ರಸಿದ್ಧವಿರುತ್ತದೆ. ರೇಲ್ವೆ ಮಾರ್ಕ. Y. L.

ದಲ್ಲಾಲಿಗಳು : ೧. ರಾಮಚಂದ್ರ ತ್ರಿಂಬಕರಾವ ಕಾವೇರ ೨. ಶಂಕರಲಾಲ ತಳಸೀದಾಸ ೩. ನಾರಾಯಣದಾಸ ಸಾಲಾಗ್ರಾಮ.

೬೬. ರಂಗೂನ : **(Rangoon) (Burma)**

ಇದು ಬರ್ಮಾದೇಶದಲ್ಲಿಯ ವ್ಯಾಪಾರದ ಕೇಂದ್ರವಾಗಿದೆ. ಇಲ್ಲಿಂದ ಹಡಗಿನ ಮಾರ್ಗವಾಗಿ ಪದಾರ್ಥಗಳು ಹಿಂದುಸ್ಥಾನಕ್ಕೆ ಬರುತ್ತವೆ. ಇಲ್ಲಿ ಶ್ವೇಡೆಗೋರ್ ಎಂಬ ಜಗತ್ತಿನಲ್ಲಿಯೇ ದೊಡ್ಡದಾದ ಬೌದ್ಧ ಮಂದಿರವಿರುತ್ತದೆ.

ಬೆಳೆ ಮತ್ತು ತೂಕ : ಇಲ್ಲಿ ಮುಖ್ಯವಾಗಿ ಅಕ್ಕಿ, ಉದ್ದು ಮೊದಲಾದವುಗಳು ಬೆಳೆಯುವವು. ಕಟ್ಟಡಿನ ಕಟ್ಟಿಗೆಯು ಕೂಡಾ ವಿಶೇಷವಾಗಿ ಪರಸ್ಥಳಕ್ಕೆ ಹೋಗುತ್ತದೆ.

ದಲ್ಲಾಲಿಗಳು : ೧. ಸಮಾಜಿರಾಮಜಿ ಆಂಡ್ ಸನ್ಸ್ ಮಾಗೆಲ ಸ್ಟ್ರೀಟ್ ೨. ಭವಾನಜಿ ಮುಲಜಿ ಆಂಡ್ ಕಂಪನಿ ೯೨, ಮೊಗಿಲ್ ಸ್ಟ್ರೀಟ.

೬೭. ಶ್ರೀನಗರ : **Shrinagar (ಕಾಶ್ಮೀರ)**

ಇದು ಕಾಶ್ಮೀರ ಸಂಸ್ಥಾನದ ರಾಜಧಾನಿಯ ಸ್ಥಳವಾಗಿದೆ. ಜನಸಂಖ್ಯೆ ಸಾಧಾರಣ ೧ ಲಕ್ಷ ೪೫ ಸಾವಿರ ಇದೆ. ಇಲ್ಲಿ ಬೆಳ್ಳಿ ಬಂಗಾರದ ಕೆಲಸವು ವಿಶೇಷವಾಗಿ ನಡೆಯುತ್ತದೆ. ಕಲ್ಲಿನ ಕುಸುರಿನ ಕೆಲಸವಾದರೂ ನಡೆಯುತ್ತದೆ. ರಾವಲಿಪಿಂಡಿ ಸ್ಟೇಶನ್ನವು ಸಮೀಪವಾಗಿದೆ.

ಬೆಳೆ ಮತ್ತು ತೂಕ : ಇಲ್ಲಿಂದ ಅಕ್ಕಿ, ಗೋದಿ, ಎಳ್ಳು, ಕೇಶರಿ, ಕಸ್ತೂರಿ, ಶಿಲಾಜಿತ, ಖಸಖಸಿ, ಇಂಗ್, ದ್ರಾಕ್ಷಿ, ಜರದಾಳ ಮೊದಲಾದವುಗಳು ಇತರ ಭಾಗಗಳಿಗೆ ವಿಶೇಷವಾಗಿ ಹೋಗುವವು. ೮೦ ರೂ. ಗಳ ತೂಕದ ಒಂದು ಶೇರು, ೪೦ ಶೇರುಗಳ ಒಂದು ಮಣ. ರಾವಲ್‌ಪಿಂಡಿ. NWRyR.W.E.

ದಲ್ಲಾಲಿಗಳು : ೧. ಪಂಡಿತ ಶ್ರೀಕಾಂತ ಕಾಚರು ಆಂಡ್ ಸನ್ಸ್ ಸೆಕೆಂಡ್ ಬ್ರಿಜ್ ೨. ಸಿಂಧುಮಲ್ ದೇಶರಾಜ ಮಹಾರಾಜಗಂಜ ೩. ಬಾಲಮುದದಿಂದ ಸುಗನಚಂದ ಮಹಾರಾಜಗಂಜ.

೬೮. **ಅಥಣಿ : Athani**

ಈ ಪಟ್ಟಣವು ಬೆಳಗಾವ ಜಿಲ್ಲೆಯಲ್ಲಿದ್ದು ಶೇಡಬಾಳ ಸ್ಟೇಶನ್ನಿನಿಂದ ೨೧ ಮೈಲಿನ ಮೇಲಿದೆ. ಇಲ್ಲಿ ಕಿರಾಣಿ ಮತ್ತು ಹತ್ತಿ ಅರಳಿಯ ವ್ಯಾಪಾರವು ವಿಶೇಷವಾಗಿ ಜರಗುತ್ತದೆ. ೮೦ ರೂ. ಗಳ ತೂಕದ ಒಂದು ಶೇರು. ಶೇಡಬಾಳ ಸ್ಟೇಶನ್ನಿನ ರೇಲ್ವೆ ಮಾರ್ಕ S.E.D.

ದಲ್ಲಾಲಿಗಳು : ೧. ಬಶೇಟ್ಟೆಪ್ಪ. ಜನ ಜುನವಾಡ ೨. ಗುರಪ್ಪ ಚನಬಸಪ್ಪ ಹಾವೇರಿ. ೩. ಕುಬೇರಪ್ಪ ದೇವೇಂದ್ರಪ್ಪ ಕೋಪಾ.

೬೯. **ಅರಸೀಕೆರಿ : Arsikere (M.S.M.Ry)**

ಇದು ಮೈಸೂರು ಸಂಸ್ಥಾನದಲ್ಲಿದ್ದು ಪುಣೆಯಿಂದ ೫೨೨ ಮೈಲುಗಳ ಮತ್ತು ಬೆಂಗಳೂರಿನಿಂದ ೧೦೩ ಮೈಲುಗಳ ಅಂತರದಲ್ಲಿದೆ. ಇಲ್ಲಿ ಕೊಬ್ಬರಿ, ಶ್ರೀಫಲ, ಎಳ್ಳು, ಎಣ್ಣೆ, ಔಡಲ, ಮೆಣಸು, ಹತ್ತಿ, ಬೆಲ್ಲ ಯಾಲಕ್ಕಿ ಮೊದಲಾದವುಗಳು ದೊರೆಯುವವು. ಕೊಬ್ಬರಿ ಧಾರಣೆಯು ೩೨ ರತ್ತಲಿನ ಒಂದು ಮಣದ ಮೇಲಿದೆ. ರೇಲ್ವೆ ಮಾರ್ಕ A.S.K.

ದಲ್ಲಾಲಿಗಳು : ೧. ಶಿವಲಿಂಗಪ್ಪ ಸಜ್ಜನಶೆಟ್ಟಿ. ೨. ಭೀಮಪ್ಪ, ತಮಪ್ಪ, ವಿಜಾಪುರ ೩. ಉರೇಕೊಂಡಿ ಚನಬಸಪ್ಪ.

೭೦. **ಅಕ್ಕಲಕೋಟ : Akklkot (G.I.P.Ry)**

ಇದು ಸಂಸ್ಥಾನದ ಮುಖ್ಯ ಸ್ಥಳವಾಗಿದೆ. ಧಾನ್ಯಗಳ ವ್ಯಾಪಾರವು ಇಲ್ಲಿ ನಡೆಯುತ್ತದೆ. ಇಲ್ಲಿ ಸಾಧಾರಣ ೨೨ ಸಾವಿರ ಜನಸಂಖ್ಯೆಯಿದೆ. ರೇಲ್ವೆ ಮಾರ್ಕ. A.K.O.T.

ದಲ್ಲಾಲಿಗಳು : ೧. ಗದಿಗೆಪ್ಪ ಶಿವಲಿಂಗಪ್ಪ ಭೀಮಪುರೆ ೨. ಶಿವಪ್ಪ ರೇವಣಸಿದ್ದಪ್ಪ ಘಡಶೆಟ್ಟಿ ೩. ನಾನಾಚಂದ ಸುಖಾರಾಮ.

೭೧. **ಇಲಕಲ್ಲ : Ilkal**

ಇದು ವಿಜಾಪೂರ ಜಿಲ್ಲೆಯಲ್ಲಿಯ ಸೀರೆ ವ್ಯಾಪಾರದ ಕೇಂದ್ರವಾಗಿದೆ. ಇಲ್ಲಿಯ ಸೀರೆಗಳು ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಗೆ ವಿಫುಲವಾಗಿ ಹೋಗುತ್ತವೆ. ಇಲ್ಲಿ ಸಾಧಾರಣ ೧೦ ಸಾವಿರ ಮಗ್ಗಗಳಿವೆ.

ದಲ್ಲಾಲಿಗಳು : ೧. ಗುರಸಂಗಪ್ಪ ಮೋಟಗಿ ೨. ಶಂಕ್ರಪ್ಪ. ಸಕ್ಕರಿ. ೩. ರಾಚಯ್ಯ ವಸ್ತ್ರದ.

೭೨. **ಉಡುಪಿ : Udupi**

ಇದು ಮಂಗಳೂರ ಜಿಲ್ಲೆಯಲ್ಲಿ ಒಂದು ಬಂದರವಿದೆ. ಇಲ್ಲಿ ಶುಂಟಿ, ಮೆಣಸು, ಬೆಲ್ಲ, ಚಂದನ ಮೊದಲಾದವುಗಳು ದೊರೆಯುವವು. ೨೮ ರತ್ತಲಿನ ಒಂದು ಮಣ.

ದಲ್ಲಾಳಿಗಳು : ೧. ಪಾಂಡ್ಯಾ ನಾನಾಲಾಲ ಗೋವಿಂದಜಿ.

೭೩. **ಕಡಪಾ : (Cuddapoh) (M.S.M.Ry)**

ಇದು ಮದ್ರಾಸ ಇಲಾಖೆಯಲ್ಲಿದೆ. ಇಲ್ಲಿ ಅರಿಷಣವು ವಿಶೇಷವಾಗಿ ಬೆಳೆಯುತ್ತದೆ. ೨೫. ರತ್ತಲಿನ ಒಂದು ಮಣ ೨೦ ಮಣಗಳ ಒಂದು ಖಂಡಿಯ ಮೇಲೆ ಬೆಲೆಯಿದೆ. ರೇಲ್ವೆ ಮಾರ್ಕ H. X.

ದಲ್ಲಾಲಿಗಳು : ೧. ಧಗರ್ವಾ ಪದಮಜಿ ೨. ಜಾನಕೀದಾಸ ಗೋಪಾಳದಾಸ ೩. ರಾಜಮಲ್ಲ ಪುನಮಚಂದ.

೭೪. **ಕೋಲಾರ : (Kolar) (Mysore Ry)**

ಇದು ಮೈಸೂರ ಸಂಸ್ಥಾನದಲ್ಲಿದ್ದು, ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ಹಿಂದುಸ್ಥಾನದ ಜಗತ್ಪ್ರಸಿದ್ಧವಿರುವ ಬಂಗಾರದ ಗಣಿಯು ಇಲ್ಲಿದೆ. ಇಲ್ಲಿ ಸಾಧಾರಣ ೧೩ ಸಾವಿರ ಜನಸಂಖ್ಯೆಯಿದೆ. ರೇಲ್ವೆ ಮಾರ್ಕ K.Q.L.

೭೫. **ಗದಗ : Gadag (M.S.M.Ry)**

ಇದು ಹತ್ತಿ ಅರಳೆಯ ವ್ಯಾಪಾರದ ಮುಖ್ಯ ಸ್ಥಳವು. ಇದು ಎಮ್. ಎಸ್. ಎಮ್. ಕಂಪನಿಯ ಜಂಕ್ಸನ್ ಸ್ಟೇಶನ್ನಾಗಿದೆ. ಇಲ್ಲಿ ಅನೇಕ ಫ್ಯಾಕ್ಟರಿಗಳಿವೆ.

ದಲ್ಲಾಳಿಗಳು : ೧. ಬಸಪ್ಪ ಬಳ್ಳಾರಿ ೨. ರಾಮಕೃಷ್ಣಸಾ ಕಬಾಡಿ. ೩. ಕೇಶವದಾಸ ದೇವಿದಾಸ ವಜ್ರೇಶ್ವರಿ.

೭೬. **ತಾಂಡೂರ : Tandur (N.S.Ry)**

ಇದು ನಿಜಾಮ ಇಲಾಖೆಯಲ್ಲಿರುವ ವ್ಯಾಪಾರದ ಮುಖ್ಯ ಸ್ಥಳಗಳಲ್ಲೊಂದಾಗಿದೆ. ಇಲ್ಲಿ ಧಾನ್ಯಗಳ ವ್ಯಾಪಾರವು ವಿಶೇಷವಾಗಿ ಜರುಗುತ್ತದೆ. ಇಲ್ಲಿ ಹಾಲಿ ನಾಣ್ಯಗಳು ನಡೆಯುತ್ತವೆ. ರೇಲ್ವೆ ಮಾರ್ಕ T.D.U.

ದಲ್ಲಾಲಿಗಳು : ೧. ಬಸಪ್ಪ ಪಸಾರೆ ೨. ಶಿವಯ್ಯ ಸಂಗಯ್ಯ ೩. ಚಂದ್ರಣ್ಣ ವೀರಣ್ಣ.

೭೭. **ತುಮಕೂರು : Tumkuru (M.S.Ry)**

ಇದು ಮೈಸೂರು ಸಂಸ್ಥಾನದಲ್ಲಿದೆ. ಇಲ್ಲಿ ಯುದ್ಧದಲ್ಲಿಯ ಖಡ್ಗಗಳನ್ನು ತಯಾರಿಸುವ ಒಂದು ಕಾರ್ಯಾಲಯವಿದೆ. ಕಲ್ಲಿನ ಕುಸುರಿನ ಕೆಲಸವಾದರೂ ಇಲ್ಲಿ ಚೆನ್ನಾಗಿ ನಡೆಯುತ್ತವೆ. ಇಲ್ಲಿ ಜೋಳ, ಶೆಜ್ಜಿ, ಮೆಣಸಿನಕಾಯಿ, ಅಕ್ಕಿ ಮೊದಲಾದವುಗಳನ್ನು ಬೆಳೆಯುವರು. ರೇಲ್ವೆ ಮಾರ್ಕ T.K.

ದಲ್ಲಾಲಿಗಳು : ೧. ಎ. ಕೆ. ಅಪ್ಪಣ್ಣ. ಶೆಟ್ಟಿ, ೨. ಎಸ್. ಎಸ್. ಸಿ. ಕೆ. ಧರ್ಮಪ್ಪ.

೭೮. **ತಾಳಿಕೋಟೆ : Talikote**

ಇದು ವಿಜಾಪುರ ಜಿಲ್ಲೆಯಲ್ಲಿಯ ವ್ಯಾಪಾರ ಮುಖ್ಯ ಸ್ಥಳಗಳಲ್ಲೊಂದಾಗಿದೆ. ಇಲ್ಲಿ ಧಾನ್ಯಗಳ ವ್ಯಾಪಾರವು ವಿಶೇಷವಾಗಿ ನಡೆಯುತ್ತದೆ. ಇಲ್ಲಿಂದ ತುಪ್ಪವು ಸೊಲಾಪುರ, ಲೋಣಾವಳ ಕಡೆಗೆ ವಿಶೇಷವಾಗಿ ಹೋಗುತ್ತದೆ. ಆಲಮಟ್ಟಿಯೇ ಹತ್ತರದಲ್ಲಿರುವ ರೇಲ್ವೆ ಸ್ಟೇಶನ್, ಆಲಮಟ್ಟಿಯ ರೇಲ್ವೆ ಮಾರ್ಕ L.M.T.

ದಲ್ಲಾಲಿಗಳು : ೧. ರೇವಪ್ಪ ಮೋಟಗಿ ೨. ಲಿಂಗಪ್ಪ ಕಾಜಗಾರ. ೩. ಮುರಾರೆಪ್ಪ ಸುಬ್ಬಯ್ಯ ಶೆಟ್ಟರ.

೭೯. **ಡಾವಣಗೆರೆ : Davanagere (M.S.M.Ry)**

ಇದು ಮೈಸೂರು ಸಂಸ್ಥಾನದಲ್ಲಿ ಮುಖ್ಯವಾದ ವ್ಯಾಪಾರ ಸ್ಥಳಗಳಲ್ಲೊಂದಾಗಿದೆ. ಇಲ್ಲಿಯ ಜನಸಂಖ್ಯೆಯು ಸಾಧಾರಣ ೨೭ ಸಾವಿರ ಇದೆ. ಇಲ್ಲಿ ಕಿರಾಣಿ ಮತ್ತು ಹತ್ತಿ ಅರಳಿಯ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ರೇಲ್ವೆ ಮಾರ್ಕ D.V.G.

ದಲ್ಲಾಲಿಗಳು : ೧. ಬ್ರಹ್ಮಪ್ಪ ತವನಪ್ಪನವರ ೨. ಕೊಟ್ರಬಸಪ್ಪ ಅಂದನೂರು ೩. ಮುರಿಗಯ್ಯ ಹನಗೋಡಿಮಠ ೪. ಶಾಂತವೀರಯ್ಯ ಅಥಣಿ ಹಿರೇಮಠ.

೮೦. **ಧಾರವಾಡ : Dharwad (M.S.M.Ry)**

ಇದು ಜಿಲ್ಲೆಯ ಮುಖ್ಯಸ್ಥಳವು. ಕರ್ನಾಟಕ ವಿಶ್ವವಿದ್ಯಾಲಯವೂ ಇಲ್ಲಿದೆ. ಕಿರಾಣಿ ಮೊದಲಾದವುಗಳ ವ್ಯಾಪಾರವು ಸಾಧಾರಣವಾಗಿ ನಡೆಯುತ್ತದೆ.

ದಲ್ಲಾಲಿಗಳು : ೧. ಶಿವಪ್ಪ ಮಟ್ಟಿ. ೨. ಬಸಪ್ಪ ಸಂಗನಬಸಪ್ಪ ಮಣಜಿಗಿ. ೩. ನಾಥಾರಂಗಾಜಿ.

೮೧. **ನಿಪ್ಪಾಣಿ : Nippani**

ಇದು ಬೆಳಗಾಂವ ಜಿಲ್ಲೆಯಲ್ಲಿಯ ಮುಖ್ಯ ವ್ಯಾಪಾರ ಸ್ಥಳವು. ಇಲ್ಲಿ ತಂಬಾಕು ಮತ್ತು ಬೆಲ್ಲ ಇವುಗಳ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ಬಂಗಾಲಿ ೧೬ ಶೇರಿನ ಮಣದ ಮೇಲೆ ತಂಬಾಕಿನ ಬೆಲೆಯಿದೆ.

ದಲ್ಲಾಲಿಗಳು : ೧. ವೀರಪ್ಪ ರುದ್ರಪ್ಪ ಕೋರಿ. ೨. ಪರಪ್ಪ ನಿಂಗಪ್ಪ, ಬದಡೆ. ೩. ಬಲವಂತ ಜಯಾಜಿ ಚವ್ಹಾಣ ೪. ತವನಪ್ಪ ಅಪ್ಪಾರಾವ ನಷ್ಟೆ.

೮೨. **ಬ್ಯಾಡಿಗಿ : Byadigi(M.S.M.Ry)**

ಇದು ಧಾರವಾಡ ಜಿಲ್ಲೆಯಲ್ಲಿಯ ವ್ಯಾಪಾರದ ಮುಖ್ಯ ಸ್ಥಳಗಳಲ್ಲೊಂದಾಗಿದೆ. ಇಲ್ಲಿ ಮೆಣಸಿನಕಾಯಿ ಮತ್ತು ಅಡಕಿ ವ್ಯಾಪಾರವು ವಿಪರೀತವಾಗಿ ನಡೆಯುತ್ತದೆ. ಅನೇಕ ತರದ ಅಡಿಕೆಯು ಇದರ ಸುತ್ತಲಿನ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಅಡಿಕಿ, ಯಾಲಕ್ಕಿಗಳ ತೂಕ ಮಣದ ಮೇಲಿದೆ. ರೇಲ್ವೆ ಮಾರ್ಕ B.Y.D.

ದಲ್ಲಾಲಿಗಳು : ೧. ಶಂಕ್ರಪ್ಪ ಸಕ್ರಿ ೨. ವೀರಪ್ಪ ಶಿವಲಿಂಗಪ್ಪ ಯಾದವಾಡ ೩. ವೀರಪ್ಪ ಶಿವಲಿಂಗಪ್ಪ ಕಿತ್ತೂರು ೪. ಬಸನಗೌಡಾ ಹಲಗೇರಿ. ೫. ಶಿವಲಿಂಗಪ್ಪ ರಾಮಣ್ಣ ಬೆಟಗೇರಿ.

೮೩. **ಬಾಗಲಕೋಟ : Bagalkot (M.S.M.Ry)**

ಇದು ವಿಜಾಪುರ ಜಿಲ್ಲೆಯಲ್ಲಿಯ ಮುಖ್ಯವ್ಯಾಪಾರ ಸ್ಥಳಗಳಲ್ಲೊಂದಾಗಿದೆ. ಇಲ್ಲಿ ಕಿರಾಣಿ ಮತ್ತು ಹತ್ತಿ ಅರಳೆಯ ವ್ಯಾಪಾರವು ಚೆನ್ನಾಗಿ ನಡೆಯುವುದು. ರೇಶಿಮೆಯ ಶೀರೆ ಕುಪ್ಪಸಗಳ ವ್ಯವಹಾರವಾದರೂ ನೆಟ್ಟಗೆ ನಡೆಯುತ್ತದೆ. ರೇಲ್ವೆ ಮಾರ್ಕ B.J.K.

ದಲ್ಲಾಲಿಗಳು : ೧. ಬಶೆಟ್ಟಪ್ಪ ಬಸಪ್ಪ ಹಲುಕುರ್ಕಿ ೨. ರಾಚಪ್ಪ, ಸಿದ್ದಪ್ಪ ಬಣಗಾರ. ೩. ರಾಚಯ್ಯ ವಸ್ತ್ರದ ೪. ಶಂಕ್ರಪ್ಪ ಸಕ್ರಿ.

೮೪. **ವಿಜಾಪುರ : Bijapur (M.S.M.Ry)**

ಇದು ಜಿಲ್ಲೆಯ ಮುಖ್ಯಸ್ಥಳವು. ಇಲ್ಲಿ ಧಾನ್ಯ ಮತ್ತು ಹತ್ತಿ ಅರಳೆಯ ವ್ಯಾಪಾರವು ಚೆನ್ನಾಗಿ ನಡೆಯುತ್ತದೆ. ಇಲ್ಲಿಗೆ ಗೋಲಗುಮ್ಮಟ, ಜುಮ್ಮಾಮಸೀದ ಮೊದಲಾದ ಹಿಂದಿನ ಕಾಲದ ಕಟ್ಟಡಗಳು ನೋಡತಕ್ಕಂಥವುಗಳಾಗಿವೆ. ರೇಲ್ವೆ ಮಾರ್ಕ B.J.P.

ದಲ್ಲಾಲಿಗಳು : ೧. ಮಲ್ಲಿಕಾರ್ಜುನಪ್ಪ ತಾಳಿಕೋಟೆ ೨. ಗುರುಸಂಗಪ್ಪ ಮೋಟಗಿ ೩. ವೀರಪ್ಪ ಮಲ್ಲಪ್ಪ ಲಾಳಿ.

೮೫. **ಬಿರೂರ : Birur (M.S.M.Ry)**

ಇದು ಮೈಸೂರ ಸ್ಟೇಟಿನಲ್ಲಿದೆ. ಇಲ್ಲಿ ಅಡಿಕೆ. ತೆಂಗು, ಕಾಫಿ, ಮೆಣಸು, ಯಾಲಕ್ಕಿ, ಅಕ್ಕಿ, ಮೊದಲಾದವುಗಳು ದೊರೆಯುವವು. ರೇಲ್ವೆ ಮಾರ್ಕ R.R.B.

ದಲ್ಲಾಲಿಗಳು : ಕರೇದಿಕ ರಾಮಣ್ಣ ಶೆಟ್ಟಿ ೨. ಎಸ್. ಶೀನಪ್ಪ ಶೆಟ್ಟಿ.

೮೬. **ಬೆಳಗಾಂವ : Belgaum (M.S.M.Ry)**

ಇದು ಜಿಲ್ಲೆಯ ಮುಖ್ಯಸ್ಥಳವು. ಇಲ್ಲಿ ಗಂಜಿಫ್ರಾಕುಗಳನ್ನು ಮತ್ತು ಸಾಬುನುಗಳನ್ನು ತಯಾರಿಸುವ ಕಾರ್ಯಾಲಯವಿರುವದಲ್ಲದೆ ಕೈಮಗ್ಗದ ಕೆಲಸವು ಕೂಡಾ ಇಲ್ಲಿ ವಿಶೇಷವಾಗಿ ಜರಗುವದು. ಇಲ್ಲಿ ತುಪ್ಪ (ಪ್ರಸಿದ್ದ) ಅಕ್ಕಿ, ಶೀಗೇಕಾಯಿ, ಮೆಣಶಿನಕಾಯಿ ಮೊದಲಾದವುಗಳೂ ದೊರೆಯುವವು. ರೇಲ್ವೆ ಮಾರ್ಕ B.G.M.

ದಲ್ಲಾಲಿಗಳು : ೧. ಮಾರುದ್ರಪ್ಪ ಮಡಿವಾಳಪ್ಪ ಉಪ್ಪಿನ ೨. ರೇವಪ್ಪ ನಂದೆಪ್ಪ ಹತ್ತರಕಿ ೩. ಶಿವಲಿಂಗಪ್ಪ ಬಸಪ್ಪ ಕಿತ್ತೂರ ೪. ಭರಮಪ್ಪ ನಾಗಪ್ಪ ಲೆಂಗಡೆ.

೮೭. **ಬೆಂಗಳೂರು : Bangalore (M.S.M.Ry)**

ಇದು ಕರ್ನಾಟಕದಲ್ಲಿಯೇ ಅತಿ ದೊಡ್ಡ ಪಟ್ಟಣವು. ಮೈಸೂರ ಸಂಸ್ಥಾನಕ್ಕೆ ಇಲ್ಲಿ ಅನೇಕ ತರಹದ ಕಾರ್ಯಾಲಯಗಳಿರುವವು. ಕಟ್ಟಿಗೆಯ ಕೆಲಸವಾದರೂ ವಿಶೇಷವಾಗಿ ಜರುಗುವುದು. ರೇಲ್ವೆ, ಮಾರ್ಕ B.B.Y.

ದಲ್ಲಾಲಿಗಳು : ೧. ನಂಜಪ್ಪ ನಿಂಗಪ್ಪ, ಚಾಮರಾಜಪೇಟೆ, ೨. ಸಿದ್ದಲಿಂಗಪ್ಪ ಯಲಿ ತರಗಪೇಟೆ ೩. ಶಿವಾಜಿ ಕಲ್ಯಾಣಜಿ ಓಲಡತರಗಪೇಟೆ ೪. ಅಬ್ದುಲ್ ಲಥೀಪ್ ತಯ್ಯಬ್ ಓಡಲತರಗಪೇಟೆ

೮೮. ಬಳ್ಳಾರಿ : **Ballary (M.S.M.Ry)**

ಇದು ಹುಬ್ಬಳ್ಳಿಯಿಂದ ೧೩೦ ಮೈಲು ದೂರಿನಲ್ಲಿದೆ. ಜಿಲ್ಲೆಯ ಮುಖ್ಯ ಸ್ಥಳವಾಗಿವೆ. ಇಲ್ಲಿ ವ್ಯಾಪಾರವು ಸಾಧಾರಣವಾಗಿ ನಡೆಯುವುದು ರೇಲ್ವೆ ಮಾರ್ಕ B.A.Y.

ದಲ್ಲಾಲಿಗಳು : ೧. ಗುರುಶಾಂತಪ್ಪ ಗುತ್ತಲ ೨. ಮಂಗಳದಾಸ ಕಾನಜಿ.

೮೯. **ಮೈಸೂರ : Mysore (M.S.M.Ry)**

ಇದು ಮೈಸೂರು ಸಂಸ್ಥಾನದ ರಾಜಧಾನಿಯ ಮುಖ್ಯ ಸ್ಥಲವಾಗಿದೆ. ಇಲ್ಲಿ ಚಂದನದ ಎಣ್ಣೆ, ಅಕ್ಕಿ, ಕಾಫಿ, ಶೀಗೆಕಾಯಿ, ಮೊದಲಾದವುಗಳು ದೊರೆಯವವು. ಇಲ್ಲಿಯ ವಿಲಾಸ ತೋಟವು ನೋಡತಕ್ಕಂತಹದಿದೆ. ರೇಲ್ವೆ ಮಾರ್ಕ M.Y.S.

ದಲ್ಲಾಲಿಗಳು : ೧. ಬ್ರಹ್ಮಪ್ಪ ತವನಪ್ಪನವರ ಸಂತೆಪೇಟೆ ೨. ಎಂ. ಎಸ್. ಸಿದ್ದಪ್ಪ ಎಂಡ್ ಬ್ರದರ್ಸ್ ೩. ನೀಲಗಿರಿ ಪಂಪಣ್ಣ ಶಿವಣ್ಣ.

೯೦. **ಮಂಗಳೂರ : Mnagalore (S.I.Ry)**

ಇದು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಸ್ಥಳವಾಗಿದೆ. ಇಲ್ಲಿ ಹಂಚುಗಳನ್ನು ತಯಾರಿಸುವ ಮೂವತ್ತು ಕಾರ್ಯಾಲಯವಿದ್ದು ಅಲ್ಲಿಂದ ಹಂಚುಗಳನ್ನು ಭರತಖಂಡದ ಬೇರೆ ಬೇರೆ ಭಾಗಗಳಿಗೂ ಮತ್ತು ದಕ್ಷಿಣ ಆಫ್ರಿಕಕ್ಕೂ ಹೋಗುತ್ತಿರುವವು. ಮೀನಿನ ಅರ್ಕ ತೆಗೆಯುವ ೧೨೫ ಕಾರ್ಯಾಲಯಗಳೂ ಹೋಮಿಯೋಪೆಥಿಕ್ ಔಷಧಿಗಳನ್ನು ತಯಾರಿಸುವ ಒಂದು ಕಾರ್ಯಾಲಯವೂ ಮತ್ತು ಎರಡು ಕಬ್ಬಿಣದ ಕಾರ್ಯಾಲಯಗಳು ಇಲ್ಲಿವೆ. ಇಲ್ಲಿ ಕೈಮಗ್ಗದ ಕೆಲಸವು ವಿಶೇಷವಾಗಿ ಜರುಗುತ್ತದೆ. ಇಲ್ಲಿ ಕಾಫಿ, ಯಾಲಕ್ಕಿ, ಮೆಣಸು, ಕಾಚು, ಅಡಿಕೆ, ಅರಿಶಿಣ, ಶೀಗೇಕಾಯಿ, ಚಂದನದ ಕಟ್ಟಿಗಿ, ಚಂದನದ ಎಣ್ಣೆ, ತೆಂಗು, ಕೊಬ್ಬರಿ, ಅಕ್ಕಿ, ಜೀರಗಿ, ರಾಮಪತ್ರಿ ಇವೇ ಮೊದಲಾದ ಅನೇಕ ಪದಾರ್ಥಗಳು ಇಲ್ಲಿ ದೊರೆಯುವವು. ರೇಲ್ವೆ ಮಾರ್ಕ M.A.Q.

ದಲ್ಲಾಲಿಗಳು : ೧. ಹಂಸರಾಜ ನಾನಜಿ ೨. ವಾಸುದೇವ ಜನಾರ್ಧನ ಕಂಪನಿ ೩. ಮುದಲಗಿರಿ ೪. ಪಾಂಡುರಂಗ ಲಕ್ಷ್ಮಣ ಪೈ.

೯೧. **ಶಿರಸಿ : Sirsi (Dt.Karwar)**

ಇಲ್ಲಿ ಅಡಿಕೆಯ ವ್ಯಾಪಾರವು ವಿಪರೀತವಾಗಿ ನಡೆಯುತ್ತದೆ. ಇದಲ್ಲದೆ ಯಾಲಕ್ಕಿ, ಮೆಣಸು, ತೆಂಗು ಮೊದಲಾದವುಗಳ ವ್ಯಾಪಾರವಾದರೂ ಚೆನ್ನಾಗಿ ನಡೆಯುತ್ತದೆ. ಹಾವೇರಿ ಸ್ಟೇಶನ್ನಿನಿಂದ ಮಾಲು ರವಾನೆಯಾಗುತ್ತದೆ. ಹಾವೇರಿ ಸ್ಟೇಶನ್ನಿನ ಮಾರ್ಕ M.V.R.

ದಲ್ಲಾಲಿಗಳು : ೧. ಎಸ್. ಎಲ್. ಧಾಕಪ್ಪ. ಎಂಡ್ ಬ್ರದರ್ಸ ೨. ಲಿಂಗಪ್ಪ ಉಳ್ಳೀಗಡ್ಡಿ.

೬೨. **ಹಾವೇರಿ : Haveri (M.S.M.Ry)**

ಇದು ಧಾರವಾಡ ಜಿಲ್ಲೆಯಲ್ಲಿದೆ. ಯಾಲಕ್ಕಿಯ ವ್ಯಾಪಾರದ ಬಗ್ಗೆ ಪ್ರಸಿದ್ಧವಾಗಿದೆ. ರೇಲ್ವೆ ಮಾರ್ಕ H.V.R.

ದಲ್ಲಾಲಿಗಳು : ೧. ಸಿದ್ದಪ್ಪ ಮಾಗಾವಿ ೨. ಚನಬಸಪ್ಪ ಪಂಚಪ್ಪ ಕುರುಬಗೊಂಡ ೩. ಚನ್ನಪ್ಪ ದಾನಪ್ಪ ಹಿಂಚಗೇರಿ.

೬೩. **ಹುಬ್ಬಳ್ಳಿ : Hubli (M.S.M.Ry)**

ಇದು ಧಾರವಾಡ ಜಿಲ್ಲೆಯಲ್ಲಿಯ ವ್ಯಾಪಾರದ ಮುಖ್ಯಪಟ್ಟಣವಾಗಿದೆ. ಇದು ಅರಳೆಯ ವ್ಯಾಪಾರ ಬಗ್ಗೆ ಪ್ರಸಿದ್ದವಾಗಿದೆ. ಇಲ್ಲಿ ಎರಡು ಕಾಟನ್ ಮಿಲ್‌ಗಳೂ ಅನೇಕ ಜಿನಿಂಗ್ ಮತ್ತು ಪ್ರೆಸಿಂಗ್ ಫ್ಯಾಕ್ಟರಿಗಳೂ ಇವೆ. ರೇಲ್ವೆ ಜಂಕ್ಸನ್ ಇದೆ. ರೇಲ್ವೆ ಮಾರ್ಕ U.B.B.

ದಲ್ಲಾಲಿಗಳು : ೧. ಗುರಪ್ಪ ಗುರುಶಿದ್ದಪ್ಪ ನೀಲಿ. ೨. ಸೋಮಪ್ಪ ನಿರಂಜನಪ್ಪ ಸಿಂದಗಿ ೩. ಗುರುಶಿದ್ದಪ್ಪ ಬಸಪ್ಪ ಉಪ್ಪಿನ.

೬೪. **ಕಲಬುರ್ಗಿ : Gulbarga (G.I.P.Ry)**

ಇದು ನೈಜಾಮ ರಾಜ್ಯದಲ್ಲಿ ಮುಖ್ಯ ಜಿಲ್ಲಾ ಸ್ಥಳವಾಗಿದೆ. ಮತ್ತು ನೈಜಾಮ ಕರ್ನಾಟಕದಲ್ಲಿ ಪ್ರಸಿದ್ದ ವ್ಯಾಪಾರ ಸ್ಥಳವಾಗಿದೆ. ಶ್ರೀ ಶರಣಬಸವೇಶ್ವರ ಮಹಾಶಿವಶರಣರು ಇಲ್ಲಿ ವಾಸವಾಗಿದ್ದುದ್ದರಿಂದ ಸಹಸ್ರಾವಧಿ ಜನರು ಈ ಮಹಾಶರಣರ ಗದ್ದುಗೆಗೆ ನಡೆದುಕೊಳ್ಳುತ್ತಾರೆ. ಪ್ರತಿವರುಷ ಶ್ರಾವಣ ಮತ್ತು ಫಾಲ್ಗುಣ ಮಾಸಗಳಲ್ಲಿ ವಿಶೇಷ ಜಾತ್ರೆಯಾಗುತ್ತದೆ. ಬಂದೇನವಾಜ ಎಂಬ ಸಾಧುಪುರುಷರ ಉರುಸು ಕೂಡಾ ಇಲ್ಲಿ. ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಸಾಧಾರಣ ೪೦ ಸಾವಿರ ಜನ ಸಂಖ್ಯೆಯಿದೆ.

ಬೆಳೆ : ಜೋಳ, ಶೇಂಗಾ, ಹತ್ತಿ, ಮೊದಲಾದ ಧಾನ್ಯಗಳು ಬೆಳೆಯುತ್ತವೆ. ಶೇಂಗಾ ಮತ್ತು ಕಿರಾಣಿ ವ್ಯಾಪಾರವು ಸುಗ್ಗಿಯಲ್ಲಿ ಬಹು ಹೆಚ್ಚಾಗಿ ಜರುಗುತ್ತದೆ ರೇಲ್ವೆ ಮಾರ್ಕ G.R.

ದಲ್ಲಾಲಿಗಳು : ೧. ಪ್ರಭಣ್ಣ ಗಂದಿಗುಡಿ ೨. ಶಿವಶರಣಪ್ಪ ಸ್ವಾದಿ ೩. ಶಾಂತಮಲ್ಲಪ್ಪ ಖೂಬಾ ೪. ಲಕ್ಷ್ಮಯ್ಯ ಜಾಜಿ.

೬೫. **ರಾಯಚೂರು : Raichur (G.I.P.& M.S.M.Ry)**

ಬೆಳೆ : ಶೇಂಗಾ, ಎಳ್ಳು, ಜೋಳ, ಹತ್ತಿ, ಮೊದಲಾದವುಗಳು ಹೆಚ್ಚಾಗಿ ಬೆಳೆಯುತ್ತವೆ. ನೈಜಾಮ ಕರ್ನಾಟಕದಲ್ಲಿ ಪ್ರಸಿದ್ಧ ವ್ಯಾಪಾರ ಸ್ಥಳವು. ಇಲ್ಲಿ ಶೇಂಗಾ ಅರಳಿ ವ್ಯಾಪಾರ ಹೆಚ್ಚು.

ದಲ್ಲಾಲಿಗಳು : ೧. ಬಿ. ಎ. ಪಾಟೀಲ ೨. ಕೊಟ್ಟಣದ ಸಿದ್ದರಾಮಪ್ಪ. ೩. ಈಶ್ವರಪ್ಪ. ನಾಗಪ್ಪ, ಶೆಟ್ಟರ ೪. ಹೇಮಚಂದ ಚುನಿಲಾಲ.

ಬಟ್ಟೆಯ ವ್ಯಾಪಾರಿಗಳು

ಅಮೃತಸರ – ಭಗತರಾಮ ಆ್ಯಂಡ್ ಸನ್ಸ್ ಬರುಬಜಾರ (೨) ನಾಥುಮಲ್ ಶಿವನಾರಾಯಣ ಬರುಬಜಾರ **ಇಲಕಲ್** – ದಿ ಇಲಕಲ್ ಸಾಡಿ ಸ್ಟೋರ್ಸ್ (೨) ಗುರಪ್ಪ ಸಕ್ರಿ, (೩) ಮಹಾಲಕ್ಷ್ಮಿಲುಗುಡಿ ಕಾರಖಾನಾ **ಕಲ್ಕತ್ತಾ**– ಭಾರತ ವೀವ್ಹಿಂಗ್ ಕಂಪನಿ ೮ ಕ್ಲಾಯಿವ್ಹ್ ಸ್ಟ್ರೀಟ್ (೨) ಹಜಾರಿಮಲ್ಲ ನಾಹಟ್ಟಾ ೧೪ ಪಾಂಚಾಗಲ್ಲಿ, **ಕನೋಜ್**– ಬೋಳಾನಾಥ ಶಂಭುನಾಥ(೨) ಮೋಂಗಿಲಾಲ ಪ್ಯಾರೇಲಾಲ, **ಕರಾಚಿ**– ಸಿಂಧ ಸ್ವದೇಶಿ ಸ್ಟೋರ್ಸ, ಬಂದರ್ ರೋಡ್ (೨) ಬಿದ್ರಿದಾಸ ಮೋಹನಲಾಲ ಬಂದರರೋಡ್ **ಕಾನಪುರ**– ಕಾನಪುರ ಸ್ವದೇಶಿ ಸ್ಟೋರ್ಸ, ಮಿಶನ್ ರೋಡ್ (೨) ಕೇದಾರನಾಥ ಬಾಬುಲಾಲ ಜನರಲ್ ಗಂಜ **ಗದಗ**–ಜಗದೀಶಪ್ಪ ಶಾವಿ (೨) ನಾರಾಯಣಪ್ಪ ಕುಷ್ಟಗಿ **ಗುಳೇದಗುಡ್ಡ**– ಶಂಕ್ರಪ್ಪ ಸಕ್ರಿ **ಸೊಲಾಪುರ**–ದಿವಾಚಂದ ರಾಮಚಂದ್ರ ಮಂಗಳವಾರಪೇಟೆ (೨) ರಾಘವ ಜಿನಾಥ ಗಾಂಧಿ ಮಂಗಳವಾರ ಪೇಟೆ ೩ **ಬನಾರಸ್**– ಬೋಗಿಲಾಲಕೇಶವರಾವಠಠೇರಿ ಬಜಾರ (೨) ಬನಶೀಲಾಲ ಹರಿಕಿಶನ್ ಠಠೇರಿಬಜಾರ **ಬೆಂಗಳೂರ**– ಬಿ. ಅಮಿಚಂದ ಆ್ಯಂಡ್ ಕಂಪನಿ ಚಿಕ್ಕಪೇಟೆ (೨) ಜಿಜಿಯಾಮಂ ಆ್ಯಂಡ್ ಸನ್ಸ್ ಚಿಕ್ಕಪೇಟೆ **ಮದ್ರಾಸ** ೨೦೭ ಇಸ್ಲಾಂಡ್‌ರೋಡ್ (೨) ಕಲ್ಯಾಣಜಿ ಆ್ಯಂಡ್ ಸನ್ಸ್ ೪೨೦ ನಿಂಟ್‌ಸ್ಟ್ರೀಟ್ **ಮುಂಬಯಿ**–ಶ್ರೀಗಜಾನನ ಸ್ಟೋರ್ಸ, ಗಿರಿಗಾಂವ (೨) ಭಾವ ಕಾಶಿನಾಥ ಆ್ಯಂಡ್ ಕಂಪನಿ ೬೩, ಭಂಡಾರಿ ಸ್ಟ್ರೀಟ್ (೩) ಇಂಡಿಯನ್ ಮ್ಯಾನುಫ್ಯಾಕ್ಚರಿಂಗ್, ಕಂಪನಿ ಲಿಮಿಟೆಡ್, ನಂ ೧೬ ಅಪೋಲೋ ಸ್ಟ್ರೀಟ್ (೪) ಮಹೀಂದ್ರಕರ ಬ್ರದರ್ಸ್ ಗಿರಿಗಾಂವ, ಪ್ರಾರ್ಥನಾಸಮಾಜದ ಹತ್ತಿರ.

ಅಲ್ಯುಮಿನಿಯಮ್ ತಯಾರಿಸುವವರು ಮತ್ತು ವ್ಯಾಪಾರಿಗಳು

ಮುಂಬಯಿ–ಡನ್ ಅಲ್ಯುಮಿನಿಯಮ್ ಫ್ಯಾಕ್ಟರಿ ೧೧೭ ೧೧೯ ಟಾರ್ ದೇವ (೨) ಕೋಹಿನೂರ್ ಅಲ್ಯುಮಿನಿಯಮ್ ಫ್ಯಾಕ್ಟರಿ (೩) ಸ್ಟಾಂಡರ್ಡ ಅಲ್ಯುಮಿನಿಯಮ್ ಎಂಡ್ ಬ್ರಾಸ್ ವರ್ಕ್ಸ **ಕಲಕತ್ತಾ**–ಅಲ್ಯುಮಿನಿಯಮ್ ಮ್ಯಾನುಫ್ಯಾಕ್ಚರಿಂಗ ಕಂಪನಿ ಲಿಮಿಟೆಡ್ ೧೪ ಕ್ಲಾಯಿವ್ಹ್ ಸ್ಟ್ರೀಟ್ (೨) ಭಾರತ ಅಲ್ಯುಮಿನಿಯಮ್ ವರ್ಕ್ಸ ೯೫೬–೧ ಕ್ಲಾಯಿವ್ಹ್ ಸ್ಟ್ರೀಟ್ (೩) ಭಾರತ ಅಲ್ಯುಮಿನಿಯಮ್ ವರ್ಕ್ಸ ೯೬೫–೧ ಕ್ಯಾನಿಂಗ್ ಸ್ಟ್ರೀಟ್, **ಗುಜರಾನವಾಲಾ**–ಈಗಲ್ ಅಲ್ಯುಮಿನಿಯಮ್ ಫ್ಯಾಕ್ಟರಿ (೨) ಪೋಪ್ಯುಲರ್ ಅಲ್ಯುಮಿನಿಯಮ್ ಕಂಪನಿ **ಮದ್ರಾಸ**–ಇಂಡಿಯನ್ ಅಲ್ಯುಮಿನಿಯಮ್ ಕಂಪನಿ ೩೨ ಟ್ರಪ್ಲಿಕೇನ್ (೨) ಸ್ಪೆನ್ಸರ್ ಆ್ಯಂಡ್ ಕಂಪನಿ ಮೌಂಟ್‌ರೋಡ್

ಕಲ್ಪಿತ ರೇಶ್ಮಿಯ ಬಟ್ಟೆಗಳನ್ನು ತಯಾರಿಸುವವರು.

ಅಹಮದಾಬಾದ–ಮೋನೋಗ್ರಾಮ್ ಮಿಲ್ಸ್. ಕಂ. ಲಿ. ರೇಲ್ವೆಪುರ ಗೋಮಾತಿಪುರ ಮುಂಬಯಿ–ಕರಿಂಭಾಯಿ ಇಬ್ರಾಹಿಮ್ ಆ್ಯಂಡ್ ಸನ್ ಲಿ. ಔತಾರಾಮ ರೋಡ್ ಪೋರ್ಟ (೨) ಈ. ಡಿ. ಸಸೂನ್ ಯುನಾಯಿಟೆಡ್ ಮಿಲ್ಸ್, ಲಿ. ಹಾರ್ನ್ಬಿರೋಡ್ ಪೋರ್ಟ.

ಬಿಸ್ಕೇಟ್ ಕಾರ್ಯಾಲಯಗಳು

ಬೆಳಗಾಂವ–ಕಿತ್ತೂರ ಬ್ರದರ್ಸ **ಮುಂಬಯಿ**–ರಿನೌನ್ ಬಿಸ್ಕೆಟ್ ಕಂಪನಿ (ಲಿ) (೨) ಬ್ರಿಟಾನಿಯಾ ಬಿಸ್ಕಿಟ್ ಫ್ಯಾಕ್ಟರಿ ಮೆಜಗನ್ **ಕಲಕತ್ತಾ** ಎಂಪಾಯರ್ ಬಿಸ್ಕೆಟ್ ಕಂಪನಿ, ಡಮ್‌ಡಮ್ ನಿಯರ್

ಕಲಕತ್ತಾ (೨) ಕೆ. ಸಿ. ಬೋಸ್ ಎಂಡ್ ಕಂಪನಿ (೩) ಕಲಾಚಂದ ಸನ್ಯಾಲ ಲೇನ್ **ಮದ್ರಾಸ**– ನ್ಯೂಕಾಲಿಕತ್ ಬಿಸ್ಕೆಟ್ ಫ್ಯಾಕ್ಟರಿ ಹಾರಿಸ್ ರೋಡ್ (೨) ಮಲಬಾರ್ ಬಿಸ್ಕೆಟ್ ಫ್ಯಾಕ್ಟರಿ ಚಿಂತಾದ್ರಿಪೇಟೆ ಪುಣೆ– ಸಾಠೆ ಬ್ರದರ್ಸ ಸದಾಶಿವಪೇಟೆ.

ಪುಸ್ತಕದ ವ್ಯಾಪಾರಿಗಳು

ಆಗ್ರಾ–ಪ್ರೇಮ ಪುಸ್ತಕಾಲಯ ಪುಲಟ್ಟಿ ಬಜಾರ (೨) ವೈದಿಕ್ಸ ಪುಸ್ತಕಾಲಯ ಮೈತಾನ **ಅಹಮದಾಬಾದ** ಗುಜರಾತಿ ಸಾಹಿತ್ಯ ಮಂದಿರ ರಿಚಿರೋಟ್ (೨) ಗುಜರಾತಿ ಓರಿಯಂಟಲ್ ಹುಕ್ಕಡಿಪೋ ಅಲಹಾಬಾದ–ಯುನಿವ್ಹರ್ಸಲ್ ಬುಕ್ ಹೌಸ್, **ಬೆಂಗಳೂರು**–೧ ಎಂ. ಎಂ. ರಾವ್ & ಬ್ರದರ್ಸ ಚಿಕ್ಕಪೇಟೆ (೨) ಶ್ರೀ ಕೃಷ್ಣ & ಕಂ. ಬಳೇಪೇಟೆ (೩) ಸತ್ಯ ಶೋಧಕ ಪುಸ್ತಕ ಭಾಂಡಾರ **ಮುಂಬಯಿ**–೧ ಡಿ. ಬಿ. ತಾರಪೋರೆವಾಲಾ & ಸನ್ಸ ಕಿತಾಬ ಮಹಾಲ ಹಾರ್ನ್ಬಿರೋಡ್ (೨) ಭಾರತ ಬುಕ್ ಡಿಪೋ ಚಂದ್ರ ಮಹಾಲ ಮುಂಬೈ ೪ **ಕಲಕತ್ತಾ**–ಎ ಸಿ ಸರ್ೆ & ಸನ್ಸ ಮುಸಲ್ಮಾನ್ ಪಾರಾರ್ಲೇ (೨) ಕಮಲಾ ಬುಕ್ ಡಿಪೋ ಲಿ. ೧೫, ಕಾಲೇಜ ಸ್ಕ್ವೆಯರ್ ದಿಲ್ಲಿ– ಇಂಪೀರಿಯಲ್ ಬುಕ್ ಡಿಪೋ ಚಾಂದನಿ ಚೌಕ (೨) ಯುನಿವ್ಹರ್ಸಲ್ ಪಬ್ಲಿಶಿಂಗ್ ಕಂ. ಹೈದರಾಬಾದ (ಡೆಕ್ಕನ) ಪುರೋಹಿತ & ಕಂ. ರೆಸಿಡೆನ್ಸಿ ಬಜಾರ, **ಲಾಹೋರ**–ಲಜಪತರಾಯ & ಸನ್ಸ ಲಾಹೋರಿಗೇಟ್ **ಮದ್ರಾಸ್**–ಜಿ. ಎಮ. ನಟೇಶನ್ & ಕಂ. ಶಂಕರ ಮಾಶೆಟ್ಟಿ ಸ್ಟ್ರೀಟ್ (೨) ಗಣೇಶ ಮತ್ತು ಕಂ. ೩೯ ತಂಬುಚೆಟ್ಟಿ ಸ್ಟ್ರೀಟ್.

ಬೂಟು ಮಚ್ಚೆಗಳ ವ್ಯಾಪಾರಿಗಳು

ಮುಂಬಯಿ–(೧) ಎಲಾಯಿಟ್ ಶ್ಯೂ ಕಂ, ಅಬ್ದುಲ್ ರಹಿ ಮಾನಸ್ಟ್ರೀಟ್ (೨) ರಿಲಾಯಬಲ್ ಪೂಟವೇಯರ್ ಸ್ಟೋರ್ಸಪ್ರನ್ಸೆಸ್ ಸ್ಟ್ರೀಡ್ **ಕಾನಪುರ**–ಹಾಲಿಂ ಬೂಟ್ ಫ್ಯಾಕ್ಟರಿ **ಮದ್ರಾಸ್**–ಅಕ್ಬರಿ & ಕಂ. ಬ್ರಾಡ್ವೆ (೨) ಕರೀಮ್ ಶ್ಯೂ ಮಾರ್ಟ ೨೧೪ ಚೈನಾ ಬಜಾರ.

ಗುಂಡಿಗಳನ್ನು ತಯಾರಿಸುವವರು

ಮುಂಬೈ– ಗೋಲ್ಡ್ ಫಿಲ್ಡ್ ಬಟನ್ ಮ್ಯಾನುಫ್ಯಾಕ್ಟರಿಂಗ ಕಂಪನಿ ಪ್ರಿನ್ಸೆಸ್ ಸ್ಟ್ರೀಟ್ ನಂ. ೨ (೨) ಮೋಟೋ ಬಟನ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ. ೪೯೫–೮೭ ಕಲ್ಪಾದೇವಿ ರೋಡ್ ನಂ (೨) **ಡಾಕಾ**–ಡಾಕಾ ಬಟನ್ ಮ್ಯಾನುಫ್ಯಾಕ್ಟರಿಂಗ ಕಂ. (೨) **ಕೋಹಿನೂರ್** ಹಾರ್ನ ಬಟನ್ ವರ್ಕ್ಸ (೩) ವ್ಹಿಕ್ಟೋರಿಯಾ ಬಟನ್ ಮ್ಯಾನುಫ್ಯಾಕ್ಚರಿಂಗ ಕಂಪನಿ ನರಿಂದಾ.

ಜಮಖಾನೆಯ ವ್ಯಾಪಾರಿಗಳು

ಅಡೋಣಿ–ಶೇಖ ಅಬ್ದುಲ್ ರಹಿಮಾನ್. **ಆಗ್ರಾ**–ಕೈಲಾಸ, ಕಾರ್ಪೆಟ್ ಕಂಪನಿ. **ಬೆಂಗಳೂರು**–ಎಂ. ಮುನಿಸ್ವಾಮಿ ಜಮಖಾನ ಪೇಟ (೨) ಆಲ್ ಇಂಡಿಯಾ ಎಜೆನ್ಸಿ ಲಿಮಿಟೆಡ್ **ವಿಜಾಪುರ**–ವಿಜಾಪೂರ ಡಿಸ್ಟ್ರಿಕ್ಟ್ ಪ್ರಿಜನ್, **ಮುಂಬೈ** ಇಂಡಿಯನ್ ಸ್ಟೇಟ್ ಆ್ಯಂಡ್ ಈಸ್ಟರ್ನ ಎಜೆನ್ಸಿ (೨) ತಾರಾಚಂದ ಪರಶುರಾಮ ಮೆಡೋಜ್ ಸ್ಟ್ರೀಟ್–**ಶ್ರೀನಗರ** (ಕಾಶ್ಮೀರ)–ಸಿ. ಎಂ ಹಾಡೌ ಆ್ಯಂಡ್ ಕಂ. **ರಾಯಚೂರ**–ಶಾಹಅಲ್ಲಿ ಇಮೇನ್ ಕಾರ್ಪೇಟ್ ಫ್ಯಾಕ್ಟರಿ. **ಲಾಹೋರ**–ಓರಿಎಂಟಲ್ ಕಾರ್ಪೆಟ್ಸ ಆ್ಯಂಡ್ ಫರ್ನಿದಿಮಾಲ್.

ಗಡಿಯಾರಗಳ ವ್ಯಾಪಾರಗಳು

ಮುಂಬಯಿ–ಈಸ್ಟರ್ನ ವಾಚ್‌ಕಂಪನಿ, ಹಾರ್ನ್ಬಿ ರೋಡ್ ಪೋರ್ಟ (೨) ಸ್ವಿಸ್‌ವಾಚ್ ಕಂಪನಿ ಕಾಲ್ಬಾದೇವಿ ನಂ ೨ (೩) ವೆಸ್ಟ ಎಂಡ್ ವಾಚ್ ಕಂಪನಿ. **ಕಲಕತ್ತಾ** ಫೇವರ್ ಲುಬಾ ಲ್ಯಾಂಡ್ ಕಂ. ಲಿ. ೨೩ ಲಾಲ್ ಬಜಾರ ಸ್ಟ್ರೀಟ್ (೨) ಲಿಮ್‌ಟನ್ ವಾಚ್ ಕಂ. ೭–೮ **ರಾಧಾಬಜಾರ.** (೩) ಇಂಪೀರಿಯಲ್ ವಾಂಚ್ ಕಂಪನಿ. ೧೫೪ ರಾಧಾಬಜಾರ.

ಔಷಧಗಳ ವ್ಯಾಪಾರಿಗಳು

ಆಗ್ರಾ–ನ್ಯಾಶನಲ್ ಫಾರ್ಮಸಿ ಜಹೇನಿಕೆ ಮದಿ ಬೈಲಗಂಜ. ಅಹಮದಾಬಾದ–ಸಿ. ಆರ್. ಬಾಲಕೃಷ್ಣ ಎಂಡ್ ಕಂಪನಿ ಥ್ರಿಗೇಟ್ಸ ಅಲ್ಮೋರಾ ಹಿಮಾಲಿಯನ್ ಸ್ಟೋರ್ಸ ರಾಣಿಬೇಟ್, ಮುಂಬಯಿ –ಡಿ. ಕೆ. ಸಂಡು ಬ್ರದರ್ಸ ಠಾಕುರದ್ವಾರ ನಂ. ೨ (೨) ಪೋಪ್ಯುಲರ್ ಫಾರ್ಮಸಿ ಗ್ರ್ಯಾಂಟ್ ರೋಡ್, **ಕಲಕತ್ತಾ**–ಬಾಥ್‌ಗೇಟ್ ಲ್ಯಾಂಡ್ ಕಂಪನಿ. ೯ ಓಲ್ಡ ಕೋರ್ಟು ಹೌಸ್, **ಡಾಕಾ**–ಬೆಂಗಾಲ ಡ್ರಗ್ ಹೌಸ್, ೧೧ ಚಾಕ್ ಸರ್ಕ್ಯೂಲರ್ ರೋಡ್.

ಕಾಫಿ ಕಾರ್ಯಾಲಯಗಳು

ಮಂಗಳೂರು–ಎ.ಜೆ. ಸಾಡ್ಡಾಂಕಾ ಎಂಡ್ ಸನ್ಸ ಸೌಥ ಕ್ಯಾನರಾ. ಕೋಯಿಮತ್ತೂರ ಕೊಯಮತ್ತೂರ ಕಾಫಿ ವರ್ಕ್ಸ **ಚಿಕ್ಕಮಗಳೂರ**–ವ್ಹಿ. ಎಮ್. ಬ್ರದರ್ಸ (೨) ಶ್ರೀ ಕೃಷ್ಣ ಕಾಫಿವರ್ಕ್ಸ

ಇಲೆಕ್ಟ್ರಿಕ್ ಸಾಮಾನುಗಳ ವ್ಯಾಪಾರಿಗಳು

ಮುಂಬೈ–ಪ್ರಿನ್ಸೆಸ್ ಇಲೆಕ್ಟ್ರಿಕ್ ಕಂ. ೬೫ ಅಪೋಲೊ ಸ್ಟ್ರೀಟ್ (೨) ಈಸ್ಟರ್ನ ೯ ಇಲೆಕ್ಟ್ರಿಕ್ ಎಂಡ ಟ್ರೇಡಿಂಗ್ ಕಂಪನಿ. ೧೭೩ ಹಾರ್ನ್ಬಿ ರೋಡ್ ಪೋರ್ಟ **ಕಲಕತ್ತಾ**–ಅಗರವಾಲಾ ಎಲೆಕ್ಟ್ರೀಕ್ ಇಂಜನಿಯರಿಂಗ್ ವರ್ಕ್ಸ. ೨೯ ಬ್ಯಾನ್ ಸ್ಟೋಲ್ ಸ್ಟ್ರೀಟ್. (೨) ಇಂಗ್ಲೀಶ್ ಇಲೆಕ್ಟ್ರಿಕ್ ವರ್ಕ್ಸ ಕಂ. ಲಿ. ೩. ४ ಕ್ಲಾಯಿವ್ಹ ಬಿಲ್ಡಿಂಗ್ಸ, **ಮದ್ರಾಸ್**–ಅಮೇರಿಕನ್ ಇಲೆಕ್ಟ್ರಿಕ್ ಕಂ. ೪೩. ವೆಂಕಟಮೇಸ್ತ್ರಿ ಸ್ಟ್ರೀಟ್. (೨) ಜನರಲ ಕಂ. ಲಿ. ೧೦೦ ಅಮೇರಿಕನ್ ಸ್ಟ್ರೀಟ್.

ಫೌಂಟಿನ್ ಪೆನ್ನಿನ ವ್ಯಾಪಾರಿಗಳು

ಆಗ್ರಾ–ಮಾಡೆಲ್ ಇಂಡಸ್ಟ್ರೀಜ್ ದಯಾಲಬಾಗ. **ಅಹಮ್ಮದಾಬಾದ**–ಮೇಥಾ ಬ್ರದರ್ಸ ಥ್ರೀ ಗೇಟ್ಸ್, **ಬನಾರಸ್**–ಲಕ್ಷ್ಮೀಸ್ಟಾಯಲೋಪೆನ್ ವರ್ಕ್ಸ ಕಂ. ೧೮ ಲಕ್ಷ್ಮೀಕುಂಡ. ಕಲಕತ್ತಾ ವ್ಹೀವರ್ ರೇಡಿ ಸ್ಟೋರ್ ೮೮. ೧. ಹಾರಿಸನ್ ರೋಡ್. **ಮೋರಾಬದ**–ಫೌಂಟನ್ ಎಂಪೋರಿಯಮ್ ಮೋರಾಬಾದ, ಯು. ಪಿ.

ಕಾಜಿನ ಕಾರ್ಯಾಲಯಗಳು

ಆಗ್ರಾ–ಕೋರೋನೇಶನ್ ಗ್ಲಾಸ್ ವರ್ಕ್ಸ ಫಿರೋಜಾಬಾದ. **ಅಲಿಗರ್**–ಕೃಷ್ಣ ಗ್ಲಾಸವರ್ಕ್ಸ ಹ್ಯಾಥ್ರಾಸ್. **ಮುಂಬಯಿ**–ಬೊಂಬೆ ಗ್ಲಾಸ್ ಮ್ಯಾನುಫ್ಯಾಕ್ಚರಿಂಗ ಕಂಪನಿ. ೫೧ ನೈಗಮ್ ರೋಡ್ ದಾದರ. (೨) ನ್ಯಾಶನಲ್ ಗ್ಲಾಸ್ ವರ್ಕ್ಸ ಮೆಜಗಾನ. (೩) ಇಂಡಿಯನ್ ಗ್ಲಾಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಮಾತುಂಗಾ. **ಹೈದ್ರಾಬಾದ** (ಡೆಕ್ಕನ್) ಡೆಕ್ಕನ್ ಗ್ಲಾಸ್ ವರ್ಕ್ಸ ಬೇಗಂಪೇಟೆ. **ನಾಗಪೂರ**

ನಾಗಪೂರ ಗ್ಲಾಸ್ ವರ್ಕ್ಸ. **ಪುಣೆ**–ನ್ಯಾಶನಲ್ ಗ್ಲಾಸ್ ವರ್ಕ್ಸ (೨) ಪೈಸಾಫಂಡ ಗ್ಲಾಸ್ ವರ್ಕ್ಸ ತಲೆಗಾವ ದಧಡೆ. **ಓಗಲೆವಾಡಿ**–ಓಗಲೆ ಗ್ಲಾಸ್‌ವರ್ಕ್ಸ ಲಿಮಿಟೆಡ್ ಪೋ. ಓಗಲೆವಾಡಿ ಜಿ. ಸಾತಾರೆ.

ಕಾಜಿನ ವ್ಯಾಪಾರಿಗಳು

ಬೆಂಗಳೂರು–ಶ್ರೀರಾಮಕೃಷ್ಣ ಸ್ಟೋರ್ಸ ಮಲ್ಲೇಶ್ವರಂ, **ಮುಂಬಯಿ**–ಎ ವಾಲ್ಜಿ ಎಂಡ್ ಕಂ ೮–೧೦ ಲೋಹಾಚಾಲ್ ನಂ. ೨, (೨) ಅಮೃತಲಾಲ ಭಗವಾನದಾಸರ ಎಂಡ ಬ್ರದರ್ಸ ೭೭ ನ್ಯೂಚರ್ನಿರೋಡ ನಂ. ೪. (೩) ಮಹ.

ಆನೆ ದಂತದ ಸಾಮಾನುಗಳನ್ನು ತಯಾರಿಸುವವರು

ಅಮೃತಸರ–ಭಾಯಾಸಾಹೇಬ ಸಿಂಘಲಾಲ ಸಿಂಘದರ್ಶಿನಿಗೇಟ್. **ಕಲಕತ್ತಾ** –ಬೆಂಗಾಲ ಹೋಮ್ ಇಂಡಸ್ಟ್ರೀಜ್ ಅಸೋಶಿಯೇಶನ್ ೩, ಹೌಸ್ ಸ್ಟ್ರೀಟ್, (೨) ಘೋಸ್ ದಸ್ತಿದಾರ ಎಂಡ್ ಕಂ. ೧೨೫ ಚಾ ಬಜಾರ ಸ್ಟ್ರೀಟ್ (೩) ಸ್ವದೇಶಿ ಶಿಲ್ಪಿ ಕಾರ್ಯಾಲಯ ೧೧೩ ಕಾರ್ನವಾಲೀಜ್ ಸ್ಟ್ರೀಟ್–**ಕಟಕ**–ಸೂರ್ ಬ್ರದರ್ಸ ಎಂಡ ಕಂ. ಮಂಗಲಬಾಗ **ದಿಲ್ಲಿ**–ಫಕೀರಚಂದ ಎಂಡ ರಘುನಾಥದಾಸ ಜುಮ್ಮಾಮಸೀದ. **ಜಯಪುರ**–ಮಹಾದೇವ ಬರಾಡಿ ಚಂದಪೋಲ್‌ಗೇಟ್, **ಮಂಗಳೂರು**–ಅಲ್ಬರ್ಟ ಮಾರ್ಟಿಸ ಎಂಡ ಕಂ. ಹಂಪನಕಟ್ಟೆ ಸೌಥಕ್ಯಾನ್, **ಶ್ರೀನಗರ**–**ಕಾಶ್ಮೀರ** ನೋವ್ವೆಲ್ಟಿಜ್ ಹೌಸ್ ಸೆಕೆಂಡ್‌ಬ್ರಿಜ್ ಶ್ರೀನಗರ (ಕಾಶ್ಮೀರ) **ಲಾಹೋರ್**–ಕಾಟೇಜ್ ಇಂಡಸ್ಟ್ರೀಜ್ ಲಿ. **ಸೊರಬ**– ಶಿವಾನಂದ ಕಾರ್‌ವ್ಹಿಂಗ್ ಫ್ಯಾಕ್ಟರಿ ಸೊರಬ. ಜಿ. ಶಿವಮೊಗ್ಗ.,

ಮುತ್ತು ರತ್ನಗಳ ವ್ಯಾಪಾರಿಗಳು

ಅಹಮದಾಬಾದ–ರಾಯಲ್ ಜ್ಯುವೆಲರಿ ಮಾರ್ಟ ರಿಚಿರೋಡ್, **ಬೆಂಗಳೂರು** ಇಂಡಿಯನ್ ಜ್ಯುವೆಲರಿ ಮಾರ್ಟ ನಗರ್ತಸ್ಟ್ರೀಟ್ **ಮುಂಬೈ**–ಚುನಿಲಾಲ ಬಿ. ಮೇಥಾ ೪೦ ಮಾರ್ವಾಡಿ ಬಜಾರ ೨ ಡಿ. ಪಿ. ಗಜ್ಜರ್–ಎಂಡ್ ಕಂಪನಿ ೧೮೨ ಶೇಖ ಮೆರ್ಮಸ್ಟ್ರೀಟ್. ನಂ. ೨ **ಮದ್ರಾಸ**–ಛೋಟಾಲಾಲ ಭಗಾವಾನ್‌ದಾಸ ಎಂಡ್ ಕಂ. ೧೧೩ ಮಿರಟ್ ಸ್ಟ್ರೀಟ್. **ಮೈಸೂರು**–ಶ್ರೀಕೃಷ್ಣಜ್ಯುವೆಲರಿ ಮಾರ್ಟ **ಚಿಕ್ಕಮಗಳೂರು ಮೈಸೂರು.**

ಖಾದಿ ವ್ಯಾಪಾರಿಗಳು

ಆಗ್ರಾ–ಸರಸ್ವತಿ ಖಾದಿ ಕಾರ್ಯಾಲಯ **ಮುಂಬೈ**–ಖಾಧಿಬಂಢಾರ ೩೯೬ ಕಾಲ್ಬಾದೇವಿ ರೋಟ್ ನಂ. ೨ ಬಿಹಾರ–ಗಾಂಧೀಕುಟಿರ್‌ಪೋ, ದಿಗ್‌ವಾರಾ. **ಕಲಕತ್ತಾ**–ನ್ಯೂ ಖಾದಿ ಭಾಂಡಾರ ೧೨೨ ಹ್ಯಾರಿಸ್‌ರೋಡ್ (೨) ಜತಿಯಖಾದಿಯ ಭಂಡಾರ ೧೨೫, ಅಖಿಲ ಮಿಸ್ಟ್ರಿಲೈನ್, ತಿರುಪುರ–ಕೋಯಿಮತ್ತೂರ ಕೊಂಗೂ ಖದ್ದರ್ ಕಂ. ತಿರುಪುರ ೨ ಧನಲಕ್ಷ್ಮಿ ಖದ್ದರ್ ತಿರುಪುರ. **ಇಂದೂರು**–ಗೋಪಾಲಕೃಷ್ಣ ಖಾದಿಭಾಂಡಾರ. **ಜೈಪುರ**–ಅ. ಭಾ. ಚ. ಸಂಘದ ರಾಜಸ್ಥಾನದ ಶಾಖೆಯ ಖಾದಿ ಭಂಡಾರ.

ದೀಪದ ಕಡ್ಡಿಯ ಕಾರ್ಯಾಲಯಗಳು

ಅಹಮದಾಬಾದ–ಅಹಮದಾಬಾದ ಮ್ಯಾಚ ಮ್ಯಾನುಫ್ಯಾಕ್ಚರಿಂಗ್ ಕಂ. ಲಿ. ಗೋಮ್‌ತಿಪುರ. **ಬೆಳಗಾಂವ**–ಬೆಳಗಾಂವ ಮ್ಯಾನುಫ್ಯಾಕ್ಚರಿ. **ಮುಂಬೈ**–ಬೊಂಬೆ ಮ್ಯಾಚವರ್ಕ್ಸ ಕುರ್ಲಾ, (೨) ಅಂಧೇರಿ ಮ್ಯಾಚ್ ಫ್ಯಾಕ್ಟರಿ ಅಂಧೇರಿ (೩) ಸ್ವದೇಶಿ ಮ್ಯಾಚ್ ಕಂಪನಿ ವ್ಹಲ್ಕನ್‌ಹೌಸ್ ನಿಕಲರೋಟ್ ಬೆಲಾರ್ಡೆ ಎಸ್ಟೆಟ್. **ಕಲಕತ್ತಾ**–ಕಲಕತ್ತಾ ಮ್ಯಾಚ ಫ್ಯಾಕ್ಟರಿ ೩೦ ರುಸ್ಸಾರೋಡ್ ಸೌಥ (೨) ಭಾಗೀರಥಿ ಮ್ಯಾಚಫ್ಯಾಕ್ಟರಿ ಜೋರ್ಗಬ್ಯಾಸಕ್ಕ ರೋಡ ಬಾರಾನಗೋರ. **ಮದ್ರಾಸ**–ಸ್ಟಾರ್ ಮ್ಯಾಚ ಕಂ. ಪೋನಾಮಲ್ಲಿ. (೨) ಬೇಬಿ ಮ್ಯಾಚ್ ಫ್ಯಾಕ್ಟರಿ ತೊಂಡಿಯಾರಪೇಟೆ, **ಮೈಸೂರು**–ಮೈಸೂರ್ ಮ್ಯಾಚ್ ಎಂಡ್ ಕ್ಯಾಂಡಲ್ ಫ್ಯಾಕ್ಟರಿ.

ಸಂಗೀತ ಉಪಕರಣಗಳ ಮತ್ತು ಫೋನುಗಳ ವ್ಯಾಪಾರಿಗಳು

ಮುಂಬಯಿ–ಬೊಂಬೆ ಫೊನೋ ಆ್ಯಂಡ್ ಜನರಲ್ ಏಜನ್ಸಿ ಕಾಲ್ಬಾ ದೇವಿರೋಡ್. (೨) ಗ್ರಾಮಪೋರ್ಣ ಕಂ. ಲಿ. ೨೮ ರಾಮಪಾರ್ಟ ರೋಡ. **ಕಲಕತ್ತಾ**–ಮ್ಯುಜಿಕಲಲ್ ಸ್ಟೋರ್ಸ ೫ ಲೋವರ ಚಿತ್‌ಪುರರೋಡ್ (೨) ನ್ಯಾಶನಲ್ ಹಾರ್ಮೊನಿಯಮ್ ಕಂ. ೮ ಲಾಲ ಬಜಾರ ಸ್ಟ್ರೀಟ್. **ಹೈದರಾಬಾದ**–ಡೆರ್ನ್ಕಮಿಡಿ. ದತ್ತಾತ್ರೆಯ ಎಂಡ ಕಂ. ರೆಸಿಡೆನ್ಸಿ. ಬಜಾರ, **ಮದ್ರಾಸ**–ಹೋಮರ್ ಆ್ಯಂಡ್ ಕಂ. ಬ್ರಾಡ್ವೆ (೨) ಮದ್ರಾಸ್ ಮ್ಯುಜಿಕಲ್ ವೆಯರ್ ಹೌಸ್ ಗೋವಿಂದಪ್ಪ ನಾಯಕ ಸ್ಟ್ರೀಟ್, **ಮೈಸೂರ**–ಸಿಟಿ ಹಾರ್ಮೋನಿಯಮ್ ವರ್ಕ್ಸ ೨೨೮ ರಾಮವಿಲಾಸ ಅಗ್ರಹಾರ (೨) ಎಂ. ಎಸ್. ಸಿದ್ದಪ್ಪ ಎಂಡ್ ಬ್ರದರ್ಸ ಕೃಷ್ಣರಾಜಮಹಾಲ **ಸ್ಯಾಲಕೋಟ್** (Sialkot)ಲರ್ಂಡ ಪಾಯಿಪ ಕಂ. (೨) ಪೆಟ್ರೋ ಬ್ರದರ್ಸ.

ತುದಿಗಳನ್ನು (ನಿಬ್) ತಯಾರಿಸುವವರು

ಮುಂಬಯಿ–ಕುಲಕರ್ಣಿ ಬ್ರದರ್ಸ ಪನ್ನಾಲಾಲ ಟೇರೇಸ್ ನಂ ೭ (೨) ನಿಬ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಗೋಪಿವಾಲ ಮ್ಯಾನ್ಸನ್ ಸ್ಯಾಂಥರ್ಸ್ಟ ರೋಡ. **ಕಲಕತ್ತಾ**–ಎಫ್. ಎ್. ಗುಪ್ತ ಆ್ಯಂಡ್ ಕಂ. ಬಿಲಿಯಾಘಟರೋಡ್.

ಕಾಗದ ವ್ಯಾಪಾರಿಗಳು

ಮುಂಬಯಿ–ಜೆ. ಎನ್. ಸಿಂಗ್ ಎಂಡ ಕಂ. ೬೩ ಪ್ರಿನ್ಸೆಸ್ ಸ್ಟ್ರೀಟ ನಂ. ೨ (೨) ಕೃಷ್ಣ ಪೇಪರ್ ಮಾರ್ಟ ೨೬, ಮಂಗಲದಾಸ ರೋಡ್, ಪ್ರಿನ್ಸೆಸ್ (೩) ಚೌಧರಿ ಬ್ರದರ್ಸ ಅಕ್ಬರ್ ಬಿಲ್ಡಿಂಗ್ ೨೦೩ ಹಾರ್ನ್ಬಿ ರೋಡ, **ಕಲಕತ್ತಾ**–ಓರಿಯೆಂಟಲ್ ಪೇಪರ್ ಸ್ಟೋರ್ಸ ೩೦ ಕಾರ್ನವಾಲಿಸ ಸ್ಟ್ರೀಟ್. ಮದ್ರಾಸ್–ಚಕ್ರವರ್ತಿ ಕಂ. ೧೧ ಮೌಂಟ್ ರೋಜ ೨ ಸಿಟಿ ಪೇಪರ್ ಮಾರ್ಟ ಪೋ. ಬಾ. ೨೬.

ಕಾಗದ ಮಿಲ್ಲುಗಳು

(೧) ಆಂದ್ರ ಪೇಪರ್ ಮಿಲ್ಸ್, ರಾಜಮಹೇಂದ್ರ (೨) ಬೆಂಗಾಲ ಪೇಪರ್ ಮಿಲ್ ಕಂ. ೧೦೩, ಕ್ಲಾಯಿವ್ಹ ಸ್ಟ್ರೀಟ್ **ಕಲಕತ್ತಾ** (೩) ಟಟಘರ್ ಪೇಪರ್ ಮಿಲ್ಸ ಚಾರಟರ್ಡ ಬ್ಯಾಂಕ್

ಬಿಲ್ಡಿಂಗ್ಸ್, ಕಲಕತ್ತಾ (೪) ಡೆರ್ಕ್ಕ ಪೇಪರ್ ಮೀಲ್ಸ್ ಕಂ. ಲಿ. ಭವಾನಿಪೇಟ, **ಪುಣೆ,** (೫) ಗಿರಿಗಾಂವ ಪೇಪರ್‌ಮಿಲ್ಸ್, **ಗಿರಿಗಾಂವ ಮುಂಬಯಿ.** (೬) ಲಖನೌ ಪೇಪರ್ ಮಿಲ್ಸ್, **ಲಖನೌ,** (೭) ಪಂಜಾಬ ಪಲ್ಪ ಎಂಡ ಪೇಪರ್ ಮೀಲ್ಸ್ ಲಿ. **ಜಗಾದ್ರಿ**

ಮೋಟಾರಕಾರ್ ಮಾರುವವರು

ಬೆಂಗಳೂರು–ವ್ಹಿ. ರಾಮಸ್ವಾಮಿ ನಾಯಡು ಶ್ರೀ ಕೃಷ್ಣ ಬಿಲ್ಡಿಂಗ್ ಮಲ್ಲೇಶ್ವರಂ. **ಮುಂಬಯಿ**–ಬೋಂಬೆ ಮೋಟಾರಕಾರ್ ಕಂಪನಿ ಲಿ. ಗೇಟ್‌ಲೋ ಬಂದರ, (೨) ಪೋರ್ಡ ಅಟೋಮೋಬಿಲ್ಸ್ ಲಿ. ಪೋರ್ಡ ಬಿಲ್ಡಿಂಗ್‌ಹಗ್ಸ್ (೩) ಲ್ಯಾಮಿಂಗ್‌ರ್ಟ ಸಾಯಕಲ್ ಎಂಡ್ ಮೋಟಾರ ಕಂ. ಚರ್ಚಗೇಟ್ **ಮದ್ರಾಸ್**–ಎಡ್ವಾರ್ಡ್ಸ್‌ಮೋಟರ್ ಕಂ. (೨) ಇಂಗ್ಲೀಷ್ ಸಾಯಕಲ್ ಎಂಡ ಮೋಟಾರ ಇಂಪೋರ್ಟರ್ಂಗ್ ಕಂ. ಬ್ರಾಡ್ವೆ, (೩) ಆರ್. ಪಟೇಲ್ ಎಂಡ ಕಂ. ವಕಾಂಟ್ ರೋಡ. **ಸೋಲಾಪುರ**–ಎಸ್. ಆರ್. ಎಂಡ ಕಂ.

ಪ್ರಿಂಟಿಂಗ್ ಮಶೀನ್ ಮಾರುವವರು

ಮುಂಬಯಿ : ಹಿರಾಲಾಲ ಪ್ರಭುದಾಸ ಲ್ಯಾಂಡ್ ಕಂ. ಪೋಸ್ಟ್ ಬಕ್ಸ ೪೫೭ (೨) ಎಂ. ಸಿ. ಮೋದಿ ಎಂಡ್ ಕಂ. ಕಾಂದೇವಾಡಿ **ಕಲಕತ್ತಾ**–ಇಂಡೋಸ್ವಿಸ್ ಟ್ರೇಡಿಂಗ್ ಕಂ. ೨೮ ಪೋಲಾಕ್ ಸ್ಟ್ರೀಟ್ (೨) ಲಿನೋ ಟಾಯಿಪ್ ಲ್ಯಾಂಡ್ ಮಶಿನರಿ ಲಿ. ಖೊ. ಬಜಾರ ಸ್ಟ್ರೀಟ್. ಮದ್ರಾಸ್ ನೆರ್ಲ್ಸ ಲ್ಯಾಂಡ್ ಕಂ.

ಚಂದನದ ಎಣ್ಣೆಯನ್ನು ತಯಾರಿಸುವವರು

ಅರ್ಕಾಟ್–ಇಂಡಿಯನ್ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಕುಪ್ಪಂ N.Arkot ಬೆಂಗಳೂರ ಗವರ್ನಮೆಂಟ್ ಸ್ಯಾಂಡಲ್ ವುಡ್‌ಆಯಿಲ್ ಫ್ಯಾಕ್ಟರಿ. ೨ ಪ್ಯಾರಿ ಲ್ಯಾಂಡ್ ಕಂ. ಮಾರ್ಕ್ಸರೋಟ. **ಕಲಕತ್ತಾ**–ದೇವಿಪ್ರಸಾದ ಪ್ರಯಾಗದತ್ತ ಪಂಡಿತ ಚತಮರ ರೋಡ್. ಚಿತ್ತೂರ ಕಾಗುಂಡಿ ಇಂಡಸ್ಟ್ರೀಯಲ್ ವರ್ಕ್ಸ ಕುಪ್ಪಂ ಜಿ. ಚಿತ್ತೂರ.

ಬಟ್ಟೆ ಹೊಲಿಯುವ ಯಂತ್ರಗಳನ್ನು ಮಾರುವವರು

ಮುಂಬಯಿ : ಜಯಂತಿಲಾಲ ಕೇಶವಲಾಲ ಎಂಡ್ ಬ್ರದರ್ಸ ಸಂಡರ್ಸ್ಟ ರೋಡ್, (೨) ಶಿಂಗರ್ ಶ್ಯುಯಿಂಗ್ ಮಶೀನ್ ಕಂ. ಹಾರ್ನ್ಬಿ ರೋಡ್. **ಕಲಕತ್ತಾ**–ಇಂಡೋ ಜರ್ಮನಿ ಕಂ. ಸ್ಟ್ಯಾಂಡ್ ರೋಡ್, **ಮದ್ರಾಸ**–ಪರ್ಫ ಶ್ಯುಯಿಂಗ್ ಮರ್ಶಿ ಕಂ. ಮೌಂಟ್ ರೋಡ್. (೨) ಆರ್. ಸಿ. ಲ್ಯಾಂಡ್ ಚೀನಾಬಜಾರ ರೋಡ.

ಶಾಲಿನ ವ್ಯಾಪಾರಿಗಳು

ಅಮೃತಸರ–ಅಬ್ದುಲ್ಲಾ ರ್ಸ ಲ್ಯಾಂಡ್ ಕಂ. ಲೋಹಾರಿಗೇಟ್, (೨) ಭಾರತ ಇಂಡಸ್ಟ್ರೀಯಲ್ ಕಂ. **ಬೆಂಗಳೂರು**–ಎ ಲವ್ಹೆಂಡರ್ ಲ್ಯಾಂಡ್ ಕಂಪನಿ ಮಾರ್ಕ್ಸ ರೋಡ. **ಕಲಕತ್ತಾ**–ದುನೀಚಂದ ಕಿಶನಚಂದ ಖನ್ನಾಳ೬ ಕ್ರಾಸ್ ಸ್ಟ್ರೀಡ್, (೨) ಫ್ರೆಂಡ್ಸ್ ಸೋಸಾಯಿಟಿ ಆಶುತೋಷ ಬಿಲ್ಡಿಂಗ್

ಕಾಲೇಜ್ ಸ್ಟ್ರೀಟ್, (೩) ತಾರಾ ಸ್ಟೋರ್ಸ ಕಾಲೇಜ್ ಸ್ಟ್ರೀಟ್, **ಶ್ರೀನಗರ (ಕಾಶ್ಮೀರ)**–ಸಿ. ಎಂ. ಹಾಡೌ ಆ್ಯಂಡ್ ಕಂ. (೨) ಗ್ವಾರಾಲಾಲ ಎಂಡ್ ಬ್ರದರ್ಸ ಗುಂಡಿ ಅಹಲ್ಮಾರ್, (೩) ಕಾಶ್ಮೀರ ವೀವ್ಹಿಂಗ್ ಕಂ. (೪) ಝುತಿಅ್ಯಂಡ್ ಕಂಪನಿ **ಲಾಹೋರ**–ರಾಜಿ ಅಬ್ದುಲ್ ಸುರ್ಬ್ಬರ್ಖಾ ಕಾಶ್ಮೀರಿ ಬಜಾರ.

ರೇಶಿಮೆಯ ವ್ಯಾಪಾರಿಗಳು

ಅಹಮದಾಬಾದ–ಶಶಿಕಾಂತ ಜಿನುಭಾಯ ರತನಪೇಲ್, (೨) ದಯಾ ಭಾಯಗೋಕುಲದಾಸ ಔಟಸಾಯಿಡ ಪಂಚಕುವಾ ಗೇಟ್, **ಬೆಂಗಳೂರು**–ಬೆಂಗಳೂರು ಶಿಲ್ಕ್‌ಫಿಲೆಚರ್, **ಬಳ್ಳಾರಿ**– ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ಶಿಲ್ಕ ವೀವ್ಹಿಂಗ್ ಫ್ಯಾಕ್ಟರಿ ರಾಯದುರ್ಗ. **ಬನಾರಸ**–ಬಾಲಾಜಿ ಎಂಡ್ ಕಂ. (೨) ಬುಲಕಿರ್ಶ ಶೇಟ ಆ್ಯಂಡ್ ಬ್ರದರ್ಸ, (೩) ಇಂಡಿಯಾ ಟೆಕ್ಸಟಾಯಿಲ ಕಂ. (೪) ಕೇಶರಿ ಆ್ಯಂಡ್ ಕಂಪನಿ. (೫) ನ್ಯು ಶಿಲ್ಕ ಕಂಪನಿ, (೬) ಪ್ರಭುದ್ಧ ಇಂಡಸ್ಟ್ರಿಯಲ್ ಹೋಮ್ ಶಿವಾಲಾ. **ಗುಳೇದಗುಡ್ಡ**–ಬಸಪ್ಪ ಗಂಗಾವತಿ, (೨) ವೀರಪ್ಪಭಾವಿ, **ಮುಂಬಯಿ**–ಶ್ರೀಕೃಷ್ಣ ಟ್ರೇಡಿಂಗ್ ಕಂಪನಿ ಕಾಲ್ಬಾದೇವಿ ರೋಡ. **ಕಲಕತ್ತಾ**–ಬೆಂಗಾಲ ಶಿಲ್ಕ್ ಮೀಲ್ಸ ಕಂ. ಲಿಂ ೧೩ ಅರಿಫ್‌ರೋಡ್ ಉಲ್ತಾದರಿಗಾ (೨) ಇಂಡಿಯಾ ಶಿಲ್ಕ ಹೌಡ್, ೨೦೬ ಕಾರ್ನವಾಲಿಸ್ ಸ್ಟ್ರೀಟ್, (೩) ಶಿಲ್ಕ ಹೋಮ್ ೫೬ ಕಾಲೇಜ ಕೊಲೊಂಬೋ ಧರ್ಮದಾಸ್ ಆ್ಯಂಡ್ ಕಂಪನಿ ಮೇರ್‌ಸ್ಟ್ರೀಟ್. **ಶ್ರೀನಗರ** (ಕಾಶ್ಮೀರ) ಕಾಶ್ಮೀರ ಶಿಲ್ಕ ಡಿಪೋ. (೨) ಕಾಶ್ಮೀರ ಸ್ವದೇಶಿ ಸ್ಟೋರ್ಸ ಲಾಹೋರ್ ಗಾಂಧಿ ಆ್ಯಂಡ್ ಕಂ. ದಿಮಾಲ. **ಮದ್ರಾಸ**–ಇಂಡಿಯನ್ ಪ್ರೊಡಕ್ಟ್ಸ ಎಕ್ಸಪೋರ್ಟ ಕಂ. ಪೋ, ಬಾ ೨೧೭ (೨) ಎಂ ರಾಮಸ್ವಾಮಿ ಚೆಟ್ಟಿ ಆ್ಯಂಡ್ ಕಂ. ರರ್ತಬಜಾರ ರೋಡ. **ಸಿಕಂದರಾಬಾದ** (ಡೆರ್ಕ್ಕ) ಎ. ವೆಂಕಣ್ಣ ಆ್ಯಂಡ್ ಕಂ. (೨) ಟಿ. ಹಸ್ಯಾರಾಮ.

ನಾಶಿಪುಡಿಯನ್ನು ತಯಾರಿಸುವವರು

ಮುಂಬಯಿ ಅಲಹಾಬಾದ ಸ್ನಫ್ ವರ್ಕ್ಸನಿಯರ್ ವೆಲಿಂಗ್‌ಟನ್ ಸಿನೇಮಾ ಧೋಬಿತಲಾವ. **ಮಂಗಳೂರ**–ಎಚ್. ರಾಮರಾವ ಕಾರ್ ಸ್ಟ್ರೀಟ್. (೨) ಕವಿ ಆ್ಯಂಡ್ ಸನ್ಸ್ ಕಾರ್ ಸ್ಟ್ರೀಟ್, (೩) ಮಂಜುನಾಥ ಶಿವಶೇಟ್ (೪) ಮುಕಂದ ನಾಯಕ್. **ಮದ್ರಾಸ್**–ಗುರುಬಸವ ಎಂಡ್ ಕಂ. ಲಿ. ಪೊ. ಬಾಕ್ಸ ನಂ. ೧೫೦ (೨) ಜಹಾಂಗೀರ ಸ್ನಫ್ ಕಂ. ೫ ಖ್ಯಾರಾಕ್ ಲೇರ್ (೩) ಪಿ. ವಿ. ರಾರ್ಜ ಆ್ಯಂಡ್ ಕಂ. ಗೋವಿಂದ ನಾಯರ್ಕ ಸ್ಟ್ರೀಟ್ (೪) ರಾಜಪರಿಮಳ ಸ್ನಫ್ ಫ್ಯಾಕ್ಟರಿ.

ಸಬಕಾರದ ಕಾರ್ಯಾಲಯಗಳು

ಅಲಹಾಬಾದ–ಅಲಹಾಬಾದ ಸೋಪ ಕಂ. ಲಿ. **ಬೆಂಗಳೂರು**–ಗವ್ಹರ್ನಮೆಂಟ ಸೋಪ ಫ್ಯಾಕ್ಟರಿ, (೩) ಕೇರಳ ಸೋಪ ಫ್ಯಾಕ್ಟರಿ ಚಿಕ್‌ಪೇಟೆ. **ಮುಂಬಯಿ**–ಡಾಯಮಂಡ ಸೋಪ. ಕಂ. ಗಿರಗಾಂವ, (೨) ರೇಲ್ವೆ ಸೋಪ ಮ್ಯಾನುಫ್ಯಾಕ್ಚರಿಂಗ ಕಂ. ಪ್ರಿನ್ಸೆಸ್ ಸ್ಟ್ರೀಟ್ **ಕಲಕತ್ತಾ**–ಹಿಮಾನಿ ಸೋಪ್ ವರ್ಕ್ಸ ೫೯ ಬೆಲ್ಗಜಿಯಾ ರೋಡ, (೨) ಕಮಲಾಸೋಪ ಫ್ಯಾಕ್ಟರಿ ೪೬ ಶಿಕ್ ಠಾಕುರಲೇನ್, (೩) ಲಕಿ ಸೋಪ ಫ್ಯಾಕ್ಟರಿ ೮ ಬ್ಯಾರಾಕಪೋರ ಟ್ರಂಕ ರೋಡ (೪) ಪಂಜಾಬ ಸೋಪ ಫ್ಯಾಕ್ಟರಿ

೫೫ ಕ್ಯಾನಿಂಗ್ ಸ್ಟ್ರೀಟ್, **ಡಾಕಾ**–ಡಾಕಾ ಸೋಪ ಫ್ಯಾಕ್ಟರಿ ೩೨ ಕಾಂಕೇಟ್ ಸ್ಟ್ರೀಟ್, (೨) ಸನ್‌ರಾಯಿಸ ಸೋಪ ವರ್ಕ್ಸ. ದಿಲ್ಲಿ–ಯುನಿವ್ಹರ್ಸಲ್ ಸೋಪು ಕಂಪನಿ ಸದರ್ ಬಜಾರ. **ಹೈದರಾಬಾದ** (ಡೆಕ್ಕನ್) ರಾಯಜಿಂಗ್ ಸೋಪ ವರ್ಕ್ಸ–**ಕರಾಚಿ**–ಭಾರತದ ಸೋಪ ವರ್ಕ್ಸ ಲಾರೆನ್ಸ್ ರೋಡ್, (೨) ಇಂಡಿಯನ್ ನ್ಯಾಶನಲ್ ಸೋಪ ಮ್ಯಾನುಫ್ಯಾಕ್ಚರಿಂಗ ಕಂ ಪ್ರಿಯರ್ ರೋಡ್, **ಮದ್ರಾಸ**–ಮೋಹನ ಬ್ರದರ್ಸ ಬಜಾರ ರೋಡ ಸೈದಾಪೇಟ್ **ಪುಣೆ**–ಇಂಪಿರಿಯಲ್ ಸೋಪ ವರ್ಕ್ಸ ವಿಠ್ಠಲಪೇಟೆ, (೨) ಮಹಾತ್ಮಾಗಾಂಧಿ ಸೋಪ ಫ್ಯಾಕ್ಟರಿ ರವಿವಾರ ಪೇಟೆ, **ಸಿಕಂದರಾಬಾದ,** (ಡೆಕ್ಕನ್) ಶಿಕದಂರಾಬಾದ ಸೋಪಫ್ಯಾಕ್ಟರಿ.

ಮೇಣಬತ್ತಿಯ ವ್ಯಾಪಾರಿಗಳು

ಮದ್ರಾಸ–೧ ಚಂದ್ರಶೇಖರ ಕ್ಯಾಂಡಲ ಕಂಪನಿ. ೨. ಸೌಥ್ ಇಂಡಿಯನ್ ಕ್ಯಾಂಡಲ ವರ್ಕ್ಸ. **ಮುಂಬೈ**–೧ ಹಿಂದ ಕ್ಯಾಂಡಲ್ ವರ್ಕ್ಸ ಗಿರಿಗಾಂವ. ೨. ದಾಯಾ ಎಂಡ್ ಕಂಪನಿ ಬ್ಯಾಂಕ್‌ಸ್ಟ್ರೀಟ್ ಪೋರ್ಟ. **ರಂಗೂನ** ಬರ್ಮಾ ಆಯಿಲ್ ಕಂಪನಿ ಲಿಮಿಟೆಡ್.

ಹಂಚು ಮೊದಲಾದ ಮಣ್ಣಿನ ಸಾಮಾನುಗಳ ವ್ಯಾಪಾರಿಗಳು :

ಮಂಗಳೂರು–೧ ಪಂಡಿಯಾ ಭಾನುಶಂಖರ ಡಿಶೋಝಾ ಕಂಪನಿ ೨. ಮಡಪಾಡಿ ಎ. ಬಿ. ಎಂಡ್ ಬ್ರದರ್ಸ ಟಾಯಿಲ್ ವರ್ಕ್ಸ. **ಬೆಂಗಳೂರು**–ಸಿಟಿ ಬ್ರೀಕ್ ಎಂಡ್ ಟಾಯಿಲ್ ವರ್ಕ್ಸ **ಮುಂಬೈ** ಬಾಂಬೆ ಬ್ರೀಕ್ ಎಂಡ್ ಟಾಯಿಲ್ ಮ್ಯಾನುಫ್ಯಾಕ್ಚರಿಂಗ ಕಂಪನಿ. ಘಾಲಘಾಟ–ವಿಶ್ವಕರ್ಮ ಟಾಯಿಲ್ ವರ್ಕ್ಸ. ಮದ್ರಾಸ–ಫೆರೋಕ ಟಾಯಿಲ್ ವರ್ಕ್ಸ ತಂಬುಶೆಟ್ಟಿ ಸ್ಟ್ರೀಟ್.

ಚಹಾ ವ್ಯಾಪಾರಿಗಳು

ಮುಂಬೈ – ೧ ಬಾಂಬೆ ದೇಸಾಯಿ ದಲಾಲ ಎಂಡ್ ಕಂಪನಿ ಸಿ. ಪಿ. ಟ್ಯಾಂಕ್ ರೋಡ್, ೨. ವ್ಹಿಕ್ಟೋರಿಯಾ ಅಲ್‌ಕಲಿ ವರ್ಕ್ಸ ಗವ್ಹರ್ನಮೆಂಟ್ ಗೇಟ್ ರೋಡ್ **ಕೋಯಿಮುತ್ತೂರು**–೧ ಟಿ. ಸ್ಟೇಶನ್ ಎಂಡ್ ಕಂಪನಿ ಲಿಮಿಟೆಡ್ ೨. ಯುನಾಯಿಟೆಡ್ ಕಾಫಿ ಸಪ್ಲಾಯ್ ಕಂಪನಿ ಲಿಮಿಟೆಡ್, **ಬೆಂಗಳೂರು–ಮೈಸೂರು** ಸ್ಟೇಟ್ ಪ್ರೋಡಕ್ಸ್ ಕಂಪನಿ. ಮಂಗಳೂರು–ಸೇಟ ಮಾಣಿಕಜಿ ನವರೋಜಿ. ೨. ಶಂಭುಲಾಲ ನಾಥಲಾಲ ಎಂಡ ಕಂಪನಿ. **ಲಖೀಮಪುರ**–(ಅಸಾಮ ಪ್ರಾಂತ) ಶಾಲೀಗ್ರಾಮ ಚುನಿಲಾಲ ಎಂಡ್ ಕಂಪನಿ.

ಕಟ್ಟಿಗೆ ಸಾಮಾನಿನ (ಟಿಂಬರ್) ವ್ಯಾಪಾರಿಗಳು

ಮುಂಬೈ–೧ ವಿಷ್ಣುಬಲ್ಲಾಳ ಎಂಡ್ ಕಂಪನಿ ರೋಡ ಟ್ಯಾಂಕ ಬಂದರ. ೨. ಮಲಬಾರ ಟಿಂಬರ್ ಕಂಪನಿ ಇಸ್ಪಲ್‌ನೇಡ್ ರೋಡ್. **ಕರಾಚಿ**–ಮಹಮ್ಮದ ಜಾನ ಮಹಮ್ಮದ ಛೋಟಾಣಿ ಫೆರೆ ರೋಡ. **ಮೈಸೂರು** ಸ್ಟೀಮ್ ಎಂಡ ಶೋರಾಯಿಸ ಮಿಲ್. **ಶಿವಮೊಗ್ಗ** ಅಮೀರ ಅಹಮ್ಮದ ಬಿ. ಎಸ್.

ಬಳೆಗಳ ವ್ಯಾಪಾರಿಗಳು

ಕಲಕತ್ತಾ-ಸ್ವದೇಶಿ ಸೀಲ್ಕ ಫ್ಯಾಕ್ಟರಿ ಕಾರ್ನವಾಲೀಸ್ ಸ್ಟ್ರೀಟ್. **ಕೊಲ್ಲಾಪುರ**-ಭಾಗವತ ಎಂಡ್ ಕಂಪನಿ ಶಾಹುಪುರಿ, ಕಿತ್ತೂರು (ಜಿಲ್ಲಾ ಬೆಳಗಾಂವ) ಎಂ. ಜಿ. ಮುತ್ತೂರು ಬ್ರೋಸ್ ಗ್ಲಾಸ್ ಬ್ಯಾಂಗಲ್ಸ್ ಫ್ಯಾಕ್ಟರಿ. **ಮುಂಬೈ** ಮೆಸರ್ಸ ಪ್ರೇಮ್ ರಿಚ್ ಎಂಡ್ ಸನ್ಸ ಗೋವಾಲಿಯಾ ಟ್ಯಾಂಕ್ ರೋಡ ನಂ ೭. **ಪುಣೆ**-ಇಬ್ರಾಹಿಮ್ ಬೇಶಾಕ್ ಎಂಡ್ ಕಂಪನಿ ಸೋಮವಾರ ಪೇಟೆ.

ಕಲ್ಲಿದ್ದಲೆಯ ವ್ಯಾಪಾರಿಗಳು

ಮುಂಬಯಿ-೧ ವಕೀಲ್ ಬ್ರದರ್ಸ ಅಪೋಲಾ ಸ್ಟ್ರೀಟ್, ೨. ಹಿರಾಲಾಲ ಹಿಮತಲಾಲ ಎಂಡ್ ಸನ್ಸ ಹಾರ್ನಬಿರೋಡ, **ಕಲಕತ್ತಾ**-ಮುಕರ್ಜಿ ಎಂ. ಕೆ. ಎ೯ ಕಂಪನಿ ಸ್ಟ್ಯಾಂಡ ರೋಡ. **ಅಕೋಲಾ**-ಯು. ಡಿ. ಪಟೇಲ, ಎಂಡ್ ಕಂಪನಿ.

ಸ್ಟೇಶನರಿ ಸಾಮಾನುಗಳ ವ್ಯಾಪಾರಿಗಳು

ಅಹಮದಾಬಾದ್-ಸಿ. ಎಮ್. ಪಟೇಲ್ ರಿಚಿರೋಡ್, ೨. ಎಂ. ವಾಡಿಬಾಲ ಎಂಡ ಸನ್ಸ ರಿಚಿರೋಡ್, **ಬೆಂಗಳೂರು**-ಸಿ ಸುಬ್ಬರಾವ ಎಂಡ್ ಸನ್ಸ್. ೭೯. ಹುಲಸೂರು ಪೇಟೆ, **ಮುಂಬಯಿ**-ಎನ್. ಎಸ್. ಮಿಸ್ತ್ರಿ ೫. ಸರಸ್ವತಿ ಮಹಾಲ ನೀಯರ್ ಸಿ. ಮಾರ್ಕೇಟ್ ನಂ. ೨. **ಕಲಕತ್ತಾ** ಬಿಬಿನ್ ಬಿಹಾರಿದಾಸ. ೯೯, ರಾಧಾಬಜಾರ ಸ್ಟ್ರೀಟ್. ೨. ಕಮರ್ಸಿಯಲ್ ಸ್ಟೇಶನರಿ ಮಾರ್ಟ ೨೮ ರಾಧಾಬಜಜಾರ ಸ್ಟ್ರೀಟ್ ೩. ನ್ಯಾಶನಲ್ ಸ್ಟೇಶನರಿ ಹಾಲ ೧. ಓಲ್ಡ್ ಕೋರ್ಟ ಹೌಸ ಲೇನಂ. **ಮಂಗಳೂರು**-ಬೊಂಬೆ ಸ್ಟೋರ್ಸ ಹಂಪನಕಟ್ಟೆ ೨. ಶ್ರೀನಿವಾಸ ಬ್ರದರ್ಸ ೧೨ ಕಾರ್‌ಸ್ಟ್ರೀಟ್. **ಮದ್ರಾಸ್**-ಎಸ್. ರಂಗನಾಥಂ ಚೆಟ್ಟಿ ಆ್ಯಂಡ್ ಬ್ರದರ್ಸ ೧೨ ಬಂದರ್ ಸ್ಟ್ರೀಟ್ ೨. ಕಿಂಗ್ ಎಂದ ಕಂ. ೨೯೮ ಚೇನಾ ಬಜಾರ. **ಸಿಕಂದರಾಬಾದ**-ಬಿ. ವ್ಹಿ. ಎರ್. ಬಾಲರೆಡ್ಡಿ ಎಂಡ ಕಂ.

ಟ್ರಂಕ್ ತಯಾರಿಸುವವರು

ಮುಂಬಯಿ-ಹಿಂದೂ ಟ್ರಂಕ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಘೋರ್ಕ ಲ್ಯಾಂಡ್ ರೋಡ್ಸ ೫ ಕ್ರಾಸ್‌ಲೇನ್ ಆರ್ಯ ಫ್ಯಾಕ್ಟರಿ. ೭೫/೧ ಹ್ಯಾರಿಸನ್ ರೋಡ್ ೨. **ಕಲಕತ್ತಾ**-ಸ್ವರಾಜ್ಯ ಫ್ಯಾಕ್ಟರಿ ೭೧ ಹ್ಯಾರಿಸನ್ ರೋಡ್ **ಮದ್ರಾಸ್** ಎಸ್. ಸೈಯದ್ ಚೂಜಾ ಸಾಹೇಬ ೩೪೯ ಎಸ್ಪ್ಲನೇಡ್ **ಬೆಂಗಳೂರ**-ಮೈಸೂರು ಮೆಟಲ್ ಇಂಡಸ್ಟ್ರೀಜ್ ಲಿ.

ಸಕ್ಕರೆಯ ಕಾರ್ಯಾಲಯಗಳು

ಅಲಾಹಾಬಾದ -ಜಾನಪುರ ಶುಗರ ಲಿ **ಕಾನಪುರ**-ಯುನಿಯನ್ ಇಂಡಿಯಾಶುಗರ್ ಮಿಲ್ಸಂ ಕಂ. ಲಿ. ರಾವತಪುರ, **ಲಾಹೋರ್** ಪಂಜಾಬ ಶುಗರ್ ಮಿಲ್ಸ್ ಕಂ.

ಪೋಷ್ಟಿನ ಸಂಗತಿ

೧. ಕಾರ್ಡಿಗೆ, ೩. ದುಡ್ಡು, ಪ್ರತ್ಯುತ್ತರ ಕಾರ್ಡಿಗೆ ೬ ದುಡ್ಡು, ೨. ತೊಲೆ ತೂಕದವರೆಗೆ ಪಾಕೀಟಿಗೆ ೫ ದುಡ್ಡು. ಪುಸ್ತಕ ಮೊದಲಾದವುಗಳನ್ನು ಕಳುಹಿಸಬೇಕಾದರೆ ೫ ತೊಲೆಗೆ ೨

ದುಡ್ಡಿನಂತೆ, ಪಾರ್ಸೆಲ್ ಮೂಲಕ ಕಳುಹಿಸಬೇಕಾದರೆ ೨೦ ತೊಲೆಗೆ ೨ ಆಣೆ ತಿಕೀಟು ಹಚ್ಚಬೇಕಾಗುವುದು. ರಜಿಸ್ಟರ್ ಮೂಲಕ ಕಳುಹಿಸಬೇಕಾದರೆ, ೩ ಆಣೆಯ ತಿಕೀಟನ್ನು ಹೆಚ್ಚಿಗೆ ಹಚ್ಚಬೇಕಾಗುತ್ತದೆ. ಒಪ್ಪಿಗೆ ಪತ್ರವು ಬರಬೇಕಾದರೆ ಇನ್ನು ಒಂದು ಆಣೆಯ ತಿಕೀಟು ಹೆಚ್ಚಿಗೆ ಹಚ್ಚಬೇಕಾಗುವುದು.

೨. ಮನಿಯಾರ್ಡರ ಮೂಲಕ ರೂ.ಗಳನ್ನು ಕಳುಹಿಸಬೇಕಾದರೆ ಈ ಕೆಳಗಿನಂತೆ ಫೀಯನ್ನು ತುಂಬಬೇಕಾಗುವುದು. ೧೦ ರೂ. ವರೆಗೆ ೨ ಆಣೆ, ಅಲ್ಲಿಂದ ೨೫ ರೂ. ಗಳವರೆಗೆ ೪ ಅಣೆ, ೨೫ ರಿಂದ ೩೫ ರವರೆಗೆ ೬ ಆಣೆ ೬೦ ರೂ. ಗಳವರೆಗೆ ೧೦ ಆಣೆ ೭೫ ರೂ. ಗಳವರೆಗೆ ೧೨ ಆಣೆ, ೮೫ ರೂ. ಗಳವರೆಗೆ ೧೪ ಆಣೆ, ೮೫ ರಿಂದ ೧೦೦ ರೂ. ಗಳವರೆಗೆ ೧ ರೂ. ಇದಕ್ಕಿಂತಲೂ ಹೆಚ್ಚಿನ ಹಣಕ್ಕೆ ಇದೇ ನಿಯಮಗಳನ್ನನುಸರಿಸಿ ಫೀ ಕೊಡಬೇಕಾಗುವುದು. ಹಣವನ್ನು ತಂತಿಯ (ಟೆಲಿಗ್ರಾಫ್) ಮೂಲಕ ಕಳುಹಿಸಬೇಕಾದರೆ ಮನಿಯಾರ್ಡರ್ ಫೀಯನ್ನು ಕೊಡುವುದಲ್ಲದೆ ತಂತಿಯ ವೆಚ್ಚವನ್ನು ಕೊಡಬೇಕಾಗುವುದು.

೩. ತಾರಿನಲ್ಲಿ ಎರಡು ಪ್ರಕಾರಗಳುಂಟು. ಒಂದು ಎಕ್ಸ್‌ಪ್ರೆಸ್, ಇನ್ನೊಂದು ಆರ್ಡಿನರಿ, ಆರ್ಡಿನರಿ ತಾರಿಗೆ ಮೊದಲು ೧೨ ಶಬ್ದಗಳಿವೆ. ೧೩ ಆಣೆ ಬೀಳುವುದು ಮುಂದೆ ಪ್ರತಿಯೊಂದು ಶಬ್ದಕ್ಕೆ ೧ ಆಣೆ. ಎಕ್ಸ್‌ಪ್ರೆಸ್ ತಾರಿಗೆ ಆರ್ಡನರಿ ತಾರಿನ ಎರಡರಷ್ಟು ಬೆಲೆ ತುಂಬ ಬೇಕಾಗುತ್ತದೆ. ಮುಂದೆ ಪ್ರತಿಯೊಂದು ಶಬ್ದಕ್ಕೂ ೨ ಆಣೆ ಬೀಳುವುದು.

ರೇಲ್ವೆಯ ಸಂಗತಿಗಳು

೧. ಪ್ರವಾಸಿಕರು ಗಾಡಿ ಬಿಡುವ ೧೦ ನಿಮಿಷಗಳ ಮುಂಚೆಯೇ 'ಬುಕಿಂಗ್ ಆಫೀಸ್' ನಿಂದ ತಿಕೇಟು ಕೊಂಡುಕೊಳ್ಳಬೇಕು.

೨. ೩ ವರುಷಗಳ ಕೆಳಗಿನ ಚಿಕ್ಕ ಬಾಲಕರೆಲ್ಲರೂ ಉಚಿತ ಹೋಗಬಹುದು. ೧೨ ವರುಷಗಳ ಕೆಳಗಿನ ಬಾಲಕರು ಅರ್ಧಬೆಲೆಯಲ್ಲಿ ಪ್ರವಾಸ ಮಾಡಲು ಬರುತ್ತದೆ. ೧೨ ವರ್ಷದ ಮೇಲ್ಪಟ್ಟವರೆಲ್ಲರಿಗೂ ಪೂರ್ಣ ಚಾರ್ಜ. ೩ ಪ್ರವಾಸಿಕರು ಈ ಕೆಳಗೆ ಬರೆದ ಪ್ರಕಾರ ತೂಕದ ಸಾಮಾನುಗಳನ್ನು ಹತ್ತಿರ ಇಟ್ಟುಕೊಳ್ಳಬಹುದು.

೧ನೆಯ ತರಗತಿಯ ಪ್ರವಾಸಿಕರಿಗೆ ೧ ಮಣ

೨ನೆಯ ತರಗತಿಯ ಪ್ರವಾಸಿಕರಿಗೆ ೧ ಮಣ

೩ನೆಯ ತರಗತಿಯ ಪ್ರವಾಸಿಕರಿಗೆ ೨೫ ಸೇರು

ಇಂಟರ ತರಗತಿಯ ಪ್ರವಾಸಿಕರಿಗೆ ೩೦ ಶೇರು

ಹಾಸಿಗೆ, ಛತ್ರಿ, ಊಟದ ಸಾಮಾನುಗಳನ್ನು ಪುಕ್ಕಟೆ ಬಿಡುವರು.

❖❖

ಅನುಬಂಧ-೨

- ❖ ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು
- ❖ ಹರ್ಡೇಕರ ಮಂಜಪ್ಪನವರ ಕೃತಿಗಳು
- ❖ ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು

೧೮೮೬ : ಫೆಬ್ರುವರಿ ೧೮ ರಂದು ಬನವಾಸಿಯ ಒಂದು ಸಾಮಾನ್ಯ ಮನೆತನದಲ್ಲಿ ಜನನ.

೧೯೦೩ : ಮುಲಕಿ ಪರೀಕ್ಷೆ ತೇರ್ಗಡೆಯಾದುದು.

೧೯೦೩ : ಶಿರಸಿಯ ಕಲಿತ ಶಾಲೆಯಲ್ಲೇ ಅಧ್ಯಾಪಕನಾಗಿ ನೇಮಕವಾದುದು.

೧೯೦೬ : ಎಪ್ರಿಲ್‌ದಲ್ಲಿ ಶಿರಸಿಯಿಂದ ಹಾವೇರಿ, ಹುಬ್ಬಳ್ಳಿ ಮೂಲಕ ದಾವಣಗೆರೆಗೆ ಪ್ರಯಾಣ.

೧೯೧೦ : ಜುಲೈ ೨೪ ರಂದು ಲಗ್ನವಾಗಬಾರದೆಂದು ನಿರ್ಧರಿಸಿ ೨೫ ರಂದು ಬ್ರಹ್ಮಚರ್ಯ ಜೀವನಕ್ಕೆ ಪೋಷಕವಾದ ಆಹಾರವನ್ನು ತೆಗೆದುಕೊಳ್ಳಲಾರಂಭಿಸಿದುದು.

೧೯೧೧ : ಜೂನ ೨೬ರಂದು ಭಜನಾಸಂಘ ಸ್ಥಾಪನೆ ಮಾಡಿದುದು.

೧೯೧೧ : ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರಾವಣಮಾಸೋಪನ್ಯಾಸ ಮಾಲೆಯನ್ನು ಸ್ಥಾಪಿಸಿದುದು.

೧೯೧೩ : ಬಸವ ಜಯಂತಿಯನ್ನು ಆಚರಿಸುವ ಸಂಪ್ರದಾಯವನ್ನು ದಾವಣಗೆರೆಯಲ್ಲಿ ಪ್ರಾರಂಭಿಸಿದುದು.

೧೯೧೪ : ಪುಣೆಯಲ್ಲಿ ಗಣೇಶ ಉತ್ಸವ ಸಂದರ್ಭದಲ್ಲಿ ಲೋಕಮಾನ್ಯ ತಿಲಕರನ್ನು ಸಂದರ್ಶಿಸಿ ಚರ್ಚಿಸಿದುದು ಮತ್ತು ಗೀತಾರಹಸ್ಯವನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿಯನ್ನು ಕೇಳಿದುದು.

೧೯೧೪ : ಮದ್ರಾಸಿನಲ್ಲಿ ಸೇರಿದ್ದ ಕಾಂಗ್ರೇಸ್ ಅಧಿವೇಶನಕ್ಕೆ ಹೋದುದು.

೧೯೧೪ : ಹಣದ ಕೊರತೆಯಿಂದ ಧನುರ್ಧಾರಿ ಪತ್ರಿಕೆಯನ್ನು ಸ್ಥಗಿತಗೊಳಿಸಿದುದು.

೧೯೧೫ : ಸ್ವಕರ್ತವ್ಯ ಸಿದ್ಧಾಂತ ಎಂಬ ತಮ್ಮ ಮೊದಲ ಕೃತಿಯನ್ನು ರಚಿಸಿ ಬೆಂಗಳೂರಿನ ಒಕ್ಕಲಿಗರ ಪ್ರೆಸ್ಸಿನಲ್ಲಿ ಮುದ್ರಿಸಿದುದು.

೧೯೧೫ : ಬೆಂಗಳೂರಿನಲ್ಲಿ ಗಾಂಧೀಜಿಯವರ ಭಾಷಣ ಕೇಳಿದುದು.

೧೯೧೬ : ಶಿರಸಿಯಲ್ಲಿ ಕೆಲ ದಿವಸ ಇದ್ದಾಗ ಒಂದು ವಾರದಲ್ಲೇ ಬುದ್ಧಿಯ ಮಾತು ಎಂಬ ಪುಸ್ತಕ ರಚಿಸಿದುದು.

೧೯೧೭ : ವೀರಶೈವ ತರುಣ ಸಂಘ ಸ್ಥಾಪಿಸಿದುದು.

೧೯೧೭ : ಸೊಲ್ಲಾಪುರದಲ್ಲಿ ಅಪ್ಪಾಸಾಹೇಬ ವಾರದ ಅವರ ಜೀವನಚರಿತ್ರೆಯನ್ನು ಬರೆದು ಮುಗಿಸಿದುದು.

೧೯೧೮ : ಆಧುನಿಕ ಜರ್ಮನಿ ಎಂಬ ಕೃತಿಯನ್ನು ರಚಿಸಿದುದು.

೧೯೧೯ : ಗಾಂಧೀಜಿಯವರ ಜೀವನ ಚರಿತ್ರೆಯನ್ನು ಬರೆದುದು.

೧೯೨೦ : ಅಗಸ್ಟ ೧ ರಂದು ಖಾದಿ ಧರಿಸಲು ಆರಂಭಿಸಿದುದು ಹಾಗೂ ಖಾದಿ ಪ್ರಚಾರವನ್ನು ಮಾಡಿದುದು.

೧೯೨೧ : ರಾಷ್ಟ್ರಜೀವನ ಎಂಬ ಗ್ರಂಥಮಾಲೆಯನ್ನು ಪ್ರಾರಂಭಿಸಿ ಭಾರತೀಯರ ದೇಶಭಕ್ತಿ ಎಂಬ ಕೃತಿಯನ್ನು ಶ್ರೀ ಸ್ವಾಮಿ ರಾಮತೀರ್ಥರವರ ಉಪನ್ಯಾಸಗಳ ನಾಲ್ಕು ಭಾಗಗಳನ್ನು ಪ್ರಕಟಿಸಿದುದು.

೧೯೨೨ : ಗಾಂಧೀ ತತ್ವಗಳಿಗೆ ಬದ್ಧರಾಗಿ ಗಾಂಧಿಶಕೆ ಆರಂಭಿಸಿದುದು.

೧೯೨೨ : ಸ್ತ್ರೀ ನೀತಿ ಸಂಗ್ರಹ ಕೃತಿ ಪ್ರಕಟಿಸಿದುದು.

೧೯೨೨ : ಸತ್ಯಾಗ್ರಹ ಧರ್ಮವೆಂಬ ಪುಸ್ತಕದ ಪ್ರಕಟಣೆ ಹಾಗೂ ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜದ ಸ್ಥಾಪನೆ ಮಾಡಿದುದು.

೧೯೨೩ : ಜನವರಿ ೨೫ ರಂದು ಹರಿಹರದ ಸಮೀಪದಲ್ಲಿ ತುಂಗಭದ್ರಾ ನದಿಯ ತೀರದ ಮೇಲೆ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದುದು.

೧೯೨೩ : ನವೆಂಬರದಲ್ಲಿ ಹಾವೇರಿಯಲ್ಲಿ ನಡೆದ ಧಾರವಾಡ ಜಿಲ್ಲಾ ರಾಷ್ಟ್ರೀಯ ಸಭೆಯ ಅಧ್ಯಕ್ಷ ಭಾಷಣ ಮಾಡಿದುದು.

೧೯೨೩ : ವಿಜಾಪುರದಲ್ಲಿ ಜರುಗಿದ ಪ್ರಾಂತೀಯ ಸಭೆಗೆ ಹೋಗಿ ಶ್ರೀ ರಾಜಗೋಪಾಲಚಾರ್ಯ ಅವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದುದು.

೧೯೨೩ : ಕರ್ನಾಟಕ ಗಾಂಧಿ ಎಂದು ದೇಶಪಾಂಡೆ ಗಂಗಾಧರರಾಯರಿಂದ ಕರೆಯಿಸಿ ಕೊಂಡುದುದು.

೧೯೨೪ : ಮಾರ್ಚದಲ್ಲಿ ಸಾಬರಮತಿಗೆ ಹೋಗಿ ಗಾಂಧೀಜಿಯವರಲ್ಲಿದ್ದುದು ಹಾಗೂ ಅವರೊಂದಿಗೆ ಅನೇಕ ವಿಷಯಗಳನ್ನು ಚರ್ಚಿಸಿದ್ದು.

೧೯೨೪ : ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಬಸವೇಶ್ವರ ಸೇವಾದಳ ತೆಗೆದುಕೊಂಡು ಹೋದುದು.

೧೯೨೫ : ಮಾರ್ಚ ೨೭ ರಂದು ಮಾತೃವಿಯೋಗವಾದುದು.

೧೯೨೫ : ಶ್ರಾವಣ ಶುದ್ಧ ೬ ರಿಂದ ಭಾದ್ರಪದ ಶುದ್ಧ ೮ ರ ವರೆಗೆ ಇಂಡಿ ತಾಲೂಕಿನ ಬಂಥನಾಳದಲ್ಲಿ ಬಸವಣ್ಣನವರ ವಚನಗಳ ಮೇಲೆ ಒಂದು ತಿಂಗಳ ಕಾಲ ಪ್ರವಚನ ಮಾಡಿದುದು.

೧೯೨೫ : ಬಿಜಾಪೂರ ಜಿಲ್ಲೆ ೭ ತಾಲೂಕುಗಳ ೫೫ ಹಳ್ಳಿಗಳ ಸಂಚಾರ ಕೈಕೊಂಡುದುದು.

೧೯೨೬ : ಇಳಕಲ್ಲ ಸಮೀಪದ ಚಿಕ್ಕಕೊಡಗಲಿ ಗವಿಯಲ್ಲಿ ವಾಸ ೧೦೮ ಬಸವಣ್ಣನವರ ವಚನಗಳಿಗೆ ಅರ್ಥ ವಿವರಣೆ ಬರೆದು "ಬಸವ ಬೋಧಾಮೃತ" ಎಂಬ ಹೆಸರಿನಲ್ಲಿ ಪ್ರಕಟಿಸಿದುದು.

೧೯೨೬ : ವಿಜಾಪೂರ ಜಿಲ್ಲೆಯ ಆಲಮಟ್ಟಿಯಲ್ಲಿ ಬಂದು ನೆಲೆಸಿ, ವೀರಶೈವ ವಿದ್ಯಾಲಯ ಸ್ಥಾಪಿಸಿದುದು.

೧೯೨೮ : ಅಗಸ್ಟ ೨೮ ರಂದು ಖಾದಿ ವಿಜಯ ಎಂಬ ಮಾಸ ಪತ್ರಿಕೆಯನ್ನು ರಂಗನಾಥ ದಿವಾಕರರ ಜೊತೆಗೆ ಪ್ರಾರಂಭಿಸಿದುದು.

೧೯೨೯ : ಅಕ್ಟೋಬರ್ ೧೩ ರಂದು ಆಲಮಟ್ಟಿಯಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದುದು.

೧೯೩೦ : ಫೆಬ್ರವರಿ ೧೩ ರಂದು ಉದ್ಯೋಗ ಮಾಸಪತ್ರಿಕೆಯನ್ನು ಆರಂಭಿಸಿದುದು ಹಾಗೂ ಮಕ್ಕಳ ಸಾಹಿತ್ಯ ಮಾಲೆಯನ್ನು ಆರಂಭಿಸಿದುದು.

೧೯೩೧ : ಆಗಸ್ಟ ೧೭ ರಂದು ಶರಣ ಸಂದೇಶ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದುದು.

೧೯೩೪ : ಗಾಂಧೀಜಿಯವರು ಮುಂಬಯಿ ಕರ್ನಾಟಕ ಸಂಚಾರ ಕೈಕೊಂಡಾಗ ಅವರೊಂದಿಗೆ ಸಂಚರಿಸಿ, ಸತ್ಯದ ವಿನಾ ಬೇರೆ ಧರ್ಮವಿಲ್ಲ ಎಂಬ ಸಂದೇಶವನ್ನು ಗಾಂಧೀಜಿಯವರ ಹಸ್ತಾಕ್ಷರದೊಂದಿಗೆ ಪಡೆದು ಶರಣಸಂದೇಶದಲ್ಲಿ ಪ್ರಕಟಿಸಿದುದು.

೧೯೩೫ : ಸ್ತ್ರೀ ಸಮಾಜದಲ್ಲಿ ಜಾಗೃತಿಯಾಗಲೆಂದು ಅಕ್ಕಮಹಾದೇವಿ ಜಯಂತಿಯನ್ನು ಜಾರಿಯಲ್ಲಿ ತಂದುದು.

೧೯೩೬ : ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ ಎಂಬ ಆತ್ಮಚರಿತ್ರೆಯನ್ನು ಪ್ರಕಟಿಸಿದುದು.

೧೯೪೧ : ಸುಭೋಧಸಾರ ಗ್ರಂಥ ಪ್ರಕಟಗೊಳಿಸಿದುದು.

೧೯೪೩ : ಯುದ್ಧಕಾಲದಲ್ಲಿ ಕಾಗದ ದೊರೆಯದೆ ಇದ್ದಾಗ ಕೈಕಾಗದವನ್ನೇ ತಯಾರಿಸಿ ಶರಣ ಸಂದೇಶ ಪತ್ರಿಕೆಯ ಪ್ರಕಟಣೆಯನ್ನು ಮುಂದುವರೆಸಿದುದು.

೧೯೪೫ : ಶ್ರೀ ಗುರು ಸಂಗನಬಸವ ಸ್ತುತಿ ಎಂಬ ೬೫ ನುಡಿಗಳ ಪದ್ಯಕೃತಿಯನ್ನು ಬರೆದು ಪ್ರಕಟಿಸಿದುದು.

೧೯೪೬ : ೬೧ ನೆಯ ಜನ್ಮದಿನೋತ್ಸವ ಮತ್ತು ಎಚ್ಚತ್ತ ಹಿಂದುಸ್ಥಾನದ ಪ್ರಕಟಣೆ ನಡೆದುದು.

೧೯೪೬ : ದೇಹ ಸ್ಥಿತಿಯಲ್ಲಿ ಅಸ್ವಸ್ಥತೆ ಕಾಣಿಸಿಕೊಂಡಿದುದು.

೧೯೪೭ : ಜನವರಿ ३ ರಂದು ನಿಧನರಾದರು.

❖❖

ಹರ್ಡೇಕರ ಮಂಜಪ್ಪನವರ ಕೃತಿಗಳು

೧. ಅಕ್ಕನ ಉಪದೇಶ (೧೯೨೯)
೨. ಅಣ್ಣನ ಕ್ರಾಂತಿ
೩. ಅಣ್ಣನವರ ಅರ್ಪಣಯೋಗ
೪. ಅಪ್ಪಾಸಾಹೇಬ ವಾರದ (೧೯೦೯)
೫. ಅರವತ್ತುಮೂರು ಪುರಾತನರ ಚರಿತ್ರೆ (೧೯೩೧)
೬. ಅಹಿಂಸೆ (೧೯೨೩)
೭. ಆದಿಜನ ಸುಧಾರಣೆ (೧೯೩೪)
೮. ಆಧುನಿಕ ಜರ್ಮನಿ (೧೯೧೮)
೯. ಆರೋಗ್ಯ ಜೀವನ (೧೯೨೦)
೧೦. ಋಗ್ವೇದ ಸಾರ (ಅಪ್ರಕಟಿತ)
೧೧. ಎಚ್ಚೆತ್ತ ಹಿಂದುಸ್ಥಾನ (೧೯೪೬)
೧೨. ಏಕಲವ್ಯ (೧೯೨೯)
೧೩. ಕಚದೇವನ ಕಥೆ (೧೯೨೯)
೧೪. ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ (೧೯೦೫)
೧೫. ಕಾಯಕವೇ ಕೈಲಾಸ (೧೯೩೧)
೧೬. ಕೈ ಅಪ್ಪಾಸಾಹೇಬ ವಾರದ (೧೯೧೭)
೧೭. ಕೇರ್ ಹಾರ್ಡಿಯವರ ಭಾರತ ಪರ್ಯಟನ (೧೯೨೩)

೧೮. ಗಾಂಧಿ ಸಂದೇಶ

೧೯. ಗೃಹ ಶಿಕ್ಷಣ

೨೦. ಗೋ ಸೇವೆ (೧೯೪೧)

೨೧. ಖಾದಿ (೧೯೨೩)

೨೨. ಖಾದಿ ಶಾಸ್ತ್ರ (೧೯೩೩)

೨೩. ಚನ್ನಬಸವಣ್ಣನವರ ಉಪದೇಶ

೨೪. ಜನಸೇವಕನ ವಚನಗಳು

೨೫. ಜಾತಿವಾದದ ವಿಮರ್ಶೆ

೨೬. ಜಾತ್ರೆಗಳ ಸುಧಾರಣೆ (೧೯೪೧)

೨೭. ತರುಣರ ಕೈಪಿಡಿ

೨೮. ದಾಂಪತ್ಯ ಜೀವನ (೧೯೩೧)

೨೯. ದಾಂಪತ್ಯ ಧರ್ಮ (೧೯೩೧)

೩೦. ದೀನಬಂಧು ಆ್ಯಂಡ್ರೂಸ್

೩೧. ದೇವಯಾನಿ (೧೯೨೯)

೩೨. ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ (೧೯೩೬)

೩೩. ನಿಜಗುಣಾರಾಧ್ಯರ, ಸರ್ಪಭೂಷಣ ಶಿವಯೋಗಿಗಳ ಪದಗಳು (೧೯೧೧)

೩೪. ಪತಿತೋದ್ಧಾರ (೧೯೧೮)

೩೫. ಪ್ರಭುದೇವರ ಕಥೆ (೧೯೨೯)

೩೬. ಪ್ರಮಥಾಚಾರ ದೀಪಿಕೆ (೧೯೩೫)

೩೭. ಬಸವಚರಿತ್ರೆ (೧೯೨೪)

೩೮. ಬಸವಣ್ಣನವರ ಚರಿತ್ರೆ (೧೯೨೯)

೩೯. ಬಸವಣ್ಣನವರ ನೈತಿಕ ವಚನಗಳು (ಸಂಗ್ರಹ) (೧೯೧೩)

೪೦. ಬಸವ ಬೋಧಾಮೃತ (೧೯೨೬)

೪೧. ಬಸವ ಭಕ್ತಿ

೪೨. ಬಸವ ಸಂದೇಶ (೧೯೩೩)

೪೩. ಬಸವಣ್ಣನವರ ನೈತಿಕ ವಚನಗಳು

೪೪. ಬ್ರಹ್ಮಚರ್ಯೆ (೧೯೨೩)

೪೫. ಬುದ್ಧಿಯ ಮಾತು (೧೯೧೬)

೪೬. ಭಕ್ತಿಯ ಬೆಳಕು (೧೯೨೪)

೪೭. ಭಗವಾನ ಬುದ್ಧನ ಚರಿತ್ರೆ (೧೯೨೩)

೪೮. ಭಾಗ್ಯದ ಬೀಗದ ಕೈ

೪೯. ಭಾರತೀಯರ ದೇಶಭಕ್ತಿ (೧೯೨೧)

೫೦. ಮಹಾತ್ಮಾಗಾಂಧೀಜಿಯವರ ಚರಿತ್ರೆ (೧೯೧೯)

೫೧. ಮಹಾತ್ಮಾಗಾಂಧೀ ಪ್ರಣೀತ ಸತ್ಯಾಗ್ರಹ ಧರ್ಮ (೧೯೨೨)

೫೨. ಮಹಾದೇವಿಯಕ್ಕನ ಚರಿತ್ರೆ (೧೯೨೯)

೫೩. ಮಹಾನುಭಾವರಾದ ಬಸವಣ್ಣನವರ ಉಪಮೆಗಳು

೫೪. ಲಜಪತರಾಯರ ಚರಿತ್ರೆ (೧೯೨೯)

೫೫. ರಾಷ್ಟ್ರಗೀತೆ (ಸಂಪಾದನೆ) (೧೯೪೧)

೫೬. ಲಿಂಗಪೂಜೆಯ ಐತಿಹಾಸಿಕ ವಿವೇಚನೆ

೫೭. ಲಿಂಗರಾಜರ ಚರಿತ್ರೆ

೫೮. ಲಿಂಗವಂತರ ಪ್ರಾಚೀನತೆ

೫೯. ವಚನಕಾರರ ಸಮಾಜ ರಚನೆ

೬೦. ವಿಜಯವಾಣಿ (೧೯೨೯)

೬೧. ವಿದ್ಯಾಲಯ ಭಜನಾವಳಿ

೬೨. ವೀರಶೈವ ಏಕೀಕರಣ (೧೯೩೩)

೬೩. ವೀರಶೈವ ಮತತತ್ವ

೬೪. ವೀರಶೈವ ಮತಬೋಧೆ

೬೫. ವೀರಶೈವಸಮಾಜ ಸುಧಾರಣೆ (೧೯೨೧)

೬೬. ಶರಣ ಬಸವೇಶ್ವರ ಚರಿತ್ರೆ (೧೯೨೯)

೬೭. ಶ್ರೀ ಸ್ವಾಮೀ ರಾಮತೀರ್ಥರವರ ಜೀವನ ಚರಿತ್ರೆ
ಹಾಗೂ ಉಪನ್ಯಾಸಗಳು (೧೯೨೧)
೬೮. ಶುದ್ಧಿ ಮತ್ತು ಸಂಘಟನೆ (೧೯೩೮)
೬೯. ಸಂಗನ ಬಸವನ ಸ್ತುತಿ (೧೯೪೫)
೭೦. ಸತ್ಯಾಗ್ರಹ (೧೯೨೩)
೭೧. ಸತ್ಯಾಗ್ರಹ ಧರ್ಮ (೧೯೨೨)
೭೨. ಸತ್ಯಾಗ್ರಹ ಪದ್ಯಾವಳಿ (೧೯೨೩)
೭೩. ಸತ್ಯಾರ್ಥ ಪ್ರಕಾಶಿಕೆ (ಅಪ್ರಕಟಿತ)
೭೪. ಸಿದ್ಧರಾಮ ಶಿವಯೋಗಿಗಳ ಉಪದೇಶ
೭೫. ಸುಬೋಧ ಸಾರ (ಸಂಗ್ರಹ) (೧೯೪೧)
೭೬. ಸ್ವ ಕರ್ತವ್ಯ ಸಿದ್ಧಾಂತ (೧೯೧೫)
೭೭. ಸ್ತ್ರೀನೀತಿ ಸಂಗ್ರಹ (೧೯೨೨)
೭೮. ಹಳ್ಳಿಯ ಸಂಚಾರ (ಅಪ್ರಕಟಿತ)
೭೯. ಹಿಂದುಗಳ ಕೈಗನ್ನಡಿ
೮೦. ಹಿಂದುತ್ವ
೮೧. ಹಿಂದು ಜಾಗೃತಿ ಅವಶ್ಯಕವೆ
೮೨. ಹಿಂದೂ ಸಂಘಟನೆ

ವಾರ್ಷಿಕ ಸಂಚಿಕೆಗಳು :

೧. ಆರ್ಯತೇಜ (೧೯೨೭)
೨. ಶಿಕ್ಷಣ (೧೯೨೮)
೩. ವ್ಯಾಪಾರ ಶಿಕ್ಷಕ (೧೯೩೩)

❖❖

ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಕನ್ನಡ ಕೃತಿಗಳು

೧. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು–ಡಾ. ಶಿವಾನಂದ ಗುಬ್ಬಣ್ಣವರ. ಪ್ರ ವೀರಶೈವ ವಿದ್ಯಾಲಯ ಸಂಘ, ಆಲಮಟ್ಟಿ, ಪುಟ, viii+೨೭

೨. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ–ಸಂ. ಡಾ. ಎಂ. ಎಂ. ಕಲಬುರ್ಗಿ, ಪ್ರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೮೯. ಪುಟ x+೪೪೨.

೩. ಕೈ. ವಾ. ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ ಪುಣ್ಯಸ್ಮರಣೆ–ವಿವಿಧ ಲೇಖಕರು, ಪ್ರ. ವಿಶ್ವನಾಥ ವಾಚನಾಲಯ, ಆಡೂರು. ೧೯೬೭. ಪುಟ, ೮+೬೨.

೪. ನಿರಂಜನ ಶರಣ ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು–ಸಿದ್ದಣ್ಣ ಲಂಗೋಟಿ, ಪ್ರ. ಧರ್ಮಪ್ರಸಾರಕ ಮಂಡಲ, ಇಲಕಲ್, ೧೯೮೬. ಪುಟ. ೪೮.

೫. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ–ಗ. ಸ. ಹಾಲಪ್ಪ ಪ್ರ. ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥ ಮಾಲೆ, ಧಾರವಾಡ. ೧೯೬೬. ಪುಟ, vi+೧೩೪೮.

೬. ರಾಷ್ಟ್ರಧರ್ಮನಿಷ್ಠ ಹರ್ಡೇಕರ ಮಂಜಪ್ಪ–ಡಾ. ಶಿವಾನಂದ ಗುಬ್ಬಣ್ಣವರ, ಪ್ರ. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ, ಬೆಂಗಳೂರು. ೧೯೭೭, ಪುಟ, vii+೧೨೮.

೭ ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪಣ್ಣನವರ ಸ್ಮಾರಕ ಗ್ರಂಥ–ಶಿ. ಚೆ. ನಂದಿಮಠ ಮತ್ತು ಇತರರು. ಪ್ರ. ಬಸವೇಶ್ವರ ಕಾಲೇಜು, ಬಾಗಲಕೋಟ ೧೯೫೧. ಪುಟ, vi+೬೩+೧೨೩.

೮. ಸತತೋದ್ಯೋಗಿ ಮರೆಯದ ಕರುನಾಡ ಗಾಂಧಿ ಹರ್ಡೇಕರ ತೇಜಃಪುಂಜ ಮಂಜಣ್ಣ– ಹ. ರಂ. ಕುಲಕರ್ಣಿ, ಪ್ರ. ಕುಲಕರ್ಣಿ ಪ್ರಕಾಶನ, ಶಾಸ್ತ್ರೀನಗರ ವಿಜಾಪುರ. ೧೯೩ ಪುಟ, vi+೮೬.

೯. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು-ಜಿ. ಎಸ್. ಹಾಲಪ್ಪ, ಪ್ರ, ಕ. ವಿ. ವಿ. ಧಾರವಾಡ. ೧೯೭೦. ಪುಟ, viii+೭೧.

೧೦. ಹರ್ಡೇಕರ ಮಂಜಪ್ಪ-ಎಸ್. ಎಸ್. ಭೂಸರೆಡ್ಡಿ, ಪ್ರ. ಭಾರತ ಭಾರತಿ ಪುಸ್ತಕ ಸಂಪದ, ಬೆಂಗಳೂರು. ೧೯೭೫, ಪುಟ iv+೪೮.

೧೧. ಹರ್ಡೇಕರ ಮಂಜಪ್ಪನವರು-ಸಿದ್ದಯ್ಯ ಪುರಾಣಿಕ ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೮. ೧೯೮೦, ಪುಟ, vii+೨೪.

೧೨. ಹರ್ಡೇಕರ ಮಂಜಪ್ಪನವರು ಜೀವನ ಹಾಗೂ ವ್ಯಕ್ತಿತ್ವ-ವಿವಿಧ ಲೇಖಕರು ಪ್ರ. ಕ. ವಿ. ವಿ. ಧಾರವಾಡ. ೧೯೮೦, ಪುಟ, v+೧೨೬.

೧೩. ಹರ್ಡೇಕರ ಮಂಜಪ್ಪನವರ ಆತ್ಮ ಚರಿತ್ರೆ-ಸಂ. ಜಿ. ಎಸ್. ಹಾಲಪ್ಪ ಪ್ರ. ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, ಧಾರವಾಡ. ೧೯೬೬ ಪುಟ, iii+೯೨.

೧೪. ಹರ್ಡೇಕರ ಮಂಜಪ್ಪನವರು-ಸಂ. ಪ್ರಾ. ಎ. ಬಿ. ಹಿರೇಮಠ, ಆರ್. ಎಲ್. ಪೋಲೀಸ ಪಾಟೀಲ. ಪ್ರ. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ. ೧೯೮೯, ಪುಟ, viii+೮೭.

೧೫. ಹರ್ಡೇಕರ ಮಂಜಪ್ಪನವರು-ಡಾ. ಶಿವಾನಂದ ಗುಬ್ಬಣ್ಣವರ. ಪ್ರ. ಐ. ಬಿ. ಎಚ್. ಪ್ರಕಾಶನ ಬೆಂಗಳೂರು, ೧೯೭೯, ಪುಟ, ೪೨.

೧೬. ಹರ್ಡೇಕರ ಮಂಜಪ್ಪ-ಡಾ. ಎಸ್. ಎಸ್. ಕೋತಿನ, ಪ್ರ. ಸಾಹಿತ್ಯ ಅಕಾಡೆಮಿ ಹೊಸದಿಲ್ಲಿ. ೧೯೯೩. ಪುಟ, ೭೩.

೧೭. ಹರ್ಡೇಕರ ಮಂಜಪ್ಪ (ನಾಟಕ)-ಡಾ. ಎಸ್. ಎಸ್. ಕೋತಿನ; ಅಪರ್ಣಾ ಪ್ರಕಾಶನ, ಧಾರವಾಡ, ೧೯೯೫, ಪುಟ, xiii+೮೪.

೧೮. ಕರ್ನಾಟಕ ಗಾಂಧಿ-ಡಾ ಮಲ್ಲಿಕಾರ್ಜುನ ಸಂ. ಮೇತ್ರಿ. ಸಂಗಮ ಪ್ರಕಾಶನ, ವಿಜಾಪುರ. ೨೦೦೨, ಪುಟ, xvi+೨೭೮.

೧೯. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ, ಸಂಪುಟ-೨, ಸಂ. ಡಾ. ಎಂ.ಎಂ. ಕಲಬುರ್ಗಿ, ಡಾ ಮಲ್ಲಿಕಾರ್ಜುನ ಸಂ. ಮೇತ್ರಿ. ಪ್ರ. ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ-೨೦೦೬, ಪುಟ xvi+೧೦೭೪.

ಇಂಗ್ಲೀಷ ಕೃತಿಗಳು

1. Political Ideas of Hardekar Manjappa - Dr. Shivanand Gubbannavar. Pub. Karnatak University, Dharwad. 1977 Page, xxiv+222.

❖❖

ಅನುಬಂಧ : ೩

ಮಂಜಪ್ಪನವರ ಸ್ಮಾರಕದ ಪ್ರಮುಖ ಛಾಯಾಚಿತ್ರಗಳು
ಛಾಯಾಗ್ರಹಣ : ಡಾ. ಎಚ್. ಚಂದ್ರಶೇಖರ


ಮಂಜಪ್ಪನವರ ಸ್ಮಾರಕದ ಪ್ರಮುಖ ಛಾಯಾಚಿತ್ರಗಳು



ಬನವಾಸಿಯಲ್ಲಿ ಹರ್ಡೇಕರ ಮಂಜಪ್ಪನವರು ಹುಟ್ಟಿದ ಮನೆಯ ಮುಂದೆ ನಿಂತಿರುವವರು ಅವರ ಬಂಧು ವರ್ಗಕ್ಕೆ ಸೇರಿದವರೂ, ಗೆಸಿಟಿಯರ್ ಇಲಾಖೆಯ ಮುಖ್ಯಸ್ಥರೂ, ಸುಪ್ರಸಿದ್ಧ ಇತಿಹಾಸಜ್ಞರಾಗಿದ್ದ ದಿವಂಗತ ಅಭಿಶಂಕರ್ ಅವರು. ೧೯೯೭ರ ನವಂಬರ್ ೧೧ ರಂದು ತೆಗೆದ ಚಿತ್ರ,



ದಿನಾಂಕ : ೧೪-೧೨-೧೯೯೬ರಂದು ಹರ್ಡೇಕರ ಮಂಜಪ್ಪನವರ ಸಮಾಧಿ ಕೋಣೆಯ ಮುಂದೆ ಕಂಡನೋಟ.



ಸಮಾಧಿಯ ಮೇಲೆ ಮುಕ್ಕಾದ ಮಂಜಪ್ಪನವರ ಮೂರ್ತಿ
(೧೩-೧೨-೧೯೯೬)



ಹರ್ಡೇಕರ ಮಂಜಪ್ಪನವರ ಆಶ್ರಮದ ಪೂಜಾ ಗೃಹ(೧೪-೧೨-೧೯೯೬)



೨೮–೦೨–೧೯೯೮ ರಂದು ಮಂಜಪ್ಪನವರ ಸಮಾಧಿ ತೆರೆದ ನಂತರ ಸಿಕ್ಕ ಅವರ ದೇಹದ ಅಸ್ಥಿಗಳು ಮತ್ತು ಗದುಗಿನ ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಪಾದಪೂಜೆ.




ಗದುಗಿನ ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಎಡ ಕರಸ್ಥಳದಲ್ಲಿ ಪೀಠಸ್ಥವಾಗಿರುವ ಮಂಜಪ್ಪನವರ ಇಷ್ಟಲಿಂಗ(೨೮–೦೨–೧೯೯೮)



ಮಂಜಪ್ಪನವರ ಅಸ್ಥಿಗಳನ್ನು ಹೊಸ ಸಮಾಧಿಗೆ
ಕೊಂಡೊಯ್ಯುತ್ತಿರುವ ಮೆರವಣಿಗೆಯ ನೋಟ(೨೮-೦೨-೧೯೯೮)



ಗದುಗಿನ ಶ್ರೀಗಳು ಹಾಗೂ ಇಲಕಲ್ಲಿನ ಶ್ರೀ ಮಹಾಂತ ಶಿವಯೋಗಿಗಳು
ಇತರ ಮಠಾಧೀಶ್ವರರು ಮತ್ತು ಸ್ಥಳೀಯ ಧುರೀಣರು(೨೮-೦೨-೧೯೯೮)



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359